ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೭–೫

ಶ್ರೀತ್ರಿಪುರಾರಹಸ್ಯ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಮಾಹಾತ್ಮ್ಯಖಂಡ

(ಅಧ್ಯಾಯ ೬೧–೮೦)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೭

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೭-೫

ಶ್ರೀತ್ರಿಪುರಾರಹಸ್ಯ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಮಾಹಾತ್ಮ್ಯಖಂಡ

(ಅಧ್ಯಾಯ ೬೧-೮೦)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೭

Printed by T. S. Raghavachar, Manager,
Sree Panchacharya Electric Press
Sayaji Rao Road, Mysore
For The Palace Mysore.

ಮುನ್ನುಡಿ

॥ ಶ್ರೀಗಣೇಶ ಶಾರದಾ ಗುರುಭ್ಯೋ ನಮಃ ॥

ವಿಚಾರಪರನಾದ ಮಾನವನು ಈ ಬಾಹ್ಯಪ್ರಪಂಚವನ್ನು ಪರಿಶೀಲಿಸಿ ಅದರಲ್ಲಿ ಅಡಗಿರುವ ಸೌಂದರ್ಯ, ಕ್ರಮ, ಉದ್ದೇಶಗಳೆಂಬ ಗಮಕಗಳನ್ನು ಮನಗಾಣುತ್ತಾನೆ. ಇವೆಲ್ಲವನ್ನೂ ವ್ಯವಸ್ಥೆಗೊಳಿಸುತ್ತಿರುವ ಚೈತನ್ಯವು ಒಂದಿರಬೇಕೆಂದೂ, ಅದೇ ದೇವರೆಂದೂ, ಅದು ಧರ್ಮಸ್ವರೂಪವಾದುದೆಂದೂ ನಮ್ಮ ಪೂರ್ವಿಕರಾದ ಮಹರ್ಷಿಗಳು ತಿಳಿದು ಹೇಳಿರುತ್ತಾರೆ. ದೇವರು ನೆರವೇರಿಸುತ್ತಿರುವ ಪ್ರಪಂಚದ ಆಡಳಿತಕ್ಕೂ, ಒಬ್ಬ ಧಾರ್ಮಿಕನಾದ ದೊರೆಯು ನಿರ್ವಹಿಸುತ್ತಿರುವ ರಾಜ್ಯದ ಆಡಳಿತಕ್ಕೂ ತುಂಬ ಹೋಲಿಕೆಯು ಇದೆ. ಪ್ರಾಯಶಃ ಒಂದರಿಂದ ಇನ್ನೊಂದನ್ನು ಊಹಿಸಿ ತಿಳಿದಿರಬಹುದೆಂದರೂ ತಪ್ಪಾಗಲಾರದು. ದುಷ್ಟರ ಶಿಕ್ಷಣ, ಶಿಷ್ಟರ ರಕ್ಷಣ ರೂಪವಾದ ವಿಶ್ವಧರ್ಮದ ಪರಿಪಾಲನೆಯು ಎರಡರಲ್ಲೂ ಸಮಾನವಾಗಿರುತ್ತದೆ. ಇದರಂತೆಯೇ ಈ ಜಗತ್ತಿನ ಸೃಷ್ಟಿ ಸ್ಥಿತಿ ಉಪಸಂಹಾರಗಳಿಗೆ ಮೂಲಕಾರಣವೂ ಒಂದೇ ತತ್ವವಾಗಿರಬೇಕೆಂಬುದನ್ನೂ ಮನಗಂಡ ಮುನಿಗಳು "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂದು ತಿಳಿದು ಹೇಳಿದರು. ಇದು ಅನಾದಿಕಾಲದಿಂದ ನಡೆದುಬರುತ್ತಿದೆ, ಮತ್ತು ಅನಂತವಾಗಿದೆ. ಆಪೇಕ್ಷಿಕವಾದ ಇದರ ಪ್ರಾರಂಭದಲ್ಲಿ ವಾಸ್ತವವಾಗಿ ಒಂದೇ ಆದ ತತ್ವವು ಎರಡಾಗಿ ಕಾಣಬೇಕು. ಇದೇ ಅರ್ಧನಾರೀಶ್ವರ ರೂಪವು, ಅಥವಾ ಶಿವಶಕ್ತಿತತ್ವದ ಸ್ವರೂಪವು. ಆ ಮೇಲೆ ತ್ರಿಗುಣಮಾಯಾ ಪರಿಣಾಮವಿಶೇಷಗಳಿಂದ ತ್ರಿಮೂರ್ತಿಗಳೂ, ಅವರ ಸಹಧರ್ಮಿಣಿಯರೂ, ಉಂಟಾಗಿ ಸ್ಥೂಲವಾದ ಈ ಚರಾಚರಪ್ರಪಂಚಸಂಸಾರವು ಏರ್ಪಡುತ್ತದೆ. ಇದರಂತೆ ರಾಜ್ಯಾಡಳಿತದಲ್ಲೂ ದೊರೆ, ಮಂತ್ರೀ, ಸಚಿವರು, ಜಿಲ್ಲಾಧಿಕಾರಿಗಳೂ ಏರ್ಪಟ್ಟು ನಿಯುಕ್ತರಾಗಿರುತ್ತಾರೆ. ಈ ಎರಡು ಸಂಸ್ಥೆಗಳಲ್ಲೂ ವಿಶ್ವಧರ್ಮಾಚರಣೆಯೇ ಸುಖಸಾಧನಸೂತ್ರವಾಗಿರಬೇಕೆಂಬುದು ಸ್ಪಷ್ಟವಾಗಿದೆ. "ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ" ಎಂಬ ಸೂಕ್ತಿಯೂ ಈ ತತ್ವವನ್ನು ಮನಗಾಣಿಸುತ್ತಿದೆ.

ಇದರಂತೆಯೇ ಆಂತರ ಪ್ರಪಂಚದಲ್ಲಿ ನಮಗೆಲ್ಲರಿಗೂ ಅನುಭವಕ್ಕೆ ಬರುತ್ತಿರುವ ಪ್ರತಿದಿನದ ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲೂ ನಾವು

ಪಡೆಯುತ್ತಿರುವ ತಿಳಿವಳಿಕೆ ಎಲ್ಲವನ್ನೂ ಒಟ್ಟಾಗಿ ಪರಿಶೀಲಿಸಿದರೆ, ನಮ್ಮ ಆತ್ಮವು ಸಚ್ಚಿದಾನಂದರೂಪವಾದ ತತ್ವವಾಗಿದೆ ಎಂಬುದನ್ನೂ ಮನಗಾಣಬಹುದು. ಸರ್ವ ಭೂತಾತ್ಮಭೂತಾತ್ಮವಾಗಿರುತ್ತಾ, ಸರ್ವಾಂತರ್ಯಾಮಿಯಾಗಿರುವ, ಈ ಚಿತ್‌ಶಕ್ತಿಯೇ ತ್ರಿಪುರಾಪರಮೇಶ್ವರೀತತ್ವದ ಅಂಶರೂಪವಾಗಿದೆ. ಮೂಲತತ್ವವು ಒಂದೇ ಆಗಿರ ಬೇಕಾದರೆ ಈಗ ಕಾಣಬರುತ್ತಿರುವ ಅನೇಕ ಪ್ರಪಂಚವು ತೋರಿಕೆಯಾಗಿರಬೇ ಕೆಂಬುದೂ ಸಹಜವಾಗಿಯೇ ಗೊತ್ತಾಗುತ್ತದೆ. ಈ ತೋರಿಕೆಯೇ ಮಾಯಾಶಕ್ತಿಯು. ಹೀಗೆ ಚಿಚ್ಛಕ್ತಿಯೂ ಬ್ರಹ್ಮತತ್ವವೂ ವಾಸ್ತವವಾದ ಸಚ್ಚಿದಾನಂದರೂಪದಲ್ಲಿ ಅಭಿನ್ನ ವಾಗಿರಬೇಕು. ಎಂಬ ಅದ್ವೈತಸಿದ್ಧಾಂತವು ಏರ್ಪಡುತ್ತದೆ. ಈ ಪ್ರಾಪಂಚಿಕ ವ್ಯವಹಾರವೆಲ್ಲವೂ, ಧರ್ಮಾಚರಣೆಯಿಂದ ಚಿತ್ತಶುದ್ಧಿ, ಜ್ಞಾನಪ್ರಾಪ್ತಿ, ಮೋಕ್ಷಾನು ಭವಗಳಲ್ಲಿ ಕ್ರಮವಾಗಿ ಪರಿಣಮಿಸುತ್ತದೆ. ಈ ಅಂಶವನ್ನು ಈ ತ್ರಿಪುರಾರಹಸ್ಯವು ಎಲ್ಲರಿಗೂ ಮನಗಾಣಿಸುತ್ತದೆ.

ಉಪಾಸನೇಷು ಶ್ರದ್ಧಾಽನ್ಯದೇವತಾವಿಷಯಾ ತತಃ ।
ವಿಷ್ಣೌ ಶಿವೇ ಶಕ್ತಿಷು ಚ ಸರ್ವಾಽಂತೇ ಪರಿಪಾಕತಃ ॥ ಅ. ೭೮-೫೫

ತ್ರಿಪುರಾಮೂರ್ತಿಸೇವಾಯಾಂ ಶ್ರದ್ಧಾ ಭವತಿ ಶಾಶ್ವತೀ ।
ಏತದಾರಾಧನೇನೈವ ವಿದಿತ್ವಾ ಸ್ವಾತ್ಮರೂಪಿಣೀಂ ॥ ೫೬

ಚಿದಾನಂದಾದ್ವಯಮಯೀಂ ಸರ್ವಲೋಕಮಹೇಶ್ವರೀಂ ।
ಅಭಿವ್ಯಕ್ತಪರೈಶ್ವರ್ಯೋ ನ ಪುನರ್ಭವಮೃಚ್ಛತಿ ॥ ೫೭

ಹೀಗೆಯೇ ಅಧ್ಯಾಯ ೭೯ ರಲ್ಲಿ ೫೦-೫೮ ಶ್ಲೋಕಗಳನ್ನೂ ಗಮನಿಸಬೇಕು.

ಈ ಸಂಪುಟದಲ್ಲಿ ಜಗನ್ಮಾತೆಯು ಭಕ್ತಾನುಗ್ರಹಕ್ಕಾಗಿ ಲಲಿತಾಪರಮೇಶ್ವರೀ ರೂಪದಲ್ಲಿ ನೆರವೇರಿಸಿದ ಮಹಾಕಾರ್ಯಗಳನ್ನು ವಿವರಿಸಿ ಹೇಳಿರುತ್ತದೆ. ಈ ವಿವರ ಗಳಲ್ಲಿ ಸಾಂಕೇತಿಕವಾದ ಭಾವಗಳೂ ಉಪಾಸನೆಯ ಸೌಕರ್ಯಕ್ಕಾಗಿ ಅಡಕವಾಗಿ ಸೂಚಿತವಾಗಿರುತ್ತವೆ. ಎಂಬುದನ್ನೂ ಗಮನಿಸಬಹುದು.

ಈಗ ಜನಜೀವನದ ಸಮುದ್ರವು ಸಾಮಾಜಿಕಪರಿಷ್ಕರಣ, ಆರ್ಥಿಕ ನವಯೋಜನೆ, ರಾಜಕೀಯ ವಿಪ್ಲವಗಳಿಂದ ಅಪಾಯಶಂಕೆಯನ್ನುಂಟುಮಾಡು ತ್ತಿದೆ. ಇಂತಹ ಪರ್ವಕಾಲದಲ್ಲಿ ವಿಶ್ವಧರ್ಮಾಚರಣೆ ಎಂಬ ನಾವೆಯೊಂದೇ ನಮ್ಮನ್ನು ಪಾರಗಾಣಿಸಬಲ್ಲದು. ಆದುದರಿಂದ ಇಂತಹ ಉತ್ತಮವಾದ ಧಾರ್ಮಿಕ

ಗ್ರಂಥವನ್ನು ಕನ್ನಡಿಗರ ಹಿತಕ್ಕಾಗಿ ಮುದ್ರಿಸಿ ಪ್ರಚಾರಮಾಡಬೇಕೆಂದು ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳ ಆಜ್ಞೆಯಂತೆ ಇದನ್ನೂ ರಚಿಸಿ ಪ್ರಕಟಿಸಲಾಗಿದೆ. ಇಂತಹ ಸೇವಾವಕಾಶವನ್ನು ಕಲ್ಪಿಸಿಕೊಟ್ಟಿರುವ ಆ ಮಹಾನುಭಾವರಲ್ಲಿ ನನ್ನ ಕೃತಜ್ಞತಾ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ, ಅವರ ಈ ಘನವಾದ ಕಾರ್ಯವು ಸಫಲವಾಗಲೆಂದೂ, ಆ ಮಹಾಶಯರಿಗೆ ಜಗನ್ಮಾತೆಯು ಆಯುರಾರೋಗ್ಯ ಐಶ್ವರ್ಯ ಸತ್ಪುತ್ರಪ್ರಾಪ್ತಿ ಮುಂತಾದ ಸಕಲ ಸನ್ಮಂಗಳಗಳನ್ನು ಇತ್ಯೋಽಪ್ಯತಿಶಯವಾಗಿ ಕರುಣಿಸುತ್ತಿರಲೆಂದೂ ಆ ಮಹಾತಾಯಿಯ ಅಡಿದಾವರೆಗಳಲ್ಲಿ ಭಕ್ತಿನಮ್ರನಾಗಿ ಯಾವಾಗಲೂ ಪ್ರಾರ್ಥಿಸುತ್ತಿರುತ್ತೇನೆ. ಈಗ ಪ್ರಾರಂಭವಾಗುವ ಸರ್ವಜಿತ್ ಸಂವತ್ಸರವು ಎಲ್ಲರಿಗೂ ಜಯ ಶಾಂತಿ ಸುಖಗಳನ್ನು ಉಂಟುಮಾಡುತ್ತಿರಲಿ.

ಶ್ರೀ ವ್ಯಯಸಂವತ್ಸರದ
ಫಾಲ್ಗುನ ಕೃಷ್ಣ ತ್ರಯೋದಶೀ
ಗುರುವಾರ, 20—3—1947

**ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ**

ಶ್ರೀತ್ರಿಪುರಾರಹಸ್ಯದ ಮಾಹಾತ್ಮ್ಯಖಂಡದಲ್ಲಿರುವ

ವಿಷಯುಗಳ ಸೂಚಿಕೆ

ಅಧ್ಯಾಯ	ವಿಷಯ	ಪುಟಸಂಖ್ಯಾ
೬೧.	ತ್ರಿಪುರಾಪರಮೇಶ್ವರಿಯ ಪಾರಮಾರ್ಥಿಕ ಮತ್ತು ವ್ಯಾವಹಾರಿಕ ರೂಪಗಳು ; ಭಂಡಾಸುರನು ದೇವಿಯೊಡನೆ ಯುದ್ಧಕ್ಕೆ ಹೊರಟುದು ; ವಿಜಯನೆಂಬ ಮಂತ್ರಿಯು ಮಾಡಿದ ರಾಜನೀತಿಯ ಸಲಹೆ ; ಗೂಢಚಾರರ ಮೂಲಕ ಎದುರು ಪಕ್ಷದ ಬಲಾಬಲಗಳನ್ನು ತಿಳಿಯಲು ಅಮಿತ್ರಘ್ನ, ವಿದ್ಯುನ್ಮಾಲಿ ಇವರನ್ನು ಕಳುಹಿಸಿದುದು ; ಪರಾಭೂತರಾಗಿ ಅವರು ಹಿಂತಿರುಗಿದುದು ; ಗೂಢಚಾರನ ಅರಿಕೆ ;	೧–೨೨
೬೨.	ಅಮಿತ್ರಘ್ನನ ಅರಿಕೆ ; ಭಂಡಾಸುರನು ಮನಸ್ಸಿನೊಳಗೆ ತ್ರಿಪುರಾಪರಮೇಶ್ವರಿಯಲ್ಲಿ ಭಕ್ತಿಯುಳ್ಳವನು ; ಹೊರಗಿನ ವ್ಯವಹಾರದಲ್ಲಿ ರಾಕ್ಷಸರಾಜನಿಗೆ ತಕ್ಕಂತೆ ವೀರ್ಯ, ಶೌರ್ಯ ಪ್ರದರ್ಶನ ; ದೇವಿಯ ಕಡೆಯಲ್ಲಿ ದಂಡನಾಯಕಿಯ ಯುದ್ಧಸಿದ್ಧತೆ ;	೨೩–೪೦
೬೩.	ಲಲಿತಾಪರಮೇಶ್ವರಿಯ ಕುಮಾರಿಯಾದ ಎಂಟುವರ್ಷದ ವಯಸ್ಸಿನ ಬಾಲಾದೇವಿಯು ಯುದ್ಧೋತ್ಸಾಹವುಳ್ಳವಳು ; ಬಾಲಾಂಬಾದೇವಿಯು ಕುಟಿಲಾಕ್ಷನನ್ನು ಮೂರ್ಛೆಗೊಳಿಸಿ, ವಿಶುಕ್ರನನ್ನು ಎದುರಿಸಿದಳು ; ಸಾರಥಿಯು ಹೇಳಿದ ಅಪಾಯಶಂಕೆಯನ್ನೂ ಸಮಾಧಾನಪಡಿಸಿದಳು ; ಬಾಲಾಂಬಾದೇವಿಯ ಪರಾಕ್ರಮ ;	೪೧–೫೯
೬೪.	ವಿಶುಕ್ರನನ್ನೂ, ವಿಷಂಗನನ್ನೂ ಬಾಲಾದೇವಿಯು ಗುದ್ದಿ ಮೂರ್ಛೆಗೊಳಿಸಿದುದು ; ಭಂಡಾಸುರನನ್ನು ಎದುರಿಸಲು ತವಕದಿಂದ ಹೋಗುತ್ತಾ, ಅಡ್ಡಗಿಸಿದ ವಿಷಂಗನನ್ನು	

ಅಧ್ಯಾಯ	ವಿಷಯ	ಪುಟಸಂಖ್ಯೆ
	ಬಾಣದಿಂದ ಹೊಡೆದು ಮೂರ್ಛೆಗೊಳಿಸಿದುದು ; ಲಲಿತಾ ಪ್ರತಿಬಿಂಬರೂಪಳಾದ ಆ ಬಾಲಾಂಬೆಯನ್ನು ಅಂತಃ ಜ್ಞಾನಿಯಾದ ಭಂಡಾಸುರನು ಬಾಣಗಳಿಂದಲೇ ಪೂಜಿಸಿದುದು. ಬಾಲಾದೇವಿಯು ಅಚ್ಚರಿಗೊಂಡ ತನ್ನ ಸಾರಥಿಗೆ ಭಂಡಾಸುರನ ಪೂರ್ವವೃತ್ತಾಂತವನ್ನು ಹೇಳಿದುದು ; ದೈತ್ಯರಾಜ ದೇವೀ ಇವರಿಗೆ ಘೋರಯುದ್ಧ ; ದಂಡಿನೀ ದೇವಿಯು ಬಾಲಾದೇವಿಯ ಅಸಹಾಯಶೌರ್ಯವನ್ನು ನೋಡಿ ನೆರವಿಗೆ ಬಂದುದು ;	೬೦-೭೮
೬೫.	ಬಾಲಾದೇವಿಯನ್ನು ಅಪಾಯಶಂಕೆಯಿಂದ ತಡೆದು ಲಲಿತಾ ಪರಮೇಶ್ವರೀ ಸಮೀಪಕ್ಕೆ ಕರೆದುಕೊಂಡುಹೋಗಿ ವಿಜ್ಞಾಪಿಸಿದುದ ; ಮಹಾರಾಣಿಯು ಅಭಿನಂದನೆ, ಸಂಪತ್ಕರೀ, ವಿಶುಕ್ರರಿಗೂ, ಅಶ್ವಾರೂಢಾ, ವಿಷಂಗರಿಗೂ, ದಂಡಿನೀ ಭಂಡಾಸುರರಿಗೂ ಯುದ್ಧವಾಗಿ ರಾಕ್ಷಸರು ಸೋತು ಹಿಮ್ಮೆಟ್ಟಿದುದು ; ಅಮೃತೇಶಿಯು ಮೃತರಾಗಿದ್ದ ಶಕ್ತಿದೇವಿಯರನ್ನು ಬದುಕಿಸಿದಳು ; ಅವರೊಡನೆ ಬಂದು ದಂಡಿನೀದೇವಿಯು ಈ ಜಯವನ್ನು ಮಹಾರಾಣಿಗೆ ವಿಜ್ಞಾಪಿಸಿದಳು !	೭೯-೯೯
೬೬.	ಭಂಡಾಸುರನು ತನ್ನ ರಾಜಧಾನಿಯಾದ ಶೂನ್ಯಕನಗರವನ್ನು ಪಡೆದು, ಅಂತಃಪುರದಲ್ಲಿ ಮೋಹಿನೀ ಮುಂತಾದ ತನ್ನ ಪತ್ನಿಯರು ಲಲಿತಾಪರಮೇಶ್ವರಿಯ ಮಹಿಮೆಯನ್ನು ನಾರದನಿಂದ ತಿಳಿದಿರಲು, ತನ್ನ ಸಂಹಾರವನ್ನೂ ಅನಿವಾರ್ಯವೆಂದು ತಿಳಿಸಿ, ಅವರನ್ನು ಸಮಾಧಾನಪಡಿಸಿ, ಸಭೆಗೆ ಬರಲು, ಅಲ್ಲಿ ಸೇನಾಪತಿಗಳು ಶತ್ರುಸಂಹಾರವನ್ನು ಪ್ರತಿಜ್ಞೆಮಾಡಿದುದು ; ದುರ್ಮದನು ಯುದ್ಧದಲ್ಲಿ ಸಂಪತ್ಕರೀದೇವಿಯಿಂದ ಹತನಾದುದು ;	೧೦೦-೧೧೮

ಅಧ್ಯಾಯ	ವಿಷಯ	ಪುಟಸಂಖ್ಯಾ
೬೭.	ದುರ್ಮದನ ಅಣ್ಣನಾದ ಕುರಂಡನು ಅಶ್ವಾರೂಢಾದೇವಿಯಿಂದ ಯುದ್ಧದಲ್ಲಿ ಸಂಹೃತನಾದುದು ; ಸೇನಾಪತಿಯಾದ ಕುಟಿಲಾಕ್ಷನಿಂದ ನಿಯುಕ್ತರಾದ ಕರಂಕಾದಿಗಳು ಸರ್ಪಿಣೀಮಾಯೆಯನ್ನು ಪ್ರಯೋಗಿಸಲು, ಶಕ್ತಿಗಳು ಪರಾಭೂತರಾದುದು ; ಆಗ ದೇವಿಯು ನಕುಲೀಶ ಶಕ್ತಿಯನ್ನು ಕಳುಹಿಸಲು, ಆಕೆಯು ಸರ್ಪಗಳನ್ನೂ ರಾಕ್ಷಸರನ್ನೂ ನಾಶಮಾಡಿದುದು ; ಕರಂಕ ಮುಂತಾದವರ ಸಂಹಾರ ;	೧೧೯—೧೩೫
೬೮.	ದೈತ್ಯ ಸೇನಾನಾಯಕನಾದ ಕುಟಿಲಾಕ್ಷನು ಈ ಪರಾಜಯದಿಂದ ದುಃಖಿಸಿದುದು ; ಭಂಡನ ತಮ್ಮನಾದ ವಿಶುಕ್ರನು ರಾಕ್ಷಸರೆಲ್ಲರೂ ಶಕ್ತಿಗಳೊಡನೆ ಯುದ್ಧದಲ್ಲಿ ತೊಡಗಿರಲು ಏಕಾಕಿನಿಯಾಗಿರುವ ಲಲಿತಾದೇವಿಯನ್ನು ಹಿಡಿದುತರುವೆನೆಂದುದು ; ಯುದ್ಧದಲ್ಲಿ ಬಲಾಹಕ ಮುಂತಾದವರ ನೇತ್ರಜ್ವಾಲೆಯಿಂದ ಶಕ್ತಿಗಳು ಪರಾಹತರಾದುದು ; ಶಕ್ತಿಸೇನಾನಾಯಕಿಯಾದ ಅಶ್ವಾರೂಢಾದೇವಿಯು ಚಕ್ರರಾಜ ರಕ್ಷಕಿಯಾದ ತಿರಸ್ಕರಿಣಿಯನ್ನು ನಿಯಮಿಸಿ ಬಲಾಹಕ ಮುಂತಾದವರನ್ನು ಸಂಹಾರಮಾಡಿಸಿದಳು ; ಅಮೃತೇಶಿಯು ಮೃತರಾಗಿದ್ದ ಶಕ್ತಿಗಳನ್ನು ಬದುಕಿಸಿದುದು	೧೩೬--೧೫೫
೬೯.	ರಾತ್ರಿಯುದ್ಧವು ಪ್ರಾರಂಭವಾಗಲು, ಜ್ವಾಲಾಮುಖೀದೇವಿಯಿಂದ ತಮೋನಾಶನ ; ಬಾಲಾಂಬಾದೇವಿಯು ಮೂವತ್ತು ಜನ ಭಂಡನ ಮಕ್ಕಳನ್ನೂ ಮೂರ್ಛೆಗೊಳಿಸಿದುದು ; ಭಂಡನ ಸೋದರಳಿಯರಾದ ಉಲೂಕಾದಿಗಳು ಅಶ್ವಾರೂಢಾಸಂಪನ್ನಾಥಾದೇವಿಯರಿಂದ ಹತರಾದುದು ; ಕುಟಿಲಾಕ್ಷನನ್ನು ದಂಡಿನಿಯು ಸಂಹರಿಸಿದಳು ; ವಿಶುಕ್ರನು ಮಂತ್ರಿಣಿಯೊಡನೆ ಯುದ್ಧದಲ್ಲಿ ಮೂರ್ಛಿತನಾಗಲು ಅವನನ್ನು ಭಂಡನ ಸಮೀಪಕ್ಕೆ ಸಾಗಿಸಿದರು ;	

ಅಧ್ಯಾಯ	ವಿಷಯ	ಪುಟಸಂಖ್ಯಾ
	ವಿಷಂಗನು ಮೋಸ ಯುದ್ಧದಿಂದ ಲಲಿತಾಪಹಾರಕ್ಕೆ ಬರಲು ಎಚ್ಚೆತ್ತ ಶಕ್ತಿಗಳು ತಡೆದು ಯುದ್ಧಮಾಡಿದರು ;	೧೫೬--೧೭೪
೨೦.	ಆ ರಾತ್ರಿಯಲ್ಲಿ ದಮನಾದಿಗಳನ್ನು ಕಾಮೇಶ್ವರಿಯು ನಾಶ ಮಾಡಿದಳು ; ವಿಷಂಗನು ಕಲ್ಪಿಸಿದ ಮಾಯಾಪುರುಷ ನನ್ನು ಕಾಮೇಶಿಯು ವಿಮಾಯಾಸ್ತ್ರದಿಂದ ನಾಶಮಾಡಿ, ಅವನನ್ನು ಶರೆಹಿಡಿದು ಲಲಿತಾಸಮೀಪಕ್ಕೆ ಸಾಗಿಸಿದಳು ; ಮಂತ್ರಿಣೀ ಮುಂತಾದವರು ಅವನನ್ನು ಕೊಲ್ಲಲೆಳಸಲು ಲಲಿತಾಪರಮೇಶ್ವರಿಯು, ಬದ್ಧನು ಮೃತಸಮನು ಎಂದು ಹೇಳಿ, ಬಿಡಿಸಿ, ಈ ವೃತ್ತಾಂತವನ್ನು ಭಂಡನಿಗೆ ತಿಳಿಸಲು, ಕಳುಹಿಸಿದಳು ; ಆಮೇಲೆ ಶಕ್ತಿಸೈನ್ಯದ ಆಯಾಸಪರಿಹಾರ ರಕ್ಷಣೆಗೆ ಜ್ವಾಲಾಮಾಲಿನಿಯು ಜ್ವಾಲೆಯ ಕೋಟೆಯನ್ನು ಕಲ್ಪಿಸಿದುದು ;	೧೭೫-೧೯೩
೨೧.	ಪರಾಜಿತನಾದ ವಿಷಂಗನನ್ನು ಅವನ ಅಣ್ಣನಾದ ವಿಶುಕ್ರನು ಸಮಾಧಾನಪಡಿಸಿ, ಭಾರ್ಗವನಿಂದ ಪಡೆದಿದ್ದ ಶತ್ರು ನಾಶಕ ಯಂತ್ರವನ್ನು ಕೊಡಲು, ಅವನು ಅದನ್ನು ಶಕ್ತಿ ಸೇನೆಯಲ್ಲಿ ಹಾಕಿದುದು ; ಆ ವಿಘ್ನಯಂತ್ರದ ಪ್ರಭಾವ ದಿಂದ ಶಕ್ತಿಗಳು ಅಲಸರಾಗಿರಲು ದಂಡಿನಿಯು ಇದನ್ನು ಲಲಿತಾದೇವಿಗೆ ವಿಜ್ಞಾಪಿಸಿದುದು !	೧೯೪-೨೧೩
೨೨.	ಲಲಿತಾಪರಮೇಶ್ವರಿಯು ಶಕ್ತಿವಿಶಿಷ್ಟ ವಿಘ್ನೇಶ್ವರನನ್ನು ತನ್ನ ಮತ್ತು ಕಾಮೇಶ್ವರನ ಮುಖಸ್ಮಿತದಿಂದ ಉಂಟುಮಾಡಿ, ಆ ವಿಘ್ನಯಂತ್ರನಾಶಕ್ಕೆ ಕಳುಹಿಸಿದುದು ; ಗಣೇಶನು ಆ ಯಂತ್ರವನ್ನು ನಾಶಪಡಿಸಿ ವಿಶುಕ್ರಾದಿಗಳನ್ನು ಹೊಡೆದು ಮೂರ್ಛೆಗೊಳಿಸಿದನು ; ಎದುರಿಸಲು ಬಂದ ಆ ಗಣೇಶ ನೊಡನೆ ಯುದ್ಧಮಾಡಲು ಭಂಡನು ಗಜಾಸುರನನ್ನು ಸೃಜಿಸಿ ಕಳುಹಿಸಿದುದು ; ಶಕ್ತಿಗಳೆಲ್ಲರೂ ಯುದ್ಧದಲ್ಲಿ	

ಅಧ್ಯಾಯ	ವಿಷಯ	ಪುಟಸಂಖ್ಯಾ
	ತೊಡಗಿದರು ; ಬಾಲಾಂಬಾದೇವಿಯು ಒಬ್ಬಳೇ ಭಂಡ ಪುತ್ರರನ್ನು ಎದುರಿಸಿದುದು ;	೨೧೩–೨೩೧
೭೩.	ಆ ಗಜಾಸುರನು ಸೃಜಿಸಿದ ಅನೇಕ ಗಜಾಸುರರನ್ನು ಗಣೇಶನು ಸೃಜಿಸಿದ ಗಣೆಶರು ಸಂಹರಿಸಿದುದು ; ಗಣೇಶನು ಗಜಾಸುರನನ್ನು ಸಂಹರಿಸಿದುದು ; ಭಂಡನು ಲಲಿತಾಪರಮೇಶ್ವರಿಯಿಂದ ಸಂಹಾರವನ್ನು ಬಯಸುವುದನ್ನು ತಿಳಿದು, ಮಹಾರಾಣಿಯು ಗಣೇಶನನ್ನು ಯುದ್ಧದಿಂದ ವಿಶ್ರಾಂತನನ್ನು ಮಾಡಿದುದು ; ಬಾಲಾದೇವಿಯು ಮಂತ್ರಿಣೀ ದಂಡಿನೀ ದೇವಿಯರನ್ನು ಹಿಂದೆಮಾಡಿ, ಭಂಡಾಸುರನ ಮಕ್ಕಳನ್ನು ಒಬ್ಬಳೇ ಯುದ್ಧದಲ್ಲಿ ಸಂಹರಿಸಿದುದು ;	೨೩೨–೨೪೧
೭೪.	ಬಾಲಾದೇವಿಯನ್ನು ಮಹಾರಾಣಿಯು ಅಭಿನಂದಿಸಿದುದು ; ಭಂಡಾಸುರನು ಪುತ್ರಶೋಕದ ವ್ಯಾಕುಲತೆಯನ್ನು ಸ್ವಲ್ಪ ಕಾಲವಾದ ಮೇಲೆ ವಿವೇಕದಿಂದ ಸಹಿಸಿ ಲಲಿತಾಧ್ಯಾನಮಗ್ನನಾದುದು ; ಆಗ ವಿಷಂಗ, ವಿಶುಕ್ರರು ಸಮಾಧಾನಪಡಿಸಿದುದು ; ಭಂಡಾಸುರನು ತನ್ನ ಹೃದಯದಲ್ಲಿನ ತ್ರಿಪುರಾರೂಪಳಾದ ಲಲಿತಾಪರಮೇಶ್ವರಿಯಲ್ಲಿರುವ ಭಕ್ತಿಯನ್ನು ಮುಚ್ಚಿ, ದೈತ್ಯರಾಜನಂತೆ ವ್ಯವಹರಿಸುತ್ತಾ ಮಕ್ಕಳ ವಧೆಗಾಗಿ ದುಃಖಿಸಿದನು ; ವಿಷಂಗನು ಚಕ್ರರಾಜದ ದಕ್ಷಿಣಪಾರ್ಶ್ವದಲ್ಲಿಯೂ, ವಿಶುಕ್ರನು ವಾಮಪಾರ್ಶ್ವದಲ್ಲಿಯೂ, ಮುತ್ತಿದರು ; ದಂಡಿನೀದೇವಿಯು ಸಾರಥಿಯಾದ ಭೈರವನಿಂದ ಮುಂದುಗಡೆಯಲ್ಲೂ, ಸ್ವಪ್ನೇಶ್ವರೀ ಕಾಲಸಂಕರ್ಷಿಣೀ ಶಕ್ತಿದೇವಿಯರಿಂದ ಹಿಂದುಗಡೆಯಲ್ಲೂ ಕೂಡಿ ವಿಷಂಗನನ್ನು ಎದುರಿಸಿದಳು ; ಮಂತ್ರಿಣೀದೇವಿಯು ಶುಕಶ್ಯಾಮಲಾದೇವೀ ಮುಂತಾದವರೊಡನೆ ವಿಶುಕ್ರನನ್ನು ಎದುರಿಸಿದಳು ; ಶುಕಶ್ಯಾಮಲಾದೇವಿಯು ಜೀಮೂತಕಾಯನನ್ನೂ, ಸಾರಿಕಾಶಕ್ತಿಯು	

ಅಧ್ಯಾಯ ವಿಷಯ ಪುಟಸಂಖ್ಯಾ

ದೇವಾರಿಯನ್ನೂ, ಸಂಗೀತಶಕ್ತಿದೇವಿಯು ಕರಂಭನನ್ನೂ, ಸಾಹಿತ್ಯಶ್ಯಾಮಲಾದೇವಿಯು ಶಿಖಿಭಾಷಣನನ್ನೂ, ಹೀಗೆ ವಿಶುಕ್ರನ ಮಕ್ಕಳನ್ನು ಸಂಹರಿಸಿದುದು ; ಅಷ್ಟರಲ್ಲಿ ಮಾಯೆಯಿಂದ ಬಂದ ವಿಶುಕ್ರನು ಲಘುಶ್ಯಾಮಲಾ ದೇವಿಯಿಂದ ಹತನಾಗಿ ಮೂರ್ಛೆಹೋಗಿದ್ದು ಎಚ್ಚತ್ತು, ಮಂತ್ರಿಣೀದೇವಿಯಿಂದ ಹತನಾದನು ; ೨೫೨–೨೭೩

೭೫. ಜಂಭಿನೀ, ಅಂಧಿನೀ, ಮೋಹಿನೀ ಮುಂತಾದ ಶಕ್ತಿದೇವಿಯರು ಕರಾಳವಕ್ತ್ರ ಮುಂತಾದ ವಿಷಂಗಪುತ್ರರನ್ನು ಸಂಹರಿಸಿದರು ; ದಂಡಿನೀದೇವಿಯು ವಿಷಂಗನ ಮಾಯೆಯನ್ನು ನಾಶಮಾಡಿ, ಅವನನ್ನೂ ಸಂಹರಿಸಿದಳು ;

೭೬. ಸೋದರರ ಮರಣದಿಂದ ದುಃಖಿತನಾದ ಭಂಡಾಸುರನು ಲಲಿತಾದೇವಿಯಿಂದಲೇ ತನಗೆ ಮರಣ ಲಾಭವೂ, ಶ್ರೇಯಃಪ್ರಾಪ್ತಿಯೂ, ಆಗುವುದೆಂದು ತಿಳಿದು, ದುಃಖವನ್ನು ದೂರಮಾಡಿಕೊಂಡನು ; ಆಮೇಲೆ ವ್ಯಾವಹಾರಿಕ ದೃಷ್ಟಿಯಿಂದ ದೈತ್ಯರಾಜನು ದೇವಿಯೊಡನೆ ಯುದ್ಧಕ್ಕೆ ಬಂದನು ; ಲಲಿತಾಪರಮೇಶ್ವರಿಯೂ ಮಂತ್ರಿಣೀ, ದಂಡಿನೀ, ಬಾಲಾಂಬಾ, ಇವರೊಡನೆ ಮುಂದುವರಿದು ಭಂಡನನ್ನು ಎದುರಿಸಿದಳು ; ಭಂಡಾಸುರನ ಆನಂದವನ್ನು ಗಮನಿಸಿ, ಅವನ ಸಾರಥಿಯು ಅದಕ್ಕೆ ಕಾರಣವನ್ನು ಕೇಳಿದನು; ಆಗ ಭಂಡಾಸುರನು ಲಲಿತಾಪರಮೇಶ್ವರಿಯು ಪರತತ್ವಸ್ವರೂಪಳೆಂಬುದನ್ನೂ, ತನ್ನ ಪೂರ್ವಜನ್ಮದ ಕಥೆಯನ್ನೂ ಸಾರಥಿಗೆ ತಿಳಿಯ ಹೇಳಿ, ದೇವಿಯಿಂದ ತನ್ನ ಮರಣವಾಗುವುದೆಂದು ವಿವರಿಸಿದನು ; ೨೯೩–೩೧೦

೭೭. ಭಂಡಾಸುರನು ತನ್ನನ್ನು ಎದುರಿಸಿದ ಮಂತ್ರಿಣೀ ಮುಂತಾದ ಶಕ್ತಿದೇವಿಯರಿಗೆ ತನ್ನ ಯುದ್ಧಸಾಮರ್ಥ್ಯಕೌಶಲಗಳನ್ನು

ಅಧ್ಯಾಯ ವಿಷಯ ಪುಟಸಂಖ್ಯೆ

ತೋರಿಸಿ, ತಾನು ಲಲಿತಾದೇವಿಯೊಡನೆ ಯುದ್ಧಮಾಡ ಬೇಕೆಂಬ ಆಸೆಯನ್ನು ತಿಳಿಸಿದನು ; ಅವರು ಅವನನ್ನು ಜಯಿಸುವುದು ಲಲಿತಾಪರಮೇಶ್ವರೀ ದೇವಿಗೆ ಮಾತ್ರ ಸಾಧ್ಯವೆಂಬುದನ್ನೂ ಅದರ ಔಚಿತ್ಯವನ್ನೂ ತಿಳಿದು, ತಟಸ್ಥರಾದರು ; ಆಮೇಲೆ ಭಂಡಾಸುರನು ಲಲಿತಾದೇವಿ ಯನ್ನು ಕಂಡು, ಆನಂದಭಕ್ತಿಯುತನಾಗಿ ಬಾಣಪುಷ್ಪ ಗಳಿಂದ ದೇವಿಯನ್ನು ಮೊದಲು ಪೂಜಿಸಿದನು ; ಅನಂತರ ದಲ್ಲಿ ಭಂಡನಿಂದ ಸೃಜಿಸಲ್ಪಟ್ಟ ಮಧುಕೈಟಭ ಮುಂತಾದ ವಿಷ್ಣುಶತ್ರುಗಳನ್ನೂ, ಅಂಧಕ ಮುಂತಾದ ಶಿವಶತ್ರು ಗಳನ್ನೂ, ಯುದ್ಧಕ್ಕೆ ಬಂದುದನ್ನು ನೋಡಿದ ಲಲಿತಾ ದೇವಿಯು ವಿಷ್ಣುವಿನ ದಶಾವತಾರಗಳನ್ನೂ, ಶಂಕರನನ್ನೂ ಉಂಟುಮಾಡಿ, ಅವರನ್ನು ಸಂಹಾರಮಾಡಿಸಿದಳು ; ತರುವಾಯ ಭಂಡಾಸುರನ ಮಾಯಾಯುದ್ಧದಿಂದ ಎಲ್ಲರೂ ಕಂಗೆಡಲು, ಲಲಿತಾದೇವಿಯು ಪಾಶುಪತಾಸ್ತ್ರ ದಿಂದ ಇತರರೆಲ್ಲರನ್ನೂ ಸಂಹರಿಸಿದಳು ; ತನ್ನ ಧ್ಯಾನದಲ್ಲಿ ತೊಡಗಿದ್ದ ಭಂಡಾಸುರನನ್ನು ಕಾಮೇಶಾಸ್ತ್ರದಿಂದ ಹೊಡೆ ದಳು ; ಅದು ಭಂಡಾಸುರನನ್ನು ಅವನ ರಾಜಧಾನಿಯಾದ ಶೂನ್ಯಕಪುರ, ಹೆಂಡಿತಿ, ಮಕ್ಕಳೊಡನೆ ಸಂಹರಿಸಿತು ; ಬ್ರಹ್ಮಾದಿದೇವತೆಗಳು ಬಂದು ಆನಂದದಿಂದ ದೇವಿಯನ್ನು ಗೌರವಿಸಿದರು ; ೩೧೧–೩೨೭

೨೮. ಬ್ರಹ್ಮಾದಿ ದೇವತೆಗಳು ಮಾಡಿದ ಲಲಿತಾಪರಮೇಶ್ವರೀ ದೇವಿಯ ಸ್ತುತಿ ; ಅನಂತ ಬ್ರಹ್ಮಾಂಡಗಳಿಂದ ಅನೇಕ ಬ್ರಹ್ಮಾದಿಗಳು ಬಂದು ದೇವಿಯನ್ನು ಪೂಜಿಸಿದರು ; ವಿಶ್ವಕರ್ಮನು ಬ್ರಹ್ಮನ ಅಪ್ಪಣೆಯಂತೆ ಮೇರುಶೃಂಗದಲ್ಲಿ ರಚಿಸಿದ್ದ ಶ್ರೀಪುರದಲ್ಲಿ ನೆಲೆಸಿರುತ್ತಾ ಭಕ್ತರನ್ನು ಅನು ಗ್ರಹಿಸುತ್ತಿರಬೇಕೆಂಬ ದೇವಾದಿಗಳ ಪ್ರಾರ್ಥನೆಯನ್ನು

ಅಧ್ಯಾಯ ವಿಷಯ ಪುಟಸಂಖ್ಯೆ

ದೇವಿಯು ಅಂಗೀಕರಿಸಿದಳು; ಬೃಹಸ್ಪತಿ, ಬ್ರಹ್ಮ, ವಸಿಷ್ಠ ಮುಂತಾದ ಮಹನೀಯರು ದೇವಿಯನ್ನು ಅಲ್ಲಿ ರತ್ನಸಿಂಹಾಸನದಲ್ಲಿ ಪಟ್ಟಾಭಿಷೇಕದಿಂದ ಪೂಜಿಸಿದರು; ಇಂತಹ ಶ್ರೀಪುರವನ್ನು ಅಗಸ್ತ್ಯನು ಕಾಣಲಾಗದಿರಲು ಕಾರಣವನ್ನು ಕೇಳಲು ಹಯಗ್ರೀವನು ತ್ರಿಪುರಾದೇವಿಯ ಉಪಾಸನೆಯನ್ನು ಗುರುವಿನಿಂದ ದೀಕ್ಷಾಗ್ರಹಣಪುರಸ್ಸರ ವಾಗಿ ಮಾಡದಿರುವುದೇ ಕಾರಣವೆಂದೂ ತಿಳಿಸಿದನು; ಸಿದ್ಧಿಯ ಲಾಭಕ್ಕೆ ಮಾಹಾತ್ಮ್ಯಶ್ರವಣವೇ ಕಾರಣವೆಂದೂ ವಿವರಿಸಿದನು; ೩೧೧–೩೨೭

೭೯. ಪರಶುರಾಮನು ಭಕ್ತಿ, ಸಂತೋಷಗಳಿಂದ ಕೂಡಿ ದತ್ತಾತ್ರೇಯ ಗುರುವನ್ನು ನಮಸ್ಕರಿಸಿ, ಸಂವರ್ತನನ್ನು ಗುರುಭಕ್ತಿಪ್ರವರ್ತಕನಾದುದರಿಂದ ಮನಸ್ಸಿನಲ್ಲಿ ಸ್ತುತಿಸಿ, ಅಗಸ್ತ್ಯನು ಶ್ರೀಪುರದ ದರ್ಶನಕ್ಕೆ ಅನರ್ಹನಾಗಲು ಕಾರಣವನ್ನು ಕೇಳಲು, ದ್ವಿಜತ್ವಕ್ಕೆ ಉಪನಯನವು ಹೇಗೋ ಹಾಗೆ, ತ್ರಿಪುರೋಪಾಸನೆಯ ಸಿದ್ಧಿಗೆ ದೀಕ್ಷಾಗ್ರಹಣವು ಆವಶ್ಯಕವೆಂದು ತಿಳಿಸಿದನು; ವೈದಿಕಕರ್ಮಗಳೂ ತ್ರೈಗುಣ್ಯ ವಿಷಯಗಳೆಂದೂ, ಬ್ರಾಹ್ಮಣ್ಯದ ಹಾಗೆ ಶ್ರೀವಿದ್ಯೋಪಾಸನೆಯನ್ನು ದೀಕ್ಷಾಗ್ರಹಣದಿಂದ ಕಾಪಾಡಿಕೊಂಡಿರಬೇಕೆಂದೂ, ಎಲ್ಲರಲ್ಲೂ ಇರುವ ಚಿಚ್ಛಕ್ತಿಯೇ ತ್ರಿಪುರಾ ಪರಮೇಶ್ವರೀ ಎಂದೂ, ಎಲ್ಲ ವಸ್ತುವೂ ಚಿಚ್ಛಕ್ತಿಯ ಸತ್ವಗುಣದಿಂದಲೇ ಉಂಟಾಗುತ್ತದೆಂದೂ, ವೇದಾಗಮಗಳ ತಾತ್ಪರ್ಯಸಾಮರಸ್ಯವನ್ನು ತಿಳಿಯ ಹೇಳಿದನು; ಅಗಸ್ತ್ಯನ ಸಂಚಿತವಾಸನೆಗಳಿಂದ ಶ್ರೀಪುರದರ್ಶನದಲ್ಲಿ ಅಡ್ಡಿಯಾಗಿತ್ತೆಂದೂ, ಪತ್ನಿಯಾದ ಲೋಪಾಮುದ್ರಾ ದೇವಿಯಿಂದ ದೀಕ್ಷೆಯನ್ನು ಪಡೆದು ಸಿದ್ಧನಾದನೆಂದೂ ವಿವರಿಸಿದನು; ಸಂಸ್ಕೃತ ಸಾಹಿತ್ಯದಲ್ಲಿ ತಂತ್ರಶಾಸ್ತ್ರ

ಅಧ್ಯಾಯ	ವಿಷಯ	ಪುಟಸಂಖ್ಯೆ
	ಗ್ರಂಥಗಳ ಸ್ಥಾನ, ವೇದಾಂತದರ್ಶನದೊಡನೆ ತಂತ್ರಶಾಸ್ತ್ರಗಳ ಸಿದ್ಧಾಂತ ಸಾಮರಸ್ಯ, ಉಪಾಸನೆಯು ಜ್ಞಾನಸಾಧನವು, ಆಚಾರ ವಿಶೇಷಗಳ ಔಚಿತ್ಯನಿರೂಪಣೆಗಳು ;	೩೪೩—೩೬೫
೮೦.	ಜಾಗ್ರತೆಯಾಗಿ ಫಲವನ್ನುಂಟುಮಾಡುವ ತ್ರಿಪುರೋಪಾಸನವಿಧಾನವನ್ನು ಪರಶುರಾಮನು ಕೇಳಲು, ದತ್ತಗುರುವು ತ್ರಿಪುರಾಮೂರ್ತಿಪೂಜಾ, ಉತ್ಸವ, ಶ್ರೀವಿದ್ಯಾಮಂತ್ರ, ಜಪ, ಧ್ಯಾನ, ಶ್ರೀಚಕ್ರಸ್ಥಾಪನ,ದಾನ ಪೂಜಾದಿ ಕರ್ಮಗಳನ್ನು ವಿವರಿಸಿದನು; ಕಡೆಯಲ್ಲಿ ತ್ರಿಪುರಾಮಾಹಾತ್ಮ್ಯಶ್ರವಣವು ಎಲ್ಲಕ್ಕೂ ಮೂಲವಾದ ಮೊದಲ ಕಾರಣವೆಂದು ಹೇಳಿದುದು ; ತ್ರಿಪುರಾನಾಮೋಲ್ಲೇಖ ಮಂಗಳದಿಂದ ಈ ಗ್ರಂಥವು ಮುಗಿದಿರುವುದು ;	೩೬೬—೩೯೬

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಏಕಷಷ್ಟಿತಮೋಽಧ್ಯಾಯಃ ||

ಅರವತ್ತೊಂದನೆಯ ಅಧ್ಯಾಯವು

ಇತ್ಯುಕ್ತ್ವಾ ಪಾರ್ಶ್ವಗಂ ಸೂತಂ ದೀರ್ಘಗ್ರೀವಂ ಮಹಾಸುರಃ ।
ಬಭಾಷೇ ಕ್ರೋಧತಾಮ್ರಾಕ್ಷೋ ರಥಃ ಸಂಯುಜ್ಯತಾಮಿತಿ ॥೧॥

|| ಶ್ರೀ ಗಣೇಶಶಾರದಾಗುರುಭ್ಯೋನಮಃ ||

ಶುದ್ಧಂ ಸತ್ ಬ್ರಹ್ಮ ಮಾಯಾತ್ರಿಗುಣವಿಭವತೋ ನಾಮರೂಪೈರ್ವಿಭಾತಿ
ಶಕ್ತಿ ಸ್ಸಾಽಽದ್ಯಾಽಪ್ಯನಾದಿಃ ಸ್ಫುರತಿ ಸಕಲಗಾ ಕಾರ್ಯನಿರ್ವಾಹಹೇತೋಃ ।
ಬ್ರಹ್ಮಾ ವಿಷ್ಣುರ್ಮಹೇಶೋ ಭವತಿ ನಿಯಮಿತಃ ಸರ್ಜನೇ ರಕ್ಷಣೇಽಂತೇ
ವಾಣೀ ಲಕ್ಷ್ಮೀ ರುಮಾ ಸಾ ಸಹಕೃತಿಕುಶಲಾ ಮೂಲಶಕ್ತ್ಯಂಶರೂಪಾ ||

ಯಾವ ದೋಷದ ಸಂಪರ್ಕವೂ ಇಲ್ಲದಿರುವ, ಭೂತ ಭವಿಷ್ಯತ್ ವರ್ತಮಾನವೆಂಬ ಮೂರು ಕಾಲಗಳಲ್ಲೂ ಅಬಾಧ್ಯವಾಗಿರುವ, ಪರಬ್ರಹ್ಮಚೈತನ್ಯತತ್ತ್ವವು ಮಾಯೆಯ ಸತ್ತ್ವ ರಜಸ್ ತಮಸ್ ಎಂಬ ಮೂರು ಗುಣಗಳ ವಿಷಮಪರಿಣಾಮಗಳ ಮಹಿಮೆಯಿಂದ ನಾನಾಬಗೆಯಾಗಿ ತೋರುತ್ತಿರುವ ಹೆಸರುಗಳು ಆಕಾರಗಳು ಇವುಗಳುಳ್ಳಂತೆ ಕಾಣಿಸುತ್ತಿರುತ್ತದೆ. ಈ ತೋರಿಕೆಯೇ ಮಾಯಾಶಕ್ತಿಯು. ಈ ಪರಾಶಕ್ತಿಯು ಆಪೇಕ್ಷಿಕಗಳಾಗಿರುವ ಎಲ್ಲ ಸೃಷ್ಟಿಗಳ ಮೊಟ್ಟಮೊದಲಿನಲ್ಲಿ ಆವಿರ್ಭವಿಸುತ್ತಿರುವುದಾದರೂ, ಈ ಶಕ್ತಿಗೇ ಮೊಟ್ಟಮೊದಲು ಎನ್ನುವುದಿಲ್ಲವು. ಅದಕ್ಕೂ ಹಿಂದಿನ ಕಾರಣವಾದ ಶಕ್ತಿಯನ್ನು ಒಪ್ಪಿದರೆ ಅನವಸ್ಥಾ ದೋಷದಲ್ಲಿ ಪರ್ಯವಸಾನವಾಗಬೇಕಾಗುತ್ತದೆ. ಆದುದರಿಂದ ಅನಾದಿಯಾಗಿರುವ ಈ ಆದಿಶಕ್ತಿಯು ಈ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳೆಂಬ ಮಹಾಕಾರ್ಯಗಳ ನಿರ್ವಹಣೆಗಾಗಿ ಎಲ್ಲದರಲ್ಲೂ ಕಾಣಬರುತ್ತಿರುತ್ತದೆ. ಈ ಮಾಯಾಶಕ್ತಿಯ ಮೂರು ಗುಣಗಳಲ್ಲಿ ರಜೋಗುಣಪ್ರಧಾನವಾಗಿರುವ ಉಪಾಧಿಯ ಸಂಬಂಧದಿಂದ ಚತುರ್ಮುಖ ಬ್ರಹ್ಮನೂ, ಸತ್ತ್ವಗುಣಪ್ರಧಾನವಾಗಿರುವ ಉಪಾಧಿಯಲ್ಲಿ ಅಭಿಮಾನ ಸಂಬಂಧದಿಂದ ವಿಷ್ಣುವೂ, ಹಾಗೆಯೇ ತಮೋಗುಣಪ್ರಧಾನವಾದ ಈ ಉಪಾಧಿಯಲ್ಲಿ ಅಭಿಮಾನಿಕವಾದ ಸಂಬಂಧದಿಂದ ಮಹೇಶ್ವರನೂ ಉಂಟಾಗಿರುತ್ತಾರೆ. ಅವರು ಕ್ರಮವಾಗಿ ಈ

ಅಥ ಸೂತೋ ನಿಮೇಷೇಣ ಸನ್ನದ್ಧಂ ಸ್ಯಂದನೋತ್ತಮಂ ।
ನಿ(ನ್ಯ)ವೇದಯದ್ದೈತ್ಯನಾಥೇ ಪ್ರಣಮ್ಯಾತಿವಿನೀತವತ್ ॥೨॥

ಆರುರೋಹ ರಥ(ಂ) ಶ್ರೇಷ್ಠಂ ಭಂಡದೈತ್ಯಃ ಪ್ರತಾಪನಃ ।
ಗೃಹೀತ್ವಾ ಸಶರಂ ಚಾಪಂ ಪ್ರಚಚಾಲಾತಿರೋಷತಃ ॥೩॥

ದೃಷ್ಟ್ವಾಽಶ್ರುತ್ವಾ ಚ ದೈತ್ಯೇಶಂ ವ್ರಜಂತಂ ಯುದ್ಧಕಾರಣಾತ್ ।
ದೈತ್ಯಾ ವಿನಿರ್ಯಯುಃ ಶೀಘ್ರಂ ಸನ್ನದ್ಧಾಃ ಕ್ರೋಧಮೂರ್ಛಿತಾಃ ॥೪॥

ಜಗತ್ತಿನ ಸೃಷ್ಟಿ, ರಕ್ಷಣೆ, ಉಪಸಂಹಾರಗಳೆಂಬ ಮಹಾಕಾರ್ಯಗಳನ್ನು ನೆರವೇರಿಸುತ್ತಿರುತ್ತಾರೆ. ಇವರಲ್ಲಿರುವ ಈ ಕಾರ್ಯನಿರ್ವಹಣ ಸಾಮರ್ಥ್ಯಗಳೂ ಆ ಆದಿಶಕ್ತಿಯ ಅಥವಾ ಪರಾಶಕ್ತಿಯ ಅಂಶಗಳೇ ಆಗಿರುತ್ತವೆ. ಇವರಂತೆಯೇ ಸರಸ್ವತೀ, ಲಕ್ಷ್ಮೀ, ಉಮಾ ಎಂಬ ಶಕ್ತಿದೇವಿಯರೂ ಆ ಪರಾಶಕ್ತಿಯ ಅಂಶರೂಪರೇ ಆಗಿರುತ್ತಾ, ಈ ಬ್ರಹ್ಮಾ ವಿಷ್ಣು ರುದ್ರರೆಂಬ ತ್ರಿಮೂರ್ತಿಗಳಿಗೆ ಸಹಧರ್ಮಿಣಿಯರಾಗಿರುತ್ತಾ, ಅವರು ನೆರವೇರಿಸಬೇಕಾಗಿರುವ ಪ್ರಪಂಚದ ಉತ್ಪಾದನ, ರಕ್ಷಣ, ಉಪಸಂಹರಣಗಳೆಂಬ ಕಾರ್ಯನಿರ್ವಾಹರೂಪವಾದ ವ್ಯವಹಾರದಲ್ಲಿರಬೇಕಾದ ಶಕ್ತಿ ಅಥವಾ ಸಾಮರ್ಥ್ಯರೂಪರಾಗಿರುತ್ತಾ ಸಹಕರಿಸುತ್ತಾರೆ. ಇಂತಹ ಎಲ್ಲ ಕಾರ್ಯನಿರ್ವಾಹಕ್ಕೂ ಮೂಲಕಾರಣವಾಗಿರುವ ಪರಾಶಕ್ತಿಯೇ ತ್ರಿಪುರಾದೇವಿಯು. ಎಲ್ಲಕ್ಕೂ ಮೂಲಕಾರಣವಾಗಿ ತಾಯಿಯಂತಿರುವ ಈ ದೇವಿಯು ಎಲ್ಲರಿಗೂ ತಕ್ಕ ಶಕ್ತಿಗಳನ್ನು ಅನುಗ್ರಹಿಸುತ್ತಿರಲಿ. ಈ ತ್ರಿಪುರಾದೇವೀ ತತ್ವದ ಸ್ವರೂಪವನ್ನು ಮೊದಲನೆಯ ಸಂಪುಟದಲ್ಲಿ ಪುಟ ೧–೧೨ ಗಳಲ್ಲಿ ವಿವರಿಸಿರುತ್ತೇನೆ.

ಹೀಗೆ ಹೇಳಿ ಭಂಡಮಹಾರಾಕ್ಷಸನು ತನ್ನ ಪಕ್ಕದಲ್ಲಿದ್ದ ದೀರ್ಘಗ್ರೀವನೆಂಬ ಸಾರಥಿಯನ್ನು ಕರೆದು ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ "ರಥವನ್ನು ಸಿದ್ಧಗೊಳಿಸು." ಎಂದು ಹೇಳಿದನು. ॥೧॥

ಅನಂತರ ಸಾರಥಿಯು ನಿಮಿಷಮಾತ್ರದಲ್ಲಿಯೇ ಶ್ರೇಷ್ಠರಥವನ್ನು ಸಿದ್ಧಗೊಳಿಸಿ, ರಾಕ್ಷಸರಾಜನ ಹತ್ತಿರಕ್ಕೆ ಬಂದು ಬಹಳ ವಿನಯದಿಂದ ಆತನಿಗೆ ನಮಸ್ಕರಿಸಿ ಈ ವಿಷಯವನ್ನು ವಿಜ್ಞಾಪಿಸಿಕೊಂಡನು. ॥೨॥

ಪರಾಕ್ರಮಶಾಲಿಯಾದ ಭಂಡರಾಕ್ಷಸನು ಆ ಶ್ರೇಷ್ಠರಥವನ್ನು ಬಾಣಬಿಲ್ಲುಗಳಿಂದ ಸಮೇತನಾಗಿ ಬಹಳ ಕೋಪದಿಂದ ಹತ್ತಿ ಹೊರಟನು. ॥೩॥

ರಾಕ್ಷಸನು ಯುದ್ಧಕ್ಕಾಗಿ ಹೊರಟಿರುವುದನ್ನು ಕೇಳಿ, ನೋಡಿ ರಾಕ್ಷಸರೂ ಕೂಡ ಕೋಪಾವೇಶದಿಂದ ಕೂಡಿ ಶೀಘ್ರವಾಗಿ ಸಿದ್ಧರಾಗಿ ಅವನನ್ನು ಹಿಂಬಾಲಿಸಿದರು. ॥೪॥

ಪುರತಃ ಪಾರ್ಶ್ವಯೋಃ ಪೃಷ್ಠೇ ಸರ್ವತಃ ಪರಿವಾರ್ಯ ತಾಂ ।
ನಿರ್ಯಯುಃ ದೈತ್ಯಸುಭಟಾಃ ಸಂಘಶೋ ಧೃತಹೇತಯಃ ॥೫॥

ಭಂಡದೈತ್ಯಸುತಾಃ ಸರ್ವೇ ಭಂಡತುಲ್ಯಪರಾಕ್ರಮಾಃ ।
ಕುಟಿಲಾಕ್ಷೋಽಗ್ರಜಸ್ತೇಷಾಮಮೇಯಬಲವಿಕ್ರಮಃ ॥೬॥

ಸ್ಯಂದನಸ್ಥಾಃ ಸುಸನ್ನದ್ಧಾಃ ಸಮರೇಷ್ವನಿವರ್ತಿನಃ ।
ಅಕ್ಷೌಹಿಣೀಶತಯುತಾಃ ಭಂಡದೈತ್ಯಾಗ್ರತೋ ಯಯುಃ ॥೭॥

ಅಹಂಪೂರ್ವಿಕಯಾ ಯುದ್ಧೇ ಯೇ ಸಂಸ್ಪರ್ಧಂತಿ ನಿತ್ಯಶಃ ।
ಪಾರ್ಶ್ವಯೋರ್ದೈತ್ಯರಾಜಸ್ಯ ವಿಷಂಗಶ್ಚ ವಿಶುಕ್ರಕಃ ॥೮॥

ಜೇಲತುರ್ಭ್ರಾತರೌ ತಸ್ಯ ವಿಷ್ಣುತುಲ್ಯ ಪರಾಕ್ರಮೌ ।
ರಥಸ್ಥಿತೌ ಮಹಾಚಾಪೌ ಕ್ರೋಧಾರುಣಿತ ಲೋಚನೌ ॥೯॥

ದೈತ್ಯಶ್ರೇಷ್ಠ ಸೈನಿಕರು ಗುಂಪುಗುಂಪಾಗಿ ಕತ್ತಿಗಳನ್ನು ಹಿಡಿದುಕೊಂಡು ರಾಕ್ಷಸರಾಜನ ಪಕ್ಕ, ಮುಂಭಾಗ, ಸುತ್ತ ಹೀಗೆ ಎಲ್ಲಾ ಕಡೆಯಲ್ಲಿಯೂ ಅನುಸರಿಸಿ ಹೊರಟರು. ||೫||

ಭಂಡರಾಕ್ಷಸನಿಗೆ ಸಮಾನವಾದ ಪರಾಕ್ರಮವುಳ್ಳ ಭಂಡನ ಎಲ್ಲ ಮಕ್ಕಳೂ ಅವರಿಗೆಲ್ಲರಿಗೂ ಹಿರಿಯಣ್ಣನಾದ, ಅಸಾಧಾರಣ ಪರಾಕ್ರಮವುಳ್ಳ ಕುಟಿಲಾಕ್ಷನೂ ಕೂಡ ಜೊತೆಯಲ್ಲಿ ಹೊರಟರು. ||೬||

ಈ ಕುಮಾರರೆಲ್ಲರೂ ರಥಗಳಲ್ಲಿ ಕುಳಿತು, ಯುದ್ಧಗಳಲ್ಲಿ ಎಂದಿಗೂ ಹಿಂತಿರುಗದ ಪರಾಕ್ರಮವುಳ್ಳವರಾಗಿ, ಯುದ್ಧಸನ್ನದ್ಧರಾಗಿ ಹೊರಟರು. ಇವರೆಲ್ಲರೂ ನೂರು ಅಕ್ಷೌಹಿಣೀ ಸೈನ್ಯಗಳೊಡನೆ ಭಂಡರಾಕ್ಷಸನ ಮುಂಭಾಗದಲ್ಲಿ ಹೋಗುತ್ತಿದ್ದರು. ||೭||

ಯಾವಾಗಲೂ ನಾಮುಂದು, ತಾಮುಂದೆಂದು ಯುದ್ಧದಲ್ಲಿ ಹೋರಾಡುವ ವಿಷಂಗ, ವಿಶುಕ್ರಕ ಎಂಬಿಬ್ಬರು ರಾಕ್ಷಸರಾಜನ ತಮ್ಮಂದಿರಾದ ರಾಕ್ಷಸರು ಅವನ ಪಕ್ಕದಲ್ಲಿದ್ದರು. ||೮||

ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳ, ದೊಡ್ಡ ಬಿಲ್ಲುಗಳನ್ನು ಹಿಡಿದಿರುವ, ಕೋಪದಿಂದ ಕೆಂಪಾದ ಕಣ್ಣುಗಳುಳ್ಳ, ಅವನ ತಮ್ಮಂದಿರಾದ ಆ ರಾಕ್ಷಸರಿಬ್ಬರೂ ರಥದ ಮೇಲೆ ಕುಳಿತು ಹೊರಟರು. ||೯||

ಗ್ರಸಂತಾವಿವ ಸೈನ್ಯಾನಿ ಪರೇಷಾಂ ಯಯತುರ್ದ್ರುತಂ ।
ಪ್ರತ್ಯೇಕಮಕ್ಷೌಹಿಣೀನಾಂ ಶತೇನ ಪರಿವಾರಿತೌ ॥೧೦॥

ಉಗ್ರಕರ್ಮಮುಖಾಸ್ತಸ್ಯ ಮಂತ್ರಿಣೋ ಭೀಮ ವಿಕ್ರಮಾಃ ।
ಅನುಜಗ್ಮುರ್ದೈತ್ಯಪತಿಂ ಶತಾಽಕ್ಷೌಹಿಣಿಸಂಯುತಾಃ ॥೧೧॥

ಏವಂ ಪ್ರಚಲಿತೇ ದೈತ್ಯನಾಥೇ ಸಮರಕಾರಣಾತ್ ।
ರರಾಜ ರಾಜಪಥ್ಯಾತು ಪ್ರಾವೃಟ್ಕಾಲ ನದೀ ಯಥಾ ॥೧೨॥

ಕೂಲಂಕಷಾ ದೈತ್ಯಜಲಾ ರಥಾಽಽವರ್ತಸಮಾಕುಲಾ ।
ಕುರಂಗಭಂಗಾ ದ್ವಿರದ ಗ್ರಾಹಾ ಖೇಟಕ ಕಚ್ಛಪೀ ॥೧೩॥

ಉನ್ಮಿಷತ್ಫೇನ ಪಿಂಡಾಽಽಢ್ಯಾ ಪತಾಕಾಲಹರೀಯುತಾ ।
ಖಡ್ಗದೀರ್ಘ ಮಹಾಸರ್ಪ ತೂಣೀಮತ್ಸ್ಯ ವಿಚಿತ್ರಿತಾ ॥೧೪॥

ಅವರಿಬ್ಬರೂ ಶತ್ರುಗಳ ಸೈನ್ಯವನ್ನು ನುಂಗುವವರೋ ಎಂಬಂತೆ ಪ್ರತ್ಯೇಕವಾಗಿ ನೂರು ಅಕ್ಷೌಹಿಣೀ ಸೈನ್ಯದ ಪರಿವಾರದಿಂದ ಕೂಡಿದವರಾಗಿ ಹೋಗುತ್ತಿದ್ದರು. ॥೧೦॥

ಆತನ ಮಂತ್ರಿಗಳಾದ, ಭಯಂಕರವಾದ ಪರಾಕ್ರಮವುಳ್ಳ, ಉಗ್ರಕರ್ಮ ಮೊದಲಾದ ರಾಕ್ಷಸರು ನೂರು ಅಕ್ಷೌಹಿಣೀ ಸೈನ್ಯದಿಂದ ಕೂಡಿದವರಾಗಿ ರಾಕ್ಷಸರಾಜನಾದ ಭಂಡನನ್ನು ಹಿಂಬಾಲಿಸಿದರು. ॥೧೧॥

ಹೀಗೆ ರಾಕ್ಷಸರಾಜನಾದ ಭಂಡನು ಯುದ್ಧಕ್ಕಾಗಿ ಹೊರಡಲು ರಾಜಮಾರ್ಗವು ಮಳೆಗಾಲದ ನದಿಯಂತೆ ತುಂಬಿ ಪ್ರಕಾಶಿಸಿತು. ॥೧೨॥

ಈ ನದಿಯು ದಡವನ್ನು ತೀಡುತ್ತಾ ಹರಿಯುವುದಾಗಿಯೂ, ರಾಕ್ಷಸರೆಂಬ ನೀರುಳ್ಳದ್ದಾಗಿಯೂ, ಕುದುರೆಗಳೆಂಬ ಅಲೆಗಳುಳ್ಳದ್ದಾಗಿಯೂ, ರಥಗಳೆಂಬ ಸುಳಿಗಳಿಂದ ಕೂಡಿದ್ದಾಗಿಯೂ, ಆನೆಗಳೆಂಬ ಮೊಸಳೆಗಳುಳ್ಳದ್ದಾಗಿಯೂ, ಖೇಟಕ ಎಂಬ ಆಯುಧಗಳೆಂಬ ಆಮೆಗಳುಳ್ಳದ್ದಾಗಿಯೂ ಇತ್ತು. ॥೧೩॥

ಹೆಚ್ಚಾಗಿ ಬರುತ್ತಿರುವ ನೊರೆಗಳ ಉಂಡೆಗಳಿಂದ ತುಂಬಿದ್ದಾಗಿಯೂ, ಬಾವುಟಗಳೆಂಬ ಪ್ರವಾಹಗಳಿಂದ ಕೂಡಿದ್ದಾಗಿಯೂ, ಕತ್ತಿಗಳೆಂಬ ಉದ್ದವಾದ ಸರ್ಪಗಳಿಂದ

ದಾನವಾಽಸ್ಯಾಂಭೋಜತತಿಸ್ತನ್ನೇತ್ರ ಶಫರೀಗಣಾ ।
ವಿಚಿತ್ರಚ್ಛತ್ರಹಂಸಾಽದಿ ಪತತ್ರಿ ತತಿಮಾಲಿನೀ ॥೧೫॥

ಉಲ್ಲಸತ್ತುರ(ಂ)ಗೋತ್ತುಂಗ ಶಿಂಶುಮಾರ ಕುಲಾಽವಿಲಾ ।
ರಥಘೋಷಮಹಾಘೋಷಾ ವಾಹಿನೀಜಲವಾಹಿನೀ ॥೧೬॥

ನಿರ್ಗಮತ್ತತ್ಪುರದ್ವಾರಾನ್ಮಹತೋ ರತ್ನಗೋಪುರಾತ್ ।
ಕುಲ್ಯಾಮುಖಾಜ್ಜಲಂ ಹ್ಯಾಶು ಕೇದಾರೇ ಪ್ರಸೃತಂ ಯಥಾ ॥೧೭॥

ಪುರದ್ವಾರಾದ್ವಾಹಿನೀ ಸಾ ಪ್ರಸೃತಾಽಭೂದ್ಬಹಿಃ ಕ್ಷಣಾತ್ ।
ತದಂತರೇ ತು ವಿಜಯಃ ಪ್ರಾಪ್ಯ ದೈತ್ಯೇಶ್ವರಂ ದ್ರುತಂ ॥೧೮॥

ಕೂಡಿದ್ದಾಗಿಯೂ, ಬತ್ತಳಿಕೆಗಳೆಂಬ ಮೀನುಗಳಿಂದ ವಿಚಿತ್ರವಾಗಿಯೂ ಈ ನದಿಯು ಪ್ರಕಾಶಿಸುತ್ತಿತ್ತು. ||೧೪||

ರಾಕ್ಷಸರ ಮುಖವೆಂಬ ಕಮಲಗಳ ಸಮೂಹವುಳ್ಳದ್ದಾಗಿಯೂ, ಅವರ ಕಣ್ಣುಗಳೆಂಬ ಮೀನುಗಳಿಂದ ಕೂಡಿದ್ದಾಗಿಯೂ, ವಿಚಿತ್ರವಾದ ಛತ್ರಿಗಳೆಂಬ ಹಂಸವೇ ಮೊದಲಾದ ಪಕ್ಷಿಗಳ ಸಾಲುಗಳುಳ್ಳದ್ದಾಗಿಯೂ ಈ ನದಿಯು ಶೋಭಿಸುತ್ತಿತ್ತು. ||೧೫||

ನೆಗೆಯುತ್ತಿರುವ ಕುದುರೆಗಳೆಂಬ ದೊಡ್ಡದಾದ ನೀರ್ಗುದುರೆಗಳ ಸಮೂಹಗಳಿಂದ ಕೂಡಿದ್ದಾಗಿಯೂ ಸೈನ್ಯವೆಂಬ ದೊಡ್ಡ ಪ್ರವಾಹಗಳಿಂದ ಕೂಡಿದ್ದಾಗಿಯೂ, ರಥದ ಶಬ್ದಗಳೆಂಬ ಮೊರೆತದ ಶಬ್ದಗಳುಳ್ಳದ್ದಾಗಿಯೂ ಈ ನದಿಯು ಶೋಭಿಸುತ್ತಿತ್ತು. ||೧೬||

ಆ ಪಟ್ಟಣದ ಬಾಗಿಲಿನ ಮೇಲ್ಭಾಗದಲ್ಲಿ ಹೊರಗೆ ಕಾಣುವ ರತ್ನಮಯವಾದ ಬಾಗಿಲಿನಿಂದ, ಕಾಲುವೆಯಿಂದ ಶೀಘ್ರವಾಗಿ ಗದ್ದೆಗೆ ಹರಿಯುತ್ತಿರುವ ನೀರಿನೋಪಾದಿಯಲ್ಲಿ, ಆ ಸೈನ್ಯವು ಚಲಿಸುತ್ತಿತ್ತು. ||೧೭||

ಪಟ್ಟಣದ ಬಾಗಿಲಿನಿಂದ ಹೊರಗೆ ಪ್ರವಹಿಸುತ್ತಿರುವ ಆ ಸೈನ್ಯವು ಕ್ಷಣಕಾಲದಲ್ಲಿಯೇ ಹೊರಗೆ ಕಾಣಿಸಿಕೊಂಡಿತು. ಈ ಮಧ್ಯದಲ್ಲಿ ವಿಜಯನು ರಾಕ್ಷಸರಾಜನ ಬಳಿಗೆ ಶೀಘ್ರವಾಗಿ ಬಂದನು. ||೧೮||

ಮಂತ್ರೀ ಪ್ರಣಮ್ಯ ವಿನ್ಯಸ್ಯ ಮೂರ್ಧ್ನ್ಯಂಜಲಿಪುಟಂ ಸ್ಥಿತಃ ।
ಪ್ರಾಪ್ಯಾಜ್ಞಾಮುಪದತ್ತಂ ಸ ವಚಸ್ತತ್ಕಾಲಸಂಮತಂ ॥೧೯॥

ದೈತ್ಯೇಶ್ವರ ಮಹಾರಾಜ ಕೀರ್ತಿಸ್ತೇ ಸರ್ವತಸ್ತಥಾ ।
ಪ್ರತಾಪತಪನಶ್ಚೋರ್ಧ್ವೇ ಬ್ರಹ್ಮಾಂಡಾನಿ(ನಾಂ) ತಪತ್ಯಸೌ ॥೨೦॥

ಬಲವತ್ತರ ಎಷೋಽತ್ರ ಹರಿರೇಕೋ ವಿಭಾವಿತಃ ।
ಸೋಽಪಿ ತ್ವತ್ಸಂಮುಖಂ ಪ್ರಾಪ್ಯ ಯುದ್ಧೇ ಭೂಯಃ ಪರಾಜಿತಃ ॥೨೧॥

ತತ್ತ್ವಾಂ ಯುದ್ಧೇ ಜಯೇತ್ಕಶ್ಚಿದಿತಿ ಮೋಘೋ ಹಿ ನಿಶ್ಚಯಃ ।
ತಥಾಽಪಿ ಮಂತ್ರಿಣಾ ಕಾಲೇ ಚಾಽರ್ಥಶಾಸ್ತ್ರಪ್ರಮಾಣತಃ ॥೨೨॥

ವಿಮೃಶ್ಯ ರಾಜ್ಞೇ ವಕ್ತವ್ಯಂ ಹಿತಮಾಗಮಸಂಮಿತಂ ।
ಕಾಲೇ ಯುಕ್ತಮನುಕ್ತ್ವಾತು ನ ಸುಮಂತ್ರಿತ್ವಮರ್ಹತಿ ॥೨೩॥

ಮಂತ್ರಿಯು ಬಂದು ಆತನಿಗೆ ನಮಸ್ಕರಿಸಿ ಶಿರಸ್ಸಿನಲ್ಲಿ ಕೈಜೋಡಿಸಿಕೊಂಡು ನಿಂತನು. ಆತನ ಅಪ್ಪಣೆಯನ್ನು ಪಡೆದು ಆ ಕಾಲಕ್ಕೆ ಯೋಗ್ಯವಾದ ಮಾತನ್ನು ಮಂತ್ರಿಯು ಈರೀತಿಯಲ್ಲಿ ಆಡಿದನು. ||೧೯||

ಓ ರಾಕ್ಷಸರಾಜನೇ, ನಿಮ್ಮ ಕೀರ್ತಿಯು ಎಲ್ಲಾ ಕಡೆಯಲ್ಲಿಯೂ ಹರಡಿದೆ. ನಿಮ್ಮ ತೇಜಸ್ಸೆಂಬ ಎಲ್ಲವನ್ನೂ ಸುಡುವ ಸೂರ್ಯನು ಮೇಲ್ಭಾಗದಲ್ಲಿದ್ದು ಎಲ್ಲಾ ಬ್ರಹ್ಮಾಂಡಗಳನ್ನೂ ಸುಡುತ್ತಾನೆ. ||೨೦||

ಸೂರ್ಯನು ತನ್ನ ಪರಾಕ್ರಮದಿಂದ ಅತ್ಯಂತ ಬಲಿಷ್ಠನಾದವನೆಂದು ಹೆಸರು ಪಡೆದಿದ್ದಾನೆ. ಅವನು ಕೂಡ ನಿಮ್ಮ ಎದುರಿಗೆ ಬಂದು ಯುದ್ಧದಲ್ಲಿ ಅನೇಕಾವೃತ್ತಿ ಸೋತನು. ||೨೧||

ಆದ್ದರಿಂದ ಯುದ್ಧದಲ್ಲಿ ನಿಮ್ಮನ್ನು ಯಾರು ತಾನೆ ಜಯಿಸಬಲ್ಲರು ? ಹೀಗಿರುವಲ್ಲಿ ಶತ್ರುಗಳ ನಿಶ್ಚಯವು ವಿಫಲವಾದಂತೆಯೇ ಸರಿ. ಆದಾಗ್ಯೂ ಮಂತ್ರಿಯಾದವನು ಸಕಾಲಗಳಲ್ಲಿ ರಾಜಕೀಯಶಾಸ್ತ್ರದ ಆಧಾರದ ಮೇಲೆ ವಿಷಯಗಳನ್ನು ರಾಜನಿಗೆ ಬಿನ್ನೈಸುವುದು ಕರ್ತವ್ಯ. ||೨೨||

ಆದ್ದರಿಂದ ಮಂತ್ರಿಯು ಅರ್ಥಶಾಸ್ತ್ರಗಳನ್ನು ವಿಮರ್ಶೆಮಾಡಿ ಶಾಸ್ತ್ರಕ್ಕೆ ಸಮ್ಮತವಾದ ಅನುಕೂಲಮಾರ್ಗವನ್ನು ರಾಜನಿಗೆ ಬಿನ್ನೈಸಬೇಕು. ಹೀಗೆ

ಚತ್ವಾರ ಏವ ಸಂಪ್ರೋಕ್ತಾ ಉಪಾಯಾ ದಂಡಶಾಸನೇ ।
ತತ್ರೈಕೈಕೋಽಪಿ ಸ್ವೇ ಕಾಲೇ ಸಂಮತೇ ಬಲವತ್ತರಃ ॥೨೪॥

ಅನ್ಯಕಾಲೇಽನ್ಯಮಾತಿಷ್ಠನ್ಮೂಢ ದುರ್ಮಂತ್ರಿಮಂತ್ರಿತಃ ।
ನಶ್ಯೇದಸದೃಶಂ ಭುಕ್ತ್ವಾ ವ್ಯಾಮಯೀವಾಽಗದಂ ನೃಪಃ ॥೨೫॥

ತತ್ರಾಽಧ್ಯವಸಿತಂ ಪ್ರಾಜ್ಞೈರ್ದೂತಚಾರದೃಶಾಽಖಿಲಮ್ ।
ದೃಷ್ಟ್ವಾ ಯುದ್ಧಂ ಪ್ರಕುರ್ವೀತ ತೇನ ಶ್ರೇಯಃ ಸಮಾಪ್ನುಯಾತ್ ॥೨೬॥

ತತ್ಸಮ್ಮತೌ ದೂತಚಾರೌ ಪರೇಷು ಪ್ರೇಷಯ ದ್ರುತಮ್ ।
ತಾವತ್ಸೇನಾಽಪಿ ಸನ್ನದ್ಧಾ ಭವಿಷ್ಯತ್ಯವಿಶಂಕಿತಾ ॥೨೭॥

ಸಕಾಲದಲ್ಲಿ ಈ ವಿಷಯಗಳನ್ನು ತಿಳಿಸದೇ ಹೋದರೆ ಅವನು ಶ್ರೇಷ್ಠಮಂತ್ರಿ ಎನಿಸಿಕೊಳ್ಳಲಾರನು. ॥೨೩॥

ರಾಜನೀತಿಯಲ್ಲಿ ನಾಲ್ಕು ಉಪಾಯಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಪ್ರತಿಯೊಂದೂ ಆಯಾಯ ಕಾಲಗಳಲ್ಲಿ ಅತ್ಯಂತ ಉಪಯೋಗಕರಗಳಾಗಿರುತ್ತವೆ. ॥೨೪॥

ದುರ್ಮಂತ್ರಿಯ ಮಾತನ್ನು ಕೇಳಿ ಒಂದು ಕಾಲದಲ್ಲಿ ಉಪಯೋಗಿಸುವ ಉಪಾಯಗಳನ್ನು ಮತ್ತೊಂದು ಕಾಲದಲ್ಲಿ ಉಪಯೋಗಿಸಿದರೆ, ಅಯೋಗ್ಯವಾದ ಪದಾರ್ಥಗಳನ್ನು ತಿಂದ ರೋಗಿಯಂತೆ, ದೊರೆಯು ನಾಶಹೊಂದಬೇಕಾಗುವುದು. ॥೨೫॥

ದೂತರು ಮತ್ತು ಗೂಢಚಾರರು ಇವರೆಲ್ಲರ ಮೂಲಕ ವಿಷಯವನ್ನು ಅರಿತು ದೊರೆಯಾದವನು ಪ್ರಾಜ್ಞರಾದ ಮಂತ್ರಿಗಳೊಡನೆ ಎಲ್ಲವನ್ನೂ ವಿಮರ್ಶಿಸಿ ಆನಂತರ ಯುದ್ಧಕ್ಕೆ ತೊಡಗಬೇಕು. ಅದರಿಂದ ಅವನು ಶ್ರೇಯಸ್ಸನ್ನು ಹೊಂದುವನು. ॥೨೬॥

ಆದ್ದರಿಂದ ಇಷ್ಟರಾದ ದೂತ ಮತ್ತು ಗೂಢಚಾರರನ್ನು ಶತ್ರುಗಳ ಹತ್ತಿರಕ್ಕೆ ಶೀಘ್ರವಾಗಿ ಕಳುಹಿಸಿ. ಅಷ್ಟುಹೊತ್ತಿಗೆ ಸೈನ್ಯವೂ ಸಿದ್ಧವಾಗುವುದರಲ್ಲಿ ಸಂದೇಹವಿಲ್ಲ. ॥೨೭॥

ರಕ್ಷಣಂ ನಗರಸ್ಯಾಽಪಿ ವಿಹಿತಂ ಸ್ಯಾದ್ಯಥಾವಿಧಿ ।
ವಿಜ್ಞಪ್ತಪ್ಯಮಿದಂ ಕಾಲೇ ಮಯಾ ತೇ ಸ್ವಾಮಿನಃ ಪುರಃ ॥೨೮॥

ವಿಜ್ಞಾಪಿತಂ ತದ್ಭವತಾ ಕರ್ತವ್ಯಂ ಕಾಲಸಂಮತಂ ।
ನಿಶಮ್ಯ ಮಂತ್ರಿವಾಕ್ಯಂ ತದ್ಯುಕ್ತಂ ಕುಶಲಸಂಮತಂ ॥೨೯॥

ಸಮಾಧಾನಾಯ ಬಂಧೂನಾಮಭಿಮನ್ಯತ ಮಂತ್ರಣಂ ।
ನಿವೇಶ್ಯ ಸೇನಾಪತಿಭಿಃ ಸೇನಾಂ ತತ್ರ ವಿಭಾಗಶಃ ॥೩೦॥

ಪುರರಕ್ಷಾವಿಧಾನಾಯ ಕುಟಿಲಾಕ್ಷಮವಾಸೃಜತ್ ।
ಅಮಿತ್ರಘ್ನಂ ಮಂತ್ರಿವರ್ಯಂ ಪ್ರಾಹ ಭಂಡಮಹಾಸುರಃ ॥೩೧॥

ಅಷ್ಟುಹೊತ್ತಿಗೆ ಸರಿಯಾದ ಕ್ರಮದಲ್ಲಿ ನಗರರಕ್ಷಣೆಯನ್ನೂ ಮಾಡಲು ಸಾಧ್ಯವಾಗುವುದು. ನಾನು ಸ್ವಾಮಿಯಾದ ತಮ್ಮ ಮುಂದೆ ಈ ವಿಷಯವನ್ನು ಸಕಾಲದಲ್ಲಿ ವಿಜ್ಞಾಪಿಸಿಕೊಳ್ಳಬೇಕೆಂದು ಇದ್ದೆನು. ಅದರಂತೆಯೇ ವಿಜ್ಞಾಪಿಸಿ ಕೊಂಡಿದ್ದೇನೆ. ||೨೮||

ಈ ರೀತಿಯಲ್ಲಿ ಪ್ರಭುವಿಗೆ ಮಾಡಿರುವ ಅರಿಕೆಯನ್ನು ಲಾಲಿಸಿ ಈ ಕಾಲಕ್ಕೆ ಯೋಗ್ಯವಾದ ಕರ್ತವ್ಯವನ್ನು ನಡೆಸುವುದು ಸ್ವಾಮಿಯವರಿಗೆ ಸೇರಿದೆ. ಭಂಡ ರಾಕ್ಷಸನು ಮಂತ್ರಿಯು ಹೇಳಿದ ಆ ಮಾತನ್ನು ಶ್ರೇಷ್ಠವೂ, ನ್ಯಾಯ್ಯವೂ ಆಗಿದೆ ಯೆಂದು ತಿಳಿದನು. ||೨೯||

ಈ ರೀತಿಯಲ್ಲಿ ಎಲ್ಲವನ್ನೂ ವ್ಯವಸ್ಥೆಗೊಳಿಸುವುದಕ್ಕೋಸ್ಕರ ಬಂಧುಗಳನ್ನು ಸಮಾಧಾನಗೊಳಿಸಲು ಅಭಿಪ್ರಾಯಪಟ್ಟನು. ಅಲ್ಲಿ ಸೇನಾಪತಿಗಳೊಂದಿಗೆ ಸೈನ್ಯ ವನ್ನು ವಿಭಾಗಿಸಿ ಇಡಿಸಿದನು. ||೩೦||

ಪಟ್ಟಣದ ರಕ್ಷಣೆಯನ್ನು ವ್ಯವಸ್ಥೆಗೊಳಿಸುವುದಕ್ಕೋಸ್ಕರ ಆತನು ಕುಟಿ ಲಾಕ್ಷನನ್ನು ನಿಯಮಿಸಿದನು. ಅನಂತರ ರಾಕ್ಷಸರಾಜನು ಅಮಿತ್ರಘ್ನ ಎಂಬ ಮಂತ್ರಿಶ್ರೇಷ್ಠನನ್ನು ಕರೆದು ಈ ರೀತಿಯಲ್ಲಿ ಹೇಳಿದನು. ||೩೧||

ಗಚ್ಛಾಽಮಿತ್ರಘ್ನ ಮಚ್ಛಕ್ತ್ಯಾ ತಾಂ ಬ್ರೂಹಿ ಲಲಿತಾಽಭಿಧಾಂ ।
ನಾಽಹಂ ತ್ವಾಂ ಸುಂದರೀಂ ದೇವೀಂ ಸರ್ವಥಾ ಸಂಶ್ರಯೋಚಿತಾಂ ॥೩೨॥

ವಾಂಛಾಮಿ ಯೋದ್ಧುಂ ತತ್ಕಸ್ಮಾನ್ಮಾಂ ಯೋದ್ಧುಂ ತ್ವಮಿಹಾಗತಾ ।
ಯುದ್ಧಶ್ರದ್ಧಾ ತವೇಯಂ ವೈ ಸಮ್ಮತಂ ಮಮ ಸರ್ವಥಾ ॥೩೩॥

ನ ಬಿಭೇಮಿ ಮಹಾಯುದ್ಧೇ ತತ್ತ್ವದ್ಯುದ್ಧೇ ಭಯಂ ಕುತಃ ।
ಕಿಂ ತ್ವ ಹಂ ತ್ವಾಂ ಪ್ರಿಯಾಕಾರಾಂ ದೃಷ್ಟ್ವಾ ದ್ರುತಂ ಮನೋಭವಾಂ ॥೩೪॥

ತತ್ಸುರಾಣಾಂ ಪರಿತ್ಯಜ್ಯ ಪಕ್ಷಂ ಮತ್ಸಂಶ್ರಯಾ ಭವ ।
ಸಾಮ್ನಾ ಯುದ್ಧೇ ನ ವಾಽಪಿ ತ್ವಾಂ ಕರೋಮ್ಯಾತ್ಮ ಸಮಾಶ್ರಯಾಂ ॥೩೫॥

ಎಲೈ ಅಮಿತ್ರಘ್ನನೇ, ನೀನು ಹೋಗಿ ನನ್ನ ಅಪ್ಪಣೆಯಂತೆ ಲಲಿತಾದೇವಿಯನ್ನು ಕುರಿತು ಈ ರೀತಿಯಲ್ಲಿ ಹೇಳು. ಸುಂದರಳಾದ ದೇವಿಯೂ, ನನ್ನ ಹತ್ತಿರ ಆಶ್ರಯವನ್ನು ಪಡೆಯಲು ಯೋಗ್ಯಳೂ ಆದ ನಿನ್ನೊಡನೆ ನಾನು ಯುದ್ಧವನ್ನು ಮಾಡಲು ಬಯಸುವುದಿಲ್ಲ. ॥೩೨॥

ಹೀಗಿರುವಾಗ ನೀನೇಕೆ ನನ್ನೊಡನೆ ಯುದ್ಧಮಾಡಲು ಬಂದಿದ್ದೀಯೆ? ಆದರೆ ನೀನು ಹೀಗೆ ಯುದ್ಧದಲ್ಲಿ ವಿಶೇಷವಾದ ಶ್ರದ್ಧೆಯನ್ನು ತೋರಿಸುವುದಾದರೆ ನನಗೂ ಅದು ಸರ್ವವಿಧದಲ್ಲೂ ಇಷ್ಟವೇ ಆಗಿರುತ್ತೆ. ॥೩೩॥

ನನಗೆ ಮಹಾಯುದ್ಧಗಳ ವಿಷಯದಲ್ಲಿಯೂ ಭಯವಿಲ್ಲ. ಹೀಗಿರುವಾಗ ನಿನ್ನೊಂದಿಗೆ ಯುದ್ಧಮಾಡಲು ಭಯವೆಲ್ಲಿಬಂತು? ಆದರೆ ಮನಸ್ಸಿನಲ್ಲಿಯೇ ಹುಟ್ಟಿದ ಪ್ರಿಯವಾದ ಆಕಾರವುಳ್ಳ ನಿನ್ನನ್ನು ನೋಡಿ ನನಗೆ ತತ್ಕ್ಷಣ ಪ್ರೀತಿಯೇ ಉಂಟಾಗಿದೆ. ॥೩೪॥

ಆದ್ದರಿಂದ ನೀನು ದೇವತೆಗಳ ಪಕ್ಷವನ್ನು ಬಿಟ್ಟು ನನ್ನನ್ನೇ ಆಶ್ರಯಿಸು. ನಾನು ನಿನ್ನನ್ನು ಸಾಮೋಪಾಯ ಅಥವಾ ಯುದ್ಧ ಇವುಗಳಲ್ಲೊಂದರಿಂದ ನನ್ನನ್ನು ಆಶ್ರಯಿಸುವವಳನ್ನಾಗಿ ಮಾಡುತ್ತೇನೆ. ॥೩೫॥

ಮದ್ವಿರೋಧೇನ ತೇ ಲೋಕೇ ಹಾನಿರೇವ ನ ಸಂಶಯಃ ।
ವಿಮೃಶ್ಯೈತದ್ದ್ರುತತರಂ ಪಕ್ಷಮೇಕತರಂ ವ್ರಜ ॥೩೬॥

ಇತಿ ತಾಂ ಬ್ರೂಹಿ ಸಾಮ್ನಾ ಚ ಜ್ಞಾತ್ವಾ ತಸ್ಯಾಃ ಸಮೀಹಿತಂ ।
ಬಲಂ ಚ ಸರ್ವಂ ತತ್ಕೃತ್ಯಂ ಜ್ಞಾತ್ವಾಽಯಾಹಿ ದ್ರುತಂ ಪುನಃ ॥೩೭॥

ಅಥ ಮಾಯಾವಿನಾಂ ಶ್ರೇಷ್ಠಂ ವಿದ್ಯುನ್ಮಾಲಿನಮಾಹ ಸಃ ।
ವಿದ್ಯುನ್ಮಾಲಿನ್ಮಹಾಪ್ರಾಜ್ಞಮಾಯಾವಿಕುಲನಾಯಕ ॥೩೮॥

ಪರೈರವಿದಿತೋ ಗತ್ವಾ ದೇವ್ಯಾಃ ಸೇನಾ ಮಶೇಷತಃ ।
ಬಲಂ ಚ ವ್ಯವಸಾಯಂ ಚ ಭೇದಚ್ಛಿದ್ರಾಣಿ ಯುಕ್ತಿತಃ ॥೩೯॥

ವಿಚಾರ್ಯ ಶೀಘ್ರಮಾಯಾಹಿ ತ್ವಮತ್ರ ಕುಶಲೋ ಹ್ಯಸಿ ।
ಅಜ್ಞಪ್ತಾವಿತರೌ ದೈತ್ಯೌ ಯಯತುಃ ಶಕ್ತಿವಾಹಿನೀಂ ॥೪೦॥

ನನಗೆ ನೀನು ವಿರೋಧವಾದರೆ ಅದರಿಂದ ನಿನಗೆ ಹಾನಿಯೇ ಸಂಭವಿಸುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ನೀನು ಈ ವಿಷಯವನ್ನು ಅತ್ಯಂತ ಶೀಘ್ರವಾಗಿ ವಿಮರ್ಶೆಮಾಡಿ ಯಾವುದಾದರೊಂದು ಪಕ್ಷಕ್ಕೆ ಸೇರಿಕೋ. ॥೩೬॥

ಹೀಗೆ ಆಕೆಗೆ ನೀನು ಸಾಮೋಪಾಯದಿಂದಲೇ ಹೇಳು. ಅನಂತರ ಅವಳ ಇಷ್ಟವನ್ನರಿತು ಅವಳ ಪರಾಕ್ರಮ, ಮತ್ತು ಅವಳು ಮಾಡಬೇಕೆಂದಿರುವ ಕಾರ್ಯ ಇವನ್ನೆಲ್ಲವನ್ನೂ ತಿಳಿದು ಪುನಃ ಶೀಘ್ರವಾಗಿ ಹಿಂತಿರುಗಿ ಬಾ. ॥೩೭॥

ಅನಂತರ ಭಂಡರಾಕ್ಷಸನು ಶ್ರೇಷ್ಠ ಮಾಯಾವಿಯಾದ ವಿದ್ಯುನ್ಮಾಲಿಯನ್ನು ಕುರಿತು “ಎಲೈ ಪ್ರಾಜ್ಞನೂ, ಮಾಯಾವಿಗಳ ಗುಂಪಿಗೆ ನಾಯಕನೂ, ಆದ ವಿದ್ಯುನ್ಮಾಲಿಯೇ, ಎಂದು ಅವನನ್ನು ಸಂಬೋಧಿಸಿ ಈರೀತಿಯಲ್ಲಿ ಹೇಳಿದನು.॥೩೮॥

ನೀನು ಇತರರಿಗೆ ಗೊತ್ತಾಗದಂತೆ ಹೋಗಿ ದೇವಿಯ ಸಮಸ್ತ ಸೈನ್ಯವನ್ನೂ ಶಕ್ತಿಯನ್ನೂ, ಪ್ರಯತ್ನವನ್ನೂ, ಭಿನ್ನಾಭಿಪ್ರಾಯ ಮತ್ತು ಒಡಕುಗಳನ್ನೂ ಉಪಾಯವಾಗಿ ಚೆನ್ನಾಗಿ ತಿಳಿದುಕೊಂಡು ಬಾ. ॥೩೯॥

ಈ ವಿಚಾರಗಳನ್ನೆಲ್ಲವನ್ನೂ ಚೆನ್ನಾಗಿ ತಿಳಿದು ಶೀಘ್ರವಾಗಿ ಬಾ. ನೀನು ಈ ವಿಷಯದಲ್ಲಿ ಸಮರ್ಥನಾಗಿದ್ದೀಯೆ. ಈರೀತಿಯಾಗಿ ಭಂಡರಾಕ್ಷಸನು ಅಪ್ಪಣೆ ಮಾಡಲು ಆ ಇಬ್ಬರು ರಾಕ್ಷಸರೂ ಶಕ್ತಿದೇವಿಯ ಸೈನ್ಯವನ್ನು ಹೊಕ್ಕರು. ॥೪೦॥

ಅನಂತಾಮಂಬುಧಿಪ್ರಖ್ಯಾ ಮವಿಗಾಹ್ಯ ಕಥಂಚನ ।
ಅಮಿತ್ರಘ್ನೋ ಮಹಾಸೇನಾಂ ವಿವೇಶಾಽಬ್ಧಿಂ ಯಥಾ ಪ್ಲವಃ ॥೪೧॥

ಉತ್ಖಾತಕರವಾಲಾಭಿಃ ಶಕ್ತಿಭಿಃ ಪರಿರಕ್ಷಿತಾಮ್ ।
ಪ್ರವಿಷ್ಟಮಾತ್ರಃ ಶಕ್ತ್ಯಾ ಸ ಗೃಹೀತೋ ಬಲವತ್ತರಃ ॥೪೨॥

ಪರಿಚಾರಿಕಯಾ ದಂಡನಾಥಾಯಾಃ ಕಾಂಚನಾಭಯಾ ।
ಚಪೇಟಯಾ ನಿಹತ್ಯಾಶು ಗೃಹೀತ್ವಾ ತಂ ಗಲೇಽಸುರಂ ॥೪೩॥

ತರ್ಜಯಾಮಾಸ ವಚನೈಃ ಕ್ರೋಧಯುಕ್ತೈರ್ಭಯಂಕರೈಃ ।
ಕಸ್ತ್ವಂ ಸೇನಾಮಿಮಾಂ ದೇವ್ಯಾ ದಂಡರಾಜ್ಞೀ ಸುರಕ್ಷಿತಾಂ ॥೪೪॥

ಅವಿಜ್ಞಾಪ್ಯ ಪ್ರವಿಷ್ಟೋಽಸಿ ಚಾಽಸ್ಮತ್ಪ್ರಮುಖವೀಕ್ಷಿತಾಂ ।
ಆಜ್ಞಾಂ ವಿನಾ ದಂಡರಾಜ್ಞಾಃ ಪ್ರವಿಷ್ಟೋ ವಾಹಿನೀ ಮಿಮಾಂ॥೪೫॥

ಅಮಿತ್ರಘ್ನನು ಅನಂತವಾದ, ಸಮುದ್ರಕ್ಕೆ ಸಮಾನವಾದ ದೇವಿಯ ಮಹಾಸೈನ್ಯವನ್ನು ಇತರರಿಗೆ ತಿಳಿಯದಂತೆ, ದೋಣಿಯು ಸಮುದ್ರವನ್ನು ಹೇಗೋ ಹಾಗೆ, ಪ್ರವೇಶಿಸಿದನು. ॥೪೧॥

ಆ ಮಹಾಸೈನ್ಯವನ್ನು ಶಕ್ತಿಗಳು ತಮ್ಮ ಕತ್ತಿಗಳನ್ನು ಎತ್ತಿ ಹಿಡಿದುಕೊಂಡು ರಕ್ಷಿಸುತ್ತಿದ್ದರು. ಇವನು ಅದನ್ನು ಪ್ರವೇಶಿಸಿದ ಕೂಡಲೇ ಶಕ್ತಿಯೊಬ್ಬಳು ಬಲಿಷ್ಠನಾದ ಇವನನ್ನು ಹಿಡಿದುಬಿಟ್ಟಳು. ॥೪೨॥

ದಂಡಿನೀ ದೇವಿಯ ಪರಿಚಾರಿಕೆಯಾದ ಕಾಂಚನಾಭಾ ಎಂಬ ಶಕ್ತಿಯು ಈ ರಾಕ್ಷಸನ ಕಪಾಳಕ್ಕೆ ಹೊಡೆದು ಶೀಘ್ರವಾಗಿ ಇವನನ್ನು ಕತ್ತಿನಲ್ಲಿ ಹಿಡಿದಳು.॥೪೩॥

ಮತ್ತು ಅವಳು ಬಹಳ ಕೋಪದಿಂದ ಭಯಂಕರವಾದ ಮಾತುಗಳಿಂದ ಅವನನ್ನು ಹೀಗೆ ಗದರಿಸಿದಳು. "ಎಲೋ, ದೇವಿಯಾದ ದಂಡಧಾರಿಣಿಯು ರಕ್ಷಿಸುತ್ತಿರುವ ಈ ಸೈನ್ಯಕ್ಕೆ ಹೇಳದೇ ಕೇಳದೆ ಪ್ರವೇಶಿಸಿದ ನೀನಾರು?" ಎಂದಳು. ॥೪೪॥

ನಾವೆಲ್ಲರೂ ನೋಡುತ್ತಿರುವಾಗಲೇ ಈ ಸೈನ್ಯವನ್ನು ನಮಗೆ ತಿಳಿಸದೆ ನೀನು ಪ್ರವೇಶಿಸಿದ್ದೀಯೆ, ದಂಡಾಧಿಕಾರಿಣಿಯ ಅಪ್ಪಣೆಯೇ ಇಲ್ಲದೆ ಈ ಸೈನ್ಯವನ್ನು

ಜೀವನ್ನೋ ಯಾಸ್ಯಸಿ ಪುನಃ ಸಾಕ್ಷಾನ್ಮೃತ್ಯುರಿವ ಸ್ವಯಂ ।
ತದಂತರೇ ತು ಸಂಪ್ರಾಪ್ತಾಃ ಸೈನ್ಯರಕ್ಷಾ ನಿಯೋಜಿತಾಃ ॥೪೬॥

ದಂಡಿನ್ಯಾಜ್ಞಾಪ್ರತೀಕ್ಷಿಣ್ಯಃ ಶಕ್ತಯಃ ಶತಶಃ ಕ್ಷಣಾತ್ ।
ಪ್ರಬಲಾಭಿಃ ಸಮಾಕೃಷ್ಟೋ ನಿಹತೋ ಮೂರ್ಛಿತೋಽಭವತ್॥೪೭॥

ಶ್ರುತ್ವಾ ತದಂತರೇ ದಂಡನಾಥಾ ದೈತ್ಯಸ್ಯ ಸಂಗತಿಮ್ ।
ಸಮುಕ್ಷಂ ಹ್ಯಾನಯಾಮಾಸ ಸ್ವಪರೀಚಾರಶಕ್ತಿಭಿಃ ॥೪೮॥

ಪೃಷ್ಟ್ವಾಽತಂ ಹ್ಯಾಗತಂ ದೂತಂ ಜ್ಞಾತ್ವಾ ಭಂಡಾಽಸುರಸ್ಯ ಹಿ ।
ವಿಜ್ಞಾಪ್ಯ ಮಂತ್ರಿಣೀ ದೇವ್ಯಾಃ ಸಮೀಪಮಾನಯತ್ತತಃ ॥೪೯॥

ಸಾಽಪಿ ವಿಜ್ಞಾಪ್ಯ ತಂ ಪ್ರಾಪ್ತಂ ಲಲಿತಾಯಾಃ ಸಮೀಪತಃ ।
ನೀತ್ವಾ ಪಪ್ರಚ್ಛ ದೂತಂ ತಂ ಕೃತ್ಯಂ ತತ್ರಾಗಮಸ್ಯ ಹಿ ॥೫೦॥

ಸಾಕ್ಷಾತ್ ಮೃತ್ಯುವಿನ ಬಾಯಿಗೆ ಹೊಕ್ಕಂತೆ ಹೊಕ್ಕಿರುತ್ತೀಯೆ! ನೀನು ಬದುಕಿ ಹಿಂತಿರುಗಲಾರೆ. ಎಂದಳು. ಇಷ್ಟರೊಳಗೆ ಸೈನ್ಯದ ರಕ್ಷಣೆಗೆ ನಿಯಮಿಸಲ್ಪಟ್ಟಿದ್ದವರೂ ಅಲ್ಲಿಗೆ ಬಂದರು. ||೪೫-೪೬||

ದಂಡಿನಿಯ ಆಜ್ಞೆಯನ್ನು ನೆರವೇರಿಸುವ ಪ್ರಬಲರಾದ ನೂರಾರು ಶಕ್ತಿಗಳು ಕ್ಷಣಕಾಲದಲ್ಲಿಯೇ ಅವನನ್ನು ಚೆನ್ನಾಗಿ ಹೊಡೆದರು. ಆದ್ದರಿಂದ ಅವನು ಮೂರ್ಛೆ ಹೋದನು. ||೪೭||

ಈ ಮಧ್ಯದಲ್ಲಿ ದಂಡನಾಯಕಿಯರಾದ ಶಕ್ತಿಯರು ರಾಕ್ಷಸನು ಸಿಕ್ಕಿ ಬಿದ್ದಿರುವ ವಿಷಯವನ್ನು ತಿಳಿದು ತಮ್ಮ ಪರಿಚಾರಿಕೆಯರಾದ ಶಕ್ತಿಯರ ಮೂಲಕ ತನ್ನೆದುರಿಗೆ ಅವನನ್ನು ಕರೆಸಿದರು. ||೪೮||

ಅವನನ್ನು ಕೇಳಿ ಆ ಶಕ್ತಿಯರು ಅವನು ಭಂಡರಾಕ್ಷಸನ ದೂತನೆಂದು ತಿಳಿದು ಈ ವಿಷಯವನ್ನು ಮೇಲಿನ ಒಡತಿಗೆ ಅರಿಕೆ ಮಾಡಿಕೊಂಡು ಇವನನ್ನು ಮಂತ್ರಿಣೀದೇವಿಯ ಸಮೀಪಕ್ಕೆ ಕರೆತಂದರು. ||೪೯||

ಆಕೆಯೂ ಕೂಡ ಅವನು ಬಂದಿರುವ ವಿಷಯವನ್ನು ಲಲಿತಾದೇವಿಯ ಸಮೀಪದಲ್ಲಿ ವಿಜ್ಞಾಪಿಸಿಕೊಂಡಳು. ಆಕೆಯು ಮುಂದೆ ಮಂತ್ರಿಣಿಯು ಅವನನ್ನು ಕರೆಸಿ ಅವನು ಅಲ್ಲಿಗೆ ಏಕೆ ಬಂದಿದ್ದಾನೆ? ಎಂಬ ವಿಷಯವನ್ನು ಕೇಳಿದಳು. ||೫೦||

ಪ್ರಾಹ ಪ್ರಣಮ್ಯಾಽಮಿತ್ರಘ್ನಃ ಪ್ರಾಪ್ತೋ ಭಂಡನಿದೇಶತಃ ।
ದೂತೋಽಹಂ ತಸ್ಯ ದೈತ್ಯಸ್ಯ ತದುಕ್ತಂ ಸಂಬ್ರವೀಮ್ಯಹಂ ॥೫೧॥

ಆವಯೋರ್ನ ವಿರೋಧೋಽಸ್ತಿ ಕುತೋ ಯೋದ್ಧುಂ ಸಮಾಗತಾ ।
ಯುದ್ಧ್ವಾಽಪ್ಯಯುದ್ಧ್ವಾ ದೇವಿ ಭೂಯಾಸ್ತ್ವಂ ಮತ್ಸಮಾಶ್ರಯಾ ॥೫೨॥

ತತ್ತ್ವಾಂ ಮಾತ್ಮ ಪ್ರಿಯಾಂ ಹೃದ್ಯಾಂ ಯೋಧಯಾಮಿ ಕಥಂ ವದ ।
ತದ್ದೇವಾನ್ ಸಂಪರಿತ್ಯಜ್ಯ ಭವ ತ್ವಂ ಮತ್ಸಮಾಶ್ರಯಾ ॥೫೩॥

ವಕ್ತವ್ಯೇತಿ ತ್ವಯಾ ಗತ್ವಾ ಜ್ಞೇಯಂ ಸೇನಾಬಲಾಽಬಲಂ ।
ಇತ್ಯಹಂ ಪ್ರೇಷಿತಸ್ತೇನ ದೂತೋಽವಧ್ಯೋ(ಧ್ಯಾ)ವಿನಿಂದಿತಾ ॥೫೪॥

ಶಾಸ್ತ್ರೇಷು ದೂತಸ್ಯ ವಧಂ ನ ವದಂತಿ ವಿಚಕ್ಷಣಾಃ ।
ಇತಿ ಮತ್ವಾ ಪ್ರವಿಷ್ಟೋಽಹಂ ಲಕ್ಷಿತಃ ಸರ್ವಶಕ್ತಿಭಿಃ ॥೫೫॥

ಅಮಿತ್ರಘ್ನನು ತಾನು ಭಂಡರಾಕ್ಷಸನ ಅಪ್ಪಣೆ ಮೇರೆಗೆ ಬಂದಿರುವ ಆತನ ದೂತನೆಂದೂ, ಆತನು ಹೇಳಿದ ವಿಷಯವನ್ನು ಆಕೆಯ ಮುಂದೆ ತಿಳಿಸುವುದಾಗಿಯೂ ಹೇಳಿದನು. ಏನೆಂದರೆ, ॥೫೧॥

"ನಮ್ಮಿಬ್ಬರಿಗೂ ವಿರೋಧವೇ ಇಲ್ಲ. ಹೀಗಿದ್ದರೂ ನೀನು ಏತಕ್ಕೆ ನನ್ನೊಡನೆ ಯುದ್ಧಮಾಡಲು ಬಂದಿದ್ದೀಯೆ? ನೀನು ಯುದ್ಧಮಾಡಲಿ ಅಥವಾ ಯುದ್ಧಮಾಡದಿರಲಿ ನೀನು ನನಗೆ ವಶಳಾಗುವುದು ಖಂಡಿತ." ॥೫೨॥

ಆದ್ದರಿಂದ ನನಗೆ ಪ್ರಿಯಳಾದ ಮತ್ತು ಮನೋಹರಳಾದ ನಿನ್ನೊಂದಿಗೆ ನಾನು ಹೇಗೆ ಯುದ್ಧಮಾಡುವೆನು? ಎಂಬುದನ್ನು ನೀನೇ ಹೇಳು. ಆದ್ದರಿಂದ ನೀನು ದೇವತೆಗಳ ಪಕ್ಷವನ್ನು ಬಿಟ್ಟು ನನ್ನನ್ನೇ ಆಶ್ರಯಿಸು. ॥೫೩॥

ಈ ರೀತಿಯಲ್ಲಿ ನೀನು ಹೋಗಿ ಹೇಳಿ ಬಾ. ಮತ್ತು ಆಕೆಯ ಸೈನ್ಯದ ಬಲಾಬಲದ ವಿಷಯವನ್ನು ತಿಳಿದು ಬಾ. ಎಂದು ರಾಕ್ಷಸರಾಜನು ನನಗೆ ಹೇಳಿ ಕಳುಹಿಸಿದ್ದಾನೆ. ಆದ್ದರಿಂದ ಈ ವಿಷಯವನ್ನು ನಿಮಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ದೂತನನ್ನು ಕೊಲ್ಲಲು ಅಯುಕ್ತವೆಂದೂ ಅವನು ನಿಂದೆಗೆ ಯೋಗ್ಯನಲ್ಲವೆಂದೂ ತಮಗೆ ತಿಳಿದೇ ಇದೆ. ಎಂದನು. ॥೫೪॥

"ವಿದ್ವಾಂಸರು, ಶಾಸ್ತ್ರಗಳಲ್ಲಿ ದೂತರ ವಧೆಯನ್ನು ನಿಷೇಧಿಸಿದೆಯೆಂದು

ಪ್ರವಿಷ್ಟಮಾತ್ರೋಽಭಿಮತೋ ಗೃಹೀತಸ್ತವ ಶಕ್ತಿಭಿಃ ।
ಆನೀತಸ್ತೇ ಸಮಕ್ಷಂ ಚೇತ್ಯೇತತ್ಸರ್ವಂ ನಿರೂಪಿತಂ ॥೫೬॥

ಅಗ್ರೇ ದೇವ್ಯೇವ ಶರಣಮಯೋಗ್ಯೋ ಮೇ ವಧೋ ಭವೇತ್ ।
ನಿಶಮ್ಯ ದೂತವಚನಂ ಲಲಿತಾಯಾಃ ಮತಂ ತತಃ ॥೫೭॥

ವಿದಿತ್ವಾ ಮಂತ್ರಿಣೀ ಪ್ರಾಹ ಸ್ಮೇರಮಂಜುಲಭಾಷಿಣೀ ।
ಮಾಭೈರ್ದೈತ್ಯ ವ್ರಜ ಸುಖಂ ಹನ್ಯಸೇ ನ ಕದಾಚನ ॥೫೮॥

ಬ್ರೂಯಾಸ್ತಂ ಭಂಡದೈತ್ಯೇಶಂ ಮಯೋಕ್ತಮವಧಾರ್ಯ ಚ ।
ಯದಿ ತೇ ಜೀವನೇ ಶ್ರದ್ಧಾ ದ್ರುತಮಾಗತ್ಯ ನಿರ್ಭಯಃ ॥೫೯॥

ಹೇಳುತ್ತಾರೆ." ಎಂಬುದನ್ನು ನಿಶ್ಚಯವಾಗಿ ತಿಳಿದು ನಿಮ್ಮ ಸೈನ್ಯವನ್ನು ನಾನು ಪ್ರವೇಶಿಸಿದೆನು. ಅಲ್ಲದೆ ಎಲ್ಲಾ ಶಕ್ತಿಗಳೂ ಈ ರೀತಿಯಲ್ಲಿ ನನ್ನನ್ನು ನೋಡಿದ್ದಾರೆ. ||೫೫||

ನಾನು ರಾಕ್ಷಸರಾಜನ ಪ್ರಿಯನಾದ ರಾಕ್ಷಸನೆಂದು ತಿಳಿದು, ನಾನು ಇಲ್ಲಿಗೆ ಪ್ರವೇಶಿಸಿದ ಕೂಡಲೇ ನಿಮ್ಮ ಕಡೆಯ ಶಕ್ತಿಗಳು ನನ್ನನ್ನು ಹಿಡಿದಿದ್ದಾರೆ. ಮತ್ತು ಅವರು ನನ್ನನ್ನು ನಿಮ್ಮ ಮುಂದಕ್ಕೆ ಕರೆದುಕೊಂಡು ಬಂದಿದ್ದಾರೆ. ಈ ಎಲ್ಲಾ ವಿಷಯಗಳನ್ನು ತಮ್ಮ ಮುಂದೆ ವಿಜ್ಞಾಪಿಸಿಕೊಂಡಿದ್ದೇನೆ. ||೫೬||

"ಇನ್ನು ಮುಂದೆ ನಡೆಸಬೇಕಾದ ವಿಷಯದಲ್ಲಿ ನನಗೆ ದೇವಿಯೇ ರಕ್ಷಕಳೆಂದು ನಂಬಿದ್ದೇನೆ. ನನ್ನನ್ನು ವಧಿಸುವುದು ಯೋಗ್ಯವಲ್ಲವೆಂಬುದನ್ನೂ ವಿಜ್ಞಾಪನೆಮಾಡಿಕೊಂಡಿದ್ದೇನೆ." ಮಂತ್ರಿಣಿಯು ದೂತನ ಮಾತನ್ನು ಕೇಳಿ ಲಲಿತಾದೇವಿಯ ಅಭಿಪ್ರಾಯವನ್ನೂ ಈ ವಿಷಯದಲ್ಲಿ ತಿಳಿದುಕೊಂಡಳು. ||೫೭||

ಈ ವಿಷಯವನ್ನು ತಿಳಿದು ಮಂತ್ರಿಣಿಯು ಮುಗುಳ್ನಗೆಯಿಂದ ಕೂಡಿ ಮನೋಹರವಾಗಿ ಮಾತನಾಡುತ್ತಾ "ಎಲೈ ರಾಕ್ಷಸನೇ, ಹೆದರಬೇಡ; ಸುಖವಾಗಿ ಹಿಂತಿರುಗು. ನಿನ್ನನ್ನು ಯಾರೂ ಎಂದಿಗೂ ಹಿಂಸಿಸುವುದಿಲ್ಲ" ಎಂದಳು. ||೫೮||

ಆ ಭಂಡರಾಕ್ಷಸನಿಗೆ ನಾನು ಈಗ ಹೇಳುವುದನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡು ಹೋಗಿ ಹೇಳು. ಏನೆಂದರೆ "ನಿನಗೆ ಬದುಕಬೇಕೆಂಬ ಆಸೆಯಿದ್ದರೆ ಶೀಘ್ರವಾಗಿ ಭಯವಿಲ್ಲದೆ ನೀನು ಇಲ್ಲಿಗೆ ಬಂದು ದೇವಿಗೆ ಶರಣಾಗತನಾಗು." ಎಂದು ಹೇಳು. ||೫೯||

ಶರಣೀ ಕುರು ದೇವೇಶೀಂ ತ್ರಿಲೋಕೀಂ ಸಂಪರಿತ್ಯಜ ।
ತ್ರಿಲೋಕೇಶೋ ಭವೇದಿಂದ್ರಃ ತ್ವಂ ಪಾತಾಲೇ ನಿವತ್ಸ್ಯಸಿ ॥೬೦॥

ಕುರು ಸಖ್ಯಂ ಗೋತ್ರಭಿದಾ ಸಪುತ್ರಬಲವಾಹನಃ ।
ಅನ್ಯಥಾ ನ ವಿಮೋಕ್ಷಸ್ತೇ ಜೀವನ್ ಕ್ವಾಽಪಿ ಭವಿಷ್ಯತಿ ॥೬೧॥

ನಯೈನಂ ದಂಡಸಾಮ್ರಾಜ್ಞಿ ಸೇನಾಂ ದರ್ಶಯ ಸರ್ವತಃ ।
ದರ್ಶಯಿತ್ವಾ ತತಃ ಸೇನಾಬಹಿರೇನಂ ವಿಸರ್ಜಯ ॥೬೨॥

ಇತ್ಯಾಜ್ಞಪ್ತಾ ಕೋಲಮುಖೀ ಪ್ರದರ್ಶ್ಯ ಸ್ವಾಮನೀಕಿನೀಮ್ ।
ವ್ಯಸರ್ಜಯತ್ತಂ ದೈತೇಯಂ ಬಹಿಃ ಸೇನಾನಿವೇಶನಾತ್ ॥೬೩॥

ಅಥ ಮುಕ್ತಃ ಪುನರ್ಜಾತಮಾತ್ಮಾನಂ ಸಮಮಂಸತ ।
ಜಗಾಮ ರಾಜಸವಿಧಂ ಭಯವಿಹ್ವಲಿತಾಂತರಃ ॥೬೪॥

ಆದ್ದರಿಂದ ನೀನು ದೇವೇಶ್ವರಿಯಾದ ದೇವಿಯನ್ನು ಮರೆಹೊಕ್ಕು ಮೂರು ಲೋಕಗಳನ್ನೂ ಬಿಟ್ಟುಕೊಡು. ಆಮೇಲೆ ಇಂದ್ರನು ಮೂರು ಲೋಕಗಳಿಗೂ ಒಡೆಯನಾಗಿರಲಿ. ನೀನು ಪಾತಾಲದಲ್ಲಿಯೇ ವಾಸಮಾಡುವೆ. ||೬೦||

ನೀನು ನಿನ್ನ ಪುತ್ರರು ಸೈನ್ಯ ಮತ್ತು ವಾಹನಗಳೊಂದಿಗೆ ಇಂದ್ರನೊಂದಿಗೆ ಸ್ನೇಹವನ್ನು ಬೆಳೆಸಬೇಕು. ಹಾಗಿಲ್ಲದಿದ್ದರೆ ನಿನಗೆ ಬಿಡುಗಡೆಯಾಗಲೀ, ಬದುಕುವುದಕ್ಕಾಗಲೀ ಸಾಧ್ಯವಿಲ್ಲ. ಹೀಗೆಂದು ಹೇಳಿ, ಆಮೇಲೆ ದಂಡನಾಯಕಿಯನ್ನು ಕುರಿತು, ||೬೧||

ಎಲೌ ದಂಡನಾಯಕಿಯೇ, ಇವನನ್ನು ಕರೆದುಕೊಂಡುಹೋಗಿ ಎಲ್ಲಾ ಕಡೆಯಲ್ಲಿಯೂ ಸೈನ್ಯವನ್ನು ತೋರಿಸು. ಅನಂತರ ನೀನು ಸೈನ್ಯದ ಹೊರಗಡೆ ಇವನನ್ನು ಕಳುಹಿಸಿಬಿಡು. ||೬೨||

ವರಾಹದಂತೆ ಉದ್ದವಾದ ಮುಖವುಳ್ಳ ಆ ದಂಡನಾಯಕಿಯು ದೇವಿಯ ಅಪ್ಪಣೆಯ ಪ್ರಕಾರ ತನ್ನ ಸೈನ್ಯವನ್ನು ತೋರಿಸಿ ಸೇನಾಶಿಬಿರದ ಹೊರಭಾಗಕ್ಕೆ ಅವನನ್ನು ಕಳುಹಿಸಿದಳು. ||೬೩||

ಅನಂತರ ಆ ದೂತನು ಬಿಡುಗಡೆ ಹೊಂದಿ ತಾನು ಪುನಃ ಹುಟ್ಟಿದವನೋ ಎಂಬಂತೆ ತಿಳಿದನು. ಅವನು ರಾಕ್ಷಸರ ರಾಜನ ಸಮೀಪಕ್ಕೆ ಭಯದಿಂದ ಕಳವಳಗೊಂಡ ಮನಸ್ಸುಳ್ಳವನಾಗಿಯೇ ಹೋದನು. ||೬೪||

ವಿದ್ಯುನ್ಮಾಲೀ ನಿಶಾನ್ಯೈಸನಮಮಿತ್ರಘ್ನಂ ವಿಹಿಂಸಿತಮ್ ।
ಭೀತೋ ರಾತ್ರೌ ಮಹಾಮಾಯಃ ಕೌಶಿಕೀಂ ತನುಮಾಶ್ರಿತಃ ॥೬೫॥

ವಿಚರನ್ನಾಕಾಶಮಾರ್ಗೇ ಸೇನಾಂ ಸರ್ವಾಂ ನಿಶಾಮಯತ್ ।
ಗಣಯಿತ್ವಾ ಸರ್ವಸೇನಾಂ ವ್ರಜಂತಂ ಗಗನಾಧ್ವನಃ ॥೬೬॥

ಜಗ್ರಾಹ ಕಾಚಿಚ್ಛಕ್ತಿಸ್ತಂ ಖೇಚರೀ ನಿಶಿ ರಕ್ಷಣೇ ।
ಗೃಹೀತಮಾತ್ರೋ ಮಾಯಾವೀ ಪ್ರೋಡ್ಡೀಯ ಗಗನೋರ್ಧ್ವತಃ ॥೬೭॥

ಪಂಚಾಶದ್ಯೋಜನಾದೂರ್ಧ್ವಂ ಯುಯೋಧ ಸ ತಯಾ ಭೃಶಂ ।
ಚಿರಂ ಯುದ್ಧ್ವಾ ಶೂಲಹಸ್ತ ಸ್ತಯಾ ಮುಕ್ತಃ ಕಥಂಚನ ॥೬೮॥

ಜಗಾಮ ದೈತ್ಯನೃಪತಿಮೀಷತ್ಪ್ರಾಣಾವಶೇಷಿತಃ ।
ಪಪಾತ ಪುರತಸ್ತಸ್ಯ ಸೂರ್ಯಸ್ಯೋದಯನಂ ಪ್ರತಿ ॥೬೯॥

ವಿದ್ಯುನ್ಮಾಲಿಯು ಅಮಿತ್ರಘ್ನನು ದೇವಿಯ ಗುಂಪಿನಲ್ಲಿ ಹಿಂಸೆಗೆ ಒಳಗಾದುದನ್ನು ಕೇಳಿ, ರಾತ್ರಿಯಲ್ಲಿ ಭಯಗೊಂಡವನಾಗಿ ಮಹಾಮಾಯಾವಿಯಾದ ಈತನು ಗೂಬೆಯ ದೇಹವನ್ನು ತೆಗೆದುಕೊಂಡನು. ॥೬೫॥

ಅವನು ಈರೀತಿಯಲ್ಲಿ ಆಕಾಶಮಾರ್ಗದಲ್ಲಿ ಸೈನ್ಯದ ವಿಷಯವನ್ನು ಲೆಕ್ಕ ಹಾಕುತ್ತಾ ಅದೇ ಮಾರ್ಗವಾಗಿ ಹೊರಟುಹೋಗುತ್ತಿದ್ದನು. ॥೬೬॥

ಆಗ ರಾತ್ರಿಯಲ್ಲಿ ಕಾಯುತ್ತಾ ಆಕಾಶಮಾರ್ಗದಲ್ಲಿದ್ದ ಶಕ್ತಿಯೊಬ್ಬಳು ಇವನನ್ನು ಹಿಡಿದಳು. ಅವಳು ಹಿಡಿಯುವಷ್ಟರಲ್ಲೇ ಮಾಯಾವಿಯಾದ ಇವನು ಆಕಾಶದಿಂದ ಮೇಲಿನ ಭಾಗಕ್ಕೆ ಹಾರಿದನು. ॥೬೭॥

ಅವನು ಆವಳೊಂದಿಗೆ ಐವತ್ತು ಯೋಜನಕ್ಕಿಂತ ಮೇಲುಭಾಗದಿಂದಲೇ ಬಹಳವಾಗಿ ಕಾದಾಡಿದನು. ಹೀಗೆ ಬಹಳಕಾಲ ಯುದ್ಧವಾದಮೇಲೆ ಅವನು ಆಕೆಯ ಶೂಲದಪೆಟ್ಟಿಗೆ ಸಿಕ್ಕಿ ಹೇಗೋ ತಪ್ಪಿಸಿಕೊಂಡನು. ॥೬೮॥

ಈ ರಾಕ್ಷಸನು ಸ್ವಲ್ಪ ಪ್ರಾಣವೇ ಉಳಿದಂತಿರುವಾಗ, ಸೂರ್ಯೋದಯವಾಗುವ ವೇಳೆಗೆ ರಾಕ್ಷಸರಾಜನಾದ ಭಂಡನ ಮುಂಭಾಗದಲ್ಲಿ ಬಂದುಬಿದ್ದನು. ॥೬೯॥

ದೃಷ್ಟ್ವಾಽಗ್ರೇ ಪತಿತಂ ದೈತ್ಯಂ ಮ್ರಿಯಮಾಣಂ ಭೃಶಂ ಹತಂ ।
ಭಂಡಾಸುರೋ ಜಪನ್ಮಂತ್ರಂ ಪಸ್ಪರ್ಶಾಂಗೇಷು ಪಾಣಿನಾ ॥೨೦॥

ಮಂತ್ರಸ್ಪರ್ಶನಮಾತ್ರೇಣ ಜೀವಿತಶ್ಚ ಗತವ್ಯಥಃ ।
ಉತ್ಥಾಯ ಪ್ರಣನಾಮಾಽಶು ದೈತ್ಯರಾಜಂ ಪುರಃಸ್ಥಿತಂ ॥೨೧॥

ಅಥ ಪೃಷ್ಟಃ ಪ್ರಾಹ ವಿದ್ಯುನ್ಮಾಲೀ ವೃತ್ತಂ ಸ್ವಕಂ ಕ್ರಮಾತ್ ।
ಮಹಾರಾಜ ತ್ವತ್ಸಮಕ್ಷಂ ಗತೋಽಮಿತ್ರಘ್ನ ಸಂಯುತಂ(ಃ) ॥೨೨॥

ದೃಷ್ಟವಾನಸ್ಮಿ ತಾಂ ಸೇನಾಂ ಪ್ರಲಯಾಂಬುಧಿ ಸನ್ನಿಭಾಂ ।
ಅಥಾಽಮಿತ್ರಘ್ನ ಏವಾಽಽದೌ ಪ್ರವಿವೇಶ ಮಹಾಚಮೂಂ ॥೨೩॥

ಪಶ್ಯತೋ ಮೇ ಕ್ಷಣೇನೈವ ಗೃಹೀತಃ ಶಕ್ತಿಭಿರ್ಬಲಾತ್ ।
ಮಧುವನ್ಮಕ್ಷಿಕಾಭಿಃ ಸ ಸಮಾಕ್ರಾಂತೋಽಥ ಶಕ್ತಿಭಿಃ ॥೨೪॥

ಬಹಳ ಪೆಟ್ಟಿಗೆ ಸಿಕ್ಕಿಸಾಯುವ ಸ್ಥಿತಿಯಲ್ಲಿ ತನ್ನ ಮುಂದೆ ಬಿದ್ದ ಆ ರಾಕ್ಷಸನನ್ನು ನೋಡಿ ಭಂಡರಾಕ್ಷಸನು ಮಂತ್ರವನ್ನು ಜಪಿಸುತ್ತಾ ತನ್ನ ಕೈಯಿಂದ ಆವನ ಅವಯುವಗಳನ್ನು ಮುಟ್ಟಿದನು. ॥೨೦॥

ಆ ರಾಕ್ಷಸನು ಮಂತ್ರಪೂರ್ವಕವಾಗಿ ಇವನನ್ನು ಮುಟ್ಟಿದ ಕೂಡಲೇ ಬದುಕಿ ಸಂಕಟವೆಲ್ಲವೂ ಹೋಗಲು, ಇವನು ಎದ್ದು ತನ್ನ ಮುಂದಿರುವ ರಾಕ್ಷಸರಾಜನಿಗೆ ನಮಸ್ಕಾರವನ್ನು ಮಾಡಿದನು. ॥೨೧॥

ಅನಂತರ ರಾಕ್ಷಸರಾಜನು ಕೇಳಲು, ವಿದ್ಯುನ್ಮಾಲಿಯು ತನ್ನ ಸಮಸ್ತ ವಿಚಾರವನ್ನೂ ಕ್ರಮವಾಗಿ ಅವನಿಗೆ ಹೇಳಿದನು. “ ಓ ಮಹಾರಾಜನೇ, ನಿನ್ನ ಎದುರಿಗೆ ನಾನು ಅಮಿತ್ರಘ್ನನ ಜೊತೆಯಲ್ಲಿ ಹೋದುದು ಸರಿಯಷ್ಟೆ. ॥೨೨॥

ಆಗ, ನಾನು ಪ್ರಲಯಕಾಲದ ಸಾಗರಕ್ಕೆ ಸಮಾನವಾದ ದೇವಿಯ ಸೈನ್ಯವನ್ನು ನೋಡಿದೆನು. ಆಮೇಲೆ ಅಮಿತ್ರಘ್ನನೇ ಮೊತ್ತಮೊದಲು ಆ ಸೈನ್ಯವನ್ನು ಒಳಹೊಕ್ಕನು. ॥೨೩॥

ನಾನು ಹೀಗೆ ನೋಡುತ್ತಿರುವಾಗಲೇ ಕ್ಷಣಕಾಲದಲ್ಲಿಯೇ ಶಕ್ತಿಗಳು ಅವನನ್ನೂ, ಜೇನು ತುಪ್ಪಕ್ಕೆ ನೊಣಗಳು ಮುತ್ತುವಂತೆ, ಮುತ್ತಿ, ಆಕ್ರಮಿಸಿ ಹಿಡಿದರು. ॥೨೪॥

ಕ್ಷಣೇನ ವಿಗತಪ್ರಜ್ಞಃ ಸಮಭೂದ್ಬಲವಾನಪಿ ;
ಅಶಕ್ತಃ ಸ್ಪಂದಿತುಮಪಿ ಕ್ವ ಯುದ್ಧಂ ಕ್ವ ಪಲಾಯನಮ್ ॥೭೫॥

ಕಥಂಚಿದಪಿ ನೋ ಜೀವೇತ್ ಸ ಇತ್ಥಂ ಮಮ ನಿಶ್ಚಯಃ ।
ತಾವದ್ಭೀತೋಽಪ್ಯಹಂ ದೂರಾತ್ ಪಲಾಯನಪರೋಽಭವಂ ॥೭೬॥

ಭವದಾಜ್ಞಾ ಗೌರವೇಣ ನ ನಿವೃತ್ತೋಽಸ್ಮಿ ತೇ ಭಯಾತ್ ।
ತತೋ ದಿನಾಽವಸಾನೇಽಹಂ ಮಾಯಾಘೂಕತ್ವಮಾಸ್ಥಿತಃ ॥೭೭॥

ಉಪರ್ಯುಪರಿ ಸೇನಾಯಾಃ ಸಂಚರಂಸ್ತಾಂ ನಿಶಾಮಯಂ ।
ಸಾ ಸೇನಾ ಮಹತೀ ದೃಷ್ಟ್ವಾ ಭೀಮಾ ಭೀಷಣನಾದಿನೀ ॥೭೮॥

ಸಂವರ್ತಕಾಲಸಂಕ್ಷುಬ್ಧಮಹೋರ್ಮಿಜಲಧಿರ್ಯಥಾ ।
ದರ್ಶನಾದೇವ ಸೇನಾಯಾಃ ಯಾಸ್ಯಂತಿ ಮೃತಿಮಾಸುರಾಃ ॥೭೯॥

ಬಲಿಷ್ಠನಾಗಿದ್ದಾಗ್ಯೂ ಅವನು ಕ್ಷಣಕಾಲದಲ್ಲಿಯೇ ಮೂರ್ಛೆಯನ್ನು ಹೊಂದಿದನು. ಅವನು ಅಲ್ಲಾಡಲೂ ಸಮರ್ಥನಾಗಲಿಲ್ಲ. ಹೀಗಿರುವಾಗ ಯುದ್ಧ ವೆಲ್ಲಿ? ಅಲ್ಲಿಂದ ಓಡುವುದು ತಾನೆ ಹೇಗೆ? ॥೭೫॥

ಅವನು ಹೇಗೂ ಬದುಕಲಾರನು ಎಂದು ನಾನು ನಿಶ್ಚಯಿಸಿ, ಅಷ್ಟರೊಳಗೆ ನಾನು ಭಯಗೊಂಡವನಾಗಿ ದೂರದಿಂದಲೇ ಪಲಾಯನ ಮಾಡಲು ತೊಡಗಿದೆನು. ॥೭೬॥

ಆದರೆ, ನಿಮ್ಮ ಅಪ್ಪಣೆಯನ್ನು ಗೌರವಿಸಬೇಕೆಂದು ತಮ್ಮ ಭಯದಿಂದ ನಾನು ಹಿಂತಿರುಗಲೇ ಇಲ್ಲ. ಅನಂತರ ಸಾಯಂಕಾಲದಲ್ಲಿ ನಾನು ಮಾಯೆಯಿಂದ ಗೂಬೆಯ ಶರೀರವನ್ನು ತೆಗೆದುಕೊಂಡೆನು. ॥೭೭॥

ನಾನು ಆ ಸೈನ್ಯದ ಮೇಲುಭಾಗದಲ್ಲೆಲ್ಲಾ ಸಂಚರಿಸುತ್ತಾ ಆ ಸೈನ್ಯವನ್ನು ಲೆಕ್ಕಹಾಕಲು ಪ್ರಾರಂಭಿಸಿದೆನು. ಮತ್ತು ನಾನು ಭಯಂಕರವಾದ ಶಬ್ದವುಳ್ಳ ಭಯಂಕರವೂ ಮತ್ತು ಬಹು ದೊಡ್ಡದೂ ಆದ ಆ ಸೈನ್ಯವನ್ನು ನೋಡಿದೆನು. ॥೭೮॥

ಆ ಮಹಾಸೈನ್ಯವು ಪ್ರಳಯ ಕಾಲದಲ್ಲಿ ವಿಶೇಷವಾಗಿ ಚಲಿಸುವ ದೊಡ್ಡ ದೊಡ್ಡ ಅಲೆಗಳುಳ್ಳ ಮಹಾಸಮುದ್ರದಂತಿದ್ದಿತು. ನಮ್ಮ ಕಡೆಯ ರಾಕ್ಷಸರು ಆ

ತತ್ರ ಸರ್ವಾ ಮಹಾಭೀಮಾಃ ಶಕ್ತಯೋ ಭೀಮವಿಕ್ರಮಾಃ ।
ಅಹಂ ಪೂರ್ವಿಕಯಾ ಯುದ್ಧಂ ಕರ್ತುಮಾದೌಸಮುತ್ಸುಕಾಃ ॥೮೦॥

ತತ್ರ ಬಾಲಾ ಕುಮಾರೀ ಯಾ ಲಲಿತಾಯಾಃ ಪ್ರಿಯಾಽಽತ್ಮಜಾ ।
ಕುಮಾರೀಭಿಃ ಕೋಟಿಶತಸಂಖ್ಯಾಭಿಃ ಪರಿವಾರಿತಾ ॥೮೧॥

ಶಸ್ತ್ರಾಽಸ್ತ್ರ ಕೌಶಲಾಽಭಿಜ್ಞಾ ಯುದ್ಧಸನ್ನಾಹ ಸಂಭ್ರಮಾ ।
ಭಂಡಪುತ್ರಾನ್ನಿಹನ್ಮೀತಿ ಸಾ ಬ್ರವೀತಿ ಪುನಃ ಪುನಃ ॥೮೨॥

ಕುಮಾರ್ಯೋಽಪಿಚ ತಾ ಬ್ರೂಯುರ್ಭಂಡಪುತ್ರ ಸುವಾಹಿನೀಂ ।
ನಾಶಯಾಮಃ ಕ್ಷಣೇನಾಽತಿ ಗರ್ಜಂತ್ಯಃ ಸಮರೋತ್ಸುಕಾಃ. ॥೮೩॥

ಅಥ ಸಂಪತ್ಕರೀ ಚಾಽಶ್ವಾಽಽರುಢಾಽಽಖ್ಯಾ ಶಕ್ತಿನಾಯಿಕಾ ।
ಗಜಾನಶ್ವಾನಸಂಖ್ಯಾತಾನ್ ಮಹಾಶಕ್ತಿಭಿರಾಸ್ಥಿತಾನ್ ॥೮೪॥

ಸೈನ್ಯವನ್ನು ನೋಡಿದ ಕೂಡಲೇ ಮರಣವನ್ನು ಹೊಂದುವರೆಂದು ತೋರುವುದು. ||೭೯||

ಅಲ್ಲಿ ಎಲ್ಲಾ ಶಕ್ತಿಗಳೂ ಬಹಳ ಭಯಂಕರರಾಗಿಯೂ ಭಯಂಕರವಾದ ಪರಾಕ್ರಮವುಳ್ಳವರಾಗಿಯೂ, ನಾಮುಂದು ತಾಮುಂದೆಂದು ಎಲ್ಲರಿಗಿಂತಲೂ ಮೊದಲು ಯುದ್ಧಮಾಡಲು ಉತ್ಸಾಹವುಳ್ಳವರಾಗಿಯೂ ಇದ್ದಾರೆ. ||೮೦||

ದೇವಿಯ ಕಡೆಯಲ್ಲಿ ಲಲಿತೆಯ ಪ್ರಿಯಳಾದ ಮಗಳಾದ ಕುಮಾರಿಯಾದ ಬಾಲಾದೇವೀ ಎಂಬುವಳು ನೂರುಕೋಟಿ ಕುಮಾರಿಯರಿಂದ ಕೂಡಿದ್ದಾಳೆ. ||೮೧||

ಆಕೆಯು ಶಸ್ತ್ರಗಳು, ಅಸ್ತ್ರಗಳು ಇವುಗಳ ವಿಷಯವನ್ನು ಚೆನ್ನಾಗಿ ಬಲ್ಲವಳಾಗಿಯೂ ಯುದ್ಧಕಾರ್ಯದಲ್ಲಿ ಸಡಗರವನ್ನೂ ಆದರವನ್ನೂ ತೋರಿಸುವವಳಾಗಿಯೂ ಇದ್ದು, "ಭಂಡರಾಕ್ಷಸನ ಮಕ್ಕಳನ್ನು ನಾನೇ ಕೊಲ್ಲುವೆನು" ಎಂದು ಪುನಃ ಪುನಃ ಹೇಳುತ್ತಿದಾಳೆ. ||೮೨||

ಆ ಕುಮಾರಿಯರು ಕೂಡ ಭಂಡರಾಕ್ಷಸನ ಮಕ್ಕಳ ಸೈನ್ಯವನ್ನು ನಾವೇ ಕ್ಷಣಕಾಲದಲ್ಲಿ ನಾಶಮಾಡುವೆವು ಎಂದು ದೊಡ್ಡದಾಗಿ ಘರ್ಜಿಸುತ್ತಾ ಯುದ್ಧ ವಿಷಯದಲ್ಲಿ ಉತ್ಸಾಹದಿಂದ ಕೂಡಿದವರಾಗಿರುತ್ತಾರೆ. ||೮೩||

ಅನಂತರ ಐಶ್ವರ್ಯವನ್ನುಂಟುಮಾಡುವ ಅಶ್ವಾರೂಢಾ ಎಂಬ ಶಕ್ತಿಗಳ

ಕರ್ಷಂತ್ಯೌ ತೇ ಬಲೋದಗ್ರೇ ಬಾಲಾಪಾರ್ಶ್ವದ್ವಯಾಶ್ರಿತೇ ।
ಅಥ ಬಾಲಾ ಪೃಷ್ಠತಸ್ತು ಮಹಾರಥನಿವಾಸಿನೀ ॥೮೫॥

ಲಲಿತಾ ಶ್ರೀಮಹಾದೇವೀ ನವಾಽಽವರಣಶಕ್ತಿಭಿಃ ।
ಅಪ್ರಮೇಯ ಬಲಕ್ರೌರ್ಯಶೌರ್ಯ ಯುಕ್ತಾಭಿರಾವೃತಾ ॥೮೬॥

ತಸ್ಯಾಃ ಪಾರ್ಶ್ವದ್ವಯೇ ಮಂತ್ರನಾಥದಂಡಧರಾಽಽಸ್ಥಿತಾ ।
ಪ್ರತ್ಯೇಕಂ ರಥಮಾರೂಢಾ ಮಹಾಽದ್ಭುತಪರಾಕ್ರಮಾ ॥೮೭॥

ಅನೇಕಕೋಟಿ ಮಾತಂಗಕನ್ಯಾಭಿಃ ಸ್ವಸಮಾಽಽತ್ಮಭಿಃ ।
ಚಿತ್ರವೀರ್ಯಾಭಿರಭಿತಃ ಸಂವೃತಾ ಮಂತ್ರಿಣೀ ಸ್ಥಿತಾ ॥೮೮॥

ವಾರಾಹ್ಯಪಿ ಮಹಾಭೀಮವಿಕಾರಾಕೃತಿನಾಮಭಿಃ ।
ಶಕ್ತಿಭಿರ್ವಟುಕಾಽಽದ್ಯೈಶ್ಚ ಸಂಯುತಾಽತಿರುಷಾಽನ್ವಿತಾ ॥೮೯॥

ನಾಯಿಕೆಯು ಮಹಾಶಕ್ತಿಗಳು ಕೂರುವುದಕ್ಕೆ ಬೇಕಾದ ಆನೆಗಳನ್ನೂ ಕುದುರೆಗಳನ್ನೂ ಲೆಕ್ಕವಿಲ್ಲದಷ್ಟು ಸೃಷ್ಟಿಮಾಡುತ್ತಿರುತ್ತಾಳೆ. ॥೮೪॥

ಈ ಬಾಲಾದೇವಿಯ ಪಕ್ಕದಲ್ಲಿರುವ ಬಹಳ ಬಲಿಷ್ಠರಾದ ಶಕ್ತಿಗಳಿಬ್ಬರು ವಾಹನಗಳನ್ನು ಹತೋಟಿಯಲ್ಲಿಟ್ಟುಕೊಂಡಿರುತ್ತಾರೆ. ಅನಂತರ ಲಲಿತಾದೇವಿಯ ಹಿಂಭಾಗದಲ್ಲಿ ಈ ಬಾಲಾದೇವಿಯು ದೊಡ್ಡ ರಥದಲ್ಲಿ ಕುಳಿತಿರುತ್ತಾಳೆ. ॥೮೫॥

ಶ್ರೀಮಹಾದೇವಿಯಾದ ಲಲಿತಾದೇವಿಯು ಒಂಬತ್ತು ವಿಧವಾದ ಅಪರಿಮಿತವಾದ ಶಕ್ತಿ, ಕಠಿಣತೆ, ಶೌರ್ಯ ಮುಂತಾದ್ದರಿಂದ ಕೂಡಿರುವ ಆವರಣಶಕ್ತಿಗಳಿಂದ ಕೂಡಿದ್ದಾಳೆ. ॥೮೬॥

ಆಕೆಯ ಎರಡು ಪಕ್ಕಗಳಲ್ಲಿಯೂ ದಂಡಗಳನ್ನು ಹಿಡಿದಿರುವ ಶಕ್ತಿಗಳು ಕೂತಿರುವ ಎರಡು ರಥಗಳಲ್ಲಿ ಪ್ರತ್ಯೇಕವಾಗಿ ಅತ್ಯಂತ ಆಶ್ಚರ್ಯಕರವಾದ ಪರಾಕ್ರಮವುಳ್ಳ ಮಂತ್ರನಾಥಾ ದಂಡಧರಾದೇವಿಯರಿದ್ದಾರೆ. ॥೮೭॥

ಮಂತ್ರಿಣೀದೇವಿಯು ತನಗೆ ಸಮರಾದ ಆಶ್ಚರ್ಯಕರವಾದ ವೀರ್ಯವುಳ್ಳ ಅನೇಕ ಕೋಟಿ ಮಾತಂಗಕನ್ಯೆಯರಿಂದ ಸುತ್ತಲೂ ಕೂಡಿದ್ದಾಳೆ. ॥೮೮॥

ಬಹಳ ಭಯಂಕರವಾದ ವಿಕಾರವಾದ ಆಕಾರ ಮತ್ತು ಹೆಸರುಗಳುಳ್ಳ ಶಕ್ತಿಗಳು ಮತ್ತು ವಟುಕಾ ಮುಂತಾದ ಶಕ್ತಿಗಳು ಇವರಿಂದ ಕೂಡಿದವಳಾಗಿ ವಾರಾಹೀದೇವಿಯು ಬಹಳ ಕೋಪದಿಂದ ಕೂಡಿದ್ದಾಳೆ. ॥೮೯॥

ಸರ್ವತ್ರ ಶಕ್ತಿಸೇನಾಸು ನ ಮಯಾ ಕ್ವಾಽಪಿ ಲಕ್ಷಿತಮ್ ।
ಯತ್ರ ತೇ ವಧವೃತ್ತಾಂತ ಸಂಗತಿರ್ನ ಹಿ ಸಂಸ್ತುತಾ ॥೯೦॥

ತತ್ರೈಕಾಽಪ್ಯವರಾ ಶಕ್ತಿಃ ಸರ್ವಮಸ್ಮದ್ಬಲಂ ಕ್ಷಣಾತ್ ।
ನಾಶಯೇದಿತಿ ಮೇ ಬುದ್ಧಿಃ ವ್ಯವಸಾಯಂ ಸಮಾಸ್ಥಿತಾ ॥೯೧॥

ಶತಕೋಟಿಪರಾರ್ಧಾನಾಂ ಕೋಟ್ಯರ್ಬುದಶತಾಽತ್ಮಿಕಾ ।
ಸೇನೈವಂ ಶಕ್ತಿನಿಚಿತಾ ದೈತ್ಯರಾಜ ವದಾಮಿ ತೇ ॥೯೨॥

ಶಕ್ತಿರನ್ಯತಮಾ ತೇಷು ಬಲೇ ವೀರ್ಯೇ ಚ ವಿಕ್ರಮೇ ।
ಸರ್ವಾನ್ ದೈತ್ಯಗಣಾನಸ್ಮಾನ್ ಅತಿತಿಷ್ಠತಿ ಸರ್ವಥಾ ॥೯೩॥

ಇತ್ಯುಕ್ತ್ವಾ ದೈತ್ಯರಾಜಂ ತಂ ಪ್ರಣಿಪತ್ಯ ಕೃತಾಂಜಲಿಃ ।
ವಿದ್ಯುನ್ಮಾಲೀ ಸಮಭವತ್ತೂಷ್ಣೀಂ ದೈತ್ಯಸಭಾಗತಃ ॥೯೪॥

ಓ ರಾಕ್ಷಸರಾಜನೇ, ಶಕ್ತಿಗಳ ಸೈನ್ಯಗಳಲ್ಲಿ ನಿಮ್ಮ ಕೊಲ್ಲುವಿಕೆಯ ಸಮಾಚಾರವನ್ನು ಹೊಗಳಿ ಹೇಳದೇ ಇರುವ ಸೈನ್ಯಭಾಗವನ್ನೇ ನಾನು ನೋಡಲಿಲ್ಲವು! ॥೯೦॥

ಆ ಗುಂಪಿನಲ್ಲಿ ಕನಿಷ್ಠಳಾದ ಒಬ್ಬ ಶಕ್ತಿಯಾದರೂ ನಮ್ಮ ಸೈನ್ಯವನ್ನೆಲ್ಲವನ್ನೂ ಕ್ಷಣಕಾಲದಲ್ಲಿಯೇ ನಾಶಮಾಡಬಲ್ಲಳು ಎಂದು ನನಗೆ ನಿಶ್ಚಯವಾಗಿ ತೋರಿದೆ. ॥೯೧॥

ಓ ರಾಕ್ಷಸರಾಜನೇ, ನೂರುಕೋಟಿ, ಪರಾರ್ಧ, ಕೋಟ್ಯರ್ಬುದಗಳ ನೂರು ಇಷ್ಟು ಸಂಖ್ಯೆಯುಳ್ಳ ಅಪರಿಮಿತವಾದ ಶಕ್ತಿಗಳಿಂದ ದೇವಿಯ ಸೈನ್ಯವು ತುಂಬಿದೆ ಎಂದು ನಾನು ನಿಮಗೆ ನಿಖರವಾಗಿ ಹೇಳುತ್ತೇನೆ. ॥೯೨॥

ಅವರ ಪೈಕಿ ಪ್ರತಿ ಒಬ್ಬ ಶಕ್ತಿಯೂ ಬಲ, ವೀರ್ಯ, ಪರಾಕ್ರಮಗಳಲ್ಲಿ ರಾಕ್ಷಸರ ಗುಂಪಿನವರಾದ ನಮ್ಮನ್ನೆಲ್ಲರನ್ನೂ ಮೀರಿಸುವುದರಲ್ಲಿ ಸಂದೇಹವೇ ಇಲ್ಲ. ॥೯೩॥

ಈರೀತಿಯಲ್ಲಿ ಆ ರಾಕ್ಷಸನು ರಾಕ್ಷಸರಾಜನಾದ ಭಂಡನಿಗೆ ವಿಜ್ಞಾಪನೆ ಮಾಡಿಕೊಂಡು ಆತನಿಗೆ ಕೈಜೋಡಿಸಿ ನಮಸ್ಕರಿಸಿ ಆ ದೈತ್ಯ ಸಭೆಯಲ್ಲಿ ಸುಮ್ಮನಾದನು. ॥೯೪॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಚಾರವಾಕ್ಯಂನಾಮ ಏಕಷಷ್ಟಿತಮೋಽಧ್ಯಾಯಃ

ಎಂಬಲ್ಲಿಗೆ ಇತಿಹಾಸ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ ಲಲಿತಾಮಾಹಾತ್ಮ್ಯಖಂಡದಲ್ಲಿ " ಗೂಢಚಾರನ ಅರಿಕೆಯ ಮಾತು " ಎಂಬ ಅರವತ್ತೊಂದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ದ್ವಿಷಷ್ಟಿತಮೋಽಧ್ಯಾಯಃ ||

ಅರವತ್ತೆರಡನೆಯ ಅಧ್ಯಾಯವು

ಅಥ ಕ್ಷಣಾದಮಿತ್ರಘ್ನಃ ಪ್ರಾಪ್ತೋ ದೈತ್ಯಸಭಾಽಂತರಮ್ ।
ಭಂಡಾಸುರಾಂಘ್ರ್ಯೋರಪತತ್ ಭಯವಿಹ್ವಲಿತಾಂತರಮ್(ಃ) ॥೧॥

ಆಶ್ವಸ್ತಃ ಪ್ರಾಹ ಸಚಿವೈಃ ಪೃಷ್ಟೋ ವೃತ್ತಂ ಪ್ರವೇಪಿತಃ ।
ಮಹಾರಾಜ ತ್ವದಾಜ್ಞಪ್ತೋ ಗತಃ ಶಕ್ತಿಮಹಾಚಮೂಮ್ ॥೨॥

ಪ್ರವಿಶ್ಯ ಶಕ್ತಿಭಿಸ್ತಾಭಿಃ ಗೃಹೀತೋ ಬಲವತ್ಕ್ಷಣಾತ್ ।
ನ ಮೇ ವೀರ್ಯಂ ಬಲಂ ನಾಽಪಿ ಬಭೌ ಶಕ್ತ್ಯಗ್ರತಃ ಕ್ವಚಿತ್ ॥೩॥

ಅನಂತರದಲ್ಲಿ ಕ್ಷಣಕಾಲದಲ್ಲಿಯೇ ಅಮಿತ್ರಘ್ನನು ಆ ರಾಕ್ಷಸ ಸಭೆಯೊಳಕ್ಕೆ ಬಂದನು ಮತ್ತು ಭಯದಿಂದ ಕಳವಳ ಹೊಂದಿದ ಮನಸ್ಸುಳ್ಳವನಾಗಿ ಭಂಡರಾಕ್ಷಸನ ಚರಣಗಳಿಗೆ ಎರಗಿದನು. ||೧||

ಮಂತ್ರಿಗಳು ಸಮಾಧಾನಮಾಡಲು ಅವನು ಅವರು ಪ್ರಶ್ನೆಗೆ ಉತ್ತರವನ್ನು ಕೊಡಲು ನಡುಗುತ್ತಾ ಅಲ್ಲಿಯ ಸಮಾಚಾರವನ್ನು ಹೇಳಲು ಪ್ರಾರಂಭಿಸಿದನು. ಓ ಮಹಾರಾಜನೇ, ನಿನ್ನ ಅಪ್ಪಣೆಯ ಪ್ರಕಾರ ನಾನು ಶಕ್ತಿಯ ಮಹಾಸೈನ್ಯದೊಳಕ್ಕೆ ಪ್ರವೇಶಿಸಿದೆನು. ||೨||

ನಾನು ಪ್ರವೇಶಿಸಿದ ಕೂಡಲೇ ಶಕ್ತಿಗಳು ನನ್ನನ್ನು ಬಲವಾಗಿ ಹಿಡಿದುಕೊಂಡರು. ನನ್ನ ವೀರ್ಯಶಕ್ತಿಯೆಲ್ಲವೂ ಶಕ್ತಿದೇವಿಯರ ಮುಂದೆ ಉಪಯೋಗವಿಲ್ಲದಂತಾದುವು ! ||೩||

ರವಿಪ್ರಭಾನಿಮಗ್ನಸ್ಯ ಖದ್ಯೋತಸ್ಯೇವ ಸುಪ್ರಭಾ ।
ಕ್ಷಣೇನ ತಾಸಾಂ ಗ್ರಹಣಾದ್ವಿಸಂಜ್ಞೋಽಭವಮುಂಜಸಾ ॥೪॥

ಅಥ ನೀತೋ ದಂಡನಾಥಾ ಸವಿಧಂ ಮೃತವತ್ಸ್ಥಿತಃ ।
ಸಾ ಕುಲಾಽದ್ರಿರಿವೋನ್ನಮ್ರಾ ಕ್ರೋಡಾಽಸ್ಯಾ ಕಾಂಚನಪ್ರಭಾ ॥೫॥

ಕ್ರೋಧಾಗ್ನಿಮುದ್ಗಿರಂತೀವ ಸುನೇತ್ರೈರ್ಘರ್ಘರಾಽರವಾ ।
ತಾದೃಗ್ವಿಧಂ ಶಕ್ತಿಗಣಂ ತಸ್ಯಾಃ ಕ್ರೋಧಪ್ರದೀಪಿತಂ ॥೬॥

ದೃಷ್ಟ್ವಾಽಹಮುಭವಂ ಭೂಯಃ ಶ್ವಸಿತುಂ ಚಾಽಪಿ ನೋ ಪ್ರಭುಃ ।
ತಸ್ಯಾ ನಿಯೋಗಾನ್ನೀತೋಽಹಂ ಶಕ್ತಿಭಿರ್ಮಂತ್ರಿಣೀ ಪುರಃ ॥೭॥

ಸೂರ್ಯನ ತೇಜಸ್ಸಿನ ಮುಂದೆ ಮಿಂಚಿನ ಹುಳುವು ಹೇಗೆ ಪ್ರಕಾಶಿಸಲಾರದೋ ಹಾಗೆ ಅವರು ನನ್ನನ್ನು ಹಿಡಿದುಕೊಂಡ ತತ್‌ಕ್ಷಣದಲ್ಲಯೇ ನಾನು ಶಕ್ತಿಹೀನನಾಗಿ ಮೂರ್ಛೆಹೊಂದಿದೆನು! ॥೪॥

ಅನಂತರದಲ್ಲಿ ಅವರು ನನ್ನನ್ನು ದಂಡನಾಯಿಕೆಯ ಹತ್ತಿರಕ್ಕೆ ಕರೆದುಕೊಂಡು ಹೋದರು. ಆಕೆಯ ಮುಂದೆ ನಾನು ಸತ್ತವನಂತೆ ನಿಂತಿದ್ದೆ. ಅವಳು ಕುಲಪರ್ವತದಂತೆ ಉದ್ದವಾಗಿಯೂ, ಹಂದಿಯ ಮುಖವುಳ್ಳವಳಾಗಿಯೂ, ಚಿನ್ನದಂತೆ ಕಾಂತಿಯುಕ್ತಳಾಗಿಯೂ ಇದ್ದು ನನ್ನನ್ನು ಕೋಪದಿಂದ ದೃಷ್ಟಿಸಿ ನೋಡಿದಳು. ॥೫॥

ಅವಳು ಕೋಪವೆಂಬ ಬೆಂಕಿಯನ್ನು ಹೊರಗೆಡುಹುವಳೋ ಎಂಬಂತಿದ್ದು, ದೊಡ್ಡ ಕಣ್ಣುಗಳು ಮತ್ತು ಘರ್ಘರ ಎಂಬ ಶಬ್ದವುಳ್ಳವಳೂ ಆಗಿದ್ದಳು. ಅಂಥಾ ಸ್ವರೂಪಗಳಿಂದಲೇ ಕೂಡಿದ, ಆಕೆಯ ಕೋಪದಿಂದ ಉರಿಯುತ್ತಿರುವಂತೆ ಕಾಣುವ, ಶಕ್ತಿದೇವತೆಗಳ ಸಮೂಹವನ್ನೂ ನಾನು ನೋಡಿದೆನು. ॥೬॥

ಇವರನ್ನೆಲ್ಲರನ್ನೂ ನೋಡಿ ನಾನು ಉಸಿರುಬಿಡಲೂ ಸಮರ್ಥನಾಗಲಿಲ್ಲ. ಆಕೆಯ ಅಪ್ಪಣೆಯಂತೆಯೇ ಆ ಶಕ್ತಿದೇವಿಯರು ನನ್ನನ್ನು ಮಂತ್ರಿಣಿಯ ಮುಂದುಗಡೆಗೆ ಕರೆದುಕೊಂಡು ಹೋದರು. ॥೭॥

ಸಾ ದೃಷ್ಟ್ವಾ ಮಂತ್ರಿಣೀ ದೇವೀ ತಾಪಿಂಛದಲಸನ್ನಿಭಾ ।
ಸೌಂದರ್ಯಕುಲಸಾರಾಂಗೀ ಪೂರ್ಣತಾರುಣ್ಯಗರ್ವಿತಾ ॥೮॥

ಮಂದಸ್ಮಿತಮುಖೀ ಪಾನಮದಮಾದ್ಯದ್ವಿಲಾಸಿನೀ ।
ಗೀತಹಾಸ್ಯಪರಾ ನಿತ್ಯಂ ವೀಣಾವಾದನನಿಷ್ಠಿತಾ ॥೯॥

ತಸ್ಯಾಃ ಪ್ರಸನ್ನನೇತ್ರಾಽಬ್ಜಾನ್ಮೃತವರ್ಷಾಽಭಿಜೀವಿತಃ ।
ಅನ್ವವೇಕ್ಷಮಹಂ ಸರ್ವಸೌಭಾಗ್ಯೈಕ ಸಮಾಶ್ರಯಾಂ ॥೧೦॥

ತಯಾಽನುಯುಕ್ತೋ ನಿಖಿಲಮವದಂ ತವ ಭಾಷಿತಂ ।
ತಯಾ ನೀತೋ ಮಹಾರಾಜ್ಞ್ಯಾಃ ಸಮಕ್ಷಮಹಮಾಶ್ವಥ ॥೧೧॥

ಹೊಂಗೆಯ ಹೂವಿಗೆ ಸಮಾನವಾದ ಸೌಂದರ್ಯರಾಶಿಯ ಸಾರದಂತಿರುವ ಅವಯವಗಳುಳ್ಳ, ಪೂರ್ಣಯೌವನದಿಂದ ಗರ್ವಪಡುತ್ತಿದ್ದ, ಆ ಮಂತ್ರಿಣೀದೇವಿಯು ನನ್ನನ್ನು ನೋಡಿದಳು. ॥೮॥

ಈಕೆಯು ಮುಗುಳ್ನಗೆಯುಳ್ಳ ಮುಖವುಳ್ಳವಳಾಗಿಯೂ, ಮದ್ಯಪಾನದಿಂದ ಮದಿಸಿರುವ ವಿಲಾಸಗಳುಳ್ಳವಳಾಗಿಯೂ, ಸಂಗೀತ, ಹಾಸ್ಯ, ಇವುಗಳಲ್ಲಿ ಆಸಕ್ತಳಾಗಿಯೂ, ಯಾವಾಗಲೂ ವೀಣೆಯನ್ನು ಬಾರಿಸುವುದರಲ್ಲಿ ತೊಡಗಿದವಳಾಗಿಯೂ ಇದ್ದಳು. ॥೯॥

ಆಕೆಯು ತನ್ನ ನಿರ್ಮಲವಾದ ಕಮಲದಂತಿರುವ ಕಣ್ಣುಗಳಿಂದ ಹೊರಗೆ ಬರುತ್ತಿರುವ ಅಮೃತದ ಪ್ರವಾಹದಂತಿರುವ ಎಲ್ಲಾ ಭಾಗ್ಯಕ್ಕೂ ಆಶ್ರಯವಾಗಿರುವ, ಕಟಾಕ್ಷಗಳಿಂದ ನನ್ನನ್ನು ನೋಡಿದಳು. ॥೧೦॥

ಅವಳು ಪ್ರಶ್ನಿಸಲಾಗಿ ನೀವು ಹೇಳಿದ್ದುದನ್ನೆಲ್ಲವನ್ನೂ ನಾನು ಅವಳಿಗೆ ವಿಜ್ಞಾಪಿಸಿಕೊಂಡೆನು. ಕೂಡಲೆ ಆಕೆಯು ನನ್ನನ್ನು ಮಹಾರಾಣಿಯಾದ ದೇವಿಯ ಹತ್ತಿರಕ್ಕೆ ಕರೆದುಕೊಂಡು ಹೋದಳು. ॥೧೧॥

ಸಾ ದೃಷ್ಟ್ವಾ ಲಲಿತಾ ರಾಜ್ಞೀ ಮಹಾವಿಭವ ಸಂಶ್ರಯಾ ।
ಸಂದೇಶಂ ವಾಚಯನ್ಮಹ್ಯಂ ಯತ್ತತ್ತೇ ಮಂತ್ರಿಣೀ ಮುಖಾತ್॥೧೨॥

ವಕ್ಷ್ಯಾಮಿ ಶೃಣು ದೈತ್ಯೇಶ ಸಾವಧಾನೇನ ಚೇತಸಾ ।
ಬ್ರೂಯಾಸ್ತ್ವಂ ಭಂಡದೈತ್ಯೇಶಂ ಜೀವನೇ ಯದಿ ತೇ ಮತಿಃ ॥೧೩॥

ತ್ರಿಲೋಕೀಂ ವಿಸೃಜೇಂದ್ರಾಯ ಶರಣಂ ಕುರು ಮಾತರಂ ।
ನಿವಸ ತ್ವಂ ಪರೀವಾರಯುತಃ ಪಾತಾಲಸದ್ಮನಿ ॥೧೪॥

ಇಂದ್ರೇಣ ಸಂಗತೋ ಭೂಯಾಃ ಪುತ್ರಾಮಾತ್ಯಾದಿಸಂಯುತಃ ।
ಅಕೃತ್ವೈವಂ ನ ತೇ ಮೋಕ್ಷೋ ಲೋಕಾಂತರಗತಸ್ಯಚ ॥೧೫॥

ಇಂದ್ರಶತ್ರು ಮಹಂ ತ್ವಾಂ ತು(ನ)ವಿನೇಷ್ಯಾಮ್ಯಾತ್ಮಸಂಶ್ರಯಾಮ್ ।
ಇತಿ ತ್ವಯಾ ತತ್ರ ಗತ್ವಾ ವಕ್ತವ್ಯೋ ಭಂಡದಾನವಃ ॥೧೬॥

ಆಗ ನಾನು ಮಹಾವೈಭವಕ್ಕೆ ಆಶ್ರಯಳಾದ ಮಹಾರಾಣಿಯಾದ ಲಲಿತಾ ದೇವಿಯನ್ನು ನೋಡಿದೆನು. ಆಕೆಯು ತನ್ನ ಮಂತ್ರಿಣಿಯ ಮುಖದಿಂದ ತನ್ನ ಸಂದೇಶವನ್ನು ಈರೀತಿಯಾಗಿ ತಿಳಿಸಿದಳು. ||೧೨||

ಎಲೈ ರಾಕ್ಷಸಶ್ರೇಷ್ಠನೇ, ಏಕಾಗ್ರಮನಸ್ಸಿನಿಂದ ಕೇಳು. ಅನಂತರ ಈ ವಿಷಯವನ್ನು ನಿಮ್ಮ ರಾಜನಿಗೆ ಈರೀತಿಯಲ್ಲಿ ತಿಳಿಸು. "ಎಲೈ ರಾಕ್ಷಸರಾಜನೇ, ನಿನಗೆ ಬದುಕಬೇಕೆಂಬ ಇಷ್ಟವಿದ್ದರೆ ಕೂಡಲೇ ದೇವಿಗೆ ಶರಣಾಗತನಾಗು. ||೧೩||

ಎಲೈ ರಾಕ್ಷಸರಾಜನೇ, ಇಂದ್ರನಿಗೆ ಮೂರು ಲೋಕಗಳನ್ನೂ ಬಿಟ್ಟುಕೊಡು. ಲೋಕಮಾತೆಯಾದ ದೇವಿಗೆ ಶರಣಾಗತನಾಗು. ನೀನು ನಿನ್ನ ಪರಿವಾರಗಳಿಂದ ಕೂಡಿದವನಾಗಿ ಪಾತಾಳಲೋಕದಲ್ಲಿ ವಾಸಿಸು. ||೧೪||

ನೀನು ನಿನ್ನ ಮಕ್ಕಳು ಮಂತ್ರಿಗಳು ಮೊದಲಾದವರೊಡನೆ ಇಂದ್ರನೊಂದಿಗೆ ಸ್ನೇಹದಿಂದ ಸೇರು. ಹಾಗೆ ಮಾಡದಿದ್ದರೆ ನೀನು ಮತ್ತಾವ ಲೋಕಕ್ಕೆ ಹೋದರೂ ಬಿಡುಗಡೆ ಇಲ್ಲವೆಂದು ತಿಳಿ. ||೧೫||

ಹಾಗಿಲ್ಲದಿದ್ದರೆ ಇಂದ್ರನಿಗೆ ಶತ್ರುವಾದ ನಿನ್ನನ್ನು ನನ್ನನ್ನೇ ಆಶ್ರಯಿಸಬೇಕಾಗುವಂತೆ ಶಿಕ್ಷಿಸಿ ಮಾಡುವೆನು!" ಈರೀತಿಯಾಗಿ ನೀನು ಅಲ್ಲಿಗೆ ಹೋಗಿ ಭಂಡರಾಕ್ಷಸನಿಗೆ ತಿಳಿಸುವವನಾಗು. ||೧೬||

ತದಂತರೇ ಶಕ್ತಿರೇಕಾ ಶ್ಯಾಮಾ ತುರಗಸಂಶ್ರಯಾ।
ಕರಾಳಕರವಾಲೋದ್ಯತ್ಕರಾ ತತ್ರ ಸಮಾಯಯೌ ॥೧೭॥

ಅವರುಹ್ಯ ಸ್ವವಾಹಾತ್ಸಾ ಪ್ರಣಮ್ಯ ಲಲಿತಾಽಂಬಿಕಾಂ।
ಮಂತ್ರನಾಥಾಂ ಚ ವೃತ್ತಾಂತಂ ಬಭಾಷೇ ಸಾಽನುಯೋಜಿತಾ ॥೧೮॥

ಪ್ರೇಷಿತಾ ಭಂಡದೈತ್ಯಸ್ಯ ವಾಹಿನ್ಯಾಂ ನಗರೇಽಪಿ ಚ।
ಮದ್ಭೃತ್ಯಾಃ ಶಕ್ತಯೋ ಗತ್ವಾ ದೃಷ್ಟ್ವಾ ಸರ್ವಂ ಸಮಾಗತಾಃ॥೧೯॥

ತಾಭಿರ್ವಿಭಾವಿತಂ ಸರ್ವಂ ಸೈನ್ಯಂ ನಗರಮೇವ ಚ।
ಇತಿ ವೃತ್ತಂ ತಯಾ ಪ್ರೋಕ್ತಂ ಸರ್ವಮಸ್ಮತ್ಸಮಾಶ್ರಯಮ್ ॥೨೦॥

ದೈತ್ಯಾನಾಂ ಸೈನಿಕಾನಾಂ ಚ ಮಂತ್ರಿಣಾ ಮಾಯುಧಸ್ಯ ಚ।
ಸಂಖ್ಯಾನಂ ವಾಹನಾನಾಂ ಚ ಕೋಶಾನಾಂ ದುರ್ಗರಕ್ಷಿಣಾಂ ॥೨೧॥

ಈ ಮಧ್ಯದಲ್ಲಿ ಶ್ಯಾಮಲವರ್ಣದ ಕುದುರೆಯ ಮೇಲೆ ಕುಳಿತಿರುವ ಕತ್ತಿಯನ್ನು ಕೈಯಲ್ಲಿ ಎತ್ತಿ ಹಿಡಿದುಕೊಂಡಿರುವ ಶಕ್ತಿದೇವಿಯೊಬ್ಬಳು ಅಲ್ಲಿಗೆ ಬಂದಳು. ॥೧೭॥

ಆಕೆಯು ತನ್ನ ವಾಹನದಿಂದ ಕೆಳಗಿಳಿದು ಬಂದು, ಲಲಿತಾಮಾತೆಯನ್ನು ನಮಸ್ಕರಿಸಿ ಪ್ರಶ್ನೆಮಾಡಿದ ಮಂತ್ರಿಣಿಯನ್ನು ಕುರಿತು ಸಮಾಚಾರವನ್ನು ಈರೀತಿಯಲ್ಲಿ ಹೇಳಿದಳು. ॥೧೮॥

ಭಂಡರಾಕ್ಷಸನ ಸೈನ್ಯಕ್ಕೆ ಕಳುಹಿಸಿದ್ದ ಮತ್ತು ಅವನ ಪಟ್ಟಣಕ್ಕೆ ಕಳುಹಿಸಿದ್ದ ನನ್ನ ಸೇವಕಿಯರಾದ ಶಕ್ತಿಯರು ಅಲ್ಲಿಗೆ ಹೋಗಿ ಎಲ್ಲವನ್ನೂ ನೋಡಿಕೊಂಡು ಬಂದಿದ್ದಾರೆ. ॥೧೯॥

ಭಂಡರಾಕ್ಷಸನ ಸೈನ್ಯವನ್ನೂ ಪಟ್ಟಣವನ್ನು ಇವರು ಪರಿಶೀಲಿಸಿ ಬಂದಿದ್ದಾರೆ. ಈರೀತಿಯಲ್ಲಿ ನಮಗೆ ಸಂಬಂಧಪಟ್ಟ ಸಮಸ್ತ ವಿಚಾರವನ್ನೂ ಆಕೆಯು ಮಂತ್ರಿಣೀ ದೇವೀಗೆ ತಿಳಿಸಿದಳು. ॥೨೦॥

ಆಕೆಯು ಮಂತ್ರಿಣೀ ದೇವೀಗೆ ರಾಕ್ಷಸರ ಸೈನಿಕರ, ಮಂತ್ರಿಗಳ, ಆಯುಧಗಳ, ವಾಹನಗಳ, ಕೋಶಗಳ, ದುರ್ಗರಕ್ಷಕರ, ಒಟ್ಟು ಲೆಕ್ಕವನ್ನೂ ಹೇಳಿದಳು! ॥೨೧॥

ಪುತ್ರಾಣಾಂ ತೇ ತತ್ಸುತಾನಾಂ ತತ್ಸುತಾನಾಂ ಚ ಸರ್ವಶಃ ।
ನ ತಯಾಽವಿದಿತಂ ಕಿಂಚಿನ್ನಾಸ್ತಿ ಬಾಹ್ಯಾಂತರೇಽಪಿ(ಷು) ಚ ॥೨೨॥

ಸ್ತ್ರಿಯಃ ಸರ್ವಾಃ ಸುವಿದಿತಾಸ್ತಾಸಾಂ ಚಾಽಪಿ ಪ್ರಭಾಷಿತಂ ।
ಮಂತ್ರಸ್ತೇ ಮಂತ್ರಿತೋಽಪ್ಯತ್ರ ನಾಸ್ಮಾಭಿರ್ವಿದಿತೋಽಪಿಯಃ ॥೨೩॥

ತಯಾ ಪ್ರೋಕ್ತೋಽಥ ವಚನಂ ವೃತ್ತಂ ಚಾಪಿ ಪೃಥಕ್ಪೃಥಕ್ ।
ಚಿತ್ರಂ ಮನ್ಯೇ ಚಿರಾದತ್ರ ವಸನ್ನವಿದಿತಂ ಚ ಯತ್ ॥೨೪॥

ತತ್ಸರ್ವಂ ಚ ತಯಾ ಪ್ರೋಕ್ತಂ ಯದ್ಯಥಾ ಸಮವಸ್ಥಿತಂ ।
ಯತ್ತ್ವಯಾಽಪ್ಯತ್ರ ನೋ ಜ್ಞಾತಂ ತತ್ತ್ವಯಾ ಕಥಿತಂ ನನು ॥೨೫॥

ಮನ್ಯೇಽಹಂ ತದ್ಬಲಂ ದೇವ್ಯಾ ಅಜೇಯಂ ದೈತ್ಯಪುಂಗವೈಃ ।
ಏಕಾಽಪಿ ಶಕ್ತಿರವರಾ ಸರ್ವಾನ್ನೋ ನಾಶಯೇತ್ ಕ್ಷಣಾತ್ ॥೨೬॥

ರಾಕ್ಷಸರ ಮಕ್ಕಳ, ಅವರ ಮಕ್ಕಳ ಮಕ್ಕಳ ವಿಷಯವಾಗಿ ಹೀಗೆ ಸಮಸ್ತ ವಿಚಾರವೂ ಆಕೆಗೆ ಗೊತ್ತಾಗಿದೆ. ಆಕೆಗೆ ತಿಳಿಯದ ನಮಗೆ ಸಂಬಂಧಪಟ್ಟ ಒಳಗಿನ ಅಥವಾ ಹೊರಗಿನ ವಿಚಾರವಾವುದೂ ಇಲ್ಲವು! ॥೨೨॥

ನಮ್ಮ ಎಲ್ಲಾ ಸ್ತ್ರೀಯರ ವಿಷಯವೂ, ಅವರ ಮಾತುಕಥೆಯೂ, ನಮಗೆ ಗೊತ್ತಿಲ್ಲದ ವಿಷಯವೂ, ನೀವು ಇಲ್ಲಿ ಯೋಚಿಸಿದ ಮಂತ್ರಾಲೋಚನೆಯೂ ಆಕೆಗೆ ಗೊತ್ತಾಗಿದೆ. ॥೨೩॥

ಆಕೆಯು ಮಂತ್ರಿಣೀದೇವಿಗೆ ಪ್ರತಿಯೊಂದು ವಿಚಾರವನ್ನೂ ಬಿಡಿಸಿಬಿಡಿಸಿ ಹೇಳಿದಳು. ನಾವು ಇಲ್ಲೇ ವಾಸಮಾಡುತ್ತಿದ್ದರೂ ಆ ವಿಷಯಗಳು ನಮಗೆ ಗೊತ್ತಾಗದಿದ್ದುದ್ದು, ಅವರಿಗೆ ಗೊತ್ತಾಗಿರುವುದೂ ಆಶ್ಚರ್ಯಕರವಾಗಿದೆ. ॥೨೪॥

ಇಲ್ಲಿ ಏನೇನು ನಡೆಯುತ್ತಿದೆಯೋ ಅವುಗಳನ್ನು ಹಾಗೆಯೇ ಎಲ್ಲವನ್ನೂ ಆಕೆಯು ಮಂತ್ರಿಣಿಗೆ ತಿಳಿಸಿದ್ದಾಳೆ. ನೀವೇ ಹೇಳಲಾಗದಿದ್ದ ವಿಷಯಗಳನ್ನೂ ನಿಮ್ಮ ಮೂಲಕ ಯಾವುದೋ ಒಂದು ರೀತಿಯಿಂದ ತಿಳಿದುಕೊಂಡು ಬಿಟ್ಟಿದ್ದಾಳೆ. ॥೨೫॥

ಆದ್ದರಿಂದ ರಾಕ್ಷಸಶ್ರೇಷ್ಠರೂ ಕೂಡ ದೇವಿಯ ಸೈನ್ಯವನ್ನು ಜಯಿಸಲಾರರೆಂದು ನನಗೆ ತೋರುತ್ತದೆ. ಅವರ ಪೈಕಿ ಕನಿಷ್ಠಳಾದ ಶಕ್ತಿಯೊಬ್ಬಳಾದರೂ ನಮ್ಮನ್ನೆಲ್ಲರನ್ನೂ ಕ್ಷಣಕಾಲದಲ್ಲಿಯೇ ನಾಶಮಾಡುವಳೆಂದು ತೋರುವುದು. ॥೨೬॥

ದೈತ್ಯೇಶ್ವರೋಽಹಂ ತೇ ಸೈನ್ಯೇ ಬಲಿಷ್ಠೋನವರೋ ನನು ।
ಇಂದ್ರಾದಯೋಽಪಿ ವಿಜಿತಾ ಮಯಾ ಭೂಯಃ ಸಮಾಗಮೇ ॥೨೭॥

ಸೋಽಹಂ ಪ್ರವಿಷ್ಟಮಾತ್ರೋಽಪಿ ಶಕ್ತ್ಯಾ ಸಾಮಾನ್ಯಯಾ ನನು ।
ಗೃಹೀತೋ ಲೀಲಯೈವಾಽಽಶು ಹರಿಣಾ ಮೃಗಶಾಬವತ್ ॥೨೮॥

ಯಥಾ ಬಾಲಾಃ ಕ್ರೀಡನಕಂ ಆಚ್ಛಿದ್ಯಾಽನ್ಯಕರಸ್ಥಿತಂ ।
ಗೃಹ್ಣಂತ್ಯಹಂ ತಥಾ ತಾಭಿರ್ಗೃಹೀತೋ ಬಲವಾನಪಿ ॥೨೯॥

ನ ಮೇಽಭೂತ್ಸ್ಪಂದಿತುಂ ಶಕ್ತಿಃ ಕ್ವ ನ ವಿಮೋಕ್ಷಣೇ ತದಾ ।
ಅಶಕ್ಯಂ ಸರ್ವಥಾ ದೈತ್ಯೈರ್ಜೇತುಂ ನಾಸ್ತ್ಯತ್ರ ಸಂಶಯಃ ॥೩೦॥

ಇತ್ಯುಕ್ತ್ವಾ ವಿರರಾಮಾಽಥ ದೈತ್ಯೋ ದೈತ್ಯೇಶ್ವರಾಗ್ರತಃ ।
ಶ್ರುತ್ವೇತ್ಥಂ ದೈತ್ಯವಚನಂ ಭಂಡಃ ಸ್ವಾಂತರ ಚಿಂತಯತ್ ॥೩೧॥

ನಾನು ರಾಕ್ಷಸಸೈನ್ಯಭಾಗಕ್ಕೆ ಒಡೆಯನೂ ಬಲಿಷ್ಠರಲ್ಲಿ ಕಡಿಮೆ ಇಲ್ಲದವನೂ ಆಗಿದ್ದೇನಷ್ಟೆ? ನಾನು ಇಂದ್ರಾದಿಗಳನ್ನೂ ಪುನಃಪುನಃ ಯುದ್ಧದಲ್ಲಿ ಜಯಿಸಿದ್ದೇನಷ್ಟೆ. ॥೨೭॥

ಇಂಥಾ ನಾನು ಆಕೆಯ ಸೈನ್ಯವನ್ನು ಪ್ರವೇಶಿಸಿದ ಕೂಡಲೇ ನನ್ನನ್ನು ಸಾಮಾನ್ಯಳಾದ ಶಕ್ತಿಯೊಬ್ಬಳು ಅನಾಯಾಸವಾಗಿಯೇ, ಸಿಂಹವು ಜಿಂಕೆಯಮರಿಯನ್ನು ಹಿಡಿಯುವಂತೆ, ಹಿಡಿದುಬಿಟ್ಟಳು. ॥೨೮॥

ಹುಡುಗರು ಹೇಗೆ ಇತರರ ಕೈಯ್ಯಲ್ಲಿದ್ದ ಆಟದ ಸಾಮಾನನ್ನು ಕಿತ್ತುಕೊಳ್ಳುವರೋ ಹಾಗೆ, ಬಲಿಷ್ಠನಾದ ನನ್ನನ್ನು ಆ ಶಕ್ತಿಯರು ಹಿಡಿದುಬಿಟ್ಟರು. ॥೨೯॥

ಆಗ ನಾನು ಅಲ್ಲಾಡಲೂ ಸಮರ್ಥನಾಗಲಿಲ್ಲ. ಹಾಗಿರುವಾಗ ನನ್ನ ಬಿಡುಗಡೆ ಎಲ್ಲಿ ಬಂತು? ಆದ್ದರಿಂದ ರಾಕ್ಷಸರು ಸರ್ವಥಾ ಶಕ್ತಿಯ ಪಡೆಯವರನ್ನು ಜಯಿಸಲಾರರೆಂಬುದರಲ್ಲಿ ಸಂದೇಹವೇ ಇಲ್ಲ. ॥೩೦॥

ರಾಕ್ಷಸರಾಜನ ಮುಂದೆ ಆ ರಾಕ್ಷಸನು ಈ ರೀತಿಯಲ್ಲಿ ಸಮಾಚಾರವನ್ನು ತಿಳಿಸಿ ಸುಮ್ಮನಾದನು. ಆರಾಕ್ಷಸನ ಮಾತನ್ನು ಕೇಳಿದ ಭಂಡರಾಕ್ಷಸನು ತನ್ನೊಳಗೆ ಹೀಗೆ ಯೋಚಿಸಿದನು. ॥೩೧॥

ತ್ರಿಪುರಾದೇವಿಯು, ಆಕೆಯನ್ನು ಆಶ್ರಯಿಸಿರುವ ನನ್ನ ಮೇಲಿನ ಕೃಪೆಯಿಂದ, ನಾನು ಬಹಳ ಕಾಲದಿಂದಲೂ ಅಪೇಕ್ಷಿಸಿದ್ದ ಅನುಗ್ರಹವನ್ನು ನಿಜವಾಗಿಯೂ ಈಗ ತೋರಿದ್ದಾಳೆ! ॥೩೨॥

ನೂನಂ ಸಾ ತ್ರಿಪುರೇಶಾನೀ ಕೃಪಯಾ ಮಯಿ ಸಂಶ್ರಿತೇ ।
ಪ್ರಸಾದಮಕರೋದದ್ಯ ಚಿರಕಾಲಾಽಭಿಕಾಂಕ್ಷಿತಂ ॥೩೨॥

ಯತ್ತಯಾ ಲೋಕಮಾತ್ರೋಕ್ತಂ ತದದ್ಯಾಽ ವಿತಥಾಯಿತಮ್ ।
ಧನ್ಯೋಽಹಂ ತ್ರಿಪುರೇಶಾನೀಂ ದೃಷ್ಟ್ವಾಯುದ್ಧೇಽನುಭಾಷ್ಯಚ ॥೩೩॥

ತಚ್ಛಸ್ತ್ರಾಗ್ನಿಮಹಾಜ್ವಾಲಾ ನಿರ್ದಗ್ಧಕಲುಷಾಂಗಕಃ ।
ವ್ರಜಾಮಿ ತಲ್ಲೋಕಮಮುಂ ಮಹಾಸುಖಸಮಾಶ್ರಯಂ ॥೩೪॥

ಮಹಾಪಾಪಸಮುದ್ಭೂತೋ ದೇಹೋಽಯಂ ಪಾಪಸಂಶ್ರಯಃ ।
ದೈತ್ಯಸ್ವಭಾವವಿಹಿತಃ ಚಿರಭಾರಾಯಿತೋ ನನು ॥೩೫॥

ಯಥಾಽಽವಿಷ್ಟ ಗೃಹೀತೋ ಹಿ ಭಾರಂ ಕ್ಷಿಪ್ತ್ವಾಪಲಾಯತಿ ।
ತಥಾಽಹಂ ದುಖದಂ ದೇಹ ಮಮುಂಭಾರಂ ವಿಸೃಜ್ಯ ತು ॥೩೬॥

ಲೋಕಮಾತೆಯಾದ ಲಕ್ಷ್ಮಿಯು ಹಿಂದೆ ಹೇಳಿದ್ದುದು ಈಗ ನಿಜವಾಯಿತು! ಯುದ್ಧದಲ್ಲಿ ಆಕೆಯೊಂದಿಗೆ ಮಾತನಾಡುತ್ತಾ ಆಕೆಯನ್ನು ನೋಡುವ ನಾನೇ ಧನ್ಯನು. ||೩೩||

ಆಕೆಯ ಶಸ್ತ್ರಗಳ ಅಗ್ನಿಗಳ ಮಹಾಜ್ವಾಲೆಗಳು ನನ್ನ ಅವಯವಗಳನ್ನು ಸುಟ್ಟುಹಾಕಲು, ಮಹಾಸುಖಕ್ಕೆ ಕಾರಣವಾದ ಆಕೆಯ ಲೋಕವನ್ನೇ ಸೇರುವೆನು. ||೩೪||

ಈ ನನ್ನ ದೇಹವು ಪಾಪಕ್ಕೆ ಆಶ್ರಯವಾಗಿ ಮಹಾಪಾಪಗಳಿಂದಲೇ ಹುಟ್ಟಿದೆ. ಇದು ರಾಕ್ಷಸಸ್ವಭಾವದಿಂದ ಕೂಡಿ ಲೋಕಕ್ಕೆ ಭಾರವಾಗಿದೆ. ||೩೫||

ಹೇಗೆ ಕಟ್ಟಿಗೆ ಹೊರುವವನು ಬಹಳ ಭಾರವನ್ನು ಸಹಿಸಲಾರದೆ, ಅದನ್ನು ಇಳಿಕಿ ಪಲಾಯನಮಾಡುವನೋ ಹಾಗೆ, ನಾನು ದುಃಖವನ್ನು ಕೊಡುವ ಭಾರವಾದ ಈ ದೇಹವನ್ನು ಬಿಟ್ಟುಬಿಡುವೆನು! ||೩೬||

ಪಲಾಯಿಷ್ಯೇ ಸುಖಸ್ಥಾನಂ ನ ಮೇ ಖೇದೋಽತ್ರ ವಿದ್ಯತೇ ।
ನೂನಂ ವರ್ಷ ಸಹಸ್ರಾಣಾಂ ನಿಯುತ್ತೈರ್ದೇಹ ಏಷ ಮೇ ॥೩೭॥

ಸಂಪ್ರಾಪ್ತೋಽತ್ಯಂತಸುಖಿತಾಮಪಿ ಮೇ ನ ಹಿ ರೋಚತೇ ।
ತ ಏವ ಭೋಗಾಸ್ತದ್ರಾಜ್ಯಂ ತಾಃ ಸ್ತ್ರಿಯಃ ತಚ್ಚ ಸಂಗತಮ್ ॥೩೮॥

ಅನ್ವಹಂ ಸೇವಮಾನಸ್ಯ ಸರ್ವಂ ನೈರಸ್ಯಮಾಗತಮ್ ।
ನಿರ್ವಿಣ್ಣೋಽಹಂ ಧೃಡತರಮಸ್ಮಾತ್ಪರ್ಯುಷಿತಾತ್ಮನಃ ॥೩೯॥

ವಾಂಛಾಮಿ ನಾಶಂ ದೇಹಸ್ಯಾಽಽಮಯಂ ದೀರ್ಘಾಽಽಮಯೀ ಯಥಾ ।
ಪರಂತು ಮೇ ವಿರಹಿತಾಃ ಶೋಚಿಷ್ಯಂತಿ ಪ್ರಿಯಾ ಇಮೇ ॥೪೦॥

ನಾನು ಹೀಗೆ ದೇಹವನ್ನು ತ್ಯಜಿಸಿ ಸುಖಸ್ಥಾನವಾದ ದೇವಿಯ ಲೋಕಕ್ಕೆ ಹೋಗುವೆನು. ನನಗೆ ಈ ವಿಷಯದಲ್ಲಿ ದುಃಖವೇ ಇಲ್ಲ. ನಾನು ಸಹಸ್ರಾರು ವರ್ಷಗಳಿಂದ ಈ ಹೊರೆಯಾದ ದೇಹವನ್ನು ಪಾಪದಿಂದಲೇ ಹೊಂದಿದ್ದೆನು. ||೩೭||

ಬಹಳ ಸುಖವನ್ನು ನಾನು ಈ ದೇಹದ ಮೂಲಕ ಅನುಭವಿಸುತ್ತಿದ್ದಾಗ್ಯೂ ಇದರಲ್ಲಿ ನನಗೆ ಅಭಿರುಚಿಯಿರಲಿಲ್ಲ. ಏಕೆಂದರೆ, ನಾನು ಹಿಂದೆ ಅನುಭವಿಸಿದ್ದುದೇ ಆದ ಭೋಗಗಳು ಅದೇ ರಾಜ್ಯ, ಅದೇ ಸ್ತ್ರೀಯರು, ಅದೇ ಸಂಬಂಧ, ಈ ರೀತಿಯಾಗಿ ಒಂದೇವಿಧವಾಗಿ ದುಃಖಮಿಶ್ರಸುಖಾಭಾಸದ ಅನುಭವಗಳಾಗಿವೆ! ||೩೮||

ಹೀಗೆ ಪ್ರತಿದಿನವೂ ಅನುಭವಿಸುತ್ತಿರುವ ನನಗೆ ಎಲ್ಲದರಲ್ಲಿಯೂ ವಿರಕ್ತಿಯೇ ಉಂಟಾಗಿದೆ. ಜುಗುಪ್ಸೆಹೊಂದಿದ ಮನಸ್ಸುಳ್ಳ ನನಗೆ ಇವುಗಳೆಲ್ಲದರಿಂದಲೂ ದುಃಖವೇ ಉಂಟಾಗಿದೆ! ||೩೯||

ದೀರ್ಘಕಾಲ ರೋಗದಿಂದ ನರಳುವ ಮನುಷ್ಯನು ರೋಗದ ನಾಶವನ್ನು ಹೇಗೆ ಅಪೇಕ್ಷಿಸುವನೋ ಹಾಗೆ, ನಾನು ಈ ದೇಹ ನಾಶವನ್ನು ಅಪೇಕ್ಷಿಸುತ್ತಿರುವೆನು! ಆದರೆ ನನ್ನ ವಿಯೋಗದಿಂದ ನನಗೆ ಇಷ್ಟರಾದ ಈ ಜನರು ಮಾತ್ರ ದುಃಖಪಡುವರು! ||೪೦||

ತಥಾತ್ತೈರಪ್ಯಹಂ ಹೀನೋ ನ ವಿಂದಾಮಿ ಕ್ಷಣಂ ಸುಖಂ ।
ಆದೌ ನಾಽನಂತರಂ ನಾಽಪಿ ದುಃಖದೈವ ಮೃತಿರ್ಭವೇತ್ ॥೪೧॥

ತದೇತದ್ವಿಷಮಂ ಭಾತಿ ಕಥಂ ನಾರ್ತಿರ್ಭವೇನ್ಮಮ ।
ಏವಂ ಮೇ ತ್ರಿಪುರಾದೇವೀ ಕೃಪಾಂ ಕುರ್ಯಾದಭೀಪ್ಸಿತಂ ॥೪೨॥

ಯುಗಪದ್ಯದಿ ನೋ ಹನ್ಯಾತ್ಕ್ಷೇಮಂ ಮೇ ಪ್ರತಿಭಾತಿ ತತ್ ।
ಭಕ್ತವಾಂಛಾಸಮಧಿಕ ಫಲದಾ ಸಾ ನಿಸರ್ಗತಃ ॥೪೩॥

ಕುತೋ ನ ಪೂರಯೇದಿಷ್ಟಂ ಸಾ ನಿಜಾಂಘ್ರ್ಯಾಶ್ರಯಸ್ಯ ಮೇ ।
ಇತ್ಥಂ ವಿಚಿಂತ್ಯ ಮನಸಾ ನಮಸ್ಕೃತ್ಯ ಪರಾಂಬಿಕಾಂ ॥೪೪॥

ನಾಟ್ಯೇ ನಟ ಇವ ಸ್ವೈರಂ ಕ್ರೋಧಮಾಹಾರಯತ್ಪರಂ ।
ಧಿಗಸ್ತ್ವಧಮದೈತೇಯ ಕಥಂ ಮಮ ಸಮಕ್ಷತಃ ॥೪೫॥

ಹಾಗೆಯೇ ನಾನೂ ಕೂಡ ಅವರಿಲ್ಲದೆ ಕ್ಷಣಕಾಲವೂ ಸುಖವಾಗಿರಲಾರೆನು! ಆದ್ದರಿಂದ ಸಾವೆಂಬುದು ಅದಕ್ಕೆ ಮೊದಲಲ್ಲೂ ಅನಂತರದಲ್ಲಿಯೂ ದುಃಖವನ್ನೇ ಕೊಡುವುದಾಗಿರುತ್ತದೆ. ॥೪೧॥

ಆದ್ದರಿಂದ ಇದು ನನಗೆ ವಿರುದ್ಧವಾಗಿಯೇ ಕಾಣುತ್ತಿದೆ. ಹೀಗಿರುವಾಗ ತ್ರಿಪುರಾದೇವಿಯೇ ದಯೆಯಿಂದ ನನಗೆ ಇಷ್ಟವನ್ನುಂಟುಮಾಡುವುದಕ್ಕಾಗಿಯೂ, ಯಾವ ವಿಧವಾದ ಸಂಕಟವುಂಟಾಗದಿರುವಂತೆಯೂ, ನನ್ನ ಮೇಲೆ ಕೃಪೆಯನ್ನು ತೋರಿಸಿರಬೇಕು! ॥೪೨॥

ಆದ್ದರಿಂದ ದೇವಿಯು ನಮ್ಮನ್ನೆಲ್ಲರನ್ನೂ ಒಟ್ಟಿಗೆ ಏಕಕಾಲದಲ್ಲಿಯೇ ಕೊಂದರೆ ಕ್ಷೇಮವೆಂದು ತೋರುವುದು. ಆಕೆಯು ಸ್ವಾಭಾವಿಕವಾಗಿ ಭಕ್ತರ ಇಷ್ಟಾರ್ಥಗಳಿಗಿಂತಲೂ ಹೆಚ್ಚಾಗಿ ಫಲವನ್ನು ಕೊಡುವವಳಾಗಿದ್ದಾಳೆ. ॥೪೩॥
"ಆಕೆಯ ಪಾದವನ್ನೇ ಆಶ್ರಯಿಸಿರುವ ನನ್ನ ಮೇಲೆ ಕೃಪೆಯಿಟ್ಟು ಆಕೆಯು ನನ್ನ ಇಷ್ಟವನ್ನೇಕೆ ಪೂರ್ಣಮಾಡಬಾರದು?" ಎಂದು ಆಲೋಚಿಸಿ ಭಂಡ ರಾಕ್ಷಸನು ಶ್ರೀಮಾತೆಯಾದ ಆಕೆಗೆ ಮನಸ್ಸಿನಲ್ಲಿಯೇ ನಮಸ್ಕರಿಸಿದನು. ॥೪೪॥

ಆದರೆ ನಾಟಕದಲ್ಲಿ ನಟನ ಹಾಗೆ ಅವನು ಹೊರಗಡೆ ಸ್ವೇಚ್ಛೆಯಿಂದಲೇ ಹೆಚ್ಚಾದ ಕೋಪವನ್ನು ತೋರಿಸಿದನು.—"ಎಲೈ ರಾಕ್ಷಸನೇ, ನೀನು ನನ್ನ

ಅಪ್ರಿಯಾಂ ಪರಸಂಶ್ಲಾಘಾಂ ಕುರ್ವನ್ನಪಿ ನ ಲಜ್ಜಸೇ ।
ಪರಸಂಶ್ಲಾಘನಂ ಯತ್ತಲ್ಲೋಕೇ ಕಾಪುರುಷವ್ರತಂ ॥೪೬॥

ಪರಂ ತು ಬಲಿನಂ ಜ್ಞಾತ್ವಾ ನ ಶೂರಃ ಶ್ಲಾಘತೇ ಕ್ವಚಿತ್ ।
ಬಲೀ ವಾಽಸ್ಯ ಬಲೋ ವಾಽಪಿ ಶೂರಾಸ್ತತ್ರ ನ ಬಿಭ್ಯತಿ ॥೪೭॥

ಇತ್ಯುಕ್ತ್ವಾ ಖಡ್ಗಮುದ್ಗಮ್ಯ ಕ್ರುದ್ಧಃ ಕಾಲಮಹಾಽಹಿವತ್ ।
ವಮನ್ನಿವ ನೇತ್ರಮುಖಾತ್ ಕ್ರೋಧಕಾಕೋಲ ಪಾವಕಂ ॥೪೮॥

ನಿರ್ಯಯೌ ನಗರದ್ವಾರಾನ್ಮಹಾವಿಲ ಮುಖಾದಿವ ।
ಪಶ್ಯಂತು ದೈತ್ಯಾ ಯೇ ಭೀತಾಃ ತಸ್ಯಾ ಮೇಽತಿ ಪರಾಕ್ರಮಂ ॥೪೯॥

ಅದ್ಯ ಮಾಂ ಸಮರೇ ಪ್ರಾಪ್ಯ ಪುನಃ ಸಾ ನ ಭವಿಷ್ಯತಿ ।
ವದಂತಮೇವಂ ದೈತ್ಯೇಶಂ ಸೂತಃ ಸರಥಮಗ್ರತಃ ॥೫೦॥

ಮುಂದೆಯೇ ಶತ್ರುಗಳನ್ನು ಹೊಗಳುತ್ತಾ ಪರಮ ನೀಚನಾಗಿದ್ದೀಯೆ" ಎಂದನು. ||೪೫||

ನೀನು ನನಗೆ ಅಪ್ರಿಯವಾದ ಶತ್ರುಗಳ ಪ್ರಶಂಸೆಯನ್ನು ಮಾಡುತ್ತಾ ನಾಚಿಕೆಗೊಳ್ಳುವುದಿಲ್ಲವೆ? ಲೋಕದಲ್ಲಿ ಶತ್ರುಗಳನ್ನು ಹೊಗಳುವುದೆಂಬುದು ನೀಚರು ಮಾಡುವ ಕೆಲಸವು. ||೪೬||

ಪರಾಕ್ರಮಶಾಲಿಯಾದವನು ಶತ್ರುವು ಶಕ್ತನಾಗಿ ಕಂಡುಬಂದರೂ ಅವನನ್ನೆಂದಿಗೂ ಹೊಗಳುವುದಿಲ್ಲ. ಶತ್ರುವು ಬಲಿಷ್ಠನಾಗಲೀ ಅಥವಾ ಬಲವಿಲ್ಲದವನಾಗಲೀ ಶೂರರು ಅವನ ವಿಷಯದಲ್ಲಿ ಹೆದರುವುದಿಲ್ಲ. ||೪೭||

ಹೀಗೆ ಹೇಳಿ ಭಂಡಾಸುರನು ಬಹಳ ಕೋಪಗೊಂಡು ಕಾಲಮಹಾಸರ್ಪದಂತೆ ಭಯಂಕರನಾಗಿ ತನ್ನ ಕಣ್ಣುಗಳಿಂದ ಮತ್ತು ಬಾಯಿಯಿಂದ ಕೋಪವೆಂಬ ಕಾರ್ಕೋಟವಿಷವನ್ನು ಕಾರುವಂತಿದ್ದನು. ||೪೮||

ಆಗ ಅವನು ದೊಡ್ಡ ಬಿಲದ ಮುಖದಿಂದಲೋ ಎಂಬಂತೆ ಆ ಪಟ್ಟಣದ ಬಾಗಿಲಿನಿಂದ ಹೊರಗೆ ಹೊರಟನು. "ದೇವಿಯ ಪರಾಕ್ರಮದ ವಿಷಯದಲ್ಲಿ ಭಯಗೊಂಡಿರುವ ರಾಕ್ಷಸರೇ, ಈಗ ನನ್ನ ಶೌರ್ಯವನ್ನು ನೋಡಿರಿ" ಎಂದನು. ||೪೯||

ಈಗ ಆಕೆಯು ನನ್ನೊಂದಿಗೆ ಯುದ್ಧಮಾಡಿ ಪುನಃ ಉಳಿಯಲಾರಳು. ಹೀಗೆ

ಅಭ್ಯಾಜಗಾಮಾಽಥ ಸೋಽಪಿ ರಥಮಾರುಹ್ಯ ಸಂಯಯೌ ।
ತಂ ಮೇನಿರೇ ಜನಾಃ ಕಾಲಂ ಜಗತ್ಸಂಹರಣೋದ್ಯತಂ ॥೫೧॥

ನಾಸ್ಯ ಕ್ರೋಧಾಽಗ್ನಿಮಾಸಾದ್ಯ ಜಗದ್ಭೂಯೋ ಭವಿಷ್ಯತಿ ।
ಇತ್ಯೂಚುಃ ಸಹಸಾ ಸರ್ವೇ ಭೀತಾಶ್ಚಾಽಸುರಪುಂಗವಾಃ ॥೫೨॥

ನಿರ್ಯಯುಃ ಸ್ವಸ್ವಸೇನಾಭಿಃ ಸೇನಾಽಧ್ಯಕ್ಷಾಶ್ಚ ಮಂತ್ರಿಣಃ ।
ಪುತ್ರಾಃ ಪೌತ್ರಾಃ ಪ್ರಪೌತ್ರಾಶ್ಚ ಭ್ರಾತರಃ ಸರ್ವ ಏವ ತೇ ॥೫೩॥

ಭೀತಾ ನಿಶ್ಶೇಷತಃ ಸೇನಾಂ ಸಮಾದಾಂಶು ವಿನಿರ್ಯಯುಃ ।
ಅಥಾಽಜ್ಞಪ್ತೋ ವಿಶುಕ್ರೇಣ ಕುಟಿಲಾಕ್ಷಶ್ಚ ಭೂಪತಿಃ ॥೫೪॥

ಅಕ್ಷೌಹಿಣೀ ಪಂಚಕೇನ ಚಕ್ರೇ ನಗರರಕ್ಷಣಮ್ ।
ತನ್ನಿವೇದ್ಯ ವಿಶುಕ್ರಾಯ ವಿಕರ್ಷನ್ಮಹತೀಂ ಚಮೂಮ್ ॥೫೫॥

ಹೇಳುತ್ತಿರುವ ರಾಕ್ಷಸರಾಜನ ರಥವನ್ನು ಸಾರಥಿಯು ಮುಂದುಗಡೆ ಸಿದ್ಧಗೊಳಿಸಿದನು. ॥೫೦॥

ಸಾರಥಿಯು ರಥವನ್ನು ಮುಂದೆ ತಂದಕೂಡಲೇ ರಾಕ್ಷಸರಾಜನು ಅದರ ಮೇಲೇರಿ ಹೊರಟನು. ಆಗ ಜನರೆಲ್ಲರೂ ಭಂಡರಾಕ್ಷಸನು ಜಗತ್ತಿನ ಸಂಹಾರಕ್ಕೆ ತೊಡಗಿರುವ ಸಾಕ್ಷಾತ್ ಯಮನೇ ಇವನು! ಎಂದು ಭಾವಿಸಿದರು. ॥೫೧॥

ಈತನ ಕೋಪವೆಂಬ ಬೆಂಕಿಗೆ ಸಿಕ್ಕಿ ಪ್ರಪಂಚವು ಪುನಃ ಉಳಿಯುವುದಿಲ್ಲ! ಎಂದು ಎಲ್ಲರೂ ಕೂಡಲೇ ಹೇಳಿದರು. ರಾಕ್ಷಸಶ್ರೇಷ್ಠರೂ ಕೂಡ ಹೆದರಿದರು. ॥೫೨॥

ಆಗ್ಯೆ ಸೇನಾಪತಿಗಳು, ಮಂತ್ರಿಗಳು, ಪುತ್ರರು, ಮೊಮ್ಮಕ್ಕಳು, ಮರಿಮಕ್ಕಳು, ತಮ್ಮಂದಿರು ಎಲ್ಲರೂ ತಮ್ಮ ತಮ್ಮ ಸೈನ್ಯಗಳೊಡನೆ ರಾಕ್ಷಸರಾಜನನ್ನು ಹಿಂಬಾಲಿಸಿದರು. ॥೫೩॥

ರಾಕ್ಷಸಶ್ರೇಷ್ಠರೆಲ್ಲರೂ ರಾಜನ ಆಜ್ಞೆಗೆ ಹೆದರಿ ಕೂಡಲೇ ಸೈನ್ಯವನ್ನು ತೆಗೆದು ಕೊಂಡು ಹೊರಟರು. ಅನಂತರ ವಿಶುಕ್ರನು ಕುಟಿಲಾಕ್ಷಧೊರೆಯನ್ನು ರಾಜಧಾನಿಯ ರಕ್ಷಣೆಗೆ ನಿಯಮಿಸಿದನು. ॥೫೪॥

ಅವನು ಐದು ಅಕ್ಷೌಹಿಣೀ ಸೈನ್ಯದಿಂದ ಪಟ್ಟಣವನ್ನು ರಕ್ಷಿಸುತ್ತಿದ್ದನು. ಈ ವಿಷಯವನ್ನು ಕುಟಿಲಾಕ್ಷನು, ವಿಶುಕ್ರನಿಗೆ ತಿಳಿಸಿ ತಾನೂ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೊರಟನು. ॥೫೫॥

ಯಯೌ ಭಂಡಾಸುರಸ್ಯಾಗ್ರೇಗ್ರ ಸನ್ನಿವ ಕಕುಪ್ತಟಿಮ್ ।
ಏವಂ ಪ್ರಚಲಿತೇ ದೈತ್ಯರಾಜೇ ನಿಖಿಲಸೇನಯಾ ॥೫೬॥

ಅವಾದಯಂಸ್ತು ದೈತೇಯಾ ರಣಭೇರೀಃ ಸಮಂ ತತಃ ।
ಪಟಹಾಽನಕಭೇರೀಣಾಂ ವಾದ್ಯೈರ್ದೈತ್ಯವಿಗರ್ಜನೈಃ ॥೫೭॥

ಆಸ್ಫೊಟನೈರ್ನೇಮಿ ಘೋಷೈಃ(ಶ್ಚ) ಗಜಚೀತ್ಕಾರಮಿಶ್ರಿತೈಃ ।
ವಂದಿಮಾಗಧಸನ್ನಾದೈರ್ಹಯಹೇಷಿತ ಬೃಂಹಿತೈಃ ॥೫೮॥

ತುರಂಗಖುರವಿಕ್ಷೇಪೋನ್ಮಿಷಚ್ಚಟಚಟಾರವೈಃ ।
ಹುಂಕೃತಾಽಹ್ವಾನಸಂರಾವೈಃ ಸಂಹತೋ ಹಿ ಮಹಾಸ್ವನಃ ॥೫೯॥

ಅವನು ದಿಕ್ಕುಗಳ ಅಂಚುಗಳನ್ನೆಲ್ಲವನ್ನೂ ನುಂಗುವನೋ ಎಂಬಂತೆ ದೊಡ್ಡ ಸೈನ್ಯದೊಡನೆ ರಾಕ್ಷಸರಾಜನ ಮುಂದುಗಡೆ ಹೋಗುತ್ತಿದ್ದನು. ಈ ರೀತಿಯಲ್ಲಿ ರಾಕ್ಷಸರಾಜನು ತನ್ನ ಸಮಸ್ತ ಸೈನ್ಯಗಳೊಡನೆ ಯುದ್ಧಕ್ಕೆ ಹೊರಟನು. ||೫೬||

ಆಗ ರಾಕ್ಷಸರು ಯುದ್ಧಕಾಲದ ನಗಾರಿಗಳನ್ನು ಎಲ್ಲಾ ಕಡೆಗಳಲ್ಲಿಯೂ ಬಾರಿಸಿದರು. ತಮಟೆ, ಡಮರುಗ, ನಗಾರಿ ಇವುಗಳ ಮತ್ತು ಅನೇಕ ವಿಧವಾದ ಇತರ ವಾದ್ಯಗಳ ಶಬ್ದದಿಂದಲೂ ಮತ್ತು ರಾಕ್ಷಸರ ವಿಶೇಷವಾದ ಗರ್ಜನೆಗಳಿಂದಲೂ ಅಲ್ಲಿ ಮಹಾ ಶಬ್ದವುಂಟಾಯಿತು. ||೫೭||

ರಾಕ್ಷಸರು ತಮ್ಮ ದೇಹವನ್ನು ತಟ್ಟುವಿಕೆಯಿಂದಲೂ, ರಥ ಚಕ್ರದ ಪಟ್ಟಿಗಳ ಶಬ್ದಗಳಿಂದಲೂ, ಆನೆಗಳ ಚೀತ್ಕಾರ ಧ್ವನಿಗಳಿಂದ ಕೂಡಿದ ಹೊಗಳುಭಟರು ಮುಂತಾದವರ ಹೊಗಳುವಿಕೆಯು ಮತ್ತು ಕುದುರೆಯು ಕೆನೆಯುವಿಕೆಗಳ ಶಬ್ದಗಳಿಂದಲೂ ತುಂಬಿದ ಆ ರಣಾಂಗಣದ ಮಹಾಶಬ್ದವು ಎಲ್ಲೆಲ್ಲಿಯೂ ಕೇಳಿಸಿತು. ||೫೮||

ಕುದುರೆಗಳ ಗೊರಸುಗಳ ಇಡುವಿಕೆಯಿಂದ ಉಂಟಾಗುವ ಚಟಚಟ ಎಂಬ ಧ್ವನಿಗಳಿಂದಲೂ, ರಾಕ್ಷಸರ ಹುಂಕಾರಪೂರ್ವಕವಾದ ಆಹ್ವಾನಗಳ ಶಬ್ದಗಳಿಂದಲೂ ಕೂಡಿದ ಆ ಮಹಾಗದ್ದಲವು ಬಹಳ ಭಯಂಕರವಾಗಿದ್ದಿತು. ||೫೯||

ಬಭೌ ಜಗತ್ಪಟೀಭೇದಪ್ರಗಲ್ಭ ಇವ ಪೂರಿತಃ ।
ಸೇನಾಸ್ವನಂ ಸಮಾಕರ್ಣ್ಯ ಭಂಡದೈತ್ಯ ಸಮಾಗಮಮ್ ॥೬೦॥

ವಿದಿತ್ವಾ ಚಾರಮುಖತೋ ನಿಶ್ಚಿತ್ಯ ಮಹದುದ್ಯಮಮ್ ।
ದಂಡಿನೀ ತ್ವರಿತಾ ಮಂತ್ರನಾಥಾಂ ಪ್ರಾಪ್ಯ ವ್ಯಜಿಜ್ಞಪತ್ ॥೬೧॥

ಸಚಿವೇಶ್ಯೇಷ ಸಂಪ್ರಾಪ್ತೋ ಭಂಡಃ ಸೇನಾಸಮನ್ವಿತಃ ।
ಮಹಾಸನ್ನಾಹ ಸಂಭಾರೋ ಯುದ್ಧಂ ಮಹದುಪಸ್ಥಿತಂ ॥೬೨॥

ವಿಜ್ಞಾಪ್ಯ ಲಲಿತಾಂ ದೇವೀಂ ಸಮೇತಾ ಶಕ್ತಿಭಿರ್ವೃತಾ ।
ಸಂರಕ್ಷಂತೀ ಶಕ್ತಿಗಣೈರ್ಮಹಾರಾಜ್ಞ್ಯಾ ಅನುವ್ರಜ ॥೬೩॥

ಭಯಂಕರವಾದ ಆ ಮಹಾಶಬ್ದವು ಲೋಕವೆಂಬ ವಸ್ತ್ರವನ್ನು ಚೂರು ಚೂರು ಮಾಡುವಂತೆ ಎಲ್ಲಾ ಕಡೆಯಲ್ಲಿಯೂ ತುಂಬಿ ಕೇಳಿಸುತ್ತಿತ್ತು. ದಂಡನಾಯಿಕೆಯು ಈ ಸೈನ್ಯಶಬ್ದವನ್ನು ಕೇಳಿ ಭಂಡರಾಕ್ಷಸನು ಬರುತ್ತಿರುವುದನ್ನು ತಿಳಿದಳು. ॥೬೦॥

ದಂಡನಾಯಕಿಯು ಭಂಡರಾಕ್ಷಸನು ಬರುತ್ತಿರುವುದನ್ನು ಚಾರರ ಮೂಲಕವೂ ತಿಳಿದು, ಅವನು ದೊಡ್ಡ ಯುದ್ಧಕ್ಕೂ ಸಿದ್ಧನಾಗಿದ್ದಾನೆಂದೂ ಊಹಿಸಿ, ಶೀಘ್ರವಾಗಿ ಮಂತ್ರಿಣಿಯ ಸಮೀಪಕ್ಕೆ ಬಂದು ಈ ವಿಷಯವನ್ನು ವಿಜ್ಞಾಪಿಸಿಕೊಂಡಳು. ॥೬೧॥

ಓ ಮಂತ್ರಿಣಿಯೇ, ಭಂಡರಾಕ್ಷಸನು ತನ್ನ ಸೈನ್ಯಗಳನ್ನೆಲ್ಲವನ್ನೂ ತೆಗೆದುಕೊಂಡು ಬರುತ್ತಿದ್ದಾನೆ. ಅವನು ದೊಡ್ಡ ಯುದ್ಧಸಿದ್ಧತೆಗಳಿಗೆ ಬೇಕಾದ ಸಕಲ ಸಾಮಗ್ರಿಗಳನ್ನು ಶೇಖರಿಸಿರುವುದರಿಂದ ಮಹಾಯುದ್ಧವೇ ಪ್ರಾಪ್ತವಾಗಿದೆಯೆಂದು ತಿಳಿಯಬೇಕು. ॥೬೨॥

ಈ ವಿಷಯವನ್ನು ತಾವು ಲಲಿತಾದೇವಿಯವರಿಗೆ ತಿಳಿಸಿ, ಎಲ್ಲಾ ಶಕ್ತಿಗಳಿಂದಲೂ ಕೂಡಿದವರಾಗಿ, ದೇವಿಯನ್ನು ಶಕ್ತಿಗಳ ಗುಂಪಿನಿಂದ ರಕ್ಷಿಸುತ್ತಾ ಮಹಾರಾಣಿಯಾದ ಆಕೆಯೊಂದಿಗೆ ಸಮಸ್ತ ಸೈನ್ಯಗಳೊಡನೆ ತೆರಳಬೇಕು. ॥೬೩॥

ಅಹಂ ಯಾಸ್ಯೇ ತನ್ನಿರೋದ್ಧುಂ ಪುರತಃ ಸೇನಯಾಽನ್ವಿತಾ ।
ಏಷ ಶಬ್ದಃ ಶ್ರೂಯತೇ ವೈ ಗಜವಾಜಿಸಮಾಕುಲಃ ॥೬೪॥

ಮನ್ಯೇ ಬಾಲಾ ಸಂಪ್ರವೃತ್ತಾ ಯುದ್ಧೇ ಯುದ್ಧಸಮುತ್ಸುಕಾ ।
ಸಂಪನ್ನಾಥಾಽಶ್ವನಾಥಾಭ್ಯಾಂ ಯುತಾ ಚಿತ್ರಪರಾಕ್ರಮಾ ॥೬೫॥

ಏವಂ ವದಂತ್ಯಾಂ ತಸ್ಯಾಂ ತು ಪ್ರಾಪ್ತಾ ಸಂದೇಶಹಾರಿಣೀ ।
ವರ್ಧಯಿತ್ವಾ ದಂಡನಾಥಾಂ ಮಂತ್ರಿಣೀಂ ಚಾಽಪ್ಯಭಾಷತ ॥೬೬॥

ದೇವಿ ಪ್ರವೃತ್ತಂ ಸುಮಹದ್ಯುದ್ಧಂ ಬಾಲಾಽಂಬಯಾ ಸಹ ।
ದೈತ್ಯರಾಜಸ್ಯ ಸನ್ನಾಹೋ ಮಹಾನ್ ಯುದ್ಧಸಮುದ್ಯಮಃ ॥೬೭॥

ನಾನು ಅವನನ್ನು ತಡೆಗಟ್ಟಲು ಮುಂದುಗಡೆ ಸೈನ್ಯದಿಂದ ಕೂಡಿದವಳಾಗಿ ಹೋಗುವೆನು. ಇಗೋ, ಆನೆಗಳು ಮತ್ತು ಕುದುರೆಗಳ ಶಬ್ದಗಳಿಂದ ಕೂಡಿರುವ ಮಹಾಶಬ್ದವು ಕೇಳಿಬರುತ್ತಿದೆಯಷ್ಟೆ ! ॥೬೪॥

ಯುದ್ಧದಲ್ಲಿ ಉತ್ಸಾಹವುಳ್ಳ ಬಾಲಾದೇವಿಯು ಸಂಪನ್ನಾಥಾ, ಅಶ್ವನಾಥಾ ಎಂಬ ದೇವಿಯರೊಡನೆ ಆಶ್ಚರ್ಯಕರವಾದ ಪರಾಕ್ರಮವನ್ನು ತೋರಿಸುವವಳಾಗಿ ರಾಕ್ಷಸರೊಂದಿಗೆ ಯುದ್ಧಕ್ಕೆ ತೊಡಗಿರುವಳೆಂದು ತಿಳಿಯುತ್ತೇನೆ. ॥೬೫॥

ಹೀಗೆ ದಂಡಿನಿಯು ಹೇಳುತ್ತಿರುವಷ್ಟರಲ್ಲಿಯೇ ಸಂದೇಶವನ್ನು ತರುವ ದೂತಿಯೊಬ್ಬಳು ಬಂದು ದಂಡನಾಯಕಿ ಮತ್ತು ಮಂತ್ರಿಣೀದೇವಿಯರಿಗೆ ಜಯ ಜಯಾಕಾರವನ್ನು ಮಾಡಿ ಅವರನ್ನು ಕುರಿತು ಈರೀತಿಯಲ್ಲಿ ವಿಜ್ಞಾಪನೆಯನ್ನು ಮಾಡಿಕೊಂಡಳು. ॥೬೬॥

ಓ ದೇವಿಯರೇ, ರಾಕ್ಷಸರಿಗೂ ಮತ್ತು ದೇವಿಯರ ಕುಮಾರಿಯರಿಗೂ ಘೋರವಾದ ಯುದ್ಧವು ಪ್ರಾರಂಭವಾಗಿದೆ. ರಾಕ್ಷಸರಾಜನಾದ ಭಂಡನ ಯುದ್ಧಕ್ಕೆ ಬೇಕಾದ ಸಿದ್ಧತೆಯು ಬಹಳ ಅತಿಶಯವಾಗಿದೆ. ॥೬೭॥

ಭ್ರಾತೃಪುತ್ರಾದಿಸಹಿತಃ ಸರ್ವಸೇನಾ ಸಮಾವೃತಃ ।
ಸಮಾಗತಃ ಕ್ರೂರತರೋ ಯುಧ್ಯತಿ ಕ್ರೂರವಿಕ್ರಮಃ ॥೬೮॥

ಇತಿ ವಿಜ್ಞಾಪನಾಯಾಽಹಂ ಸಂಪತ್ಕರ್ಯಾ ನಿರೂಪಿತಾ ।
ಕಿಂ ವದಾಮಿ ಪುನರ್ಗತ್ವಾ ತಾಂ ದೇವೀಂ ಗಜವಾಹಿನೀಮ್ ॥೬೯॥

ಶ್ರುತ್ವಾ ಸಂದೇಶಹಾರಿಣ್ಯಾ ವಾಕ್ಯಂ ಶ್ರೀದಂಡನಾಯಿಕಾ ।
ಪ್ರಾಹ ತತ್ಕಾಲಸದೃಶಂ ವಾಕ್ಯಂ ವಿಕ್ರಮಬೃಂಹಿತಮ್ ॥೭೦॥

ಗಚ್ಛೇಭ ಸೇನಾನೇತ್ರೀಂ ತಾಂ ಬ್ರೂಹಿ ಶ್ರುತ್ವಾ ಮದೀರಿತಮ್ ।
ಅಪ್ರಮತ್ತ ತಯಾ ನೂನಂ ಯೋಽದ್ಧವ್ಯಂ ದೈತ್ಯಪುಂಗವೈಃ ॥೭೧॥

ಬಾಲಾ ಕುಮಾರಿಕಾ ನಿತ್ಯಂ ಯುದ್ಧಗೋಷ್ಠೀ ಸಮುತ್ಸುಕಾ ।
ಸರ್ವತಃ ಸಾ ರಕ್ಷಿತವ್ಯಾ ಪ್ರಾಪ್ತಾಽಸ್ಮ್ಯಹಮಪಿ ದ್ರುತಮ್ ॥೭೨॥

ಬಹಳ ಕ್ರೂರನಾದ ರಾಕ್ಷಸರಾಜನು ತಮ್ಮಂದಿರು ಮಕ್ಕಳು ಮುಂತಾದವರಿಂದ ಕೂಡಿದ ಸಮಸ್ತ ಸೈನ್ಯಗಳಿಂದಲೂ ಕೂಡಿದವನಾಗಿ ತನ್ನ ಕಠಿಣವಾದ ಪರಾಕ್ರಮವನ್ನು ತೋರಿಸುತ್ತಾ ಯುದ್ಧಮಾಡುತ್ತಿದ್ದಾನೆ. ॥೬೮॥

ಸಂಪನ್ನಾಥಾ ದೇವಿಯರು ನಾನು ಹೀಗೆ ತಮಗೆ ವಿಜ್ಞಾಪಿಸಬೇಕೆಂದು ನನಗೆ ಹೇಳಿದರು. ಆನೆಯ ಮೇಲೇರಿರುವ ಆ ದೇವಿಯವರಿಗೆ ಪುನಃ ನಾನು ಹಿಂತಿರುಗಿ ಹೋಗಿ ಏನನ್ನು ವಿಜ್ಞಾಪಿಸಬೇಕು ?" ॥೬೯॥

ಸಂದೇಶವನ್ನು ತಂದ ಆ ದೂತಿಯ ಮಾತನ್ನು ಕೇಳಿ ದಂಡನಾಯಕಿಯೂ ಪರಾಕ್ರಮವನ್ನು ತೋರಿಸುವ ಆ ಕಾಲಕ್ಕೆ ಯೋಗ್ಯವಾದ ಈ ಮಾತನ್ನು ಹೇಳಿದಳು. ॥೭೦॥

ನೀನು ಹೋಗಿ ಆನೆಗಳ ಸೈನ್ಯಕ್ಕೆ ಅಧೀಶ್ವರಳಾದ ಆ ದೇವಿಯೊಂದಿಗೆ ನಾನು ಈಗ ಹೇಳುವ ಮಾತನ್ನು ಹೇಳು. "ನೀವೆಲ್ಲರೂ ಬಹಳ ಜಾಗರೂಕತೆಯಿಂದ ರಾಕ್ಷಸಶ್ರೇಷ್ಠರೊಡನೆ ಯುದ್ಧಮಾಡಿ" ॥೭೧॥

ಕುಮಾರಿಯಾದ ಬಾಲಾದೇವಿಯು ಯಾವಾಗಲೂ ಯುದ್ಧರಂಗಗಳಲ್ಲೇ ಅತಿಶಯವಾಗಿ ಆಸಕ್ತಳಾಗಿರುತ್ತಾಳೆ. ಅವಳನ್ನು ನೀವು ಸರ್ವವಿಧದಲ್ಲಿಯೂ ರಕ್ಷಿಸಬೇಕು. ನಾನೂ ಕೂಡ ಶೀಘ್ರದಲ್ಲಿಯೇ ಬರುವೆನು. ॥೭೨॥

ಯಥಾ ಪಲಾಯ್ಯ ಸೋ ಗಚ್ಛೇನ್ಮಾಯಯಾ ದೈತ್ಯ ಪುಂಗವಃ ।
ತಥಾ ಸಂರುಧ್ಯಯೋದ್ಧವ್ಯಂ ಯಾವನ್ಮಮ ಸಮಾಗಮಃ ॥೨೩॥

ತತೋಽಹಂ ತಸ್ಯ ನ ಚಿರಂ ಯುದ್ಧಶ್ರದ್ಧಾಂ ಚಿರಂತನೀಂ ।
ನಾಶಯಾಮಿ ಕ್ಷಣೇನೈವ ತಮಃ ಸೂರ್ಯೋದಯೋ ಯಥಾ ॥೨೪॥

ಗಚ್ಛ ಶೀಘ್ರಂ ಸಮಾದಾಯ ಸಂದೇಶಂ ಗಜವಾಹಿನೀಮ್ ।
ಆಜ್ಞಪ್ತೈವ ನಿರ್ಗತಾ ಸಾ ಶಕ್ತಿಃ ಸಂದೇಶಹಾರಿಣೀ ॥೨೫॥

ನಿಸರ್ಗ ಕ್ರೋಧನಾ ಭೂಯೋ ಯುದ್ಧೋಪಕ್ರಮರೋಷಿತಾ ।
ದಿಧಕ್ಷಂತೀವ ಲೋಕಾಂಶ್ಚ ಸರ್ವಾನ್ ರೋಷಾಗ್ನಿನಾ ಕ್ಷಣಾತ್ ॥೨೬॥

ತತಃ ಕರಿರಥಾರೂಢಾ ದಂಡಿನೀ ನಿರ್ಯಯೌ ದ್ರುತಮ್ ।
ಅಸಂಖ್ಯಶಕ್ತಿಸೇನಾಭಿರ್ಯುತಾ ಕ್ರೋಧಸಮಾಕುಲಾ ॥೨೭॥

ಆ ರಾಕ್ಷಸಶ್ರೇಷ್ಠನು ಕಪಟದಿಂದ ಪಲಾಯನಮಾಡಿ ಹೋಗದಂತೆ ನೀವು ಅವನನ್ನು ತಡೆದು, ನಾನು ಬರುವವರೆಗೂ ಯುದ್ಧಮಾಡುತ್ತಿರಬೇಕು. ॥೨೩॥

ಅನಂತರ ನಾನು ಶೀಘ್ರವಾಗಿಯೇ ಬಂದು, ಆ ರಾಕ್ಷಸರಾಜನ ಬಹಳ ಹಿಂದಿನಿಂದಲೂ ವೃದ್ಧಿಹೊಂದಿರುವ ಯುದ್ಧದಲ್ಲಿ ಆಸಕ್ತಿಯನ್ನು ಕ್ಷಣಕಾಲದಲ್ಲಿಯೇ, ಸೂರ್ಯೋದಯವಾದ ಕೂಡಲೇ ಕತ್ತಲೆಯಂತೆ, ನಾಶಮಾಡುವೆನು. ॥೨೪॥

ಆದ್ದರಿಂದ ನೀನು ಕೂಡಲೇ ಹೋಗಿ ಈ ನನ್ನ ಸಂದೇಶವನ್ನು ಗಜಸೈನ್ಯ ನಾಯಕಿಯಾದ ದೇವಿಗೆ ತಿಳಿಸು. ಈರೀತಿಯಾಗಿ ದಂಡನಾಯಕಿಯು ಅಪ್ಪಣೆ ಮಾಡಲು ಸಂದೇಶವನ್ನು ತೆಗೆದುಕೊಂಡು ಹೋಗುವ ಆ ಶಕ್ತಿಯು ಹೊರಟು ಹೋದಳು. ॥೨೫॥

ಸ್ವಾಭಾವಿಕವಾಗಿಯೇ ಕೋಪವುಳ್ಳ, ಪುನಃ ಈಗ ಯುದ್ಧಕಾರ್ಯದಿಂದ ಹೆಚ್ಚು ರೋಷಗೊಂಡಿರುವ ದಂಡನಾಯಕಿಯು ತನ್ನ ಕೋಪವೆಂಬ ಬೆಂಕಿಯಿಂದ ಎಲ್ಲಾ ಲೋಕಗಳನ್ನೂ ಸುಟ್ಟುಬಿಡುವಳೋ ಎನ್ನುವಹಾಗೆ ಕಾಣುತ್ತಿದ್ದಳು. ॥೨೬॥

ಅನಂತರ ಸೊಗಸಾದ ರಥದ ಮೇಲೆ ಕುಳಿತು ದಂಡಿನಿಯು ಶೀಘ್ರವಾಗಿ ಲೆಖ್ಖವಿಲ್ಲದಷ್ಟು ಶಕ್ತಿ ಸೈನ್ಯಗಳಿಂದ ಕೂಡಿ ಕೋಪದಿಂದುರಿಯುತ್ತಾ ಯುದ್ಧ ಭೂಮಿಗೆ ಹೊರಟಳು. ॥೨೭॥

ರಥನೇಮಿ ಮಹಾಸ್ವನಯುತಃ ಸೇನಾ ಮಹಾರವಃ ।
ಪರೇಷಾಂ ಹೃದಯಂ ಭಿಂದನ್ ಶ್ರೋತ್ರಮಾರ್ಗೇಣ ಸಂವಿಶನ್॥೭೮॥

ಪ್ರತಿಸ್ವಾನ ಮಹಾಘೋಷಃ ಪ್ರೋಚ್ಚಲದ್ಭೀಷಣಾಕೃತಿಃ ।
ಏವಂ ಶ್ರೀದಂಡಸಾಮ್ರಾಜ್ಞೀ ಜೈತ್ರಯಾತ್ರಾ ಮುಪಾಕ್ರಮತ್॥೭೯॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಯುದ್ಧಾರಂಭೋನಾಮ
ದ್ವಿಷಷ್ಟಿತಮೋಽಧ್ಯಾಯಃ

ರಥಚಕ್ರದ ಪಟ್ಟಿಗಳ ದೊಡ್ಡ ಧ್ವನಿಗಳಿಂದ ಕೂಡಿರುವ ಸೈನ್ಯದ ಮಹಾಶಬ್ದವು ಶತ್ರುಗಳ ಹೃದಯವನ್ನು ಅವರ ಕಿವಿಗಳ ಮೂಲಕ ಹೊಕ್ಕು ಒಡೆಯುತ್ತಿರುವಂತೆ ತೋರುತ್ತಿತ್ತು ! ||೭೮||

ಪ್ರತಿಧ್ವನಿಗಳ ದೊಡ್ಡಶಬ್ದಗಳು ಸೈನ್ಯದಿಂದ ಹುಟ್ಟಿ ಹೊರಗೆ ಬರುತ್ತಾ ಭಯಂಕರವಾದ ಸ್ವರೂಪವನ್ನು ತಾಳಿದ್ದವು. ಈರೀತಿಯಾಗಿ ಶ್ರೀ ದಂಡನಾಯಕಿಯು ವಿಜಯಯಾತ್ರೆಯನ್ನು ಆರಂಭಿಸಿದಳು. ||೭೯||

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದ ಲಲಿತಾಮಾಹಾತ್ಮ್ಯೆಯಲ್ಲಿ ಯುದ್ಧಾರಂಭ ವರ್ಣನೆ
ಎಂಬ ಅರವತ್ತೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ತ್ರಿಷಷ್ಟಿತಮೋಽಧ್ಯಾಯಃ ||

ಅರವತ್ತುಮೂರನೆಯ ಅಧ್ಯಾಯವು

ಭಂಡಾಸುರ ಮಹಾಸೇನಾ ಕೋಲಾಹಲ ಮಹಾಧ್ವನಿಮ್ ।
ನಿಶಮ್ಯ ಪ್ರೈಕ್ಷದತ್ಯಂತ ಯುದ್ಧೋತ್ಸುಕತಯಾ ದಿಶಮ್ ॥೧॥

ಪ್ರಾಗುದೀಚೀಂ ಕುಮಾರೀ ಸಾ ಲಲಿತಾಯಾಃ ಮನಃ ಪ್ರಿಯಾ ।
ದದರ್ಶ ದೈತ್ಯಸೇನಾಯಾಃ ಸಂಮರ್ದ ಜನಿತಂ ರಜಃ ॥೨॥

ಪ್ರತಿಸಂಚರಸಂಭೂತಂ ಸಾಂವರ್ತಕ ಸಮೂಹವತ್ ।
ಜ್ಞಾತ್ವಾ ಪ್ರಾಪ್ತಂ ದೈತ್ಯರಾಜಂ ಸರ್ವಸೇನಾ ಸಮಾವೃತಮ್ ॥೩॥

ಲಲಿತಾದೇವಿಯ ಕುಮಾರಿಯಾದ ಬಾಲಾದೇವಿಯು ಭಂಡರಾಕ್ಷಸನ ಮಹಾ ಸೈನ್ಯದ ಕೋಲಾಹಲದ ಮಹಾಧ್ವನಿಯನ್ನು ಕೇಳಿ ಯುದ್ಧದಲ್ಲಿ ಬಹಳ ಉತ್ಸಾಹದಿಂದ ಕೂಡಿದ ವಳಾಗಿ ಆ ಶಬ್ದವು ಕೇಳಿಸಿದ ಕಡೆಗೆ ನೋಡುತ್ತಿದ್ದಳು. ||೧||

ಲಲಿತೆಗೆ ಪ್ರಿಯಳಾದ ಆ ಕುಮಾರಿಯು ಮೊದಲು ಉತ್ತರ ದಿಕ್ಕಿನ ಕಡೆ ನೋಡುತ್ತಾ, ರಾಕ್ಷಸಸೈನ್ಯದ ಘರ್ಷಣೆಯಿಂದುಂಟಾದ ಭೂಮಿಯ ಧೂಳು ಏಳುತ್ತಿದ್ದುದನ್ನು ಗಮನಿಸಿದಳು. ||೨||

ಪ್ರತಿಯಾಗಿ ಜೋರಾಗಿ ಬೀಸುತ್ತಿರುವ ಪ್ರಳಯಕಾಲದ ಗಾಳಿಯಂತೆ ಆ ಧೂಳು ಎದ್ದುದನ್ನು ಕಂಡು, ತನ್ನ ಸಮಸ್ತ ಸೈನ್ಯಗಳೊಡನೆ ರಾಕ್ಷಸರಾಜನಾದ ಭಂಡನೇ ಬಂದನೆಂದು ತಿಳಿದಳು. ||೩||

ಸಮರೋತ್ಸುಕಚಿತ್ತಾ ಸಾ ಬಾಲಾ ತ್ರಿಪುರಸುಂದರೀ ।
ಲಘುಚಕ್ರರಥಾಽಽರೂಢಾ ರಥನೇತ್ರೀ ಮಚೋದಯತ್ ॥೪॥

ಶ್ರೀಮಾತುಃ ಪ್ರತಿರೋಧಂ ಸಾ ತರ್ಕಯಂತ್ಯಥ ಸಂಯುಗೇ ।
ಅದೃಷ್ಟ್ವೈವ ಮಹಾದೇವೀಂ ಮಂತ್ರಿಣೀ ಮಭಿಸಂಯಯೌ ॥೫॥

ಸೇನಾನೇತ್ರೀಂ ಚ ಸೇನಾಂ ಚಾಽಪ್ಯಾಕಾಂಕ್ಷಂತ್ಯತಿಸತ್ವರಮ್ ।
ದೈತ್ಯಸೈನ್ಯಾಽಭಿಮುಖತೋ ವಾಯುವೇಗೇನ ಸಂಯಯೌ ॥೬॥

ಶರದೀವ ಮಹಾಮೇಘ ಆಕಾಶೇ ವಾಯುನೇರಿತಃ ।
ಯಥಾ ಪುರೋ ನಿಪತತಿ ತಥಾ ವೇಗಾದ್ರಥೋ ಯಯೌ ॥೭॥

ಬಾಲಾಯಾ ಯುದ್ಧಯಾತ್ರಾಂ ತಾಂ ನಿಷಮಾಂ ವೀಕ್ಷ್ಯ ಸತ್ವರಮ್।
ಅಶ್ವಾಽಽರೂಢಾ ದ್ರುತತರಂ ತಾಮನುಪ್ರತಿಸಂಯಯೌ ॥೮॥

ಯುದ್ಧದಲ್ಲಿ ಅತ್ಯಂತ ಉತ್ಸಾಹವುಳ್ಳ ತ್ರಿಪುರಸುಂದರೀದೇವಿಯ ಮಗಳಾದ ಆ ಬಾಲಾದೇವಿಯು ಲಘುಚಕ್ರವೆಂಬರಥವನ್ನೇರಿ, ತನ್ನ ಸ್ತ್ರೀಸಾರಥಿಗೆ ರಥವನ್ನು ಬಿಡಲು ಆಜ್ಞೆಮಾಡಿದಳು. ॥೪॥

ಆ ಬಾಲಾದೇವಿಯು ಯುದ್ಧಕ್ಕೆ ಹೋಗಕೂಡದೆಂದು ಶ್ರೀಮಹಾದೇವಿಯಾದ ತನ್ನ ಮಾತೆಯು ತನ್ನನ್ನು ಎಲ್ಲಿ ತಡೆಯುವಳೋ ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತಿದ್ದಳು. ಆದರೆ ಅವಳು ಮಹಾದೇವಿಯನ್ನಾಗಲೀ, ಮಂತ್ರಿಣಿಯನ್ನಾಗಲೀ ಅಲ್ಲಿ ಕಾಣದೇ ಇದ್ದುದರಿಂದ ಧೈರ್ಯವಾಗಿ ಮುಂದೆ ಹೊರಟಳು. ॥೫॥

ಆದ್ದರಿಂದ ಕುಮಾರಿಯು ತನ್ನ ಸ್ತ್ರೀಸಾರಥಿಯನ್ನೂ ಸೈನ್ಯವನ್ನೂ ಬಹಳ ಶೀಘ್ರವಾಗಿ ಹೋಗಲಪೇಕ್ಷಿಸಿ ತಾನು ರಥದಲ್ಲಿ ವಾಯುವೇಗದಿಂದ ರಾಕ್ಷಸಸೈನ್ಯಕ್ಕೆ ಅಭಿಮುಖವಾಗಿ ಹೋದಳು. ॥೬॥

ಆಕಾಶದಲ್ಲಿ ವಾಯುವಿನ ಬಡಿತಕ್ಕೆ ಸಿಕ್ಕಿದ ಶರತ್ಕಾಲದ ಮಹಾಮೇಘವು ಹೇಗೆ ಮುಂದೆ ಓಡುವುದೋ ಹಾಗೆ ಆ ಕುಮಾರಿಯ ರಥವು ಮುಂದಕ್ಕೆ ಓಡುತ್ತಿತ್ತು. ॥೭॥

ಬಾಲೆಯಾದ ಕುಮಾರಿಯು ಇಷ್ಟು ಶೀಘ್ರವಾಗಿ ಯುದ್ಧಕ್ಕೆ ಹೊರಟಿರುವುದನ್ನು ಕಂಡು ಅಶ್ವಾರೂಢಾ ಎಂಬ ಶಕ್ತಿಯು ಬಹಳ ಶೀಘ್ರವಾಗಿ ಆಕೆಯನ್ನು ಅನುಸರಿಸಿಕೊಂಡುಹೋದಳು. ॥೮॥

ತುರಂಗೈಸ್ತುಂಗಭಂಗಾಽಭೈಃ ಪಯೋಧಿರಿವ ತಚ್ಚಮೂಃ ।
ಉಪಾಽದ್ರವಜ್ಜಗಜ್ಜ್ವಾಲಾ ಪ್ಲಾವನಾಯೇವ ಸರ್ವತಃ ॥೯॥

ಸಂಪತ್ಕರೀ ಚ ತತ್ಪಶ್ಚಾದ್ರಣಕೋಲಾಹಲಸ್ಥಿತಾ ।
ಅನೇಕಕೋಟಿ ಮಾತಂಗ ಸೇನಾಸಂವಲಿತಾ ದ್ರುತಮ್ ॥೧೦॥

ವೇಗಾದನುಸಸಾರೋಚ್ಚೈರ್ಬಾಲಾರಕ್ಷಣಹೇತವೇ ।
ನೋದಿತಾ ಶೀಘ್ರಸಂಯಾನೇ ರಥವಿದ್ಯಾವಿಶಾರದಾ ॥೧೧॥

ಬಾಲಾಯಾಃ ಸದೃಶಾಽಽಕಾರಾ ವಾಹಯುತ್ಸ್ಯಂದನಂ ಜವಾತ್ ।
ಪ್ರಾವಣ್ಯಾದೀವ ಜಲಧಿಂ ದೈತ್ಯಸೇನಾಂ ವ್ಯಗಾಹತ ॥೧೨॥

ಉನ್ನತವಾದ ಅಲೆಗಳುಳ್ಳ ಸಮುದ್ರದಂತೆ ಎತ್ತರವಾದ ಕುದುರೆಗಳಿಂದ ಕೂಡಿರುವ ಈಕೆಯ ಸೈನ್ಯವು ಎಲ್ಲಾ ಕಡೆಯಲ್ಲಿಯೂ ಲೋಕಕ್ಕೆ ರಾಕ್ಷಸಸೈನ್ಯದಿಂದುಂಟಾಗಿರುವ ಜ್ವಾಲೆಗಳಂತಿರುವ ತಾಪವನ್ನು ತಣ್ಣಗೆ ಮಾಡಲು ಹೊರಟಿದೆಯೋ ಎಂಬಂತೆ ಕಾಣುತ್ತಾ ಶೀಘ್ರವಾಗಿ ಮುಂದುವರಿಯಿತು. ॥೯॥

ಅನಂತರ ಸಂಪನ್ನಾಥಾ ಎಂಬ ಶಕ್ತಿಯು ಯುದ್ಧದ ಕೋಲಾಹಲದ ಮಧ್ಯದಲ್ಲಿರುವವಳಾಗಿ ಅನೇಕಕೋಟಿ ಮಾತಂಗಕನ್ಯೆಯರ ಸೈನ್ಯದಿಂದ ಕೂಡಿದವಳಾಗಿ ಶೀಘ್ರವಾಗಿ ಯುದ್ಧಭೂಮಿಗೆ ತೆರಳಿದಳು. ॥೧೦॥

ರಥವನ್ನು ನಡೆಸುವ ವಿದ್ಯೆಯಲ್ಲಿ ನಿಪುಣಳಾದ ಸ್ತ್ರೀಸಾರಥಿಯು ಶೀಘ್ರವಾಗಿ ರಥವನ್ನು ನಡೆಸುತ್ತಿರಲು, ಈ ಶಕ್ತಿಯು ರಥದಮೇಲೆ ಕುಳಿತು ಕುಮಾರಿಯ ರಕ್ಷಣೆಗಾಗಿ ವೇಗವಾಗಿ ತೆರಳಿದಳು. ॥೧೧॥

ಕುಮಾರಿಗೆ ಸಮಾನವಾದ ಆಕಾರವುಳ್ಳ ಸ್ತ್ರೀಸಾರಥಿಯು ಸಂಪನ್ನಾಥೆಯು ಕುಳಿತಿದ್ದ ರಥವನ್ನು ಶೀಘ್ರವಾಗಿ ನಡೆಸಿದಳು. ಅನಂತರ ಈಕೆಯು ಮಳೆಗಾಲದ ನದಿಯು ಸಮುದ್ರವನ್ನು ವೇಗವಾಗಿ ಸೇರುವಂತೆ ರಾಕ್ಷಸಸೈನ್ಯವನ್ನು ಪ್ರವೇಶಿಸಿದಳು. ॥೧೨॥

ಸಜ್ಯಂ ಧನುರ್ವಿಕರ್ಷಂತೀ ವರ್ಷಂತೀ ಶರವರ್ಷಣಂ ।
ನದೀವೇಗವಿಭಿನ್ನೇಽಬ್ಧೌ ನೌರಿವ ಸ್ಯಂದನಂ ತು ತತ್ ॥೧೩॥

ವಿವೇಶ ದೈತ್ಯರಾಜಸ್ಯ ಶರೌಘದಲಿತಾಂ ಚಮೂಂ ।
ಕುಟಿಲಾಕ್ಷೋ ದೈತ್ಯಸೇನಾಮುಖೇ ಕುಂಜರಸಂಸ್ಥಿತಃ ॥೧೪॥

ಮಹತ್ಯಾ ಸೇನಯಾ ಬಾಲಾಂ ಸಂರುರೋಧ ಮಹಾಬಲೀ ।
ದೈತ್ಯಸೇನಾಪತಿಃ ಸೋಽಪಿ ದೃಷ್ಟ್ವಾ ಬಾಲಾಂ ಕುಮಾರಿಕಾಂ ॥೧೫॥

ಸೃಜಂತೀಂ ಶರವರ್ಷಾಣಿ ಮೇನೇಽದ್ಭುತಪರಾಕ್ರಮಾಂ ।
ಏಕಾಕಿನೀಂ ರಥಾರೂಢಾಂ ಮೃದ್ವಂಗೀಮಷ್ಟಹಾಯನಾಮ್ ॥೧೬॥

ಸಂಪನ್ನಾಥಾದೇವಿಯು ಧನುಸ್ಸಿಗೆ ಹೆದೆಯನ್ನೇರಿಸಿ ಬಾಣಗಳ ಮಳೆಗರೆಯುತ್ತಾ ನದೀವೇಗದಿಂದ ಭಾಗವಾಗುತ್ತಿರುವ ಸಮುದ್ರದಲ್ಲಿ ದೋಣಿಯು ಹೇಗೋ ಹಾಗೆ, ಸೈನ್ಯವನ್ನು ಪ್ರವೇಶಿಸುತ್ತಿರುವ ರಥದಲ್ಲಿ ಕುಳಿತುಹೋಗುತ್ತಿದ್ದಳು. ॥೧೩॥

ಆಕೆಯು ತನ್ನ ಬಾಣಗಳ ಪೆಟ್ಟಿನಿಂದ ಚೂರುಚೂರಾಗುತ್ತಿರುವ ರಾಕ್ಷಸ ಸೈನ್ಯದೊಳಕ್ಕೆ ನುಗ್ಗಿದಳು. ಆಗ ಕುಟಿಲಾಕ್ಷನು ರಾಕ್ಷಸ ಸೈನ್ಯದ ಮುಂಭಾಗದಲ್ಲಿ ಆನೆಯ ಮೇಲೆ ಕುಳಿತಿದ್ದನು. ॥೧೪॥

ಮಹಾಬಲಿಷ್ಠನಾದ ಈ ರಾಕ್ಷಸನು ತನ್ನ ದೊಡ್ಡ ಸೈನ್ಯದಿಂದ ಕುಮಾರಿಯನ್ನು ತಡೆದನು. ರಾಕ್ಷಸಸೇನಾಪತಿಯಾದ ಈತನು ಕುಮಾರಿಯಾದರೂ ಬಾಲಾದೇವಿಯ ಪರಾಕ್ರಮವನ್ನು ನೋಡಿ ಆಶ್ಚರ್ಯಪಟ್ಟನು. ॥೧೫॥

ಕುಮಾರಿಯು ತಮ್ಮ ಮೇಲೆ ಬಾಣಗಳ ಮಳೆಯನ್ನು ಕರೆಯುತ್ತಿದ್ದುದನ್ನು ಕಂಡು ರಾಕ್ಷಸ ಸೇನಾಪತಿಯು ಇವಳು ಆಶ್ಚರ್ಯಕರವಾದ ಪರಾಕ್ರಮವುಳ್ಳವಳೆಂದು ಭಾವಿಸಿದನು. ಅಲ್ಲದೆ, ಅವನು ಕುಮಾರಿಯು ಕೋಮಲಶರೀರವುಳ್ಳವಳಾಗಿ ಎಂಟು ವರ್ಷದ ಬಾಲಕಿಯಾಗಿದ್ದರೂ ರಥದ ಮೇಲೆ ಕುಳಿತು ಒಂಟಿಯಾಗಿ ಯುದ್ಧ ಮಾಡುತ್ತಿದ್ದುದನ್ನು ಕಂಡು ಅತ್ಯಂತವಾಗಿ ಆಶ್ಚರ್ಯಪಟ್ಟನು. ॥೧೬॥

ಅಹೋ ಚಿತ್ರ ತಮಂ ಹ್ಯೇತತ್ ಕೇಯಮೇಕಾ ಕುಮಾರಿಕಾ ।
ನಿರ್ಭಯಾ ಯೋಧಯತ್ಯಸ್ಮಾನಿಂದ್ರಾದೀನಾಂ ಚ ತ್ರಾಸನಾತ್ ॥೧೭॥

ಮನ್ಯೇಽಹಂ ಲಲಿತಾಮೇನಾಂ ನಿಮಿತ್ತೈಶ್ಚಾರಸಂಸ್ತುತೈಃ ।
ಲಕ್ಷ್ಯೇ ಸರ್ವಚಿಹ್ನಾನಿ ಕ್ವಿಂ ತ್ವೇಷಾ ತರುಣೀ ನ ಚ ॥೧೮॥

ಅಪ್ಯೇಷಾ ತಸ್ಯ ತನಯಾ ಭವೇತ್ ಪೂರ್ವಂ ಹಿ ಯಾ ಶ್ರುತಾ ।
ಕಥಂ ತತ್ರ ನ ಯಾ ಬಾಲಾ ಸೇನಾವಿರಹಿತಾ ಪುನಃ ॥೧೯॥

ಏಕಲಾ ಯುದ್ಧಸನ್ನದ್ಧಾ ಸಮಾಗಚ್ಛೇನ್ಮೃಧೇ ಕ್ವಚಿತ್ ।
ನೂನಮೇಷೈವ ಸರ್ವಾನ್ನೋ ಜೇಷ್ಯತೀವ ವಿಭಾತಿ ಮೇ ॥೨೦॥

ಲಕ್ಷ್ಯೇ ನ ಯುಧಿ ಸ್ಥಾತುಂ ಸಂಮುಖೇಽಸ್ಯಾ ಭವೇತ್ಪ್ರಭುಃ ।
ವಿಶುಕ್ರೋ ವಾ ವಿಷಂಗೋ ವಾ ರಾಜಾ ವಾಽಪ್ಯ ಹಮೇವ ವಾ ॥೨೧॥

ಇವಳು ಒಬ್ಬಳೇ ಆಗಿ ಕುಮಾರಿಯಾಗಿದ್ದರೂ ಸ್ವಲ್ಪವೂ ಭಯವಿಲ್ಲದೆ ಯುದ್ಧಮಾಡುತ್ತಿರುವುದು ಮತ್ತು ಇಂದ್ರನೇ ಮೊದಲಾದವರನ್ನೂ ಭಯಪಡಿಸುತ್ತಾ ಯುದ್ಧಮಾಡುತ್ತಿರುವುದು ಅತ್ಯಂತ ಆಶ್ಚರ್ಯವಾಗಿದೆ. ॥೧೭॥

ಗೂಢಚಾರರು ಹೊಗಳಿದ-ಗುಣಗಳಿಂದ ಶೋಭಿಸುವ ಮತ್ತು ಚಿಹ್ನೆಗಳಿಂದ ಕೂಡಿರುವ ಇವಳನ್ನು ಲಲಿತಾದೇವಿಯನ್ನಾಗಿಯೇ ಭಾವಿಸುವೆನು. ಆದರೆ ಎಲ್ಲಾ ಚಿಹ್ನೆಗಳಿದ್ದರೂ ಇವಳು ತರುಣಿಯಾಗಿಲ್ಲದುದರಿಂದ ನನಗೆ ಸಂದೇಹವುಂಟಾಗಿದೆ. ॥೧೮॥

ಹಿಂದೆ ನಾವು ಕೇಳಿದ್ದ ಲಲಿತಾದೇವಿಯ ಮಗಳು ಇವಳಿರಬಹುದೇ ? ಆದರೆ ಆಕೆಯ ಮಗಳೇ ಇವಳಾಗಿದ್ದರೆ ಹೀಗೆ ಸೈನ್ಯವೇ ಇಲ್ಲದಿರುವಳೇ ? ॥೧೯॥

ಆದರೆ ಇವಳು ಒಂಟಿಯಾಗಿ ಯುದ್ಧಕ್ಕೆ ಸಿದ್ಧಳಾಗಿ ಎಂದಿಗಾದರೂ ಯುದ್ಧಕ್ಕೆ ಬರುತ್ತಿದ್ದಳೇ? ಇವಳೊಬ್ಬಳೇ ನಮ್ಮನ್ನೆಲ್ಲರನ್ನೂ ಖಂಡಿತವಾಗಿಯೂ ಜಯಿಸುವಳೆಂದು ನನಗೆ ತೋರುವುದು ! ॥೨೦॥

ಇವಳ ಮುಂದಕ್ಕೆ ಯುದ್ಧಕ್ಕೆ ನಿಲ್ಲಲು ವಿಶ್ರುತ, ವಿಷಂಗ, ರಾಕ್ಷಸರಾಜ ಅಥವಾ ನಾನು ಹೀಗೆ ಯಾರೂ ಸಮರ್ಥರಲ್ಲವೆಂದು ತೋರುತ್ತದೆ. ॥೨೧॥

ಕುತೋ ರಾಜಕುಮಾರಾಽದ್ಯಾಃ ಪ್ರತ್ಯೇಕಂ ಮಿಲಿತಾಶ್ಚ ವಾ ।
ಅಸ್ಮತ್ಸೇನಾಂ ಯತ್ರ ಯತ್ರ ನಿರೀಕ್ಷತಿ ತತಸ್ತತಃ ॥೨೨॥

ಶರಜಾಲೇನ ಶಿಥಿಲಾಂ ಕರೋತಿ ನಿಮಿಷಾರ್ಧತಃ ।
ಕೋಟಿಶೋ ನಿಹತಾ ದೈತ್ಯಾಸ್ತ್ರಾಸಿತಾಽಸ್ಮನ್ಮಹಾಚಮೂಃ ॥೨೩॥

ಏತೇ ವಿಭಿನ್ನಬಾಹ್ವಂಘ್ರಿ ಹೃದಯಕ್ರೋಡಮಸ್ತಕಾಃ ।
ಪತಿತಾಶ್ಚ ಮೃತಾಶ್ಚಾನ್ಯೇ ಧಾವಂತ್ಯನ್ಯೇ ಮಹಾಭಯಾತ್ ॥೨೪॥

ಶೋಣಿತಪ್ರವಹಾಂ ತರ್ತುಮಶಕ್ತಾ ಭಯಕಂಪಿತಾಃ ।
ಪತಿತಾಸ್ತತ್ರ ಶತಶೋ ನಿಮಗ್ನಾ ರಕ್ತಸಿಂಧುಷು ॥೨೫॥

ಹೀಗಿರುವಾಗ ರಾಜಕುಮಾರರೇ ಮೊದಲಾದವರು ಪ್ರತ್ಯೇಕವಾಗಿಯಾಗಲೀ ಅಥವಾ ಒಟ್ಟಿಗಾಗಲೀ ಇವಳೊಂದಿಗೆ ಯುದ್ಧಮಾಡಬಲ್ಲರೇ? ಇವಳು ನಮ್ಮ ಸೈನ್ಯವನ್ನು ಎಲ್ಲೆಲ್ಲಿ ನೋಡುವಳೋ ಅಲ್ಲಲ್ಲಿ ಬಾಣಗಳ ಮಳೆಗರೆಯುತ್ತಿರುವವಳಾಗಿದ್ದಾಳೆ. ॥೨೨॥

ಇವಳು ನಮ್ಮ ಸೈನ್ಯವನ್ನು ತನ್ನ ಬಾಣಗಳ ಸಮೂಹಗಳಿಂದ ಕಮ್ಮಿಯಾಗುವಂತೆ ಮಾಡುತ್ತಿದ್ದಾಳೆ. ಇವಳು ಕೋಟ್ಯಾಂತರ ರಾಕ್ಷಸರನ್ನು ಈಗಾಗಲೇ ಕೊಂದಳು. ಮತ್ತು ನಮ್ಮ ದೊಡ್ಡ ಸೈನ್ಯವನ್ನೂ ಹೆದರಿಸಿದಳು. ॥೨೩॥

ನಮ್ಮ ಕಡೆಯ ಸೈನಿಕರಾದ ಇವರ ತೋಳುಗಳು, ಕಾಲುಗಳು, ಹೃದಯಗಳು, ಕಂಕಳುಗಳು, ತಲೆಗಳು ಇವೆಲ್ಲವೂ ಇವಳಿಂದ ಭಗ್ನವಾದವು. ಇನ್ನೂ ಅನೇಕ ಸೈನಿಕರು ಕೆಳಗೆ ಬಿದ್ದರು. ಇತರ ಕೆಲವರು ಸತ್ತರು. ಬಹಳ ಭಯದಿಂದ ಇತರರು ಓಡುತ್ತಿದ್ದಾರೆ. ॥೨೪॥

ನಮ್ಮ ಕಡೆಯ ಸೈನಿಕರು ಈ ರಕ್ತದ ಪ್ರವಾಹವನ್ನು ದಾಟಲು ಅಶಕ್ತರಾಗಿ ಭಯದಿಂದ ನಡಗುತ್ತಾ ನೂರಾರು ಮಂದಿ ಬಿದ್ದು ರಕ್ತದ ಕೋಡಿಗಳಲ್ಲಿ ಚೆನ್ನಾಗಿ ಮುಳುಗಿದ್ದಾರೆ. ॥೨೫॥

ಪ್ರಾಪ್ತೈಷಾಽಸ್ಮಚ್ಚಮೂಂ ಭಿತ್ವಾ ಪ್ರವಿಶೇತ್ಕ್ಷಣಮಾತ್ರತಃ ।
ರೋದ್ಧವ್ಯೇಯಂ ಮಯಾ ಯತ್ನಾದ್ಧಿಜ್ಞಾಮೇವಂ ವಿಧಂ ಸ್ಥಿತಂ ॥೨೬॥

ಯೋಷಿದ್ಬಾಲಾ ಮತ್ಸಮಕ್ಷಂ ಭಿತ್ವಾ ಸೇನಾಂ ಪ್ರವೇಕ್ಷ್ಯತಿ ।
ನೈತದಿಂದ್ರೇಣ ಮರುತಾ ವಾಯುನಾಽಪಿ ಕೃತಂ ಪುರಾ ॥೨೭॥

ವಿಷಮಂ ಭಾತಿ ಮೇ ಹ್ಯೇತದೇಷಾ ಜೇಯೇತಿ ಸರ್ವಥಾ ।
ಇತಿ ನಿಶ್ಚಿತ್ಯ ತಾಂ ರೋದ್ಧುಂ ಮಹಾಗಜಸಮಾಸ್ಥಿತಃ ॥೨೮॥

ಸಸಾರ ಪುರತಸ್ತಸ್ಯಾಃ ಶರಜಾಲಾನ್ಯವಾ ಕಿರತ್ ।
ಯುಯೋಧಾಽತಿಬಲೋ ದೈತ್ಯಃ ಕುಟಿಲಾಕ್ಷಸ್ತಯಾ ಸಹ ॥೨೯॥

ಬಾಲಯಾ ಯುದ್ಧಕುಶಲೋ ಮಾಯಯಾ ಶಸ್ತ್ರಾಽಸ್ತ್ರಕೋವಿದಃ ।
ವವರ್ಷ ಶರವರ್ಷೇಣ ಬಾಲಾಂ ಯುದ್ಧೇಽಗ್ರತಃ ಸ್ಥಿತಾಂ ॥೩೦॥

ಇವಳು ಈ ರೀತಿಯಲ್ಲಿ ನುಗ್ಗುತ್ತಾ ಕ್ಷಣಮಾತ್ರದಲ್ಲಿಯೇ ನಮ್ಮ ಸೈನ್ಯವನ್ನು ಭೇದಿಸಿಕೊಂಡು ನಮ್ಮ ಮುಖ್ಯ ಸೈನ್ಯದೊಳಕ್ಕೆ ಪ್ರವೇಶಿಸಿಬಿಟ್ಟಳು. ಆದ್ದರಿಂದ ನಾನು ನನ್ನ ಪ್ರಯತ್ನವನ್ನೆಲ್ಲವನ್ನೂ ಉಪಯೋಗಿಸಿ ಇವಳನ್ನು ತಡೆಯಬೇಕು. ॥೨೬॥

ಸ್ತ್ರೀಯಾದ ಈ ಬಾಲೆಯು ನಮ್ಮ ಸೈನ್ಯವನ್ನೆಲ್ಲವನ್ನೂ ಭೇದಿಸಿ ಒಳಗೆ ನುಗ್ಗುವಳು. ಹಿಂದೆ ಯಾವಾಗಲೂ ಇಂದ್ರಾದಿ ಇನ್ನಾವದೇವತೆ ಅಥವಾ ವಾಯು ಇವರಾರೂ ಈ ರೀತಿಯಲ್ಲಿ ಮಾಡಿರಲಿಲ್ಲ. ॥೨೭॥

ಆದ್ದರಿಂದ ಇವಳನ್ನು ಸರ್ವವಿಧದಲ್ಲೂ ನಾನು ಜಯಿಸಬಲ್ಲೆನು ಎಂಬುದು ತುಂಬ ವಿರುದ್ಧವಾಗಿ ನನಗೆ ಕಾಣುತ್ತಿದೆ. ಹೀಗೆ ಯೋಚಿಸಿ ಆಕೆಯನ್ನು ತಡೆಯಲು ಇವನು ದೊಡ್ಡ ಆನೆಯೊಂದನ್ನು ಏರಿದನು. ॥೨೮॥

ಆಗ ಬಹಳ ಬಲಿಷ್ಠನಾದ ಕುಟಿಲಾಕ್ಷನು ಮುಂದಕ್ಕೆ ಸರಿದು ಅವಳ ಮೇಲೆ ಬಾಣಗಳ ಸಮೂಹವನ್ನೆಸೆಯುತ್ತಾ ಅವಳೊಂದಿಗೆ ಕಾದಾಡಿದನು. ॥೨೯॥

ಮಾಯಾಶಸ್ತ್ರಗಳು ಮತ್ತು ಅಸ್ತ್ರಗಳು ಇವುಗಳ ವಿಷಯದಲ್ಲಿ ಪಂಡಿತನಾದ ಯುದ್ಧದಲ್ಲಿ ನಿಪುಣನಾದ ಕುಟಿಲಾಕ್ಷನು ಬಾಲಾದೇವಿಯೊಂದಿಗೆ ಯುದ್ಧಮಾಡುತ್ತಾ ತನ್ನ ಮುಂದಿರುವ ಅವಳ ಮೇಲೆ ಬಾಣಗಳ ಮಳೆಗರೆದನು. ॥೩೦॥

ಉದ್ಯಂತಂ ಭಾಸ್ಕರ ಮಿವ ಹಿಮಸಂಹತಿ ವರ್ಷವತ್ ।
ಸಾಽಪಿ ಬಾಲಾಽರುಣಾಽಽಭಾಂಗೀ ಶರತೀಕ್ಷ್ಣತರಾಽಂಶುಭಿಃ ॥೩೧॥

ಅನಯನ್ನಾಶಮತ್ಯಂತಂ ತಂ ವರ್ಷಂ ನಿಮಿಷಾರ್ಧತಃ ।
ಅರ್ದಯಾಮಾಸ ದೈತ್ಯಸ್ಯ ಸೇನಾಂ ನಿಶಿತಸಾಯಕೈಃ ॥೩೨॥

ಅತಿಲಾಘವತಸ್ತಸ್ಯಾಃ ಶರಸಂಧಾನ ಮೋಕ್ಷಣಂ ।
ನ ವೇದ ಕಶ್ಚಿತ್ಕುಶಲೋಽಪ್ಯತಿ ಸೂಕ್ಷ್ಮದೃಶಾಽಪಿ ಚ ॥೩೩॥

ಅಪಶ್ಯನ್ ಶರಸಂಘಾತ ಧಾರಾಂ ಚಾಪ ವಿನಿರ್ಗತಾಂ ।
ಪ್ರಾವೃಡ್ಗಿರಿಮುಖಾತ್ತೋಯ ಧಾರಾಮಿವ ನಿರಂತರಾಂ ॥೩೪॥

ವಿಧೂಯ ತಾಂ ಮಹಾಸೇನಾಂ ಮುಹೂರ್ತಾಽಷ್ಟಮಭಾಗತಃ ।
ಕುಟಿಲಾಕ್ಷಂ ಸಮಾಸಾದ್ಯ ಜಘಾನ ನಿಶಿತೈಃ ಶರೈಃ ॥೩೫॥

ಕೆಂಪಗೆ ಪ್ರಕಾಶಿಸುತ್ತಿರುವ ದೇಹಕಾಂತಿಯುಳ್ಳ ಆ ಬಾಲಾದೇವಿಯೂ ಕೂಡ ಪ್ರತಿಯಾಗಿ ಬಾಣಗಳ ಅತ್ಯಂತ ತೀಕ್ಷ್ಣವಾದ ಮೊನೆಗಳಿಂದ ಆ ರಾಕ್ಷಸನ ಬಾಣಗಳ ಸುರಿಮಳೆಯ ಮೇಲೆ, ಉದಯಿಸುತ್ತಿರುವ ಸೂರ್ಯನ ಮೇಲೆ ಹಿಮ ಸಮೂಹದ ಮಳೆಯೋಪಾದಿಯಲ್ಲಿ, ಬಾಣಗಳ ಮಳೆಯನ್ನು ಸುರಿಸಿದಳು. ॥೩೧॥

ಆ ಬಾಲಾದೇವಿಯು ಈ ರೀತಿಯಲ್ಲಿ ರಾಕ್ಷಸನ ಬಾಣಗಳ ಸುರಿಮಳೆಯನ್ನು ಒಂದರ್ಧನಿಮಿಷದಲ್ಲಿಯೇ ಅತ್ಯಂತವಾಗಿ ನಾಶಮಾಡಿದಳು. ಅಲ್ಲದೆ ಅವಳು ತೀಕ್ಷ್ಣವಾದ ಬಾಣಗಳಿಂದ ರಾಕ್ಷಸ ಸೈನ್ಯವನ್ನು ಕಾಡಿಸಿದಳು. ॥೩೨॥

ಯುದ್ಧದಲ್ಲಿ ನಿಪುಣನಾದವನೂ ಕೂಡ ಬಹಳ ಸೂಕ್ಷ್ಮವಾದ ದೃಷ್ಟಿಯಿಂದ ನೋಡಿದರೂ ಬಾಲಾದೇವಿಯು ತನ್ನ ಕೈ ಚಳಕದಿಂದ ಅವನ ಮೇಲೆ ಬಾಣ ಪ್ರಯೋಗ ಮಾಡುತ್ತಿರುವುದರ ಸೂಕ್ಷ್ಮವನ್ನು ತಿಳಿಯಲಾರದೇ ಹೋದನು. ॥೩೩॥

ಯುದ್ಧದಲ್ಲಿ ನಿಪುಣನಾದ ಆ ರಾಕ್ಷಸನೂ ಕೂಡ ಬಾಲಾದೇವಿಯು ತನ್ನ ಬಿಲ್ಲಿನಿಂದ ಎಸೆಯುತ್ತಿದ್ದ ಬಾಣಗಳ ಸಮೂಹಗಳ ಮಳೆಯು, ಮಳೆಗಾಲದಲ್ಲಿ ಪರ್ವತದ ತುದಿಯಿಂದ ಹರಿದುಬರುವ ನೀರಿನ ಪ್ರವಾಹದಂತೆ, ಎಡೆಬಿಡದೆ ಬರುತ್ತಿರಲು ಅದರ ಸೂಕ್ಷ್ಮವನ್ನು ಅರಿಯಲಾರದೆ ಹೋದನು. ॥೩೪॥

ಕುಮಾರಿಯು ಕುಟಿಲಾಕ್ಷನ ಮಹಾಸೈನ್ಯವನ್ನು ಒಂದು ಮುಹೂರ್ತದ ಎಂಟನೆಯ ಒಂದು ಭಾಗದಷ್ಟು ಕಾಲದಲ್ಲೇ ನಾಶಮಾಡಿ, ಕುಟಿಲಾಕ್ಷನನ್ನು

ಯುಯೋಧ ಸೋಽಪಿ ಬಲವಾನ್ ಸರ್ವಪ್ರಾಣೇನ ಸಂಯುಗೇ ।
ತಸ್ಯ ಶಸ್ತ್ರಾಸ್ತ್ರಜಾಲಾನಿ ಪ್ರತಿಶಸ್ತ್ರಾಸ್ತ್ರವರ್ಷತಃ ॥೩೬॥

ಮೋಘಂ ಕೃತ್ವಾ ಶರೈಸ್ತೀಕ್ಷ್ಣೈಃ ಪ್ರಾಹರತ್ ದೈತ್ಯ ನಾಯಕಂ ।
ಏಕೇನ ತೀಕ್ಷ್ಣಭಲ್ಲೇನ ಚಾಪಂ ತಸ್ಯಾಽಚ್ಛಿನಜ್ಜವಾತ್ ॥೩೭॥

ತತಶ್ಚೈಕೇನ ವಾಹಸ್ಯ ಗಜಸ್ಯ ಪ್ರಾಹರನ್ಮುಖೇ ।
ಇಷುಣಾ ತಾಡಿತೋ ವಕ್ತ್ರೇ ಗಿರಿರಾಜಸಮೋ ಗಜಃ ॥೩೮॥

ಚೀತ್ಕುರ್ವನ್ ವಿಭ್ರಮನ್ ಭೂಮೌ ಗತಾಸುರಪತತ್ಕ್ಷಣಾತ್ ।
ಮರಿಷ್ಯಂತಮಿಮಂ ಜ್ಞಾತ್ವಾ ಕುಟಿಲಾಕ್ಷೋ ಗದಾಧರಃ ॥೩೯॥

ಸಮಾಪಿಸಿ, ತನ್ನ ತೀಕ್ಷ್ಣವಾದ ಬಾಣಗಳಿಂದ ಅವನನ್ನು ಚನ್ನಾಗಿ ಹೊಡೆದಳು. ||೩೫||

ಬಲಿಷ್ಠನಾದ ಆ ರಾಕ್ಷಸನೂ ಕೂಡ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ಯುದ್ಧದಲ್ಲಿ ಕುಮಾರಿಯೊಂದಿಗೆ ಶೌರ್ಯವನ್ನು ತೋರಿಸುತ್ತಾ ಬಹಳವಾಗಿ ಕಾದಾಡಿದನು. ಆದರೂ ರಾಕ್ಷಸನ ಶಸ್ತ್ರಗಳು ಮತ್ತು ಅಸ್ತ್ರಗಳ ಸಮೂಹವನ್ನು ತನ್ನ ಪ್ರತಿಯಾದ ಶಸ್ತ್ರಾಸ್ತ್ರಗಳಿಂದ ಧ್ವಂಸಮಾಡಿದಳು. ||೩೬||

ಕುಮಾರಿಯು ಈರೀತಿಯಾಗಿ ತನ್ನ ಪ್ರತಿಯಾದ ಶಸ್ತ್ರಾಸ್ತ್ರಗಳಿಂದ ರಾಕ್ಷಸನ ಬಾಣಗಳು ವ್ಯರ್ಥವಾಗುವಂತೆ ಮಾಡಿ ರಾಕ್ಷಸ ಸೇನಾನಾಯಕನಾದ ಅವನನ್ನು ಚೆನ್ನಾಗಿ ಹೊಡೆದಳು. ಅನಂತರ ಅವಳು ಒಂದು ತೀಕ್ಷ್ಣವಾದ ಭರ್ಜಿಯಿಂದ ವೇಗವಾಗಿ ಅವನ ಬಿಲ್ಲನ್ನು ಕತ್ತರಿಸಿದಳು. ||೩೭||

ಅನಂತರ ಅವಳು ತನ್ನ ಒಂದು ಬಾಣದಿಂದ ಅವನ ವಾಹನವಾದ ಆನೆಯ ಮುಖಕ್ಕೆ ಹೊಡೆದಳು. ಅವಳ ಬಾಣದ ಪೆಟ್ಟಿಗೆ ಸಿಕ್ಕಿದ, ಪರ್ವತಶ್ರೇಷ್ಠಕ್ಕೆ ಸಮಾನವಾದ, ಆ ಆನೆಯು ಬಹಳ ಒದ್ದಾಡಿತು. ||೩೮||

ಆ ಆನೆಯು ಚೀತ್ಕಾರಮಾಡುತ್ತಾ ಸುತ್ತುತ್ತಾ ಕೂಡಲೇ ಪ್ರಾಣವನ್ನು ಬಿಡುತ್ತಾ ಭೂಮಿಯಮೇಲೆ ಬಿದ್ದಿತು. ಹೀಗೆ ಸಾಯುತ್ತಿರುವ ಆನೆಯನ್ನು ನೋಡಿ ಕುಟಿಲಾಕ್ಷನು ತನ್ನ ಗದೆಯನ್ನು ಎತ್ತಿಕೊಂಡು ಆ ಕುಮಾರಿಯ ಕಡೆಗೆ ಓಡಿದನು. ||೩೯||

ಕ್ರೋಧೇನಾಽಭ್ಯಪ್ರವರ್ಧಂತುಂ ಬಾಲಾಂ ರಥಸಮಾಶ್ರಯಾಂ ।
ಗ್ರಸಂತಮರುಣಂ ಬಾಲಂ ರಾಹುಂ ದ್ರುತಗತಿಂ ಯಥಾ ॥೪೦॥

ಅಪಶ್ಯನ್ ವಿಬುಧಾಃ ಸಿದ್ಧಾ ನಭೋಮಂಡಲ ಸಂಶ್ರಯಾಃ ।
ಆಯಾಂತಮತಿ ವೇಗೇನ ಗದಾಹಸ್ತಂ ನಿಶಾಮ್ಯ ಸಾ ॥೪೧॥

ಶರೇಣಾಽಽಕರ್ಣ ಪೂರ್ಣೇನ ವಿವ್ಯಾಧ ಹೃದಯಾಂತರೇ ।
ಸವಿದ್ಧಸ್ತೀಕ್ಷ್ಣಬಾಣೇನ ಬಹು ಶೋಣಿತಮುದ್ಗಿರನ್ ॥೪೨॥

ಪಪಾತ ಮೂರ್ಛಿತೋ ಭೂಮೌ ವಜ್ರಾಽಹತಮಹೀಧ್ರವತ್ ।
ಅಥ ಬಾಲಾ ಪ್ರಾಹ ಸಖೀಂ ರಥನೇತ್ರೀಂ ಸ್ಮಿತಾನನಾ ॥೪೩॥

ಕೂಡಲೇ ಆ ರಾಕ್ಷಸನು ಕೋಪದಿಂದ ರಥದ ಮೇಲೆ ಕುಳಿತಿರುವ ಕುಮಾರಿಯನ್ನು ಕೊಲ್ಲಲು, ಉದಯಿಸುತ್ತಿರುವ ಸೂರ್ಯನನ್ನು ರಾಹುವು ನುಂಗಲು ಶೀಘ್ರವಾಗಿ ಅಟ್ಟಿಸಿಕೊಂಡು ಹೋಗುವಂತೆ, ಎದುರಿಗೆ ಓಡಿ ಗದೆಯಿಂದ ಅವಳನ್ನು ಹೊಡೆಯಲು ಪ್ರಯತ್ನಪಟ್ಟನು. ॥೪೦॥

ಈರೀತಿಯಲ್ಲಿ ಗದೆಯನ್ನೆತ್ತಿಕೊಂಡು ಬರುತ್ತಿರುವ ಕುಟಿಲಾಕ್ಷನನ್ನು ದೇವತೆಗಳು, ಸಿದ್ಧರು ತಮ್ಮ ಆಕಾಶಮಾರ್ಗದಲ್ಲಿಯೇ ಇದ್ದು ನೋಡಿದರು. ಬಹಳ ವೇಗವಾಗಿ ಗದೆಯನ್ನು ಎತ್ತಿಕೊಂಡು ಬರುತ್ತಿರುವ ರಾಕ್ಷಸನ ವಿಚಾರವನ್ನು ಕುಮಾರಿಯೂ ಕೇಳಿ ತಿಳಿದುಕೊಂಡಳು. ॥೪೧॥

ಕುಮಾರಿಯು ತನ್ನ ಬಾಣವನ್ನು ಕಿವಿಯವರೆವಿಗೂ ಸೆಳೆದು ಅವನ ಹೃದಯದ ಮಧ್ಯಭಾಗಕ್ಕೆ ಹೊಡೆದಳು. ಹೀಗೆ ತೀಕ್ಷ್ಣಬಾಣದ ಹೊಡೆತಕ್ಕೆ ಸಿಕ್ಕಿದ ಆ ರಾಕ್ಷಸನು ಹೆಚ್ಚಾಗಿ ರಕ್ತವನ್ನು ಕಾರಿದನು. ॥೪೨॥

ಆಗ ರಾಕ್ಷಸನು, ವಜ್ರಾಯುಧದ ಪೆಟ್ಟಿಗೆ ಸಿಕ್ಕಿದ ದೊಡ್ಡ ಪರ್ವತದಂತೆ, ಮೂರ್ಛೆಯನ್ನು ಹೊಂದಿ ಭೂಮಿಯಲ್ಲಿ ಬಿದ್ದನು. ಅನಂತರ ಕುಮಾರಿಯು ಮುಗುಳ್ನಗೆ ನಗುತ್ತಾ ಸ್ನೇಹಿತೆಯಾದ ಸ್ತ್ರೀ ಸಾರಥಿಯನ್ನು ಕುರಿತು ಈರೀತಿಯಲ್ಲಿ ಹೇಳಿದಳು. ॥೪೩॥

ಸಖಿ ಶೀಘ್ರಂ ನಯ ರಥಂ ಭಂಡದೈತ್ಯ ಸಮೀಪತಃ ।
ಆಯಾತ್ಯೇಷಾ ಪೃಷ್ಠತೋ ಮೇ ದಂಡಿನೀ ಶೂಕರಧ್ವಜಾ ॥೪೪॥

ಉತ್ಕಂಠಿತಾಽಸ್ಮಿ ದೈತ್ಯೇನ ಯೋದ್ಧುಂ ಭಂಡೇನ ಸಂಗರೇ ।
ಮಾಮಾಸಾದ್ಯ ದಂಡನಾಥಾ ಪ್ರತಿರೋತ್ಸ್ಯತಿ ವೈ ಧ್ರುವಂ ॥೪೫॥

ಯಥಾ ನಾಽಽಸಾದಯೇನ್ಮಾಂ ಸಾ ತಥಾ ವಾಹಯ ಸತ್ವರಂ ।
ಇತ್ಯುಕ್ತ್ವಾ ರಥನೇತ್ರೀಂ ಸಾ ಬಾಲಾಂ ಪ್ರೋಚೇ ಸಖೀ ತದಾ ॥೪೬॥

ದೈತ್ಯಸೇನಾ(ಂ) ಮಧ್ಯತಸ್ತು ಧ್ವಜೋ ಯೋಽಯಂ ಮಹೋನ್ನತಃ।
ದೃಶ್ಯತೇ ಕಾಂಚನಮಯೋ ರಥಸ್ತಸ್ಯೈಷ ಏವ ಹಿ ॥೪೭॥

ಇತೋ ದೂರತರೇ ಸ ಸ್ಯಾನ್ಮಹದ್ಭಿರ್ದೈತ್ಯಪುಂಗವೈಃ ।
ಮಹಾರಥಿಭಿರತ್ಯುಗ್ರೈಃ ಸಂವೃತೋ ನನು ದೃಶ್ಯತೇ ॥೪೮॥

ಎಲೌ ಸ್ನೇಹಿತೆಯೇ, ನನ್ನ ಈ ರಥವನ್ನು ಭಂಡರಾಕ್ಷಸನ ಸಮೀಪಕ್ಕೆ ನಡೆಸು. ಏಕೆಂದರೆ ಹಂದಿಯೇ ಬಾವುಟವಾಗುಳ್ಳ ದಂಡಿನೀದೇವಿಯು ನನ್ನ ಹಿಂದೆ ಬರುತ್ತಿದಾಳೆ. ||೪೪||

ನಾನು ಯುದ್ಧದಲ್ಲಿ ಭಂಡರಾಕ್ಷಸನೊಂದಿಗೆ ಕಾದಾಡಲು ಉತ್ಸಾಹಉಳ್ಳವಳಾಗಿರುತ್ತೇನೆ. ಆದರೆ ದಂಡನಾಯಕಿಯು ನನ್ನನ್ನು ಸಮೀಪಿಸಿ ನನ್ನನ್ನು ನಿಜವಾಗಿಯೂ ತಡೆದುಬಿಡುವಳು. ||೪೫||

ನನ್ನನ್ನು ಅವಳು ಹೇಗೆ ಸಮೀಪಿಸಲಾರಳೋ ಹಾಗೆ ನನ್ನ ರಥವನ್ನು ಶೀಘ್ರವಾಗಿ ನಡೆಸು. ಎಂದು ಕುಮಾರಿಯು ಹೇಳಲು, ಸಾರಥಿಯಾದ ಸ್ನೇಹಿತೆಯು ಕುಮಾರಿಯನ್ನು ಕುರಿತು ಈರೀತಿಯಾಗಿ ಹೇಳಿದಳು. ||೪೬||

ಈ ರಾಕ್ಷಸ ಸೈನ್ಯದ ಮಧ್ಯಭಾಗದಲ್ಲಿ ಬಹಳ ಎತ್ತರವಾದ ಬಾವುಟವೊಂದು ಕಾಣುವುದಷ್ಟೆ? ಚಿನ್ನದಿಂದ ಪೂರ್ಣವಾಗಿ ಮಾಡಿದ ರಥವು ಆತನದೇ. ಎಂದು ತಿಳಿಯಿರಿ. ||೪೭||

ರಾಕ್ಷಸರಾಜನೂ ಮಹಾರಥಿಕರೂ, ರಾಕ್ಷಸಶ್ರೇಷ್ಠರೂ ಆದ ರಾಕ್ಷಸರಿಂದ ಕೂಡಿ ಬಹಳ ಭಯಂಕರವಾದ ರೀತಿಯಲ್ಲಿ ರಕ್ಷಣೆಯನ್ನು ಮಾಡಿಕೊಂಡು ಅವರಿಂದ ಸುತ್ತುವರಿದವನಾಗಿ ಬಹಳ ದೂರದಲ್ಲಿರುವಹಾಗೆ ಕಾಣುತ್ತಾನೆ. ||೪೮||

ವಿವರಂ ತು ನ ಪಶ್ಯಾಮಿ ರಥಂ ಯೇನ ನಯಾಮಿ ತತ್ ।
ಶಸ್ತ್ರೇಣ ಸೃಜ ಮಾರ್ಗಂ ತ್ವಂ ವಾಹಯಾಮಿ ತತೋ ರಥಂ ॥೪೯॥

ಇತ್ಯುಕ್ತ್ವಾ ಲಘುಹಸ್ತಾ ಸಾ ಬಾಲಾ ಮಾರ್ಗಮಕಲ್ಪಯತ್ ।
ಶರವೃಷ್ಟ್ಯಾ ನಿಮೇಷೇಣ ದೈತ್ಯಸೇನಾಸು ಮಧ್ಯತಃ ॥೫೦॥

ಸಾಯಕೌಘಪ್ರವಾಹೇನ ಭಗ್ನಸೇತುರಿವಾಽಽಬಭೌ ।
ಸೇನಾಮುಖಂ ಮಹಾಶೂರೈರ್ದೈತ್ಯೈರ್ಯುದ್ಧಮಪಿ ಕ್ಷಣಾತ್ ॥೫೧॥

ಕೇಚಿದ್ಭಗ್ನರಥಾಶ್ಚಾಽನ್ಯೇ ನಷ್ಟಾಽಶ್ವ ಗಜವಾಹನಾಃ ।
ಅಸಹ್ಯಾಂ ಶರಧಾರಾಂ ತಾಂ ಪ್ರಾಪ್ಯ ದೈತ್ಯಾಃ ಪ್ರದುದ್ರುವುಃ ॥೫೨॥

ಅಪರೇ ಭಿನ್ನಬಾಹ್ವಕ್ಷಿ ಚರಣೋದರಮಸ್ತಕಾಃ ।
ತಥಾಽನ್ಯೇ ಶಸ್ತ್ರಸಂಘಾತ ಪಾತೇನ ತಿಲಶಃ ಕೃತಾಃ ॥೫೩॥

ನಾನು ರಥವನ್ನು ತೆಗೆದುಕೊಂಡು ಹೋಗುವ ಮಾರ್ಗವನ್ನೇ ಕಾಣುತ್ತಿಲ್ಲ. ಆದ್ದರಿಂದ ಶಸ್ತ್ರದಿಂದ ನೀವು ಮಾರ್ಗವನ್ನು ಮಾಡಿ. ಅನಂತರ ನಾನು ತಮ್ಮ ರಥವನ್ನು ಅಲ್ಲಿಗೆ ನಡೆಸುತ್ತೇನೆ. ॥೪೯॥

ಹೀಗೆ ಸಾರಥಿಯು ಹೇಳಲು ಕೈಚಳಕದಿಂದ ಕುಮಾರಿಯು ಕ್ಷಣಕಾಲದಲ್ಲಿಯೇ ರಾಕ್ಷಸ ಸೈನ್ಯಗಳ ಮಧ್ಯಭಾಗದಲ್ಲಿ ಶಸ್ತ್ರಗಳ ಮಳೆಯನ್ನು ಸುರಿಸಿ ಮಾರ್ಗವನ್ನು ಮಾಡಿದಳು. ॥೫೦॥

ಕುಮಾರಿಯ ಬಾಣಗಳ ಸಮೂಹದಿಂದ ಆ ಸೈನ್ಯವೆಂಬ ಪ್ರವಾಹದ ಸೇತುವೆಯು ಭಗ್ನವಾಯಿತೋ ಎಂಬಂತೆ ಕಾಣಿಸಿತು. ಮಹಾಶೂರರಾದ ರಾಕ್ಷಸರು ತಡೆದುಕೊಂಡಿದ್ದರೂ ಆ ಸೈನ್ಯದ ಮುಂಭಾಗವು ಒಡೆದಂತೆ ಕಾಣಿಸಿತು. ॥೫೧॥

ಕೆಲವು ರಾಕ್ಷಸ ಸೈನಿಕರ ರಥಗಳು ಭಗ್ನವಾದುವು. ಮತ್ತೆ ಕೆಲವರ ಕುದುರೆಗಳು ಮತ್ತು ಆನೆಗಳು ಮುಂತಾದ ವಾಹನಗಳೂ ಹಾಳಾದುವು. ಕುಮಾರಿಯ ಸಹಿಸಲಸಾಧ್ಯವಾದ ಬಾಣದ ಮಳೆಯ ಪೆಟ್ಟನ್ನು ಸಹಿಸಲಾರದೆ ರಾಕ್ಷಸರು ಓಡಿದರು. ॥೫೨॥

ಇತರ ಕೆಲವು ರಾಕ್ಷಸರ ತೋಳುಗಳು, ಕಣ್ಣುಗಳು, ಕಾಲುಗಳು, ಹೊಟ್ಟೆಗಳು, ತಲೆಗಳು ಇವುಗಳೆಲ್ಲವೂ ಕತ್ತರಿಸಿಹೋದವು. ಹಾಗೆಯೇ ಮತ್ತೆ ಕೆಲವರು ಕುಮಾರಿಯ ಶಸ್ತ್ರಸಮೂಹಗಳ ಪೆಟ್ಟಿಗೆ ಸಿಕ್ಕಿ ನುಚ್ಚುನೂರಾದರು. ॥೫೩॥

ನದ್ಯಃ ಶೋಣಿತವಾಹಿನ್ಯೋ ಭೀರೂಣಾಂ ಸಾಗರೋಪಮಾಃ ।
ಸುಫೇನಿಲಾಸ್ತರಂಗಾಢ್ಯಾ ಉಷ್ಣೋದಕವಹಾ ಇವ ॥೫೪॥

ಶರಜಾಲಮಹಾಮೇಘಚ್ಛನ್ನ ಸೂರ್ಯಕರಾ ದಿಶಃ ।
ಅಂಧೀಭೂತಾ ನ ವಿದಿತಾ ದೈತ್ಯೈರ್ವಿದ್ರಾವ ತತ್ಪರೈಃ ॥೫೫॥

ಮೇನಿರೇ ತೇ ಮಹಾಮೃತ್ಯುಂ ಪ್ರಾಪ್ತಂ ಬಾಲಾಸ್ವರೂಪತಃ ।
ಪತಂತಿ ಸಂಘಶಸ್ತತ್ರ ದೈತ್ಯಾನಾಂ ಮಸ್ತಕಾನ್ಯಲಂ ॥೫೬॥

ತೃಣರಾಜ ಫಲಾನೀವ ಪಕ್ವಾನಿ ಪ್ರೌಢವಾಯುನಾ ।
ಹಾ ತಾತ ಪುತ್ರ ಸುಸಖೇ ಭ್ರಾತರ್ಮಿತ್ರ ಹತೋಽಸ್ಮ್ಯಹಂ ॥೫೭॥

ಇತಿ ಘೋಷೋ ಮಹಾನಾಸೀತ್ ದೈತ್ಯಾನಾಂ ರಣಸಂಕಟೇ ।
ತದಂತರೇ ಮುಖೇ ಭಗ್ನೇ ಸೇನಾಯಾಸ್ತಸ್ಯ ವೇಗತಃ ॥೫೮॥

ಅಂಜುಬುರುಕರಿಗೆ ಅತ್ಯಂತ ಭಯವನ್ನುಂಟುಮಾಡುವ, ಸಾಗರಕ್ಕೆ ಸಮಾನವಾಗಿದ್ದ ರಕ್ತದ ಕೋಡಿಗಳೇ ಹರಿದುವು. ಇವುಗಳಲ್ಲಿ ನೊರೆಯೂ ಅಲೆಗಳೂ ತುಂಬಿದ್ದು ಬಿಸಿನೀರಿನ ಪ್ರವಾಹದಂತೆ ಹರಿಯುತ್ತಿದ್ದುವು. ॥೫೪॥

ಕುಮಾರಿಯ ಬಾಣಗಳೆಂಬ ಮಹಾಮೇಘಗಳಿಂದ ಸೂರ್ಯನ ಕಿರಣಗಳೂ ಮುಚ್ಚಿಹೋಗಿ ದಿಕ್ಕುಗಳೇ ಕಾಣದಂತಾದುವು. ಎಲ್ಲೆಲ್ಲಿಯೂ ಕತ್ತಲೆಯು ಕವಿದು ಏನೂ ಕಾಣುತ್ತಿರಲಿಲ್ಲ. ಈ ಸಮಯದಲ್ಲಿ ರಾಕ್ಷಸರು ಓಡುತ್ತಿದ್ದರು. ॥೫೫॥

ರಾಕ್ಷಸರು ಈ ಬಾಲೆಯ ಸ್ವರೂಪವನ್ನು ತಾಳಿ ಮಹಾಮೃತ್ಯುವೇ ಅಲ್ಲಿಗೆ ಬಂದಿದೆ ಎಂದು ತಿಳಿದರು. ಆಗ ಅಲ್ಲಿ ರಾಕ್ಷಸರ ತಲೆಗಳು ಗುಂಪುಗುಂಪಾಗಿ ಬೀಳುತ್ತಿದ್ದವು. ॥೫೬॥

ರಾಕ್ಷಸರ ತಲೆಗಳು, ಸುಂಟರಗಾಳಿಯ ಹೊಡೆತಕ್ಕೆ ಸಿಕ್ಕಿ ಬೀಳುವ ಹಣ್ಣಾದ ತೃಣರಾಜ ಎಂಬ ಹಣ್ಣುಗಳಂತೆ, ಬೀಳುತ್ತಿದ್ದವು. ಎಲ್ಲೆಲ್ಲಿಯೂ ಓ ತಂದೆಯೇ, ಅಯ್ಯೋ ಮಗನೇ, ಅಣ್ಣನೇ, ತಮ್ಮನೇ, ಹಾಳಾದಿರಾ? ನಾವೂ ನಿಮ್ಮನ್ನು ಕಳೆದುಕೊಂಡು ಹಾಳಾದೆವಲ್ಲಾ! ಎಂಬ ರೋದನದ ಧ್ವನಿಯು ಕೇಳಿ ಬಂದುದು. ॥೫೭॥

ಯುದ್ಧದಲ್ಲಿ ಸಂಭವಿಸಿದ ಸಂಕಟ ಕಾಲದಲ್ಲಿ ರಾಕ್ಷಸರು ಹೀಗೆ ಅಳುತ್ತಿದ್ದ ಧ್ವನಿಯು ಎಲ್ಲೆಲ್ಲಿಯೂ ಕೇಳಿಸಿತು. ಈ ಸಂದರ್ಭದಲ್ಲಿ ಹೀಗೆ ಆ ಸೈನ್ಯದ

ಪ್ರವೇಶಯತ್ಪ್ರಥಮರಂ ರಥನೇತ್ರೀ ನಿಮೇಷತಃ ।
ವಿಶುಕ್ರದೈತ್ಯೋಽವರಜೋ ಭಂಡದೈತ್ಯಸ್ಯ ಸಂಯುಗೇ ॥೫೯॥

ದೃಷ್ಟ್ವಾಭಿತ್ತ್ವಾ ಸ್ವಸೇನಾಯಾಃ ಮುಖಂ ಬಾಲಾಂ ಸಮಾಗತಾಂ ।
ಗಚ್ಛಂತೀಂ ದೈತ್ಯರಾಜೇನ ಯೋದ್ಧುಮುತ್ಸುಕಿತಾಂ ತದಾ ॥೬೦॥

ಜ್ಞಾತ್ವಾ ವಿಚಾರಯನ್ನೂನ ಮೇಷಾ ಬಾಲಾಽಷ್ಟಹಾಯನಾ ।
ನಿಸ್ಸೀಮ ಬಲವೀರ್ಯಾಽಽಢ್ಯಾ ಯುಧ್ಯತ್ಯತಿವಿಚಿತ್ರಿತಂ ॥೬೧॥

ನೈಷಾ ಜೇಯಾಽಸುರೈಃ ಕೈಶ್ಚಿದ್ಬಲವದ್ಭಿರಪಿ ಕ್ವಚಿತ್ ।
ತಥಾಽಪಿ ಸಮರೇ ಶೂರೈರ್ಯೋದ್ಧವ್ಯಂ ಸರ್ವಥಾ ನನು ॥೬೨॥

ಮುಂಭಾಗವು ನಾಶವಾಗಲು, ಈ ಕುಮಾರಿಯ ರಥವು ವೇಗದಿಂದ ಅದರೊಳಕ್ಕೆ ಪ್ರವೇಶಿಸಲವಕಾಶವಾಯಿತು. ॥೫೮॥

ಅನಂತರ ಆ ಸ್ತ್ರೀಸಾರಥಿಯು ನಿಮಿಷಮಾತ್ರದಲ್ಲಿಯೇ ಕುಮಾರಿಯ ಆ ಶ್ರೇಷ್ಠರಥವನ್ನು ಸೈನ್ಯದ ಒಳಭಾಗಕ್ಕೆ ನುಗ್ಗಿಸಿದಳು. ಭಂಡರಾಕ್ಷಸನ ತಮ್ಮನಾದ ವಿಶುಕ್ರನೆಂಬುವನು ಈ ರೀತಿಯಲ್ಲಿ ಬಾಲೆಯು ತೋರಿಸಿದ ಪರಾಕ್ರಮವನ್ನು ನೋಡಿ ಆಶ್ಚರ್ಯಪಟ್ಟನು. ॥೫೯॥

ವಿಶುಕ್ರರಾಕ್ಷಸನು ತಮ್ಮ ಸೈನ್ಯದ ಮುಂಭಾಗವನ್ನು ಭೇದಿಸಿಕೊಂಡು ಒಳಗೆ ಬಂದ, ರಾಕ್ಷಸರಾಜನಾದ ಭಂಡನೊಂದಿಗೇ ಯುದ್ಧಮಾಡಲು ಉತ್ಸಾಹಪಡು ತ್ತಿರುವ, ಆ ಬಾಲಾದೇವಿಯನ್ನು ನೋಡಿ ಅತ್ಯಂತ ಆಶ್ಚರ್ಯಪಟ್ಟನು. ॥೬೦॥

ಈ ವಿಚಾರವನ್ನು ತಿಳಿದು ಯೋಚಿಸುತ್ತಾ ವಿಶುಕ್ರರಾಕ್ಷಸನು ನಿಜವಾಗಿಯೂ ಎಂಟು ವರ್ಷದ ಬಾಲಕಿಯಾದ ಈ ಕುಮಾರಿಯು ಅಸಾಧಾರಣವಾದ ಶಕ್ತಿ ಮತ್ತು ಪರಾಕ್ರಮಗಳಿಂದ ಪೂರ್ಣಳಾಗಿ ಈ ರೀತಿಯಲ್ಲಿ ಯುದ್ಧಕ್ಕೆ ತೊಡಗಿರುವುದು ಬಹಳ ಆಶ್ಚರ್ಯಕರವೇ ಸರಿ. ಎಂದು ಮನಸ್ಸಿನಲ್ಲಿ ಅಂದುಕೊಂಡನು. ॥೬೧॥

ಬಲಿಷ್ಠರಾದ ರಾಕ್ಷಸರೂ ಕೂಡ ಇವಳನ್ನು ಎಂದಿಗೂ ಜಯಿಸಲಾರರು ! ಆದಾಗ್ಯೂ ಶೂರರಾದ ಜನರು ಸರ್ವವಿಧದಲ್ಲೂ ಯುದ್ಧಮಾಡುವುದು ಅವರ ಕರ್ತವ್ಯವೆಂಬುದರಲ್ಲಿ ಸಂದೇಹವಿಲ್ಲ." ॥೬೨॥

ಏಷೈವ ನಾಶಯೇತ್ ಸರ್ವಾನ್ ದೈತ್ಯಾನಸ್ಮಾನ್ನಸಂಶಯಃ ।
ಕಿಂ ಕರಿಷ್ಯತಿ ಸಾ ದೇವೀ ಲಲಿತಾ ಸಮರೇ ಪುನಃ ॥೬೩॥

ಸರ್ವಪ್ರಾಣೇನ ಯೋದ್ಧವ್ಯಂ ದೈವಮತ್ರ ಪರಾಯಣಂ ।
ಇತಿ ನಿಶ್ಚಿತ್ಯ ನಾಗೇಂದ್ರ ಮೈರಾವತ ಕುಲೋದ್ಭವಂ ॥೬೪॥

ಶ್ವೇತಂ ಚತುರ್ದಂತಯುತಂ ರಜತಾಽದ್ರಿ ಸಮಪ್ರಭಂ ।
ವಿಶುಕ್ರ ಆರುಹ್ಯ ಜವಾತ್ ಶರಾನ್ ಧಾರಾಧರೋ ಯಥಾ ॥೬೫॥

ವರ್ಷನ್ ವಿರೇಜೇ ಕೈಲಾಸಾಽಽರೂಢನೀಲಾಂಬುದೋಪಮಃ ।
ರುರೋಧ ಬಾಲಾಂ ರಥಗಾಂ ಪ್ರವಿಶ್ಯ ದೈತ್ಯವಾಹಿನೀಂ ॥೬೬॥

ಇವಳೊಬ್ಬಳೇ ರಾಕ್ಷಸರಾದ ನಮ್ಮೆಲ್ಲರನ್ನೂ ನಾಶಮಾಡುವಳೆಂಬುದರಲ್ಲಿ ಸಂದೇಹವಿಲ್ಲ. ಹಾಗಾದರೆ ಲಲಿತಾದೇವಿಯು ಯುದ್ಧದಲ್ಲಿ ಪುನಃ ಮಾಡಬೇಕಾಗಿರುವುದೇನು ? ॥೬೩॥

ಆದರೂ ನಾವು ನಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಯುದ್ಧವನ್ನು ಮಾಡಲೇಬೇಕಾಗಿದೆ. ಈ ವಿಷಯದಲ್ಲಿ ದೈವವೇ ನಮ್ಮನ್ನು ರಕ್ಷಿಸಬೇಕಾಗಿದೆ. ಎಂದು ವಿಶುಕ್ರನು ನಿಶ್ಚಯಿಸಿ ಐರಾವತವೆಂಬ ಆನೆಯ ವಂಶದಲ್ಲಿ ಹುಟ್ಟಿದ ಶ್ರೇಷ್ಠವಾದ ಆನೆಯನ್ನು ಏರಿದನು. ॥೬೪॥

ವಿಶುಕ್ರನು ಬೆಳ್ಳಗಿರುವ ನಾಲ್ಕು ಕೊಂಬುಗಳಿಂದ ಕೂಡಿರುವ ಬೆಳ್ಳಿಯ ಬೆಟ್ಟಕ್ಕೆ ಸಮಾನವಾದ ಕಾಂತಿಯನ್ನು ಹೊರಗೆಡುಹುತ್ತಿರುವ ಆನೆಯನ್ನೇರಿ, ಮೇಘವು ಮಳೆಗರೆವಂತೆ, ಬಾಣಗಳನ್ನು ಬಹಳ ವೇಗದಿಂದ ಅವಳ ಮೇಲೆ ಬಿಟ್ಟನು. ॥೬೫॥

ವಿಶುಕ್ರನು ಬಾಣಗಳ ಮಳೆಯನ್ನು ಕರೆದು ಕೈಲಾಸಪರ್ವತವನ್ನು ಏರಿರುವ ಕಪ್ಪಾದ ಮೋಡದಂತಿರುತ್ತಾ ಪ್ರಕಾಶಿಸಿದನು. ರಾಕ್ಷಸರ ಸೈನ್ಯದ ಒಳಗೆ ನುಗ್ಗುತ್ತಿದ್ದ ರಥದ ಮೇಲಿರುವ ಕುಮಾರಿಯನ್ನು ಅವನು ತನ್ನ ಬಾಣಗಳಿಂದ ತಡೆಗಟ್ಟಿದನು. ॥೬೬॥

ಸಮಾಯಾಂತೀಂ ಜವೇನಾಽಽಜೌ ಚಿನ್ವತೀಂ ದೈತ್ಯಜೀವಿತಂ ।
ಸಂರುದ್ಧ್ಯ ಶರವರ್ಷೇಣ ಸಿಂಹನಾದಮಥಾಽಕರೋತ್ ॥೬೭॥

ಆಹ್ವಾನೇನ ದೈತ್ಯಸೇನಾಂ ವಿದ್ರುತಾಂ ಸ ನ್ಯವರ್ತತ ।
ದೈತ್ಯಾ ನೈತತ್ಸಮಂ ಯುದ್ಧೇ ಕುಲಜಾನಾಂ ಪಲಾಯನಂ ॥೬೮॥

ಭೀತ್ಯಾ ಯುದ್ಧೇ ವಿದ್ರುತಂ ತು ಧರ್ಮಶ್ಚಾರ್ಥಃ ಪ್ರಹಾಸ್ಯತಿ ।
ಆಹಾರ್ಯ ವೀರ್ಯಂ ಕ್ರೋಧಂ ಚ ನಿವರ್ತಧ್ವಂ ಸಮಂತತಃ॥೬೯॥

ವಿನಿರ್ಜಿತಾಃ ಸ್ತ್ರಿಯಾ ಯುದ್ಧೇ ಪಲಾಯ್ಯ ಸದನಂ ಗತಾಃ ।
ಕಿಂ ವಕ್ಷ್ಯಥ ಗೃಹೇ ಸ್ತ್ರೀಭಿಃ ಪೃಷ್ಟಾ ಯುದ್ಧಾನ್ನಿವರ್ತನೇ ॥೭೦॥

ಹೀಗೆ ತನ್ನ ಸೈನ್ಯದ ಒಳಕ್ಕೆ ಬರುತ್ತಿರುವ, ಶೀಘ್ರವಾಗಿ ರಾಕ್ಷಸರ ಪ್ರಾಣಗಳನ್ನು ಹರಣಮಾಡುತ್ತಿರುವ, ಆ ಕುಮಾರಿಯನ್ನು ವಿಶುಕ್ರನು ತನ್ನ ಬಾಣಗಳ ಮಳೆಯನ್ನು ಸುರಿಸಿ ಅವಳನ್ನು ತಡೆದು ಸಿಂಹನಾದವನ್ನು ಮಾಡಿದನು. ||೬೭||

ಹಿಂದಕ್ಕೆ ಓಡುತ್ತಿರುವ ರಾಕ್ಷಸಸೈನ್ಯವನ್ನು ಕರೆದು ವಿಶುಕ್ರನು, ಎಲೈ ರಾಕ್ಷಸಶ್ರೇಷ್ಠರೇ, ಶ್ರೇಷ್ಠಕುಲದಲ್ಲಿ ಹುಟ್ಟಿದ ನೀವು ಈರೀತಿಯಲ್ಲಿ ಯುದ್ಧದಿಂದ ಪಲಾಯನಮಾಡುತ್ತಿರುವುದು ಸರಿಯಲ್ಲ. ಎಂದು ಹೇಳಿ ಅವರನ್ನು ಹಿಂತಿರುಗಿಸಿದನು. ||೬೮||

ನೀವು ಯುದ್ಧದಲ್ಲಿ ಹೀಗೆ ಭೀತಿಯಿಂದ ಹಿಂತಿರುಗಿದರೆ ನಿಮ್ಮನ್ನು ಧರ್ಮ ಮತ್ತು ಅರ್ಥಗಳೆಂಬ ಎರಡು ಪುರುಷಾರ್ಥಗಳೂ ಬಿಟ್ಟುಬಿಡುತ್ತವೆ. ಆದ್ದರಿಂದ ಪರಾಕ್ರಮ ಮತ್ತು ಕೋಪಗಳನ್ನು ಉಂಟುಮಾಡಿಕೊಂಡು ಎಲ್ಲಾ ಕಡೆಯಿಂದಲೂ ಯುದ್ಧಕ್ಕೆ ಹಿಂತಿರುಗಿರಿ. ||೬೯||

ನೀವು ಯುದ್ಧದಲ್ಲಿ ಸ್ತ್ರೀಯರಿಂದ ಸೋತು ಪಲಾಯನ ಮಾಡಿ ಮನೆಗೆ ಹಿಂತಿರುಗಿ ನಿಮ್ಮ ಹೆಂಗಸರು ಯುದ್ಧದಿಂದ ಏಕೆ ಹಿಂತಿರುಗಿದಿರಿ? ಎಂದು ಪ್ರಶ್ನಿಸಿದಾಗ ಅದಕ್ಕೆ ಯಾವ ಉತ್ತರವನ್ನು ಹೇಳುವಿರಿ? ||೭೦||

ಮೃತಿರೇವ ತತಃ ಶ್ರೇಯಃ ಸ್ತ್ರೀಕೃತಾದಪಮಾನತಃ ।
ವಿಶುಕ್ರವಚನಂ ಶ್ರುತ್ವಾ ಪರಾವೃತ್ತಾಸ್ತತಸ್ತು ತೇ ॥೨೦॥

ಆಗತ್ಯ ಬಾಲಾಂ ತ್ರಿಪುರಾಂ ಪರಿವವ್ರುಃ ಸಮಂತತಃ ।
ದೈತ್ಯಸೇನಾಭಿರಾಕ್ರಾಂತಾ ಸಾ ಬಾಲಾ ರಥಸಂಸ್ಥಿತಾ ॥೨೧॥

ಪರಿವೇಷಿತಬಾಲಾಽರ್ಕ ಇವ ತತ್ರ ವ್ಯರಾಜತ ।
ಅಥ ತಾಂ ರಥನೇತ್ರೀಂ ಸಾ ಸಖೀ ಪ್ರಾಹ ಪ್ರಿಯಂವದಾ ॥೨೩॥

ಕುಮಾರಿ ಮನ್ಯೇ ದೈತ್ಯಾನಾಂ ಸೇನಾಭಾರೋಽತಿದುಸ್ಸಹಃ ।
ನ ತೇ ಪಾರ್ಷ್ಣಿಗ್ರಹಾ ಕಾಚಿಚ್ಚಕ್ರಗೋಪ್ತ್ರ್ಯಪಿ ವಿದ್ಯತೇ ॥೨೪॥

ಅಗ್ರೇ ಸೇನಾಭರೋ ಭೂಯಾನ್ ಮನ್ಯಸೇ ಚೇದಹಂ ದ್ರುತಂ ।
ರಥಂ ನಿವರ್ತಯಾಮ್ಯೇಷಾ ಸೇನಾಯುಕ್ತಾ ಪುನರ್ದ್ರುತಮ್ ॥೨೫॥

ಹೆಂಗಸರಿಂದ ಅಪಮಾನ ಪಡೆಯುವುದಕ್ಕಿಂತ ಮರಣವೇ ಲೇಸೆಂದು ನನಗೆ ತೋರುತ್ತದೆ! ಎಂದು ವಿಶುಕ್ರನು ಹೇಳಿದ ಮಾತನ್ನು ಕೇಳಿ ಅವರೆಲ್ಲರೂ ಯುದ್ಧ ಭೂಮಿಗೆ ಹಿಂತಿರುಗಿದರು. ||೨೦||

ಅವರು ಹಿಂತಿರುಗಿ ತ್ರಿಪುರಸುಂದರೀದೇವಿಯ ಕುಮಾರಿಯನ್ನು ಸುತ್ತುಗಟ್ಟಿದರು. ಈ ರೀತಿಯಲ್ಲಿ ದೈತ್ಯರ ಸೈನ್ಯಗಳು ರಥದ ಮೇಲೆ ಕುಳಿತಿರುವ ಬಾಲೆಯನ್ನು ಆಕ್ರಮಿಸಿದುವು. ||೨೧||

ಆಗ ಎಳೆಯ ಸೂರ್ಯನ ಮೇಲೆ ಪರಿಧಿ ಎಂಬ ಸುತ್ತು ಕಂಡರೆ ಹೇಗೋ ಹಾಗೆ, ಅವಳು ಪ್ರಕಾಶಿಸುತ್ತಿದ್ದಳು. ಅನಂತರ ಪ್ರಿಯವಾದ ಮಾತನ್ನಾಡುವ ಅವಳ ಸ್ನೇಹಿತೆಯಾದ ಸ್ತ್ರೀಸಾರಥಿಯು ಕುಮಾರಿಯನ್ನು ಕುರಿತು ಈ ರೀತಿಯಲ್ಲಿ ಹೇಳಿದಳು. ||೨೩||

ಎಲೌ ಕುಮಾರಿಯೇ, ರಾಕ್ಷಸರ ಸೈನ್ಯದ ಮೇಲೆ ಬೀಳುವಿಕೆಯನ್ನು ನಿರ್ವಹಿಸಲು ಬಹಳ ಕಷ್ಟವಾಗಿದೆ. ನಿನಗೆ ಸಹಾಯಕಳಾಗಿ ಯುದ್ಧದಲ್ಲಿ ರಕ್ಷಿಸಬಲ್ಲವಳು ಬೆಂಗಾವಲಾಗಿ ಮತ್ತಾರೂ ಇಲ್ಲ. ||೨೪||

ಮುಂದುಗಡೆ ಸೈನ್ಯಗಳು ಬಹಳ ಹೆಚ್ಚಾಗಿ ಬರುತ್ತಿವೆ. ನೀನು ಒಪ್ಪುವುದಾದರೆ ನಾನು ಶೀಘ್ರವಾಗಿ ರಥವನ್ನು ಹಿಂತಿರುಗಿಸುವೆನು. ನೀನು ಪುನಃ ಹೆಚ್ಚು ಸೈನ್ಯವನ್ನು ತೆಗೆದುಕೊಂಡು ಶೀಘ್ರವಾಗಿ ಬರುವೆಯಂತೆ. ||೨೫||

ಆಗತ್ಯ ಚೈತರ್ಾ ದೈತ್ಯೇಂದ್ರಾ್ ಯಥೇಚ್ಛಂ ಯೋಧಯಿಷ್ಯಸಿ ।
ಶ್ರುತ್ವಾ ಸಖೀವಚಃ ಪ್ರಾಹ ಪ್ರಹಸ್ಯ ಮೃದುಭಾಷಿಣೀ ॥೭೬॥

ಭೀತಾಽಸಿ ಕಿಂ ಪ್ರಿಯೇ ಯುದ್ಧೇನೈವಂ ಶತಗುಣಾ ಅಪಿ ।
ಪರ್ಯಾಪ್ತಾ ಮೇ ದೈತ್ಯಸೇನಾ ಯುದ್ಧ್ಯಂತ್ಯಾ ಯುಧಿ ಮೇ ಕ್ವಚಿತ್॥೭೭॥

ಲೀಲಯಾಽಹಂ ವಿಲಂಬೇನ ಯುದ್ಧ್ಯಾಮಿ ರಣಕೌತುಕೀ ।
ಮನ್ಯಸೇ ಚೇದಿಮಂ ಪಶ್ಯ ಕ್ಷಣಂ ನಿರ್ದೈತ್ಯಲೋಕಕಮ್ ॥೭೮॥

ಇತ್ಯುಕ್ತ್ವಾ ಸಾ ಪುನಃ ಪ್ರಾಹ ಸಖೀ ರಥವಹಾ ತದಾ ।
ದೇವಿ ನಾಸ್ತ್ಯೇವ ಮೇ ಭೀತಿಃ ಸೈನ್ಯೇಽಪೀತಃ ಶತೋತ್ತರೇ ॥೭೯॥

ತಥಾಽಪಿ ರಥನಾಥಾಯಾ ಜ್ಞೇಯಂ ಚಿತ್ತಂ ರಣೋದ್ಯಮೇ ।
ಶಂಕೇ ಶ್ರೀಲಲಿತಾದೇವ್ಯಾ ಯದಾಜ್ಞಾನುಂತರಾ ತ್ವಯಾ ॥೮೦॥

ಅನಂತರ ನೀನು ಪುನಃ ಒಂದು ರಾಕ್ಷಸಶ್ರೇಷ್ಠರನ್ನು ನಿನ್ನ ಇಷ್ಟ ಬಂದಂತೆ ಯುದ್ಧಮಾಡಿ ಜಯಿಸುವೆಯಂತೆ. ಸ್ನೇಹಿತೆಯಾದ ಸಾರಥಿಯ ಈ ಮಾತನ್ನು ಕೇಳಿ ಕುಮಾರಿಯು ನಕ್ಕು ಮೃದುವಾದ ರೀತಿಯಲ್ಲಿ ಈ ಮಾತನ್ನಾಡಿದಳು. ॥೭೬॥

ಎಲೌ ಪ್ರಿಯಳಾದ ಸಾರಥಿಯೇ, ಏಕೆ ಭಯಗೊಂಡಿದ್ದಿಯೇ? ಈ ರಾಕ್ಷಸ ಸೈನ್ಯದ ನೂರರಷ್ಟು ರಾಕ್ಷಸಸೈನ್ಯವು ಯುದ್ಧಕ್ಕೆ ಬಂದರೂ ಅದೂ ನನ್ನೊಬ್ಬಳೊಂದಿಗೆ ಯುದ್ಧಮಾಡಲು ಸಾಕಾಗಲಾರದು. ॥೭೭॥

ಯುದ್ಧದಲ್ಲಿ ಕುತೂಹಲವುಳ್ಳ ನಾನು ಅನಾಯಾಸವಾಗಿಯೇ ವಿಲಂಬವಾಗಿ ಯುದ್ಧಮಾಡುತ್ತಿದ್ದೇನೆ. ನೀನು ಇಷ್ಟಪಡುವುದಾದರೆ ನಾನು ಒಂದು ಕ್ಷಣಮಾತ್ರದಲ್ಲಿಯೇ ಈ ಲೋಕದಲ್ಲಿ ರಾಕ್ಷಸರ ಹೆಸರೇ ಇಲ್ಲದಂತೆ ನಿರ್ಮೂಲಮಾಡುವುದನ್ನು ನೀನು ನೋಡುವೆ. ॥೭೮॥

ಆಗ ಕುಮಾರಿಯ ಸಾರಥಿಯು ಕುಮಾರಿಯ ಮಾತನ್ನು ಕೇಳಿ ಪುನಃ ಈ ರೀತಿಯಲ್ಲಿ ಹೇಳಿದಳು.—ಎಲೌ ದೇವಿಯೇ, ಇದಕ್ಕಿಂತಲೂ ನೂರ್ಮಡಿಯಾದ ಸೈನ್ಯವು ಬಂದರೂ ನನಗೆ ಭೀತಿಯಿಲ್ಲ. ಎಂದಳು. ॥೭೯॥

ಆದರೂ ಸಾರಥಿಯಾದವಳು ತನ್ನ ಯಜಮಾನಿಯು ಯುದ್ಧಕ್ಕೆ ಹೊರಟಿದ್ದಾಗ ಅವಳ ಮನಸ್ಸನ್ನು ಅರಿಯಬೇಕಾದುದು ಅವಶ್ಯಕ. ನೀವು ಶ್ರೀಲಲಿತಾ

ಯುದ್ಧೇ ವಿನಿರ್ಗತಾ ಚಾಽಸ್ಮಿ ಏತಾವತ್ಸಾಧ್ವಸಂ ಮಮ ।
ಬ್ರೂಹಿ ಶೀಘ್ರಂ ರಥಮಹಂ ಕ್ವ ನಯಾಮಿ ರಣಾವನೌ ॥೮೧॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಂಖಡೇ ಬಾಲಾಪರಾಕ್ರಮ ವರ್ಣನೇ
ತ್ರಿಷಷ್ಠಿತಮೋಽಧ್ಯಾಯಃ

ದೇವಿಯವರ ಅಪ್ಪಣೆಯಿಲ್ಲದೆ ಈ ರೀತಿ ಯುದ್ಧಕ್ಕೆ ತೊಡಗಿರುವಿರೆಂದು ಊಹಿಸುತ್ತೇನೆ. ||೮೦||

ತಾವು ಈ ರೀತಿಯಲ್ಲಿ ಆ ಮಹಾರಾಣಿಯ ಅಪ್ಪಣೆಯಿಲ್ಲದೆ ಯುದ್ಧಕ್ಕೆ ಹೊರಟಿರಬಹುದೆಂಬುದೇ ನನಗಿರುವ ಭೀತಿ. ಎಲೌ ದೇವಿಯೇ, ಶೀಘ್ರವಾಗಿ ಹೇಳು. ನಾನು ರಥವನ್ನು ಯುದ್ಧಭೂಮಿಯಲ್ಲಿ ಯಾವ ಕಡೆಗೆ ಹೊಡೆಯಲಿ ? ||೮೧||

ಎಂಬಲ್ಲಿಗೆ ಇತಿಹಾಸ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ
ಲಲಿತಾಮಾಹಾತ್ಮ್ಯಖಂಡದಲ್ಲಿ ಬಾಲಾದೇವಿಯ ಪರಾಕ್ರಮವನ್ನು ವರ್ಣಿಸುವ
ಅರವತ್ತುಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಚತುಷ್ಷಷ್ಟಿತಮೋಽಧ್ಯಾಯಃ ||

ಅರವತ್ತುನಾಲ್ಕನೆಯ ಅಧ್ಯಾಯವು

ಸಖೀವಚೋ ನಿಶಮ್ಯಾಥ ಬಾಲಾ ಸಂಹೃಷ್ಟಮಾನಸಾ ।
ಪ್ರಾಹ ಶೀಘ್ರಂ ನಯ ರಥಂ ಯತ್ರಾಸೌ ಗಜಸಂ(ಚ)ಶ್ರಯಃ ॥೧॥

ಸ್ತೂಯಮಾನೋ ವಂದಿಗಣೈರ್ವಿಶುಕ್ರಾಖ್ಯೋ ಮಹಾಸುರಃ ।
ಇತ್ಯಾಜ್ಞಪ್ತಾ ಕ್ಷಣಾದೇವ ನಿನಾಯ ಸ್ಯಂದನೋತ್ತಮಂ ॥೨॥

ಬಾಲಾಽಪಿ ದೈತ್ಯಸೇನಾಂ ತಾಮಪಾರಾಂ ಸಾಗರಪ್ರಭಾಮ್ ।
ಶರಸಂತತಿ ಧಾರಾಭಿಶ್ಚಕ್ರೇಽತಿಶಿಥಿಲಾಂ ತದಾ ॥೩॥

ಸಖಿಯಾದ ಸಾರಥಿಯ ಮಾತನ್ನು ಕೇಳಿ ಕುಮಾರಿಯು ಬಹಳ ಸಂತೋಷಗೊಂಡವಳಾಗಿ ಆನೆಯ ಸೈನ್ಯಗಳಿಗೆ ಅಧಿಪತಿಯಾದ ವಿಶುಕ್ರಾಸುರನು ಇರುವ ಕಡೆಗೆ ರಥವನ್ನು ಶೀಘ್ರವಾಗಿ ನಡೆಸು. ಎಂದು ಹೇಳಿದಳು. ॥೧॥

ಎಲೌ ಸ್ತ್ರೀಸಾರಥಿಯೇ, ಹೊಗಳುಭಟರಿಂದ ಹೊಗಳಿಸಿಕೊಳ್ಳುತ್ತಿರುವ ವಿಶುಕ್ರನೆಂಬ ರಾಕ್ಷಸಶ್ರೇಷ್ಠನ ಬಳಿಗೆ ರಥವನ್ನು ಶೀಘ್ರವಾಗಿ ನಡೆಸು. ಎಂದು ಕುಮಾರಿಯು ಅಪ್ಪಣೆಮಾಡಲು, ಅವಳು ಕ್ಷಣಮಾತ್ರದಲ್ಲಿಯೇ ರಥವನ್ನು ಅಲ್ಲಿಗೆ ಒಯ್ದಳು. ॥೨॥

ಆಗ ಬಾಲೆಯಾದರೂ ಆ ಕುಮಾರಿಯು ಅಪರಿಮಿತವಾದ ಸಾಗರದಂತೆ ಪ್ರಕಾಶಿಸುತ್ತಿದ್ದ ಆ ಮಹಾಸೈನ್ಯವನ್ನು ತನ್ನ ಬಾಣಗಳ ಸಮೂಹಗಳನ್ನು ಸುರಿಸುವುದರಿಂದ ಬಹಳ ಕಡಿಮೆಯಾಗುವಂತೆ ಮಾಡಿದಳು. ॥೩॥

ಪುನಃ ಕ್ಷಣಾದ್ಘನೀಭೂತಾಂ ದೃಷ್ಟ್ವಾ ತಾಂ ದೈತ್ಯವಾಹಿನೀಂ ।
ಪರಿವಾರ್ಯ ನಿಜಾತ್ಮಾನಂ ಜಿಘಾಂಸಂತೀಂ ವಿಶಂಕಟಾಮ್ ॥ ೪॥

ನಾಶಯತ್ಕುಲಿಶಾಸ್ತ್ರೇಣ ಭಸ್ಮಶೇಷತ್ವಮಾನಯತ್ ।
ಹತಾಸ್ತತ್ರ ಮಹಾದೈತ್ಯಾಃ ಕುಲಿಶಾಸ್ತ್ರೇಣ ಸರ್ವತಃ ॥೫॥

ಭಸ್ಮಶೇಷೀಕೃತಾಃ ಕೇಚಿತ್ ಕೇಚಿದ್ಧತವರಾಂಗಕಾಃ ।
ಏಕಬಾಹ್ವಕ್ಷಿ ಚರಣ ಪಾರ್ಶ್ವೀಭೂತಾಸ್ತಥಾಽಪರೇ ॥೬॥

ಮಹಾಕ್ರಂದ ಭೀಮರವಾಂ ನಷ್ಟಪ್ರಾಯಾಂ ನಿಜಾಂ ಚಮೂಮ್ ।
ನಿಶಾಮ್ಯ ಪ್ರಾಹಿಣೋನ್ನಾಗ ಮೈರಾವತಕುಲೋದ್ಭವಮ್ ॥೭॥

ಕುಮಾರಿಯು ಪುನಃ ಕ್ಷಣಕಾಲದಲ್ಲಿಯೇ ತುಂಬಿದ ಆ ರಾಕ್ಷಸಸೈನ್ಯವನ್ನು ನೋಡಿ ಅದು ಗುಂಪುಗುಂಪಾಗಿ ಸುತ್ತಿಕೊಂಡು ತನ್ನನ್ನು ಹೊಡೆಯಲು ಪ್ರಯತ್ನಿಸುತ್ತಿದ್ದುದನ್ನೂ ಕಂಡಳು. ॥೪॥

ಕೂಡಲೇ ಅವಳು ಕುಲಿಶವೆಂಬ ಅಸ್ತ್ರವನ್ನು ಅದರ ಮೇಲೆ ಪ್ರಯೋಗಿಸಿ ನಾಶಮಾಡಿ ಕೇವಲ ಬೂದಿಯಾಗುವಂತೆ ಮಾಡಿದಳು. ಆಗ ಅವಳು ಕುಲಿಶಾಸ್ತ್ರವನ್ನು ಪ್ರಯೋಗಿಸಿದ್ದರಿಂದ ದೊಡ್ಡ ದೊಡ್ಡ ರಾಕ್ಷಸರೂ ಎಲ್ಲಾ ಕಡೆಯಲ್ಲಿಯೂ ನಾಶವಾದರು. ॥೫॥

ಆಗ ಕೆಲವು ರಾಕ್ಷಸರು ಬೂದಿಯಾದರು. ಮತ್ತೆ ಕೆಲವರು ತಮ್ಮ ಶ್ರೇಷ್ಠವಾದ ಅವಯವಗಳನ್ನು ಹಾಳುಮಾಡಿಕೊಂಡರು. ಇನ್ನು ಕೆಲವರು ಒಂದು ತೋಳು, ಕಣ್ಣು, ಕಾಲು, ಈ ರೀತಿಯಲ್ಲಿ ತಮ್ಮ ಶರೀರದ ಒಂದು ಪಕ್ಕವನ್ನು ಮಾತ್ರ ಹೊಂದಿದ್ದರು. ॥೬॥

ತನ್ನ ಸೈನ್ಯವು ಗಟ್ಟಿಯಾಗಿ ಗೋಳಿಡುತ್ತಾ ಭಯಂಕರವಾಗಿ ಶಬ್ದ ಮಾಡುತ್ತಾ, ಇನ್ನೇನು ನಾಶವಾದಂತೆಯೇ ಆಗಿದೆಯೆಂಬ ವಿಷಯವನ್ನು ಕೇಳಿ ವಿಶುಕ್ರನು ಐರಾವತ ಎಂಬ ಶ್ರೇಷ್ಠ ಆನೆಯ ಕುಲದಲ್ಲಿ ಹುಟ್ಟಿದ ಭಾರಿಯಾದ ತನ್ನ ಆನೆಯನ್ನು ಯುದ್ಧಮಾಡಲು ಬಿಟ್ಟನು. ॥೭॥

ಯೋದ್ಧುಂ ವಿಶುಕ್ರಸ್ತಾಂ ಬಾಲಾಂ ದೃಷ್ಟ್ವಾಽದ್ಭುತ ಪರಾಕ್ರಮಾಂ ।
ವವರ್ಷ ಶರಧಾರಾಭಿರ್ಮಣಿ ಶೃಂಗಮಿವಾಽಂಬುದಃ ॥೮॥

ಪ್ರತಿವರ್ಷಂ ವವರ್ಷಾಽಥ ಪ್ರತಿದೈತ್ಯಂ ಶಿಲೀಮುಖೈಃ ।
ಶರವರ್ಷ(ಂ) ದ್ವಯಂ ತತ್ತು ತಮೋ ಭೂತಂ ರಣಾಽವನೌ ॥೯॥

ತದಂತರೇ ತು ನಿಶಿತ ಶರೇಣಾಽಽನತ ಪರ್ವಣಾ ।
ಜಘಾನಾಽಽಕರ್ಣಪೂರ್ಣೇನ ಹಸ್ತೇ ತಾಂ ರಥವಾಹಿನೀಂ ॥೧೦॥

ಸಾ ಗಾಢವಿದ್ಧಾ ಬಾಣೇನ ಕಿಂ ಚಿತ್ಕಶ್ಮಲಮಾಗಮತ್ ।
ತದ್ದೃಷ್ಟ್ವಾ ರೋಷತಾಮ್ರಾಕ್ಷೀ ಗರ್ಜಂತಂ ದೈತ್ಯಪುಂಗವಂ ॥೧೧॥

ಜಘಾನ ತರಸಾ ಫಾಲೇ ತೀಕ್ಷ್ಣಭಲ್ಲಚತುಷ್ಟಯೈಃ ।
ಭಲ್ಲಾಽರ್ದಿತೋ ಗಾಢಮೂರ್ಛಾಂ ವಿಶುಕ್ರಃ ಪ್ರಾಪ ತದ್ಗತಃ ॥೧೨॥

ವಿಶುಕ್ರನು ಈರೀತಿಯಲ್ಲಿ ಆನೆಯನ್ನು ಯುದ್ಧಮಾಡಲು ಕಳುಹಿಸಿ ಆಶ್ಚರ್ಯಕರವಾದ ಪರಾಕ್ರಮವುಳ್ಳ ಆ ಬಾಲಾದೇವಿಯನ್ನು ನೋಡಿ, ಮೋಡವು ಮಣಿಮಯವಾದ ಶಿಖರದ ಮೇಲೆ ಮಳೆಯನ್ನು ಕರೆವಂತೆ ಅವನು ಬಾಣಗಳ ಮಳೆಯನ್ನು ಸುರಿಸಿದನು. ||೮||

ಆ ಬಾಲಾದೇವಿಯೂ ಕೂಡ ರಾಕ್ಷಸನಿಗೆ ಪ್ರತಿಯಾಗಿ ಬಾಣಗಳ ಮಳೆಯನ್ನು ಕರೆದಳು. ಆಗ ಯುದ್ಧಭೂಮಿಯುಲ್ಲೆಲ್ಲಾ ಆ ಎರಡು ವಿಧವಾದ ಬಾಣಗಳ ಸುರಿಮಳೆಯಿಂದ ಕತ್ತಲೆಯು ಕವಿಯುವಂತೆ ತುಂಬಿತ್ತು. ||೯||

ಈ ಮಧ್ಯದಲ್ಲಿ ರಾಕ್ಷಸನು ತುದಿಯನ್ನು ಬಗ್ಗಿಸಿ ಚೂಪಾದ ಬಾಣವನ್ನು ತನ್ನ ಕಿವಿಯವರೆಗೂ ಸೆಳೆದು ರಥದ ಮೇಲೆ ಕುಳಿತಿದ್ದ ಬಾಲೆಯ ಕೈಗೆ ಸರಿಯಾಗಿ ಹೊಡೆದನು. ||೧೦||

ಬಾಣದ ಬಲವಾದ ಪ್ರಹಾರಕ್ಕೆ ಸಿಕ್ಕಿದ ಬಾಲಾದೇವಿಯು ಮೂರ್ಛೆಯನ್ನು ಹೊಂದಿ ಎದ್ದಳು. ಇದನ್ನು ನೋಡಿ ಅವಳು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವಳಾಗಿ ರಾಕ್ಷಸಶ್ರೇಷ್ಠನಾದ ವಿಶುಕ್ರನು ಗರ್ಜಿಸುತ್ತಿದ್ದುದನ್ನೂ ನೋಡಿದಳು. ||೧೧||

ಬಾಲಾದೇವಿಯು ಶೀಘ್ರವಾಗಿ ತೀಕ್ಷ್ಣವಾದ ನಾಲ್ಕು ಭರ್ಜಿಗಳಿಂದ ವಿಶುಕ್ರನ ಹಣೆಗೆ ಹೊಡೆದಳು. ಆ ಭರ್ಜಿಗಳ ಪ್ರಹಾರದಿಂದ ಬಲವಾದ ಯಾತನೆಯನ್ನು ಹೊಂದಿ ವಿಶುಕ್ರನು ಕೂಡಲೇ ಅತ್ಯಂತ ಮೂರ್ಛೆಯನ್ನು ಹೊಂದಿದನು. ||೧೨||

ಪುನಃ ಕ್ಷಣೇನ ಚೋತ್ಥಾಯ ವವರ್ಷ ನಿಶಿತಾನ್ ಶರಾನ್ ।
ಅಥ ಬಾಲಾ ಕ್ಷಣೇನೈವ ಲಘುಹಸ್ತ ಕ್ರಿಯಾಽನ್ವಿತಾ ॥೧೩॥

ದ್ವಾಭ್ಯಾಂ ಛತ್ರಂ ಚ ಚಾಪಂ ಚ ಚಿಚ್ಛೇದ ಯುಗಪನ್ಮೃಥೇ ।
ಅಥೈಕೇನಾಽಽಕರ್ಣ ಪೂರ್ಣಶರೇಣ ನತಪರ್ವಣಾ ॥೧೪॥

ವಿವ್ಯಾಧ ವಾಹನಗಜ ಮೈರಾವತ ಕುಲೋದ್ಭವಂ ।
ಇಂದ್ರಾಯುಧಂ ಗಿರಿಮಿವ ದದಾರ ಸ ಶರೋ ಗಜಂ ॥೧೫॥

ಕುಂಭಪ್ರದೇಶೇ ನಿರ್ಮಗ್ನೋ ಜಘನಾಭ್ಯಾಂ ವಿನಿರ್ಗತಃ ।
ಸಂಭಿನ್ನಃ ಕ್ರಕಚೇನೇವ ಮಹಾಸ್ಥಾಣುರ್ಬಭೌ ಗಜಃ ॥೧೬॥

ತಾದೃಗ್ವಿಧಂ ಗಜಪತಿಂ ವ್ಯಸುಂ ವೀಕ್ಷ್ಯ ಸ ದೈತ್ಯರಾಟ್ ।
ಖಡ್ಗಹಸ್ತಃ ಖಮುತ್ಪ್ಲುತ್ಯ ತಾಂ ಪ್ರಹರ್ತುಮುಪದ್ರುತಃ ॥೧೭॥

ಆದರೆ ರಾಕ್ಷಸನು ಕ್ಷಣಕಾಲದಲ್ಲಿಯೇ ಮೇಲಕ್ಕೆದ್ದು ಬಾಲಾದೇವಿಯ ಮೇಲೆ ತೀಕ್ಷ್ಣವಾದ ಬಾಣಗಳನ್ನು ಬಿಟ್ಟನು. ಅನಂತರ ಆಕೆಯೂ ಕ್ಷಣಕಾಲದಲ್ಲಿಯೇ ಕೈಚಳಕವನ್ನು ತೋರಿಸುತ್ತಾ ಯುದ್ಧಮಾಡಿದಳು. ॥೧೩॥

ಬಾಲೆಯು ಯುದ್ಧದಲ್ಲಿ ಎರಡು ಬಾಣಗಳನ್ನು ಏಕಕಾಲದಲ್ಲಿಯೇ ಪ್ರಯೋಗಿಸಿ ರಾಕ್ಷಸನ ಬಿಲ್ಲು ಮತ್ತು ಛತ್ರಿಗಳನ್ನು ಕತ್ತರಿಸಿದಳು. ಅನಂತರ ಅವಳು ತುದಿಯನ್ನು ಬಗ್ಗಿಸಿ ಒಂದು ಬಾಣವನ್ನು ತನ್ನ ಕಿವಿಯ ವರೆಗೂ ಸೆಳೆದು ಅವನ ವಾಹನವಾದ ಆನೆಗೆ ಹೊಡೆದಳು. ॥೧೪॥

ಬಾಲೆಯು ಬಾಣದಿಂದ ಈ ರೀತಿಯಲ್ಲಿ ವಿಶುಕ್ರನ ವಾಹನವಾದ ಐರಾವತ ವಂಶದಲ್ಲಿ ಹುಟ್ಟಿದ ಆನೆಗೆ ಹೊಡೆದಳು. ವಜ್ರಾಯುಧವು ಬೆಟ್ಟವನ್ನು ಸೀಳುವಂತೆ ಆ ಆನೆಯನ್ನು ಆಕೆಯ ಬಾಣವು ಸೀಳಿತು. ॥೧೫॥

ಆ ಬಾಣವು ಆನೆಯ ಕುಂಭಸ್ಥಳವನ್ನು ಹೊಕ್ಕು ಹಿಂಭಾಗದಿಂದ ಹೊರಗೆ ಬಂದಿತು. ಇದರಿಂದ ಗರಗಸದಿಂದ ಕತ್ತರಿಸಿದ ದೊಡ್ಡ ದಿಮ್ಮಿಯಂತೆ ಆ ಆನೆಯು ಕಾಣಿಸಿತು. ॥೧೬॥

ರಾಕ್ಷಸಸೇನಾಪತಿಯಾದ ವಿಶುಕ್ರನು ಹೀಗೆ ತನ್ನ ಶ್ರೇಷ್ಠವಾದ ಆನೆಯು ಪ್ರಾಣವನ್ನು ಕಳೆದುಕೊಂಡುದನ್ನು ಕಂಡು ಆಕಾಶಕ್ಕೆ ಹಾರಿ ಕತ್ತಿಯನ್ನು ಹಿಡಿದು ಆ ಬಾಲಾದೇವಿಯನ್ನು ಹೊಡೆಯಲು ಸಿದ್ಧನಾದನು. ॥೧೭॥

ಆಯಾಂತಮಂತಕ ನಿಭಂ ಕರವಾಲಕರೋದ್ಯತಮ್ ।
ಲಾಘವೇನೈವ ಸಾ ಬಾಲಾ ದೂರಾದೇ ಕೇನ ಪತ್ರಿಣಾ ॥೧೮॥

ಕರವಾಲಂ ದ್ವಿಧಾ ಚಕ್ರೇ ತಂ ಮೂರ್ಧ್ನಿ ತ್ರಿಭಿರಾಹನತ್ ।
ವಿಶುಕ್ರ ಮೂರ್ಧ್ನಿ ತನ್ಮಗ್ನಂ ಕಿಂಚಿದ್ಬಾಣತ್ರಯಂ ತದಾ ॥೧೯॥

ವ್ಯರಾಜತ ತದಾ ದೈತ್ಯಸ್ತ್ರಿಶೃಂಗೋ ನಗರಾಡಿವ ।
ಗಾಢವಿದ್ಧೋಽಪಿ ಧೈರ್ಯೇಣ ಪಕ್ಷಿರಾಡಿವ ವೇಗವಾನ್ ॥೨೦॥

ಆದಾಯ ಪಾಣಿಭ್ಯಾಂ ಬಾಲಾಮುಚ್ಚಚಾಲ ನ ಭೋಽಂಗಣಂ ।
ನಿಶಾಮ್ಯ ಹ್ರಿಯ ಮಾಣಾಂ ತಾಂ ರಥನೇತ್ರ್ಯಬ್ರವೀದಿದಮ್ ॥೨೧॥

ಅಲಂ ಬಾಲೇ ಲೀಲಯಾ ತೇ ಮಹಾಽನರ್ಥಾಽವಸಾನಯಾ ।
ಜಹಿವೀರ್ಯೇಣ ದೈತೇಯಂ ಯಾವದ್ದೂರಂ ನ ಗಚ್ಛತಿ ॥೨೨॥

ಯಮನಿಗೆ ಸಮಾನನಾಗಿ ಕತ್ತಿಯನ್ನು ಕೈಯ್ಯಲ್ಲಿ ಹಿಡಿದುಕೊಂಡು ತನ್ನ ಕಡೆಗೆ ಬರುತ್ತಿರುವ ಆ ರಾಕ್ಷಸನನ್ನು ಕಂಡು ಬಾಲಾದೇವಿಯು ತನ್ನ ಕೈಚಳಕದಿಂದ ದೂರದಿಂದಲೇ ಒಂದು ಬಾಣವನ್ನು ಪ್ರಯೋಗಿಸಿ ಅದನ್ನು ತುಂಡರಿಸಿದಳು.॥೧೮॥

ಈ ರೀತಿಯಲ್ಲಿ ಬಾಲಾದೇವಿಯು ರಾಕ್ಷಸನ ಕತ್ತಿಯನ್ನು ಎರಡಾಗಿ ತುಂಡರಿಸಿದಳು. ಮತ್ತು ಆವಳು ಅವನನ್ನು ಮೂರು ಬಾಣಗಳಿಂದ ಹೊಡೆದಳು. ಆಗ ಆ ಮೂರು ಬಾಣಗಳೂ ಕೂಡ ವಿಶುಕ್ರನ ತಲೆಯಲ್ಲಿ ನಾಟಿದವು. ॥೧೯॥

ಆಗ ರಾಕ್ಷಸನು ಮೂರು ಶಿಖರಗಳುಳ್ಳ ಶ್ರೇಷ್ಠವಾದ ಪರ್ವತದಂತೆ ಕಾಣಿಸಿದನು. ಹೀಗೆ ಬಾಣಗಳ ಗಾಢಪ್ರಹಾರಕ್ಕೆ ಸಿಕ್ಕಿದರೂ ಅವನು ಧೈರ್ಯವಾಗಿ ಗರುಡನಂತೆ ವೇಗವಾಗಿ ಮುಂದುವರಿದನು. ॥೨೦॥

ಅವನು ತನ್ನ ಕೈಗಳಿಂದ ಬಾಲಾದೇವಿಯನ್ನು ಹಿಡಿದುಕೊಂಡು ಆಕಾಶ ಪ್ರದೇಶಕ್ಕೆ ಹಾರಿದನು. ಹೀಗೆ ರಾಕ್ಷಸನು ಎತ್ತಿಕೊಂಡು ಹೋಗುತ್ತಿರುವ ಆ ಆಕೆಯನ್ನು ನೋಡಿ ಸ್ತ್ರೀಸಾರಥಿಯು ಈ ರೀತಿಯಾಗಿ ಹೇಳಿದಳು. ॥೨೧॥

ಎಲೌ ಬಾಲಾದೇವಿಯೇ, ದೊಡ್ಡ ಅನರ್ಥದಲ್ಲಿ ಕೊನೆಗಾಣುವ ನಿನ್ನ ಈ ಲೀಲೆಯನ್ನು ಸಾಕುಮಾಡು. ಅವನು ದೂರಕ್ಕೆ ನಿನ್ನನ್ನು ಒಯ್ಯದ ಹಾಗೆ ನಿನ್ನ ಪರಾಕ್ರಮವನ್ನು ತೋರಿಸಿ ಅವನನ್ನು ಸಂಹರಿಸಿಬಿಡು. ॥೨೨॥

ಶ್ರುತ್ವಾ ಸಖೀವಚೋ ಬಾಲಾ ಮತ್ವಾ ಕಾಲ ಸಮಂ ವಚಃ ।
ನಿರ್ವರ್ತ್ಯಮುಷ್ಟಿಂ ಸುದೃಢಾಂ ಪಾತಯತ್ಯಸ್ಯ ಮೂರ್ಧನಿ ॥೨೩॥

ವಜ್ರಕಲ್ಪ ಮುಷ್ಟಿಹತೋ ಭಿನ್ನಮೂರ್ಧಾ ವಮನ್ನಸೃಕ್ ।
ಗಾಢಮೂರ್ಛಾ ಸಮಾವಿಷ್ಟೋ ನಿಪಪಾತ ಮಹೀತಲೇ ॥೨೪॥

ಅಥ ಬಾಲಾ ರಥಾರೂಢಾ ಸಖೀಂ ತಾಮಭಿಚೋದಯತ್ ।
ಪ್ರಿಯೇ ಶೀಘ್ರಂ ನಯ ರಥಮೇಷೋಽಗ್ರೇ ದೈತ್ಯನಾಯಕಃ ॥೨೫॥

ಶ್ವೇತಾತ ಪತ್ರರಾಜೀಭಿಶ್ಚಾಮರೈರಭಿಸೇವಿತಃ ।
ಯಥಾ ನೀಲಗಿರಿರ್ಹಂಸೈ ರ್ಜಲ ನಿರ್ಝರ ಸಂವೃತಃ ॥೨೬॥

ಆಸ್ತೇ ತಥಾ ರಾಜತೇಽಯಂ ನಯ ತತ್ರ ರಥಂ ದ್ರುತಂ ।
ಏಷಾ ಪ್ರಾಪ್ತಾ ಪೃಷ್ಠತೋ ಮೇ ದಂಡನಾಥಾ ಚಮೂವೃತಾ ॥೨೭॥

ಸಖಿಯ ಕಾಲೋಚಿತವಾದ ಮಾತನ್ನು ಕೇಳಿ ಬಾಲಾದೇವಿಯು ಅತ್ಯಂತಬಲವಾದ ಮುಷ್ಟಿಯ ಪ್ರಹಾರವನ್ನು ಅವನ ತಲೆಯಮೇಲೆ ಮಾಡಿದಳು. ॥೨೩॥

ಆಕೆಯ ವಜ್ರಾಯುಧಕ್ಕೆ ಸಮಾನವಾದ ಮುಷ್ಟಿಯ ಪೆಟ್ಟಿಗೆ ಸಿಕ್ಕಿ, ಅದರಿಂದ ಅವನ ತಲೆಯೊಡೆದು ರಕ್ತವನ್ನು ಕಾರುತ್ತಾ ಅತ್ಯಂತ, ಗಾಢವಾದ ಮೂರ್ಛೆಗೆ ಒಳಗಾಗಿ, ಅವನು ಭೂಮಿಯಲ್ಲಿ ಬಿದ್ದುಬಿಟ್ಟನು. ॥೨೪॥

ಅನಂತರ ಬಾಲಾದೇವಿಯು ರಥವನ್ನು ಹತ್ತಿ ಸ್ನೇಹಿತೆಯಾದ ಸಾರಥಿಗೆ ರಥವನ್ನು ಶೀಘ್ರವಾಗಿ ಬಿಡಲು ಹೇಳುತ್ತಾ "ಎಲೌ ಪ್ರಿಯಳೇ, ಈ ರಥವನ್ನು ರಾಕ್ಷಸರಾಜನ ಮುಂದಕ್ಕೆ ಶೀಘ್ರವಾಗಿ ನಡೆಸು" ಎಂದಳು. ॥೨೫॥

ರಾಕ್ಷಸರಾಜನು ಬಿಳಿಯ ಛತ್ರಿಗಳ ಸಮೂಹಗಳ ಸೇವೆಯನ್ನು ಕೈಕೊಳ್ಳುತ್ತಾ, ಹಂಸಗಳಿಂದ ಕೂಡಿದ ಗಿರಿನದೀಪ್ರವಾಹದಿಂದ ಕೂಡಿದ ಕಪ್ಪಾದ ಪರ್ವತದಂತೆ, ಕಾಣುತ್ತಿದ್ದಾನೆ. ॥೨೬॥

ಈ ರೀತಿಯಲ್ಲಿ ರಾಕ್ಷಸರಾಜನು ಮೆರೆಯುತ್ತಿದ್ದಾನೆ. ಆದ್ದರಿಂದ ನೀನು ಶೀಘ್ರವಾಗಿ ರಥವನ್ನು ಅಲ್ಲಿಗೆ ನಡೆಯಿಸು. ಏಕೆಂದರೆ ನನ್ನ ಹಿಂಭಾಗದಲ್ಲಿ ಸೈನ್ಯದಿಂದ ಕೂಡಿದವಳಾಗಿ ದಂಡನಾಥಾದೇವಿಯು ನನ್ನನ್ನು ಯುದ್ಧದಿಂದ ಹಿಂತಿರುಗಿಸಲು ಬರುತ್ತಿದ್ದಾಳೆ. ॥೨೭॥

ಶ್ರೂಯತೇ ಸಿಂಹವಾಹಸ್ಯ ಗರ್ಜತೋ ಭೈರವೋ ರವಃ ।
ಅವಶ್ಯಂ ಮಮ ಯುದ್ಧಸ್ಯ ವಿಹತಿಂ ಸಾ ಕರಿಷ್ಯತಿ ॥೨೮॥

ತಾವದ್ದ್ರುತಂ ಯೋಧಯಾಮಿ ಭಂಡದೈತ್ಯಂ ಮಹಾಬಲಂ ॥
ಉತ್ಕಂಠಿತಾಽಸ್ಮಿ ತದ್ಯುದ್ಧೇ ಸರ್ವಥಾ ನಯ ಮಾಂ ದ್ರುತಂ ॥೨೯॥

ಶ್ರುತ್ವಾ ತದ್ಗದಿತಂ ಸಾಽಪಿ ಸಖೀ ರಥಮಚೋದಯತ್ ।
ಯಾವದ್ಭಂಡಸ್ಯ ಪುರತಸ್ತಾವ ದ್ರಥವರಾಶ್ರಯಃ ॥೩೦॥

ಜ್ಞಾತ್ವಾ ಸರ್ವಂ ವಿಷಂಗೋಽಪಿ ಮತ್ವಾಽಜೇಯಾಂ ಸುರಾಸುರೈಃ ।
ಅನಯಾ ಯುಧ್ಯಮಾನಸ್ಯ ದೈತ್ಯರಾಜಸ್ಯ ಸರ್ವಥಾ ॥೩೧॥

ಜೀವತೋ ನ ವಿಮೋಕ್ಷೋಽಸ್ತಿ ವಿಜಿತಸ್ತ್ವನಯಾ ಯದಿ ।
ತದಾ ಚಿರಾರ್ಜಿತಾ ಕೀರ್ತಿಃ ವ್ಯರ್ಥಂ ಹೀಯೇತ ಸರ್ವಥಾ ॥೩೨॥

ದಂಡನಾಯಕಿಯ ಸಿಂಹವಾಹನದ ಭಯಂಕರವಾದ ಗರ್ಜನೆಯು ಕೇಳಿಸುತ್ತಿದೆ. ಅವಳು ನನ್ನನ್ನು ಸಮೀಪಿಸಿದರೆ ಖಂಡಿತವಾಗಿಯೂ ನಾನು ಯುದ್ಧ ಮಾಡುವುದನ್ನು ತಪ್ಪಿಸುವಳು. ॥೨೮॥

ಆದ್ದರಿಂದ ಅವಳು ನನ್ನ ಸಮೀಪಕ್ಕೆ ಬರುವಷ್ಟರಲ್ಲಿಯೇ ಮಹಾಬಲಿಷ್ಠನಾದ ಭಂಡರಾಕ್ಷಸನೊಂದಿಗೆ ಯುದ್ಧಮಾಡುವೆನು. ಅವನೊಂದಿಗೆ ಯುದ್ಧ ಮಾಡಲು ನಾನು ಬಹಳ ಉತ್ಸಾಹವುಳ್ಳವಳಾಗಿದ್ದೇನೆ. ಆದ್ದರಿಂದ ನನ್ನ ರಥವನ್ನು ಸರ್ವಪ್ರಕಾರದಿಂದಲೂ ಶೀಘ್ರವಾಗಿ ಅಲ್ಲಿಗೆ ನಡೆಸು. ॥೨೯॥

ಅವಳ ಮಾತನ್ನು ಕೇಳಿ ಸ್ನೇಹಿತೆಯಾದ ಸಾರಥಿಯು ಭಂಡನ ಮುಂಭಾಗಕ್ಕೆ ಶೀಘ್ರವಾಗಿ ರಥವನ್ನು ಹೊಡೆದಳು. ॥೩೦॥

ಕುಮಾರಿಯ ವಿಷಯಗಳನ್ನೆಲ್ಲವನ್ನೂ ನೋಡಿದ ವಿಷಂಗರಾಕ್ಷಸನು ದೇವತೆಗಳು ಮತ್ತು ರಾಕ್ಷಸರಿಂದ ಇವಳು ಜಯಿಸಲಸಾಧ್ಯಳೆಂದು ತಿಳಿದು, ರಾಕ್ಷಸರಾಜನು ಇವಳೊಂದಿಗೆ ಯುದ್ಧಮಾಡಿದರೂ ಇವಳನ್ನು ಜಯಿಸುವುದು ಕಷ್ಟವು. ಎಂದು ಭಾವಿಸಿದನು. ॥೩೧॥

ಇವಳು ರಾಕ್ಷಸನನ್ನು ಜಯಿಸಿದರೆ ಅವನು ಬದುಕಿಬರುವುದೇ ಕಷ್ಟವಾಗು

ಯದಿ ಸಾ ಲಲಿತಾ ರಾಜ್ಞೀ ವಿಜೇಷ್ಯತಿ ಸಮಂ ಹಿ ತತ್ ।
ತಸ್ಮಾದತ್ರ ಯಥಾಶಕ್ತ್ಯಾ ಯತಿತವ್ಯಂ ಭವೇನ್ಮಯಾ ॥೩೩॥

ಇತಿ ನಿಶ್ಚಿತ್ಯ ಬಾಲಾಯಾ ನಿಪಪಾತಾಽಗ್ರತೋ ಬಲೀ ।
ಆಯಾಂತಂ ಸಂಮುಖಂ ದೈತ್ಯಂ ದೃಷ್ಟ್ವಾ ರಥವರಸ್ಥಿತಂ ॥೩೪॥

ಭಂಡಯುದ್ಧ ಮಹಾವಿಘ್ನಂ ಮತ್ವಾ ಪ್ರಾಹ ಸಖೀಂ ಪ್ರತಿ ।
ಪ್ರಿಯೇ ಭಂಡೇನ ಯೋದ್ಧವ್ಯೇ ಮಹಾನ್ವಿಘ್ನೋ ಹ್ಯುಪಸ್ಥಿತಃ॥೩೫॥

ಪಶ್ಯ ಮೇ ಲಾಘವಂ ಚೈನಂ ವಾರಯಾಮಿ ಸುದೂರತಃ ।
ಇತ್ಯುಕ್ತ್ವಾ ನಿಶಿತಾನ್ ಬಾಣಾಂಶ್ಚತುರೋ ವಿಸಸರ್ಜ ಹ ॥೩೬॥

ತ್ತದೆ. ಅಲ್ಲದೆ ಅವನು ಬಹಳ ಕಾಲದಿಂದ ಸಂಪಾದಿಸಿರುವ ಕೀರ್ತಿಯು ಸರ್ವವಿಧದಲ್ಲಿಯೂ ಹಾಳಾಗುವುದು. ||೩೨||

ಲಲಿತಾರಾಣಿಯು ರಾಕ್ಷಸರಾಜನನ್ನು ಜಯಿಸುವುದಾದರೆ ಆಗಲೂ ಕೀರ್ತಿಯು ಹಾಳಾಗುವುದು. ಆದ್ದರಿಂದ ನಾನೂ ಕೂಡ ನನ್ನ ಶಕ್ತಿಗೆ ಅನುಸಾರವಾಗಿ ರಾಕ್ಷಸರಾಜನ ಜೊತೆಯಲ್ಲಿ ದೇವಿಯೊಂದಿಗೆ ಯುದ್ಧಮಾಡಬೇಕು. ||೩೩||

ಈ ರೀತಿಯಲ್ಲಿ ನಿಶ್ಚಯಿಸಿ ಬಲಿಷ್ಠನಾದ ವಿಷಂಗರಾಕ್ಷಸನು ಬಾಲೆಯು ಬರುತ್ತಿರುವ ದಾರಿಯಲ್ಲಿ ಅಡ್ಡಗಿಸಿ ಯುದ್ಧಕ್ಕೆ ಬಂದನು. ಹೀಗೆ ತನ್ನ ಪ್ರಭುವಿಗೆ ಸಹಾಯಮಾಡಲು ಶ್ರೇಷ್ಠರಥದಲ್ಲಿ ಕುಳಿತು ಎದುರಿಗೆ ಬರುತ್ತಿರುವ ಆ ರಾಕ್ಷಸನನ್ನು ಕುಮಾರಿಯು ನೋಡಿದಳು. ||೩೪||

ಕುಮಾರಿಯು ತಾನು ಭಂಡರಾಕ್ಷಸನ ಮೇಲೆ ಯುದ್ಧಮಾಡುವುದಕ್ಕೆ ದೊಡ್ಡ ವಿಘ್ನವಾಗಿ ಬಂದ ಆ ರಾಕ್ಷಸನನ್ನು ನೋಡಿ ಸಖಿಯನ್ನು ಕುರಿತು "ಎಲೌ ಸ್ತ್ರೀಸಾರಥಿಯೇ, ನಾನು ಭಂಡನ ಮೇಲೆ ಯುದ್ಧಮಾಡಬೇಕೆಂದಿರುವಾಗ ಇವನಿಂದ ದೊಡ್ಡ ವಿಘ್ನವೇ ಉಂಟಾಗಿದೆ" ಎಂದಳು. ||೩೫||

ಆದರೂ ನನ್ನ ಕೈ ಚಳಕವನ್ನು ನೋಡು. ನಾನು ಈ ರಾಕ್ಷಸನನ್ನು ನನ್ನ ಬಾಣಗಳಮೂಲಕ ದೂರಕ್ಕೆ ಹಾರಿಸುತ್ತೇನೆ. ಹೀಗೆ ಹೇಳಿ ಕುಮಾರಿಯು ತೀಕ್ಷ್ಣವಾದನಾಲ್ಕು ಬಾಣಗಳನ್ನು ಅವನ ಮೇಲೆ ಬಿಟ್ಟಳು. ||೩೬||

ತೈ ಸ್ತಸ್ಯ ವಾಹಾ ನಿಹತಾಃ ಪ್ರೋನ್ನಮ್ರಾ ವಾತ ರಂಹಸಃ ।
ಅಥೈ ಕೇನ ಧ್ವಜಂ ಛಿತ್ವಾ ಸೂತಮೇಕೇನ ಪತ್ರಿಣಾ ॥೩೭॥

ನಿಜಘಾನಾಥ ದೈತೇಯೋ ವಿಷಂಗೋಽತ್ಯಂತಕೋಪಿತಃ ।
ಮೋಘಂ ಸ್ವೋದ್ಯೋಗಮಾಲಕ್ಷ್ಯ ತುರಗಾಂತರ ಸಂಶ್ರಯಃ ॥೩೮॥

ಆದಾಯ ಪರಿಘಂ ಘೋರಮಭಿದುದ್ರಾವ ವೇಗತಃ ।
ತುರಗೇಣ ಸಮಾಯಾಂತಂ ವಾತನುನ್ನಾಽಭ್ರಖಂಡವತ್ ॥೩೯॥

ವವರ್ಷ ಸಾಯಕೌಘೇನ ಪ್ರಾವೃಡಬ್ದ ಇವಾಚಲಮ್ ।
ಶರವರ್ಷಮಗಣಯನ್ನಾಯಾಂತ ಮಾಭಿಮುಖ್ಯತಃ ॥೪೦॥

ಗಾಳಿಯಂತೆ ಬಹಳ ವೇಗವುಳ್ಳ ಬಹಳ ಎತ್ತರವಾದ ಆ ರಾಕ್ಷಸನ ವಾಹನಗಳಾದ ಕುದುರೆಗಳು ಕುಮಾರಿಯ ಬಾಣಪ್ರಯೋಗದಿಂದ ಸತ್ತವು. ಅನಂತರ ಕುಮಾರಿಯು ಒಂದು ಬಾಣದಿಂದ ರಾಕ್ಷಸನ ಬಾವುಟವನ್ನೂ ಮತ್ತೊಂದು ಬಾಣದಿಂದ ಅವನ ಸಾರಥಿಯನ್ನೂ ಕತ್ತರಿಸಿದಳು. ॥೩೭॥

ಈರೀತಿಯಾಗಿ ಬಾಲಾದೇವಿಯ ಬಾಣದಿಂದ ನಷ್ಟಹೊಂದಿದ ವಿಷಂಗರಾಕ್ಷಸನು ಅತ್ಯಂತ ಕೋಪಗೊಂಡು ತನ್ನ ಪ್ರಯತ್ನವು ವಿಫಲವಾದುದನ್ನು ತಿಳಿದು, ಬೇರೊಂದು ಕುದುರೆಯನ್ನೇರಿ ಬಂದು, ಕುಮಾರಿಯ ಕಡೆಗೆ ಬಾಣಪ್ರಯೋಗ ಮಾಡಿದನು. ॥೩೮॥

ವಿಷಂಗರಾಕ್ಷಸನು ಭಯಂಕರವಾದ ಪರಿಘ ಎಂಬ ಆಯುಧವನ್ನೆತ್ತಿಕೊಂಡು ಕುಮಾರಿಯ ಕಡೆಗೆ ಓಡಿದನು. ಗಾಳಿಯ ಪ್ರೇರಣೆಗೆ ಸಿಕ್ಕಿದ ಮೋಡದ ಚೂರಿನಂತೆ, ತನ್ನೆದುರಿಗೆ ಕುದುರೆಯ ಮೇಲೆ ಬರುತ್ತಿರುವ ವಿಷಂಗರಾಕ್ಷಸನನ್ನು ಕುಮಾರಿಯು ನೋಡಿದಳು. ॥೩೯॥

ಆಗ ಕುಮಾರಿಯು, ಮಳೆಗಾಲದ ಮೋಡವು ಪರ್ವತವನ್ನು ಹೇಗೋ ಹಾಗೆ, ಬಾಣಗಳ ಮಳೆಯನ್ನು ಅವನ ಮೇಲೆ ಸುರಿಸಿದಳು. ಆದರೂ ಆ ರಾಕ್ಷಸನು ಕುಮಾರಿಯ ಬಾಣಗಳ ಮಳೆಯನ್ನೂ ಲೆಕ್ಕಿಸದೆ ತನ್ನ ಕಡೆಗೆ ಬರುತ್ತಿರುವುದನ್ನು ಕಂಡಳು. ॥೪೦॥

ದೃಷ್ಟ್ವಾ ಬಾಲಾ ದ್ರುತತರಂ ಶರೇಣೈಕೇನ ಕರ್ಣಿನಾ ।
ಅಕರೋದ್ವ್ಯಸುಮಶ್ವಂ ತಂ ಹತಾಶ್ವೋಽಥ ವಿಷಂಗಕಃ ॥೪೧॥

ಉದ್ಯಮ್ಯ ಪರಿಘಂ ಘೋರಮುಪಾಽಽಯಾಂತಂ ಸುಭೀಷಣಂ ।
ಸಮುದ್ರಮಿವ ಗರ್ಜಂತಂ ಕಾಲಾಂತಕ ಯಮೋಪಮಮ್ ॥೪೨॥

ಸುಪುಂಖೇನ ಶರೇಣಾಶು ಜಘಾನ ಬಲವದ್ಧೃದಿ ।
ಸ ಗಾಢವಿದ್ಧೋ ಬಾಣೇನ ಭೃಮುನ್ನುಷ್ಣಮಸೃಕ್ ವಮನ್ ॥೪೩॥

ಮೂರ್ಛಿತಃ ಪ್ರಾಪತದ್ಭೂಮೌ ಕೃತ್ತಪಕ್ಷ ಮಹೀಧ್ರವತ್ ।
ತದದ್ಭುತಂ ಕರ್ಮ ದೃಷ್ಟ್ವಾ ದೈತ್ಯಾ ದೇವಾಶ್ಚ ವಿಸ್ಮಿತಾಃ ॥೪೪॥

ಅಹೋ ದೈತ್ಯಾಧಿಪೋ ಹ್ಯೇಷಃ ಪುರಾಶಕ್ರಮುಖಾನ್ ಸುರಾನ್ ।
ಬಹುಧಾ ಹ್ಯಜಯದ್ಯುದ್ಧೇ ವಿಷ್ಣುತುಲ್ಯ ಪರಾಕ್ರಮಃ ॥೪೫॥

ಕುಮಾರಿಯು ಅವನನ್ನು ನೋಡಿ ಒಂದು ಬಾಣವನ್ನು ತನ್ನ ಕಿವಿಯ ವರೆಗೂ ಸೆಳೆದು ಹೊಡೆದು ಆವನ ಕುದುರೆಯು ಸಾಯುವಂತೆ ಮಾಡಿ, ವಿಷಂಗನಿಗೆ ವಾಹನವೇ ಇಲ್ಲದಂತೆ ಮಾಡಿದಳು. ॥೪೧॥

ಆಗ ಕುಮಾರಿಯು ಬಹಳ ಭಯಂಕರವಾದ ಪರಿಘವೆಂಬ ಆಯುಧವನ್ನು ಎತ್ತಿಕೊಂಡು ಬರುತ್ತಿರುವ, ಸಮುದ್ರದಂತೆ ಗರ್ಜನೆಮಾಡುತ್ತಾ ಪ್ರಳಯಕಾಲದ ಯಮನಂತೆ ಕಾಣುತ್ತಿದ್ದ ವಿಷಂಗರಾಕ್ಷಸನನ್ನು ಕಂಡಳು. ॥೪೨॥

ಕುಮಾರಿಯು ತೀಕ್ಷ್ಣವಾದ ತುದಿಯುಳ್ಳ ಬಾಣದಿಂದ ವಿಷಂಗರಾಕ್ಷಸನ ಹೃದಯಕ್ಕೆ ಬಲವಾಗಿ ಹೊಡೆದಳು. ಈ ರೀತಿಯಲ್ಲಿ ಬಾಣದ ಬಲವಾದ ಪೆಟ್ಟಿಗೆ ಸಿಕ್ಕಿದ ಆ ರಾಕ್ಷಸನು ಬಿಸಿಯಾದ ರಕ್ತವನ್ನು ಕಾರುತ್ತಿದ್ದನು. ॥೪೩॥

ಕೂಡಲೇ ಆ ರಾಕ್ಷಸನು, ರೆಕ್ಕೆಯನ್ನು ಕತ್ತರಿಸಿದ ಪರ್ವತದಂತೆ, ಮೂರ್ಛೆ ಹೋಗಿ ಭೂಮಿಯಲ್ಲಿ ಬಿದ್ದನು. ತುಂಬ ಅದ್ಭುತವಾದ ಈ ಕಾರ್ಯವನ್ನು ನೋಡಿ ರಾಕ್ಷಸರು ಮತ್ತು ದೇವತೆಗಳು ಬಹಳ ಆಶ್ಚರ್ಯವನ್ನು ಹೊಂದಿದರು. ॥೪೪॥

ಹಿಂದೆ ಇಂದ್ರನೇ ಮೊದಲಾದ ದೇವತೆಗಳನ್ನು ಅನೇಕ ಸಲ ಯುದ್ಧದಲ್ಲಿ ಜಯಿಸಿದ್ದ, ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳ, ಈ ರಾಕ್ಷಸನೂ ಕೂಡ ಕುಮಾರಿಯ ಬಾಣದ ಪೆಟ್ಟಿನಿಂದ ಮೂರ್ಛೆಹೋದದ್ದು ಆಶ್ಚರ್ಯವೇ ಸರಿ. ॥೪೫॥

ಸ ಏಷ ಬಾಲಯಾ ನೂನಂ ಲೀಲಯೈವ ನಿಪಾತಿತಃ ।
ಸರ್ವಾನ್ ವಿಜೇಷ್ಯತ್ಯೇಷೈವ ಲಲಿತಾ ಕಿಂಕರಿಷ್ಯತಿ ॥೪೬॥

ಪ್ರಾಹುರೇವ ಮಥ ಪುನಃ ರಥನೇತ್ರೀ ರಥಂ ನಯುತ್ ।
ಭಂಡಾಸುರ ಸಮಕ್ಷಂ ಸ್ವಂ ದೃಷ್ಟ್ವಾ ಬಾಲಾ ಮಹಾಸುರಮ್ ॥೪೭॥

ಸಾಧು ಪ್ರಿಯಂ ಕೃತಂ ಹ್ಯದ್ಯ ಚಿರಾಭಿಲಷಿತಂ ಮಮ ।
ಅನೇನ ಯುಧ್ವಾ ಸಂತುಷ್ಯೇ ಚಿರಾಽಭಿಲಷಿತಂ ತ್ವತಃ ॥೪೮॥

ಇತ್ಯುಕ್ತ್ವಾ ಶರವರ್ಷೇಣ ವವರ್ಷಾಽಸುರಭೂಪತಿಮ್ ।
ಅಥ ಭಂಡಾಽಸುರೋ ದೃಷ್ಟ್ವಾ ಬಾಲಾಂ ಸಂಮುಖ ಸಂಗತಾಮ್॥೪೯॥

ಜಹೃಷೇ ವಾಂಛಿತಂ ಪ್ರಾಪ್ಯ ಚಿರಾಯಾಽಭಿಮತಂ ತದಾ ।
ಸ ಕಾಲ ಏಷ ಸಂಪ್ರಾಪ್ತಃ ಶ್ರಿಯೋಕ್ತಶ್ಚಿರವಾಂಛಿತಃ ॥೫೦॥

ಕುಮಾರಿಯು ಬಾಲೆಯಾದರೂ ಇಂಥವನನ್ನೂ ಯುದ್ಧದಲ್ಲಿ ಅನಾಯಾಸವಾಗಿಯೇ ಕೊಂದು ಬೀಳಿಸಿದ್ದಾಳೆ. ಆದ್ದರಿಂದ ಇವಳೇ ಎಲ್ಲರನ್ನೂ ಜಯಿಸುವಳು. ಹೀಗಿರುವಾಗ ಲಲಿತಾಮಹಾರಾಣಿಯು ಮಾಡಬೇಕಾದದ್ದೇನು ? ॥೪೬॥

ಮೇಲೆ ಹೇಳಿದ ರೀತಿಯಲ್ಲಿ ದೇವತೆಗಳು ಮತ್ತು ರಾಕ್ಷಸರೂ ಹೇಳಿಕೊಂಡರು. ಅನಂತರ ಸಾರಥಿಯು ಬೇಗನೆ ಭಂಡಾಸುರನ ಎದುರಿಗೆ ರಥವನ್ನು ಒಯ್ದಳು. ಬಾಲೆಯು ಮಹಾರಾಕ್ಷಸನನ್ನು ನೋಡಿ ಈ ರೀತಿಯಲ್ಲಿ ಹೇಳಿಕೊಂಡಳು. ॥೪೭॥

ಎಲೌ ಸ್ತ್ರೀಸಾರಥಿಯೇ, ನೀನು ಒಳ್ಳೆಯ ಕೆಲಸವನ್ನೇ ಮಾಡಿದೆ. ನನಗೆ ಈ ವಿಷಯವು ಬಹಳ ದಿವಸದಿಂದಲೂ ಪ್ರಿಯವಾಗಿತ್ತು. ನಾನು ಭಂಡಾಸುರನೊಡನೆ ಯುದ್ಧಮಾಡಿ ನನ್ನ ಬಹಳ ಕಾಲದ ಅಭಿಲಾಷೆಯನ್ನು ತೃಪ್ತಿಗೊಳಿಸುವೆನು. ॥೪೮॥

ಹೀಗೆ ಹೇಳಿ ಕುಮಾರಿಯು ರಾಕ್ಷಸರಾಜನಾದ ಭಂಡನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದಳು. ಅನಂತರ ಭಂಡಾಸುರನು ತನ್ನೆದುರಿಗೆ ಬಂದು ಇದ್ದ ಕುಮಾರಿಯನ್ನು ನೋಡಿದನು. ॥೪೯॥

ಆಗ ಭಂಡರಾಕ್ಷಸನು ಬಹಳ ಕಾಲದಿಂದಿದ್ದ ತನ್ನ ಅಭಿಲಾಷೆಯು ಈಡೇರಿ

ಏಷಾ ದೃಷ್ಟಾ ಮಹಾದೇವೀ ಭಕ್ತವಾಂಛಿತ ಪೂರಣೀ ।
ನೂನಮೇಷಃ ಕ್ಷಣೋ ಮೇಽದ್ಯ ಘೋರದೇಹ ವಿಯೋಜಕಃ ॥೫೧॥

ಅನಯಾ ನಿಹತಸ್ತ್ವತ್ರ ವ್ರಜಾಮಿ ಸಮಲೋಕತಾಮ್ ।
ಏಷಾ ಶ್ರೀಲಲಿತಾರಾಜ್ಞಾಃ ಕುಮಾರ್ಯದ್ಭುತವಿಕ್ರಮಾ ॥೫೨॥

ತಸ್ಯಾ ಬಿಂಬಸಮುದ್ಭೂತ ಪ್ರತಿಬಿಂಬವದಾಸ್ಥಿತಾ ।
ಮಾಂ ನಿಹಂತುಂ ಸಾಽಪಿ ದೇವೀ ರಮಾ ವಚನಗೌರವಾತ್ ॥೫೩॥

ಆಯಾಸ್ಯತಿ ನ ಸಂದೇಹೋ ರಮೋಕ್ತಂ ನಾಽನ್ಯಥಾ ಭವೇತ್ ।
ಭವತ್ವೇನಾಂ ಪೂಜಯಾಮಿ ತದ್ಬಿಂಬಾ ದುತ್ಥಿತಾಽತ್ಮಿಕಾಮ್ ॥೫೪॥

ದ್ದನ್ನು ಕಂಡು ಸಂತೋಷಪಟ್ಟನು. ಲಕ್ಷ್ಮೀದೇವಿಯು ಹೇಳಿದ್ದ, ತಾನು ಬಹಳ ಕಾಲದಿಂದಲೂ ಬಯಸುತ್ತಿದ್ದ ಸಮಯವೇ ಬಂದಿತೆಂದು ತಿಳಿದನು. ||೫೦||

ಭಕ್ತರ ಇಷ್ಟಾರ್ಥಗಳನ್ನು ಪೂರ್ಣಗೊಳಿಸುವ ಮಹಾದೇವಿಯಾದ ಈ ದೇವಿಯನ್ನು ನಾನು ನೋಡುತ್ತಿದೇನೆ. ನನ್ನ ಭಯಂಕರವಾದ ಈ ದೇಹವನ್ನು ಹಾಳುಮಾಡುವ ಕಾಲವೇ ಸಮೀಪಿಸುತ್ತಿದೆಯೆಂದು ನಂಬುತ್ತೇನೆ. ||೫೧||

ಈ ದೇವಿಯು ಈಗ ನನ್ನನ್ನು ಕೊಂದರೆ ನಾನು ಸಾಲೋಕ್ಯ ಅಥವಾ ದೇವಿಯ ಲೋಕದಲ್ಲಿ ತಾಯಿಯನ್ನು ಸಾಕ್ಷಾತ್ಕರಿಸುತ್ತಿರುವುದೆಂಬ ಮೋಕ್ಷಸುಖ ವನ್ನು ಅನುಭವಿಸುವೆನು. ಈಕೆಯು ಶ್ರೀ ಲಲಿತಾದೇವಿಯ ಮಗಳೂ, ಆಶ್ಚರ್ಯ ಕರವಾದ ಪರಾಕ್ರಮವುಳ್ಳವಳೂ ಆದ ಕುಮಾರಿಯೇ ಆಗಿದ್ದಾಳೆ. ||೫೨||

ಈಕೆಯು ಲಲಿತಾದೇವಿಯೆಂಬ ಬಿಂಬದಿಂದ ಉಂಟಾದ ಪ್ರತಿಬಿಂಬದಂತಿ ದ್ದಾಳೆ. ಲಕ್ಷ್ಮೀದೇವಿಯು ಹಿಂದೆ ಹೇಳಿದ್ದಂತೆ ನನ್ನನ್ನು ಕೊಲ್ಲಲು ಲಲಿತಾ ದೇವಿಯು ಶೀಘ್ರದಲ್ಲಿಯೇ ಬರುವಳು. ||೫೩||

ಲಲಿತಾದೇವಿಯೇ ನನ್ನನ್ನು ಕೊಲ್ಲಲು ಬರುವಳೆಂಬುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಲಕ್ಷ್ಮಿಯು ಹೇಳಿದ ಮಾತು ಎಂದಿಗೂ ವ್ಯತ್ಯಾಸವಾಗಲಾರದು. ಆಕೆಯ ಬಿಂಬದಿಂದ ಉಂಟಾದ ಈಕೆಯನ್ನು ಒಂದು ವಿಧದಲ್ಲಿ ಪೂಜಿಸುವೆನು.||೫೪||

ಕಾಲೋ ಪಪನ್ನ ವಿಧಿನಾ ಶರಭೂತಪ್ರಸಾಧನೈಃ ।
ಇತ್ಥಂ ವಿಚಿಂತ್ಯ ಸಶರಂ ಜಗ್ರಾಹ ಸುದೃಢಂ ಧನುಃ ॥೫೫॥

ಜಲಾಽಸ್ತ್ರಮಂತ್ರಿತ ಶರೌ ಪ್ರಾಕ್ಷಿಪತ್ತಸ್ಯಾಃ ಪಾದಯೋಃ ।
ಅಥಾಽ ಪರಂ ಪೌಷ್ಪಮಂತ್ರ ಮಂತ್ರಿತಂ ಮೂರ್ಧ್ನಿ ನಿಕ್ಷಿಪತ್ ॥೫೬॥

ಶರೌ ಸಿಷಿಚತುಃ ಪಾದೌ ನಿರ್ಮಲೈಃ ಶೀತಲೈಃ ಜಲೈಃ ।
ಶರೋಽಪರೋ ಮೂರ್ಧ್ನಿ ತಸ್ಯಾ ಮಾಲಾ ವರ್ಷಮವಾಽಕಿರತ್ ॥೫೭॥

ತದದ್ಭುತಂ ನಿಶಾಮ್ಯಾಽಥ ಪಪ್ರಚ್ಛ ರಥನಾಯಿಕಾ ।
ಕುಮಾರ್ಯೇ ತನ್ಮಹಚ್ಚಿತ್ರಂ ಪ್ರಪಶ್ಯಾಮ್ಯ ಸುರೇಶ್ವರೇ ॥೫೮॥

ತೇನೈವ ವಿಹಿತಂ ಕಿಂ ವಾ ಜಾತಂ ಸ್ಯಾತ್ತವ ತೇಜಸಾ ।
ತ್ವಯಿ ವರ್ಷಂ ಕಿರಂತ್ಯಾಂ ನೈ ಶರಾಣಾ ಮಾಹವಾಽವನೌ ॥೫೯॥

ಆ ರಾಕ್ಷಸನು ಈರೀತಿಯಾಗಿ ಆಲೋಚಿಸಿ ಆ ಕಾಲಕ್ಕೆ ಯೋಗ್ಯವಾದ ಪೂಜಾಕ್ರಮವನ್ನು ಅನುಸರಿಸಿ ಬಾಣಗಳೆಂಬ ಸಾಮಗ್ರಿ ಅಲಂಕಾರಗಳಿಂದಲೇ ಆಕೆಯನ್ನು ಪೂಜಿಸಲು ನಿಶ್ಚಯಿಸಿ, ಬಾಣದೊಂದಿಗೆ ಅತ್ಯಂತ ಬಲವಾದ ಧನುಸ್ಸನ್ನು ಕೈಗೆ ತೆಗೆದುಕೊಂಡನು. ॥೫೫॥

ಅನಂತರ ಭಂಡರಾಕ್ಷಸನು ವರುಣಾಸ್ತ್ರವನ್ನು ಮಂತ್ರಿಸಿರುವ ಎರಡು ಬಾಣಗಳನ್ನು ಆಕೆಯ ಪಾದಗಳಿಗೆ ಪ್ರಯೋಗಿಸಿದನು. ಆಮೇಲೆ ಪೌಷ್ಪಮಂತ್ರದಿಂದ ಮಂತ್ರಿಸಿರುವ ಬಾಣವನ್ನು ಅವಳ ತಲೆಯಕಡೆಗೆ ಕಳುಹಿದನು. ॥೫೬॥

ಆ ಬಾಣಗಳು ತಣ್ಣಗಿರುವ ಶುದ್ಧವಾಗಿರುವ ನೀರನ್ನು ಆಕೆಯ ಪಾದಗಳಿಗೆ ಚುಮುಕಿಸಿದವು. ಇನ್ನೊಂದು ಬಾಣವು ಆಕೆಯ ತಲೆಯ ಮೇಲೆ ಹೂಮಾಲೆಗಳ ಮಳೆಯನ್ನು ಕರೆಯಿತು! ॥೫೭॥

ಈ ಆಶ್ಚರ್ಯಕರವಾದ ಸಮಾಚಾರವನ್ನು ಕೇಳಿನೋಡಿ ಸಾರಥಿಯು ಕುಮಾರಿಯನ್ನು ಕುರಿತು "ಎಲೌ ಕುಮಾರಿಯೇ, ರಾಕ್ಷಸರಾಜನು ಬಾಣಬಿಟ್ಟಾಗ ನಡೆದ ಈ ಸಂಗತಿಯು ಅತ್ಯಂತ ಆಶ್ಚರ್ಯಕರವಾಗಿದೆಯಲ್ಲವೇ ?" ಎಂದು ಕೇಳಿದಳು. ॥೫೮॥

ಅವನು ಬಾಣಪ್ರಯೋಗ ಮಾಡಿದರೂ ನಿನ್ನ ತೇಜಸ್ಸಿನಿಂದಲೇ ಏನಾದರೂ ಹೀಗಾಗಿರುವುದೇ ? ಅಥವಾ ಯುದ್ಧಭೂಮಿಯಲ್ಲಿ ಅವನ ಉದ್ದೇಶದಿಂದಲೇ ಇದು

ಏತಸ್ಯ ಪೂಜನ ವಿಧಿಃ ಶರೈಃ ಕಿಮಿವ ತೇ ಭವೇತ್ ।
ಅಹಂ ಸಂಶಯಯುಕ್ತಾಽಸ್ಮಿ ತನ್ಮೇ ದೂರೀಕುರು ದ್ರುತಂ ॥೬೦॥

ಪೃಷ್ಟೈವಂ ಪ್ರಾಹ ಸಾ ಬಾಲಾ ಶೃಣು ಪ್ರೇಯಸಿ ಮದ್ವಚಃ ।
ಪುರಾ ಶ್ರುತಂ ಯಲ್ಲಲಿತಾ ಪ್ರೋಕ್ತಮತ್ಯಂತಗೂಹಿತಮ್ ॥೬೧॥

ಏಷ ಲಕ್ಷ್ಮ್ಯಾಃ ಮಹಾದೂತೋ ನಾಮ್ನಾ ಮಾಣಿಕ್ಯಶೇಖರಃ ।
ಶಾಪೇನ ದೈತ್ಯತಾಂ ಪ್ರಾಪ್ತ ಸ್ತ್ರಿಪುರಾ ಭಕ್ತಶೇಖರಃ ॥೬೨॥

ಏಷ ಯುದ್ಧೇ ವಿನಿಹತಃ ಶ್ರೀಪುರಂ ಪ್ರತಿಪತ್ಸ್ಯತಿ ।
ಮಾಂ ಮತ್ವಾ ಲಲಿತಾ ಪುತ್ರೀಂ ಪೂಜಯಾಮಾಸ ಸಾಯಕೈಃ ॥೬೩॥

ಹೀಗಾಗಿರುವುದೇ ? ಯುದ್ಧಭೂಮಿಯಲ್ಲಿ ನೀನಾದರೋ ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿಸುತ್ತಲೇ ಇರುವೆ ! ಇದು ಏನಾಗುವುದು ? ॥೫೯॥

ಇವನು ಬಾಣಗಳನ್ನು ಬಿಟ್ಟರೂ ನಿನಗೆ ಅದು ಹೇಗೆ ಪೂಜೆಯಾಗಿ ಪರಿಣಮಿಸಿತು ? ನಾನು ಈ ವಿಷಯದಲ್ಲಿ ಸಂಶಯವುಳ್ಳವಳಾಗಿದ್ದೇನೆ. ದಯವಿಟ್ಟು ನನ್ನ ಈ ಸಂಶಯವನ್ನು ಶೀಘ್ರವಾಗಿ ನಿವಾರಣೆಮಾಡು. ॥೬೦॥

ಸಾರಥಿಯು ಈ ರೀತಿಯಾಗಿ ಕೇಳಲು ಆ ಬಾಲಾದೇವಿಯು ಎಲೌ ಸ್ನೇಹಿತಳೇ, ನನ್ನ ಮಾತನ್ನು ಕೇಳು. ಹಿಂದೆ ಲಲಿತಾದೇವಿಯು ಹೇಳಿದ್ದ ಅತ್ಯಂತ ರಹಸ್ಯವಾದ ಈ ವಿಷಯವನ್ನು ನಿನಗೆ ಹೇಳುವೆನು. ॥೬೧॥

ಭಂಡರಾಕ್ಷಸನು ಲಕ್ಷ್ಮೀದೇವಿಯ ಶ್ರೇಷ್ಠದೂತನಾಗಿ ಮಾಣಿಕ್ಯಶೇಖರ ನೆಂಬ ಹೆಸರಿನಿಂದ ಪ್ರಕಾಶಿಸುತ್ತಿದ್ದು, ಪತಿವ್ರತಾಶಾಪದಿಂದ ರಾಕ್ಷಸಸ್ವರೂಪವನ್ನು ಹೊಂದಿದನು. ಆದರೂ ಇವನು ಈಗಲೂ ತ್ರಿಪುರಾದೇವಿಯ ಭಕ್ತಶ್ರೇಷ್ಠನೇ ಆಗಿದ್ದಾನೆ. ॥೬೨॥

ಇವನು ದೇವಿಯಿಂದ ಈಗ ಸಾವನ್ನು ಹೊಂದಿ ಶ್ರೀಪುರವನ್ನು ಹೊಂದುವನು. ನಾನು ಲಲಿತಾದೇವಿಯ ಮಗಳೆಂದು ತಿಳಿದು ಇವನು ನನ್ನನ್ನು ಬಾಣಗಳಿಂದಲೇ ಪೂಜಿಸಿದ್ದಾನೆ! ॥೬೩॥

ತಮೀಕ್ಷ್ವ ಮತ್ಪ್ರತಿಕೃತಿ ಮಿತ್ಯುಕ್ತ್ವಾ ಶರಮುತ್ಸೃಜತ್ ।
ಸ ಶರಃ ಪಂಚ ಶಾಖಾಽತ್ಮಾ ಪಸ್ಪರ್ಶ ತಸ್ಯ ಮೂರ್ಧನಿ ॥೬೪॥

ಕರಾಽಂಬುಜಂ ಮಸ್ತಕೇ ಸ್ವೇ ನ್ಯಸ್ತಂ ಮೇನೇ ಮಹಾಸುರಃ ।
ಪ್ರಸಾದಮಕರೋದ್ದೇವೀ ಚೇತಿ ಸಂಹೃಷಿತೋಽಭವತ್ ॥೬೫॥

ತದ್ದೃಷ್ಟ್ವಾ ವಿಸ್ಮಿತಾಽತ್ಯಂತಂ ಬಾಲಾಯಾ ರಥನಾಯಿಕಾ ।
ಅಥಾಽಭವನ್ಮಹಾಯುದ್ಧಂ ಕುಮಾರೀ ಭಂಡದೈತ್ಯಯೋಃ ॥೬೬॥

ಕೃತಪ್ರತಿಕೃತೋಪೇತಂ ಘೋರಂ ಭೀರುಭಯಾವಹಮ್ ।
ದ್ವಂದ್ವ ಭೂತಮನುಪಮಂ ದ್ವೈರಥ್ಯಂ ಶರವರ್ಷಣಂ ॥೬೭॥

ಆದ್ದರಿಂದ ನನ್ನ ಪ್ರತಿಫಲವಾಗಿ ಅವನ ಮೇಲೆ ಬೀಳುವ ಬಾಣವನ್ನು ನೋಡು ಎಂದು ಹೇಳಿ, ಒಂದು ಬಾಣವನ್ನು ಅವನ ಮೇಲೆ ಬಿಟ್ಟಳು. ಆ ಬಾಣವು ಐದು ಕವಲುಗಳಾಗಿ ಅವನ ತಲೆಯನ್ನು ಮುಟ್ಟಿತು. ॥೬೪॥

ಆಗ ಆ ಮಹಾರಾಕ್ಷಸನು ದೇವಿಯ ಕರಕಮಲವನ್ನೇ ತನ್ನ ತಲೆಯ ಮೇಲೆ ಇಟ್ಟಹಾಗೆ ಭಾವಿಸಿದನು. ಅಲ್ಲದೆ ಅವನು ದೇವಿಯು ತನಗೆ ಅನುಗ್ರಹ ಮಾಡಿದಳೆಂದು ಬಹಳ ಸಂತೋಷಗೊಂಡನು. ॥೬೫॥

ಕುಮಾರಿಯ ಸಾರಥಿಯು ಇದನ್ನು ನೋಡಿ ಅತ್ಯಂತ ಆಶ್ಚರ್ಯಗೊಂಡಳು. ಅನಂತರ ಕುಮಾರಿಗೂ ಮತ್ತು ಭಂಡರಾಕ್ಷಸನಿಗೂ ದೊಡ್ಡ ಯುದ್ಧವೇ ಆಯಿತು. ॥೬೬॥

ಈ ಭಯಂಕರ ಯುದ್ಧದಲ್ಲಿ ಒಬ್ಬರು ಮಾಡಿದ್ದಕ್ಕೆ ಪ್ರತಿಯಾಗಿ ಎದುರಾಳಿಯ ಬಾಣಪ್ರಯೋಗವೂ ನಡೆಯುತ್ತಿತ್ತು. ಇದು ಘೋರವಾಗಿದ್ದು ಅಂಜುಬುರುಕರಿಗೆ ಭಯವನ್ನುಂಟುಮಾಡುತ್ತಿತ್ತು. ಈ ದ್ವಂದ್ವಯುದ್ಧವು ಹೋಲಿಕೆಯೇ ಇಲ್ಲದುದಾಗಿಯೂ, ಎರಡು ರಥಗಳಲ್ಲಿ ಕುಳಿತು ಇಬ್ಬರೂ ನಡೆಸಿದುದಾಗಿಯೂ, ಅನ್ಯೋನ್ಯವಾಗಿ ಬಾಣಗಳ ಸುರಿಮಳೆಯುಳ್ಳದ್ದಾಗಿಯೂ ಇತ್ತು! ॥೬೭॥

ಭಂಡಾಸುರೋಽಪಿ ಭಕ್ತ್ಯೈವಾಽದ್ಭುತ್ಯೈಃ ಸ್ವೀಯ ಪರಾಕ್ರಮೈಃ ।
ದೇವೀಂ ಸಂತೋಷಯಾಮೀತಿ ಯುಯೋಧ ಬಲವತ್ತರಂ ॥೬೮॥

ವಿಕಿರಂತೌ ಶಸ್ತ್ರಗಣಾನ್ ಮರ್ಮ ಪ್ರಹರಣೋದ್ಯಮೌ ।
ಜ್ಞಾತ್ವಾಽನ್ಯೋಽನ್ಯಂ ಶಸ್ತ್ರಯೋಗ ಲಾಘವಂ ಶ್ಲಾಘನಾಪರೌ ॥೬೯॥

ಸಾಧು ಶೂರ ರಣಶ್ಲಾಘ್ಯ ಸಾಧು ದೇವಿ ಮಹಾಬಲೇ ।
ಇತ್ಯೇವಂ ಯುಧ್ಯತೋಸ್ತತ್ರ ಕುಮಾರೀ ಭಂಡದೈತ್ಯಯೋಃ ॥೭೦॥

ಪ್ರಾವರ್ತಂತ ಮಹಾಸ್ತ್ರಾಣಿ ಲೋಕಮೋಹ ಕರಾಣಿ ವೈ ।
ಕುಲಿಶಾಽಸ್ತ್ರಂ ಪಾರ್ವತಸ್ಯ ನಾಗಾಽಸ್ತ್ರಸ್ಯ ಚ ಗಾರುಡಂ ॥೭೧॥

ಭಂಡರಾಕ್ಷಸನೂ ಕೂಡ ಭಕ್ತಿಯಿಂದಲೇ ದೇವಿಯನ್ನು ಸಂತೋಷ ಪಡಿಸುವೆನೆಂದು ಭಾವಿಸಿ, ತನ್ನ ಆಶ್ಚರ್ಯಕರವಾದ ಪರಾಕ್ರಮದಿಂದ ಬಹಳ ಘೋರವಾದ ಯುದ್ಧವನ್ನು ಮಾಡಿದನು. ॥೬೮॥

ಕುಮಾರೀ ಮತ್ತು ಭಂಡರಾಕ್ಷಸ ಇವರಿಬ್ಬರೂ ಮರ್ಮಸ್ಥಾನಗಳಿಗೆ ಪರಸ್ಪರವಾಗಿ ಹೊಡೆಯುತ್ತಾ, ಶಸ್ತ್ರವನ್ನು ಪ್ರಯೋಗಿಸುವುದರಲ್ಲಿ ಕೈಚಳಕವನ್ನು ತೋರಿಸುತ್ತಾ, ಪರಸ್ಪರ ಶ್ಲಾಘನೆಗಳನ್ನೂ ಮಾಡುತ್ತಾ, ಆಶ್ಚರ್ಯಕರವಾದ ರೀತಿಯಲ್ಲಿ ಯುದ್ಧವನ್ನು ಮಾಡಿದರು. ॥೬೯॥

ಭಲೆ ಯುದ್ಧದಲ್ಲಿ ನಿಪುಣ, ಚೆನ್ನಾಗಿ ಯುದ್ಧಮಾಡುತ್ತಿದ್ದೀಯೇ! ಮಹಾಪರಾಕ್ರಮಶಾಲಿಯಾದ ದೇವಿಯೇ, ನಿನ್ನ ಬಾಣಪ್ರಯೋಗವು ಪ್ರಶಂಸೆಗೆ ಅರ್ಹವಾಗಿದೆ! ಎಂದು ಮುಂತಾಗಿ ಪರಸ್ಪರ ಹೇಳಿಕೊಳ್ಳುತ್ತಾ ಕುಮಾರೀ ಮತ್ತು ಭಂಡರಾಕ್ಷಸರು ಯುದ್ಧಮಾಡುತ್ತಿದ್ದರು. ॥೭೦॥

ಅವರಿಬ್ಬರೂ ಲೋಕಕ್ಕೆ ಮೋಹವನ್ನುಂಟುಮಾಡುವ ದೊಡ್ಡ ದೊಡ್ಡ ಅಸ್ತ್ರಗಳನ್ನೇ ಪ್ರಯೋಗಿಸಿದರು. ಅವರು ಪಾರ್ವತಾಸ್ತ್ರಕ್ಕೆ ಪ್ರತಿಯಾಗಿ ಕುಲಿಶಾಸ್ತ್ರವನ್ನೂ, ನಾಗಾಸ್ತ್ರಕ್ಕೆ ಪ್ರತಿಯಾಗಿ ಗಾರುಡಾಸ್ತ್ರವನ್ನೂ, ಪ್ರಯೋಗಿಸಿದರು. ॥೭೧॥

ಆಗ್ನೇಯಸ್ಯ ಚ ಪಾರ್ಜನ್ಯಂ ತಸ್ಯ ಮಾರುತ ನಾಮಕಂ ।
ತಸ್ಯ ಸಾರ್ಪಂ ತಸ್ಯ ಪುನರ್ನಾಕುಲಂ ತಸ್ಯ ಚೈವಹಿ ॥೭೨॥

ಬೈಡಾಲಂ ಕುಕ್ಕುರಂ ತದ್ವದ್ವಕಂ ವೈಯಾಘ್ರಮೇವ ಚ ।
ಮಹಾವ್ಯಾಘ್ರಂ ಮೃಗೇಂದ್ರಂ ಚ ತಸ್ಯ ಶಾರಭಮುಸ್ತ್ರಕಂ ॥೭೩॥

ಗಂಡಭೇರುಂಡಮಿತ್ಯೇವಂ ತಥಾ ಯಾಮ್ಯಂ ಚ ವಾರುಣಂ ।
ಕೌಬೇರಂ ನೈರ್ಋತಂ ಚೈಂದ್ರಂ ರೌದ್ರಂ ಮೋಹನ ಮೇವಚ॥೭೪॥

ಪೈನಾಕಂ ವೈಷ್ಣವಂ ಬ್ರಾಹ್ಮಮೇವ ಮುಸ್ತ್ರೈಸ್ತು ಸಂಕುಲಂ ।
ಯುದ್ಧಮಾಸೀನ್ಮಹಾಘೋರಂ ಕುಮಾರೀ ಭಂಡದೈತ್ಯಯೋಃ॥೭೫॥

ಆಗ್ನೇಯಾಸ್ತ್ರಕ್ಕೆ ಪ್ರತಿಯಾಗಿ ಪಾರ್ಜನ್ಯಾಸ್ತ್ರವನ್ನೂ, ಪಾರ್ಜನ್ಯಾಸ್ತ್ರಕ್ಕೆ ಎದುರಾಗಿ ನಾಗಾಸ್ತ್ರವನ್ನೂ, ನಾಗಾಸ್ತ್ರಕ್ಕೆ ಪ್ರತಿಯಾಗಿ ನಾಕುಲಾಸ್ತ್ರವನ್ನೂ ಅವರಿಬ್ಬರೂ ಪ್ರಯೋಗಿಸುತ್ತಿದ್ದರು. ||೭೨||

ನಾಕುಲಾಸ್ತ್ರಕ್ಕೆ ಎದುರಾಗಿ ಬೈಡಾಲಾಸ್ತ್ರವನ್ನೂ, ಬೈಡಾಲಾಸ್ತ್ರಕ್ಕೆ ಪ್ರತಿಯಾಗಿ ಕುಕ್ಕುರಾಸ್ತ್ರವನ್ನೂ, ಕುಕ್ಕುರಾಸ್ತ್ರಕ್ಕೆ ಎದುರಾಗಿ ಶಾರಭಾಸ್ತ್ರವನ್ನೂ, ಅವರಿಬ್ಬರೂ ಪ್ರಯೋಗಿಸುತ್ತಿದ್ದರು. ||೭೩||

ಮಹಾವ್ಯಾಘ್ರಾಸ್ತ್ರಕ್ಕೆ ಪ್ರತಿಯಾಗಿ ತಪ್ಪದೆ ಮೃಗೇಂದ್ರಾಸ್ತ್ರವನ್ನೂ, ಮತ್ತು ಮೃಗೇಂದ್ರಾಸ್ತ್ರಕ್ಕೆ ಎದುರಾಗಿ ಶಾರಭಾಸ್ತ್ರವನ್ನೂ, ಶಾರಭಾಸ್ತ್ರಕ್ಕೆ ಪ್ರತಿಯಾಗಿ ಗಂಡಭೇರುಂಡಾಸ್ತ್ರವನ್ನೂ ಅವರು ಪ್ರಯೋಗಿಸುತ್ತಿದ್ದರು. ಅಲ್ಲದೆ ಅವರಿಬ್ಬರೂ, ಕುಬೇರ, ನೈರ್ಋತ, ಇಂದ್ರ, ರೌದ್ರ, ಮೋಹನ ಮುಂತಾದ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರು. ||೭೪||

ಅಲ್ಲದೆ ಈ ಯುದ್ಧದಲ್ಲಿ ಪೈನಾಕ, ವೈಷ್ಣವ, ಬ್ರಾಹ್ಮ, ಮೊದಲಾದ ಶ್ರೇಷ್ಠ ಅಸ್ತ್ರಗಳ ಪ್ರಯೋಗವೂ ಸಂಭವಿಸಿತು. ಈ ರೀತಿಯಲ್ಲಿ ಕುಮಾರೀ ಮತ್ತು ಭಂಡರಾಕ್ಷಸ ಇವರಿಬ್ಬರಿಗೂ ಬಹಳ ಭಯಂಕರವಾದ ಯುದ್ಧವು ನಡೆಯಿತು. ||೭೫||

ತತ್ರ ದೈತ್ಯಾಃ ಶಕ್ತಯಶ್ಚ ಸಹಾಯಾರ್ಥಂ ಸಮಾಗತಾಃ ।
ಪ್ರೇಕ್ಷಾಂ ಚಕ್ರುರ್ವಿಚಿತ್ರೇಣ ಯುದ್ಧೇನಾತ್ಯಂತವಿಸ್ಮಿತಾಃ ॥೭೬॥

ಏವಂ ಪ್ರವೃತ್ತೇ ಸಮರೇ ಬಾಲಾಯಾ ಲಾಘವಾತ್ತು ಸಃ ।
ಹೀಯಮಾನಃ ಸಮಭವದ್ಭಂಡ ದೈತ್ಯೋ ಯದಾ ತದಾ ॥೭೭॥

ವಿಷಂಗಶ್ಚ ವಿಶುಕ್ರಶ್ಚ ಕುಟಿಲಾಕ್ಷಶ್ಚ ಭೂಪತಿಃ ।
ಸಂವೃತ್ತಾ ದೈತ್ಯಸೇನಾಭಿಃ ಪರಿವಾರ್ಯ ಕುಮಾರಿಕಾಂ ॥೭೮॥

ಯುಯುಧುಃ ಶಸ್ತ್ರಸಂಘಾತೈರ್ವಮದ್ಭಿರ್ವಹ್ನಿಮುಲ್ಬಣಮ್ ।
ಬಾಲಾಽಪಿ ತಾನ್ ಲೀಲಯೈವ ಯೋಧಯಾಮಾಸ ಸರ್ವತಃ ॥೭೯॥

ಈ ಯುದ್ಧದಲ್ಲಿ ರಾಕ್ಷಸರೂ ಮತ್ತು ಶಕ್ತಿಗಳೂ, ಭಂಡರಾಕ್ಷಸನ ಮತ್ತು ಕುಮಾರೀದೇವಿಯ ಕಡೆಯಲ್ಲಿ ಕ್ರಮವಾಗಿ ಸಹಾಯಮಾಡುವುದಕ್ಕಾಗಿ ಬಂದಿದ್ದರು. ಆದರೂ ಅವರು ಅತ್ಯಾಶ್ಚರ್ಯಕರವಾದ ಇವರ ಯುದ್ಧವನ್ನು ನೋಡಿ ಬಹಳ ಆಶ್ಚರ್ಯಪಡುತ್ತಾ ಕುತೂಹಲದಿಂದ ನೋಡುತ್ತಿದ್ದರು. ॥೭೬॥

ಈ ರೀತಿಯಲ್ಲಿ ಯುದ್ಧವು ಸಂಭವಿಸಿರಲು ಕುಮಾರಿಯ ಕೈಚಳಕದಿಂದ ಶಸ್ತ್ರಗಳ ಪೆಟ್ಟಿಗೆ ಸಿಕ್ಕಿ ಭಂಡರಾಕ್ಷಸನು ಕಳೆಗುಂದುತ್ತಿದ್ದುದನ್ನು ಅವನ ಕಡೆಯವರು ನೋಡಿದರು. ॥೭೭॥

ಆಗ ವಿಷಂಗ, ವಿಶುಕ್ರ, ಕುಟಿಲಾಕ್ಷ ಮುಂತಾದ ರಾಕ್ಷಸಶ್ರೇಷ್ಠರೆಲ್ಲರೂ ತಮ್ಮ ತಮ್ಮ ರಾಕ್ಷಸಸೈನ್ಯಗಳಿಂದ ಕುಮಾರಿಯನ್ನು ಸುತ್ತುಗಟ್ಟಿ ಯುದ್ಧಮಾಡಲು ಪ್ರಾರಂಭಿಸಿದರು. ॥೭೮॥

ಮೇಲೆ ಹೇಳಿದ ರಾಕ್ಷಸರೆಲ್ಲರೂ ಬಹಳ ಬಿರುಸಾಗಿ ಬೆಂಕಿಯನ್ನು ಕಾರುತ್ತಿದ್ದ ಶಸ್ತ್ರಗಳ ಸಮೂಹಗಳನ್ನು ಕುಮಾರಿಯ ಮೇಲೆ ಪ್ರಯೋಗಿಸುತ್ತಾ ಯುದ್ಧ ಮಾಡಿದರು. ಕುಮಾರಿಯೂ ಕೂಡ ಅನಾಯಾಸವಾಗಿಯೇ ಅವರೊಂದಿಗೆ ಎಲ್ಲಾ ಕಡೆಯಲ್ಲಿಯೂ ಯುದ್ಧಮಾಡಿದಳು. ॥೭೯॥

ಏವಂ ವಿಧೇ ಮಹಾಯುದ್ಧೇ ಪ್ರವೃತ್ತೇ ಬಾಲಯಾ ಸಹ ।
ಸಂಪ್ರಾಪ್ತಾ ದಂಡಸಾಮ್ರಾಜ್ಞೀ ಜಿತ್ವಾ ದೈತ್ಯ ಮಹಾಚಮೂಮ್ ॥೬೦॥

ಭಿತ್ವಾ ಸೇನಾ ಮಹಾದ್ರಿಂ ತಂ ದೈತ್ಯಾನಾಮತಿ ವಿಸ್ತೃತಂ ।
ಮುಸಲಾತ್ಮ ಮಹಾವಜ್ರಾಽಽಯುಧೇನ ಕ್ರೂರವಿಕ್ರಮಾ ॥೬೧॥

ಆಸಸಾದ ಮಹಾಯುದ್ಧೇ ಬಾಲಾಂ ಯುದ್ಧರಸೋತ್ಸುಕಾಮ್ ।
ಯುಧ್ಯಂತೀ ಮೇಕಲಾಂ ದೈತ್ಯೈಃ ಪಶ್ಯಂತೀ ವಿಸ್ಮಿತಾ ತದಾ ॥೬೨॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಬಾಲಾಪರಾಕ್ರಮೋ ಚತುಷ್ಷಷ್ಟಿತಮೋಽಧ್ಯಾಯಃ

ಈರೀತಿಯಾಗಿ ರಾಕ್ಷಸರಿಗೂ ಮತ್ತು ಕುಮಾರಿಗೂ ಭಯಂಕರವಾದ ದೊಡ್ಡ ಯುದ್ಧವು ಸಂಭವಿಸಿರಲು ಬೇರೊಂದು ಕಡೆ ರಾಕ್ಷಸರ ದೊಡ್ಡ ಸೈನ್ಯವನ್ನು ಜಯಿಸಿ ದಂಡನಾಯಕಿಯು ಅಲ್ಲಿಗೆ ಬಂದಳು. ॥೬೦॥

ದಂಡನಾಯಕಿಯು ಬೇರೊಂದು ಕಡೆ ರಾಕ್ಷಸ ಸೈನ್ಯವೆಂಬ ಬಹಳ ವಿಸ್ತಾರವಾದ ದೊಡ್ಡ ಪರ್ವತವನ್ನು ಭೇದಿಸಿ, ಬಹಳ ಕಠಿನವಾದ ಪರಾಕ್ರಮವನ್ನು ತನ್ನ ದೊಡ್ಡ ದಂಡವೆಂಬ ಮಹಾ ವಜ್ರಾಯುಧವನ್ನು ಪ್ರಯೋಗಿಸುವುದರ ಮೂಲಕ ತೋರಿಸಿದ್ದಳು. ॥೬೧॥

ಅನಂತರ ದಂಡನಾಯಕಿಯು ಬಂದು ಯುದ್ಧದಲ್ಲಿ ಬಹಳ ಪ್ರೀತಿಯನ್ನೂ ಮತ್ತು ಉತ್ಸಾಹವನ್ನೂ ತೋರಿಸುತ್ತಿದ್ದ ಮತ್ತು ಒಂಟಿಯಾಗಿಯೇ ರಾಕ್ಷಸರೊಂದಿಗೆ ಯುದ್ಧಮಾಡುತ್ತಿದ್ದ ಕುಮಾರಿಯನ್ನು ನೋಡಿ ಅತ್ಯಂತ ಆಶ್ಚರ್ಯವನ್ನು ಹೊಂದಿದಳು. ॥೬೨॥

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕುಮಾರಿಯ ಪರಾಕ್ರಮವನ್ನು ವರ್ಣಿಸಿರುವ ಅರವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಪಂಚಷಷ್ಟಿತಮೋಽಧ್ಯಾಯಃ ||

ಅರವತ್ತೈದನೆಯ ಅಧ್ಯಾಯವು

ಅಥ ಭಂಡಸ್ಯ ಸಾ ಸೇನಾ ಕೋಲವಕ್ತ್ರಾ ಪರಾಕ್ರಮಾತ್ ।
ವಿಶೀರ್ಣಾ ಪರ್ವತ ಇವ ದೇವೇಂದ್ರಾಽಽಯುಧಗೌರವಾತ್ ॥೧॥

ಸೇನಾಯಾಂ ದೈತ್ಯರಾಜಸ್ಯ ವಾರಾಹೀ ಮುಸಲಾಽಽಹತೇಃ ।
ವಿಶೀರ್ಣಾಯಾಮುಪಶ್ಯತ್ಸಾ ಬಾಲಾಂ ದೈತ್ಯೈಃ ಸುಸಂಗತಾಂ ॥೨॥

ಏಕಲಾಂ ಯೋಧಯಂತೀಂ ತಾನ್ ಮಹಾದೈತ್ಯಾನ್ ಸಮಂತತಃ ।
ಸಮರೋತ್ಸುಕಿತಾಂ ಭೂಯೋ ದೃಷ್ಟ್ವಾ ವಿಸ್ಮಯಮಾಗಮತ್ ॥೩॥

ವರಾಹದಂತೆ ಮುಖವುಳ್ಳ ದಂಡನಾಯಕಿಯು ತೋರಿಸಿದ ಪರಾಕ್ರಮ ದಿಂದ, ದೇವೇಂದ್ರನ ವಜ್ರಾಯುಧದ ಪೆಟ್ಟಿನಿಂದ ಪರ್ವತವು ಹೇಗೋ ಹಾಗೆ, ರಾಕ್ಷಸಸೈನ್ಯವು ಛಿನ್ನಭಿನ್ನವಾಯಿತು. ||೧||

ಕುಮಾರಿಯಾದ ವಾರಾಹೀ ದೇವಿಯು ಮುಸಲ ಅಥವಾ ಮಹಾದಂಡವೆಂಬ ಆಯುಧಗಳ ಪೆಟ್ಟಿಗೆ ಸಿಕ್ಕಿದ ರಾಕ್ಷಸರಾಜನ ಸೈನ್ಯವು ಛಿನ್ನಭಿನ್ನವಾಗುತ್ತಿದ್ದುದನ್ನೂ ಮತ್ತು ಕುಮಾರಿಯು ರಾಕ್ಷಸಶ್ರೇಷ್ಠರೊಂದಿಗೆ ಅತಿಶಯವಾಗಿ ಯುದ್ಧಮಾಡು ತ್ತಿದ್ದುದನ್ನೂ ದಂಡನಾಯಕಿಯು ನೋಡಿದಳು. ||೨||

ದಂಡನಾಥಾದೇವಿಯು ಕುಮಾರಿಯು ಒಬ್ಬಂಟಿಗಳಾಗಿಯೇ ಆ ಮಹಾ ರಾಕ್ಷಸರೊಂದಿಗೆ ಎಲ್ಲಾ ಕಡೆಯಲ್ಲಿಯೂ ಯುದ್ಧಮಾಡುತ್ತಿದ್ದುದನ್ನೂ, ಪುನಃ ಪುನಃ ಯುದ್ಧದಲ್ಲಿ ಅವಳು ತೋರಿಸುತ್ತಿದ್ದ ಉತ್ಸಾಹವನ್ನೂ ನೋಡಿ ಅತ್ಯಂತ ಆಶ್ಚರ್ಯ ವನ್ನು ಹೊಂದಿದಳು. ||೩||

ಅಥ ತಾಂ ಪ್ರಾಹ ಕೋಲಾಽಸ್ಯಾ ಸಮಾಸಾದ್ಯ ವಿಶೃಣ್ವತಾಂ।
ಅಲಂ ಬಾಲೇ ಸಾಹಸೇನ ಯುದ್ಧೇನ ವಿಷಮೇಣ ತೇ ॥೪॥

ನೈತದನ್ಯತ್ರ ಪಶ್ಯಾಮಿ ಸಾಹಸಂ ಯುಕ್ತಮೇಕಲಾ।
ದೈತ್ಯಾನ್ಮಹಾಬಲಾನ್ ಭೀಮಾನ್ ಸಂಯುಗೇ ಜಿತವತ್ಯಸಿ ॥೫॥

ತ್ವಾಂ ನಿಶಮ್ಯೈಕಲಾಂ ದೈತ್ಯೈರ್ಯುಧ್ಯಮಾನಾಂ ಮಹೇಶ್ವರೀಂ।
ಶ್ರೀದೇವೀ ವತ್ಸಲಾ ನೂನಂ ಭವೇದ್ವ್ಯಾಕುಲಿತಾಽಂತರಾ ॥೬॥

ಇಮಂ ಕ್ಷಣಂ ಮಹಾರಾಜ್ಞೀಂ ದ್ರಷ್ಟುಮರ್ಹಸಿ ಯಾಹಿ ತತ್।
ಇತ್ಯುಕ್ತ್ವಾಽಽಜ್ಞಾಪಯಚ್ಛಕ್ತಿಮಶ್ವಸೇನಾಽಧಿನಾಯಿಕಾಂ ॥೭॥

ಅಶ್ವಾರೂಢೇ ಪ್ರಯಾಹ್ಯೇನಾಂ ಸಮಾದಾಯಾತಿಸತ್ವರಾ।
ಮಹಾರಾಜ್ಞ್ಯೈ ನಿವೇದ್ಯೈನಾಮಾಗಚ್ಛ ತ್ವರಿತಂ ಪುನಃ ॥೮॥

ಅನಂತರ ವರಾಹದಂತೆ ಮುಖವುಳ್ಳ ದಂಡನಾಯಕಿಯು ಬಂದು ಎಲ್ಲರೂ ಕೇಳುತ್ತಿರಲು ಅವರ ಮುಂದೆ ಕುಮಾರಿಯನ್ನು ಕುರಿತು, ಎಲೌ ಕುಮಾರಿಯೇ, ವಿರುದ್ಧವಾದ ಈ ಯುದ್ಧಸಾಹಸವನ್ನು ನೀನು ಸಾಕುಮಾಡು! ಎಂದಳು. ॥೪॥

ನೀನು ಒಬ್ಬಂಟಿಗಳಾಗಿಯೇ ಮಹಾ ಬಲಿಷ್ಠರೂ ಭಯಂಕರರೂ ಆದ ರಾಕ್ಷಸರನ್ನು ಯುದ್ಧದಲ್ಲಿ ಜಯಿಸಿದ್ದೀಯೆ! ಕುಮಾರಿಯಾದರೂ ನಿನ್ನ ಈ ಸಾಹಸವನ್ನು ನಾನು ಮತ್ತೆಲ್ಲಿಯೂ ಕಾಣಲಾರೆನು! ॥೫॥

ಆದರೆ ನೀನು ಒಂಟಿಯಾಗಿಯೇ ರಾಕ್ಷಸರೊಂದಿಗೆ ಯುದ್ಧಮಾಡುತ್ತಿರುವುದನ್ನು ನಿನ್ನಲ್ಲಿ ಬಹಳ ಪ್ರೀತಿಯುಳ್ಳ ನಿನ್ನ ಮಾತೆಯಾದ ದೇವಿಯು ನೋಡಿ ಬಹಳ ಕಳವಳಗೊಳ್ಳಬಹುದು. ॥೬॥

ಆದ್ದರಿಂದ ಈ ಕ್ಷಣದಲ್ಲೇ ಮಹಾರಾಣಿಯಾದ ದೇವಿಯನ್ನು ನೀನು ನೋಡಲು ಹೋಗುವುದು ಉಚಿತವಾಗಿದೆ. ದಂಡನಾಯಕಿಯು ಈರೀತಿಯಲ್ಲಿ ಹೇಳಿ ಕುದುರೆಯಸೈನ್ಯಕ್ಕೆ ಅಧೀಶ್ವರಿಯಾದ ಶಕ್ತಿಗೆ ಹೀಗೆ ಅಪ್ಪಣೆಮಾಡಿದಳು. ॥೭॥

ಎಲೌ ಕುದುರೆಯನ್ನೇರಿರುವ ಸೈನ್ಯದ ನಾಯಕಿಯೇ, ಈ ಕುಮಾರಿಯನ್ನು ಕರೆದುಕೊಂಡು ಬಹಳ ಜಾಗ್ರತೆಯಾಗಿ ದೇವಿಯ ಬಳಿಗೆ ಹೋಗು. ಇವಳನ್ನು ಆಕೆಗೆ ವಿಜ್ಞಾಪಿಸಿ ಶೀಘ್ರವಾಗಿ ಹಿಂತಿರುಗಿ ಬಾ. ॥೮॥

ಅಶ್ವಾರೂಢೈವಮಾಜ್ಞಪ್ತಾ ಸಮರಾದನಿವರ್ತಿನೀಮ್ ।
ಬಾಲಾಯಾ ರಥ ಆವಿಶ್ಯ ನ್ಯವರ್ತಯತ ತಂ ರಥಮ್ ॥೯॥

ಅಥಾಗತ್ಯ ಮಹಾರಾಜ್ಞ್ಯೈ ಬಾಲಾಂ ತಾಂ ವಿನಿವೇದಯತ್ ।
ಮಾತರೇಷಾ ಯುದ್ಧ ಭುವೋ ಬಲಾತ್ಕಾರಾನ್ನಿವರ್ತಿತಾ ॥೧೦॥

ಅತಿಸಾಹಸ ಚಾರಿತ್ರಾಽದ್ಭುತವೀರ್ಯ ಪರಾಕ್ರಮಾ ।
ತ್ವದಾಜ್ಞಯಾ ಯಾವದೇನಾಂ ವಯಂ ಯುದ್ಧಾನ್ನಿವರ್ತಿತುಂ ॥೧೧॥

ಪ್ರಯಾತಾಸ್ತಾವ ದೇಷಾ ತು ದೈತ್ಯಸೇನಾ ಮಹಾರ್ಣವಮ್ ।
ಪ್ರವಿಷ್ಟಾ ತತ್ರ ದೈತ್ಯಾನಾಂ ಕೋಟಯೋ ಬಲವತ್ತರಾಃ ॥೧೨॥

ನಿಪಾತಿತಾ ಮಹಾಯುದ್ಧೇ ಭಂಡದೈತ್ಯಾ ವರೋದ್ಭವೌ ।
ನಿರ್ಜಿತೌ ಭೀಮಚಾರಿತ್ರೌ ತೌ ವಿಷಂಗ ವಿಶುಕ್ರಕೌ ॥೧೩॥

ದಂಡನಾಯಕಿಯು ಈರೀತಿಯಲ್ಲಿ ಅಶ್ವಾರೂಢಾ ಎಂಬ ಶಕ್ತಿಗೆ ಅಪ್ಪಣೆ ಮಾಡಲು, ಅವಳು ಕುಮಾರಿಯು ಯುದ್ಧದಿಂದ ಹಿಂತಿರುಗಲು ಇಷ್ಟಪಡದಿದ್ದರೂ ಬಲಾತ್ಕಾರವಾಗಿ ರಥದಲ್ಲಿ ಪ್ರವೇಶಿಸಿ ಆ ರಥವನ್ನು ಹಿಂತಿರುಗಿಸಿದಳು. ॥೯॥

ಅನಂತರ ಅಶ್ವಾರೂಢೆಯು ಬಂದು ಮಹಾರಾಣಿಯಾದ ದೇವಿಗೆ ಕುಮಾರಿಯನ್ನೊಪ್ಪಿಸಿದಳು. ಓ ತಾಯಿಯೇ, ಯುದ್ಧಭೂಮಿಯಿಂದ ಇವಳನ್ನು ಬಲಾತ್ಕಾರವಾಗಿ ಹಿಂತಿರುಗಿಸಿದ್ದೇನೆ! ಎಂದಳು. ॥೧೦॥

ಅತ್ಯಂತ ಸಾಹಸ ಕಾರ್ಯಗಳನ್ನು ಮಾಡುವ ಆಶ್ಚರ್ಯಕರವಾದ ವೀರ್ಯ ಮತ್ತು ಪರಾಕ್ರಮಗಳುಳ್ಳ ಇವಳನ್ನು ನಿಮ್ಮ ಅಪ್ಪಣೆಯಂತೆ ಹಿಂತಿರುಗಿಸಲು ನಾವು ಹೋಗಿದ್ದೆವು. ॥೧೧॥

ನಾವು ಅಲ್ಲಿಗೆ ಹೋಗುವಷ್ಟರಲ್ಲೇ ಇವಳು ರಾಕ್ಷಸ ಸೈನ್ಯವೆಂಬ ದೊಡ್ಡ ಸಾಗರವನ್ನು ಪ್ರವೇಶಿಸಿದ್ದಳು. ಅಲ್ಲದೆ ಇವಳು ಕೋಟ್ಯಾಂತರ ಅತ್ಯಂತ ಬಲಿಷ್ಠರಾದ ರಾಕ್ಷಸರನ್ನು ನಾಶಮಾಡಿದ್ದಳು. ॥೧೨॥

ಅಲ್ಲದೆ ಇವಳು ಭಂಡರಾಕ್ಷಸನ ತಮ್ಮಂದಿರೂ ಬಹಳ ಭಯಂಕರವಾದ ನಡವಳಿಕೆಯುಳ್ಳವರೂ ಆದ ವಿಶುಕ್ರ, ವಿಷಂಗ ಎಂಬ ರಾಕ್ಷಸರನ್ನೂ ಜಯಿಸಿದ್ದಳು. ॥೧೩॥

ತತೋ ಭಂಡಂ ಸಮಾದಾಯ ಜಿತಲೋಕೇಶ್ವರಾಸುರಮ್ ।
ಯುಧ್ವಾ ತೇನಾಪಿ ಸುಚಿರಂ ಜಿತಮಾಯಂ ಚಕಾರ ವೈ ॥೧೪॥

ಕಥಂ ಚಿಜ್ಜೇಷಾ ವಾರಾಹ್ಯಾ ವಿಕ್ರಮ್ಯಾಽಽಸಾದಿತಾ ಭವೇತ್ ।
ಇತ್ಯುಕ್ತ್ವಾ ನಿರ್ಯಯೌ ಸಾಽಪಿ ಯುದ್ಧಾಯ ತುರಗಾಶ್ರಯಾ ॥೧೫॥

ಅಥ ಬಾಲಾಂ ಮಹಾರಾಜ್ಞೀ ಸ್ವಾಂಕಮಾನೀಯ ಸತ್ವರಮ್ ।
ಪರಿಷ್ವಜ್ಯಾತಿವಾತ್ಸಲ್ಯಾನ್ಮೂರ್ಧ್ನ್ಯಾಜಿಘ್ರದಂಬಿಕಾ ॥೧೬॥

ವತ್ಸೇ ನೈವಂ ಪುನಃ ಕಾರ್ಯಂ ಕ್ವಚಿತ್ಸಾಹಸಮಾತ್ರಯಾ ।
ಅನುಕ್ತ್ವೈವ ಗತಾ ಯುದ್ಧೇ ನೈತದೌಪಯಿಕಂ ತವ ॥೧೭॥

ಅಥ ಪ್ರಾಹ ಕುಮಾರೀ ಸಾ ಲಲಿತಾಂ ಮಾತರಂ ಪ್ರತಿ ।
ಏಷಾಽರುಣಿತನೇತ್ರಾಂತಾ ನಿಶ್ವಸಂತೀ ಪುನಃ ಪುನಃ ॥೧೮॥

ಅನಂತರ ಎಲ್ಲಾ ಲೋಕಗಳನ್ನೂ ಜಯಿಸಿ ಅಧಿಪತಿಯಾದ ಭಂಡರಾಕ್ಷಸನನ್ನೂ ಕಂಡು ಹಿಡಿದುಕೊಂಡು ಬಂದು ಅವನೊಂದಿಗೂ ಕುಮಾರಿಯು ಬಹಳ ಕಾಲ ಯುದ್ಧಮಾಡಿ ಅವನ ಮಾಯಾಶೌರ್ಯವನ್ನು ಹಾಳುಮಾಡುತ್ತಿದ್ದಳು. ॥೧೪॥

ಆದರೂ ವಾರಾಹಿಯಾದ ದಂಡನಾಯಕಿಯು ಇವಳನ್ನು ಸಮೀಪಿಸಿ ಹೇಗೋ ತಡೆದಳು. ಎಂದು ವಿಜ್ಞಾಪನೆ ಮಾಡಿ, ಅಶ್ವಾರೂಢೆಯೂ ಕೂಡ ತನ್ನ ಕುದುರೆಯನ್ನು ಹತ್ತಿ ಯುದ್ಧಕ್ಕೆ ಹೊರಟುಹೋದಳು. ॥೧೫॥

ಅನಂತರ ಮಹಾರಾಣಿಯಾದ ದೇವಿಯು ಕುಮಾರಿಯನ್ನು ತನ್ನ ತೊಡೆಯ ಮೇಲಕ್ಕೆ ಶೀಘ್ರವಾಗಿ ಎತ್ತಿ ತೆಗೆದುಕೊಂಡು ಅವಳನ್ನು ಆಲಂಗಿಸಿಕೊಂಡು ಬಹಳ ಪ್ರೀತಿಯಿಂದ ಅವಳ ತಲೆಯನ್ನು ಮೂಸಿದಳು. ॥೧೬॥

ಎಲೌ ಮಗಳೇ, ಕೇವಲ ಸಾಹಸವಾದ ಇಂಥಾ ಕಾರ್ಯಗಳನ್ನು ಇನ್ನೆಂದಿಗೂ ಮತ್ತೆ ಮಾಡಬೇಡ. ನನಗೆ ಹೇಳದೇ ನೀನು ಯುದ್ಧಕ್ಕೆ ಹೋದದ್ದು ನಿನಗೆ ಯೋಗ್ಯವಾದುದಲ್ಲ. ॥೧೭॥

ಅನಂತರ ಕೆಂಪಗಿರುವ ಕಣ್ಣುಗಳ ಅಂಚುಗಳುಳ್ಳ ಕುಮಾರಿಯು ಪುನಃ ಪುನಃ ನಿಟ್ಟುಸಿರನ್ನು ಬಿಡುತ್ತಾ ಲಲಿತಾಮಾತೆಯನ್ನು ಕುರಿತು ಈರೀತಿಯಲ್ಲಿ ಹೇಳಿದಳು. ॥೧೮॥

ಮಾತಶ್ಚಿರಾದಹಂ ಯುದ್ಧ ಕ್ರೀಡಾಕೌತುಕಿತಾಽಂತರಾ ।
ಶಂಕಮಾನಾ ತ್ವಯಾ ತತ್ರ ವಿಘ್ನಂ ನೈತದವೇದಯಮ್ ॥೧೯॥

ಯುದ್ಧಕ್ರೀಡಾ ರಸಭರಾದವಿತೃಪ್ತೈವ ವಾರಿತಾ ।
ತಾವಕ್ಯಾ ದಂಡರಾಜ್ಞಾಽಹಂ ವೃಥೈವ ಸಮರಾಂಗಣಾತ್ ॥೨೦॥

ತ್ವತ್ತೋಽತಿಭೀತಯಾಽಽಸಾದ್ಯ ಮಾನಿತಾ ರಣಸಂಭ್ರಮೇ ।
ಅನ್ಯಥಾ ಸೋಽಪಿ ಮದ್ಯುದ್ಧಂ ವಿಮದಾ ಪ್ರಾಪ್ಸ್ಯ ವೈ ಭವೇತ್ ॥೨೧॥

ವದಂತೀಮಿತಿ ತಾಂ ಬಾಲಾಂ ಪರಿಷ್ವಜ್ಯ ಮಹೇಶ್ವರೀ ।
ಮೈವಂ ವತ್ಸೇ ಪುನರ್ಬ್ರೂಯಾ ಇತ್ಯುಕ್ತ್ವಾ ಸಾಂತ್ವಯತ್ಪರಾ ॥೨೨॥

ಅಥ ದಂಡಮಹಾರಾಜ್ಞೀ ಕಿರಿಚಕ್ರಸಮಾಶ್ರಯಾ ।
ಯುಯೋಧ ಭಂಡದೈತ್ಯೇನ ಯುತೇನ ದೈತ್ಯಸೇನಯಾ ॥೨೩॥

ಓ ತಾಯಿಯೇ, ನಾನು ಬಹಳ ಕಾಲದಿಂದಲೂ ಯುದ್ಧದ ರೂಪವಾದ ಆಟದಲ್ಲಿ ಕುತೂಹಲವುಳ್ಳ ಮನಸ್ಸುಳ್ಳವಳಾಗಿದ್ದೆನು. ನೀನು ನನ್ನ ವಿಷಯದಲ್ಲಿ ಹೀಗೆ ಕಳವಳಗೊಂಡು ವಿಘ್ನವು ಸಂಭವಿಸುವುದೆಂದು ನಾನು ಅರಿತು ನಿನಗೆ ತಿಳಿಸಿರಲಿಲ್ಲ. ॥೧೯॥

ನಾನಿನ್ನೂ ಯುದ್ಧರೂಪದ ಆಟದ ಆನಂದವನ್ನು ಪೂರ್ಣವಾಗಿ ಅನುಭವಿಸದೇ ಇರುವಾಗಲೇ ನಿನ್ನ ದಂಡನಾಯಕಿಯು ಯುದ್ಧಭೂಮಿಯಿಂದ ನನ್ನನ್ನು ವ್ಯರ್ಥವಾಗಿ ಹಿಂತಿರುಗಿಸಿದ್ದಾಳೆ. ॥೨೦॥

ನಾನು ಯುದ್ಧದ ಸಡಗರದಲ್ಲಿ ತೊಡಗಿದಾಗ ನೀನು ಬಹಳ ಭಯಗೊಂಡಿದ್ದೀಯೆ ಎಂದು ಅವಳು ತಿಳಿಸಿದ್ದರಿಂದಲೇ ನಾನು ಅವಳ ಮಾತನ್ನು ಗೌರವಿಸಿದೆನು. ಹಾಗಿಲ್ಲದಿದ್ದರೆ ಅವಳೂ ಕೂಡ ನನ್ನೊಂದಿಗೆ ಯುದ್ಧಮಾಡಬೇಕಾಗಿ ಬಂದು ನಾನು ಅವಳ ಮದವನ್ನೆಲ್ಲವನ್ನೂ ಅಡಗಿಸುತ್ತಿದ್ದೆನು. ॥೨೧॥

ಹೀಗೆ ಮಾತನಾಡುತ್ತಿರುವ ಕುಮಾರಿಯನ್ನು ಆಲಿಂಗಿಸಿ ಶ್ರೇಷ್ಠಳಾದ ಮಹೇಶ್ವರಿಯು, ಎಲೌ ಮಗಳೇ, ಈರೀತಿಯಲ್ಲಿ ಪುನಃ ಹೇಳಬೇಡ. ಎಂದು ಹೇಳಿ ಸಮಾಧಾನಗೊಳಿಸಿದಳು. ॥೨೨॥

ಅನಂತರ ದಂಡನಾಯಕಿಯು ಕಿರಿಚಕ್ರ ಎಂಬ ರಥವನ್ನೇರಿ ದೈತ್ಯಸೈನ್ಯದಿಂದ ಕೂಡಿದ ಭಂಡರಾಕ್ಷಸನೊಂದಿಗೆ ಯುದ್ಧಮಾಡಿದಳು. ॥೨೩॥

ಶಕ್ತಿಸೇನಾ ದೈತ್ಯಸೇನಾ ಯುಧ್ಯಮಾನಾ ಪರಸ್ಪರಮ್ ।
ಕ್ರೋಧಾವೇಶ ಸಮಾಯುಕ್ತಾ ಪ್ರವಿಷ್ಟಾಽಭೂತ್ಪರಸ್ಪರಮ್ ॥೨೪॥

ದೈತ್ಯಾ ಶಕ್ತಿಗಣಾನ್ ಘ್ನಂತಿ ಮುಸಲ ಪ್ರಾಸತೋಮರೈಃ ।
ನಾರಾಚೈರ್ಭಿಂದಿಪಾಲೈಶ್ಚ ಖಡ್ಗಶೂಲಪರಶ್ವಧೈಃ ॥೨೫॥

ಶಕ್ತಯೋಽಪಿ ಪ್ರಹರಣೈಃ ವಿವಿಧೈರ್ದೈತ್ಯಪುಂಗವಾನ್ ।
ಜಘ್ನುರ್ಯುದ್ಧೇ ಮಹಾಭೀಮೇ ಮರ್ಷಿತಾ ಬಲವತ್ತರಾಃ ॥೨೬॥

ತತ್ರ ಶಕ್ತಿಗಣಾಹತ ಛಿನ್ನಬಾಹೂರುನಾಸಿಕಾಃ ।
ಕೇಚಿತ್ ದ್ವಿಧಾ ಕೃತಾಃ ಶಸ್ತ್ರೈಃ ಕೇಚಿತ್ತು ತಿಲಶಃ ಕೃತಾಃ ॥೨೭॥

ಕೇಚಿನ್ಮಹಾಭಾರ ಶಸ್ತ್ರೈಃ ನಿಷ್ಪಿಷ್ಟಾಽಶೇಷದೇಹಕಾಃ ।
ಕ್ರಂದಂತಃ ಪುತ್ರಮಿತ್ರೇತಿ ಹಾಭ್ರಾತಸ್ತಾತ ಇತ್ಯಪಿ ॥೨೮॥

ಶಕ್ತಿಸೈನ್ಯ ಮತ್ತು ರಾಕ್ಷಸ ಸೈನ್ಯಗಳು ಅನ್ಯೋನ್ಯವಾಗಿ ಕೋಪಾವೇಶ ಕ್ಕೊಳಗಾಗಿ ಪರಸ್ಪರವಾಗಿ ನುಗ್ಗಿ ಹೊಕ್ಕು ಯುದ್ಧಮಾಡುತ್ತಿದ್ದವು. ॥೨೪॥

ರಾಕ್ಷಸರು ಶಕ್ತಿಗಳ ಗುಂಪಿನವರನ್ನು ಮುಸಲ, ತೋಮರ, ಪ್ರಾಸ, ಭಿಂದಿ ಪಾಲ, ಕತ್ತಿ, ಶೂಲ, ಕೊಡಲಿ ಎಂಬ ಆಯುಧಗಳಿಂದಲೂ ಮತ್ತು ಬಾಣಗಳಿಂದಲೂ ಹೊಡೆಯುತ್ತಿದ್ದರು. ॥೨೫॥

ಶಕ್ತಿಗಳೂ ಕೂಡ ನಾನಾವಿಧವಾದ ಆಯುಧಗಳಿಂದ ರಾಕ್ಷಸಶ್ರೇಷ್ಠರನ್ನು ಕೊಲ್ಲುತ್ತಿದ್ದರು. ಈ ರೀತಿಯಲ್ಲಿ ಶಕ್ತಿಗಳು ಕೋಪಗೊಂಡವರಾಗಿ ಭಯಂಕರವಾದ ಆ ಯುದ್ಧದಲ್ಲಿ ಅತ್ಯಂತ ಬಲಿಷ್ಠರಾದ ಆ ರಾಕ್ಷಸರನ್ನು ಸಂಹರಿಸುತ್ತಿದ್ದರು. ॥೨೬॥

ಅಲ್ಲಿ ಶಕ್ತಿಗಳ ಗುಂಪಿನವರಿಂದ ರಾಕ್ಷಸರ ತೋಳುಗಳು ತೊಡೆಗಳು ಮತ್ತು ಮೂಗುಗಳೂ, ಕತ್ತರಿಸಿಹೋದುವು. ಶಸ್ತ್ರಗಳಿಂದ ಕೆಲವು ರಾಕ್ಷಸರು ಎರಡು ಹೋಳಾದರು. ಕೆಲವರು ಚೂರು ಚೂರಾದರು. ॥೨೭॥

ಕೆಲವು ರಾಕ್ಷಸರ ಸಮಸ್ತ ದೇಹಗಳೂ ಬಹಳ ಭಾರವಾದ ಶಸ್ತ್ರಗಳ ಹೊಡೆತಕ್ಕೆ ಸಿಕ್ಕಿ ನುಚ್ಚುನೂರಾಗಿ ಹೋದವು. ರಾಕ್ಷಸರು "ಅಯ್ಯೋ ಮಗನೇ, ಸ್ನೇಹಿತನೇ, ಅಣ್ಣತಮ್ಮಂದಿರೇ, ತಂದೆಯೇ, ಹೋದಿರಲ್ಲಾ! ಹೋದೆವಲ್ಲ!" ಎಂದು ಅಳುತ್ತಿದ್ದರು. ॥೨೮॥

ಏವಂ ಶಕ್ತಿಗಣಾಸ್ತ್ರಾಗ್ನಿ ಭಸ್ಮಶೇಷತ್ವಮಾಗತಾಃ ।
ದೈತ್ಯಾಃ ಶಿಷ್ಟಾಃ ಸುವಿತ್ರಸ್ತಾಃ ಪಲಾಯನ ಪರಾಸ್ತದಾ ॥೨೯॥

ಅಭವನ್ ಸಾ ಯುದ್ಧಭೂಮಿರಗಮ್ಯಾಽಭವದಂಜಸಾ ।
ಶೋಣಿತೋದಾ ವವ್ರುರ್ನದ್ಯಃ ಫೇನಿಲಾ ಭೀಷಣಸ್ವನಾಃ ॥೩೦॥

ಪ್ರೇತಗೋಮಾಯುಕಂಕಾಽದಿಶಿವಾಽಽಹಾರಮಹೋತ್ಸವಾಃ ।
ಏವಂ ವಿನಿಹತಪ್ರಾಯಾಂ ದೈತ್ಯಸೇನಾಮುಪದ್ರುತಾಮ್ ॥೩೧॥

ವಿಶುಕ್ರಃ ಸ ವಿಷಂಗೋಽಥ ನಿವಾರ್ಯಾಽಭ್ಯಾಯಯೌ ಮೃಧೇ ।
ಪುನಸ್ತತ್ರಾಽಭವದ್ಯುದ್ಧಂ ಕ್ರೂರಂ ಶಕ್ತಿಗಣೈಃ ಸಹ ॥೩೨॥

ಮಾಯಯಾ ಶಕ್ತಿಸೇನಾಂ ತಾಂ ವಿಶುಕ್ರೋ ಮೋಹಯತ್ಕ್ಷಣಾತ್ ।
ಸಸರ್ಜ ಮಾಯಯಾ ಧ್ವಾಂತಂ ತತ್ರ ವರ್ಷಂ ಶಿಲಾಮಯಂ ॥೩೩॥

ಈ ರೀತಿಯಲ್ಲಿ ಶಕ್ತಿಗಳ ಗುಂಪಿನವರಿಂದ ಹೊಡೆಯಲ್ಪಟ್ಟ ಅಸ್ತ್ರಗಳೆಂಬ ಬೆಂಕಿಗೆ ಸಿಕ್ಕಿ ಅನೇಕ ರಾಕ್ಷಸರು ಬೂದಿಯಾದರು. ಉಳಿದ ರಾಕ್ಷಸರು ಬಹಳ ಭಯಗೊಂಡವರಾಗಿ ಪಲಾಯನ ಮಾಡಲು ಉಪಕ್ರಮಿಸಿದರು. ||೨೯||

ಆ ಯುದ್ಧಭೂಮಿಯು ಶೀಘ್ರದಲ್ಲಿಯೇ, ಜನಗಳು ಪ್ರವೇಶಿಸಲು ಅಸಾಧ್ಯವಾಯಿತು. ಭಯಂಕರವಾದ ಶಬ್ದಗಳುಳ್ಳ ನೊರೆಯನ್ನು ಹೊರಗೆಡಹುತ್ತಿರುವ ರಕ್ತದ ನದಿಗಳೇ ಅಲ್ಲಿ ಹರಿದುವು. ||೩೦||

ಪ್ರೇತಗಳು, ನರಿಗಳು, ಹದ್ದುಗಳು, ಗುಳ್ಳೇನರಿಗಳು ಮುಂತಾದ ಪ್ರಾಣಿಗಳಿಗೆ ಆಹಾರ ಸಿಕ್ಕುವ ಮಹೋತ್ಸವವಾಯಿತು. ಈ ರೀತಿಯಲ್ಲಿ ರಾಕ್ಷಸರ ಸೈನ್ಯವು ಬಹಳವಾಗಿ ನಾಶವಾಗಿ ಕೆಲವರು ಓಡುತ್ತಿರುವುದನ್ನು ವಿಶುಕ್ರನು ಕಂಡನು. ||೩೧||

ವಿಶುಕ್ರ ಮತ್ತು ವಿಷಂಗರಾಕ್ಷಸರು ಓಡುತ್ತಿದ್ದ ರಾಕ್ಷಸರನ್ನು ತಡೆದು ಯುದ್ಧಕ್ಕೆ ಹಿಂತಿರುಗಿಸಿದರು. ಪುನಃ ಅವರಿಗೂ ಮತ್ತು ಶಕ್ತಿಸೈನ್ಯಗಳಿಗೂ ಘೋರವಾದ ಯುದ್ಧವು ನಡೆಯಿತು. ||೩೨||

ವಿಶುಕ್ರರಾಕ್ಷಸನು ಕ್ಷಣಕಾಲದಲ್ಲಿಯೇ ತನ್ನ ಮಾಯೆಯನ್ನು ಉಪಯೋಗಿಸಿ ಶಕ್ತಿಯ ಸೈನ್ಯವು ಮೋಹಗೊಳ್ಳುವಂತೆ ಮಾಡಿದನು. ಅವನು ತನ್ನ ಮಾಯೆ

ವಹ್ನಿವಾಯುಸಮೋಪೇತಂ ತೇನ ಶಕ್ತಿಮಹಾಚಮೂಃ ।
ವಿತ್ರಾಸಿತಾ ಮೂರ್ಛಿತಾ ಚಾಽಸ್ಯಭವದ್ಭೀಮಸಂರವಾ ॥೩೪॥

ತಂ ದೃಷ್ಟ್ವಾಽಭ್ಯಾಯಯೌ ಸಂಪತ್ಕರೀ ಗಜಸಮಾಶ್ರಯಾ ।
ವಿಶುಕ್ರೇಣ ಮಹಾಯುದ್ಧೇ ಸಂಗತಾಽತಿದ್ರುತಂ ಬಭೌ ॥೩೫॥

ಅಶ್ವಾರೂಢಾಽಪಿ ಯುಯುಧೇ ವಿಷಂಗೇಣ ಮಹಾಬಲೀ ।
ವಾರಾಹೀ ಭಂಡದೈತ್ಯೇನ ಯುಯೋಧಾತಿರುಷಾಽನ್ವಿತಾ ॥೩೬॥

ರಣಕೋಲಾಹಲಾಽಽಖ್ಯಾನಂ ಗಜಮಾರುಹ್ಯವೇಗಿನಂ ।
ಅಸಂಖ್ಯ ಗಜಸೈನ್ಯೇನ ಯುತಾ ಸಂಪತ್ಕರೀ ಪರಾ ॥೩೭॥

ವಿಶುಕ್ರಂ ಯೋಧಯಾಮಾಸ ಮಹಾಗಜಸಮಾಶ್ರಯಮ್ ।
ವವರ್ಷ ಶರವರ್ಷೇಣ ವಿಶುಕ್ರಂ ಮಾಯಯಾ ಯುತಂ ॥೩೮॥

ಯಿಂದ ಕತ್ತಲೆಯಾಗುವಂತೆ ಮಾಡಿ ಕಲ್ಲಿನ ಮಳೆಯನ್ನು ಅವರ ಮೇಲೆ ಪ್ರಯೋಗಿಸಿದನು. ॥೩೩॥

ಇದರಿಂದ ಬೆಂಕಿ ಮತ್ತು ವಾಯುಗಳ ಬಿರುಸಿಗೆ ಸಿಕ್ಕಿದ ಶಕ್ತಿಯ ಮಹಾಸೈನ್ಯಗಳು ಭಯಂಕರವಾಗಿ ಕಿರಿಚುತ್ತಾ ಭಯಗೊಂಡು ಮೂರ್ಛೆಹೊಂದಿದುವು. ॥೩೪॥

ಇದನ್ನು ನೋಡಿ, ಸಂಪತ್ಕರೀ ಎಂಬ ಶಕ್ತಿಯೂ, ಆನೆಯ ಮೇಲೇರಿ ರಾಕ್ಷಸ ಸೈನ್ಯಕ್ಕೆ ಎದುರಾಗಿ ಬಂದಳು. ಅವಳು ವಿಶುಕ್ರನೊಂದಿಗೆ ಯುದ್ಧಕ್ಕೆ ನಿಂತು ವಿಶೇಷವಾಗಿ ಪ್ರಕಾಶಿಸಿದಳು. ॥೩೫॥

ಬಹಳ ಬಲಿಷ್ಠಳಾದ ಅಶ್ವಾರೂಢೆಯೂ ಕೂಡ ವಿಷಂಗನೊಂದಿಗೂ, ಬಹಳ ಕೋಪದಿಂದ ಕೂಡಿರುವ ವಾರಾಹಿಯು ಭಂಡರಾಕ್ಷಸನೊಂದಿಗೂ ಯುದ್ಧಮಾಡಲು ಪ್ರಾರಂಭಿಸಿದರು. ॥೩೬॥

ಶ್ರೇಷ್ಠಳಾದ ಸಂಪತ್ಕರೀ ಎಂಬ ಶಕ್ತಿಯು ರಣಕೋಲಾಹಲ ಎಂಬ ಹೆಸರುಳ್ಳ ವೇಗಶಾಲಿಯಾದ ಆನೆಯನ್ನೇರಿ ಲೆಖ್ಖವಿಲ್ಲದಷ್ಟು ಆನೆಯಸೈನ್ಯದಿಂದ ಕೂಡಿ ಯುದ್ಧವನ್ನು ಮಾಡುತ್ತಿದ್ದಳು. ॥೩೭॥

ಈಕೆಯು ದೊಡ್ಡ ಆನೆಯನ್ನೇರಿದ್ದ ಮತ್ತು ಮಾಯೆಯಿಂದ ಕೂಡಿದ್ದ ವಿಶುಕ್ರನ ಮೇಲೆ ಬಾಣಗಳಮಳೆಗಳನ್ನೇ ಸುರಿಸಿದಳು. ॥೩೮॥

ವಿಮಾಯೋಽಸ್ತ್ರೇಣ ಹತ್ವಾ ತಸ್ಮಾಯಾಮತ್ಯಂತ ಭೀತಿದಾಮ್ ।
ಪ್ರತಿವರ್ಷೇಣ ದೈತ್ಯೋಽಪಿ ವವರ್ಷ ವಿಶಿಖಾಽತ್ಮನಾ ॥೩೯॥

ಏವಂ ಯುದ್ಧ್ವಾ ಚಿರಂ ತಸ್ಯ ಧನುಶ್ಚಿಚ್ಛೇದ ಮಧ್ಯತಃ ।
ಸೋಽಪ್ಯನ್ಯದಾದದೇ ಚಾಪಂ ತಂ ಚಾಪ್ಯೇಷಾ ಸಮಾಚ್ಛಿನತ್ ॥೪೦॥

ಏವಂ ಧನುಃ ಶತಂ ಛಿನ್ನಂ ಗೃಹೀತಂ ತು ಪುನಃಪುನಃ ।
ಅಥಾತಿ ಕ್ರೋಧಸಂಯುಕ್ತೋ ವಿಶುಕ್ರೋಽದ್ಭುತವಿಕ್ರಮಃ ॥೪೧॥

ಭಲ್ಲೇನ ಪ್ರಾಹರತ್ತಸ್ಯಾಃ ಸಂಪತ್ಕರ್ಯಾ ಮಹಾಭುಜೇ ।
ಭಲ್ಲಾಽಹತ ಭುಜಾತ್ತಸ್ಯಾ ನ್ಯಪತತ್ತನ್ಮಹದ್ಧನುಃ ॥೪೨॥

ಜಗರ್ಜ ಪತಿತಂ ದೃಷ್ಟ್ವಾ ಹಸ್ತಾಚ್ಚಾಪಂ ಮಹತ್ತರಂ ।
ಸಂಪತ್ಕರೀ ತತಃ ಕ್ರುದ್ಧಾ ಪ್ರಾಹಿಣೋದ್ವಾಹನಂ ಗಜಮ್ ॥೪೩॥

ಸಂಪತ್ಕರೀ ಶಕ್ತಿಯು ವಿಮಾಯಾ ಎಂಬ ಅಸ್ತ್ರದಿಂದ ವಿಶುಕ್ರನು ಪ್ರಯೋಗಿಸಿದ್ದ ಅತ್ಯಂತ ಭಯವನ್ನುಂಟು ಮಾಡುವ ಆ ಮಾಯೆಯನ್ನು ನಿವಾರಿಸಿದಳು. ವಿಶುಕ್ರನೂ ಕೂಡ ಪ್ರತಿಯಾಗಿ ಬೆಂಕಿಯನ್ನು ಕಾರುವ ಕ್ರೂರವಾದ ಬಾಣಗಳನ್ನು ಸಂಪತ್ಕರೀಶಕ್ತಿಯ ಮೇಲೆ ಸುರಿಸಿದನು. ॥೩೯॥

ಈರೀತಿಯಾಗಿ ಅವಳು ಬಹಳ ಕಾಲಯುದ್ಧಮಾಡಿ ಅವನ ಧನುಸ್ಸಿನ ಮಧ್ಯಭಾಗವನ್ನೇ ಕತ್ತರಿಸಿದಳು. ಅವನೂ ಕೂಡ ಬೇರೊಂದು ಧನುಸ್ಸನ್ನು ಕೈಗೆ ತೆಗೆದುಕೊಂಡನು. ಆಶಕ್ತಿಯು ಅದನ್ನೂ ಕೂಡಲೆ ಕತ್ತರಿಸಿದಳು. ॥೪೦॥

ಈರೀತಿಯಾಗಿ ಆಕೆಯು ಅವನ ನೂರು ಬಿಲ್ಲುಗಳನ್ನು ಪುನಃ ಪುನಃ ತೆಗೆದುಕೊಂಡಾಗಲೆಲ್ಲಾ ಕತ್ತರಿಸಿದಳು. ಅನಂತರ ವಿಶುಕ್ರನು ಬಹಳ ಕೋಪದಿಂದ ಕೂಡಿದವನಾಗಿ ಆಶ್ಚರ್ಯವಾದ ಪರಾಕ್ರಮವನ್ನು ತೋರಿಸಲು ಪ್ರಾರಂಭಿಸಿದನು. ॥೪೧॥

ಆಗ ವಿಶುಕ್ರನು ಸಂಪತ್ಕರಿಯ ದೊಡ್ಡ ತೋಳಿಗೆ ಭಲ್ಲ ಎಂಬ ಆಯುಧವನ್ನು ಪ್ರಯೋಗಿಸಿದನು. ಅವನ ಭಲ್ಲೆಯ ಪೆಟ್ಟಿಗೆ ಸಿಕ್ಕಿದ ಆಕೆಯ ತೋಳಿನಿಂದ ಅತ್ಯಂತ ದೊಡ್ಡದಾದ ಬಿಲ್ಲು ಕೆಳಗೆ ಬಿದ್ದಿತು. ॥೪೨॥

ಸಂಪತ್ಕರೀಶಕ್ತಿಯ ಕೈಯಿಂದ ಅತ್ಯಂತ ದೊಡ್ಡದಾದ ಬಿಲ್ಲು ಕೆಳಗೆ ಬಿದ್ದುದನ್ನು ನೋಡಿ ವಿಶುಕ್ರರಾಕ್ಷಸನು ಗರ್ಜಿಸಿದನು. ಆಗ ಆಕೆಯು ಕೋಪಗೊಂಡು ತನ್ನ ವಾಹನವಾದ ಆನೆಯನ್ನು ಅವನನ್ನು ಎದುರಿಸಲು ಬಿಟ್ಟಳು. ॥೪೩॥

ಪ್ರಹಿತಸ್ಸೋಽಪಿ ಕರಿರಾಟ್ ದೈತ್ಯೇಭ ಮಸುಸಂಯಯೌ ।
ತಯೋರಭೂನ್ಮಹಾಯುದ್ಧಂ ಕರಿಣೋರಗಯೋರಿವ ॥೪೪॥

ಕರಸಂವೇಷ್ಟನೈಃ ಕುಂಭಸಂಘಟ್ಟೈಃ ಪಾರ್ಶ್ವಘರ್ಷಣೈಃ ।
ದಂತಾಽಽಕ್ರಮೈರ್ಮಹಾಶಬ್ದೈರ್ಮುಹೂರ್ತಮತಿಭೀಷಣಮ್ ॥೪೫॥

ರಣಕೋಲಾಹಲಶ್ಚಾಽಥ ಬಲವಾನ್ ದೈತ್ಯವಾರಣಮ್ ।
ಆಕ್ರಮ್ಯ ಭೂಮೌ ವೇಗೇನ ನಿಪಾತ್ಯ ರದನದ್ವಯಂ ॥೪೬॥

ಉದರೇ ವಿನಿವೇಶ್ಯೋರ್ಧ್ವಂ ಉತ್ಥಾಪ್ಯ ಪ್ರಾಕ್ಷಿಪದ್ರುಷಾ ।
ಏವಂ ನಿಕ್ಷಿಪ್ತಮಾತ್ರಸ್ತು ಚೀತ್ಕುರ್ವನ್ ಕುಂಜರಾಧಿಪಃ ॥೪೭॥

ಶ್ರೇಷ್ಠ ಆನೆಯಾದ ಅದನ್ನು ಸಂಪತ್ಕರೀ ಎಂಬ ಶಕ್ತಿಯು ಕಳುಹಿಸಲು ರಾಕ್ಷಸಶ್ರೇಷ್ಠನಾದ ವಿಶುಕ್ರನ ಆನೆಯನ್ನು ಎದುರಿಸಲು ಅದು ಪ್ರಾರಂಭಿಸಿತು. ಆ ಎರಡು ಆನೆಗಳಿಗೂ, ಪರ್ವತಗಳಿಗೆ ಕಾದಾಟವಾದರೆ ಹೇಗೋ ಹಾಗೆ, ಭಯಂಕರ ವಾದ ಮಹಾಯುದ್ಧವು ಸಂಭವಿಸಿತು. ॥೪೪॥

ಆನೆಗಳಿಗೆ ಪರಸ್ಪರವಾಗಿ ಸೊಂಡಲಿನಿಂದ ಸುತ್ತಿಹಾಕಿಕೊಳ್ಳೋಣದರಿಂದಲೂ, ಕುಂಭಸ್ಥಳದಿಂದ ಗುದ್ದಾಡುವುದರಿಂದಲೂ, ಪಕ್ಕಗಳಿಂದ ತಿಕ್ಕಿ ಘರ್ಜಿಸುವುದರಿಂ ದಲೂ, ಕೊಂಬಿನಿಂದ ಆಕ್ರಮಿಸುವುದರಿಂದಲೂ, ದೊಡ್ಡ ಶಬ್ದವನ್ನು ಮಾಡೋಣ ದರಿಂದಲೂ, ಒಂದು ಮುಹೂರ್ತಕಾಲ ಬಹಳ ಭಯಂಕರವಾದ ಯುದ್ಧವು ನಡೆಯಿತು ! ॥೪೫॥

ಬಲಿಷ್ಠವಾದ ರಣಕೋಲಾಹಲ ಎಂಬ ಸಂಪತ್ಕರೀಶಕ್ತಿಯ ಆನೆಯು, ವಿಶುಕ್ರರಾಕ್ಷಸನ ಆ ಆನೆಯನ್ನು ವೇಗವಾಗಿ ಭೂಮಿಗೆ ಕೆಡವಿ ಹಾಕಿಕೊಂಡು ತನ್ನ ಎರಡು ಎರಡು ಕೊಂಬುಗಳಿಂದ ತಿವಿಯಿತು. ॥೪೬॥

ಹೀಗೆ ಕೋಪದಿಂದ ತನ್ನ ಎರಡು ಕೋರೆದಾಡೆಗಳನ್ನೂ ಆ ವಿಶುಕ್ರರಾಕ್ಷಸನ ಆನೆಯ ಹೊಟ್ಟೆಯೊಳಕ್ಕೆ ನುಗ್ಗಿಸಿ ಅದನ್ನು ಮೇಲಕ್ಕೆ ಎತ್ತಿ ಕೆಳಕ್ಕೆ ಕುಕ್ಕರಿಸಿತು. ಹೀಗೆ ಕುಕ್ಕರಿಸಲ್ಪಟ್ಟ ಕೂಡಲೇ ಆ ಶ್ರೇಷ್ಠ ಆನೆಯು ಚೀತ್ಕಾರವನ್ನು ಮಾಡಿತು. ॥೪೭॥

ಅಪತತ್ತ್ರಿಃ ಪರಿಕ್ರಮ್ಯ್ಯವ್ಯಸುಃ ಪರ್ವತಶೃಂಗವತ್ ।
ಪತಂತಂ ವಾಹನೇಭಂ ತಮಾಲಕ್ಷ್ಯ ಸ ಮಹಾಸುರಃ ॥೪೮॥

ಉತ್ಪತ್ಯಾಂಕುಶಮಾದಾಯ ರಣಕೋಲಾಹಲಂ ಗಜಂ ।
ಪ್ರಾಹರತ್ಕುಂಭಯೋರ್ಮಧ್ಯೇ ಸರ್ವಪ್ರಾಣೇನ ರೋಷಿತಃ ॥೪೯॥

ಹತೋಽಂಕುಶೇನ ಬಲವತ್ಸ ಗಜೋ ಭಿನ್ನಮಸ್ತಕಃ ।
ಅಪಾಽಸರತ್ ಪಂಚಧನುರ್ಮಾತ್ರಂ ಚೀತ್ಕಾರಭೈರವಃ ॥೫೦॥

ವಿಶುಕ್ರಃ ಪುನರುತ್ಪತ್ಯ ಸೃಣಿಹಸ್ತೋ ಮಹಾಗಜಮ್ ।
ತಮೇವ ವಾಹನಂ ತಸ್ಯಾಃ ಸಂಪತ್ಕರ್ಯಾ ಯುಯೋಧ ಹ ॥೫೧॥

ತಸ್ಯಾಃ ಕರಗತಂ ಚಾಪಮಾಚ್ಛಿದ್ಯ ತ್ವರಿತಂ ರುಷಾ ।
ಬಭಂಜ ತತ್ ದ್ವಿಧಾ ಮಧ್ಯೇ ಸಮಾದಾಯೈಕ ಖಂಡಕಮ್ ॥೫೨॥

ಶ್ರೇಷ್ಠವಾದ ಆನೆಯು ಮೂರು ಸಲ ಸುತ್ತಿ, ಪರ್ವತದ ಶಿಖರದಂತೆ, ಮೇಲುಸಿರನ್ನು ಬಿಡುತ್ತಾ ಕೆಳಗೆ ಬಿದ್ದಿತು. ಮಹಾರಾಕ್ಷಸನು ಹೀಗೆ ಕೆಳಗೆ ಬಿದ್ದ ತನ್ನ ಆನೆಯನ್ನು ನೋಡಿದನು. ॥೪೮॥

ಅವನು ಅದರ ಮೇಲಿಂದ ಹಾರಿ ಅಂಕುಶವನ್ನೆತ್ತಿಕೊಂಡು ರಣಕೋಲಾಹಲ ಎಂಬ ಆ ಆನೆಯ ಕುಂಭಸ್ಥಳದ ಮಧ್ಯಕ್ಕೆ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ಕೋಪದಿಂದ ಜೋರಾಗಿ ಹೊಡೆದನು. ॥೪೯॥

ಅವನ ಅಂಕುಶದ ಕ್ರೂರವಾದ ಬಲವಾದ ಪೆಟ್ಟಿಗೆ ಸಿಕ್ಕಿದ ಆ ಆನೆಯ ತಲೆಯು ಸೀಳಿ ಅದು ಭಯಂಕರವಾಗಿ ಚೀತ್ಕಾರವನ್ನು ಮಾಡುತ್ತಾ ಐದು ಧನುಸ್ಸಿನ ಅಳತೆಯಷ್ಟು ದೂರ ಹಿಂದಕ್ಕೆ ಸರಿಯಿತು. ॥೫೦॥

ವಿಶುಕ್ರನು ಪುನಃ ಆ ದೊಡ್ಡ ಆನೆಯ ಮೇಲೆ ಬಿದ್ದು ಅಂಕುಶವನ್ನು ಕೈಲಿ ಹಿಡಿದುಕೊಂಡು ಸಂಪತ್ಕರೀಶಕ್ತಿಯೊಂದಿಗೆ ಯುದ್ಧಮಾಡಿದನು. ॥೫೧॥

ಆಕೆಯು ಕೈಯಲ್ಲಿದ್ದ ಬಿಲ್ಲನ್ನು ಕೋಪದಿಂದ ಶೀಘ್ರವಾಗಿ ಅಪಹರಿಸಿ ಅದನ್ನು ಮಧ್ಯದಲ್ಲಿ ಎರಡುಭಾಗವಾಗಿ ಮುರಿದು, ಅದರ ಒಂದು ತುಂಡನ್ನು ಕೈಗೆ ತೆಗೆದು ಕೊಂಡನು. ॥೫೨॥

ಪ್ರಾಹರನ್ಮೂರ್ಧ್ನಿ ಬಲವಾನ್ ಸಂಪತ್ಕರ್ಯಾಃ ಸುವೇಗತಃ ।
ಏವಂ ಹತಾ ಸಾ ಬಲವದೀಷತ್ಕಶ್ಮಲಮಾಗತಾ ॥೫೩॥

ಪುನರ್ಮುಷ್ಟಿಂ ವಿನಿರ್ವರ್ತ್ಯ ವಜ್ರಸಾರಾಂ ನ್ಯಪಾತಯತ್ ।
ಮೂರ್ಧ್ನಿ ತಸ್ಯ ವಿಶುಕ್ರಸ್ಯ ರುಷಾ ಸಂಪತ್ಕರೀಬಲಾತ್ ॥೫೪॥

ಮುಷ್ಟಿಪಾತಾದ್ಭಿನ್ನಮೂರ್ಧಾ ವಹದ್ರಕ್ತೋಽತಿಮೂರ್ಛಿತಃ ।
ಕೃತ್ತಪಕ್ಷಃ ಶೈಲ ಇವ ಪಪಾತ ವಸುಧಾತಲೇ ॥೫೫॥

ತಾವದ್ಗಜೋಽಪಿ ಸಂಕ್ರುದ್ಧಃ ಪದಾಽಕ್ರಾಂತುಂ ಸಮುದ್ಯತಃ ।
ಆಲಕ್ಷ್ಯ ತದ್ಭಂಡಸುತಃ ಯುಧ್ಯಮಾನಃ ಸಮೀಪತಃ ॥೫೬॥

ಮತ್ವಾ ಹತಂ ಪಿತೃವ್ಯಂ ವೈ ಮಾಯಯಾ ತಮಪಾಽವಹತ್ ।
ಏವಂ ಪರಾಜಿತಃ ಸಂಪನ್ನಾಥಯಾ ಸ ಮಹಾಽಸುರಃ ॥೫೭॥

ಅವನು ಆದರಿಂದ ವೇಗವಾಗಿ ಸಂಪತ್ಕರೀಶಕ್ತಿಯ ತಲೆಯ ಮೇಲಕ್ಕೆ ಬಲವಾಗಿ ಹೊಡೆದನು. ಅದರಿಂದ ಆಕೆಯು ಸ್ವಲ್ಪಮಟ್ಟಿಗೆ ಮೂರ್ಛಿತಳಾದಳು. ॥೫೩॥

ಪುನಃ ಸಂಪತ್ಕರೀಶಕ್ತಿಯು ಚೇತರಿಸಿಕೊಂಡು ಪ್ರತಿಯಾಗಿ ವಜ್ರದಷ್ಟು ಗಟ್ಟಿಯಾದ ಮುಷ್ಟಿಯಿಂದ ಬಲವಾಗಿ ಕೋಪದಿಂದ ನುಗ್ಗಿಹೋಗಿ ವಿಶುಕ್ರರಾಕ್ಷಸನ ತಲೆಗೆ ಹೊಡೆದಳು. ॥೫೪॥

ವಿಶುಕ್ರರಾಕ್ಷಸನು ಸಂಪತ್ಕರೀ ಶಕ್ತಿಯ ಮುಷ್ಟಿಪ್ರಹಾರದಿಂದ ತಲೆಯು ಸೀಳಿದವನಾಗಿ, ರಕ್ತವನ್ನು ಸುರಿಸುತ್ತಾ, ಬಹಳ ಮೂರ್ಛೆಯನ್ನು ಹೊಂದಿ, ರೆಕ್ಕೆಯನ್ನು ಕತ್ತರಿಸಿದ ಪರ್ವತದಂತೆ ಭೂಮಿಯ ಮೇಲೆ ಬಿದ್ದನು. ॥೫೫॥

ಅಷ್ಟರಲ್ಲಿ ಆನೆಯೂ ಕೂಡ ಕೋಪಗೊಂಡು ಅವನನ್ನು ತನ್ನ ಕಾಲಿನಿಂದ ಆಕ್ರಮಿಸಲು ಹೊರಟಿತು. ಭಂಡನ ಮಗನಾದ ರಾಕ್ಷಸನು ಸಮೀಪದಲ್ಲೇ ಯುದ್ಧ ಮಾಡುತ್ತಿದ್ದು ಇದನ್ನು ನೋಡಿದನು. ॥೫೬॥

ಭಂಡರಾಕ್ಷಸನ ಮಗನು ತಮ್ಮ ಚಿಕ್ಕಪ್ಪನು ನಾಶವಾಗುತ್ತಿರುವುದನ್ನು ನೋಡಿ, ಅವನನ್ನು ಮಾಯೆಯಿಂದ ಬೇರೆ ಕಡೆಗೆ ಸಾಗಿಸಿದನು. ಈರೀತಿಯಾಗಿ ವಿಶುಕ್ರರಾಕ್ಷಸನು ಸಂಪನ್ನಾಥಾ ಶಕ್ತಿಯಿಂದ ಪರಾಜಯವನ್ನು ಹೊಂದಿದನು. ॥೫೭॥

ತಥಾಽಶ್ವರೂಢಯಾ ಯುಧ್ಯದ್ವಿಷಂಗೋ ವಾಜಿವಾಹನಃ ।
ವಿವಿಧೈರಸ್ತ್ರಶಸ್ತ್ರೈಶ್ಚ ಯುಧ್ಯಂತಂ ತಂ ಮಹಾಽಸುರಂ ॥೫೮॥

ಅಶ್ವಾರೂಢಾಽಶ್ವಸಂಸ್ಥಾನಾ ಪ್ರಾಹರದ್ಗದಯೋರಸಿ ।
ತಾಡಿತೋ ಗದಯಾ ಚೇಷನ್ಮೂರ್ಛಾಂ ಪ್ರಾಪ ಪುನರ್ಜವಾತ್ ॥೫೯॥

ಪದಾಸಿಕಾಂ ಖೇಟಕಂ ಚ ಶತಚಂದ್ರಮನುತ್ತಮಂ ।
ಸಮಾದಾಯಾಶ್ವ ಸೇನಾಸು ವಿಚಚಾರಾಂತಕೋಪಮಃ ॥೬೦॥

ಪಟ್ವಾಽಸಿಪ್ರಾಂತಸಂಭಿನ್ನಾಸ್ತುರಗಾಃ ಶಕ್ತಯೋಽಪಿ ಚ ।
ಛಿನ್ನಮೂರ್ಧಾಂಗ ಚರಣಾಃ ಪ್ರಪೇತುಃ ಸಂಘಸಂಘಶಃ ॥೬೧॥

ಏವಂ ಶಕ್ತೀರ್ವಿನಿಘ್ನಂತಮಶ್ವಾರೂಢಾತಿಕೋಪಿತಾ ।
ಬದ್ಧ್ವಾ ಪಾಶೇನ ಗದಯಾ ಸಾಽಶ್ವಂ ಹಂತುಂ ಸಮುದ್ಯತಾ ॥೬೨॥

ಇದೇ ರೀತಿಯಲ್ಲಿ ಕುದುರೆಯ ಮೇಲೇರಿ ಯುದ್ಧಮಾಡುತ್ತಿದ್ದ ವಿಷಂಗನೆಂಬ ರಾಕ್ಷಸನನ್ನು ಅಶ್ವಾರೂಢಾ ಎಂಬ ಶಕ್ತಿಯು ನಾನಾ ವಿಧವಾದ ಅಸ್ತ್ರಗಳು ಮತ್ತು ಶಸ್ತ್ರಗಳಿಂದ ಹೊಡೆದಳು. ॥೫೮॥

ಅಶ್ವಾರೂಢಾ ಎಂಬ ಶಕ್ತಿಯು ಕುದುರೆಯ ಮೇಲೇರಿ ಯುದ್ಧಮಾಡುತ್ತಾ ಆ ರಾಕ್ಷಸನ ವಕ್ಷಸ್ಥಳಕ್ಕೆ ಗದೆಯಿಂದ ಹೊಡೆದಳು. ಅವನು ಆ ಗದಾಪ್ರಹಾರಕ್ಕೆ ಸಿಕ್ಕಿದುದರಿಂದ ಸ್ವಲ್ಪ ಮೂರ್ಛೆಯನ್ನು ಹೊಂದಿದಾಗ್ಯೂ ಪುನಃ ಶೀಘ್ರದಲ್ಲಿಯೇ ಚೇತರಿಸಿ ಕೊಂಡನು. ॥೫೯॥

ಯಮನಿಗೆ ಸಮನಾದ ಆ ರಾಕ್ಷಸನು ಪದಾಸಿಕಾ ಖೇಟಕ, ಶ್ರೇಷ್ಠವಾದ ಶತಚಂದ್ರ ಎಂಬ ಆಯುಧ ಇವುಗಳನ್ನು ತೆಗೆದುಕೊಂಡು ಆ ಶಕ್ತಿಯ ಕುದುರೆಯ ಸೈನ್ಯಗಳಲ್ಲಿ ಸಂಚರಿಸಿದನು. ॥೬೦॥

ಇವನ ಗಟ್ಟಿಯಾಗಿರುವ ಕತ್ತಿಯ ಅಲಗಿನ ಪೆಟ್ಟಿಗೆ ಸಿಕ್ಕಿ ಕುದುರೆಗಳ ಮತ್ತು ಶಕ್ತಿಗಳ ತಲೆಗಳು ಮತ್ತು ಅವಯವಗಳು, ಕಾಲುಗಳು ಇವುಗಳು ಕತ್ತರಿಸಲ್ಪಡುತ್ತಿರಲಾಗಿ ಇವುಗಳು ಗುಂಪುಗುಂಪಾಗಿ ಕೆಳಗೆ ಬೀಳುತ್ತಿದ್ದವು. ॥೬೧॥

ಈರೀತಿಯಲ್ಲಿ ಶಕ್ತಿಗಳನ್ನು ನಾಶಮಾಡುತ್ತಿರುವ ವಿಷಂಗರಾಕ್ಷಸನನ್ನು ನೋಡಿ ಅಶ್ವಾರೂಢಾ ಎಂಬ ಶಕ್ತಿಯು ಬಹಳ ಕೋಪಗೊಂಡು, ಅವನನ್ನು ಪಾಶ

ಅಥ ಸೋಽಪಿ ಮಹಾದೈತ್ಯೋ ಮತ್ವಾ ಸ್ವಾತ್ಮಪರಾಭವಮ್ ।
ಅಂತರ್ಧಾನಂ ಯಯೌ ಸಾಶ್ವೋ ಮಾಯಯಾ ಮಾಯಿನಾಂಗುರುಃ ॥೬೩॥

ಏವಂ ಪಲಾಯಿತೋ ಯುದ್ಧೇ ವಿಷಂಗೋ ವಾಜಿನಾಥಯಾ ।
ದಂಡನಾಥಾ ಚ ಭಂಡೇನ ಯುಯೋಧ ಬಲಸಂಭೃತಾ ॥೬೪॥

ವಿಹತ್ಯಾಸ್ತ್ರಾಣಿ ಚಾಸ್ತ್ರೌಘೈಃ ಶಸ್ತ್ರೈಃ ಶಸ್ತ್ರಾಣಿ ಸರ್ವಶಃ ।
ಪರಾಕ್ರಮೇಣಾಕ್ರಮತ ಭಂಡಂ ಕೋಲಮುಖೀ ಯುಧಿ ॥೬೫॥

ಖಡ್ಗಯುದ್ಧೇ ಗದಾಯುದ್ಧೇ ಧನುಃಪರಶುಯುದ್ಧಯೋಃ ।
ಮುಷ್ಟಿಯುದ್ಧೇ ಚ ದೈತ್ಯೇಶ ಮತ್ಯರಿಚ್ಯತ ದಂಡಿನೀ ॥೬೬॥

ದಿಂದ ಕಟ್ಟಿ ಅವನ ಕುದುರೆಯೊಡನೆ ಅವನನ್ನು ಗದೆಯಿಂದ ನಾಶಮಾಡಲು ಸಿದ್ಧಳಾದಳು. ॥೬೨॥

ಅನಂತರ ಆ ಮಹಾರಾಕ್ಷಸನೂ ಕೂಡ ತನಗೆ ಅಶ್ವಾರೂಢೆಯಿಂದ ಸೋಲಾಗುವುದೆಂದು ತಿಳಿದು, ಮಾಯಾವಿಗಳಲ್ಲಿ ಅಗ್ರಗಣ್ಯನಾದ ಇವನು ತನ್ನ ಕುದುರೆಯೊಡನೆ ತನ್ನ ಮಾಯೆಯಿಂದ ಅಂತರ್ಧಾನವನ್ನು ಹೊಂದಿದನು. ॥೬೩॥

ಈರೀತಿಯಲ್ಲಿ ಅಶ್ವಾರೂಢಾಶಕ್ತಿಗೆ ಸೋತು ವಿಷಂಗರಾಕ್ಷಸನು ಪಲಾಯನ ಮಾಡಲು ದಂಡನಾಯಕಿಯು ತನ್ನ ಸೈನ್ಯವನ್ನೆಲ್ಲವನ್ನೂ ಸೇರಿಸಿಕೊಂಡು ಭಂಡ ರಾಕ್ಷಸನೊಂದಿಗೆ ಯುದ್ಧಮಾಡಿದಳು. ॥೬೪॥

ವರಾಹದಂತೆ ಮುಖವುಳ್ಳ ದಂಡನಾಯಕಿಯು, ಯುದ್ಧದಲ್ಲಿ ಪರಾಕ್ರಮವನ್ನು ತೋರಿಸುತ್ತಾ, ಭಂಡರಾಕ್ಷಸನ ಅಸ್ತ್ರಗಳಿಗೆ ಪ್ರತ್ಯಸ್ತ್ರಗಳನ್ನು ಪ್ರಯೋಗಿಸಿ ನಾಶಮಾಡುತ್ತಲೂ, ಶಸ್ತ್ರಗಳನ್ನು ಪ್ರತಿಶಸ್ತ್ರಗಳಿಂದ ಮುರಿಯುತ್ತಲೂ, ಸರ್ವ ವಿಧದಲ್ಲಿಯೂ ಅವನನ್ನು ಆಕ್ರಮಿಸಿದಳು. ॥೬೫॥

ದಂಡನಾಯಕಿಯು ದೈತ್ಯರಾಜನಾದ ಭಂಡನೊಂದಿಗೆ ಯುದ್ಧಮಾಡುತ್ತಾ ಕತ್ತಿಯ ಯುದ್ಧದಲ್ಲಿಯಾಗಲೀ, ಗದೆಯ ಯುದ್ಧದಲ್ಲಾಗಲೀ, ಬಿಲ್ಲುಗಳು ಅಥವಾ ಕೊಡಲಿಗಳ ಯುದ್ಧದಲ್ಲಾಗಲೀ ಅವನನ್ನು ಮೀರಿಸಿ ಯುದ್ಧಮಾಡಿದಳು. ॥೬೬॥

ಏವಂ ಪರಾಜಿತಃ ಶಸ್ತ್ರಯುದ್ಧೇಷು ವಿಮೃಶಂಸ್ತತಃ ।
ಮಾಯಾಂ ಪ್ರಾದುಶ್ಚಕಾರೋಚ್ಚೈರ್ಮಾಯಿನಾಂ ಶೇಖರೋಽಸುರಃ॥೬೭॥

ಅಂಧಕಾರಂ ಮಹಾವಾಯುಂ ವಿದ್ಯುದ್ವರ್ಷಂ ಮಹಾರವಮ್ ।
ಶಿಲಾವರ್ಷಂ ಸರ್ಪವರ್ಷಂ ಶರವರ್ಷಂ ಚ ಪಾವಕಮ್ ॥೬೮॥

ಸಾರಮೇಯಾನ್ ವೃಕಾನ್ ವ್ಯಾಘ್ರಾಂಸ್ತರಕ್ಷೂನ್ ರಾಕ್ಷಸಾನಪಿ।
ಸಿಂಹಾಂಶ್ಚ ಶರಭಾನ್ ಗಂಡಭೇರುಂಡಾ ನಸೃಜದ್ಯುಧಿ ॥೬೯॥

ಏವಂ ತೇನ ಮಹಾಮಾಯಾಂ ಸೃಜ್ಯಮಾನಾಂ ಪುನಃ ಪುನಃ ।
ಪ್ರತಿಕ್ರಿಯಾಽಸ್ತ್ರಸಂಧಾನೈರ್ನಾಶಯಾಮಾಸ ಸರ್ವತಃ ॥೭೦॥

ಅಥ ದಂಡಮಹಾರಾಜ್ಞೀ ಶಸ್ತ್ರತೇಜೋಭಿರರ್ದಿತಃ ।
ನಭಸ್ಯಂತರ್ಹಿತಾ ಭೂತ್ವಾ ಯುಯೋಧ ಸರಥೋಽಸುರಃ ॥೭೧॥

ಈರೀತಿಯಲ್ಲಿ ಶಸ್ತ್ರಗಳ ಯುದ್ಧದಲ್ಲಿ ಭಂಡರಾಕ್ಷಸನು ಅವಳಿಂದ ಸೋಲನ್ನು ಅನುಭವಿಸಿ, ಅನಂತರ ಯೋಚಿಸಿ, ಮಾಯಾವಿಗಳಲ್ಲಿ ಅತ್ಯಂತ ನಿಪುಣನಾದ ಇವನು ತನ್ನ ಮಾಯೆಯನ್ನು ಹೊರಗೆಡಹಿದನು. ॥೬೭॥

ಭಂಡರಾಕ್ಷಸನು ತನ್ನ ಮಾಯೆಯಿಂದ ಕತ್ತಲೆ, ಬಿರುಗಾಳಿ, ಮಿಂಚಿನ ಸುರಿಮಳೆ, ಭಯಂಕರ ಶಬ್ದದ ಕಲ್ಲಿನ ಸುರಿಮಳೆ, ಹಾವಿನ ಸುರಿಮಳೆ, ಬೆಂಕಿ ಇವನ್ನೆಲ್ಲವನ್ನೂ ಸೃಷ್ಟಿ ಮಾಡಿದನು. ॥೬೮॥

ಭಂಡರಾಕ್ಷಸನು ತನ್ನ ಮಾಯೆಯಿಂದ ಬೇಟೆನಾಯಿಗಳು, ತೋಳಗಳು, ಹುಲಿಗಳೂ ತರಕ್ಷು ಎಂಬ ಮೃಗಗಳು, ರಾಕ್ಷಸರು, ಸಿಂಹಗಳು, ಶರಭಮೃಗಗಳು, ಗಂಡಬೇರುಂಡಮೃಗ ಇವನ್ನೆಲ್ಲವನ್ನೂ ಯುದ್ಧದಲ್ಲಿ ಸೃಷ್ಟಿಸಿದನು. ॥೬೯॥

ಈ ರೀತಿಯಲ್ಲಿ ಭಂಡರಾಕ್ಷಸನು ತನ್ನ ಮಹಾಮಾಯೆಯಿಂದ ಪುನಃ ಪುನಃ ಸೃಷ್ಟಿಸುತ್ತಿದ್ದ ಈ ವಸ್ತುಗಳನ್ನೆಲ್ಲವನ್ನೂ ದಂಡನಾಯಕಿಯು ಅವಕ್ಕೆ ಪ್ರತೀಕಾರ ಮಾಡುವ ಅಸ್ತ್ರವನ್ನು ಪ್ರಯೋಗಿಸಿ ಎಲ್ಲಾ ಕಡೆಯಲ್ಲಿಯೂ ನಾಶಮಾಡುತ್ತಾ ಬಂದಳು. ॥೭೦॥

ಅನಂತರ ದಂಡಮಹಾರಾಣಿಯ ಶಸ್ತ್ರಗಳ ತೇಜಸ್ಸಿನಿಂದ ಅತ್ಯಂತ ಪೀಡೆಯನ್ನು ಅನುಭವಿಸಿದ ಭಂಡರಾಕ್ಷಸನು ತನ್ನ ರಥದೊಂದಿಗೆ ಆಕಾಶದಲ್ಲಿ ಅಂತರ್ಧಾನವಾಗಿ ಅವಳೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದನು. ॥೭೧॥

ಸ್ರಾದುಶ್ಚಕಾರಾಽಶ್ಮವರ್ಷಮತಿ ಭೀಮಂ ಮಹಾರವಮ್ ।
ಶಸ್ತ್ರಾಽಶನಿಗಣೋಪೇತಂ ಶಕ್ತಿಸೇನಾಭಯಂಕರಮ್ ॥೭೨॥

ತೇನ ವರ್ಷೇಣ ಮಹತಾ ಪೀಡಿತಾ ಶಕ್ತಿವಾಹಿನೀ ।
ಭಿನ್ನಸೇತೂದಕಮಿವ ವಿಲುಪ್ತಾಽಭೂತ್ಸಮಂತತಃ ॥೭೩॥

ದೃಷ್ಟ್ವಾತದಕ್ರಮಂ ದಂಡರಾಜ್ಞೀ ಚಂಡಪ್ರಕೋಪನಾ ।
ಉತ್ಪಪಾತಾಽತಿವೇಗೇನ ಸಾಯುಧಾ ನಭಸೋಽಂಗಣಮ್ ॥೭೪॥

ವರ್ಷಂ ಪತಂತಮಾವಿಶ್ಯ ಶಿಲಾಮಯಮತಿದ್ರುತಂ ।
ಮೃಗಯಾಮಾಸ ದೈತ್ಯೇಶಂ ನಭಸ್ಯಂಧತಮೋವೃತೇ ॥೭೫॥

ನಿಜಾಽಂಗಕಾಂತ್ಯಾ ಕುರ್ವಂತೀ ನಭೋದೇಶಂ ಸುಭಾಸ್ವರಂ ।
ಅಪಹತ್ಯಮಹಾಮಾಯಾ ಮಾಸಸಾದ ಮಹಾಸುರಮ್ ॥೭೬॥

ಅವನು ಅಲ್ಲಿ ಭಯಂಕರವಾಗಿ ಶಬ್ದಮಾಡುತ್ತಿರುವ ಶಸ್ತ್ರಗಳು ಮತ್ತು ಸಿಡಿಲುಗಳು ಇವುಗಳ ಗುಂಪಿನಿಂದ ಕೂಡಿರುವ, ಶಕ್ತಿಯ ಸೈನ್ಯಕ್ಕೆ ಬಹಳ ಭಯವನ್ನುಂಟುಮಾಡುವ, ಕಲ್ಲಿನ ಮಳೆಯನ್ನು ಸುರಿಸಿದನು. ||೭೨||

ದೊಡ್ಡದಾದ ಕಲ್ಲಿನ ಸುರಿಮಳೆಯ ಪೀಡೆಗೆ ಒಳಗಾದ ಶಕ್ತಿಸೈನ್ಯವು, ಸೇತುವೆಯು ಮುರಿದ ಪ್ರವಾಹದಂತೆ, ಎಲ್ಲಾ ಕಡೆಯಲ್ಲಿಯೂ ನುಗ್ಗಿ ಛಿದ್ರಛಿದ್ರವಾಯಿತು. ||೭೩||

ಉಗ್ರವಾದ ಕೋಪವುಳ್ಳ ಆ ದಂಡನಾಯಕಿಯು ಈ ಅವ್ಯವಸ್ಥೆಯನ್ನು ನೋಡಿ ಆಯುಧವನ್ನು ಕೈಗೆ ತೆಗೆದುಕೊಂಡು ಬಹಳ ವೇಗದಿಂದ ಆಕಾಶದ ಮಧ್ಯಪ್ರದೇಶಕ್ಕೆ ಹಾರಿದಳು. ||೭೪||

ಕಲ್ಲಿನ ರೂಪದಲ್ಲಿ ಬಹಳ ವೇಗವಾಗಿ ಬೀಳುತ್ತಿದ್ದ ಆ ಸುರಿಮಳೆಯ ಒಳಕ್ಕೆ ನುಗ್ಗಿ ದಂಡನಾಯಕಿಯು ಕಗ್ಗತ್ತಲಿನಿಂದ ಕೂಡಿರುವ ಆಕಾಶ ಪ್ರದೇಶದಲ್ಲಿ ರಾಕ್ಷಸರಾಜನಾದ ಭಂಡನನ್ನು ಹುಡುಕಿದಳು. ||೭೫||

ದಂಡನಾಯಕಿಯು ತನ್ನ ದೇಹಕಾಂತಿಯಿಂದ ಆಕಾಶಪ್ರದೇಶವನ್ನೆಲ್ಲವನ್ನೂ ಬಹಳ ಪ್ರಕಾಶವಾಗಿ ಮಾಡುತ್ತಾ ಆ ಮಹಾಮಾಯೆಯನ್ನು ನಾಶಮಾಡಿ ಆ ರಾಕ್ಷಸನಿರುವ ಕಡೆಗೆ ಬಂದಳು. ||೭೬||

ರಥಸಂಸ್ಥಂ ಶೈಲನಿಭಂ ಸೃಜಂತಂ ಶೈಲವರ್ಷಣಂ ।
ಗದಯಾಽಭ್ಯಾಹನನ್ಮೂರ್ಧ್ನಿ ವಜ್ರಾಽಽಹತ ಇವಾಽದ್ರಿರಾಟ್ ॥೭೭॥

ಪಪಾತ ಮೂರ್ಛಿತೋ ಭೂಮೌ ಸ್ರೋತಃ ಕೃತ(ತ್ರ)ತಟೋಽಯಥಾ ।
ಪುನಃ ಸಾ ಗದಯೈವಾಽಽಶು ರಥಮಶ್ವಾಂಶ್ಚ ಸಾರಥಿಂ ॥೭೮॥

ವಿನಾಶಯದ್ದಂಡನಾಥಾ ಕ್ರೋಧೇನ ಮಹತಾಽಽವೃತಾ ।
ತಾವನ್ಮೂರ್ಛಾವಿನಿರ್ಮುಕ್ತೋ ಗದಾಹಸ್ತೋ ಮಹಾಸುರಃ ॥೭೯॥

ಉತ್ಪಪಾತ ನಭೋ ವೇಗಾದ್ಯೋದ್ಧುಂ ಕಿರಿನಿಭಾನನಾಮ್ ।
ಅಥಾ ಭವನ್ಮಹಾಯುದ್ಧಂ ವಾರಾಹೀ ದೈತ್ಯರಾಜಯೋಃ ॥೮೦॥

ರಥದಲ್ಲಿ ಕುಳಿತು ಪರ್ವತಕ್ಕೆ ಸಮಾನನಾಗಿ ಕಾಣಿಸುತ್ತಾ ಕಲ್ಲುಗಳ ಸುರಿಮಳೆಯನ್ನುಂಟುಮಾಡುತ್ತಿರುವ ಭಂಡರಾಕ್ಷಸನ ತಲೆಗೆ ದಂಡನಾಯಕಿಯು ಗದೆಯಿಂದ ಬಲವಾಗಿ ಹೊಡೆದಳು. ಇದರಿಂದ ಅವನು, ವಜ್ರಾಯುಧದ ಪೆಟ್ಟಿಗೆ ಸಿಕ್ಕಿದ ಪರ್ವತರಾಜನಂತೆ, ಕೆಳಗೆ ಬಿದ್ದನು. ॥೭೭॥

ಕೂಡಲೇ ಭಂಡರಾಕ್ಷಸನು, ಪ್ರವಾಹದಿಂದ ಕುಸಿದುಬೀಳುವ ರಥದಂತೆ, ಮೂರ್ಛೆ ಹೊಂದಿ ಕೆಳಗೆ ಭೂಮಿಯ ಮೇಲೆ ಬಿದ್ದನು. ದಂಡನಾಯಕಿಯು ಪುನಃ ತನ್ನ ಗದೆಯಿಂದ ಅವನ ರಥ, ಕುದುರೆಗಳು, ಸಾರಥಿ ಇವರನ್ನೆಲ್ಲರನ್ನೂ ಶೀಘ್ರವಾಗಿ ನಾಶಮಾಡಿದಳು. ॥೭೮॥

ದಂಡನಾಯಕಿಯು ಅತ್ಯಂತ ಕೋಪದಿಂದ ಕೂಡಿದವಳಾಗಿ ಅವನ್ನೆಲ್ಲವನ್ನೂ ನಾಶಮಾಡಿದಳು. ಅಷ್ಟರೊಳಗಾಗಿಯೇ ಮಹಾರಾಕ್ಷಸನಾದ ಭಂಡನು ಮೂರ್ಛೆಯಿಂದ ತಿಳಿದೆದ್ದು ಗದೆಯನ್ನು ಕೈಗೆ ತೆಗೆದುಕೊಂಡನು. ॥೭೯॥

ಭಂಡರಾಕ್ಷಸನು ಹಂದಿಯಂತೆ ಮುಖವುಳ್ಳ ದಂಡನಾಯಕಿಯ ಮೇಲೆ ಯುದ್ಧಮಾಡುವುದಕ್ಕಾಗಿ ವೇಗವಾಗಿ ಆಕಾಶಕ್ಕೆ ಹಾರಿದನು. ಅನಂತರ ಆ ವಾರಾಹೀ ದೇವಿಗೂ ಮತ್ತು ರಾಕ್ಷಸನಾದ ಭಂಡನಿಗೂ ದೊಡ್ಡ ಯುದ್ಧವು ಸಂಭವಿಸಿತು.॥೮೦॥

ಗದಾಪ್ರಹಾರತುಮುಲಂ ವಜ್ರಪಾತಮಹಾರವಮ್ ।
ಮುಹೂರ್ತಮಾತ್ರಂ ಯುದ್ಧ್ವೈವಂ ಬಲೋತ್ಸಿಕ್ತಂ ಮಹಾಸುರಂ॥೮೧॥

ಮತ್ವಾ ಚಕರ್ಷ ಸೀರೇಣ ಮುಸಲೋದ್ಯನ್ಮಹಾಭುಜಾ ।
ತಾವನ್ಮತ್ವಾ ನಿಜಾತ್ಮಾನಂ ಹತಂ ಮುಸಲ ಘಾತತಃ ॥೮೨॥

ಚಿಂತಯದ್ಭಂಡದೈತ್ಯೇಶಃ ಪುರಾ ಲಕ್ಷ್ಮ್ಯೇ ಪ್ರಭಾಷಿತಮ್ ।
ನೂನಂ ಪ್ರೋಕ್ತಂ ರಮಾದೇವ್ಯಾ ಯತ್ಪುರಾ ನ ತದನ್ಯಥಾ ॥೮೩॥

ಭವೇತ್ ಮುಸಲಘಾತೇನಾಽಮೋಘೇನ ಸ್ಯಾಂ ಕಥಂ ಹತಃ ।
ತ್ರಿಪುರಾ ಸಾ ಮಹಾದೇವೀ ಭಕ್ತವಾಂಛಿತ ಪೂರಣೀ ॥೮೪॥

ಇವರಿಬ್ಬರಿಗೂ ಗದಾಪ್ರಹಾರಗಳಿಂದ ಭಯಂಕರ ಶಬ್ದಗಳನ್ನುಂಟುಮಾಡುತ್ತಿರುವ ಮಹಾಯುದ್ಧವು ಮುಹೂರ್ತಕಾಲ ಸಂಭವಿಸಿತು. ಈ ರೀತಿಯಾಗಿ ದಂಡನಾಯಕಿಯು ಮಹಾರಾಕ್ಷಸನಾದ, ಬಲದಿಂದ ಕೊಬ್ಬಿರುವ, ಭಂಡನೊಂದಿಗೆ ಬಹಳ ದೊಡ್ಡ ಯುದ್ಧವನ್ನು ಮಾಡಿದಳು. ||೮೧||

ಮುಸಲವೆಂಬ ಆಯುಧವನ್ನು ಎತ್ತಿ ಹಿಡಿದಿರುವ ದೊಡ್ಡ ತೋಳುಳ್ಳ ದಂಡನಾಯಕಿಯು ಅವನನ್ನು ಕೊಲ್ಲಲು ಇದೇ ಉಪಾಯವೆಂದು ತಿಳಿದು, ತನ್ನ ನೇಗಿಲಿನ ಆಯುಧದಿಂದ ಅವನನ್ನು ಸೆಳೆಯಲು ಪ್ರಯತ್ನಪಟ್ಟಳು. ಅಷ್ಟರೊಳಗೆ ಭಂಡನು ತಾನು ಮುಸಲಾಯುಧದ ಪೆಟ್ಟಿಗೆ ಸಿಕ್ಕಿ ನಾಶವಾಗಬಹುದೆಂದು ಯೋಚಿಸಿದನು. ||೮೨||

ಆಗ ಅವನು ಹಿಂದೆ ಲಕ್ಷ್ಮಿಯು ಹೇಳಿದ್ದ ಮಾತನ್ನು ನೆನೆದು, “ ನಿಜವಾಗಿಯೂ, ಲಕ್ಷ್ಮಿಯು ಹಿಂದೆ ಹೇಳಿದ ಮಾತು ವ್ಯತ್ಯಾಸವಾಗಲಾರದು ” ಎಂದುಕೊಂಡನು. ||೮೩||

ವ್ಯರ್ಥವಲ್ಲದ ಮುಸಲಾಯುಧವನ್ನು ದಂಡನಾಯಕಿಯು ಪ್ರಯೋಗಿಸಿದರೆ ನಾನು ಸಾಯುವುದು ಖಂಡಿತ. ಆದರೆ ಈರೀತಿಯಲ್ಲಿ ನಾನು ಸಾಯುವುದು ಹೇಗೆ ಸರಿಹೋಗುವುದು ? ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಮಹಾದೇವೀಸ್ವರೂಪಳಾದ ತ್ರಿಪುರಾದೇವಿಯೇ ನನ್ನನ್ನು ಕೊಲ್ಲಲಿ, ಎಂದು ನನಗೆ ಬಹಳವಾಗಿ ಇಷ್ಟವಾಗಿದೆ. ||೮೪||

ಮಾಂ ಹನ್ಯಾತ್ ಸಮರೇ ಸಾಕ್ಷಾದೇತನ್ಮೇಽಭಿಮತಂ ಚಿರಾತ್ ।
ದೈತ್ಯೇ ವಿಚಿಂತಯತ್ಯೇವ ಮಭವನ್ನಾಭಸಂ ವಚಃ ॥೮೫॥

ದಂಡನಾಥೇ ನೈಷ ವಧ್ಯಸ್ತವ ಯುದ್ಧೇ ಕಥಂಚನ ।
ಅಮೋಘೋ ಮುಸಲಸ್ತೇಽಯಂ ಸನ್ನಿವರ್ತಯುವ್ಯೈದ್ರುತಮ್॥೮೬॥

ಶ್ರುತ್ವೇತ್ಥಂ ನಾಭಸವಚಶ್ಚಂಡಿಕಾ ದಂಡನಾಯಿಕಾ ।
ಮೋಚಯತ್ತಂ ಸೀರಗರ್ಭಾನ್ಮತ್ವಾಽವಧ್ಯಂ ಸುರೇಶ್ವರಂ ॥೮೭॥

ಅಥ ಸೋಽಂತರ್ಹಿತೋ ದೈತ್ಯೋ ನಿರ್ಜಿತೋ ದಂಡನಾಥಯಾ ।
ದೈತ್ಯಸೇನಾ ಶಕ್ತಿಗಣೈರ್ಗಾಢವಿದ್ಧಾ ಪಲಾಯಿತಾ ॥೮೮॥

"ನನ್ನನ್ನು ತ್ರಿಪುರಾದೇವಿಯೇ ಕೊಲ್ಲಲಿ ಎಂಬುದು ನನಗೆ ಬಹಳ ಕಾಲದಿಂದಲೂ ಮನಸ್ಸಿನಲ್ಲಿರುವ ಅಭಿಲಾಷೆಯಾಗಿದೆ. ಈರೀತಿಯಾಗಿ ಭಂಡನು ಯೋಚಿಸುತ್ತಿರಲು, ಆಗ ಒಂದು ಆಕಾಶವಾಣಿಯು ಈರೀತಿಯಲ್ಲಿ ಕೇಳಿಸಿತು. ||೮೫||

"ಎಲೌ ದಂಡನಾಯಕಿಯೇ, ನೀನು ಯಾವ ರೀತಿಯಲ್ಲಿಯೂ ಯುದ್ಧದಲ್ಲಿ ಇವನನ್ನು ಕೊಲ್ಲತಕ್ಕದಲ್ಲ. ಆದರೆ ನಿನ್ನ ಅತ್ಯಂತ ಬಲಿಷ್ಠವಾದ ಮುಸಲಾಯುಧವು ವ್ಯರ್ಥವಲ್ಲದ್ದು. ಆದ್ದರಿಂದ ಅದನ್ನು ಶೀಘ್ರವಾಗಿ ಹಿಂತಿರುಗಿಸು" ||೮೬||

ಈರೀತಿಯಲ್ಲಿ ಆಕಾಶವಾಣಿಯನ್ನು ಕೇಳಿ ಉಗ್ರವಾದ ಕೋಪವನ್ನು ತಾಳಿದ್ದ ದಂಡನಾಯಕಿಯು ರಾಕ್ಷಸರಾಜನಾದ ಭಂಡನನ್ನು ತಾನು ಕೊಲ್ಲುವುದು ಅನುಚಿತವೆಂದು ಭಾವಿಸಿ, ಅವನನ್ನು ತನ್ನ ನೇಗಿಲಿನ ಮಧ್ಯಭಾಗದಿಂದ ಬಿಟ್ಟುಬಿಟ್ಟಳು. ||೮೭||

ಅನಂತರ ದಂಡನಾಯಕಿಯಿಂದ ಪರಾಜಯ ಹೊಂದಿದ ಭಂಡರಾಕ್ಷಸನು ಅಂತರ್ಧಾನನಾದನು. ಅವನ ಕಡೆಯ ರಾಕ್ಷಸ ಸೈನ್ಯವು ಶಕ್ತಿ ಸೈನ್ಯದಿಂದ ಬಲವಾದ ಪೆಟ್ಟನ್ನು ತಿಂದು ಪಲಾಯನ ಮಾಡಿತು. ||೮೮||

ದೃಷ್ಟ್ವಾ ಭಗ್ನಾಂ ದೈತ್ಯಸೇನಾಂ ಜಯಭೇರೀ ಮವಾದಯತ್ ।
ಶಕ್ತಯೋ ವಿವಿಧಾಂಶ್ಚಾಪಿ ವಾದ್ಯಾನ್ ಜಯವಿಧೌ ಮತಾನ್ ॥೮೯॥

ಅಥ ದ್ರುತಂ ಪ್ರೇಷಯಿತ್ವಾ ಜಯಾಽಽಖ್ಯಾ ನಾಥದಂಡಿನೀ ।
ಲಲಿತಾಯೈ ಶಕ್ತಿಸೇನಾಂ ಸಮಾವಾಪ್ಯಾಽಭಿತಃ ಸ್ಥಿತಾಮ್ ॥೯೦॥

ಕ್ಷತಾ ಹತಾಃ ಶಕ್ತಯೋ ಯಾ ಅಮೃತೇಶೀ ಚ ತಾ ದ್ರುತಮ್ ।
ಅಜೀವಯದ್ವಿರುಜಯತ್ ತತೋ ಹೃಷ್ಟಾಂ ಚ ತಾಂ ಚಮೂಂ॥೯೧॥

ಸಂನಹ್ಯ ಸ್ವರಥಾಽಽರೂಢಾ ಸಂಪದ್ದೇವ್ಯಾಽನುಸಂಗತಾ ।
ಪುರೋಽವ್ರಜದಶ್ವನಾಥಾ ಸೇನಯಾ ದಂಡನಾಯಿಕಾ ॥೯೨॥

ದಂಡನಾಯಕಿಯು ರಾಕ್ಷಸಸೈನ್ಯವು ಈರೀತಿಯಲ್ಲಿ ನಾಶವಾದದ್ದನ್ನು ಕಂಡು ಜಯಭೇರಿಯನ್ನು ಹೊಡೆಸಿದಳು. ಶಕ್ತಿಗಳೂ ಕೂಡ ಜಯದ ಕಾಲದಲ್ಲಿ ಬಾರಿಸಬೇಕಾದ ಇತರ ಕೆಲವು ವಾದ್ಯಗಳನ್ನೂ ನುಡಿಸಿದರು. ॥೮೯॥

ಅನಂತರ ಜಯಾ ಎಂಬ ಹೆಸರಿನ ದಂಡನಾಯಕಿಯು ಶೀಘ್ರವಾಗಿ ಶಕ್ತಿಗಳ ಸೈನ್ಯವನ್ನು ಎಲ್ಲಾ ಕಡೆಯಲ್ಲಿಯೂ ಸೇರಿಸಿ ಲಲಿತಾದೇವಿಯ ಕಡೆಗೆ ಕಳುಹಿಸಿದಳು. ॥೯೦॥

ಅಮೃತೇಶೀ ಎಂಬ ಶಕ್ತಿಯು ತಮ್ಮ ಶಕ್ತಿಗಳ ಗುಂಪಿನಲ್ಲಿ ಕ್ಷಯಿಸಿರುವ ನಾಶವಾಗಿರುವ ಶಕ್ತಿಗಳನ್ನೂ ಪುನಃ ಬದುಕಿಸಿ, ಅವರಿಗೆ ಯಾವ ವಿಧವಾದ ವ್ಯಾಧಿಯೂ ಇಲ್ಲದಂತೆ ಮಾಡಿದಳು. ಅನಂತರ ಶಕ್ತಿಸೈನ್ಯವು ಸಂತೋಷದಿಂದ ನಲಿಯಿತು. ॥೯೧॥

ಈ ಸೈನ್ಯವನ್ನೆಲ್ಲವನ್ನೂ ಸಿದ್ಧಗೊಳಿಸಿ ಅಮೃತೇಶೀ ಎಂಬ ಶಕ್ತಿಯು ತನ್ನ ರಥದ ಮೇಲೇರಿ ಸಂಪನ್ನಾಥಾ ಎಂಬ ಶಕ್ತಿಯೊಡನೆ ಸೇರಿದಳು. ದಂಡನಾಯಕಿಯು ಮುಂದುಗಡೆಯಲ್ಲಿಯೂ, ಅಶ್ವನಾಥಾ ಎಂಬುವಳು ಹಿಂದುಗಡೆಯಲ್ಲಿಯೂ, ತಮ್ಮ ತಮ್ಮ ಸೈನ್ಯದೊಡನೆ ಲಲಿತಾದೇವಿಯನ್ನು ಸಮೀಪಿಸಿದರು. ॥೯೨॥

ದ್ರಷ್ಟುಂ ತಾಂ ಲಲಿತಾದೇವೀಂ ಯಯೌ ತ್ವರಿತತರಂ ಮುದಾ।
ಗಜವಾದಿತ್ರ ಶಬ್ದೌಘೈಃ ಖ್ಯಾಪಯಂತೀ ಸ್ವಕಂ ಜಯಂ ॥೯೩॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಭಂಡಾಸುರಪರಾಭವೇ
ಪಂಚಷಷ್ಟಿತಮೋಽಧ್ಯಾಯಃ

ಇವರಿಬ್ಬರೂ ಲಲಿತಾದೇವಿಯನ್ನು ದರ್ಶನಮಾಡಲು ಬಹಳ ಸಂತೋಷದಿಂದ ಶೀಘ್ರವಾಗಿ ಆನೆಗಳು ವಾದ್ಯಗಳು ಮುಂತಾದವುಗಳ ಅನೇಕ ವಿಧವಾದ ಶಬ್ದಗಳಿಂದ ತಾವು ಗಳಿಸಿದ ಜಯವನ್ನು ಸೂಚಿಸುತ್ತಾ ಆಕೆಯ ಬಳಿಗೆ ಹೋದರು. ॥೯೩॥

ಎಂಬಲ್ಲಿಗೆ ಇತಿಹಾಸ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ
ಲಲಿತಾಮಾಹಾತ್ಮ್ಯಖಂಡದಲ್ಲಿ ಭಂಡರಾಕ್ಷಸನ ಪರಾಜಯದ ಪ್ರಕರಣದಲ್ಲಿ
ಅರವತ್ತೈದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಷಟ್ಷಷ್ಟಿತಮೋಽಧ್ಯಾಯಃ ||

ಅರವತ್ತಾರನೆಯ ಅಧ್ಯಾಯವು

ಅಥ ಗತ್ವಾ ದಂಡನಾಥಾ ಶಕ್ತಿಭಿರ್ವಿವಿಧೈರ್ಯುತಾ ।
ಆಸಾದ್ಯ ಮಂತ್ರಿಣೀಂ ದೇವೀಂ ಪ್ರಣಮ್ಯ ಜಯಮಾದಿಶತ್ ॥೧॥

ಸಾಽಪಿ ಪ್ರೀತಾ ಪರಿಷ್ವಂಗಂ ತಸ್ಯೈ ಮಾನೇನ ಸಂದದೌ ।
ಅಥ ಗತ್ವಾ ತಯಾ ಸಾರ್ಧಂ ಮಹಾರಾಜ್ಞೀಂ ಪ್ರಣಮ್ಯ ಚ ॥೨॥

ಜಯವೃತ್ತಂ ಸಮಾಚಖ್ಯೌ ಶಕ್ತಿಚಕ್ರಪ್ರಹರ್ಷದಮ್ ।
ಭಂಡಾಸುರೋಽಪಿ ದೈತ್ಯಾನಾಂ ಸೇನಯಾ ನಷ್ಟಶೇಷಯಾ ॥೩॥

ಅನಂತರ ದಂಡನಾಯಕಿಯು ಅನೇಕ ವಿಧರಾದ ಶಕ್ತಿಗಳೊಡನೆ ಕೂಡಿದವಳಾಗಿ ಮಂತ್ರಿಣೀದೇವಿಯನ್ನು ಸಮೀಪಿಸಿ ಆಕೆಗೆ ನಮಸ್ಕರಿಸಿ ತಮಗುಂಟಾದ ಜಯವನ್ನು ಬಿನ್ನೈಸಿದಳು. ||೧||

ಆಕೆಯೂ ಕೂಡ ಸಂತುಷ್ಟಳಾಗಿ ಅವಳನ್ನು ಆಲಂಗಿಸಿಕೊಂಡು ಆವಳಿಗೆ ಯೋಗ್ಯವಾದ ಬಹುಮಾನವನ್ನು ಮಾಡುವುದರಿಂದ ಗೌರವಿಸಿದಳು. ಅನಂತರ ಮಂತ್ರಿಣೀದೇವಿಯು ಅವಳೊಂದಿಗೆ ಮಹಾರಾಣಿಯಾದ ದೇವಿಯ ಹತ್ತಿರಕ್ಕೆ ಹೋಗಿ ನಮಸ್ಕರಿಸಿದಳು. ||೨||

ಶಕ್ತಿಗಳ ಗುಂಪಿಗೆ ಹರ್ಷವನ್ನುಂಟುಮಾಡುವ ಈ ಜಯದ ಸಮಾಚಾರವನ್ನು ಮಂತ್ರಿಣೀದೇವಿಯು ತ್ರಿಪುರಾದೇವಿಗೆ ವಿಜ್ಞಾಪನೆ ಮಾಡಿಕೊಂಡಳು. ಅನಂತರ ಇತ್ತಕಡೆ ಭಂಡರಾಕ್ಷಸನೂ ಕೂಡ ನಾಶವಾಗಿ ಉಳಿದಿರುವ ತನ್ನ ಸೈನ್ಯದೊಡನೆ ಹೊರಗಡೆ ದುಃಖವನ್ನು ತೋರಿಸುವ ಭಾವದಿಂದ ಹಿಂತಿರುಗಿದನು. ||೩||

ಯಯೌ ಬಹಿಃ ಖಿನ್ನತಯಾ ಹೃಷ್ಟಶ್ಚಾಂತರಭೀಪ್ಸಿತಾತ್ ।
ಶೂನ್ಯಕಂ ನಗರಂ ಪ್ರಾಪ್ಯ ಜಗಾಮಾಂತಃ ಪುರಂ ಸ್ವಕಮ್ ॥೪॥

ತತಃ ಪ್ರಿಯಾಃ ಸಮಮೇತ್ಯ ಭಂಡಂ ಸಂಮೋಹಿನೀಮುಖಾಃ ।
ಬ್ರೂಯುರ್ನಾಥ ಕಿಮದ್ಯ ತ್ವಾಂ ಪಶ್ಯಾಮಃ ಕೃಪಣಂ ಯಥಾ ॥೫॥

ನಾರದೇನ ಪುರೋಕ್ತಂ ಯತ್ತದನ್ಯಥಯಿತಂ ಕಥಂ ।
ಪ್ರಾಹ ಪತ್ನೀವಚಃ ಶ್ರುತ್ವಾ ಜ್ಞಾತ್ವಾ ಸ್ವಾಭಿಮತಂ ಶುಭಮ್ ॥೬॥

ನಾರದೋಕ್ತ್ಯಾಽಭಿವಿದಿತಮಾಭಿಃ ಸರ್ವಾತ್ಮನೇತ್ಯಥ ।
ಅಭವತ್ಪ್ರಕಟಸ್ತಾಸು ಪ್ರಿಯಾಃ ಶೃಣುತ ಮೇ ವಚಃ ॥೭॥

ಕಥಮಿಷ್ಟಾರ್ಥಲಾಭೇಷು ಖಿನ್ನಃ ಸ್ಯಾಮತಿ ಮುಗ್ಧವತ್ ।
ವಿದಿತಂ ತೇ ನಾರದೋಕ್ತೇಃ ಸರ್ವಂ ಮೇ ಸಮಭೀಪ್ಸಿತಂ ॥೮॥

ಭಂಡರಾಕ್ಷಸನು ಹೊರಗಡೆ ದುಃಖವನ್ನು ತೋರಿಸುತ್ತಾ ತನ್ನ ಇಷ್ಟಾರ್ಥವು ನೆರವೇರಿದ್ದರಿಂದ ಒಳಗಡೆ ಸಂತೋಷಪಟ್ಟು ಶೂನ್ಯಕ ಎಂಬ ತನ್ನ ಪಟ್ಟಣಕ್ಕೆ ಬಂದು ಅಂತಃಪುರಕ್ಕೆ ಹೋದನು. ॥೪॥

ಅನಂತರ ಸಂಮೋಹಿನೀ ಮುಂತಾದ ಭಂಡರಾಕ್ಷಸನ ಪತ್ನಿಯರೂ ಏಕ ಕಾಲದಲ್ಲಿ ಅವನನ್ನು ಸಮೀಪಿಸಿ "ಓ ನಾಥರೇ, ಈದಿನ ತಾವು ದೀನರಂತೆ ಕಾಣಲು ಕಾರಣವೇನು?" ಎಂದು ಪ್ರಶ್ನಿಸಿದರು. ॥೫॥

"ಹಿಂದೆ ನಾರದರು ಹೇಳಿದ್ದುದು ವ್ಯತ್ಯಾಸವಾದದ್ದು ಹೇಗೆ?" ಎಂದು ಪತ್ನಿಯರು ಹೇಳಿದ ಮಾತನ್ನು ಕೇಳಿ ಮಂಗಳಕರವಾದ ತನ್ನ ಅಭಿಲಾಷೆಯನ್ನು ಮನಸ್ಸಿನಲ್ಲಿ ಯೋಚಿಸಿ ಭಂಡರಾಕ್ಷಸನು ಅವರನ್ನು ಕುರಿತು ಈ ರೀತಿಯಲ್ಲಿ ಹೇಳಿದನು. ॥೬॥

ನಾರದರು ಹೇಳಿದ ಅಭಿಪ್ರಾಯವನ್ನು ನನ್ನ ಪ್ರಿಯರಾದ ಇವರು ಚೆನ್ನಾಗಿ ತಿಳಿದಿದ್ದಾರೆ. ಎಂದು ಮುಂದಟ್ಟುಮಾಡಿಕೊಂಡು ಭಂಡರಾಕ್ಷಸನು "ಎಲೌ ಪತ್ನಿಯರೇ, ನನ್ನ ಮಾತನ್ನು ಕೇಳಿರಿ" ಎಂದನು. ॥೭॥

ಎಲೌ ಪತ್ನಿಯರೇ, ಇಷ್ಟಾರ್ಥ ಲಾಭಗಳ ವಿಷಯದಲ್ಲಿ ನಾನು ಅತ್ಯಂತ ಮೂಢನಂತೆ ಏಕೆ ವರ್ತಿಸಲಿ? ನಿಮಗೆಲ್ಲರಿಗೂ ನಾರದರು ಹೇಳಿದ ಸಕಲ ವಿಷಯಗಳೂ ನನಗೆ ತುಂಬ ಇಷ್ಟವೇ ಆಗಿವೆ. ಎಂದು ತಿಳಿದೇ ಇದೆ. ॥೮॥

ಅಚಿರಾದೇವ ತಲ್ಲೋಕಂ ಪ್ರಾಪ್ಸ್ಯಾಮಿ ಪರಯಾ ಹತಃ ।
ಕಿಂತು ದೈತ್ಯೇಷು ಸ್ವರೂಪಂ ನಿಗೂಹಿತುಮಿತಿ ಸ್ಥಿತಿಃ ॥೯॥

ಅಥ ಪ್ರಾಹುಃ ಪುನರ್ದಾರಾ ನಾಥ ಬ್ರೂಮೋಽಭಿವಾಂಛಿತಮ್ ।
ಯದಿ ತೇ ನಿಶ್ಚಯೋ ಯುದ್ಧೇ ಹತಾ ಯಾಸ್ಯಾಮಃ ತತ್ ಸ್ಥಿತಮ್ ॥೧೦॥

ಇತಿ ಚೇದ್ವೈತ್ವದೇಕಾಂತಾ ನಯಾಸ್ಮಾನ್ ಸಹ ಭಾವತಃ ।
ತತ್ತೇ ಮಾರ್ಗಃ ಪ್ರವಿದಿತೋ ವದಾಸ್ಮಾಕಂ ಕಥಂ ಗತಿಃ ॥೧೧॥

ಭಕ್ತಾ ಹಾತುಮಯೋಗ್ಯಾಸ್ತೇ ವಯಂ ಛಾಯೇವ ಸಂಗತಾಃ ।
ಶ್ರುತ್ವಾ ಪ್ರೋಕ್ತಂ ಪ್ರಿಯಾಭಿಸ್ತತ್ಪ್ರಾಹ ಹರ್ಷಸುನಿರ್ಭರಃ ॥೧೨॥

ಪರಾಶಕ್ತಿಸ್ವರೂಪಳಾದ ದೇವಿಯಿಂದ ಸಾವನ್ನು ಹೊಂದಿ ನಾನು ಆಕೆಯ ಲೋಕಕ್ಕೆ ಶೀಘ್ರದಲ್ಲಿಯೇ ಹೋಗುವೆನು. ಆದರೆ ಈ ವಿಷಯವನ್ನು ರಾಕ್ಷಸರ ಮುಂದೆ ತಿಳಿಸದೆ ಮುಚ್ಚಲು ಈ ರೀತಿಯಲ್ಲಿ ಕಾಣಿಸಿಕೊಂಡಿದ್ದೇನೆ. ॥೯॥

ಅನಂತರ ಅವನ ಪತ್ನಿಯರು ಪುನಃ ಭಂಡಾಸುರನನ್ನು ಕುರಿತು "ಓ ಪ್ರಿಯರೇ, ನಮ್ಮ ಇಷ್ಟವನ್ನು ನಾವು ತೋರಿಸುವೆವು. ನೀವು ಆಕೆಯೊಂದಿಗೆ ಯುದ್ಧ ಮಾಡುವುದು ನಿಶ್ಚಯವಾಗಿದ್ದರೆ ನಾವೂ ಆಕೆಯ ಕೈಲಿ ಸಾಯಲು ಸಿದ್ಧರಾಗಿರುವೆವು" ಎಂದರು. ॥೧೦॥

ಹಾಗಿರುವುದಾದರೆ ನಿಮ್ಮ ಅತ್ಯಂತ ಪ್ರಿಯರಾದ ನಮ್ಮನ್ನೂ ಜೊತೆಯಲ್ಲಿಯೇ ಕರೆದೊಯ್ಯಿರಿ. ಈ ವಿಚಾರದಲ್ಲಿ ನಮ್ಮ ಅಭಿಪ್ರಾಯವನ್ನೂ ತಿಳಿಸಿದ್ದೇವೆ. ಹಾಗಲ್ಲದಿದ್ದರೆ ನಮ್ಮ ಗತಿಯೇನು ? ಎಂಬುದನ್ನು ತಾವೇ ಹೇಳಿರಿ. ॥೧೧॥

"ನಿಮ್ಮ ಭಕ್ತರಾದ ನಮ್ಮನ್ನು ಬಿಡುವುದು ಯುಕ್ತವಲ್ಲ. ನಾವು ತಮ್ಮನ್ನು ನೆರಳಿನಂತೆ ಆಶ್ರಯಿಸಿದ್ದೇವೆ." ಎಂದು ಹೇಳಿದ ತನ್ನ ಪತ್ನಿಯರ ಮಾತನ್ನು ಕೇಳಿ ಭಂಡರಾಕ್ಷಸನು ಸಂತೋಷದಿಂದ ತುಂಬಿದ ಮನಸ್ಸುಳ್ಳವನಾಗಿ ಈರೀತಿಯಲ್ಲಿ ಹೇಳಿದನು. ॥೧೨॥

ಶೃಣುಧ್ವಂ ಮದ್ವಚಃ ಪಥ್ಯಂ ಮಯ್ಯೈತಚ್ಚಿಂತಿತಂ ಪುರಾ ।
ನ ಭವೇದನ್ಯಥಾ ಹ್ಯೇತತ್ಸರ್ವಥಾ ಕಾರಣಂ ಬ್ರುವೇ ॥೧೩॥

ರಮಾದೇವ್ಯಾಃ ಪ್ರಸಾದೇನ ಸ್ಮರಾಮಿ ಪ್ರಾಕ್ಸಮುದ್ಭವಂ ।
ನೂನಂ ಸಾ ನೋಽಬ್ರವೀದೇವಂ ತ್ರಿಪುರಾಽಸ್ಮತ್ಸಮಾಶ್ರಯಾ ॥೧೪॥

ಸಂಶ್ರಿತಾನಾಂ ಸುಭಕ್ತಾನಾಂ ವಾಂಛಿತಂ ಸಾ ಹಿ ಸರ್ವಥಾ ।
ದಿಶತ್ಯಸಾಧ್ಯಮಪಿ ಚ ತತೋ ನಃ ಸ್ಯಾತ್ಸಮೀಹಿತಮ್ ॥೧೫॥

ಮಯಾಽಭಿವಾಂಛಿತಂ ಯಾಮಿ ಭವತೀಭಿಃ ಸಹೇತಿ ವೈ ।
ತಲ್ಲೋಕಂ ತದ್ಭವೇದೇವಂ ಸರ್ವಥಾಽಪಿ ನ ಸಂಶಯಃ ॥೧೬॥

ಅಥಾಪಿ ಮೇ ಸಮೀಹಾಽಸ್ಯಾ(ಽಪ್ಯಸ್ತಿ) ಪುತ್ರಾದಿಭಿಃ ಸಹ ।
ಗಂತವ್ಯಮಿತಿ ತತ್ರಾಪಿ ಭವೇದೇವ ತಥಾಽಪ್ಯಹಂ ॥೧೭॥

ಎಲೌ ಪತ್ನಿಯರೇ, ನನ್ನ ಸತ್ಯವಾದ ಈ ಮಾತನ್ನು ಕೇಳಿರಿ. ನಾನು ಈ ವಿಷಯವನ್ನು ಹಿಂದೆಯೇ ಯೋಚಿಸಿದ್ದೆನು. ಈ ವಿಚಾರವು ವ್ಯತ್ಯಾಸವಾಗಲು ಸಾಧ್ಯವೇ ಇಲ್ಲ. ಇದಕ್ಕೆ ಕಾರಣವನ್ನೂ ಹೇಳುವೆನು. ಕೇಳಿರಿ. ॥೧೩॥

ಲಕ್ಷ್ಮೀದೇವಿಯ ಅನುಗ್ರಹದಿಂದ ನಾನು ಹಿಂದಿನ ಜನ್ಮದ ವಿಷಯವನ್ನು ಜ್ಞಾಪಿಸಿಕೊಳ್ಳಬಲ್ಲೆನು. ಆಕೆಯೇ ಶ್ರೀತ್ರಿಪುರಾದೇವಿಯ ಆಶ್ರಯವು ನಮಗೆಲ್ಲರಿಗೂ ಆಕೆಯ ಕೃಪೆಯಿಂದ ಸಿಕ್ಕುವುದೆಂದು ನಿಜವಾಗಿಯೂ ಹೇಳಿದಳು. ॥೧೪॥

ಆಕೆಯನ್ನು ಆಶ್ರಯಿಸಿದ ಶ್ರೇಷ್ಠಭಕ್ತರಿಗೆ ಅಸಾಧ್ಯವಾದ ಇಷ್ಟಾರ್ಥಗಳನ್ನೂ ಸಹ ಆಕೆಯು ನೀಡಬಲ್ಲಳು. ಆದ್ದರಿಂದ ನಮ್ಮ ಎಲ್ಲರ ಇಷ್ಟಾರ್ಥಗಳನ್ನೂ ಕೃಪೆಯಿಟ್ಟು ನೆರವೇರಿಸುವಳು. ॥೧೫॥

ನಾನು ನಿಮ್ಮೆಲ್ಲರ ಜೊತೆಯಲ್ಲಿಯೇ ಆಕೆಯ ಲೋಕಕ್ಕೆ ಹೋಗಬೇಕು. ಎಂದು ಆಸೆಯಿದೆ. ಆದ್ದರಿಂದ ಆಕೆಯ ಲೋಕವು ನಮಗೆಲ್ಲರಿಗೂ ಸಿಕ್ಕುವುದೆಂಬುದರಲ್ಲಿ ಸಂದೇಹವೇ ಇಲ್ಲ. ॥೧೬॥

ಆದಾಗ್ಯೂ ನನಗೆ ಬೇರೊಂದು ಆಸೆಯೂ ಇದೆ. ಅದೇನೆಂದರೆ ನಾನು ನನ್ನ ಮಕ್ಕಳು ಮುಂತಾದವರ ಜೊತೆಯಲ್ಲಿಯೂ ಹೋಗಬೇಕೆಂಬುದೇ ಆಗಿದೆ. ಆದರೂ ನಾನು ಈ ವಿಷಯದಲ್ಲಿ ಸ್ವಲ್ಪ ಯೋಚಿಸುತ್ತಿದ್ದೇನೆ. ॥೧೭॥

ಚಿಂತಯಾಮ್ಯಕ್ರಮೇಣೈವ ಭವೇತ್ತಸ್ಯಾಃ ಕೃಪಾವಶಾತ್ ।
ನೂನಂ ಲೋಕೇ ಸುಹೃದ್ಬಂಧುವೈಧುರ್ಯಂ ಜಾತು ನೈ ಕ್ಷಣಂ ॥೧೮॥

ಸೋಢುಂ ನ ಯೋಗ್ಯಂ ನೈ ಯತ್ರ ತ್ರುಟಿಃ ಕಲ್ಪಗಣಾಯತೇ ।
ಏತಾವತ್ಪ್ರಾರ್ಥ್ಯತೇ ನೂನಂ ನ ಭವೇತ್ಸ ಕ್ಷಣಃ ಕ್ವಚಿತ್ ॥೧೯॥

ತಸ್ಮಾದ್ಯುಷ್ಮಾಭಿರಪ್ಯೇತತ್ ಪ್ರಾರ್ಥನೀಯ ಮಹರ್ನಿಶಂ ।
ಸಾ ಸಾಧಯತಿ ಭಕ್ತಾನಾಮಸಾಧ್ಯಮಪಿ ವಾಂಛಿತಂ ॥೨೦॥

ಏತದನ್ಯೈರ್ನ ವಿಜ್ಞೇಯ ಮಿತ್ಯಹಂ ಶುಚ್ಯವಸ್ಥಿತಃ ।
ಶೋಕಂ ಜಹತ ರಾಜ್ಞ್ಯೋಽತ್ರ ಪ್ರಾಪ್ತೋಽಭ್ಯುದಯ ಉಚ್ಛ್ರಿತಃ ॥೨೧॥

ಇದೊಂದು ವಿಷಯವನ್ನು ಮಾತ್ರ ನಾನು ಸ್ವಲ್ಪ ಯೋಚಿಸುತ್ತಿದ್ದೇನೆ. ಆದರೆ ಆಕೆಯ ಕೃಪೆಯಿಂದ ಅಕ್ರಮವಾಗಿಯಾದರೂ ನಮ್ಮ ಇಷ್ಟಾರ್ಥವು ನೆರವೇರುವುದರಲ್ಲಿ ಯಾವ ಸಂದೇಹವೂ ಇಲ್ಲ. ನನಗೆ ಸ್ನೇಹಿತರು, ನೆಂಟರು ಮುಂತಾದವರನ್ನು ಬಿಟ್ಟು ಒಂದು ಕ್ಷಣಕಾಲವೂ ಯಾವಲೋಕದಲ್ಲಿಯೂ ಜೀವಿಸಲು ಸಾಧ್ಯವಿಲ್ಲ. ॥೧೮॥

ನನ್ನ ಬಂಧುಗಳು ಮಿತ್ರರು ಮುಂತಾದವರುಗಳಿಲ್ಲದೆ ನನಗೆ ಒಂದು ಕ್ಷಣಕಾಲ ಕಳೆಯುವುದು ಕೋಟ್ಯಾಂತರ ಕಲ್ಪಕಾಲವನ್ನು ಕಳೆದಂತೆ ಬಹಳ ದುಃಖಕರವಾಗುವುದು. ಅದಕ್ಕಾಗಿ ನಾನು ಆಕೆಯನ್ನು ಕುರಿತು ನಾನು ನನಗೆಪ್ರಿಯರಾದ ಜನರ ವಿಯೋಗವನ್ನು ಕ್ಷಣಕಾಲವೂ ಅನುಭವಿಸದಂತಾಗಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ॥೧೯॥

ಆದ್ದರಿಂದ ನೀವುಗಳೂ ಕೂಡ ಹಗಲಿರಳೂ ಆಕೆಯನ್ನು ಕುರಿತು ಈ ವಿಷಯಕ್ಕಾಗಿಯೇ ಪ್ರಾರ್ಥಿಸಬೇಕು. ಆಕೆಯು ಭಕ್ತರಿಗೆ ಅಸಾಧ್ಯವಾದ ಇಷ್ಟಾರ್ಥಗಳನ್ನೂ ಸಾಧಿಸಿಕೊಡಬಲ್ಲಳು. ॥೨೦॥

ಈ ವಿಷಯವನ್ನು ಇತರರು ತಿಳಿಯಬಾರದು. ಎಂದು ನಾನು ಅಂತರಂಗದಲ್ಲಿ ಯೋಚಿಸಿ ಪರಿಶುದ್ಧವಾದ ಮನಸ್ಸಿನಿಂದಿದ್ದೇನೆ. ಎಲೌ ರಾಣಿಯರೇ, ನೀವೂ ಕೂಡ ಶೋಕವನ್ನು ಬಿಟ್ಟುಬಿಡಿ. ಏಕೆಂದರೆ ನಮಗೆ ಶ್ರೇಯಸ್ಸು ಸನ್ನಿಹಿತವಾಗಿದೆ. ॥೨೧॥

ಇತ್ಯುಕ್ತ್ವಾಽಸ್ತಂಗತೇ ಸೂರ್ಯೇ ವಿವೇಶ ನೃಪತಿಃ ಸಭಾಮ್ ।
ಅಥಾಽಗತಾ ವಿಶುಕ್ರಾಽಽದ್ಯಾ ಭ್ರಾತರೋ ಮಂತ್ರಿಣಸ್ತಥಾ ॥೨೨॥

ಪುತ್ರಾ ಭೃತ್ಯಾಃ ಸಭಾಸ್ತಾರಾ ಸಭಾಮಧ್ಯೇಽತಿಭಾಸ್ವರೇ ।
ಪ್ರಣಮ್ಯಾಽಸುರಭೂಪಾಲಂ ವಿವಿಶುಃ ಸ್ವಸ್ವವಿಷ್ಟರೇ ॥೨೩॥

ವಿಶುಕ್ರಃ ಪ್ರೇಕ್ಷ್ಯ ರಾಜಾನಂ ಶೋಚಂತಮಿವ ಸಂಸ್ಥಿತಮ್ ।
ಕೃತಾಂಜಲಿಃ ಪ್ರಣಮ್ಯಾಽಹ ವರ್ಧಯಿತ್ವಾಽದ್ಭುತಂ ವಚಃ ॥೨೪॥

ಶ್ರೀದೇವ್ಯಾ ಭಂಡದೈತ್ಯೇಶ ವಾಂಛಿತಾರ್ಥ ಸಮೀಹಯಾ ।
ನಾಶಿತಾಽಖಿಲದೈತ್ಯಾನಾಂ ಬುದ್ಧಿರ್ನೀತಿ ಸಮಾನುಗಾ ॥೨೫॥

ಯೋಽತಿಬುದ್ಧಿಮತಾಂ ಶ್ರೇಷ್ಠೋ ವಿಚಾರೇ ಶುಕ್ರಸಮ್ಮತಃ ।
ವಿಶುಕ್ರಃ ಸೋಽಪಿ ವಿಮತಂ ಪ್ರಾಹ ಸ್ವಾರ್ಥ ವಿಪರ್ಯಯಮ್॥೨೬॥

ಈರೀತಿಯಲ್ಲಿ ಅವರಿಗೆ ಹೇಳಿ, ಸೂರ್ಯನು ಮುಳುಗುತ್ತಿರಲು ಭಂಡರಾಕ್ಷಸನು ತನ್ನ ದೊಡ್ಡ ಸಭೆಯನ್ನು ಪ್ರವೇಶಿಸಿದನು. ಅನಂತರ ವಿಶುಕ್ರನೇ ಮೊದಲಾದ ತಮ್ಮಂದಿರು ಮತ್ತು ಮಂತ್ರಿಗಳೂ ಕೂಡ ಅಲ್ಲಿಗೆ ಬಂದರು. ||೨೨||

ಮಕ್ಕಳು, ಸೇವಕರು, ಸಭೆಯ ನಕ್ಷತ್ರಗಳಂತಿರುವ ಅಧಿಕಾರಿಗಳೂ, ಬಹಳ ಪ್ರಕಾಶಮಾನವಾದ ಸಭಾಮಧ್ಯಕ್ಕೆ ಬಂದು, ರಾಕ್ಷಸರಾಜನಾದ ಭಂಡರಾಕ್ಷಸನಿಗೆ ನಮಸ್ಕರಿಸಿ, ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ||೨೩||

ರಾಕ್ಷಸರಾಜನಾದ ಭಂಡನು ದುಃಖಪಡುತ್ತಿರುವಂತೆ ಕಾಣುತ್ತಿದ್ದದನ್ನು ವಿಶುಕ್ರನು ನೋಡಿ, ಆತನಿಗೆ ನಮಸ್ಕರಿಸಿ, ಜಯಕಾರವನ್ನು ಮಾಡಿ, ಕೈಜೋಡಿಸಿಕೊಂಡು ಆಶ್ಚರ್ಯಕರವಾದ ಮಾತನ್ನು ಬಿನ್ನೈಸಿಕೊಂಡನು. ||೨೪||

ಭಂಡರಾಕ್ಷಸನ ಇಷ್ಟಾರ್ಥವು ಸಿದ್ಧಿಸುವುದಕ್ಕೋಸ್ಕರ ಶ್ರೀ ದೇವಿಯು ಅನುಸರಿಸಿದ ಸಕಲ ರಾಕ್ಷಸರನ್ನೂ ನಾಶಮಾಡುವ, ಈರೀತಿಯಾದ ವರ್ತನೆಯು ನೀತಿಯುಕ್ತವಲ್ಲವೆಂದು ವಿಜ್ಞಾಪಿಸಿದನು. ||೨೫||

ರಾಜನೀತಿಯ ವಿಷಯದಲ್ಲಿ ಶುಕ್ರಾಚಾರ್ಯನ ಮಾರ್ಗವನ್ನು ಚೆನ್ನಾಗಿ ಅರಿತಿರುವ ಅತ್ಯಂತ ಬುದ್ಧಿವಂತನಾದ ವಿಶುಕ್ರನೂ ಕೂಡ ತನ್ನ ಇಷ್ಟಕ್ಕೆ ವಿರುದ್ಧವಾದ ಅಭಿಪ್ರಾಯವನ್ನೇ ಆ ಸಮಯದಲ್ಲಿ ಕೊಟ್ಟನು. ||೨೬||

ಅಗಸ್ತ್ಯೈ ತಾವ ದೇವೇಽಹ ಕೃತ್ಯಂ ಕಾಲಸ್ಯ ಭಾವಿತಮ್ ।
ಭಾವ್ಯರ್ಥಸ್ಯಾನುರೋಧೇನ ಬುದ್ಧಿಮುನ್ಮೇಷಯತ್ಯಲಂ ॥೨೭॥

ಮಹಾರಾಜ ಲಕ್ಷ್ಯಸೇ ಮೇ ಶೋಚನ್ನಿವ ಸಭಾಸ್ಥಿತಃ ।
ಜೀವತ್ಸ್ವಸ್ಮಾಸು ದೈತ್ಯೇಷು ಪಶ್ಯಾಮ್ಯೇತದಸಾಂಪ್ರತಮ್ ॥೨೮॥

ಇತ್ಯುಕ್ತಃ ಪುನರೂಚೇ ಸ ದೈತ್ಯೇಶೋ ದೈತ್ಯಮಂಡಲೇ ।
ವಿಶುಕ್ರ ಕಿಂ ವದಾಮ್ಯದ್ಯ ಕಾಲಸ್ಯೈವಂ ವಿಪರ್ಯಯೇ ॥೨೯॥

ಯೋಽಹಂ ಪಂಚೋತ್ತರಶತ ಬ್ರಂಹಾಂಡಾನಾಂ ಪ್ರಕಾಶಕಃ ।
ಯಸ್ಯ ಯುದ್ಧೇ ವಿಷ್ಣುಮುಖಾ ಭೂಯೋ ಜಾತಾಃ ಪರಾಙ್ಮುಖಾಃ ॥೩೦॥

ಯಸ್ಯ ನಾಮ್ನಾಽಪಿ ವೃತ್ರಘ್ನೋ ನಿದ್ರಾಮುಪೈತಿ ನೋ ಕ್ವಚಿತ್ ।
ಸೋಽಪ್ಯಾಽಹಮಬಲಾಸಂಘೈರ್ವ್ಯರ್ಥಯುದ್ಧೇ ಕದರ್ಥಿತಃ ॥೩೧॥

ಓ ಅಗಸ್ತ್ಯಋಷಿಯೇ, (?) ವಿಶುಕ್ರನೂ ಕೂಡ ಕಾಲವ್ಯತ್ಯಾಸದಿಂದ ಈ ಅಭಿಪ್ರಾಯಕ್ಕೆ ಅನುಸಾರವಾಗಿ ವಿರುದ್ಧ ಕಾರ್ಯವನ್ನೇ ತಿಳಿಸಿದನು. ಏಕೆಂದರೆ ಮುಂದೆ ನಡೆಯುವ ದುಷ್ಪರಿಣಾಮಕ್ಕೆ ಅನುಸಾರವಾಗಿಯೇ ಬುದ್ಧಿಯುಂಟಾಗುತ್ತದೆಯಷ್ಟೆ? ॥೨೭॥

ಓ ಮಹಾರಾಜರೇ, ಸಭೆಯಲ್ಲಿ ಕುಳಿತಿರುವ ತಾವು ದುಃಖಪಡುವರಂತೆ ಕಾಣುತ್ತಿದ್ದೀರಿ. ರಾಕ್ಷಸರಾದ ನಾವೆಲ್ಲರೂ ಬದುಕಿರುವಾಗ ತಾವು ಹೀಗೆ ಶೋಕಿಸುವುದು ಉಚಿತವಲ್ಲವೆಂದು ನನಗೆ ತೋರುತ್ತದೆ. ॥೨೮॥

ವಿಶುಕ್ರರಾಕ್ಷಸನು ಈರೀತಿಯಲ್ಲಿ ಹೇಳಿದ್ದನ್ನು ಕೇಳಿ ರಾಕ್ಷಸರ ಸಭೆಯಲ್ಲಿ ಮಂಡಿಸಿದ್ದ ರಾಕ್ಷಸರಾಜನಾದ ಭಂಡಾಸುರನು ಅವನನ್ನು ಕುರಿತು “ಎಲೈ ವಿಶುಕ್ರನೇ, ಕಾಲವು ವ್ಯತ್ಯಾಸವಾಗಿರುವಾಗ ನಾನು ಈಗ ಏನನ್ನು ಹೇಳಲಿ?” ಎಂದನು. ॥೨೯॥

ನಾನು ನೂರೈದು ಬ್ರಹ್ಮಾಂಡಗಳನ್ನು ಆಳುವ ದೊರೆಯೆಂದೂ, ಯುದ್ಧದಲ್ಲಿ ನನ್ನಿಂದ ಸೋತು ವಿಷ್ಣುವೇ ಮೊದಲಾದವರೂ ಹಿಂತಿರುಗಿದರೆಂದೂ, ನಿನಗೆ ಗೊತ್ತಾಗಿದೆ. ॥೩೦॥

ನನ್ನ ಹೆಸರನ್ನು ಎಲ್ಲಿಯಾದರೂ ಕೇಳಿದರೂ ಸಾಕು. ವೃತ್ರನನ್ನು ಕೊಂದ ಇಂದ್ರನೂ ಕೂಡ ನಿದ್ರೆಮಾಡಲಾರನೆಂದೂ ನಿನಗೆ ತಿಳಿದೇ ಇದೆ. ಸ್ತ್ರೀಯರ

ಕಿಂ ತಾದೃಶಂ ಪೃಚ್ಛಸಿ ಮಾಂ ಶೋಚಿಸೀತಿ ಮೃತಪ್ರಭಃ ।
ಕಾಲೇ ಮೃತಿಃ ಶ್ಲಾಘ್ಯತಮಾ ನೇದೃಶಸ್ಯ ಕದರ್ಥನಾ ॥೩೨॥

ವಿಶುಕ್ರ ಇತಿ ತದ್ವಾಕ್ಯಂ ಶ್ರುತ್ವಾ ಪ್ರಾಹ ತತೋ ವಚಃ ।
ದೈತ್ಯೇಶೈವಂ ನಾಽರ್ಹಸಿ ತ್ವಂ ಭಾಷಿತುಂ ಕರುಣಂ ವಚಃ ॥೩೩॥

ಅಬಲಾ ಯೋಷಿದಿತ್ಯೇವಂ ಕಾರುಣ್ಯಂ ನಾಽಽಪ್ನುಯಾತ್ತು ಕಃ ।
ನೈಸರ್ಗಿಕಸ್ತೇ ಧರ್ಮೋಽಯಂ ಸ್ತ್ರೀಷು ಶಸ್ತ್ರಪರಾಙ್ಮತಿಃ ॥೩೪॥

ಅಲಂ ತ್ವಯಾ ಮಯಾ ವಾಽಪಿ ರಾಜಪುತ್ರಾದಿಭಿಸ್ತಥಾ ।
ದೈತ್ಯೇಷ್ವನ್ಯತಮೋಽಪ್ಯೇಕಸ್ತ್ವಯಾಽಽಜ್ಞಪ್ತೋ ಮುಹೂರ್ತತಃ ॥೩೫॥

ಗುಂಪಿನವರಾದ ಶಕ್ತಿಗಳೂ ಕೂಡ ವ್ಯರ್ಥವಾಗಿ ಯುದ್ಧವನ್ನು ಹೂಡಿ ಇಂಥಾ ನನ್ನನ್ನೂ ಸೋಲಿಸಿದ್ದಾರೆ. ॥೩೧॥

ಇಂಥಾ ಸ್ಥಿತಿಗೆ ಇಳಿದ, ಸತ್ತವನಂತೆ ಕಳೆಗುಂದಿದ, ನನ್ನನ್ನು ಏಕೆ ದುಃಖಪಡುತ್ತಿದ್ದೀಯೆ ಎಂದು ನೀನು ಕೇಳುತ್ತಿದ್ದೀಯೆ. ಕೆಲವು ಕಾಲಗಳಲ್ಲಿ ಮರಣವನ್ನಾದರೂ ಪ್ರಶಂಸೆಮಾಡಬಹುದು. ಆದರೆ ಇಂಥಾ ಸೋಲಿನ ಜೀವನವನ್ನು ಅನುಭವಿಸುವುದು ಶೋಚನೀಯವೇ ಸರಿ. ॥೩೨॥

ಭಂಡನು ಹೇಳಿದ ಮಾತನ್ನು ಕೇಳಿ ವಿಶುಕ್ರನು ಅವನನ್ನು ಕುರಿತು, "ಓ ರಾಕ್ಷಸರಾಜನೇ, ತಾವು ಇಂಥಾ ಶೋಕಪೂರ್ಣವಾದ ಮಾತನ್ನಾಡುವುದು ಸರಿಯಲ್ಲ" ಎಂದು ಬಿನ್ನೈಸಿದನು. ॥೩೩॥

ಸ್ತ್ರೀಯು ಅಬಲೆಯೆಂದು ತಿಳಿದು ಯಾರುತಾನೇ ಅವಳ ವಿಷಯದಲ್ಲಿ ಕಾರುಣ್ಯವನ್ನು ತೋರಿಸದೇ ಇರಲಾರನು? ಸ್ತ್ರೀಯರ ವಿಷಯದಲ್ಲಿ ಶಸ್ತ್ರಗಳನ್ನು ಉಪಯೋಗಿಸದೇ ಇರುವುದೆಂಬುದು ತಮ್ಮ ಸ್ವಾಭಾವಿಕವಾದ ಧರ್ಮವೇ ಆಗಿದೆ. ॥೩೪॥

ತಾವಾಗಲೀ ಅಥವಾ ನಾನಾಗಲೀ, ಅಥವಾ ರಾಜಪುತ್ರರೇ ಮೊದಲಾದವರೇ ಆಗಲೀ ಯಾರೂ ಬೇಡ. ಕೇವಲ ಯಾವನಾದರೊಬ್ಬ ರಾಕ್ಷಸನಿಗೆ ನೀವು ಅಪ್ಪಣೆ ಮಾಡಿದರೆ ಅವನೊಬ್ಬನೇ ಶಕ್ತಿಗಳ ಗುಂಪಿನವರೆಲ್ಲರನ್ನೂ ಕೊಲ್ಲಬಲ್ಲನು. ॥೩೫॥

ಹನ್ಯಾಚ್ಛಕ್ತಿಗಣಂ ಸರ್ವಮತ್ರ ಪಾದೌ ಸ್ಪೃಶಾಮಿ ತೇ ।
ತ್ವಂ ತಿಷ್ಠಾಂತಃ ಪುರೇ ಕ್ರೀಡನ್ ಸುರನಾರಗಣೈಃ ಸಹ ॥೩೬॥

ಗತೋಽಹಂ ತಾಂ ವಿಜಿತ್ಯೈವ ಪಾದೌ ಪಶ್ಯಾಮಿ ತೇ ಪುನಃ ।
ಇತ್ಯುಕ್ತ್ವಾ ಪಾರ್ಶ್ವತಃ ಪ್ರೈಕ್ಷತ್ ಕುಟಿಲಾಕ್ಷಂ ಚಮೂಪತಿಮ್ ॥೩೭॥

ತಾವತ್ಸೋಽಪಿ ಪ್ರಣಮ್ಯೈನಂ ಕೃತಾಂಜಲಿರಭಾಷತ ।
ಯುವರಾಜ ಕಿಮೇವಂ ತ್ವಂ ಬ್ರವೀಷಿ ಮಯಿ ಜೀವತಿ ॥೩೮॥

ರಾಜ್ಞಾ ಸಹ ವಿಷಂಗೇಣ ರಾಜಪುತ್ರೈರುಪಾವಿಶ ।
ಸೇನಾಸೇನಾಧಿಪೈಸ್ಸಾಕಂ ಗತ್ವಾಽಹಂ ಸಾಧಯಾಮಿ ತಾಮ್ ॥೩೯॥

ಅನ್ಯಥಾ ನಾಽಽಗಮಿಷ್ಯಾಮಿ ಸತ್ಯಂ ಪ್ರತಿಶೃಣೋಮಿ ತೇ ।
ಇತ್ಯುಕ್ತ್ವಾ ಪ್ರಣಿಪತ್ಯೈತಾನ್ನಿರ್ಯಯೌ ನಗರಾದ್ಬಹಿಃ ॥೪೦॥

ಆದ್ದರಿಂದ ಯಾವನಾದರೊಬ್ಬ ರಾಕ್ಷಸನು ಅವರನ್ನೆಲ್ಲರನ್ನೂ ಕೊಲ್ಲಲು ಸಮರ್ಥನು. ಎಂದು ತಮ್ಮ ಪಾದಗಳನ್ನು ಮುಟ್ಟಿ ದೃಢವಾಗಿ ಹೇಳುವೆನು. ತಾವು ಅಂತಃಪುರದಲ್ಲಿ ದೇವತೆಗಳ ಸ್ತ್ರೀಯರೊಂದಿಗೆ ವಿನೋದದಿಂದ ಕಾಲವನ್ನು ಕಳೆಯುತ್ತಿರೋಣವಾಗಲಿ. ॥೩೬॥

"ನಾನೊಬ್ಬನೇ ಹೋಗಿ ಆ ಶಕ್ತಿಗಳ ರಾಣಿಯಾದ ದೇವಿಯನ್ನು ಜಯಿಸಿ ಹಿಂತಿರುಗಿ ಬಂದು ತಮ್ಮ ಪಾದಗಳನ್ನು ಕಾಣುವೆನು" ಎಂದು ಹೇಳಿ ವಿಶುಕ್ರನು ಸೇನಾಪತಿಯಾದ ಕುಟಿಲಾಕ್ಷನ ಕಡೆ ನೋಡಿದನು. ॥೩೭॥

ಅಷ್ಟರೊಳಗಾಗಿ ಕುಟಿಲಾಕ್ಷನೂ ಕೂಡ ಕೈ ಜೋಡಿಸಿಕೊಂಡು ಅವನನ್ನು ಕುರಿತು, "ಓ ಯುವರಾಜನೇ, ನಾನು ಬದುಕಿರುವಾಗ ಇದೇನು ತಾವು ಹೀಗೆ ಹೇಳುತ್ತಿರುವಿರಿ?" ಎಂದು ಹೇಳಿದನು. ॥೩೮॥

ತಾವು ರಾಜರು ವಿಷಂಗ ಮತ್ತು ರಾಜಪುತ್ರರೊಡನೆ ಸುಮ್ಮನೆ ಕುಳಿತಿರೋಣವಾಗಲಿ. ಸೈನ್ಯ ಮತ್ತು ಅದರ ಅಧಿಪತಿಗಳೊಂದಿಗೆ ನಾನು ಹೋಗಿ ಆವಳನ್ನು ಗೆದ್ದು ಬರುವೆನು. ॥೩೯॥

"ಹಾಗಲ್ಲದಿದ್ದರೆ ನಾನು ಹಿಂತಿರುಗಿ ಬರುವುದಿಲ್ಲವೆಂದು ಸತ್ಯವಾಗಿ ಪ್ರತಿಜ್ಞೆ

ಅನೇಕಾಽಕ್ಷೌಹಿಣೀಸೇನಾಯುಕ್ತೈಃ ಸೇನಾಧಿಪೈಃ ಸಹ ।
ಅಥಾಽಽಗತ್ಯ ದುರ್ಮದಾಽಽಖ್ಯೋ ವಾಹಿನೀಶೋ ಮಹಾಬಲಃ ॥೪೧॥

ದಶಾಽಕ್ಷೌಹಿಣಿಕಾಯುಕ್ತೋ ಉಷ್ಟ್ರಾಽಽರೋಹೋ ಗದಾಧರಃ ।
ಪ್ರಾಹಾಽಹಂಕಾರಶೈಲಸ್ಥಃ ಪ್ರಣಮ್ಯಾಽತ್ಮ ಚಮೂಪತಿಮ್ ॥೪೨॥

ಸೇನಾಧೀಶ ತ್ವಮತ್ರೈವ ತಿಷ್ಠ ಸೇನಾಸಮಾವೃತಃ ।
ಅಬಲಾವಿಜಯೋ ನೈವ ಪ್ರಯಾಣಂ ವಃ ಸುಸಮ್ಮತಂ ॥೪೩॥

ಆನೇಷ್ಯಾಮಿ ಮುಹೂರ್ತೇನ ಬಧ್ವಾ ತಾಮಬಲಾಽಧಿಪಾಮ್ ।
ಮುಹೂರ್ತಮಾತ್ರಾದ್ಯದಿ ತಾಂ ನಾನೇಷ್ಯಾಮಿ ತತಸ್ತ್ವಯಾ ॥೪೪॥

ಮಾಡಿ ಹೇಳುವೆನು" ಎಂದು ಹೇಳಿ ಅವರನ್ನೆಲ್ಲರನ್ನೂ ನಮಸ್ಕರಿಸಿ ಕುಟಿಲಾಕ್ಷನು ಪಟ್ಟಣದ ಹೊರಗಡೆಗೆ ಹೋದನು. ||೪೦||

ಕುಟಿಲಾಕ್ಷನು ಅನೇಕ ಅಕ್ಷೌಹಿಣೀ ಸೈನ್ಯದಿಂದಲೂ ಮತ್ತು ಸೈನ್ಯಾಧಿಪತಿಗಳಿಂದಲೂ ಕೂಡಿದ್ದನು. ಅನಂತರ ಮಹಾಬಲಿಷ್ಠನಾದ ದುರ್ಮದ ಎಂಬ ಹೆಸರಿನ ಸೇನಾಪತಿಯೂ ಅವನ ಜೊತೆಗೆ ಬಂದು ಸೇರಿದನು. ||೪೧||

ಹತ್ತು ಅಕ್ಷೌಹಿಣೀ ಸೈನ್ಯದಿಂದ ಕೂಡಿದ ಒಂಟೆಯ ಮೇಲೆ ಕುಳಿತಿರುವ ಗದಾಧರ ಎಂಬ ಸೈನ್ಯಾಧಿಕಾರಿಯು, ಅಹಂಕಾರವೆಂಬ ಪರ್ವತದ ಮೇಲೆ ಕುಳಿತಿರುವವನಂತೆ, ಅತ್ಯಂತ ದರ್ಪದಿಂದ ತಮ್ಮ ಸೇನಾಪತಿಗೆ ನಮಸ್ಕಾರ ಮಾಡಿ ಈ ರೀತಿಯಲ್ಲಿ ಬಿನ್ನೈಸಿಕೊಂಡನು. ||೪೨||

ಓ ಸೇನಾಪತಿಗಳೇ, ತಾವು ಸೈನ್ಯದಿಂದ ಕೂಡಿ ಇಲ್ಲಿಯೇ ಇರೋಣವಾಗಲಿ; ಸ್ತ್ರೀರೂಪವಾದ ಶಕ್ತಿಗಳಿಗೆ ಒಡೆಯಳಾದ ಆ ದೇವಿಯನ್ನು ಜಯಿಸಿಯೇ ಹಿಂತಿರುಗಬೇಕೆಂಬುದು ತಮಗೆ ಇಷ್ಟನಾಗಿದೆಯಲ್ಲವೇ? ಹೀಗೇ ನಿಶ್ಚಯಿಸಿರುವಿರಿ. ||೪೩||

ಸ್ತ್ರೀಸ್ವರೂಪಶಕ್ತಿಗಳಿಗೆ ಅಧಿನಾಯಕಿಯಾದ ಅವಳನ್ನು ಕಟ್ಟಿಹಾಕಿ ಒಂದು ಮುಹೂರ್ತ ಕಾಲದಲ್ಲಿಯೇ ನಾನು ತಮಗೆ ತಂದೊಪ್ಪಿಸುವೆನು. ನಾನು ಮುಹೂರ್ತಕಾಲವೊಳಗಾಗಿ ಅವಳನ್ನು ತರಲಾರದೇ ಹೋದರೆ ಆಗ ತಾವು ಈ ವಿಚಾರದಲ್ಲಿ ಪ್ರಯತ್ನಿಸಬಹುದು. ||೪೪||

ಯತಿತವ್ಯಂ ಚ ಗಂತವ್ಯಮಿತ್ಯುಕ್ತ್ವಾ ನಿರ್ಯಯೌ ಜವಾತ್ ।
ವಾದಯನ್ ಜೈತ್ರಯಾತ್ರಾಂಗವಾದಿತ್ರಾಣಿ ಮುಹುರ್ಮುಹುಃ ॥೪೫॥

ಯಯೌ ಶಕ್ತಿ ಚಮೂವಕ್ತ್ರಂ ಸೂರ್ಯಸ್ಯೋದಯನಂ ಪ್ರತಿ ।
ದೈತ್ಯಸೇನಾ ಸಮಾರಂಭ ಕೋಲಾಹಲ ಮಹಾರವಮ್ ॥೪೬॥

ಶ್ರುತ್ವಾ ಸಂಪತ್ಕರೀದೇವೀ ಚಾಶ್ವಾರೂಢಾ ಮಹಾಬಲಾ ।
ಗತ್ವಾ ಶ್ರೀಮಾತರಂ ನತ್ವಾ ಮಂತ್ರಿಣೀಂ ದಂಡಿನೀಮಪಿ ॥೪೭॥

ವಿಜ್ಞಾಪ್ಯ ದೈತ್ಯಸನ್ನಾಹಮನುಜ್ಞಾತೇ ತಿಮೋದಿತೇ ।
ಯಯತುಃ ಶಕ್ತಿಸೇನಾಭಿರಸಂಖ್ಯಾಭಿಃ ಸಮಾಯುತೇ ॥೪೮॥

ತತ್ರ ಸಂಪತ್ಕರೀ ದೇವೀ ಸಮಾರುಹ್ಯ ಮಹಾಗಜಮ್ ।
ರಣಕೋಲಾಹಲಾಖ್ಯಾನಂ ಪ್ರಾಲೇಯಾದ್ರಿರಿವೋನ್ನತಮ್ ॥೪೯॥

"ತಾವು ಅನಂತರ ಹೊರಟು ಈ ವಿಷಯದಲ್ಲಿ ಪ್ರಯತ್ನಿಸಬಹುದು" ಎಂದು ಹೇಳಿ ಗದಾಧರನು ವಿಜಯಯಾತ್ರೆಗೆ ಅಂಗವಾದ ವಾದ್ಯಗಳನ್ನು ಬಾರಿ ಬಾರಿಗೂ ನುಡಿಸುತ್ತಾ ಶೀಘ್ರವಾಗಿ ಹೊರಟು ಹೋದನು. ||೪೫||

ಈ ರೀತಿಯಲ್ಲಿ ವಾದ್ಯಗಳನ್ನು ಘೋಷಿಸುತ್ತಾ ಗದಾಧರನು ಹೊರಡಲು ಶಕ್ತಿಗಳ ಸೈನ್ಯದ ಮುಂಭಾಗದ ಸೈನ್ಯಗಳು ಸೂರ್ಯೋದಯವಾಗುವವೇಳೆಯಷ್ಟರಲ್ಲೇ ರಾಕ್ಷಸಸೈನ್ಯದ ಯುದ್ಧಸಡಗರದ ಭಯಂಕರ ಶಬ್ದವನ್ನು ಕೇಳಿದವು. ||೪೬||

ಈ ಶಬ್ದವನ್ನು ಕೇಳಿ ಸಂಪತ್ಕರೀದೇವಿಯೂ ಮತ್ತು ಮಹಾಬಲಿಷ್ಠಳಾದ ಅಶ್ವಾರೂಢಾ ಎಂಬ ಶಕ್ತಿಯೂ, ತ್ರಿಪುರಾದೇವೀ, ಮಂತ್ರಿಣೀದೇವೀ ಮತ್ತು ದಂಡನಾಯಕಿಯರಿಗೆ ನಮಸ್ಕರಿಸಿ ಈ ವಿಷಯವನ್ನು ವಿಜ್ಞಾಪಿಸಿದರು. ||೪೭||

ಈ ವಿಚಾರವನ್ನು ಆ ದೇವಿಯವರಿಗೆ ವಿಜ್ಞಾಪನೆಮಾಡಿ ಅವರ ಅಪ್ಪಣೆಯನ್ನು ಪಡೆದು, ಬಹಳ ಸಂತೋಷದಿಂದ ಲೆಖ್ಖವಿಲ್ಲದಷ್ಟು ಶಕ್ತಿಸೈನ್ಯದಿಂದ ಕೂಡಿದವರಾಗಿ ಅವರಿಬ್ಬರೂ ಯುದ್ಧಕ್ಕೆ ಹೊರಟರು. ||೪೮||

ಈ ಸಂದರ್ಭದಲ್ಲಿ ಸಂಪತ್ಕರೀದೇವಿಯು ಮೇರುಪರ್ವತದಂತೆ ಬಹಳ ಎತ್ತರವಾದ ರಣಕೋಲಾಹಲ ಎಂಬ ಹೆಸರಿನ ದೊಡ್ಡ ಆನೆಯನ್ನು ಏರಿದಳು, ||೪೯||

ಸುವರ್ಣಾಽಽಭಾ ಜಪಾರಕ್ತ ವಾಸೋ ರತ್ನವಿಭೂಷಣಾ ।
ತಾರುಣ್ಯಾಂಭೋಧಿಲಹರೀ ಲಾವಣ್ಯೈಷು ಸಮುದ್ರಿಕಾ ॥೫೦॥

ವಿಕರ್ಷಂತೀ ಮಣಿಮಯಂ ಚಾಪಮಿಂದ್ರಧನುಷ್ಪ್ರಭಮ್ ।
ದೈತ್ಯಾಂಬುಧೇಃ ಶೋಷಣಾಯ ಶರಾನ್ ಭಾನುಕರೋಪಮಾನ್ ॥೫೧॥

ಕಿರಂತೀ ನಿರ್ಯಯೌ ಸೂರ್ಯ ಉದಯಾದ್ರಿಗತೋ ಯಥಾ ।
ಅಸಂಖ್ಯಾ ವಾರಣಾರೂಢಾಃ ಶಕ್ತಯಶ್ಚಾಪಿ ತಾದೃಶಾಃ ॥೫೨॥

ಪರಿವಾರ್ಯ ಯಯುರ್ಬಾಣಾನ್ ವಿಕಿರಂತ್ಯಃ ಸಮಂತತಃ ।
ಪ್ರತ್ಯೇಕಂ ತಾದೃಶೀ ಶಕ್ತಿರ್ಗರ್ಜನೇ ತ್ರ್ಯಂಕುಶಗ್ರಹಾ ॥೫೩॥

ಸಂಪತ್ಕರೀದೇವಿಯು ಚಿನ್ನದಂತೆ ಪ್ರಕಾಶಿಸುವವಳಾಗಿಯೂ, ದಾಸವಾಳದ ಹೂವಿನಂತೆ ಸ್ವಲ್ಪ ಕೆಂಪಗಿರುವ ಬಟ್ಟೆ ಮತ್ತು ರತ್ನದ ಆಭರಣಗಳನ್ನು ಧರಿಸಿರುವವವಳಾಗಿಯೂ, ಯೌವನವೆಂಬ ಸಮುದ್ರದ ಅಲೆಯಂತೆ ಕಾಣಿಸುವವಳಾಗಿಯೂ, ಲಾವಣ್ಯ ಸಮೂಹದ ಸಮುದ್ರದಂತೆ ತೋರುವವಳಾಗಿಯೂ ಇದ್ದಳು. ॥೫೦॥

ಅವಳು ಕಾಮನಬಿಲ್ಲಿಗೆ ಸಮಾನವಾದ ಕಾಂತಿಯುಳ್ಳ, ಮಣಿಯಿಂದ ಪೂರ್ಣವಾದ, ಧನುಸ್ಸನ್ನು ಸೆಳೆಯುತ್ತಿದ್ದಳು. ಅಲ್ಲದೆ ಆಕೆಯು ಸೂರ್ಯಕಿರಣದಂತಿರುವ ಬಾಣಗಳನ್ನು ರಾಕ್ಷಸರೆಂಬ ಸಮುದ್ರವನ್ನು ಹೀರುವುದಕ್ಕೋಸ್ಕರ ಬಿಲ್ಲಿಗೇರಿಸಿದ್ದಳು. ॥೫೧॥

ಉದಯ ಪರ್ವತದಲ್ಲಿ ಕಾಣಿಸುವ ಸೂರ್ಯನಂತೆ, ಅವಳು ಕಾಣಿಸುತ್ತಾ ಬಾಣಗಳನ್ನು ಪ್ರಯೋಗಿಸುತ್ತಾ ಹೋದಳು. ಅವಳ ಜೊತೆಯಲ್ಲಿ ಅವಳ ಹಾಗೆಯೇ ಬಲಿಷ್ಠರಾದ ಲೆಕ್ಕವಿಲ್ಲದಷ್ಟು ಮಂದಿ ಶಕ್ತಿಗಳು ಆನೆಯ ಮೇಲೇರಿ ಹೋದರು. ॥೫೨॥

ಆಕೆಯ ಸುತ್ತಲೂ ಶಕ್ತಿಗಳು ಹೋಗುತ್ತಾ, ಶತ್ರುಗಳಾದ ರಾಕ್ಷಸರ ಮೇಲೆ ಎಲ್ಲಾ ಕಡೆಯಲ್ಲಿಯೂ ಬಾಣಗಳನ್ನು ಪ್ರಯೋಗಿಸುತ್ತಾ ಹೋಗುತ್ತಿದ್ದರು. ಪ್ರತಿಯೊಬ್ಬ ಶಕ್ತಿದೇವಿಯರೂ ಮೂರು ಮೂರು ಅಂಕುಶಗಳನ್ನು ಹಿಡಿದುಕೊಂಡು ಅದೇ ರೀತಿಯಲ್ಲಿ ಗರ್ಜಿಸುತ್ತಾ ಆನೆಯ ಮೇಲೆ ಮುಂದುವರಿಯುತ್ತಿದ್ದರು. ॥೫೩॥

ಗಜಗ್ರೀವಾ ಸಮಾರೂಢಾ ಸಯು(ಂ)ತೀ ಶತ್ರುವಾಹಿನೀಂ ।
ಕಸ್ಮಿಂಶ್ಚಿದೇಕಾ ಸಂರೂಢಾಽನೇಕಾಶ್ವಾಽನ್ಯೇಷು ಸಂಸ್ಥಿತಾಃ ॥೫೪॥

ಇತ್ಯಸಂಖ್ಯಾಭಿಃ ಸೇನಾಭಿಃ ಸಮೇತಾ ಸಂಪದೀಶ್ವರೀ ।
ಗ್ರಸಂತೀವ ದೈತ್ಯಸೇನಾಂ ವ್ಯಾಪ್ಯ ಭೂಮಿಮುಪಾಽಽಯಯೌ ॥೫೫॥

ನಿಸರ್ಗಭಿನ್ನಗಂಡಾಸ್ತೇ ಗಜಾಃ ಪರ್ವತಸನ್ನಿಭಾಃ ।
ದೈತ್ಯಸೇನಾಂ ಸಮಾಸೇದುಸ್ತೇ ಯುದ್ಧೇಷ್ವನಿವರ್ತಿನಃ ॥೫೬॥

ಅಥ ವಾದಿತ್ರನಿಸ್ವಾನಃ ಸೇನಯೋರುಭಯೋರಭೂತ್ ।
ಪ್ರವೃತ್ತಃ ಶಸ್ತ್ರಪಾತೋಽಪಿ ಪ್ರಾಣಚೋರ ಮಹಾರವಃ ॥೫೭॥

ದೈತ್ಯೇ ರಥೇಭತುರಗಖರೋಷ್ಟ್ರನ್ಯೃಗರೋಹಿಣಃ ।
ಗೃಧ್ರಕಾಕಕಂಕಘೂಕ ಭಾಸಕೇಕ್ಯಾದಿ ಸಂಶ್ರಯಾಃ ॥೫೮॥

ಒಬ್ಬ ಶಕ್ತಿಯು ಆನೆಯ ಕತ್ತಿನಮೇಲೆ ಕುಳಿತುಕೊಂಡು ಶತ್ರುಗಳ ಎದುರಿಗೆ ತನ್ನ ಸೈನ್ಯವನ್ನು ನಡೆಸುತ್ತಿದ್ದಳು. ಒಬ್ಬನಿಗೆ ಎದುರಾಗಿ ಮತ್ತೊಬ್ಬಳು ಯುದ್ಧ ಮಾಡಲು ತೊಡಗಿದ್ದಳು. ಇತರ ಅನೇಕ ಮಂದಿ ದೇವಿಯರು ಬೇರೆ ವಿಧವಾದ ವಾಹನಗಳಲ್ಲಿ ಕುಳಿತಿದ್ದರು. ॥೫೪॥

ಈರೀತಿಯಲ್ಲಿ ಲೆಕ್ಕವಿಲ್ಲದಷ್ಟು ಸೈನ್ಯದಿಂದ ಕೂಡಿದವಳಾಗಿ ಸಂಪನ್ನಾಥಾ ದೇವಿಯು ಹೊರಟಿದ್ದಳು. ಈಕೆಯು ರಾಕ್ಷಸಸೇನೆಯನ್ನು ನುಂಗುವಳೋ ಎಂಬಂತೆ ರಣಭೂಮಿಗೆ ಬಂದಳು. ॥೫೫॥

ಸ್ವಾಭಾವಿಕವಾಗಿಯೇ ಭಿನ್ನವಾದ ಗಂಡಸ್ಥಳಗಳುಳ್ಳ ಪರ್ವತಕ್ಕೆ ಸಮಾನವಾದ ಆ ಆನೆಗಳು, ಯುದ್ಧದಲ್ಲಿ ಹಿಂತಿರುಗದೆಯೇ ರಾಕ್ಷಸಸೈನ್ಯವನ್ನು ಸಮೀಪಿಸಿದವು. ॥೫೬॥

ಅನಂತರ ಎರಡು ಸೈನ್ಯಗಳಲ್ಲಿಯೂ ವಾದ್ಯಘೋಷವು ಸಂಭವಿಸಿತು. ಪ್ರಾಣವನ್ನು ಅಪಹಾರಮಾಡುವಂಥಾ ಭಯಂಕರವಾದ ಶಬ್ದವನ್ನುಂಟುಮಾಡುವ ಶಸ್ತ್ರಗಳ ಪ್ರಯೋಗಗಳೂ ನಡೆದವು. ॥೫೭॥

ರಾಕ್ಷಸರು, ರಥಗಳು, ಆನೆಗಳು, ಕುದುರೆಗಳು, ಕತ್ತೆಗಳು, ಒಂಟೆಗಳು, ಜಿಂಕೆಗಳು, ಹದ್ದುಗಳು, ಕಾಗೆಗಳು, ರಣಹದ್ದುಗಳು, ಗೂಬೆಗಳು ಸೊಗಸಾಗಿರುವ ನವಿಲುಗಳು ಇವುಗಳ ಮೇಲೆಯೂ ಕೆಲವರು ಏರಿದ್ದರು. ॥೫೮॥

ಅನ್ಯೇ ಮಾರ್ಜಾಲನಕುಲಸರಟಪ್ರೇತವಾಹನಾಃ ।
ಚಂಡಶೂಲಖಡ್ಗಚಕ್ರಭಿಂದಿಪಾಲಧರಾಃ ಪರೇ ॥೫೯॥

ತೋಮರಪ್ರಾಸಪರಿಘಭುಶುಂಡೀಲಗುಡಾಯುಧಾಃ ।
ಏವಂ ವಿಧೈರ್ದೈತ್ಯಗಣೈಃ ಸಮೇತಾ ಶಕ್ತಿವಾಹಿನೀ ॥೬೦॥

ಯುಯುಧೇ ಪ್ರೌಢಸಂರಂಭಾ ಕ್ರೋಧ ಸಂರಕ್ತಲೋಚನಾ ।
ಪರಸ್ಪರಂ ಕ್ಷಿಪಂತಸ್ತೇ ವಾಕ್ಯೈಃ ಕಟುರಸೋದಯೈಃ ॥೬೧॥

ಹತೋಽಸಿ ತಿಷ್ಠ ಶೌರ್ಯೇಣ ಪೃಷ್ಠಂ ಸ್ವಂ ನ ಪ್ರದರ್ಶಯ ।
ಇತ್ಯಾದಿ ಬಹುವಾಕ್ಯಾನಿ ವದಂತ್ಯಃ ಶಕ್ತಯೋ ರಣೇ ॥೬೨॥

ಜಘ್ನುರ್ದೈತ್ಯಾಂಸ್ತೇಽಪಿ ತದ್ವನ್ನಿಜಘ್ನುಃ ಶಕ್ತಿವಾಹಿನೀಮ್ ।
ಏವಂ ಪ್ರವೃತ್ತೇ ಸಮರೇ ಪ್ರಾಣದ್ಯೂತೇ ಭಯಂಕರೇ ॥೬೩॥

ಇನ್ನು ಕೆಲವರು, ಬೆಕ್ಕುಗಳು, ಮುಂಗಸಿಗಳು, ಹೆಂಟೆಗೊದ್ದಗಳು ಪ್ರೇತಗಳು ಇವುಗಳನ್ನೇ ವಾಹನವನ್ನಾಗಿ ಮಾಡಿಕೊಂಡಿದ್ದರು. ಮತ್ತೆ ಕೆಲವರು ಭಯಂಕರವಾದ ಶೂಲ, ಕತ್ತಿ, ಚಕ್ರ, ಭಂದಿಪಾಲ ಮುಂತಾದ ಆಯುಧಗಳನ್ನು ಹಿಡಿದಿದ್ದರು. ||೫೯||

ಮತ್ತು ಕೆಲವರು, ತೋಮರ, ಪ್ರಾಸ, ಪರಿಘ, ಭುಶುಂಡೀ, ಲಗುಡ ಮುಂತಾದ ಆಯುಧಗಳನ್ನು ಹಿಡಿದಿದ್ದರು. ಈರೀತಿಯಲ್ಲಿ ಬಂದಿದ್ದ ರಾಕ್ಷಸ ಸೈನ್ಯದೊಡನೆ ಶಕ್ತಿ ಸೈನ್ಯವು ಯುದ್ಧಕ್ಕೆ ಸೇರಿತ್ತು. ||೬೦||

ಎರಡು ಸೈನ್ಯಗಳೂ ಹೆಚ್ಚಾದ ಸಡಗರದಿಂದ ಕೂಡಿಯೂ, ಕೋಪದಿಂದ ಕೆಂಪಾದ ಕಣ್ಣುಗಳುಳ್ಳವಾಗಿಯೂ, ಒಬ್ಬರನ್ನೊಬ್ಬರು ದ್ವೇಷವನ್ನು ವೃದ್ಧಿಪಡಿಸುವ ಮಾತುಗಳನ್ನು ಉಪಯೋಗಿಸುತ್ತಲೂ ಯುದ್ಧಮಾಡುತ್ತಿದ್ದವು. ||೬೧||

"ನೀನು ಹಾಳಾದೆ! ನಿನ್ನ ಶೌರ್ಯವನ್ನು ತೋರಿಸು ನೋಡೋಣ! ನಿನ್ನ ಹಿಂಭಾಗವನ್ನು ತೋರಿಸಬೇಡ!" ಇವೇ ಮುಂತಾದ ಅನೇಕ ವಾಕ್ಯಗಳನ್ನು ಶಕ್ತಿಗಳು ಯುದ್ಧದಲ್ಲಿ ಉಪಯೋಗಿಸುತ್ತಿದ್ದವು. ಪರಾಕ್ರಮತಿರಸ್ಕಾರಗಳಿಂದ ||೬೨||

ಹೀಗೆ ಮಾತನ್ನಾಡುತ್ತಾ ಶಕ್ತಿಗಳು ರಾಕ್ಷಸರನ್ನು ಕೊಲ್ಲುತ್ತಿದ್ದರು. ರಾಕ್ಷಸರೂ ಕೂಡ ಶಕ್ತಿಗಳ ಸೈನ್ಯವನ್ನು ಅದೇ ರೀತಿಯಲ್ಲಿ ಕೊಲ್ಲುತ್ತಿದ್ದರು. ಈ ರೀತಿಯಲ್ಲಿ

ಛಿನ್ನಬಾಹ್ವಂಘ್ರಿಮೂರ್ಧಾನಃ ಪಾಟಿತಾಃ ಧಾರ್ಥದೇಹಿನಃ ।
ಏವಂ ವಿಧಾಃ ಶಕ್ತಯೋಽಪಿ ದೈತ್ಯಹೇತಿಭಿರಾಹತಾಃ ॥೬೪॥

ಪಾಟಿತಾಂಗಾ ಅಪಿ ದೃಢಂ ಕ್ರೋಧಾತ್ಸಂದಷ್ಟ(ರ)ದಚ್ಛದಾಃ ।
ಜಘ್ನುಃ ಪ್ರತ್ಯರ್ಥಿನಾಂ ವೃಂದಂ ಶಸ್ತ್ರೈರ್ದಂತೈಶ್ಚಮುಷ್ಟಿಭಿಃ ॥೬೫॥

ನಷ್ಟಶಸ್ತ್ರಾಃ ಪರಕರಾಚ್ಛಸ್ತ್ರಮಾಚ್ಛಿದ್ಯ ವೈ ಬಲಾತ್ ।
ಅನ್ಯೇ ಭಗ್ನೈ ರಥಾಂಗೈಶ್ಚ ಹೇತಿಭಿರ್ಯುಯುಧುಃ ಭೃಶಮ್ ॥೬೬॥

ಏವಂ ಪ್ರವೃತ್ತೇ ಸಮರೇ ಘೋರೇ ಸಂಹೃತಿಸನ್ನಿಭೇ ।
ವವುರ್ನದ್ಯೋ ಲೋಹಿತೌಘಾಃ ಸಫೇನಿಲತರಂಗಕಾಃ ॥೬೭॥

ಪ್ರಾಣಕ್ಕೆ ಸಂಚಕಾರತರುವ ಭಯಂಕರವಾದ ಯುದ್ಧವು ಎರಡು ಸೈನ್ಯಗಳಿಗೂ ಸಂಭವಿಸಿತು. ||೬೩||

ಶಕ್ತಿಗಳು, ರಾಕ್ಷಸರ ತೋಳುಗಳು, ಕಾಲುಗಳು, ಮತ್ತು ತಲೆಗಳು ಇವನ್ನೂ ಕತ್ತರಿಸುತ್ತಾ ಅವರವರ ದೇಹಗಳನ್ನೂ ತುಂಡರಿಸುತ್ತಿದ್ದರು. ಇದೇ ರೀತಿಯಲ್ಲಿ ರಾಕ್ಷಸರ ಕತ್ತಿಗಳಿಂದ ಕೆಲವು ಶಕ್ತಿಗಳಿಗೂ ಕೊಲೆಯಾಯಿತು. ||೬೪||

ರಾಕ್ಷಸಸೈನ್ಯಗಳನ್ನು ಸೀಳುತ್ತಿದ್ದಾಗ್ಯೂ ಅವರು ಕೋಪದಿಂದ ತಮ್ಮ ತುಟಿಗಳನ್ನು ಕಚ್ಚುತ್ತಾ, ಶತ್ರುಗಳ ಸಮೂಹವನ್ನು ತಮ್ಮ ಶಸ್ತ್ರಗಳು ದಂತಗಳು ಮುಷ್ಟಿಗಳು ಇವುಗಳಿಂದ ಹೊಡೆದು ನಾಶಮಾಡುತ್ತಿದ್ದರು. ||೬೫||

ರಾಕ್ಷಸರ ಶಸ್ತ್ರಗಳು ನಾಶವಾಗಲು ಇನ್ನೊಬ್ಬರ ಕೈಯಿಂದ ಶಸ್ತ್ರಗಳನ್ನು ಬಲಾತ್ಕಾರವಾಗಿ ಸೆಳೆದುಕೊಂಡು ಯುದ್ಧವನ್ನು ಚೆನ್ನಾಗಿಮಾಡುತ್ತಿದ್ದರು. ಇತರ ಕೆಲವರು ತಮ್ಮ ಅಂಗಗಳು ಭಗ್ನವಾಗಿದ್ದರೂ ಕತ್ತಿಗಳನ್ನು ಪ್ರಯೋಗಿಸುತ್ತಾ ಯುದ್ಧದಲ್ಲಿ ತೊಡಗಿದ್ದರು. ||೬೬||

ಈರೀತಿಯಾಗಿ ಪ್ರಳಯಕಾಲಕ್ಕೆ ಸಮನಾಗಿ ಭಯಂಕರವಾದ ಯುದ್ಧವು ಸಂಭವಿಸಿರಲು, ನೊರೆಗಳನ್ನು ಮತ್ತು ಅಲೆಗಳನ್ನು ಹೊರಗೆಡುಹುತ್ತಿರುವ ರಕ್ತದ ಪ್ರವಾಹಗಳಿಂದ ತುಂಬಿದ ನದಿಗಳೇ ಹರಿದುವು! ||೬೭||

ಶಕ್ತಿಭಿರ್ಗಜರೋಹಾಭಿರ್ದೈತ್ಯಸೈನ್ಯಂ ವಿನಾಶಿತಂ ।
ಪಲಾಯಿತಂ ಗಾಢವಿದ್ಧಂ ದಶಾಕ್ಷೌಹಿಣಿಶೇಷಿತಮ್ ॥೬೮॥

ದೃಷ್ಟ್ವಾದುರ್ಮದ ಏವಂ ಸ್ವಾಂ ಭಗ್ನಾಂ ಸೇನಾಂ ಸಮಂತತಃ ।
ಉಷ್ಟ್ರಾರೂಢೋ ಗದಾಹಸ್ತಃ ಕಾಲಾಂತಕಯಮೋಪಮಃ ॥೬೯॥

ದಶತಾಲಸಮುನ್ನಮ್ರಂ ಕರಭಂ ಪಿಂಗಲಾಕೃತಿಂ ।
ಪ್ರಾಹಿಣೋಚ್ಛಕ್ತಿಸೇನಾಸು ಮಹಾವೇಗಂ ಮಹಾಬಲಂ ॥೭೦॥

ಅಥ ಪ್ರವಿಷ್ಟಃ ಶಕ್ತೀನಾಂ ಸೇನಾಸೂಷ್ಟ್ರೋಽತಿವೇಗವಾನ್ ।
ಸೃಕ್ಕಿಣೀ ಪ್ರಾಂತ ವಿಗಲನ್ಮಾಂಸ ಪಿಂಡಾಽಭಜಿಹ್ವಕಃ ॥೭೧॥

ಸಮುದ್ರಮಥನೋ ದಂಚನ್ಮಹಾಶಬ್ದ ಪ್ರತಿಸ್ವನಃ ।
ಫೇನ ಪಿಂಡಾನುದ್ಗಿರಂಶ್ಚ ಮೂತ್ರಯನ್ ಪೃಷ್ಟತೋ ಬಹು ॥೭೨॥

ಆನೆಗಳನ್ನೇರಿರುವ ಶಕ್ತಿಗಳು ರಾಕ್ಷಸಸೈನ್ಯವನ್ನು ಚೆನ್ನಾಗಿ ನಾಶಮಾಡಿದರು. ರಾಕ್ಷಸಸೈನ್ಯಗಳಲ್ಲಿ ಅನೇಕರು ಪಲಾಯನಮಾಡುತ್ತಿದ್ದರು. ಇನ್ನು ಕೆಲವರು ಶಕ್ತಿಗಳ ಗಾಢಪ್ರಹಾರಕ್ಕೆ ತುತ್ತಾಗುತ್ತಿದ್ದರು. ಅವರಲ್ಲಿ ಕೇವಲ ಹತ್ತು ಅಕ್ಷೌಹಿಣೀ ಸೈನ್ಯವು ಮಾತ್ರ ಉಳಿಯಿತು. ||೬೮||

ಒಂಟೆಯನ್ನೇರಿರುವ, ಗದೆಯನ್ನು ಹಿಡಿದಿರುವ, ಪ್ರಳಯಕಾಲದ ಯಮನಂತಿರುವ ದುರ್ಮದನು ತನ್ನ ಸೈನ್ಯವು ಎಲ್ಲಾ ಕಡೆಯಲ್ಲಿಯೂ ನಾಶವಾಗುತ್ತಿದ್ದುದನ್ನು ಕಂಡನು. ||೬೯||

ಆಗ ರಾಕ್ಷಸನು ಹತ್ತು ತಾಳೆಯಮರದಷ್ಟು ಎತ್ತರವಾದ, ಹೊಂಬಣ್ಣದ ಆಕಾರವುಳ್ಳ ಮಹಾಬಲಿಷ್ಠವೂ, ಬಹಳ ವೇಗಶಾಲಿಯೂ ಆದ ಆನೆಯು, (ಒಂಟೆಯು) ಮರಿಯೊಂದನ್ನು ಶಕ್ತಿಸೈನ್ಯಗಳನ್ನೆದುರಿಸಲು ಕಳುಹಿಸಿದನು. ||೭೦||

ಅನಂತರ ಶಕ್ತಿಗಳ ಸೈನ್ಯವನ್ನು ಪ್ರವೇಶಿಸಿದ ಬಹಳ ವೇಗಶಾಲಿಯಾದ ಒಂಟೆಯು ತನ್ನ ದವಡೆಗಳ ಅಂಚಿನಲ್ಲಿ ಜೋಲಾಡುತ್ತಿರುವ ಮಾಂಸಪಿಂಡದಂತಿರುವ ನಾಲಿಗೆಯುಳ್ಳದ್ದಾಗಿತ್ತು. ||೭೧||

ಅದು ಸಮುದ್ರವನ್ನು ಸುರಾಸುರರು ಮಥನಮಾಡುವ ಕಾಲದಲ್ಲಿ ಉಂಟಾದ ದೊಡ್ಡ ಶಬ್ದವನ್ನು ಪ್ರತಿಧ್ವನಿಮಾಡುವಂತೆ ನೊರೆಗಳ ಗುಂಪನ್ನು

ಉರಸಾ ಪಾದವಿಕ್ಷೇಪೈಸ್ತುಂಡಾಽಘಾತೈಃ ಕರಿವ್ರಜಮ್ ।
ನಾಶಯನ್ ದಶನೈಶ್ಚೈವ ವ್ಯಚರಚ್ಛಕ್ತಿಸೈನ್ಯಕೇ ॥೭೩॥

ದುರ್ಮದೋಽಪಿ ಗದಾಽಘಾತೈರಿಭಾನ್ ಶಕ್ತೀಂಶ್ಚ ನಾಶಯನ್ ।
ಶಕ್ತಿಸೇನಾಂತಕ ಇವ ಕದನಂ ಪ್ರಕರೋದ್ರುಷಾ ॥೭೪॥

ತದ್ದೃಷ್ಟ್ವಾ ಶಕ್ತಿಸೇನಾಯಾ ನಾಶನಂ ಸಂಪದೀಶ್ವರೀ ।
ರಣಕೋಲಾಹಲಂ ತಸ್ಯ ನಾಶಾಯ ಸಮಚೋದಯತ್ ॥೭೫॥

ಅಥೇಭರಾಜ ಆಸಾದ್ಯ ಕರಭಂ ದೈತ್ಯವಾಹನಂ ।
ಅಯುಧ್ಯತ ವಿಷಾಣಾಗ್ರ ಕುಂಭಾಘಾತೈರ್ಮುಹುರ್ಮುಹುಃ ॥೭೬॥

ಕಕ್ಕುತ್ತಾ ಹಿಂಭಾಗದಲ್ಲಿ ಹೆಚ್ಚಾಗಿ ಮೂತ್ರವನ್ನು ಬಿಡುತ್ತಾ ಹೋಗುತ್ತಿದ್ದಿತು. ||೭೨||

ಅದು ತನ್ನ ವಕ್ಷಸ್ಥಲದಿಂದ ಕಾಲುಗಳನ್ನು ಬಲವಾಗಿ ಊರುವುದರಿಂದ, ಮುಖದ ಮೇಲೆ ಹೊಡೆಯುವುದರಿಂದ, ಕಚ್ಚುವುದರಿಂದ, ಹೀಗೆ ನಾನಾವಿಧದಲ್ಲಿ ಆನೆಗಳ ಸಮೂಹವನ್ನು ನಾಶಮಾಡುತ್ತಾ ಶಕ್ತಿಸೈನ್ಯಗಳಲ್ಲಿ ನುಗ್ಗಿತು. ||೭೩||

ದುರ್ಮದನೂ ಕೂಡ ಗದೆಗಳ ಪೆಟ್ಟುಗಳಿಂದ ಆನೆಗಳನ್ನೂ ಶಕ್ತಿಗಳನ್ನೂ ನಾಶಮಾಡುತ್ತಾ, ಶಕ್ತಿಸೈನ್ಯಕ್ಕೆ ಯಮನಂತೆ ಕಾಣುತ್ತಾ ಬಹಳ ಕೋಪದಿಂದ ಯುದ್ಧಮಾಡಿದನು. ||೭೪||

ಸಂಪನ್ನಾಥಾದೇವಿಯು ತನ್ನ ಕಡೆಯ ಶಕ್ತಿಗಳು ಈ ರೀತಿಯಲ್ಲಿ ನಾಶವಾಗುತ್ತಿದ್ದ ಸ್ಥಿತಿಯನ್ನು ಕಂಡು ರಣಕೋಲಾಹಲ ಎಂಬ ಆನೆಯನ್ನು ರಾಕ್ಷಸಸೈನ್ಯವನ್ನು ನಾಶಮಾಡಲು ಕಳುಹಿಸಿದಳು. ||೭೫||

ಅನಂತರ ಆ ಶ್ರೇಷ್ಠ ಆನೆಯು ರಾಕ್ಷಸವಾಹನವಾದ ಆ ಒಂಟೆಯನ್ನು ಸಮೀಪಿಸಿ ತನ್ನ ಕೊಂಬಿನ ತುದಿಗಳಿಂದ ಬಾರಿಬಾರಿಗೂ ಬಲವಾದ ಪೆಟ್ಟನ್ನು ಕೊಡುತ್ತಾ ಅದರೊಂದಿಗೆ ಯುದ್ಧಮಾಡಿತು. ||೭೬||

ಸೋಽಪಿ ದಂತೈರ್ಮೂರ್ಧಘಾತೈಃ ಪದಕ್ಷೇಪೈರಯುಧ್ಯತ ।
ಏವಂ ಯುದ್ಧಂ ಸಮಭವತ್ತುಮುಲಂ ಶರಭೇ ಭಯೋಃ ॥೭೭॥

ಅಥೇಭರಾಜಃ ಶರಭಂ ಪ್ರಸಹ್ಯಾ ಪಾತಯದ್ಭುವಿ ।
ನಿಪಾತ್ಯ ಪಾದೇನಾಕ್ರಮ್ಯಾಽಕರೋತ್ತಂ ಶರಭಂ ವ್ಯಸುಂ ॥೭೮॥

ಮರಿಷ್ಯಂತಂ ಪಿದಿತ್ವೋಽಷ್ಟ್ರಂ ಗದಾಹಸ್ತಃ ಖಮಾಪ್ಲುತಃ ।
ಸಂಭ್ರಾಮ್ಯ ಪಾತಯನ್ಮೂರ್ಧ್ನಿ ಗದಾಂ ವಾರಣ ಕುಂಭಯೋಃ ॥೭೯॥

ಗದಯಾಽಭಿಹತೋ ಹಸ್ತೀ ಭಿನ್ನಮೂರ್ಧಾ ಭ್ರಮುನ್ನುರಃ ।
ಜಾನುಭ್ಯಾಂ ವಿಕಲೋ ಭೂಮಿಂ ಪ್ರಾಪ್ತಃ ಶೋಣಿತಮುದ್ಗಿರನ್ ॥೮೦॥

ತಾವತ್ಸಂಪದಧೀಶ್ಯಾಽಪಿ ಶರೇಣೋರಸಿ ತಾಡಿತಃ ।
ಜಹೌ ಪ್ರಾಣಾನ್ ದುರ್ಮದೋಽಪಿ ದ್ವಿಧೋರಸಿ ವಿಪಾಟಿತಃ ॥೮೧॥

ಅದೂ ಕೂಡ ದಂತಗಳಿಂದ, ತಲೆಯಿಂದ ಗುದ್ದುವುದು, ಕಾಲಿನಿಂದ ಒದೆಯುವುದು, ಇವುಗಳನ್ನು ಮಾಡುತ್ತಾ ಯುದ್ಧಮಾಡಿತು. ಈ ರೀತಿಯಾಗಿ ಒಂಟೆ ಮತ್ತು ಆನೆಗಳಿಗೆ ತುಮುಲ ಯುದ್ಧವು ಸಂಭವಿಸಿತು. ||೭೭||

ಆನಂತರ ಶ್ರೇಷ್ಠ ಆನೆಯು ಒಂಟೆಯನ್ನು ಬಲವಾಗಿ ಹಿಡಿದು ಭೂಮಿಗೆ ಹಾಕಿಕೊಂಡಿತು. ಹೀಗೆ ಕೆಳಕ್ಕೆ ಅದನ್ನು ಉರುಳಿಸಿ ಶ್ರೇಷ್ಠ ಆನೆಯು ತನ್ನ ಕಾಲಿನಿಂದ ಅದನ್ನು ಮೆಟ್ಟಿ ಪ್ರಾಣವನ್ನು ತೆಗೆದುಬಿಟ್ಟಿತು. ||೭೮||

ಹೀಗೆ ಸಾಯುತ್ತಿರುವ ಒಂಟೆಯನ್ನು ನೋಡಿ ಕೂಡಲೇ ದುರ್ಮದ ರಾಕ್ಷಸನು ತನ್ನ ಗದೆಯನ್ನೆತ್ತಿಕೊಂಡು ಆಕಾಶಕ್ಕೆ ಹಾರಿ ಗದೆಯನ್ನು ತಿರುಗಿಸಿ ಶ್ರೇಷ್ಠ ಆನೆಯ ಕುಂಭಸ್ಥಳಕ್ಕೆ ಬಲವಾದ ಪೆಟ್ಟನ್ನು ಕೊಟ್ಟನು. ||೭೯||

ದುರ್ಮದನು ತನ್ನ ಗದೆಯಿಂದ ಆ ಶ್ರೇಷ್ಠ ಆನೆಗೆ ಹೊಡೆಯಲು ಅದರ ತಲೆಯು ಸೀಳಿ ತನ್ನ ವಕ್ಷಸ್ಥಲವನ್ನು ತಿರುಗಿಸುತ್ತಾ ಮೊಣಕಾಲನ್ನೇ ಮುರಿದುಕೊಂಡು ರಕ್ತವನ್ನು ಕಾರುತ್ತಾ ಭೂಮಿಗೆ ಬಿದ್ದಿತು. ||೮೦||

ಅಷ್ಟರೊಳಗಾಗಿಯೇ ಸಂಪನ್ನಾಥೆಯೂ ಕೂಡ ತನ್ನ ಬಾಣಗಳಿಂದ ದುರ್ಮದನ ವಕ್ಷಸ್ಥಲಕ್ಕೆ ಹೊಡೆದಳು. ಆಗ ದುರ್ಮದನೂ ಕೂಡ ವಕ್ಷಸ್ಥಲವು ಎರಡಾಗಿ ಸೀಳಲು ಪ್ರಾಣವನ್ನು ಬಿಟ್ಟುಬಿಟ್ಟನು. ||೮೧||

**ಹತಂ ಸೇನಾಧಿಪಂ ದೃಷ್ಟ್ವಾ ವಿದ್ರುತಾ ದೈತ್ಯಸೈನಿಕಾಃ ।
ಅದೃಷ್ಟ್ವಾ ಪೃಷ್ಠತೋ ಯಾಂತೀಃ ಶಕ್ತೀರ್ಜೀವಿತಹೇತವೇ ॥೮೨॥**

**ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ದುರ್ಮದವಧೋ
ಷಟ್‌ಷಷ್ಟಿತಮೋಽಧ್ಯಾಯಃ**

ತಮ್ಮ ಸೇನಾಪತಿಯನ್ನು ಸಂಪನ್ನಾಥಾದೇವಿಯು ಕೊಂದದ್ದನ್ನು ಕಂಡು ರಾಕ್ಷಸನ ಸೈನಿಕರೆಲ್ಲರೂ ಶೀಘ್ರವಾಗಿ ಓಡಿದರು. ತಮ್ಮ ಹಿಂದೆ ಅಟ್ಟಿಕೊಂಡು ಬರುತ್ತಿರುವ ಶಕ್ತಿಗಳನ್ನೂ ಸಹ ಹಿಂತಿರುಗಿ ನೋಡದೆ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅವರೆಲ್ಲರೂ ಶೀಘ್ರವಾಗಿ ಪಲಾಯನಮಾಡಿದರು. ॥೮೨॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದ ಶ್ರೀಲಲಿತಾಮಾಹಾತ್ಮ್ಯಯಲ್ಲಿ "ದುರ್ಮದನವಧೆ" ಎಂಬ ಅರವತ್ತಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಸಪ್ತಷಷ್ಟಿತಮೋಽಧ್ಯಾಯಃ ||

ಅರವತ್ತೇಳನೆಯ ಅಧ್ಯಾಯವು

ದುರ್ಮದಂ ನಿಹತಂ ಶ್ರುತ್ವಾ ಕುರಂಡೋ ದುರ್ಮದಾಗ್ರಜಃ ।
ಕ್ರುದ್ಧ ಆಜ್ಞಾಂ ಸಮಾದಾಯ ಕುಟಿಲಾಕ್ಷಾನ್ಮಹಾಬಲಃ ॥೧॥

ವಿಂಶತ್ಯಕ್ಷೌಹಿಣೀಯುಕ್ತೋ ಯೋದ್ಧುಮಭ್ಯಾಯಯೌ ಜವಾತ್ ।
ವಿಲೋಕ್ಯ ಪುನರಾಯಾಂತೀಂ ದೈತ್ಯಸೇನಾಂ ನಭೋನಿಭಾಮ್ ॥೨॥

ಅಶ್ವಾರೂಢಾಽಶ್ವಸೇನಾಭಿರಪಾರಾಭಿರಭಿವ್ರಜತ್ ।
ತುರಂಗಾ ವಿವಿಧಾಸ್ತುಂಗಾಃ ತರಂಗಾ ಇವ ರೇಜಿರೇ ॥೩॥

ದುರ್ಮದನ ಕೊಲೆಯು ಸಮಾಚಾರವನ್ನು ಕೇಳಿ ಅವನ ಅಣ್ಣನಾದ ಕುರಂಡ ನೆಂಬ ರಾಕ್ಷಸನು ಕೋಪಗೊಂಡನು. ಮಹಾಬಲಿಷ್ಠನಾದ ಈತನು ಕುಟಿಲಾಕ್ಷನ ಅಪ್ಪಣೆಯನ್ನು ಪಡೆದು ಯುದ್ಧಕ್ಕಾಗಿ ಹೊರಟನು. ॥೧॥

ದುರ್ಮದರಾಕ್ಷಸನ ಅಣ್ಣನು ಇಪ್ಪತ್ತು ಅಕ್ಷೌಹಿಣೀ ಸೈನ್ಯದೊಂದಿಗೆ ಕೂಡಿದವನಾಗಿ ವೇಗವಾಗಿ ಶಕ್ತಿಗಳೊಂದಿಗೆ ಯುದ್ಧಮಾಡಲು ಹೊರಟನು. ಅಶ್ವಾರೂಢಾ ಎಂಬ ಶಕ್ತಿಯು ಆಕಾಶಕ್ಕೆ ಸಮಾನವಾಗಿ ವಿಸ್ತಾರವಾದ ರಾಕ್ಷಸ ಸೈನ್ಯವು ಪುನಃ ಯುದ್ಧಕ್ಕೆ ಬರುತ್ತಿದ್ದುದನ್ನು ನೋಡಿದಳು. ॥೨॥

ಅಶ್ವಾರೂಢಾಶಕ್ತಿಯು ಅಪಾರವಾದ ಕುದುರೆಯ ಸೈನ್ಯಗಳಿಂದ ಕೂಡಿದವಳಾಗಿ ರಾಕ್ಷಸಸೈನ್ಯವನ್ನು ನಾಶಮಾಡಲು ಹೊರಟಳು. ಕುದುರೆಗಳು ಅತ್ಯಂತ ಎತ್ತರವಾದ ಅನೇಕ ವಿಧವಾದ ಅಲೆಗಳಂತೆ ಪ್ರಕಾಶಿಸುತ್ತಿದ್ದವು. ॥೩॥

ಪೃಥಗ್ವರ್ಣಾ ಸಂಘಶಃ ಸಾ ಸೇನಾಽತ್ಯಂತಂ ವ್ಯರಾಜತ ।
ಫೇನಪಿಂಡ ನಿಭಾನಶ್ವಾನಾರೂಢಾಃ ಕನಕಪ್ರಭಾಃ ॥೪॥

ನೀಲಾಂಶುಕಾಃ ಖಡ್ಗಖೇಟಧರಾಸ್ತಾರುಣ್ಯಗರ್ವಿತಾಃ ।
ಅಪರಾಃ ಕಾಲಜೀಮೂತನಿಭವಾಜಿ ಸಮಾಶ್ರಯಾಃ ॥೫॥

ಚಂದ್ರಕಾಂತಿ ಸಮಾಽಽಭಾಸಃ ಶೋಣಾಽಽಭರಣವಾಸಸಃ ।
ಧನುರ್ಬಾಣಧರಾ ನೀಲರತ್ನ ಕೋಟೀರಶೋಭಿತಾಃ ॥೬॥

ಅನ್ಯಾ ಗಾರುತ್ಮತ ನಿಭಾನಶ್ವಾನಾರುಹ್ಯ ವೇಗಿನಃ ।
ಕುರುವಿಂದ ಸಮಾನಾಂಗ್ಯಃ ಪಾಟಲಾಂಶುಕಭೂಷಣಾಃ ॥೭॥

ಆಗ ಸೈನ್ಯವು ನಾನಾವಿಧವಾದ ಬಣ್ಣಗಳುಳ್ಳದ್ದಾಗಿ ಗುಂಪುಗುಂಪಾಗಿ ಪ್ರಕಾಶಿಸಿತು. ಶಕ್ತಿಗಳು ನೊರೆಯ ಮುದ್ದೆಗಳಂತಿರುವ ಕುದುರೆಗಳನ್ನೇರಿ ಚಿನ್ನದ ಕಾಂತಿಯಂತೆ ಪ್ರಕಾಶವುಳ್ಳವರಾಗಿದ್ದರು. ॥೪॥

ಶಕ್ತಿಗಳು ನೀಲೀಬಟ್ಟೆಯನ್ನು ಧರಿಸಿದವರಾಗಿಯೂ ಕತ್ತಿ, ಖೇಟಕ ಎಂಬ ಆಯುಧಗಳನ್ನು ಹಿಡಿದಿರುವವರಾಗಿಯೂ, ಯೌವನದಿಂದ ಮದಿಸಿದವರಾಗಿಯೂ ಇದ್ದರು. ಇನ್ನು ಕೆಲವರು ಪ್ರಳಯಕಾಲದ ಮೇಘಕ್ಕೆ ಸಮಾನವಾದ ಕಾಂತಿಯುಳ್ಳ ಕುದುರೆಗಳನ್ನೇರಿದ್ದರು. ॥೫॥

ಅವರು ಚಂದ್ರಕಾಂತಿಗೆ ಸಮಾನವಾದ ಕಾಂತಿಯುಳ್ಳವರಾಗಿಯೂ, ಕೆಂಪು ಆಭರಣಗಳನ್ನು ಧರಿಸಿಸಿದವರಾಗಿಯೂ, ಧನುಸ್ಸುಗಳು ಮತ್ತು ಬಾಣಗಳನ್ನು ಹಿಡಿದಿರುವವರಾಗಿಯೂ, ನೀಲಿಯಾದ ರತ್ನದ ಓಲೆ ಮುಂತಾದ ಆಭರಣಗಳಿಂದ ಪ್ರಕಾಶಮಾನರಾಗಿಯೂ ಇದ್ದರು. ॥೬॥

ಇತರ ಕೆಲವರು ಪಕ್ಷಿಗಳಿಗೆ ಸಮಾನವಾದ ಕುದುರೆಗಳನ್ನೇರಿ ವೇಗವಾಗಿ ಹೋಗುತ್ತಿದ್ದರು. ಇನ್ನು ಕೆಲವರು ಕುರುವಿಂದ ಪುಷ್ಪಕ್ಕೆ ಸಮಾನವಾದ ಅವಯವಗಳುಳ್ಳವರಾಗಿಯೂ, ಕೆಂಪಾದ ರೇಷ್ಮೆವಸ್ತ್ರಗಳೂ ಮತ್ತು ಒಡವೆಗಳನ್ನು ಧರಿಸಿದವರಾಗಿಯೂ ಇದ್ದರು. ॥೭॥

ಕ್ವಚಿತ್ಸಮಾನಾಂಗಭೂಷಾಂಶುಕಾಶ್ವಾಃ ಶಕ್ತಯೋ ಯಯೌ ।
ಏವಂ ವಿಚಿತ್ರಾಭ್ರಯುತಸಂಧ್ಯಾಕಾಶನಿಭಾ ಚಮೂಃ ॥೮॥

ಅತಿವೇಲಾಂಬುಧಿನಿಭಾ ಗ್ರಸದ್ದೈತ್ಯಚಮೂಂ ದ್ರುತಮ್ ।
ಭೇರೀಕಾಹಲಗೋಶೃಂಗ ಪಟಹಾನಕ ನಿಸ್ವನಃ ॥೧೦॥

ತುರಂಗಖುರಕುದ್ದಾಲ ತಾಲನಿಸ್ವನಮಿಶ್ರಿತಃ ।
ಹುಂಕಾರಾಹ್ವಾನವಿಕ್ಷೇಪಾಸ್ಫೋಟಸಂರಾವ ಮಾಂಸಲಃ ॥೧೧॥

ದ್ಯಾವಾಪೃಥಿವ್ಯಂತರಾಳ ಮಾಪೂರ್ಯಾಧಿವ್ಯರೋಚತ ।
ಅಥ ಪ್ರವೃತ್ತಃ ಸಮರಃ ಕರಾಳೋಸುವಿಕರ್ಷಣಃ ॥೧೨॥

ಖಡ್ಗಪಾತ ಮಹಾಶಬ್ದ ಬಧಿರೀಕೃತ ದಿಙ್ಮುಖಃ ।
ತುರಂಗಖುರವಿಕ್ಷೇಪ ವಿಧೂತರಜಸಾಂ ಗಣಃ ॥೧೩॥

ಕೆಲವು ಕಡೆ ಸಮಾನವಾದ ಅಂಗಗಳ ಆಭರಣಗಳು ಮತ್ತು ಕುದುರೆಗಳನ್ನು ಹೊಂದಿರುವ ಶಕ್ತಿಗಳು ಹೋಗುತ್ತಿದ್ದರು. ಈ ರೀತಿಯಲ್ಲಿ ವಿಚಿತ್ರವಾದ ಮೇಘದಿಂದ ಕೂಡಿದ ಸಂಧ್ಯಾಕಾಲದ ಆಕಾಶದಂತೆ ಆ ಸೈನ್ಯವು ಕಾಣಿಸುತ್ತಿತ್ತು. ॥೮॥

ಎಲ್ಲೆ ಮೀರಿದ ಸಮುದ್ರದಂತಿರುವ ಶಕ್ತಿಸೈನ್ಯವು ದೈತ್ಯಸೈನ್ಯವನ್ನು ಶೀಘ್ರವಾಗಿ ನುಂಗಲು ಪ್ರಾರಂಭಿಸಿತು. ಆಗ ಅಲ್ಲೆಲ್ಲಾ ಕಡೆಯಲ್ಲೂ ಭೇರಿ, ಕಹಳೆ, ಕೊಂಬು, ತಮಟೆ, ಆನಕ ಮುಂತಾದ ವಾದ್ಯಗಳ ಘೋರಶಬ್ದವು ಕೇಳಿಸಿತು. ॥೧೦॥

ಕುದುರೆಗಳ ಗೊರಸುಗಳು, ಕುದ್ದಾಲ, ತಾಳ ಮುಂತಾದ ಶಬ್ದಗಳಿಂದ ಮಿಶ್ರವಾದ, ಹುಂಕಾರಪೂರ್ವಕವಾದ ಯುದ್ಧಾಹ್ವಾನ, ಚಿನ್ನುತಟ್ಟುವ ಧ್ವನಿ ಮುಂತಾದುವುಗಳಿಂದ ಆ ಪ್ರದೇಶವೆಲ್ಲವೂ ತುಂಬಿತ್ತು. ॥೧೧॥

ಈ ಶಬ್ದವೆಲ್ಲವೂ ಭೂವ್ಯಂತರಿಕ್ಷಗಳೆರಡನ್ನೂ ವ್ಯಾಪಿಸಿ ಕೇಳಿಸಿತು. ಅನಂತರ ಪ್ರಾಣವನ್ನು ಸೆಳೆಯುವ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ॥೧೨॥

ಕತ್ತಿಯ ಬೀಳುವಿಕೆಯ ಮಹಾಶಬ್ದಗಳಿಂದ ದಿಕ್ಕಿನ ಅಂಚೆಲ್ಲವೂ ಕಿವುಡಾಗುವಂತಿತ್ತು. ಕುದುರೆಯ ಗೊರಸುಗಳ ಇಡುವಿಕೆಯಿಂದ ಮೇಲಕ್ಕೆ ಹಾರಿಸಿದ ಧೂಳುಗಳ ರಾಶಿಯು ಸಹಿಸಲಸಾಧ್ಯವಾಗಿತ್ತು. ॥೧೩॥

ಸಾಂವರ್ತಕೆ ಮಹಾಮೇಘ ಸಂಘವತ್ಸಂ ಸಮಾಕ್ರಮತ್ ।
ಕ್ಷಣಂ ಕುಹೂನಿಶೀಥಾಽಽಭಂ ಜಾತಂ ಹೀನಾವಲೋಕನಮ್ ॥೧೪॥

ತತೋ ಹೇತಿ ಪ್ರಪತನೋಚ್ಚಲಚ್ಛೋಣಿತವೃಷ್ಟಿಭಿಃ ।
ರಜೋಽಂಧಕಾರಃ ಸಂಶಾಂತಃ ಪುನರಾಸೀನ್ಮಹಾರಣಃ ॥೧೫॥

ಪರಸ್ಪರಂ ಪ್ರಾಣಹರಃ ಶಕ್ತಿಸೈನ್ಯಸ್ಯ ಚಾಽಸುರೈಃ ।
ಬಲೀಯಸೀಭಿರ್ದೈತ್ಯಾನಾಂ ಶಕ್ತಿಭಿಸ್ತೇಜ ಆಹೃತಂ ॥೧೬॥

ಭಗ್ನಾಽಭವ ದ್ದೈತ್ಯಸೇನಾ ಶಕ್ತಿಭಿರ್ಗಾಢಮರ್ದಿತಾ ।
ಛಿನ್ನಪಾದಕರಶ್ರೋತ್ರ ಕುಕ್ಷಿಪೃಷ್ಠಾ ಮಹಾಸುರಾಃ ॥೧೭॥

ಪ್ರಾಸ್ಯ ಶಸ್ತ್ರಾಣಿ ಪರಿತೋ ವಿಧುನ್ವಂತಃ ಕರಾನ್ಮುಹುಃ ।
ವದಂತೋ ಹಾ ಹತಾಃ ಸ್ಮೇತಿ ತ್ಯಕ್ತ್ವಾ ಯುದ್ಧಂ ವಿದುದ್ರುವುಃ ॥೧೮॥

ಆ ಧೂಳು ಸಾಂವರ್ತಕ ಎಂಬ ಪ್ರಳಯಕಾಲದ ಮಹಾಮೇಘದ ಸಮೂಹದಂತೆ ಆಕಾಶವನ್ನೆಲ್ಲವನ್ನೂ ವ್ಯಾಪಿಸಿತು. ಇದರಿಂದ ಆಕಾಶದಲ್ಲಿ ಕ್ಷಣಕಾಲ ಅಮಾವಾಸ್ಯೆ ರಾತ್ರಿಯ ಕತ್ತಲೆಯು ಮುಚ್ಚಿದಂತಾಗಿ ನೋಡಲು ವಿಕಾರವಾಗಿತ್ತು. ॥೧೪॥

ಅನಂತರ ಕತ್ತಿಯ ಬೀಳುವಿಕೆಯಿಂದ ಹೊರಗೆ ಚಿಮ್ಮುತ್ತಿರುವ ರಕ್ತದ ಮಳೆಯಿಂದ ಧೂಳು ಕವಿದಿರುವುದರಿಂದ ಉಂಟಾಗಿದ್ದ ಕತ್ತಲೆಯು ನಾಶವಾಯಿತು. ಆಮೇಲೆ ಪುನಃ ದೊಡ್ಡ ಯುದ್ಧವು ಪ್ರಾರಂಭವಾಯಿತು. ॥೧೫॥

ರಾಕ್ಷಸರು ಶಕ್ತಿಸೈನ್ಯವನ್ನೂ, ಶಕ್ತಿಗಳು ಬಲಿಷ್ಠರಾದ ರಾಕ್ಷಸರನ್ನೂ ಸಾಯಿಸುತ್ತಾ ಪರಸ್ಪರರ ತೇಜಸ್ಸನ್ನು ಹಾಳುಮಾಡುತ್ತಿದ್ದರು. ॥೧೬॥

ಶಕ್ತಿಗಳ ಗಾಢಪ್ರಹಾರದಿಂದ ಬಹಳ ಪೀಡೆಗೆ ಒಳಗಾದ ರಾಕ್ಷಸಸೈನ್ಯವು ಭಗ್ನವಾಗುತ್ತಾ ಬಂತು. ದೊಡ್ಡ ರಾಕ್ಷಸರ ಕಾಲುಗಳು, ಕೈಗಳು, ಕಿವಿಗಳು, ಹೊಕ್ಕುಳುಗಳು, ಹಿಂಭಾಗಗಳೂ ಇವೆಲ್ಲವೂ ಕತ್ತರಿಸಿ ಹೋದವು. ॥೧೭॥
ದೊಡ್ಡ ರಾಕ್ಷಸರೂ ಕೂಡ ತಮ್ಮ ಶಸ್ತ್ರಗಳನ್ನು ಅಲ್ಲಿಯೇ ಬಿಸುಟು ಕೈ ಎತ್ತಿ ಬಾರಿಬಾರಿಗೂ "ಅಯ್ಯೋಯ್ಯೋ! ನಾವು ಹಾಳಾದೆವು" ಎಂದು ಕಿರಿಚುತ್ತಾ ಯುದ್ಧಮಾಡುವುದನ್ನು ಬಿಟ್ಟು ಓಡತೊಡಗಿದರು. ॥೧೮॥

ನಿಶಮ್ಯ ಸೇನಾಂ ಸ್ವಾಂ ಭಗ್ನಾಂ ಕುರಂಡಃ ಕ್ರೋಧಮೂರ್ಛಿತಃ ।
ಅಶ್ವಾರೂಢೋ ಮಹಚ್ಚಾಪಂ ವಿಕರ್ಷನ್ ಸಾಯಕಾನ್ ಕ್ಷಿಪನ್ ॥೧೯॥

ಶಕ್ತಿಸೇನಾಂ ಸಮಾವಿಶ್ಯ ನಾಶಯತ್ತಾಃ ಸಹಸ್ರಶಃ ।
ಶರವರ್ಷೈಃ ಕುರಂಡಾಽಬ್ದ ನಿರ್ಮುಕ್ತೈಃ ಶಕ್ತಿವಾಹಿನೀ ॥೨೦॥

ಭಗ್ನಾ ಸೇತುರಿವೋನ್ನಮ್ರಾ ಮಹಾಜಲ ಸಮಾಗಮಾತ್ ।
ಭಗ್ನಾಯಾಂ ಶಕ್ತಿಸೇನಾಯಾಮಶ್ವಾರೂಢಾಂ ಸಮಾಸದತ್ ॥೨೧॥

ಅಪರಾಜಿತನಾಮಾನಂ ವಾಜಿನಂ ಸಮಧಿಷ್ಠಿತಾಮ್ ।
ತಪ್ತಹೇಮನಿಭಾಮಚ್ಛ ದುಕೂಲಾಽಽಭರಣೋಜ್ಜ್ವಲಾಂ ॥೨೨॥

ಕುರಂಡನು ತನ್ನ ಸೈನ್ಯವು ಈ ರೀತಿಯಲ್ಲಿ ನಾಶವಾದದ್ದನ್ನು ಕಂಡು ಕೋಪದಿಂದ ಮೂರ್ಛೆಹೊಂದಿದವನಾಗಿ ಚೇತರಿಸಿಕೊಂಡು ಕುದುರೆಯನ್ನೇರಿ ದೊಡ್ಡ ಬಿಲ್ಲುಬಾಣಗಳನ್ನು ಸೆಳೆಯುತ್ತಾ ಯುದ್ಧಕ್ಕೆ ಸಿದ್ಧನಾದನು. ||೧೯||

ಕುರಂಡರಾಕ್ಷಸನು ಶಕ್ತಿಗಳ ಸೈನ್ಯದ ಒಳಕ್ಕೆ ನುಗ್ಗಿ ತನ್ನ ಬಾಣಗಳ ಸುರಿಮಳೆಯಿಂದ ಸಾವಿರಾರು ಮಂದಿ ಶಕ್ತಿಗಳನ್ನು ನಾಶಮಾಡಿದನು. ಕುರಂಡನೆಂಬ ಮೇಘದಿಂದ ಬಂದ ಬಾಣಗಳೆಂಬ ಸುರಿಮಳೆಗಳಿಂದ ಶಕ್ತಿಸೇನೆಯೆಂಬ ನದಿಯ ಸೇತುವೆಯು ಒಡೆಯಿತು. ||೨೦||

ಶಕ್ತಿಗಳೆಂಬ ನದಿಯ ಸೇತುವೆಯು, ಈ ರೀತಿಯಲ್ಲಿ ಕುರಂಡನೆಂಬ ರಾಕ್ಷಸನ ಬಾಣಗಳೆಂಬ ಮಳೆಯ ವಿಶೇಷವಾದ ಜಲದಿಂದ ಶಕ್ತಿಗಳ ಸೈನ್ಯವೆಂಬ ಸೇತುವೆಯು ನಷ್ಟವಾಗಲು, ಅವನು ಅಶ್ವಾರೂಢಾ ಎಂಬ ಶಕ್ತಿಗೆ ಎದುರಾಗಿ ಯುದ್ಧಮಾಡಲು ಬಂದನು. ||೨೧||

ಕುರಂಡರಾಕ್ಷಸನು ಅಪರಾಜಿತಾ ಎಂಬ ಹೆಸರಿನ ಕುದುರೆಯ ಮೇಲೇರಿದ್ದ, ಪುಟಕ್ಕೆ ಹಾಕಿದ ಚಿನ್ನದಂತೆ ಕಾಂತಿಯಿಂದ ಕೂಡಿದ್ದ, ಸ್ವಚ್ಛವಾದ ವಸ್ತ್ರ ಮತ್ತು ಆಭರಣಗಳಿಂದ ಪ್ರಕಾಶಿಸುತ್ತಿದ್ದ ಅಶ್ವಾರೂಢಾ ಎಂಬ ಶಕ್ತಿಯನ್ನು ನೋಡಿದನು. ||೨೨||

ಪಾಶಾಂಕುಶಧನುರ್ಬಾಣಧರಾಂ ದೃಷ್ಟ್ವಾಽಬ್ರವೀದ್ವಚಃ ।
ದುಷ್ಟೇವ ಲಿಪ್ತಾಽಸಿ ಚಿರಂ ಮೋಚಯಾಮ್ಯವಲೇಪಕಂ ॥೨೩॥

ಯನ್ಮೇ ತ್ವಯಾ ಹತೋ ಭ್ರಾತಾ ತತ್ಫಲಂ ಪ್ರಾಪ್ಸ್ಯಸಿ ದ್ರುತಂ ।
ತ್ವಾಂ ನಿಹತ್ಯ ರಣೇ ಪಶ್ಚಾನ್ಮುಕ್ತಃ ಸ್ಯಾಂ ಭ್ರಾತೃದೋಷತಃ ॥೨೪॥

ಮಯಿ ಪ್ರದರ್ಶಯಾಽದೌ ತೇ ವೀರ್ಯಂ ಯಚ್ಚಿರಸಂಭೃತಂ ।
ಏವಂ ಪ್ರೋಕ್ತಾ ರೋಷಿತಾಽಶ್ವಾರೂಢಾ ತೀಕ್ಷ್ಣೈಃ ಶರೈಸ್ತ್ರಿಭಿಃ॥೨೫॥

ವಿವ್ಯಾಧ ತತ್ರ ಚೈಕೇನ ವಾಹಸ್ಯ ಶಿರ ಆಚ್ಛಿನತ್ ।
ದ್ವಿತೀಯೇನ ಚ ಕೋಟಿ(ಟೀ)ರಂ ಪಾತಯಾಮಾಸ ಭೂತಲೇ ॥೨೬॥

ಕುರಂಡರಾಕ್ಷಸನು ಪಾಶ, ಅಂಕುಶ, ಧನುಸ್ಸು ಬಾಣಗಳು ಇವುಗಳನ್ನು ಕೈಯಲ್ಲಿ ಹಿಡಿದಿದ್ದ ಅಶ್ವಾರೂಢಾ ಶಕ್ತಿಯನ್ನು ನೋಡಿ “ಎಲೌ ಶಕ್ತಿಯೇ, ಕೆಟ್ಟವಳಂತೆ ಬಹಳಕಾಲದಿಂದಲೂ ಗರ್ವವನ್ನು ಹೊಂದಿದ್ದೀಯೆ. ನಾನೀಗ ನಿನ್ನ ಅಹಂಕಾರವನ್ನು ಬಿಡಿಸುವೆನು” ಎಂದನು. ॥೨೩॥

ನನ್ನ ತಮ್ಮನನ್ನು ನೀನು ಕೊಂದಿದ್ದೀಯೆ. ಆದ್ದರಿಂದ ನೀನು ಶೀಘ್ರದಲ್ಲಿಯೇ ಅದರ ಪ್ರತಿಫಲವನ್ನು ಅನುಭವಿಸುವೆ. ನಿನ್ನನ್ನು ಯುದ್ಧದಲ್ಲಿ ಮುಂಚೆ ಕೊಂದು ನನ್ನ ತಮ್ಮನ ಮರಣದಿಂದ ಸಂಭವಿಸಿದ ದೋಷದಿಂದ ನಾನು ಬಿಡುಗಡೆ ಹೊಂದುವೆನು. ॥೨೪॥

ನೀನು ಬಹಳ ಕಾಲದಿಂದಲೂ ಗಳಿಸಿದ ನಿನ್ನ ವೀರ್ಯವನ್ನು ಮೊದಲು ನನ್ನಲ್ಲಿ ತೋರಿಸು. ಎಂದು ಹೇಳಿದ ಕುರಂಡ ರಾಕ್ಷಸನನ್ನು ಆ ಅಶ್ವಾರೂಢಾ ಎಂಬ ಶಕ್ತಿಯು ತೀಕ್ಷ್ಣವಾದ ಮೂರು ಬಾಣಗಳಿಂದ ಹೊಡೆದಳು. ॥೨೫॥

ಇವುಗಳ ಪೈಕಿ ಒಂದು ಬಾಣದಿಂದ ಅಶ್ವಾರೂಢಾಶಕ್ತಿಯು ರಾಕ್ಷಸನ ವಾಹನವಾದ ಕುದುರೆಯ ತಲೆಯನ್ನು ಕತ್ತರಿಸಿದಳು. ಅವಳು ಎರಡನೆಯ ಬಾಣದಿಂದ ಅವನ ತಲೆಯ ಮೇಲಿದ್ದ ಕಿರೀಟವನ್ನು ಭೂಮಿಗೆ ಬೀಳಿಸಿದಳು. ॥೨೬॥

ಆಕೆಯು ಮೂರನೆಯ ಬಾಣದಿಂದ ಆ ಕುದುರೆಯ ವಕ್ಷಸ್ಥಳವನ್ನು ವೇಗದಿಂದ ಸೀಳಿದಳು. ಹೃದಯಕ್ಕೆ ಬಲವಾದ ಪೆಟ್ಟು ಬೀಳಲಾಗಿ ಕುದುರೆಯು ತನ್ನ ತಲೆಯೂ ಕಳಚಿ ಬೀಳಲು ಕೆಳಗೆ ಸಾಯುವಂತೆ ಬಿದ್ದಿತು. ॥೨೭॥

ತೃತೀಯೇನ ತಸ್ಯ ವಕ್ಷೋ ದಾರಯಾಮಾಸ ವೇಗತಃ ।
ಹತಾಽಶ್ವೋ ಭ್ರಷ್ಟಮುಕುಟೋ ವಿಹತೋ ಬಲವದ್ಧೃದಿ ॥೨೭॥

ಮೂರ್ಛಿತಃ ಕೃತ್ತಮೂಲಸ್ಯ ಪಪಾತೇವ ಮಹಾಸುರಃ ।
ಕ್ಷಣೇನ ಮೂರ್ಛಾ ನಿರ್ಮುಕ್ತಃ ಪ್ರಾಹ ತಾಂ ರಣಮೂರ್ಧನಿ ॥೨೮॥

ರಣಶ್ಲಾಘ್ಯಾ ಹಿ ಸಾಧು ತ್ವಂ ಸಮ್ಮತಾಽಸಿ ರಣೇ ಮಮ ।
ಶ್ರುತ್ವೇತ್ಯಾಹ ಪುನರ್ದೇವೀ ಧಿಕ್ತ್ವಂ ಜೀವಸಿ ದೈತ್ಯಕ ॥೨೯॥

ಯತ್ನಾನ್ಮಯಾ ಭಾಷಿತುಂ ತ್ವಂ ಜೀವಶೇಷೀ ಕೃತೋ ಹ್ಯಸಿ ।
ಪಶ್ಯೇಮಂ ತಂ ಜೀವಹರಂ ಶರಂ ಶತ್ರುಮದಾಪಹಂ ॥೩೦॥

ಶ್ರುತ್ವಾ ದೇವೀ ವಚೋ ದೇವ್ಯಾಃ ಕ್ರೋಧಾಗ್ನಿಜ್ವಲಿತಾಕೃತಿಃ ।
ದೇವ್ಯಾಶ್ಚಾಪಂ ಪ್ರಚಿಚ್ಛೇದ ಶರೇಣಾಽನತ ಪರ್ವಣಾ ॥೩೧॥

ಆಗ ದೊಡ್ಡ ರಾಕ್ಷಸನು ಬುಡವನ್ನು ಕತ್ತರಿಸಿದಾಗ ಮರವು ಹೇಗೋ ಹಾಗೆ ಮೂರ್ಛೆಯನ್ನು ಹೊಂದಿ ಕೆಳಗೆ ಬಿದ್ದನು. ಕ್ಷಣಕಾಲದಲ್ಲಿಯೇ ಅವನು ಮೂರ್ಛೆಯಿಂದ ತಿಳಿದು ಎದ್ದು, ಯುದ್ಧರಂಗದ ಮುಂಭಾಗದಲ್ಲಿ ಆ ಶಕ್ತಿಯನ್ನು ಕುರಿತು ಈ ರೀತಿಯಲ್ಲಿ ಹೇಳಿದನು. ||೨೮||

ಎಲೌ ಶಕ್ತಿಯೇ, ನೀನು ಯುದ್ಧದಲ್ಲಿ ಶ್ಲಾಘನೆಗೆ ಅರ್ಹಳಾಗಿದ್ದೀಯೆ. ನನಗೆ ಮೆಚ್ಚಿಗೆಯಾಗುವ ರೀತಿಯಲ್ಲಿ ಯುದ್ಧಮಾಡಿದ್ದೀಯೆ. ಈ ಮಾತನ್ನು ಕೇಳಿ ಅಶ್ವಾರೂಢಾದೇವಿಯು ಎಲೋ ರಾಕ್ಷಸನೇ ನಿನ್ನನ್ನು ಕೊಲ್ಲದೆ ಶ್ಲಾಘನೆಯೂ ನಿಂದ್ಯವಾದುದು! ನಿನ್ನ ಜೀವನವು ನಿಂದೆಗೆ ಅರ್ಹವಾದುದು. ಎಂದಳು. ||೨೯||

ನಾನು ಈ ಮಾತನ್ನು ಆಡುವುದಕ್ಕೋಸ್ಕರವೇ ಪ್ರಯತ್ನಪೂರ್ವಕವಾಗಿ ನಿನ್ನನ್ನು ಬದುಕಿಸಿದ್ದೇನೆ. ಆದರೆ ಶತ್ರುಗಳ ಅಹಂಕಾರವನ್ನು ಮುರಿಯುವ, ನಿನ್ನ ಪ್ರಾಣವನ್ನು ತೆಗೆಯುವ, ಈ ಬಾಣವನ್ನು ನೋಡು. ಎಂದಳು. ||೩೦||

ದೇವಿಯ ಈ ಮಾತನ್ನು ಕೇಳಿ ರಾಕ್ಷಸನು ಕೋಪವೆಂಬ ಬೆಂಕಿಯಿಂದ ಉರಿಯುತ್ತಿರುವ ಆಕಾರವುಳ್ಳವನಾಗಿ ಸ್ವಲ್ಪ ಬಾಗಿದ ತುದಿಯುಳ್ಳ ಬಾಣದಿಂದ ಆಕೆಯ ಬಿಲ್ಲನ್ನು ಕತ್ತರಿಸಿದನು. ||೩೧||

ಚಿಚ್ಛೇದ ಸಾಽಪಿ ಖಡ್ಗೇನ ಧನುರ್ದೈತ್ಯ ಕರಸ್ಥಿತಂ ।
ಅಥ ದೈತ್ಯೋಽಪಿ ಖಡ್ಗೇನ ತಸ್ಯಾಃ ಖಡ್ಗಂ ದ್ವಿಧಾಽಕರೋತ್ ॥೩೨॥

ಪುನರ್ಜಘಾನ ತುರಗಂ ಖಡ್ಗೇನೈವಾಽತಿವೇಗತಃ ।
ಖಡ್ಗಪ್ರಹಾರ ನಿರ್ಭಿನ್ನಮಸ್ತಕೋಽಶ್ವೋ ಹ್ಯಪಾಕ್ರಮತ್ ॥೩೩॥

ತಾವದ್ದೇವ್ಯಪಿ ಸಂಕ್ರುದ್ಧಾ ಬದ್ಧ್ವಾ ಪಾಶೇನ ವೈ ದೃಢಮ್ ।
ಆಕೃಷ್ಯ ಪ್ರಾಹರನ್ಮೂರ್ಧ್ನಿ ಸೃಣಿನಾ ದೀಪ್ತತೇಜಸಾ ॥೩೪॥

ತೇನಾಽಂಕುಶೇನ ನಿರ್ಭಿನ್ನಮೂರ್ಧಾ ದೈತ್ಯೋ ಮಮಾರ ಹ ।
ಏವಂ ಕುರಂಡಂ ನಿಹತಂ ಶ್ರುತ್ವಾ ಸೇನಾಧಿಪೋ ರುಷಾ ॥೩೫॥

ಪಾರ್ಶ್ವಸ್ಥಾನ್ ಪೇಕ್ಷ್ಯ ಸೇನೇಶಾನ್ ಕುರಂಕಪ್ರಮುಖಾಂಸ್ತದಾ ।
ಕುಟಿಲಾಕ್ಷಃ ಪ್ರಾಹ ಸೇನಾಽಧೀಶೋಽರುಣಿತಲೋಚನಃ ॥೩೬॥

ಆಕೆಯೂ ಕೂಡ ರಾಕ್ಷಸನ ಕೈಯಿನಲ್ಲಿದ್ದ ಬಿಲ್ಲನ್ನು ತನ್ನ ಕತ್ತಿಯಿಂದ ಕತ್ತರಿಸಿದಳು. ಅನಂತರದಲ್ಲಿ ಆ ರಾಕ್ಷಸನೂ ತನ್ನ ಕತ್ತಿಯಿಂದ ಆಕೆಯ ಕತ್ತಿಯನ್ನು ಎರಡಾಗಿ ತುಂಡರಿಸಿದನು. ॥೩೨॥

ಅವನು ಆಕೆಯ ಕುದುರೆಯನ್ನು ತನ್ನ ಕತ್ತಿಯಿಂದಲೇ ಬಹಳ ವೇಗವಾಗಿ ಹೊಡೆದನು. ರಾಕ್ಷಸನ ಕತ್ತಿಯ ಪ್ರಹಾರದಿಂದ ತಲೆಯು ಸೀಳಲು ಆ ಕುದುರೆಯು ಹಿಂದಕ್ಕೆ ಓಡಿತು. ॥೩೩॥

ಅಷ್ಟರೊಳಗಾಗಿಯೇ ದೇವಿಯೂ ಕೂಡ ಕೋಪದಿಂದ ಕೂಡಿದವಳಾಗಿ ತನ್ನ ಪಾಶದಿಂದ ಅವನನ್ನು ಗಟ್ಟಿಯಾಗಿ ಕಟ್ಟಿ ಸೆಳೆದು ಉರಿಯುತ್ತಿರುವ ತೇಜಸ್ಸುಳ್ಳ ತನ್ನ ಅಂಕುಶದಿಂದ ಅವನ ತಲೆಯಮೇಲೆ ಹೊಡೆದಳು. ॥೩೪॥

ಈ ಅಂಕುಶಪ್ರಹಾರದಿಂದ ರಾಕ್ಷಸನ ತಲೆಯು ಸೀಳಿಹೋಗಿ ಅವನು ಸತ್ತುಬಿದ್ದನು. ಈ ರೀತಿಯಾಗಿ ಕುರಂಡನ ಕೊಲೆಯನ್ನು ಕೇಳಿ ಸೈನ್ಯಾಧಿಪತಿಯು ಬಹಳ ಕೋಪಗೊಂಡನು. ॥೩೫॥

ಸೇನಾಪತಿಯಾದ ಕುಟಿಲಾಕ್ಷನು ತನ್ನ ಪಕ್ಕದಲ್ಲಿದ್ದ ಕುರಂಕ ಮೊದಲಾದ ಸೇನಾಪತಿಗಳನ್ನು ನೋಡಿ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಈ ರೀತಿಯಲ್ಲಿ ಹೇಳಿದನು. ॥೩೬॥

ಹೇಹೇ ಕುರಂಕ ಪ್ರಮುಖಾಃ ಪಂಚ ಯೂಯಂ ಸ್ವಸೇನಯಾ ।
ಯುತಾ ಗತ್ವಾ ದ್ರುತಂ ಬದ್ಧ್ವಾಹತ್ವಾ ತಾಂ ವಾರಣೇ ದ್ರುತಂ ॥೩೭॥

ಸಮಾನಯಧ್ವಂ ವಃ ಶಕ್ತಿರಸ್ತಿ ಮಾಯಾ ಮಯೀ ನನು ।
ಸರ್ಪಿಣ್ಯಾಖ್ಯಾ ತಯಾ ಸರ್ವೇ ನ ತ್ವಜೇಯಾಃ ಸುರಾಸುರೈಃ ॥೩೮॥

ಇತ್ಯಾಜ್ಞಪ್ತಾಃ ಕರಂಕಾದ್ಯಾ ನತ್ವಾ ಸೇನಾಧಿಪೇಶ್ವರಂ ।
ವಿಂಶತ್ಯಕ್ಷೌಹಿಣೀಯುತಾಃ ಪ್ರತ್ಯೇಕಂ ಯೋದ್ಧುಮಾಯಯುಃ॥೩೯॥

ಕರಂಕೋ ಗರ್ದಭರಥೇ ಗಜೇ ಕಾಕಮುಖಸ್ತಥಾ ।
ವಜ್ರಲೋಮಾ ಗೃಧ್ರರಥೇ ಕರಭೇ ವಜ್ರದಂತಕಃ ॥೪೦॥

ವಜ್ರವಕ್ತ್ರಃ ಖರವರೇ ಸಂರೂಢಾ ಭೀಮದರ್ಶನಾಃ ।
ಯುದ್ಧಸಂರಂಭ(ಂ)ದೈತ್ಯಾನಾಂ ನಿಶಮ್ಯಾತಿಮಹಾಧ್ವನಿಂ ॥೪೧॥

ಎಲೈ ಕುರಂಕನೇ ಮೊದಲಾದ ಸೇನಾಪತಿಗಳೇ, ನೀವು ಐವರೂ ನಿಮ್ಮ ಸೈನ್ಯಗಳೊಡನೆ ಹೋಗಿ ಅವಳನ್ನು ಆನೆಗೆ ಶೀಘ್ರವಾಗಿ ಕಟ್ಟಿ ಎಳೆದುಕೊಂಡು ಬನ್ನಿ. ॥೩೭॥

ನೀವು ಸರ್ಪಿಣೀ ಎಂಬ ಮಾಯಾಸ್ವರೂಪವಾದ ಶಕ್ತಿಯನ್ನು ಪಡೆದಿರುವಿರಷ್ಟೆ? ಅದರ ಬಲದಿಂದ ಅವಳನ್ನು ಹಿಡಿದುಕೊಂಡು ಬನ್ನಿ. ಹಾಗಲ್ಲದೆ ದೇವತೆಗಳು ಅಥವಾ ರಾಕ್ಷಸರೂ ಕೂಡ ಆಕೆಯನ್ನು ಜಯಿಸಲಾರರು. ॥೩೮॥

ಹೀಗೆ ಕುಟಿಲಾಕ್ಷನು ಅಪ್ಪಣೆಮಾಡಲು ಕರಂಕಮೊದಲಾದವರು ಸೇನಾಪತಿಯಾದ ಅವನಿಗೆ ನಮಸ್ಕರಿಸಿ, ಇಪ್ಪತ್ತು ಅಕ್ಷೌಹಿಣೀ ಸೈನ್ಯದಿಂದ ಕೂಡಿದವರಾಗಿ ಪ್ರತ್ಯೇಕವಾಗಿ ಅವಳೊಂದಿಗೆ ಯುದ್ಧಮಾಡಲು ಬಂದರು. ॥೩೯॥

ಕರಂಕನು ಕತ್ತೆಯನ್ನು ಕಟ್ಟಿರುವ ರಥದಲ್ಲಿಯೂ, ಕಾಕಮುಖನು ಆನೆಯ ರಥದಲ್ಲಿಯೂ, ವಜ್ರದಂತಕನು ಒಂಟೆಯ ರಥದಲ್ಲಿಯೂ ವಜ್ರಲೋಮನು ಹದ್ದಿನ ರಥದಲ್ಲಿಯೂ ಬಂದರು. ॥೪೦॥

ವಜ್ರವಕ್ತ್ರನು ಶ್ರೇಷ್ಠವಾದ ಕತ್ತೆಯ ರಥದ ಮೇಲೆಯೂ ಕುಳಿತು ಬಂದನು. ಇವರೆಲ್ಲರೂ ಭಯಂಕರವಾದ ನೋಟವುಳ್ಳವರಾಗಿದ್ದರು. ಅಶ್ವಾರೂಢಾಶಕ್ತಿಯು

ಅಶ್ವಾರೂಢಾ ಚ ಸಂಪತ್ತಿ ದೇವೀ ಸೇನಾಮಯೂಯುಜತ್ ।
ಅಥ ಸಂಮುಖಮಾಸಾದ್ಯ ಸೇನೇ ತೇ ಶಕ್ತಿದೈತ್ಯಯೋಃ ॥೪೨॥

ವಿಚಿತ್ರವಾದಿತ್ರರವೇ ಹೇತಿ ಸಂಚಲನೋಜ್ಜ್ವಲೇ ।
ಚಕ್ರಾತೇ ಶರವರ್ಷಾಣಿ ದೂರಾನ್ಮೇಘ ತತೀ ಇವ ॥೪೩॥

ಅಥ ಸೇನಾದ್ವಯಂ ಶ್ಲಿಷ್ಟಂ ವಿನಿಘ್ನದಿತರೇತರಮ್ ।
ಕ್ರೋಧದಷ್ಟ(ರ)ದಚ್ಛದಾಢ್ಯಂ ಭ್ರುಕುಟೀ ಕುಟಿಲಾನನಂ ॥೪೪॥

ಪಾಟಿತಂ ಸಿತ ಖಡ್ಗೇನ ಪ್ರೋತಂ ಭಲ್ಲೇಷು ಪ್ರಾಂಶುಷು ।
ಛಿದ್ರಿತಂ ಶರಜಾಲೇನ ಪರಿಘೋತ್ಪಾತ ಪೇಷಿತಮ್ ॥೪೫॥

ಯುದ್ಧದಲ್ಲಿ ಸಡಗರವನ್ನು ತೋರಿಸುತ್ತಾ ಇರುವ ರಾಕ್ಷಸರ ಮಹಾಧ್ವನಿಯನ್ನು ಕೇಳಿದಳು. ॥೪೧॥

ಆಗ ಅಶ್ವಾರೂಢಾ ಮತ್ತು ಸಂಪನ್ನಾಥಾದೇವಿಯರಿಬ್ಬರೂ ತಂತಮ್ಮ ಸೈನ್ಯಗಳನ್ನು ಸಿದ್ಧಗೊಳಿಸಿದರು. ಅನಂತರ ಶಕ್ತಿ ಮತ್ತು ರಾಕ್ಷಸಸೈನ್ಯಗಳೆರಡೂ ಎದುರು ಬದರಾಗಿ ನಿಂತವು. ॥೪೨॥

ಈ ಎರಡು ಸೈನ್ಯಗಳೂ ವಿಚಿತ್ರವಾದ ವಾದ್ಯಗಳ ಧ್ವನಿಯನ್ನು ಮಾಡುತ್ತಾ, ಕತ್ತಿಗಳಿಂದ ಜ್ವಲಿಸುತ್ತಲೂ, ಮೇಘದ ಸಮೂಹದಂತೆ ದೂರದಿಂದ ಬಾಣಗಳ ಮಳೆಯನ್ನು ಕರೆದವು. ॥೪೩॥

ಅನಂತರ ಎರಡು ಸೈನ್ಯಗಗಳೂ ಪರಸ್ಪರ ಮಿಳಿತವಾಗಲು, ಒಂದನ್ನೊಂದು ಹೊಡೆದಾಡುತ್ತಿದ್ದವು. ಇವೆರಡು ಸೈನ್ಯದವರೂ ಕೋಪದಿಂದ ತುಟಿಗಳನ್ನು ಕಚ್ಚುವವರಾಗಿಯೂ, ಹುಬ್ಬುಗಂಟಿನಿಂದ ವಕ್ರವಾದ ಮುಖಗಳುಳ್ಳವರಾಗಿಯೂ, ಯುದ್ಧ ಮಾಡುತ್ತಿದ್ದರು. ॥೪೪॥

ಬೆಳ್ಳಗಿರುವ ಕತ್ತಿಗಳಿಂದ ಸೈನ್ಯಗಳನ್ನು ಸೀಳುವವರಾಗಿಯೂ, ಚೂಪಾದ ಮೊನೆಗಳುಳ್ಳ ಭರ್ಜಿಗಳನ್ನು ಹೆಚ್ಚಾಗಿ ಉಪಯೋಗಿಸುವವರಾಗಿಯೂ, ಬಾಣಗಳ ಸಮೂಹದಿಂದ ಎದುರಾಳಿಗಳನ್ನು ಛಿದ್ರ ಛಿದ್ರ ಮಾಡುವವರಾಗಿಯೂ, ಪರಿಘಾಯುಧವನ್ನು ವಿಶೇಷವಾಗಿ ಪ್ರಯೋಗಿಸುವವರಾಗಿಯೂ, ಹೀಗೆ ಎರಡು ಸೈನ್ಯಗಳೂ ಯುದ್ಧಮಾಡುತ್ತಿದ್ದವು. ॥೪೫॥

ಶಸ್ತ್ರೈರುಚ್ಚಾವಚೈರೇವ(ಂ) ಪರಸ್ಪರ ಮನಾಶಯತ್ ।
ಗಜವಾಜಿ ಮಹಾಸೇನಾ ಶಕ್ತೀನಾಮತಿರೋಷಿತಾ ॥೪೬॥

ಮುಹೂರ್ತೇನೇವ ನಿಶ್ಶೇಷಾಂ ಚಕ್ರೇ ದೈತ್ಯೇಂದ್ರವಾಹಿನೀಮ್ ।
ದೃಷ್ಟ್ವಾ ಸೇನಾಂ ಹತಪ್ರಾಯಾಂ ಕರಂಕಾಽದ್ಯಾ ಮಹಾಸುರಾಃ ॥೪೭॥

ಪ್ರವಿಶ್ಯ ಶಕ್ತಿಸೇನಾಂ ತಾಂ ನಾಶಯಾಮಾಸುರೋಜಸಾ ।
ಕಾಲ್ಯಮಾನಾಂ ದೈತ್ಯವರ್ಯೈಃ ಸೇನಾಂ ದೃಷ್ಟ್ವಾ ಪರಾಹತಾಂ ॥೪೮॥

ಅಶ್ವಾರೂಢಾ ತಥಾ ಸಂಪತ್ಕರೀ ದೈತ್ಯಾನಯುಧ್ಯತ ।
ತಾಭ್ಯಾಂ ಭಗ್ನಾಯುಧಿ ತದಾ ಕರಂಕಾದ್ಯಾ ಮಹಾಸುರಾಃ ॥೪೯॥

ನಿರ್ಮಮುಸ್ತಾಂ ಮಹಾಮಾಯಾಂ ಸರ್ಪಿಣೀಂ ಸರ್ಪಭೂಷಣಾಂ ।
ಭೀಮರೂಪಾಂ ಚಂಡವರಾಂ ವಿವಿಧಂ ಸರ್ಪಮಂಡಲಂ ॥೫೦॥

ಈ ರೀತಿಯಲ್ಲಿ ಎರಡು ಸೈನ್ಯಗಳೂ ಅತ್ಯಂತ ಬಲವಾದ ಆಯುಧಗಳಿಂದ ಒಬ್ಬರನ್ನೊಬ್ಬರು ನಾಶಮಾಡುತ್ತಿದ್ದರು. ಶಕ್ತಿಗಳ ಆನೆ ಮತ್ತು ಕುದುರೆಗಳ ಸೈನ್ಯಗಳು ಬಹಳ ರೋಷಹೊಂದಿದ್ದವು. ||೪೬||

ಶಕ್ತಿಸೈನ್ಯಗಳು ಒಂದು ಮುಹೂರ್ತಕಾಲದಲ್ಲಿಯೇ ರಾಕ್ಷಸಶ್ರೇಷ್ಠರ ಸೈನ್ಯವನ್ನು ಸಂಪೂರ್ಣವಾಗಿ ನಾಶಮಾಡಿದುವು. ಕರಂಕ ಮೊದಲಾದ ಮಹಾರಾಕ್ಷಸರು ತಮ್ಮ ಸೈನ್ಯದ ಬಹುಭಾಗವು ನಾಶವಾದದ್ದನ್ನು ನೋಡಿದರು. ||೪೭||

ಆ ರಾಕ್ಷಸರು ಶಕ್ತಿಸೈನ್ಯದ ಒಳಗೆ ನುಗ್ಗಿ ತಮ್ಮ ಪರಾಕ್ರಮದಿಂದ ಅವರನ್ನು ನಾಶಮಾಡಲು ಪ್ರಾರಂಭಿಸಿದರು. ರಾಕ್ಷಸಶ್ರೇಷ್ಠರು ಈ ರೀತಿಯಲ್ಲಿ ಒಳಗೆ ನುಗ್ಗಿ ತನ್ನ ಸೈನ್ಯವನ್ನು ನಾಶಮಾಡುತ್ತಿದ್ದುದನ್ನು ಅಶ್ವಾರೂಢಾಶಕ್ತಿಯು ನೋಡಿದಳು. ||೪೮||

ಆಗ ಅಶ್ವಾರೂಢಾ ಮತ್ತು ಸಂಪತ್ಕರೀಶಕ್ತಿಗಳಿಬ್ಬರೂ ರಾಕ್ಷಸರೊಂದಿಗೆ ಯುದ್ಧಮಾಡಿದರು. ಅವರು ತಮ್ಮ ಸೈನ್ಯವನ್ನೆಲ್ಲವನ್ನೂ ನಾಶಮಾಡುತ್ತಿದ್ದುದನ್ನು ಕರಂಕನೇ ಮೊದಲಾದ ಮಹಾರಾಕ್ಷಸರು ನೋಡಿದರು. ||೪೯||

ಆಗ ಅವರು ಹಾವಿನ ಮಾಲೆಯನ್ನು ಹಾಕಿಕೊಂಡಿರುವ ಸರ್ಪಿಣೀ ಎಂಬ ಮಹಾಮಾಯೆಯನ್ನು ಸೃಷ್ಟಿಸಿದರು. ಆ ಮಾಯೆಯು ಭಯಂಕರಸ್ವರೂಪವುಳ್ಳ

ಸೃಜಮಾನಾಂ ಶಕ್ತಿಸೇನಾ ನಾಶಾಯ ಸಮರಾಂಗಣೇ ।
ಅಥ ಸಾ ಮುಖನೇತ್ರಾದಿಸಂಭೂತೈಃ ಸರ್ಪಮಂಡಲೈಃ ॥೫೧॥

ನಾಶಯಾಮಾಸ ಶಕ್ತೀನಾಂ ಸೇನಾಮರ್ಧಮುಹೂರ್ತತಃ ।
ತದ್ದೈಶಸಮತೀವೋಗ್ರಂ ದೃಷ್ಟ್ವಾ ಕಾಶ್ಚನ ಶಕ್ತಯಃ ॥೫೨॥

ಪಲಾಯಿತಾಃ ಸಮಾಖ್ಯಾತುಂ ದಂಡರಾಜ್ಞ್ಯೈದ್ರುತಂ ಯಯುಃ ।
ಪ್ರಾಪ್ಯ ತಾಂ ಕೋಲವದನಾಂ ಶ್ರೀಮಾತೃ ಸವಿಧೇ ಸ್ಥಿತಾಂ ॥೫೩॥

ಪ್ರಣಮ್ಯ ಮಂತ್ರಿಣೀಂ ಚಾಪಿ ಪ್ರೋಚುರ್ದೈತ್ಯಾಕೃತಂ ಮಹಾ ಭಯಂ ।
ದಂಡನಾಥೇ ವಯಂ ಯಾತಾಃ ಸಂಪದ್ದೇವ್ಯಾಸಹಾಸುರೈಃ ॥೫೪॥

ದ್ದಾಗಿಯೂ ಪ್ರಚಂಡವಾದ ಶಬ್ದವನ್ನು ಮಾಡುತ್ತಲೂ ನಾನಾವಿಧವಾದ ಹಾವಿನ ಮಂಡಲಗಳನ್ನು ಹೊರಗೆಡಹುತ್ತಲೂ ಇದ್ದಿತು. ॥೫೦॥

ರಾಕ್ಷಸರು ಯುದ್ಧಭೂಮಿಯಲ್ಲಿ ಶಕ್ತಿ ಸೈನ್ಯದ ನಾಶಕ್ಕಾಗಿ ಈ ರೀತಿಯಾಗಿ ಮಾಯೆಯನ್ನು ಸೃಷ್ಟಿಸಿದರು. ಅನಂತರ ಈ ಮಾಯೆಯು ತನ್ನ ಮುಖ ಕಣ್ಣು ಮೊದಲಾದುವುಗಳಿಂದ ಹುಟ್ಟಿದ ಹಾವುಗಳ ಮಂಡಲಗಳಿಂದ ಶಕ್ತಿಗಳನ್ನು ನಾಶ ಮಾಡುವುದರಲ್ಲಿತ್ತು. ॥೫೧॥

ಈ ಮಾಯೆಯು ಒಂದರ್ಧಮುಹೂರ್ತದಲ್ಲಿಯೇ ಶಕ್ತಿಸೈನ್ಯಗಳ ಅರ್ಧಭಾಗ ದಷ್ಟನ್ನು ನಾಶಮಾಡಿದಳು. ಮಾಯೆಯ ಈ ಉಗ್ರವಾದ ಹಿಂಸಾಕೃತ್ಯವನ್ನು ನೋಡಿ ಕೆಲವು ಶಕ್ತಿಗಳು ಪಲಾಯನಮಾಡಿದರು. ॥೫೨॥

ಶಕ್ತಿಗಳು ಪಲಾಯನಮಾಡಿ ಶ್ರೀಮಾತೃವಿನ ಹತ್ತಿರವಿದ್ದ ದಂಡನಾಯಕಿಯನ್ನು ಸಮೀಪಿಸಿ ಅವಳನ್ನು ನಮಸ್ಕರಿಸಿ ಈ ವಿಚಾರವನ್ನು ಬಿನ್ನೈಸಿದರು. ॥೫೩॥

ಆ ಶಕ್ತಿಯರು ಮಂತ್ರಿಣೀದೇವಿಗೂ ನಮಸ್ಕರಿಸಿ ಅವರಿಬ್ಬರನ್ನೂ ಕುರಿತು, " ಅಯ್ಯೋಯ್ಯೋ! ಬಹಳ ಭಯವು ಪ್ರಾಪ್ತವಾಗಿದೆ! ಓ ದಂಡನಾಥಾದೇವಿಯವರೇ, ನಾವು ಸಂಪನ್ನಾಥಾದೇವಿಯವರೊಂದಿಗೆ ರಾಕ್ಷಸರ ಜೊತೆಯಲ್ಲಿ ಯುದ್ಧಮಾಡಲು ಹೋದೆವು " ಎಂದರು. ॥೫೪॥

ತತ್ರ ಯುದ್ಧಂ ಸಮುಭವದ್ಘೋರಂ ಪ್ರಾಣಹರಂ ಪರಂ ।
ದುರ್ಮದೋ ನಿಹತೋ ಯುದ್ಧೇ ಸಂಪದೀಶ್ಯಾ ಕುರಂಡಕಃ ॥೫೫॥

ನೀತೋಽಶ್ವಾರೂಢಯಾ ಕೀರ್ತಿಶೇಷಂ ಸೇನಾಽಪಿ ಭೂಯಸಾ ।
ನಾಶಿತಾಽಸ್ಮಾಭಿರತ್ಯುಗ್ರಾ ಏವಂ ದೈತ್ಯಾ ವಿನಿರ್ಜಿತಾಂ ॥೫೬॥

ಕರಂಕಾದ್ಯೈಃ ಪಂಚಸೇನಾನಾಯುಕೈರ್ಹತಪತ್ತಿಭಿಃ ।
ಪ್ರವರ್ತಿತಾ ಮಹಾಮಾಯಾ ಸರ್ಪಿಣ್ಯಾಖ್ಯಾ ಹಿ ಸಾಂಪ್ರತಂ ॥೫೭॥

ನೇತ್ರಾದ್ಯಕ್ಷೈಃ ಸೃಜಂತೀ ಸಾಽಸಂಖ್ಯಾನ್ ಸರ್ಪಗಣಾನ್ ಮುಹುಃ ।
ತೈಃ ಸರ್ಪೈಃ ನಿಹತಾ ದಷ್ಟಾಬದ್ಧಾ ಭಸ್ಮೀಕೃತಾ ಪರಾ ॥೫೮॥

ಶಕ್ತಿಸೇನಾ ಮೃತಪ್ರಾಯಾ ಸಂಜಾತಾ ನನು ಸರ್ವಶಃ ।
ದೇವ್ಯಾ ತೇ ಶರವರ್ಷೇಣ ಸರ್ಪಾನ್ ಘ್ನಂತ್ಯಾ ಮುಹುರ್ಮುಹುಃ ॥೫೯॥

ಅಲ್ಲಿ ಪ್ರಾಣವನ್ನೇ ತೆಗೆಯುವಷ್ಟು ಘೋರವಾದ ಯುದ್ಧವು ಸಂಭವಿಸಿತು. ಯುದ್ಧದಲ್ಲಿ ಸಂಪನ್ನಾಥಾದೇವಿಯವರು ದುರ್ಮದನನ್ನು ಕೊಂದರು. ಅಶ್ವಾರೂಢಾ ಶಕ್ತಿಯವರು ಕುರಂಡರಾಕ್ಷಸನನ್ನು ಕೊಂದರು. ॥೫೫॥

ಅಶ್ವಾರೂಢಾಶಕ್ತಿಯವರು ಬಹಳ ಹೆಚ್ಚಾದ ರಾಕ್ಷಸಸೈನ್ಯವನ್ನು ಕೀರ್ತಿಶೇಷ ವಾಗುವಂತೆ ಮಾಡಿದರು. ನಾವೂ ಕೂಡ ಬಹಳ ಭಯಂಕರವಾದ ರಾಕ್ಷಸಸೈನ್ಯ ವನ್ನು ನಾಶಮಾಡಿದೆವು. ಈ ರೀತಿಯಾಗಿ ರಾಕ್ಷಸರನ್ನು ಜಯಿಸಿದೆವು. ॥೫೬॥

ತಮ್ಮ ಕಡೆಯ ಸೈನ್ಯಗಳು ನಾಶವಾಗಲು ಐದು ಸೈನ್ಯದ ನಾಯಕರಾದ ಕರಂಕ ಮೊದಲಾದವರು ಈಗ ಸರ್ಪಿಣೀ ಎಂಬ ಮಹಾಮಾಯೆಯನ್ನು ಹೊರ ಗೆಡಹಿದ್ದಾರೆ. ॥೫೭॥

ಆ ಮಹಾಮಾಯೆಯು ಕಣ್ಣೇ ಮೊದಲಾದ ಅವಯವಗಳಿಂದ ಲೆಕ್ಕವಿಲ್ಲ ದಷ್ಟು ಹಾವಿನ ಸಮೂಹಗಳನ್ನು ಬಾರಿಬಾರಿಗೂ ಸೃಷ್ಟಿಸುತ್ತಿದ್ದಾಳೆ! ಆ ಸರ್ಪಗಳು ನಮ್ಮ ಕಡೆಯ ಶಕ್ತಿಸೈನ್ಯಗಳನ್ನು ಕಟ್ಟಿಹಾಕಿ ಕಚ್ಚಿ, ಬೂದಿಯಾಗಿ ಮಾಡಿ ಈ ರೀತಿಯಲ್ಲಿ ನಾನಾವಿಧವಾದ ನಾಶವನ್ನು ಮಾಡುತ್ತಿವೆ! ॥೫೮॥

ಶಕ್ತಿ ಸೈನ್ಯವು ಪ್ರಾಯಶಃ ಎಲ್ಲವೂ ಸಾಯುವ ಸ್ಥಿತಿಯಲ್ಲಿಯೇ ಇದೆ. ಆದರೂ ಆ ದೇವಿಯವರು ಬಾಣಗಳ ಸುರಿಮಳೆಯಿಂದ ಸರ್ಪಗಳನ್ನು ಬಾರಿಬಾರಿಗೂ ಕೊಲ್ಲುತ್ತಿದ್ದಾರೆ. ॥೫೯॥

ನ ಸರ್ಪವಶತಾಂ ಯಾತೇ ಚಾನ್ಯಾಃ ಸರ್ವಾ ವಿಹಿಂಸಿತಾಃ ।
ಇತಿ ತಾಸಾಂ ವಚಃ ಶ್ರುತ್ವಾ ಕ್ರುದ್ಧಾ ಕೋಲಮುಖೀ ತದಾ ॥೬೦॥

ಹಂತುಂ ದೈತ್ಯಾನ್ ಸುಭೀಮೇನ ಮುಸಲೇನ ವಿನಿರ್ಯಯೌ ।
ನಿವಾರ್ಯ ತಾಂ ಮಂತ್ರನಾಥಾ ಜ್ಞಾತ್ವಾಽಮೋಘಾಂ ಚ ಸರ್ಪಿಣೀಂ॥೬೧॥

ತದ್ವೃತ್ತಂ ತರಸಾ ಗತ್ವಾ ಸ್ವಯಂ ದೇವ್ಯೈ ವ್ಯಜಿಜ್ಞಪತ್ ।
ಅಥ ಧ್ಯಾತಾ ಕ್ಷಣೇನಾಂಬಾ ಜೃಂಭಮಾಣಾ ಮುಖಾಂಬುಜಾತ್ ॥೬೨॥

ವಿಕಾಶಯತ್ತದ್ವಕ್ತ್ರಾತ್ತು ನಿರ್ಜಗಾಮಾತಿವೇಗತಃ ।
ಕನಕಾಭಾ ಮಹಾಶಕ್ತಿರ್ದೇವೀ ತಾಲುಸಮುದ್ಭವಾ ॥೬೩॥

ಸುಪರ್ಣ ಸಂಸ್ಥಾ ನಕುಲೀ ವಾಗ್ದೇವೀ ರತ್ನಭೂಷಣಾ ।
ತಾಂ ಪ್ರಣಮ್ಯ ಸ್ಥಿತಾಮಗ್ರೇ ಪ್ರಾಹ ಶ್ರೀಲಲಿತೇಶ್ವರೀ ॥೬೪॥

'ಸರ್ಪಗಳಿಗೆ ವಶರಾಗದ ಶಕ್ತಿಯರು ಚಿತ್ರಹಿಂಸೆಗೆ ಒಳಗಾಗಿದ್ದಾರೆ' ಎಂದು ಶಕ್ತಿಯರು ಹೇಳಿದ ಮಾತನ್ನು ಕೇಳಿ ದಂಡನಾಯಕಿಯು ಬಹಳ ಕೋಪಗೊಂಡಳು. ॥೬೦॥

ದಂಡನಾಯಕಿಯು ಕೂಡಲೇ ಭಯಂಕರವಾದ ಮುಸಲಾಯುಧದಿಂದ ರಾಕ್ಷಸರನ್ನು ನಾಶಮಾಡಲು ಹೊರಟಳು. ಸರ್ಪಿಣೀ ಮಾಯೆಯು ವ್ಯರ್ಥವಲ್ಲ ದ್ದೆಂದು ಹೇಳಿ, ಮಂತ್ರಿಣೀದೇವಿಯು ದಂಡನಾಯಕಿಯನ್ನು ತಡೆದಳು. ॥೬೧॥

ಮಂತ್ರಿಣೀದೇವಿಯು ಶೀಘ್ರವಾಗಿ ಹೋಗಿ ತಾನಾಗಿಯೇ ಈ ಸಮಾಚಾರ ವನ್ನು ಶ್ರೀಲಲಿತಾದೇವಿಗೆ ವಿಜ್ಞಾಪನೆಮಾಡಿಕೊಂಡಳು. ಅನಂತರ ದೇವಿಯು ಕ್ಷಣಕಾಲ ಧ್ಯಾನಿಸಿ ತನ್ನ ಕಮಲದಂತಿರುವ ಬಾಯಿಯಲ್ಲಿ ಆಕಳಿಸಿದಳು. ॥೬೨॥

ದೇವಿಯು ಬಾಯಿಯನ್ನು ಅಗಲಿಸಿದ ಕೂಡಲೇ ಆಕೆಯ ಬಾಯಿಯಿಂದ ಚಿನ್ನದಂತೆ ಹೊಳೆಯುತ್ತಿರುವ ಆಕೆಯ ದವಡೆಗಳಿಂದ ಹುಟ್ಟಿದ ಮಹಾಶಕ್ತಿಯೊ ಬ್ಬಳು ಬಹಳ ವೇಗವಾಗಿ ಹೊರಗೆ ಬಂದಳು. ॥೬೩॥

ಆ ಮಹಾಶಕ್ತಿಯು ಗರುಡನ ಮೇಲೆ ಕುಳಿತವಳಾಗಿಯೂ ಮುಂಗಸಿಯ ರೂಪಳಾಗಿಯೂ, ವಾಕ್ಸ್ವರೂಪಳಾಗಿಯೂ ರತ್ನಾಲಂಕಾರಗಳನ್ನು ಧರಿಸಿದವಳಾ

ಗಚ್ಛ ವತ್ಸೇ ಸರ್ಪಿಣೀಂ ತಾಂ ನಾಶಯಾಽಽಶು ಸ್ವತೇಜಸಾ ।
ಇತ್ಯುಕ್ತಾ ಸಾ ಕ್ಷಣೇನೈವ ಸಂಪ್ರಾಪ್ತಾಽಽಹವ ಮಂಡಲಂ ॥೬೫॥

ಸುಪರ್ಣಪಕ್ಷವಾತೇನ ಸರ್ವೇ ಸರ್ಪಾಃ ಪಲಾಯಿತಾಃ ।
ಸರ್ಪಬಂಧ ವಿನಿರ್ಮುಕ್ತಾಃ ಶಕ್ತಯಃ ಪ್ರೋತ್ಥಿತಾಸ್ತತಃ ॥೬೬॥

ಭೂಯಃ ಸಸರ್ಜ ಸರ್ಪಾನ್ ಸಾ ನಾಶಿತುಂ ಶಕ್ತಿಮಂಡಲಂ ।
ತದ್ದೃಷ್ಟ್ವಾ ಸರ್ಪನಿವಹ ವ್ಯಾಪ್ತಂ ಶಕ್ತಿಗಣಂ ಮುಹುಃ ॥೬೭॥

ಸಸರ್ಜ ನಕುಲಾನ್ ಸ್ವೀಯ ರೋಮಭ್ಯೋಽತಿ ಬಲಾನ್ ಕ್ಷಣಾತ್ ।
ನಕುಲಾಸ್ತೇ ಮಹಾವೇಗಾಶ್ಚಿತ್ರವರ್ಣಾಃ ಸುರೋಷಿತಾಃ ॥೬೮॥

ಗಿಯೂ ಇದ್ದಳು. ಇವಳು ದೇವಿಗೆ ನಮಸ್ಕರಿಸಿ ಮುಂದೆ ನಿಲ್ಲಲು ಲಲಿತಾದೇವಿಯು ಈ ರೀತಿಯಲ್ಲಿ ಹೇಳಿದಳು. ॥೬೪॥

ಎಲೌ ಮಗಳೇ, ಶೀಘ್ರವಾಗಿ ಹೋಗಿ ನಿನ್ನ ತೇಜಸ್ಸಿನಿಂದ ಸರ್ಪಿಣೀ ಮಾಯೆಯನ್ನು ನಾಶಮಾಡು. ಎಂದು ಲಲಿತಾದೇವಿಯು ಹೇಳಲು ನಕುಲೀಶ ಶಕ್ತಿಯು ಕ್ಷಣಕಾಲದಲ್ಲಿಯೇ ಯುದ್ಧಭೂಮಿಗೆ ಬಂದಳು. ॥೬೫॥

ಎಲ್ಲಾ ಸರ್ಪಗಳೂ ಗರುಡನ ರೆಕ್ಕೆಯ ಗಾಳಿಯಿಂದ ಪಲಾಯನಮಾಡಿದವು. ಆಗ ಹಾವಿನ ಬಂಧನದಿಂದ ಪಾರಾದ ಶಕ್ತಿಗಳು ಎದ್ದುನಿಂತರು. ॥೬೬॥

ಆದರೆ ಆ ಮಹಾಮಾಯೆಯು ಶಕ್ತಿಮಂಡಲವನ್ನು ನಾಶಮಾಡುವುದಕ್ಕಾಗಿ ಪುನಃ ಸರ್ಪಗಳನ್ನು ಸೃಷ್ಟಿಸಿದಳು. ಮಹಾಶಕ್ತಿಯೂ ಕೂಡ ತನ್ನ ಕಡೆಯ ಶಕ್ತಿಗಳ ಸಮೂಹವನ್ನು ಸರ್ಪದ ಗುಂಪುಗಳು ಮುತ್ತಿರುವುದನ್ನು ನೋಡಿದಳು. ॥೬೭॥

ಮಹಾಶಕ್ತಿಯೂ ಕೂಡ ತನ್ನ ರೋಮಗಳಿಂದ ಬಹಳ ಬಲಿಷ್ಠವಾದ ಮುಂಗಸಿಗಳನ್ನು ಕ್ಷಣಕಾಲದಲ್ಲಿಯೇ ಸೃಜಿಸಿದಳು. ಆ ಮುಂಗಸಿಗಳು ಬಹಳ ವೇಗವುಳ್ಳವುಗಳಾಗಿಯೂ ನಾನಾಬಣ್ಣಗಳುಳ್ಳವುಗಳಾಗಿಯೂ ಬಹಳ ಕೋಪವುಳ್ಳವುಗಳಾಗಿಯೂ ಇದ್ದವು. ॥೬೮॥

ಸ್ತಬ್ಧರೋಮ ವಾಲಧಯೋ ವಜ್ರದಂತಾ ದೃಢಾಂಗಕಾಃ ।
ತೇ ಸೃಷ್ಟಾಃ ನಕುಲಾಃ ಶೀಘ್ರಂ ತಾನ್‌ಸರ್ಪಾನ್ ಸರ್ವತಃ ಸ್ಥಿತಾನ್॥೬೯॥

ದದಂಶುಃ ವಜ್ರರದನೈಃ ಖಂಡಂ ಚಕ್ರುರ್ದ್ವಿಧಾ ತ್ರಿಧಾ ।
ನಕುಲೈಸ್ತ್ರಾ ದೃಶೈಃ ಸರ್ಪಾಃ ಖಂಡಿತಾ ಭಕ್ಷಿತಾ ಅಪಿ ॥೭೦॥

ನಿಶ್ಶೇಷಿತಾಃ ಶಕ್ತಿಸೇನಾನಾಶಕಾಮಾ ಯುಥೋತ್ಥಿತಾಃ ।
ಅಥ ತೇ ನಕುಲಾಃ ಸರ್ಪಾನ್ ವಿನಾಶ್ಯಾಪರಿಶೇಷಿತಃ ॥೭೧॥

ದದಂಶುಃ ಸರ್ಪ ಭೂಷಾಢ್ಯಾಂ ಸರ್ಪಿಣೀ ಮಪಿ ಸರ್ವತಃ ।
ಸರ್ಪಿಣ್ಯಾಂ ತು ಪ್ರಣಷ್ಟಾಯಾಂ ಕರಂಕಾದ್ಯಾ ಮಹಾ ಸುರಾಃ ॥೭೨॥

ಮುಂಗಸಿಗಳು ನೆಟ್ಟಗೆ ನಿಂತಿರುವ ಕೂದಲುಗಳು ಮತ್ತು ಬಾಲಗಳುಳ್ಳವಾಗಿಯೂ ವಜ್ರದಷ್ಟು ಗಟ್ಟಿಯಾದ ಹಲ್ಲುಗಳುಳ್ಳವಾಗಿಯೂ ದೃಢವಾದ ಅವಯವವುಳ್ಳವಾಗಿಯೂ ಇದ್ದವು. ಹೀಗೆ ಸೃಷ್ಟಿಯಾದ ಮುಂಗಸಿಗಳು ಶೀಘ್ರವಾಗಿಯೇ ಎಲ್ಲಾ ಕಡೆಯಲ್ಲಿಯೂ ಇದ್ದ ಸರ್ಪಗಳನ್ನು ನುಂಗಲು ಪ್ರಾರಂಭಿಸಿದವು. ॥೬೯॥

ಮುಂಗಸಿಗಳು ತಮ್ಮ ವಜ್ರದಂತಿರುವ ಹಲ್ಲುಗಳಿಂದ ಹಾವುಗಳನ್ನು ಎರಡು ಮತ್ತು ಮೂರು ತುಂಡುಗಳಾಗಿ ಖಂಡಿಸಿದುವು. ಅಂಥಾ ಮುಂಗಸಿಗಳೇ ಸರ್ಪಗಳನ್ನು ಕತ್ತರಿಸಿ ನುಂಗಿದವು. ॥೭೦॥

ಈ ರೀತಿಯಾಗಿ ಮುಂಗಸಿಗಳು ಶಕ್ತಿಸೈನ್ಯವನ್ನು ನಾಶಮಾಡುತ್ತಿದ್ದ ಸರ್ಪಗಳನ್ನು ನಾಶಮಾಡಿದವು. ಸಾವನ್ನು ಬಯಸುತ್ತಿದ್ದ ಶಕ್ತಿಯರೂ ಕೂಡ ಬಂಧನದಿಂದ ಪಾರಾಗಿ ಎದ್ದರು. ಅನಂತರ ಮುಂಗಸಿಗಳು ಸಂಪೂರ್ಣವಾಗಿ ಹಾವುಗಳನ್ನೆಲ್ಲವನ್ನೂ ನಾಶಮಾಡಿದವು. ॥೭೧॥

ಮುಂಗಸಿಗಳು ಸರ್ಪಗಳನ್ನೇ ಅಲಂಕಾರವನ್ನಾಗಿ ಮಾಡಿಕೊಂಡಿದ್ದ ಸರ್ಪಿಣಿಯನ್ನೂ ಎಲ್ಲಾ ಕಡೆಯಲ್ಲಿಯೂ ಚೆನ್ನಾಗಿ ಕಚ್ಚಿದುವು. ಈ ರೀತಿಯಲ್ಲಿ ಮಹಾಮಾಯೆಯಾದ ಸರ್ಪಿಣಿಯು ನಾಶವಾಗಲು ಕರಂಕ ಮೊದಲಾದ ಮಹಾ ರಾಕ್ಷಸರು ಮುಂಗಸಿಗಳೊಂದಿಗೆ ಯುದ್ಧಮಾಡಿದರು. ॥೭೨॥

ಯುಯುಧುರ್ನಕುಲಾ ದೇವ್ಯಾ ಶಸ್ತ್ರಾಸ್ತ್ರೈರ(ಪ್ಯ)ನೇಕಶಃ ।
ತತಸ್ತೇಷಾಂ ಚ ಶಸ್ತ್ರಾಣಿ ವಾಹನಾನ್ಯಪಿ ಸರ್ವತಃ ॥೭೩॥

ಪ್ರಣಾಶ್ಯ ಯುಗಪತ್ತೇಷಾಂ ಖಡ್ಗೇನ ಶಿರ ಆಚ್ಛಿನತ್ ।
ಖಡ್ಗಾಚ್ಛಿನ್ನೋತ್ತಮಾಂಗಾಸ್ತೇ ನಿಪೇತುರ್ವಿಗತಾಸವಃ ॥೭೪॥

ತಾವತ್ಸೇನಾಽಪಿ ಸಂಶಿಷ್ಟಾ ಭೀತಾ ದಿಕ್ಷು ಪ್ರವಿದ್ರುತಾ ।
ಜಯಶಬ್ದೈರ್ವರ್ಧಮಾನಾನ್ನಕುಲೀ ನಕುಲಾನ್ ಹಿ ತಾನ್ ॥೭೫॥

ಸ್ವಾಂಗೇ ಸಂಹೃತ್ಯ ವಾರಾಹೀಂ ಮಂತ್ರಿಣೀಂ ಲಲಿತೇಶ್ವರೀಂ ।
ಪ್ರಣಮ್ಯ ಜಯವೃತ್ತಾಂತಮಾಚಖ್ಯೌ ವಿಧೃತಾಂಜಲಿಃ ॥೭೬॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಂಖಡೇ
ಸಪ್ತಷಷ್ಟಿತಮೋಽಧ್ಯಾಯಃ

ದೇವಿಯು ಸೃಜಿಸಿದ ಮುಂಗಸಿಗಳೊಂದಿಗೆ ಆ ರಾಕ್ಷಸರು ಯುದ್ಧಮಾಡುತ್ತಾ ಅನೇಕವಿಧವಾದ ಶಸ್ತ್ರಾಸ್ತ್ರಗಳನ್ನೂ ಅವುಗಳಿಗೆ ಪ್ರಯೋಗಿಸಿದರು. ಅನಂತರ ಮುಂಗಸಿಗಳ ಗುಂಪಿನವರು ಆ ರಾಕ್ಷಸರ ಶಸ್ತ್ರಾಸ್ತ್ರಗಳನ್ನೂ ಮತ್ತು ವಾಹನಗಳನ್ನು ಸರ್ವವಿಧದಲ್ಲಿಯೂ ನಾಶಮಾಡಿದರು. ॥೭೩॥

ಅನಂತರ ಮುಂಗಸಿಗಳ ಗುಂಪಿನವರು ಏಕಕಾಲದಲ್ಲಿ ರಾಕ್ಷಸರ ಕತ್ತಿಗಳನ್ನೇ ಕಿತ್ತುಕೊಂಡು ಅವರ ತಲೆಗಳನ್ನು ಕತ್ತರಿಸಿದರು ! ಕತ್ತಿಯ ಪ್ರಯೋಗದಿಂದ ತಮ್ಮ ತಲೆಗಳು ಕತ್ತರಿಸಿಹೋಗಲು ಆ ರಾಕ್ಷಸರು ಪ್ರಾಣಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದುಬಿಟ್ಟರು. ॥೭೪॥

ಅಷ್ಟರೊಳಗಾಗಿ ಉಳಿದ ರಾಕ್ಷಸ ಸೈನ್ಯವೂ ಭಯಪಟ್ಟು ದಿಕ್ಕಾಪಾಲಾಗಿ ಓಡಿಹೋಯಿತು. ಆಗ ಜಯಜಯಾಕಾರಮಾಡುತ್ತಾ ರಾಕ್ಷಸರನ್ನು ಕೊಲ್ಲುತ್ತಿದ್ದ ಮುಂಗಸಿಗಳ ಗುಂಪಿನವರನ್ನು ವಾರಾಹೀ ಎಂಬ ಶಕ್ತಿಯು ತನ್ನ ಶರೀರದಲ್ಲಿ ಅಡಗಿಸಿಕೊಂಡಳು. ॥೭೫॥

ಆಗ ವಾರಾಹಿಯು ತನ್ನ ಅವಯವಗಳಲ್ಲಿ ಆ ಮುಂಗಸಿಗಳನ್ನು ಅಡಗಿಸಿಕೊಂಡು ಮಂತ್ರಿಣಿಯಾದ ದೇವಿಗೂ ಶ್ರೀಲಲಿತಾದೇವಿಗೂ ನಮಸ್ಕರಿಸಿ ಕೈ

ಜೋಡಿಸಿಕೊಂಡು ರಾಕ್ಷಸರನ್ನು ಜಯಿಸಿದ ಸಮಾಚಾರವನ್ನು ಬಿನ್ನೈಸಿಕೊಂಡಳು. ||೬೬||

ಎಂಬಲ್ಲಿಗೆ ಇತಿಹಾಸ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ
" ನಕುಲೀಶಶಕ್ತಿಯ ಪರಾಕ್ರಮ ಮತ್ತು, ಕರಂಕ ಮೊದಲಾದ ರಾಕ್ಷಸರ ಕೊಲೆ"
ಎಂಬ ಅರವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಅಷ್ಟಷಷ್ಟಿತಮೋಽಧ್ಯಾಯಃ ॥

ಅರವತ್ತೆಂಟನೆಯ ಅಧ್ಯಾಯವು

ಅಥ ದೈತ್ಯೈರ್ವಿದಿತ್ವಾ ತಾನ್ ಕರಂಕಪ್ರಮುಖಾನ್ ಹತಾನ್ ।
ಕುಟಿಲಾಕ್ಷೋ ವಿನಿಶ್ವಸ್ಯ ಚಿಂತಾಮಾಪ ಮಹತ್ತರಂ ॥೧॥

ನೂನಮೇಷಾ ಮಹಾಶಕ್ತಿರವಿಜೇಯೇವ ಭಾತಿ ಮೇ ।
ದುರ್ಮದಶ್ಚ ಕುರಂಡಶ್ಚ ಬಲಿನೌ ನಿಹತೌ ರಣೇ ॥೨॥

ಅಸ್ತು ತನ್ನ ವಿಚಿಂತ್ಯಂ ಸ್ಯಾಜ್ಜಯಸ್ಯಾನಿಯತಸ್ಥಿತೇಃ ।
ಏತೇ ಕರಂಕ ಪ್ರಮುಖಾಃ ಸರ್ಪಿಣ್ಯಾಽಮೋಘಯಾ ಯುತಾಃ ॥೩॥

ಆನಂತರ ಕುಟಿಲಾಕ್ಷನು ಕರಂಕ ಮೊದಲಾದ ರಾಕ್ಷಸರ ನಾಶದ ಸಮಾಚಾರವನ್ನು ರಾಕ್ಷಸರ ಮೂಲಕ ಕೇಳಿ ನಿಟ್ಟುಸಿರು ಬಿಟ್ಟು ಅತ್ಯಂತ ಚಿಂತೆಗೊಳಗಾದನು. ॥೧॥

ನಿಜವಾಗಿಯೂ ಈ ಮಹಾಶಕ್ತಿಯನ್ನು ಜಯಿಸುವುದು ಅಸಾಧ್ಯವೆಂದು ನನಗೆ ತೋರುವುದು. ಏಕೆಂದರೆ ಇವಳು ಬಲಿಷ್ಠರಾದ ದುರ್ಮದ ಮತ್ತು ಕುರಂಡ ಎಂಬ ರಾಕ್ಷಸರನ್ನೂ ಯುದ್ಧದಲ್ಲಿ ಕೊಂದಿದ್ದಾಳೆ. ॥೨॥

ಆದರೂ ನಾವು ಯೋಚಿಸುವುದು ಅನುಚಿತ. ಏಕೆಂದರೆ ಜಯವು ನಿಯಮಪೂರ್ವಕವಾಗಿ ಒಂದೇ ಕಡೆಗೆ ಸಂಭವಿಸುವುದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ವ್ಯರ್ಥವಾಗದ ಸ್ವಭಾವವುಳ್ಳ ಸರ್ಪಿಣೀ ಶಕ್ತಿಯಿಂದ ಕೂಡಿದವರಾಗಿ ಕುರಂಡ ಮೊದಲಾದ ರಾಕ್ಷಸರು ಬಲಿಷ್ಠರಾಗಿದ್ದರು. ॥೩॥

ಅಜೇಯಾ ದೇವದೈತ್ಯಾನಾಂ ಕಥಂ ಯುದ್ಧೇ ನಿಪಾತಿತಾಃ ।
ಯಾ ಶ್ರೂಯತೇ ಶಕ್ತಿ ಗಣನಾಯಿಕಾ ಲಲಿತಾಽಭಿಧಾ ॥೪॥

ಸಾ ಸ್ಥಿತ್ವೈವ ಪರಿವಾರಶಕ್ತಿಭಿರ್ನಿಹತಂ ಬಲಂ ।
ಅಹೋ ಕಿಂ ನ ಭವೇಲ್ಲೋಕೇ ವಿಪರೀತೇ ವಿಧೌ ನನು ॥೫॥

ಆಶ್ಚರ್ಯಮೇ ತನ್ನಿಹತಾ ಕರಂಕಾಽದ್ಯಾಶ್ಚ ಯೋಷಿತಾ ।
ಬಲಂ ಕ್ಷೀಣಂ ಚತುರ್ಥಾಂಶಂ ಸೈನ್ಯೇಶಾ ಬಲಿನೋ ಹತಾಃ ॥೬॥

ನ ಹತಾ ಶಕ್ತಿ ಸೇನಾಯಾಂ ಮುಖ್ಯೈಕಾಪಿ ಕಥಂ ಭವೇತ್ ।
ಪ್ರತಿಜ್ಞಾಯ ಶಕ್ತಿಜಯಂ ರಾಜ್ಞೇಽಹಂ ಕಥಮುದ್ಯನ್ವೈ ॥೭॥

ದೇವತೆಗಳು ಮತ್ತು ರಾಕ್ಷಸರೂ ಕೂಡ ಜಯಿಸಲಾರದ ಈ ರಾಕ್ಷಸರನ್ನು ದೇವಿಯು ಯುದ್ಧದಲ್ಲಿ ಬೀಳಿಸಿದಳು? ಶಕ್ತಿಗಳಿಗೆ ನಾಯಕಿಯಾಗಿ ಲಲಿತಾ ಎಂಬ ಹೆಸರಿನಿಂದ ಆಕೆಯು ಪ್ರಸಿದ್ಧಳಾಗಿದ್ದಾಳೆ. ||೪||

ಆಕೆಯು ತಾನಿದ್ದಲ್ಲೇ ಇದ್ದುಕೊಂಡು, ಆಕೆಯ ಪರಿವಾರದ ಶಕ್ತಿಗಳಿಂದಲೇ ನಮ್ಮ ಸೈನ್ಯವನ್ನು ನಾಶಮಾಡಿಸಿದ್ದಾಳೆ. ಅದೃಷ್ಟವು ವಿರುದ್ಧವಾದರೆ ಲೋಕದಲ್ಲಿ ಏನು ತಾನೇ ಆಗುವುದರಲ್ಲೇನು ಆಶ್ಚರ್ಯ? ||೫||

ಹೆಂಗಸಾದ ಆ ಶಕ್ತಿಯು ಕರಂಕ ಮೊದಲಾದ ರಾಕ್ಷಸರನ್ನು ಕೊಂದಿರುವುದು ಆಶ್ಚರ್ಯಕರವಾದ ವಿಷಯವೇ ಸರಿ. ನಮ್ಮ ಸ್ವಾಮಿಯ ನಾಲ್ಕನೇ ಒಂದು ಭಾಗದಷ್ಟು ಸೈನ್ಯವು ನಾಶವಾಗಿದೆ. ಬಲಿಷ್ಠರಾದ ರಾಕ್ಷಸಸೇನಾಪತಿಗಳೂ ನಾಶವಾಗಿದ್ದಾರೆ. ||೬||

ಆದರೆ ಶಕ್ತಿಗಳ ಸೈನ್ಯಗಳಲ್ಲಿ ಮುಖ್ಯಳಾದವಳು ಒಬ್ಬಳೂ ಇಲ್ಲಿಯ ವರೆಗೆ ಸತ್ತಿಲ್ಲ. ಶಕ್ತಿಯರನ್ನು ಜಯಿಸುವೆನೆಂದು ಪ್ರತಿಜ್ಞೆಮಾಡಿರುವ ನಾನು ಈ ವಿಷಯವನ್ನು ದೊರೆಗೆ ಹೇಗೆ ತಿಳಿಸಲಿ? ||೭||

ಅಶಕ್ಯಮಿತಿ ವಕ್ಷ್ಯಾಮಿ ಪುನಃ ಕಾಪುರುಷೋ ಯಥಾ ।
ಏವಂ ಚಿಂತಾ ಸಮಾಕ್ರಾಂತೇ ಕುಟಿಲಾಕ್ಷೇ ಚಮೂಪತೌ ॥೮॥

ಆಜಗಾಮ ವಿಷಂಗೋಽಪಿ ವಿಶುಕ್ರೇಣ ಪ್ರಯೋಜಿತಃ ।
ದೃಷ್ಟ್ವಾ ವಿಷಂಗಂ ಸೇನೇಶಃ ಕುಟಿಲಾಕ್ಷಃ ಸಮುತ್ಥಿತಃ ॥೯॥

ಆಸನಾಽದ್ಯೈಃ ಪೂಜಯಿತ್ವಾ ನಿಷಸಾದಾಽಸನೇ ಸ್ವಕೇ ।
ಅಥ ದೃಷ್ಟ್ವಾ ವಿಷಣ್ಣಾಽಸ್ಯಂ ವಿಷಂಗಃ ಸೈನ್ಯನಾಯಕಂ ॥೧೦॥

ಅಬ್ರವೀತ್ತಂ ಭಂಡದೈತ್ಯ ಪ್ರಾರ್ಥಿತಂ ಯಾ ಸಮೀಹತಿ ।
ತಯಾ ಭಕ್ತೇಷ್ಟದಾಯಿನ್ಯಾ ಮೋಹಿತೋ ದೈತ್ಯಪುಂಗವಃ ॥೧೧॥

ಕುಟಿಲಾಕ್ಷ ವಿಷೀದಂತಮಿವ ಪಶ್ಯಾಮಿ ತೇ ಮುಖಂ ।
ತದ್ವದಾಽಶು ಕಿಂ ನಿಮಿತ್ತಂ ಸಮಂ ಸರ್ವಂ ಕರೋಮ್ಯಹಂ ॥೧೨॥

ಶಕ್ತಿಯ ಜಯವು ಸಾಧ್ಯವಿಲ್ಲವೆಂದು ನೀಚನಾದ ಮನುಷ್ಯನಂತೆ ನಾನು ಧೊರೆಗೆ ಹೇಗೆ ತಿಳಿಸಲಿ? ಈ ರೀತಿಯಾಗಿ ಸೇನಾನಾಯಕನಾದ ಕುಟಿಲಾಕ್ಷನು ಚಿಂತೆಗೆ ಒಳಗಾದನು. ॥೮॥

ಆಗ ವಿಶುಕ್ರನ ಪ್ರೇರಣೆಗೆ ಒಳಗಾದ ವಿಷಂಗರಾಕ್ಷಸನೂ ಅಲ್ಲಿಗೆ ಬಂದನು. ವಿಷಂಗರಾಕ್ಷಸನನ್ನು ನೋಡಿ ಸೇನಾಪತಿಯಾದ ಕುಟಿಲಾಕ್ಷನು ಎದ್ದು ನಿಂತನು. ॥೯॥

ಕುಟಿಲಾಕ್ಷನು ವಿಷಂಗರಾಕ್ಷಸನಿಗೆ ಆಸನವೇ ಮೊದಲಾದುವನ್ನು ಒಪ್ಪಿಸುವುದರ ಮೂಲಕ ಪೂಜಿಸಿ ತನ್ನ ಆಸನದಲ್ಲಿ ಕುಳಿತನು. ಅನಂತರ ವಿಷಂಗರಾಕ್ಷಸನು ಸೇನಾಪತಿಯು ದುಃಖಾಕ್ರಾಂತವಾದ ಮುಖವುಳ್ಳವನಾಗಿದ್ದುದನ್ನು ಕಂಡನು. ॥೧೦॥

ಅನಂತರ ಭಂಡರಾಕ್ಷಸನ ಕೋರಿಕೆಯನ್ನು ನೆರವೇರಿಸಲು ಇಷ್ಟಪಡುತ್ತಿರುವ ದೇವಿಯ ಆಶಯವನ್ನು ವಿಷಂಗರಾಕ್ಷಸನು ವಿಶುಕ್ರನಿಗೆ ಹೇಳಿದನು. ಭಕ್ತರ ಇಷ್ಟಾರ್ಥವನ್ನು ಕೊಡುವ ಆ ದೇವಿಯಲ್ಲಿ ರಾಕ್ಷಸರಾಜನಾದ ಭಂಡನು ಮೋಹಗೊಂಡಿದ್ದಾನೆಂದೂ ಅವನಿಗೆ ತಿಳಿಸಿದನು. ॥೧೧॥

ಎಲೈ ಕುಟಿಲಾಕ್ಷನೇ, ನೀನು ದುಃಖಗೊಂಡಿರುವ ಹಾಗೆ ನಿನ್ನ ಮುಖವು ತಿಳಿಸುತ್ತದೆ. ಅದಕ್ಕೆ ಕಾರಣವೇನೆಂಬುದನ್ನು ಶೀಘ್ರವಾಗಿ ಹೇಳು. ಎಲ್ಲವನ್ನೂ ಸರಿಮಾಡಿಕೊಡುವೆನು. ॥೧೨॥

ಶ್ರುತ್ವಾ ಪ್ರೋಚೇ ಸೋಽಪಿ ಸರ್ವಂ ದೈತ್ಯನಾಶಂ ಮಹತ್ತರಂ ।
ಅವಿನಾಶಂ ಚ ಶಕ್ತೀನಾಂ ಮಹಾಭಯಮುಪಸ್ಥಿತಂ ॥೧೩॥

ಶ್ರುತ್ವಾ ಜಹಾಸ ದೈತೇಯಂ ಆ ಮೋಹ ಇತಿ ಸಂವದನ್ ।
ಮೋಹಿತೋ ಮಾಯಯಾ ದೇವ್ಯಾ ಬಭಾಷೇ ಬುದ್ಧಿಮಾನಿವ ॥೧೪॥

ಶೃಣು ಸೇನಾಪತೇ ಸರ್ವಂ ವಿದಿತ್ವೈವಾಽಹಮಾಗತಃ ।
ವಿನಾ ಯುಕ್ತ್ಯಾ ನ ಜೀಯೇತ ಮಹಾಬಲವತಾ ಪರಃ ॥೧೫॥

ಜಯೋ ಯುಕ್ತೌ ಸರ್ವಥೈವ ಸ್ಥಿತಃ ಸಾ ಬುದ್ಧಿಸಂಶ್ರಯಾ ।
ಮಯಾ ಶಕ್ತಿ ಜಯೋಪ್ರಾ(ಪಾ)ಯೋ ನಿಶ್ಚಿತಃ ಸೂಕ್ಷ್ಮಬುದ್ಧಿನಾ ॥೧೬॥

ಜಹಿ ಶೋಕಾಂಧಕಾರಂ ತ್ವಂ ಮದ್ಯುಕ್ತೇರವಿ ಸಂಶ್ರಯಃ ।
ಅಹಂ ಮನ್ಯೇ ಹತಾಃ ಶಕ್ತಿಗಣಾ ಇತ್ಯೇವ ಯುಕ್ತಿತಃ ॥೧೭॥

ಕುಟಿಲಾಕ್ಷನು ವಿಷಂಗನ ಆ ಮಾತನ್ನು ಕೇಳಿ ರಾಕ್ಷಸರಿಗುಂಟಾದ ಮಹತ್ತರ ವಾದ ನಾಶದ ವಿಷಯವನ್ನು ತಿಳಿಸಿದನು. ಅಲ್ಲದೇ ಶಕ್ತಿಗಳು ನಾಶವಾಗಿಯೇ ಇಲ್ಲವೆಂದೂ, ತಮಗೆ ಇದರಿಂದ ಬಹಳ ಭಯವು ಉಂಟಾಗಿದೆಯೆಂದೂ ಬಹಳ ಭಯವನ್ನೇ ವ್ಯಕ್ತಗೊಳಿಸುತ್ತಾ ತಿಳಿಸಿದನು. ॥೧೩॥

ಕುಟಿಲಾಕ್ಷನ ಮಾತನ್ನು ಕೇಳಿ ವಿಷಂಗರಾಕ್ಷಸನು ನಕ್ಕು ಇದೆಲ್ಲವೂ ಮೋಹವೆಂದು ಹೇಳುತ್ತಾ, ದೇವಿಯ ಮಾಯೆಯಿಂದ ಮೋಹಗೊಂಡು ಬುದ್ಧಿವಂತ ನಂತೆ, ಈರೀತಿಯಲ್ಲಿ ಮಾತನಾಡಿದನು. ॥೧೪॥

ಎಲೈ ಸೇನಾಪತಿಯೇ, ಕೇಳು. ಈ ವಿಷಯಗಳನ್ನೆಲ್ಲವನ್ನೂ ಕೇಳಿಯೇ ನಾನೂ ಇಲ್ಲಿಗೆ ಬಂದಿರುತ್ತೇನೆ. ಬಹಳ ಬಲಿಷ್ಠನಾದವನೊಂದಿಗೆ ಯುದ್ಧಕ್ಕೆ ತೊಡ ಗಿರುವವನು ಶಕ್ತಿಯುಳ್ಳವನಾಗಿದ್ದರೂ ಯುಕ್ತಿಯಿಲ್ಲದೇ ಜಯಿಸಲಾರನು. ॥೧೫॥

ಯುದ್ಧಮಾಡುವವನ ಬುದ್ಧಿಯ ಪ್ರಭಾವದಿಂದ ಉಪಯೋಗಿಸುವ ಯುಕ್ತಿ ಯಿಂದ ಜಯವು ಬರುವುದೆಂದು ತಿಳಿ. ಸೂಕ್ಷ್ಮಬುದ್ಧಿಯುಳ್ಳ ನಾನು ಶಕ್ತಿಯ ಜಯವಾಗುವ ಬಗೆಯನ್ನು ಈ ರೀತಿಯಲ್ಲಿ ನಿಶ್ಚಯಿಸಿದ್ದೇನೆ. ॥೧೬॥

ನನ್ನ ಯುಕ್ತಿಯ ಶಕ್ತಿಯನ್ನು ಅವಲಂಬಿಸಿ ನೀನು ದುಃಖವೆಂಬ ಕತ್ತಲೆ ಯನ್ನು ಹೋಗಲಾಡಿಸಿಕೋ! ನಾನು ಯುಕ್ತಿಪೂರ್ವಕವಾಗಿ ಶಕ್ತಿಗಳ ಗುಂಪಿನವ ರನ್ನು ನಾಶಮಾಡಬಹುದೆಂದು ನಂಬಿದ್ದೇನೆ! ॥೧೭॥

ಶೃಣು ತೇ ತತ್ಪ್ರವಕ್ಷ್ಯಾಮಿ ಯನ್ಮಯಾ ನಿಶ್ಚಿತಂ ಜಯೇ ।
ಕೂಟೇನೈವ ವಿಜೇಯಾ ಸಾ ತತ್ಕ್ರಮಂ ನಿಶ್ಚಿತಂ ಬ್ರುವೇ ॥೧೮॥

ಅದ್ಯೈವ ಚರಮೇ ಭಾಗೇ ದಿನಸ್ಯ ದೈತ್ಯಸೇನಯಾ ।
ಮಹತ್ಯಾ ದಂಶಿತಾಃ ಸರ್ವೇ ವಿಶುಕ್ರೇಣಾಽಪಿ ಸಂವೃತಾಃ ॥೧೯॥

ಯುದ್ಧಾಯ ಪುರತೋ ಯಾಂತು ರಾಜಪುತ್ರೈಶ್ಚ ಸಂಯುತಾಃ ।
ಗಂತವ್ಯಮೇವ ಯುದ್ಧಾಯ ಯಥಾ ಶಕ್ತಿಗಣಾ ಅಪಿ ॥೨೦॥

ನಿಶ್ಶೇಷೇಣೈವ ಯುಧ್ಯಂತಿ ಲಲಿತೈಕಾಕಿಕಾ ಭವೇತ್ ।
ತಾವದ್ರಾತ್ರಾವಂಧಕಾರೈಃ ದೈತ್ಯೈರ್ಬಹುಭಿರಾವೃತಾಃ ॥೨೧॥

ನಿರ್ಗಮ್ಯ ಪಾರ್ಶ್ವಭಾಗೇನ ಪೃಷ್ಠದೇಶಂ ಸಮಾಶ್ರಯನ್ ।
ತಸ್ಯಾ ರಥಂ ಸಮಾರುಹ್ಯ ತತ್ರತ್ಯಾ ಅಪಿ ಕಾಶ್ಚನ ॥೨೨॥

ಜಯದ ವಿಷಯದಲ್ಲಿ ನಾನು ನಿಶ್ಚಯಿಸಿರುವ ಮಾರ್ಗವನ್ನು ನಿನಗೆ ಅರುಹುವೆನು, ಕೇಳು. ಆಕೆಯನ್ನು ಯುಕ್ತಿಯ ಮಾರ್ಗದಿಂದಲೇ ಜಯಿಸಬೇಕೆಂಬುದೇ ನನ್ನ ನಿಶ್ಚಯವಾಗಿದೆ. ಎಂದು ಹೇಳಿದನು. ॥೧೮॥

ಈ ದಿನವೇ ಹಗಲಿನ ಕೊನೆಯ ಭಾಗದಲ್ಲಿ ಮಹತ್ತಾದ ದೈತ್ಯಸೈನ್ಯದೊಂದಿಗೆ ಕೂಡಿ ವಿಶುಕ್ರನ ಜೊತೆಯಲ್ಲಿ ರಾಕ್ಷಸರು ಯುದ್ಧಕ್ಕೆ ಮುಂದೆ ಹೊರಡಲಿ. ॥೧೯॥

ರಾಕ್ಷಸರಾಜಪುತ್ರರಿಂದಲೂ ಕೂಡಿ ರಾಕ್ಷಸಸೈನ್ಯಗಳು ಯುದ್ಧಕ್ಕಾಗಿ ಮುಂದುಗಡೆಯಲ್ಲಿ ಹೋಗಲಿ. ಶಕ್ತಿಗಳ ಗುಂಪಿನವರೂ ಅಲ್ಲಿಗೆ ಯುದ್ಧಕ್ಕಾಗಿ ಬರುವರು. ॥೨೦॥

ನಮ್ಮ ಕಡೆಯವರೆಲ್ಲರೂ ಸಂಪೂರ್ಣವಾದ ಶಕ್ತಿ ಸೈನ್ಯದೊಂದಿಗೆ ಯುದ್ಧ ಮಾಡುತ್ತಿರಲಿ. ಆಗ ಲಲಿತೆಯೊಬ್ಬಳೇ ಒಂಟಿಯಾಗಿ ಬರುವಳು. ಅಷ್ಟರೊಳಗಾಗಿ ಅನೇಕ ರಾಕ್ಷಸರೊಡಗೂಡಿ ರಾತ್ರಿಯ ಕತ್ತಲೆಯ ವೇಳೆಯಲ್ಲಿ ಲಲಿತೆಯಿರುವ ಪ್ರದೇಶವನ್ನು ಕುರಿತು ಹೋಗುವೆನು. ॥೨೧॥

ನಾನು ಮೆಲ್ಲಗೆ ಪಕ್ಕದ ಕಡೆಯಿಂದ ಆಕೆಯ ಹಿಂಭಾಗಕ್ಕೆ ಹೋಗಿ ಅವಳ ರಥವನ್ನು ಹತ್ತಿ ಅಲ್ಲಿರುವ ಕೆಲವು ಶಕ್ತಿಗಳನ್ನೂ ಹಿಡಿಯುವೆನು. ॥೨೨॥

ಶಕ್ತೀರ್ಹತ್ವಾ ಗ್ರಹೀಷ್ಯಾಮಿ ಜೀವಗ್ರಾಹಂ ಬಲಾದಹಂ ।
ಲಲಿತಾ ಮಬಲಾಂ ದುಷ್ಟಾಃ ಶಕ್ತಿಸಂಘ ಶಿಖಾತ್ಮಿಕಾಂ ॥೨೩॥

ನ ಜೀವಗ್ರಹಣಂ ಯಾತಿ ಚೇದ್ಧನ್ಮಿ ಗದಯಾ ಭೃಶಂ ।
ತಸ್ಯಾಂ ಹತಾಯಾಂ ಬದ್ಧಾಯಾಮಪಿ ವಾ ಶಕ್ತಿವಾಹಿನೀಂ ॥೨೪॥

ನಷ್ಟಪ್ರಾಯಾ ಮವೇಹಿ ತ್ವಂ ಭವದ್ಭಿರ್ನಾಶ್ಯತೇಽಪಿ ಚ ।
ಯಾ ತು ಸಾ ಲಲಿತಾ ರಾಜ್ಞೀ ಸುಕುಮಾರಕರಾಂಘ್ರಿಕಾ ॥೨೫॥

ನ ಸಮರ್ಥಾ ಮಯಾ ಯೋದ್ಧುಂ ವಿದಿತಂ ಮೇ ಚಿರಾದಿದಂ ।
ಏವಂ ಮಯಾ ವ್ಯವಸಿತಂ ಬುದ್ಧ್ಯಾಽತ್ಯಂತ ಪ್ರಗಲ್ಭಯಾ ॥೨೬॥

ಸಖೇ ಕಚ್ಚಿತ್ತವ ಮತಂ ದೋಷಭೇದವಿವರ್ಜಿತಂ ।
ಶ್ರುತ್ವಾ ವಿಷಂಗವಚನಂ ಕುಟಿಲಾಕ್ಷ ಶ್ಚಮೂಪತಿಃ ॥೨೭॥

ಆಗ ನಾನು ಶಕ್ತಿಗಳನ್ನು ಕೊಂದು ಶಕ್ತಿಗಳ ಗುಂಪಿಗೆ ನಾಯಕಸ್ವರೂಪಳಾದ ದುಷ್ಟಳಾದ ಆ ಅಬಲೆಯಾದ ಲಲಿತಾದೇವಿಯನ್ನು ಜೀವಸಹಿತ ಹಿಡಿದುಕೊಂಡು ಬರುತ್ತೇನೆ. ||೨೩||

ಅವಳು ಜೀವಸಹಿತ ಸಿಕ್ಕದೇ ಹೋದರೆ ನಾನು ನನ್ನ ಗದೆಯಿಂದ ಬಲವಾಗಿ ಹೊಡೆದು ಅವಳನ್ನು ಅಲ್ಲಿಯೇ ಕೊಲ್ಲುವೆನು. ಅವಳು ಸತ್ತರೂ ಅಥವಾ ನಾವು ಅವಳನ್ನು ಕಟ್ಟಿಹಾಕಿದರೂ, ಶಕ್ತಿಗಳ ಸೈನ್ಯವು ನಷ್ಟವಾದಂತೆಯೇ ಸರಿ. ||೨೪||

ಆಗ ಶಕ್ತಿಸೈನ್ಯವು ಶಕ್ತಿಹೀನವಾಗಿ ನಷ್ಟವಾದಂತೆಯೇ ಸರಿ. ಆ ಬಳಿಕ ಅದನ್ನು ನೀವು ನಾಶಮಾಡುವಿರಿ. ಅಲ್ಲದೇ ಲಲಿತಾಮಣಿಯೂ ಸುಕುಮಾರವಾದ ಕೈಕಾಲುಗಳುಳ್ಳ ಸ್ತ್ರೀಯೆಂದು ತಿಳಿ. ||೨೫||

ನನ್ನ ಜೊತೆಯಲ್ಲಿ ಅವಳು ಯುದ್ಧಮಾಡಲು ಶಕ್ತಳಲ್ಲವೆಂದು ಬಹಳ ಕಾಲದಿಂದಲೂ ನನಗೆ ಗೊತ್ತು. ಈ ವಿಷಯವನ್ನು ನನ್ನ ಅತ್ಯಂತ ಸೂಕ್ಷ್ಮವಾದ ಬುದ್ಧಿಯಿಂದ ಮೊದಲೇ ನಿಶ್ಚಯಿಸಿದೆನು. ||೨೬||

ಎಲೈ ಸ್ನೇಹಿತನೇ, ಈ ವಿಷಯದಲ್ಲಿ ವಿರುದ್ಧವಾದ ಅಭಿಪ್ರಾಯವೇನನ್ನೂ ನೀನು ಕೊಡಲಾರೆಯಷ್ಟೆ? ಎಂದು ವಿಷಂಗನ ಮಾತನ್ನು ಕೇಳಿ ಕುಟಿಲಾಕ್ಷ ಸೇನಾಪತಿಯು ಸಂತೋಷಪಟ್ಟನು. ||೨೭||

ತ್ರಿಪುರಾಮಾಯಯಾ ಮೂಢೋ ಜಿತಾಂ ತಾಮಭಿಮನ್ಯತ ।
ಪ್ರಹೃಷ್ಟ ಉತ್ಥಾಯ ಚ ತಂ ದ್ರುತಂ ಸ ಪರಿಷಸ್ವಜೇ ॥೨೮॥

ಸಾಧು ದೈತ್ಯಕುಲಶ್ಲಾಘ್ಯ ವೇದ್ಮಿ ತ್ವಾಂ ಬುದ್ಧಿಮತ್ತಮಂ ।
ಕಾಲೇ ಜಯವಹಾ ಬುದ್ಧಿಃ ದುರ್ಲಭಾ ಸರ್ವಥಾ ನನು ॥೨೯॥

ನೈವಂವಿಧಾ ಹ್ಯೌಶನಸೀ ಬುದ್ಧಿರಾಂಗಿರಸೀ ತಥಾ ।
ಚಿರಂ ಜೀವ ರಾಜಕಾರ್ಯ ಸಾಧಕಸ್ತ್ವಂ ಮತೋ ಮಮ ॥೩೦॥

ತತ್ಪ್ರಯಾ ಹ್ಯಚಿರಂ ರಾಜ್ಞೇ ನಿವೇದ್ಯಾಽಽಹಾಯ ಮಂತ್ರಿಣಃ ।
ರಾಜಪುತ್ರಾನ್ ವಿಶುಕ್ರಂ ಚಾಽಽಯಾಹಿ ಯುದ್ಧಾಯ ಸರ್ವಥಾ॥೩೧॥

ತ್ರಿಪುರಾದೇವಿಯ ಮಾಯೆಯಿಂದ ಮೂಢನಾಗಿ ಕುಟಿಲಾಕ್ಷನು ಲಲಿತೆಯ ಜಯವು ಸಿದ್ಧಿಸುವುದೆಂದು ನಂಬಿದನು! ಅನಂತರ ಬಹಳ ಸಂತೋಷದಿಂದ ಅವನು ಮೇಲಕ್ಕೆದ್ದು ಶೀಘ್ರವಾಗಿ ವಿಷಂಗರಾಕ್ಷಸನನ್ನು ಆಲಿಂಗಿಸಿಕೊಂಡನು. ॥೨೮॥

ದೈತ್ಯವಂಶದಲ್ಲೇ ಶ್ಲಾಘನೆಗೆ ಅರ್ಹನಾದ ವಿಷಂಗರಾಕ್ಷಸನೇ, ಭಲೆ, ಒಳ್ಳೆಯ ಅಭಿಪ್ರಾಯವನ್ನೇ ಸೂಚಿಸಿದ್ದೀಯೆ! ನೀನು ಅತ್ಯಂತ ಬುದ್ಧಿವಂತನೆಂದು ನನ್ನ ನಂಬಿಕೆಯು. ಕಾಲದಲ್ಲಿ ಜಯವನ್ನು ಸಂಪಾದಿಸುವ ಬುದ್ಧಿಯನ್ನು ನಿನ್ನಂತೆ ತೋರಿಸುವವರು ಈ ಲೋಕದಲ್ಲಿ ಬಹಳ ದುರ್ಲಭ. ॥೨೯॥

ಉಶನಸ್ಸಿನ ಮಗನಾದ ಬೃಹಸ್ಪತಿಗೂ ನಿನಗಿರುವಷ್ಟು ಬುದ್ಧಿಯಿಲ್ಲವೆಂದು ತಿಳಿಯುತ್ತೇನೆ. ನೀನು ಬಹಳಕಾಲ ಜೀವಂತನಾಗಿರಬೇಕೆಂಬುದೇ ನನ್ನ ಅಭಿಲಾಷೆ. ನೀನು ಶ್ರೇಷ್ಠವಾದ ರಾಜಕಾರ್ಯಗಳನ್ನು ಸಾಧಿಸುವ ಮಹಾವ್ಯಕ್ತಿಯೆಂದು ನನ್ನ ಅಭಿಪ್ರಾಯ! ॥೩೦॥

ಆದುದರಿಂದ ಶೀಘ್ರವಾಗಿ ನೀನು ಹೋಗಿ ಈ ವಿಷಯಗಳನ್ನು ದೊರೆಗಳಿಗೆ ವಿಜ್ಞಾಪನೆಮಾಡಿ ವಿಶುಕ್ರ ಮಂತ್ರಿಗಳೂ ರಾಜಪುತ್ರರೂ ಇವರನ್ನೆಲ್ಲರನ್ನೂ ಯುದ್ಧಕ್ಕೆ ಸರ್ವಥಾ ಕರೆದುಕೊಂಡು ಬಾ. ॥೩೧॥

ಲಂಬಂತ್ಯೇಷ ದಿನಾನಾಥೋ ಪ್ರಯಾತುಂ ಸಲಿಲಾರ್ಣವಂ ।
ವಯಂ ಯದಾ ಶಕ್ತಿಸೇನಾಂ ನಿಯುಧ್ಯಾಮಸ್ತದಾ ದ್ರುತಂ ॥೩೨॥

ಸಾಧಯಿಷ್ಯಸಿ ತತ್ಕಾರ್ಯಂ ಬುದ್ಧ್ಯಾವೀರ್ಯೇಣ ಸಂವೃತಃ ।
ಇತ್ಯುಕ್ತೇ ಕುಟಿಲಾಕ್ಷೇಽಥ ವಿಷಂಗೋ ನಗರಂ ಯಯೌ ॥೩೩॥

ತತ್ರ ರಾಜ್ಞೇ ವಿಶುಕ್ರಾಯ ಚಾಽಪಿ ಸಂವೇದ್ಯ ಸರ್ವಶಃ ।
ಮಾಯಾ ವಿಮೂಢೈರ್ದೈತ್ಯೇಶೈಃ ಸಂಮತಃ ಸಂಯಯೌ ದ್ರುತಂ ॥೩೪॥

ರಾಜಪುತ್ರೈರ್ವಿಶುಕ್ರೇಣ ಮಂತ್ರಿಭಿಶ್ಚಾಽಭಿ ಸಂವೃತಃ ।
ಕುಟಿಲಾಕ್ಷೇಣ ಸಂಗಮ್ಯ ಸರ್ವಸೇನಾ ಸಮಾವೃತಃ ॥೩೫॥

ಪಶ್ಚಿಮ ಸಮುದ್ರದ ನೀರಿನಲ್ಲಿ ಮುಳುಗಲು ಈಗಾಗಲೇ ಹಗಲಿಗೆ ಅಧಿಪತಿಯಾದ ಸೂರ್ಯನು ಜೋಲಾಡುತ್ತಿದ್ದಾನೆ. ನಾವುಗಳು ಶಕ್ತಿಸೈನ್ಯಗಳೊಂದಿಗೆ ಯುದ್ಧವನ್ನು ಮಾಡಲು ಶೀಘ್ರವಾಗಿ ಸಮಸ್ತ ರಾಕ್ಷಸರೊಂದಿಗೂ ಸಿದ್ಧರಾಗೋಣ. ॥೩೨॥

ನೀನು ನಿನ್ನ ಬುದ್ಧಿಯಿಂದಲೂ ಪರಾಕ್ರಮದಿಂದಲೂ ಕೂಡಿದವನಾಗಿ ಈ ಕಾರ್ಯವನ್ನು ದಯವಿಟ್ಟು ಸಾಧನೆ ಮಾಡುವೆ! ಈರೀತಿಯಾಗಿ ಕುಟಿಲಾಕ್ಷನು ಹೇಳಲು ವಿಷಂಗನು ಪಟ್ಟಣಕ್ಕೆ ಹೋದನು. ॥೩೩॥

ಅಲ್ಲಿ ವಿಷಂಗನು ರಾಜನಿಗೂ ಮತ್ತು ವಿಶುಕ್ರನಿಗೂ ಅಲ್ಲಿ ನಡೆದ ಸಮಸ್ತ ವಿಷಯಗಳನ್ನೂ ವಿಜ್ಞಾಪಿಸಿ, ಮಾಯೆಯಿಂದ ಮೂಢರಾದ ಆ ರಾಕ್ಷಸಾಧಿಪತಿಗಳ ಒಪ್ಪಿಗೆಯನ್ನು ತನ್ನ ಅಭಿಪ್ರಾಯಕ್ಕೆ ಸಂಪಾದನೆ ಮಾಡಿಕೊಂಡು ಶೀಘ್ರವಾಗಿಯೇ ಯುದ್ಧಕ್ಕೆ ಹೊರಟುಬಂದನು. ॥೩೪॥

ರಾಜಪುತ್ರರೂ ವಿಶುಕ್ರ ಮಂತ್ರಿಗಳು ಇವರುಗಳೇ ಮೊದಲಾದ ಎಲ್ಲ ರಾಕ್ಷಸರಿಂದಲೂ ಕೂಡಿದವನಾಗಿ ಬಂದು ಕುಟಿಲಾಕ್ಷನೊಂದಿಗೆ ಸೇರಿ ಎಲ್ಲಾ ಸೈನ್ಯಗಳಿಂದಲೂ ಕೂಡಿದವನಾಗಿ ಯುದ್ಧಮಾಡಲು ಹೊರಟನು. ॥೩೫॥

ಯೋದ್ಧುಮಭ್ಯಾಯಯೌ ತತ್ರ ಯತ್ರಶಕ್ತಿಮಹಾಚಮೂಃ ।
ವಿದಿತ್ವಾ ದೈತ್ಯರಾಜಸ್ಯ ಸನ್ನಾಹಮತಿ ಸಂವೃತಂ ॥೩೬॥

ಸರ್ವಸ್ಸೈನ್ಯ ದೈತ್ಯವರ ಸಂಗಮಂ ಚಾರವಕ್ತ್ರತಃ ।
ಮಂತ್ರಿಣೀ ಲಲಿತಾದೇವೀಂ ನತ್ವಾ ವೃತ್ತಂ ವ್ಯಜಿಜ್ಞಪತ್ ॥೩೭॥

ಆಜ್ಞಪ್ತಾ ಲಲಿತಾದೇವ್ಯಾ ಮಂತ್ರಿಣೀ ಪ್ರಾಹ ದಂಡಿನೀಂ ।
ವತ್ಸೇ ಭಂಡಾಽಸುರಸ್ಯಾಽಯಂ ಸಂರಂಭೋ ದೃಶ್ಯತೇ ಮಹಾನ್ ॥೩೮॥

ಏಕಂ ದೈತ್ಯೇಶ್ವರಂ ಮುಕ್ತ್ವಾ ಸರ್ವೇ ಯುದ್ಧಾಯ ಸಂಗತಾಃ ।
ಅಸ್ಮಾಭಿರಪಿ ಗಂತವ್ಯಂ ನಿಶ್ಶೇಷೇಣ ದ್ರುತಂ ತು ತತ್ ॥೩೯॥

ಶಕ್ತಿಗಳ ಮಹಾಸೈನ್ಯವು ಇದ್ದ ಕಡೆಗೆ ವಿಷಂಗರಾಕ್ಷಸನು ಅವರೆಲ್ಲರ ಜೊತೆಯಲ್ಲಿಯೂ ಬಂದು ಸೇರಿದನು. ಆದರೆ ಮಂತ್ರಿಣೀದೇವಿಯು ದೈತ್ಯರಾಜನ ಬಹಳ ಗೋಪ್ಯವಾದ ಸರ್ವಸಿದ್ಧತೆಯನ್ನು ಗೂಢಚಾರರ ಮೂಲಕವಾಗಿ ಮುಂಚೆಯೇ ತಿಳಿದಿದ್ದಳು. ॥೩೬॥

ಗೂಢಚಾರರ ಮುಖಗಳಿಂದ ಎಲ್ಲಾ ರಾಕ್ಷಸಶ್ರೇಷ್ಠರುಗಳೂ ಯುದ್ಧಕ್ಕೆ ಬರುವ ವಿಷಯವನ್ನು ಮಂತ್ರಿಣೀದೇವಿಯು ಮೊದಲಿನಲ್ಲೇ ತಿಳಿದುಕೊಂಡು ಲಲಿತಾದೇವಿಗೆ ನಮಸ್ಕಾರವನ್ನು ಮಾಡಿ ಈ ಸಕಲವಾದ ಸಮಾಚಾರಗಳನ್ನೂ ವಿಜ್ಞಾಪನೆಮಾಡಿಕೊಂಡಳು. ॥೩೭॥

ಲಲಿತಾದೇವಿಯ ಅಪ್ಪಣೆಯಂತೆಯೇ ಮಂತ್ರಿಣೀದೇವಿಯು ದಂಡಿನೀ ದೇವಿಗೆ ಈ ರೀತಿಯಲ್ಲಿ ಹೇಳಿದಳು. ಎಲೌ ಮಗಳೇ, ಭಂಡರಾಕ್ಷಸನ ಯುದ್ಧದ ಸಡಗರದ ಮಹಾಪ್ರಯತ್ನವು ನಡೆಯುತ್ತಿದೆಯೆಂಬುದಾಗಿ ನೀನು ತಿಳಿದುಕೋ. ॥೩೮॥

ರಾಕ್ಷಸರಾಜನೊಬ್ಬನನ್ನು ಬಿಟ್ಟು ಇತರ ರಾಕ್ಷಸರೆಲ್ಲರೂ ಯುದ್ಧಕ್ಕೆ ಸೇರಿರುತ್ತಾರೆ. ನಾವೂ ಕೂಡ ಸಮಸ್ತ ಶಕ್ತಿಸೇನೆಗಳೊಡನೆ ಶೀಘ್ರವಾಗಿ ಯುದ್ಧಭೂಮಿಗೆ ಹೋಗಬೇಕು. ॥೩೯॥

ಕುರು ಸೈನ್ಯಸ್ಯ ಸನ್ನಾಹಂ ಶಕ್ತೀನಾಂ ಪ್ರವಿಶೇಷತಃ ।
ಇತ್ಯಾಜ್ಞಪ್ತಾ ಕೋಲಮುಖೀ ಸರ್ವಶಕ್ತಿ ಚಮೂವೃತಾ ॥೪೦॥

ಮಂತ್ರಿಣ್ಯಾ ಚ ಸಮಾಯುಕ್ತಾ ದೇವೀಂ ನತ್ವಾ ಯಯೌ ಮೃಧೇ ।
ನಿರ್ಗತಾ ಶಕ್ತಿಸೇನಾ ಸಾ ಗಜವಾಜಿರಥಾಽಽಕುಲಾ ॥೪೧॥

ಸಮುದ್ರ ಇವ ಲೋಕಾನಾಂ ಪ್ಲಾವಕಃ ಪ್ರತಿಸಂಚರೇ ।
ಯುದ್ಧವಾದಿತ್ರ ನಿನದೈರ್ಗಜವಾಜಿ ರಥಸ್ವನೈಃ ॥೪೨॥

ಮಿಶ್ರಿತಃ ಸಿಂಹನಾದೋ ವೈ ಶಕ್ತೀನಾಮಭಿವರ್ಧತ ।
ತಂ ಭೀಮಂ ಲೋಕಕವಲನಂ ಶ್ರುತ್ವಾ ದೈತ್ಯಾ ಮಹಾಸ್ವನಂ ॥೪೩॥

ವ್ಯಮುಂಚನ್ ಪ್ರತಿರಾವಂ ತೇ ತತೋಽತಿ ವಿಪುಲಂ ತದಾ ।
ಸ ಘೋಷಃ ಸೇನಯೋರ್ಮಿಶ್ರೋ ವ್ಯರುಚದ್ರೋದಸೀ ಗತಃ ॥೪೪॥

ಶಕ್ತಿಗಳನ್ನೆಲ್ಲವನ್ನೂ ಒಟ್ಟಿಗೆ ಸೇರಿಸಿ ವಿಶೇಷವಾದ ಸೈನ್ಯಸಿದ್ಧತೆಯನ್ನು ಮಾಡು. ಎಂದು ಮಂತ್ರಿಣಿಯು ಅಪ್ಪಣೆಮಾಡಲು ದಂಡನಾಯಕಿಯು ಎಲ್ಲಾ ಸೈನ್ಯಗಳನ್ನೂ ಒಟ್ಟುಗೂಡಿಸಿದಳು. ॥೪೦॥

ಮಂತ್ರಿಣೀದೇವಿಯೊಂದಿಗೂ ಕೂಡಿ ದಂಡನಾಯಕಿಯು ಲಲಿತಾದೇವಿಗೆ ನಮಸ್ಕರಿಸಿ ಯುದ್ಧಕ್ಕೆ ಹೊರಟಳು. ಆ ಶಕ್ತಿಸೈನ್ಯವು ಆನೆ, ಕುದುರೆ ಮತ್ತು ರಥಗಳಿಂದ ತುಂಬಿತ್ತು. ॥೪೧॥

ಸಂಹಾರಕಾಲದಲ್ಲಿ ಲೋಕಗಳನ್ನು ಮುಳುಗಿಸುವ ಪ್ರಳಯಸಾಗರವು ಹೇಗೆ ಭಯಂಕರವಾಗಿರುವುದೋ ಹಾಗೆ ಈ ಮಹಾಸೈನ್ಯವು ಶತ್ರುಗಳಿಂದ ಎದುರಿಸಲು ಕಷ್ಟವಾಗಿತ್ತು. ಅಲ್ಲದೇ ಈ ಮಹಾಸೈನ್ಯದಲ್ಲಿ ಯುದ್ಧದ ವಾದ್ಯಗಳ ಶಬ್ದಗಳೂ ಆನೆ, ಕುದುರೆ, ರಥ, ಇವುಗಳ ಶಬ್ದಗಳು ವಿಶೇಷವಾಗಿ ಕೇಳಿ ಬರುತ್ತಿತ್ತು. ॥೪೨॥

ಇದರೊಂದಿಗೆ ಮಿಶ್ರವಾದ ಸಿಂಹನಾದವು ವಿಜೃಂಭಿಸುತ್ತಿತ್ತು. ರಾಕ್ಷಸರು ಲೋಕವನ್ನೇ ನಾಶಮಾಡುವಂತಿರುವ ಆ ಭಯಂಕರ ಶಬ್ದವನ್ನು ಕೇಳಿದರು.॥೪೩॥

ಆಗ ರಾಕ್ಷಸರೂ ಕೂಡ ಗಟ್ಟಿಯಾಗಿ ಶಕ್ತಿಗಳ ಧ್ವನಿಗೆ ಪ್ರತಿಯಾಗಿ ಶಬ್ದವನ್ನು ಮಾಡುತ್ತಾ ಬಂದರು. ಈ ಎರಡು ಶಬ್ದಗಳೂ ಸೇರಿಭೂವ್ಯಾಕಾಶದವರೆಗೂ

ಭೀರೂಣಾಂ ಪ್ರಾಣಹರಣಃ ಪಲ್ವಲಾನಾಂ ಪ್ರಶೋಷಣಃ ।
ಅಥಾ ಭವನ್ಮಹಾಯುದ್ಧಂ ಸೇನಯೋಃ ಶಕ್ತಿದೈತ್ಯಯೋಃ ॥೪೫॥

ಜಘ್ನುರ್ದೈತ್ಯಾಃ ಶಕ್ತಿಗಣಂ ವಿಚಿತ್ರೈರಾಯುಧೈಃ ಪೃಥಕ್ ।
ತಥಾ ದೈತ್ಯಾನ್ ಶಕ್ತಯೋಽಪಿ ಮಮರ್ದುಃ ಹೇತಿಪಾತನೈಃ ॥೪೬॥

ಶರಪ್ರಹಾರೈಸ್ತಿಲಶಃ ಕೇಚಿತ್ತತ್ರ ಕೃತಾ ರಣೇ ।
ಕೇಚಿತ್ ಕೃಪಾಣಿನಾ ಮಧ್ಯೇ ಪಾಟಿತಾಃ ಶಕಲೀಕೃತಾಃ ॥೪೭॥

ಕೇಚಿಚ್ಛಕ್ತಿಷು ಭಲ್ಲೇಷು ಪ್ರೋತಾಃ ಶೂಲೇಷು ಮಧ್ಯತಃ ।
ಕೇಚಿಚ್ಚಕ್ರೇಽಥ ಸಂಭಿನ್ನ ಕಂಧರೋದರಬಾಹವಃ ॥೪೮॥

ವ್ಯಾಪಿಸಿತು. ಈ ಮಹಾಶಬ್ದವು ಅಂಜುಪುರುಕರ ಪ್ರಾಣವನ್ನು ಹಾಳುಮಾಡುವುದಾಗಿಯೂ, ಕೊಳಗಳನ್ನು ಸಹ ಒಣಗಿಸುವುದಾಗಿಯೂ ಗಟ್ಟಿಯಾಗಿ ಕೇಳಿಸಿತು. ಅನಂತರ ಶಕ್ತಿಗಳ ಮತ್ತು ರಾಕ್ಷಸರ ಸೈನ್ಯಗಳಿಗೆ ಮಹಾಯುದ್ಧವು ಸಂಭವಿಸಿತು. ||೪೫||

ರಾಕ್ಷಸರು ಶಕ್ತಿಗಳ ಗುಂಪಿನವರನ್ನು ನಾನಾವಿಧವಾದ ಆಯುಧಗಳಿಂದ ಬೇರೆ ಬೇರೆಯಾಗಿ ಹೊಡೆದು ನಾಶಮಾಡಿದರು. ಹಾಗೆಯೇ ಶಕ್ತಿದೇವತೆಗಳೂ ಕೂಡ ತಮ್ಮ ಶಕ್ತಿಗಳನ್ನು ಮತ್ತು ಕತ್ತಿಗಳನ್ನು ಪ್ರಯೋಗಿಸುವುದರಿಂದ ರಾಕ್ಷಸರನ್ನೂ ಕೊಂದರು. ||೪೬||

ಕೆಲವರು ಯುದ್ಧದಲ್ಲಿ ಶತ್ರುಗಳನ್ನು ತಮ್ಮ ಬಾಣಪ್ರಹಾರಗಳಿಂದ ಚೂರು ಮಾಡಿದರು. ಕೆಲವರು ತಮ್ಮ ಶಕ್ತಿಗಳಿಂದ ಶತ್ರುಗಳ ಮಧ್ಯಭಾಗವನ್ನು ಸೀಳಿದರು, ಮತ್ತು ತುಂಡರಿಸಿದರು. ||೪೭||

ಕೆಲವು ಶಕ್ತಿಗಳ ಭರ್ಜಿಗೆ ಕೆಲವು ರಾಕ್ಷಸರು ಸಿಕ್ಕಿಕೊಂಡಿದ್ದರು. ಮತ್ತೆ ಕೆಲವರು ಅವರ ಶೂಲಗಳ ಮಧ್ಯಭಾಗಕ್ಕೆ ಸಿಕ್ಕಿದ್ದರು. ಕೆಲವರು ತಮ್ಮ ಚಕ್ರಗಳಿಂದ ರಾಕ್ಷಸರ ಕತ್ತುಗಳನ್ನೂ ಮತ್ತು ಹೊಟ್ಟೆಗಳು ಮತ್ತು ತೋಳುಗಳು ಇವುಗಳನ್ನೂ ಕತ್ತರಿಸಿದರು. ||೪೮||

ಪೇಷಿತಾಃ ಪರಿಘೈಃ ಕೇಚಿಚ್ಛತಘ್ನೀ ಮುದ್ಗರಾದಿಭಿಃ ।
ಅಮೋಘಪಾಶೈಃ ಪರಿತಃ ಪಾಶಿತಾಃ ಕೇಚಿದಂಜಸಾ ॥೪೯॥

ಕೇಚಿತ್ಕುಠಾರಪರಶು ಪ್ರಮುಖೈಃ ಮೂರ್ಧ್ನಿ ಭೇದಿತಾಃ ।
ವಿಕ್ಷತಾಃ ಕೇಚಿದುರಸಿ ತೋಮರಾಂಕುಶಸಾರಣೈಃ ॥೫೦॥

ಏವಂ ಯುದ್ಧಂ ಬಭೌ ತತ್ರ ಮುಹೂರ್ತಂ ಸಮಭಾವತಃ ।
ಅಥ ಶಕ್ತಿಗಣೈರ್ಭಗ್ನಾ ದೈತ್ಯಸೇನಾ ಪ್ರವಿದ್ರುತಾ ॥೫೧॥

ಕ್ರಂದಮಾನಾಃ ಹತಾಃ ಸ್ಮೋ ವೈ ಹಾಹೇತಿ ಚ ದೃಢಂ ಹತಾಃ ।
ಅನುದ್ರುತಾಃ ಶಕ್ತಿಗಣೈಃ ಶರಣಂ ಪ್ರೇಪ್ಸವೋಽಭಿತಃ ॥೫೨॥

ಕೆಲವು ಶಕ್ತಿಗಳು ತಮ್ಮ ಕತ್ತಿ ಮತ್ತು ಹಾರೇ ಮುಂತಾದ ಆಯುಧಗಳಿಂದಲೂ ಪರಿಘಾ ಎಂಬ ಆಯುಧಗಳಿಂದಲೂ ಶತ್ರುಗಳನ್ನು ನುಚ್ಚುನೂರಾಗಿ ಮಾಡಿದರು. ಮತ್ತೆ ಕೆಲವು ಶಕ್ತಿಗಳು ಶೀಘ್ರವಾಗಿ ತಮ್ಮ ಅಮೋಘವಾದ ಪಾಶಗಳಿಂದ ರಾಕ್ಷಸರನ್ನು ಜಾಗ್ರತೆಯಾಗಿ ಸುತ್ತಲೂ ಕಟ್ಟಿಹಾಕಿದರು. ॥೪೯॥

ಕೆಲವರು ಕೊಡಲಿ ಕುಠಾರ ಮುಂತಾದ ಆಯುಧಗಳಿಂದ ಶತ್ರುಗಳ ತಲೆಗಳನ್ನು ಸೀಳಿದರು. ಕೆಲವರು ತಮ್ಮ ತೋಮರ ಅಂಕುಶ ಸಾರಣ ಮುಂತಾದ ಆಯುಧಗಳಿಂದ ಶತ್ರುಗಳ ವಕ್ಷಸ್ಥಳಗಳನ್ನು ಕತ್ತರಿಸಿದರು. ॥೫೦॥

ಈರೀತಿಯಲ್ಲಿ ಆ ಯುದ್ಧವು ಎರಡು ಸೈನ್ಯಗಳಿಗೂ ಸಮವಾಗಿ ಮುಹೂರ್ತ ಕಾಲ ನಡೆಯಿತು. ಅನಂತರ ಶಕ್ತಿಗಳ ಗುಂಪಿನವರು ರಾಕ್ಷಸರ ಸೈನ್ಯಗಳನ್ನು ನಾಶಮಾಡಲಾಗಿ ಉಳಿದ ರಾಕ್ಷಸರ ಸೈನ್ಯವು ಪಲಾಯನಮಾಡಿತು! ॥೫೧॥

ನಾವು ಹಾಳಾದೆವು! ಅಯ್ಯೋ ಅಯ್ಯೋ! ನಿಜವಾಗಿಯೂ ನಾವು ನಾಶವಾದೆವು! ಎಂದು ಕಿರಿಚುತ್ತಾ ಓಡುತ್ತಿರುವ ರಾಕ್ಷಸರ ಸೈನ್ಯದವರುಗಳನ್ನೂ ಶಕ್ತಿಗಳ ಗುಂಪಿನವರು ಅಟ್ಟಿಕೊಂಡು ಹೋಗಲಾಗಿ, ಅವರು ಎಲ್ಲಾ ಕಡೆಯಲ್ಲಿಯೂ ಶಕ್ತಿಗಳಿಗೆ ಶರಣಾಗತರಾಗಲು ಮನಸ್ಸಿನಲ್ಲಿ ಅಪೇಕ್ಷಿಸುತ್ತಿದ್ದರು. ॥೫೨॥

ಅಸೃಗ್ವಹಾ ವಪುಸ್ತತ್ರ ಕ್ರವ್ಯಾದಶುಭದರ್ಶನಾಃ ।
ತರಂಗೈಃ ಕಂಕಾಲಗಣಾನ್ ವಾಹಯಂತ್ಯಃ ಸಮೇಧಿತಾಃ ॥೫೩॥

ಕೇಚಿತ್ತಾಸು ಪ್ರಪತಿತಾ ನೀತಾ ದೂರಂ ನಿಮೇಷತಃ ।
ಏವಂ ದೈತ್ಯಪ್ರವಿದ್ರಾವಂ ದೃಷ್ಟ್ವಾ ಭಂಡಾಽನುಜಸ್ತದಾ ॥೫೪॥

ವಿಶುಕ್ರಃ ಪ್ರಾಹ ಪಾರ್ಶ್ವಸ್ಥಾನ್ ವಲಾಹಕಮುಖಾಸುರಾನ್ ।
ಪ್ರೋವಾಚಾಽಽಹೂಯ ವಿಜ್ಞಾಯ ತಾನಮೇಯ ಪರಾಕ್ರಮಾನ್ ॥೫೫॥

ಹೇ ವಲಾಹಕ ಪಶ್ಯೇಮಾನ್ ದೈತ್ಯಾನ್ ಶಕ್ತಿಗಣೈರ್ಹತಾನ್ ।
ಅನಾಥಾನಿವ ಯುದ್ಧೇಷು ಕಾಲ್ಯಮಾನಾನ್ ಸಮಂತತಃ ॥೫೬॥

ಗಚ್ಛ ತ್ವಂ ಭ್ರಾತೃಭಿರ್ಯುಕ್ತೋ ನಾಶಯ ಪ್ರತ್ಯರೀನಿಮಾನ್ ।
ತಪಸಾ ಭವತಾಂ ನೇತ್ರೇ ಸೂರ್ಯಃ ಸ್ವಾಂಶಂ ದದೌ ಕಿಲ ॥೫೭॥

ಶವಗಳ ಅಮಂಗಳಕರಗಳಾದ ನೋಟಗಳುಳ್ಳ, ರಕ್ತದಿಂದ ತುಂಬಿರುವ, ಬಹಳ ವೃದ್ಧಿಯಾದ ರಕ್ತದ ಅಲೆಗಳಿಂದ ತುಂಬಿ ಹದ್ದಿನ ಸಮೂಹಗಳಿಗೆ ಆಸರೆಯಾದ ರಕ್ತಪ್ರವಾಹಗಳು ಅಲ್ಲಿ ಎಲ್ಲಾ ಕಡೆಯಲ್ಲಿಯೂ ಹರಿಯುತ್ತಿದ್ದವು. ॥೫೩॥

ಕೆಲವರು ಆ ಪ್ರವಾಹಗಳಲ್ಲಿ ಬಿದ್ದವರಾಗಿ ಒಂದು ನಿಮಿಷ ಮಾತ್ರದಲ್ಲಿಯೇ ಬಹುದೂರ ಕೊಚ್ಚಿಕೊಂಡುಹೋದರು. ಆಗ ಭಂಡರಾಕ್ಷಸನ ತಮ್ಮನು ರಾಕ್ಷಸರು ಹಿಮ್ಮೆಟ್ಟಿ ಓಡುತ್ತಿರುವುದನ್ನು ಕಂಡನು. ॥೫೪॥

ವಿಶುಕ್ರನು ತನ್ನ ಪಕ್ಕದಲ್ಲಿದ್ದ ವಲಾಹಕ ಮುಂತಾದ ರಾಕ್ಷಸರುಗಳನ್ನು ಕರೆದು, ಅವರನ್ನು ಅಪರಿಮಿತ ಪರಾಕ್ರಮಿಗಳೆಂದು ಭಾವಿಸಿ, ಈರೀತಿಯಲ್ಲಿ ಅವರನ್ನು ಕುರಿತು ಹೇಳಿದನು. ॥೫೫॥

ಎಲೈ ವಲಾಹಕನೇ, ಶಕ್ತಿಗಣಗಳಿಂದ ನಾಶವನ್ನೈದಿದ ರಾಕ್ಷಸರನ್ನೂ, ಯುದ್ಧದಲ್ಲಿ ಅನಾಥರಂತೆ ಒದ್ದಾಡುತ್ತಿರುವ ಇತರ ರಾಕ್ಷಸರುಗಳನ್ನೂ ನೋಡು. ॥೫೬॥

ನೀನು ನಿನ್ನ ತಮ್ಮಂದಿರೊಡನೆ ಹೋಗಿ ಈ ನಮ್ಮ ಶತ್ರುಗಳಾದ ಶಕ್ತಿಯರನ್ನು ನಾಶಮಾಡು. ತಪಸ್ಸನ್ನು ಮಾಡಿದ್ದರಿಂದ ನಿಮಗೆಲ್ಲರಿಗೂ ಸೂರ್ಯನು ತನ್ನ ಅಂಶವನ್ನು ಕೊಟ್ಟಿರುವನಷ್ಟೆ? ॥೫೭॥

ಗತ್ವಾಽವಲೋಕನೇನೇಮಾ ಭವಂತೋ ನಿರ್ದಹಂತು ವೈ ।
ಇತ್ಯಾಜ್ಞಪ್ತೋಽ ಭ್ರಾತೃಯುತೋ ಯಯೌ ಶಕ್ತೀರ್ವಿಹಿಂಸಿತುಂ ॥೫೮॥

ವಲಾಹಕಃ ಕಾಲಮುಖೋ ವಿಕರ್ಣೋ ವಿಕಟಾನನಃ ।
ಸೂಚೀಮುಖಃ ಕರಾಲಾಕ್ಷಃ ಕರಟಶ್ಚೇತಿ ಸಪ್ತ ತೇ ॥೫೯॥

ಭ್ರಾತರೋಽತಿಕ್ರೂರಬಲಾ ಯಮೀಕ್ಷಂತ್ಯತಿರೋಷತಃ ।
ಸ ಸಂತಪ್ತೋಽತಿಕರ್ಷೇಣ ಪ್ರಯಾತಿ ನಿಧನಂ ದ್ರುತಂ ॥೬೦॥

ತೈರುಪಾಸ್ಯ ದಿವಾನಾಥಂ ಪ್ರಾಪ್ತಮೇವಂ ವಿಧಂ ಬಲಂ ।
ಏವಂ ವಿಧಾಸ್ತೇ ಸೇನಾಯಾಂ ಪ್ರವಿಶ್ಯ ಯುಗಪತ್ತದಾ ॥೬೧॥

ವಿನಿಘ್ನಂತಃ ಶಕ್ತಿಗಣಂ ದದೃಶುಃ ಕ್ರೂರಚಕ್ಷುಷಾ ।
ಅಥ ತಾಃ ಶಕ್ತಯಃ ಸರ್ವಾ ದೈತ್ಯಾನಾಮವಲೋಕನಾತ್ ॥೬೨॥

ನಿಮ್ಮನ್ನು ನೋಡಿದ ಕೂಡಲೇ ಈ ಶಕ್ತಿಗಳು ಸುಟ್ಟುಹೋಗಲಿ. ಎಂದು ಭಂಡನು ಅಪ್ಪಣೆಮಾಡಲು, ವಲಾಹಕನು ತನ್ನ ತಮ್ಮಂದಿರೊಡನೆ ಶಕ್ತಿಗಳನ್ನು ನಾಶಮಾಡಲು ಹೊರಟನು. ॥೫೮॥

ವಲಾಹಕ, ಕಾಲಮುಖ, ವಿಕರ್ಣ, ವಿಕಟಾನನ, ಸೂಚೀಮುಖ, ಕರಾಳಾಕ್ಷ, ಕರಟ ಎಂದು ಏಳು ಜನ ಅಣ್ಣತಮ್ಮಂದಿರೆಂದು ತಿಳಿಯಬೇಕು. ॥೫೯॥

ಇವರು ಬಹಳ ಕ್ರೂರವಾದ ಬಲವುಳ್ಳ ಸಹೋದರರೆಂದು ತಿಳಿಯಬೇಕು. ಇವರು ಯಾರನ್ನು ಬಹಳ ಕೋಪದಿಂದ ನೋಡುತ್ತಾರೆಯೋ ಅವರು ಬಹಳ ಧಗೆಯಿಂದ ಸುಟ್ಟುಹೋಗಿ ತಕ್ಷಣದಲ್ಲಿಯೇ ನಾಶವನ್ನು ಹೊಂದುತ್ತಾರೆ. ॥೬೦॥

ಇವರು ಸೂರ್ಯನನ್ನು ಉಪಾಸನೆ ಮಾಡಿ ಇಂಥಾ ಶಕ್ತಿಯನ್ನು ಹೊಂದಿದರು. ಇಂತಹ ಸಹೋದರರು ಏಕಕಾಲದಲ್ಲಿ ಆ ಶಕ್ತಿಗಳ ಸಮೂಹಕ್ಕೆ ಹೋರಾಡಲು ನುಗ್ಗಿದರು. ॥೬೧॥

ಅನಂತರ ಈ ಸಹೋದರರು ತಮ್ಮ ಕ್ರೂರವಾದ ಕಣ್ಣುಗಳಿಂದ ಶಕ್ತಿಗಳ ಗುಂಪಿನವರನ್ನು ನೋಡುತ್ತಾ ನಾಶಮಾಡುತ್ತಿದ್ದರು. ಅನಂತರ ಆ ಶಕ್ತಿಗಳೆಲ್ಲರೂ ರಾಕ್ಷಸರ ನೋಟಗಳಿಂದ ತಾಪಕ್ಕೊಳಗಾದರು. ॥೬೨॥

ಮಹತ್ಯಾ ತೃಷಯಾ ವ್ಯಾಪ್ತಾಃ ಸಂತಾಪೇನಾಽಖಿಲಾಽಂಗಕೈಃ ।
ಏವಮತ್ಯಂತ ಸಂತಾಪ ತೃಷಾಭ್ಯಾಂ ಸಮಭಿಪ್ಲುತಂ ॥೬೩॥

ಅವಸನ್ನಂ ಶಕ್ತಿಗಣಂ ಸಂಘಶಃ ಸಮರಾವನೌ ।
ಮಂತ್ರಿಣೀಂ ದಂಡಿನೀಂ ತ್ಯಕ್ತ್ವಾ ಸರ್ವಂ ಶಕ್ತಿಗಣಂ ಯದಾ ॥೬೪॥

ಗಜಾಽಶ್ವವಾಹನೋಪೇತಂ ಪತಿತಂ ತಾಮಹೇತುತಃ ।
ತನ್ನೇತ್ರವೀರ್ಯಂ ನ ತಯೋಃ ಪ್ರವೃತ್ತಂ ತನ್ಮಹಿತ್ವತಃ ॥೬೫॥

ನಿಶಾಮ್ಯ ತದ್ದಂಡನಾಥಾ ಮಂತ್ರಿಣ್ಯೈ ಸಂನ್ಯವೇದಯತ್ ।
ವಿಚಾರ್ಯ ಮಂತ್ರಿಣೀ ಚಾಽಪಿ ವಿದಿತ್ವಾ ರವ್ಯನುಗ್ರಹಂ ।೬೬॥

ಶಕ್ತಿಗಳೆಲ್ಲರೂ ರಾಕ್ಷಸರ ನೋಟದಿಂದ ಮಹತ್ತಾದ ಬಾಯಾರಿಕೆಯಿಂದ ಕೂಡಿದವರಾಗಿ ಎಲ್ಲಾ ಅವಯವಗಳಲ್ಲಿಯೂ ಸಂತಾಪದಿಂದಲೂ ಕೂಡಿದವರಾದರು. ಈರೀತಿಯಲ್ಲಿ ಅವರು ಬಹಳ ಸಂತಾಪ ಮತ್ತು ಬಾಯಾರಿಕೆಗಳಿಂದ ಸುಟ್ಟುಹೋಗುತ್ತಿದ್ದರು. ॥೬೩॥

ಯುದ್ಧಭೂಮಿಯಲ್ಲಿ ಶಕ್ತಿಗಳ ಗುಂಪಿನವರು ಗುಂಪುಗುಂಪಾಗಿ ನಾಶವನ್ನು ಹೊಂದಿದರು. ಆಗ ಮಂತ್ರಿಣೀದೇವೀ ಮತ್ತು ದಂಡಿನೀದೇವಿಯರನ್ನು ಬಿಟ್ಟು ಇತರ ಶಕ್ತಿಗಳ ಗುಂಪಿನವರೆಲ್ಲರೂ ಹೀಗೆ ಸುಟ್ಟುಹೋಗುತ್ತಿದ್ದರು! ॥೬೪॥

ತಾಪದ ನಿಮಿತ್ತವಾಗಿ ಆನೆ, ಕುದುರೆ ವಾಹನಗಳ ಸಮೇತನಾಗಿ ಸಮಸ್ತ ಶಕ್ತಿಗಳ ಗುಂಪೂ ಸುಟ್ಟುಹೋಗುತ್ತಿತ್ತು. ಆದರೆ ಆ ರಾಕ್ಷಸರ ಕಣ್ಣುಗಳ ವೀರ್ಯದಿಂದ ಉಂಟಾದ ತಾಪದಾಹಗಳು, ಮಂತ್ರಿಣೀ ಮತ್ತು ದಂಡಿನೀದೇವಿಯರಿಗೆ ಮಾತ್ರ ಅವರ ಮಾಹಾತ್ಮ್ಯೆಯಿಂದ ತಗುಲುತ್ತಿರಲಿಲ್ಲ. ॥೬೫॥

ಇದರ ರಹಸ್ಯವನ್ನು ತಿಳಿದು ದಂಡನಾಯಕಿಯರು ಮಂತ್ರಿಣೀದೇವಿಗೆ ಬಿನ್ನೈಸಿದರು. ಮಂತ್ರಿಣೀದೇವಿಯೂ ಕೂಡ ರಾಕ್ಷಸರ ಆ ಶಕ್ತಿಯು ಸೂರ್ಯನಿಂದ ಬಂದ ಅನುಗ್ರಹವೆಂಬ ವಿಷಯವನ್ನು ವಿಚಾರಮಾಡಿ ತಿಳಿದಳು. ॥೬೬॥

ಶ್ರೀದೇವೀ ಚಕ್ರ ರಕ್ಷಾರ್ಥಂ ಯಾ ನಾಽಽಯಾತಾ ಮಹಾಯುಧಿ ।
ಸಸ್ಮಾರ ಮನಸಾ ಶಕ್ತಿಂ ತಿರಸ್ಕರಣಿಕಾಽಭಿಧಾಂ ॥೬೭॥

ಸಾ ಪ್ರಾಪ್ತಾ ಸ್ಮೃತಿಮಾತ್ರೇಣ ಕಾಲಾಂಜನ ನಿಭೇ ಹಯೇ ।
ಸಮಾರೂಢಾ ನೀಲವಪು ರ್ನೀಲಾಽಂಶುಕ ವಿಭೂಷಣಾ ॥೬೮॥

ನೀಲಮಾಲ್ಯಧರಾ ಗಾಢ ಧ್ವಾಂತಸಂತಮಸಾವೃತಾ ।
ಸ್ವಸಮಾಕಾರಶಕ್ತೀನಾಂ ಕೋಟಿಭಿಃ ಪರಿವಾರಿತಾ ॥೬೯॥

ನ ತದಿಚ್ಛಾಂ ವಿನಾ ಕೋಽಪಿ ಪಶ್ಯೇತ್ತಾಂ ಜಗತೀತಲೇ ।
ಆಗತ್ಯ ಮಂತ್ರಿಣೀಂ ನತ್ವಾ ಪ್ರಾಹ ಕಿಂ ಸಂಸ್ಮೃತೇತಿ ವೈ ॥೭೦॥

ಮಂತ್ರಿಣೀದೇವಿಯು ಶ್ರೀದೇವಿಯ ಚಕ್ರದ ರಕ್ಷಣೆಗಾಗಿ ಮಹಾಯುದ್ಧ ಕಾಲದಲ್ಲಿ ಬಾರದೇ ಇರುವ ತಿರಸ್ಕರಣಿಕಾ ಎಂಬ ಹೆಸರಿನ ಶಕ್ತಿಯನ್ನು ಮನಸ್ಸಿನಲ್ಲಿಯೇ ಸ್ಮರಿಸಿದಳು. ॥೬೭॥

ಮಂತ್ರಿಣೀದೇವಿಯು ಸ್ಮರಿಸಿದ ಕೂಡಲೇ ಅಚ್ಚಕಪ್ಪಾದ ಕಾಡಿಗೆಯಂತಿರುವ ಕುದುರೆಯ ಮೇಲೆ ಕುಳಿತುಕೊಂಡು ಕಪ್ಪಾದ ಶರೀರವನ್ನು ಧರಿಸಿರುವ ಕಪ್ಪಾದ ರೇಷ್ಮೆವಸ್ತ್ರ ಮತ್ತು ಅಲಂಕಾರಗಳನ್ನು ಧರಿಸಿರುವ ಆ ಶಕ್ತಿದೇವಿಯು ಅಲ್ಲಿ ಕೂಡಲೇ ಕಾಣಿಸಿಕೊಂಡಳು. ॥೬೮॥

ಆ ಶಕ್ತಿಯು ಕಪ್ಪಾದ ಮಾಲ್ಯಗಳನ್ನು ಧರಿಸಿದವಳಾಗಿಯೂ, ಕಗ್ಗತ್ತಲೆಯಿಂದ ಪೂರ್ಣವಾಗಿ ಮುಚ್ಚಿಹೋದವಳಾಗಿಯೂ, ತನಗೆ ಸಮಾನವಾದ ಆಕಾರವುಳ್ಳ ಕೋಟ್ಯಾಂತರ ಶಕ್ತಿಗಳಿಂದ ಸುತ್ತಲೂ ಕೂಡಿದವಳಾಗಿಯೂ ಬಂದಿದ್ದಳು. ॥೬೯॥

ಭೂಮಿಯಲ್ಲಿ ಯಾವನೂ ಆಕೆಯ ಇಚ್ಛೆಯಿಲ್ಲದೆ ಆ ಶಕ್ತಿಯನ್ನು ನೋಡಲಾರನು. ಇಂತಹ ಶಕ್ತಿಯು ಬಂದು ಮಂತ್ರಿಣೀದೇವಿಯನ್ನು ನಮಸ್ಕರಿಸಿ, ತಾವು ಏಕೆ ನನ್ನನ್ನು ಸ್ಮರಿಸಿದಿರಿ? ಎಂದು ಕೇಳಿದಳು. ॥೭೦॥

ಪೃಷ್ಟ್ವೈವಮುಕ್ತ್ವಾ ದೈತ್ಯಾನಾಂ ಬಲಂ ತನ್ನಾಶಯನಾಯ ತಾಂ ।
ವಿಸರ್ಜಯಾಮಾಸ ಪುನಃ ಶಕ್ತೀನಾಂ ಶಾಂತಿಹೇತವೇ ॥೨೧॥

ಅನ್ವೃತೇಶೀಂ ಸುಧಾಸಿಂಧುಮಾಜ್ಞಾಪಯದನುದ್ರುತಂ ।
ಆಜ್ಞಪ್ತೈವಂ ಸಮಾರುಹ್ಯಾಽದೃಶ್ಯವಾಹನಮುತ್ತಮಂ ॥೨೨॥

ತಿರಸ್ಕೃತಿರದೃಶ್ಯಾಂಗೀ ತಾದೃಕ್ಶಕ್ತಿಗಣಾಽಽವೃತಾ ।
ನಾಶಯಾಮಾಸ ದೈತ್ಯಾನಾಂ ಸೇನಾಂ ಶಸ್ತ್ರನಿಪಾತನೈಃ ॥೨೩॥

ತಿರಸ್ಕೃತಿಃ ಸಸರ್ಜಾಽಸ್ತ್ರಮಂಧಾಽಽಖ್ಯಂ ತೇನ ತೇಽಸುರಾಃ ।
ಅಂಧೀಭೂತಾಃ ಕಿಂಚಿದಪಿ ದದೃಶುರ್ನೋ ಕಥಂ ಚ ನ ॥೨೪॥

ತಥಾಽಪಿ ಯುಧ್ಯಮಾನಾಂಸ್ತಾನ್ ಬಲವೀರ್ಯೇಣ ಸಂಭೃತಾನ್ ।
ಚಿರಂ ಯುದ್ಧೈರ್ವಿನಿರ್ಜಿತ್ಯ ತಿರಸ್ಕರಣಿಕಾ ತತಃ ॥೨೫॥

ಹೀಗೆ ಕೇಳಿದ ಆ ಶಕ್ತಿಗೆ ಮಂತ್ರಿಣೀದೇವಿಯು ವಿಷಯವನ್ನು ತಿಳಿಸಿ ರಾಕ್ಷಸರ ನಾಶಕ್ಕಾಗಿ ಅವಳನ್ನು ಕಳುಹಿಸಿದಳು. ಅಲ್ಲದೆ ಮಂತ್ರಿಣಿಯು ಶಕ್ತಿಗಳ ತೃಪ್ತಿಶಾಂತಿಗಳಿಗಾಗಿ ತಕ್ಕ ವ್ಯವಸ್ಥೆಯನ್ನೂ ಮಾಡಿದಳು. ॥೨೧॥

ಅಲ್ಲದೇ ಮಂತ್ರಿಣಿಯು ಅಮೃತಸಾಗರದಂತಿರುವ ಅನ್ವೃತೇಶಿಯನ್ನು ಆ ಶಕ್ತಿಯನ್ನು ಶೀಘ್ರವಾಗಿ ಹಿಂಬಾಲಿಸಲು ಕಳುಹಿಸಿದಳು. ಈ ರೀತಿಯಾಗಿ ಮಂತ್ರಿಣಿಯ ಅಪ್ಪಣೆಯನ್ನು ಪಡೆದು ತಿರಸ್ಕರಣಿಕಾಶಕ್ತಿಯು ಶ್ರೇಷ್ಠವಾದ, ಕಣ್ಣಿಗೆ ಕಾಣಿಸದಿರುವ, ವಾಹನವನ್ನೇರಿದಳು. ॥೨೨॥

ತಿರಸ್ಕರಿಣೀಶಕ್ತಿಯು ಕಣ್ಣಿಗೆ ಕಾಣಿಸದಿರುವ ಅವಯವಗಳುಳ್ಳವಳಾಗಿ ಅಂಥಾ ಶಕ್ತಿಗಳ ಗುಂಪಿನವರಿಂದಲೇ ಕೂಡಿದವಳಾಗಿ ರಾಕ್ಷಸರ ಸೈನ್ಯವನ್ನು ಶಸ್ತ್ರಗಳನ್ನು ಪ್ರಯೋಗಿಸುವುದರ ಮೂಲಕ ನಾಶಮಾಡುತ್ತಿದ್ದಳು. ॥೨೩॥

ತಿರಸ್ಕರಿಣೀ ಶಕ್ತಿಯು ಅಂಧ ಎಂಬ ಹೆಸರಿನ ಅಸ್ತ್ರವನ್ನು ಸೃಷ್ಟಿಮಾಡಿದಳು. ಆದರಿಂದ ಆ ರಾಕ್ಷಸರೆಲ್ಲರೂ ಕುರುಡರಂತಾಗಿ ಯಾವ ವಿಧದಲ್ಲಿಯೂ ಯಾವುದನ್ನೂ ನೋಡಲಾರದೇ ಹೋದರು. ॥೨೪॥

ಹಾಗಾದಾಗ್ಯೂ ಅತ್ಯಂತ ಪರಾಕ್ರಮದಿಂದ ಕೂಡಿ ಯುದ್ಧಮಾಡುತ್ತಿರುವ ರಾಕ್ಷಸರ ಜೊತೆಯಲ್ಲಿ ತಿರಸ್ಕರಣಿಕಾ ಶಕ್ತಿಯು ಬಹಳ ಕಾಲಯುದ್ಧವನ್ನು ಮಾಡಿ ಸೋಲಿಸುತ್ತಿದ್ದಳು. ॥೨೫॥

ಖಡ್ಗೇನ ಯುಗಪತ್ತೇಷಾ ಮಾಹರನ್ಮಸ್ತಕಂ ರುಷಾ ।
ಹತೇ ಬಲಾಹಕಮುಖೇ ತಿರಸ್ಕರಣಿಕಾಂ ಸುರಾಃ ॥೭೬॥

ಅವರ್ಷನ್ ದಿವ್ಯಕುಸುಮೈ ರ್ವಾದಯಂತ್ಯಶ್ಚ ದುಂದುಭೀನ್ ।
ಜಹೃಷುರ್ದೇವತಾಮುಖ್ಯಾ ಲೋಕಕಂಟಕನಾಶನಾತ್ ॥೭೭॥

ಅಮೃತೇಶ್ಯ ಮೃತಾಽಽಸಾರೈಃ ಮೃತಾಃ ಶಕ್ತೀರಜೀವಯತ್ ।
ಏವಂ ತಿರಸ್ಕೃತಿರ್ಜಿತ್ವಾ ದೈತ್ಯಾಂ ಸ್ತಪನಲೋಚನಾತ್ ॥೭೮॥

ಮಂತ್ರಿಣೀಂ ದಂಡಿನೀಂ ನತ್ವಾ ಪ್ರೋವಾಚ ವಿಜಯಂ ಸ್ವಕಂ ।
ಆಲಿಂಗ್ಯ ತೇ ಕೃತಂ ಕೃತ್ಯ ಮಸಾಧ್ಯಂ ಸರ್ವಥಾ ತ್ವಯಾ ॥೭೯॥

ಕೊನೆಗೆ ಆ ಶಕ್ತಿಯು ಏಕಕಾಲದಲ್ಲಿ ಕೋಪದಿಂದ ತನ್ನ ಕತ್ತಿಯಿಂದ ಅವರ ತಲೆಗಳನ್ನು ಕತ್ತರಿಸಿ ಕೊಂದಳು. ಈರೀತಿಯಲ್ಲಿ ವಲಾಹಕ ಮೊದಲಾದವರ ನಾಶವೂ ಆಗಲಾಗಿ, ದೇವತೆಗಳು ಆ ತಿರಸ್ಕರಣಿಕಾ ಶಕ್ತಿಯನ್ನು ಬಹಳವಾಗಿ ಹೊಗಳಿ ಜಯಕಾರವನ್ನು ಮಾಡಿದರು. ॥೭೬॥

ದೇವತೆಗಳು ತಿರಸ್ಕರಣೀ ಶಕ್ತಿಗೆ ಸ್ವರ್ಗೀಯವಾದ ಹುವ್ವಿನ ಮಳೆಯನ್ನು ಕರೆದು ದುಂದುಭಿ ಮೊದಲಾದ ವಾದ್ಯಗಳನ್ನು ಬಾರಿಸಿದರು. ಅಲ್ಲದೇ ದೇವತೆಗಳೇ ಮೊದಲಾದವರು ಲೋಕಕ್ಕೆ ಕಂಟಕರಾದ ರಾಕ್ಷಸರ ನಾಶದಿಂದ ಬಹಳವಾಗಿ ಸಂತೋಷಪಟ್ಟರು. ॥೭೭॥

ಅನಂತರ ಅಮೃತೇಶೀ ಶಕ್ತಿಯು ಸತ್ತುಹೋಗಿರುವ ಶಕ್ತಿಗಳನ್ನು ತನ್ನ ಅಮೃತದ ಧಾರೆಯಿಂದ ಬದುಕಿಸಿದಳು. ಈರೀತಿಯಾಗಿ ಸುಡುತ್ತಿರುವ ಕಣ್ಣುಗಳುಳ್ಳ ರಾಕ್ಷಸನನ್ನು ತಿರಸ್ಕರಣೀ ಶಕ್ತಿಯು ಜಯಿಸಿದಳು. ॥೭೮॥

ತರುವಾಯ ಆ ಶಕ್ತಿಯು ಮಂತ್ರಿಣೀ ಮತ್ತು ದಂಡಿನೀ ದೇವಿಯರಿಗೆ ನಮಸ್ಕರಿಸಿ ತಮಗಾದ ವಿಜಯವನ್ನು ಹೇಳಿದಳು. ಅವರು ಅವಳನ್ನು ಆಲಿಂಗಿಸಿ, ನಿಜವಾಗಿಯೂ ಸರ್ವಥಾ ಅಸಾಧ್ಯವಾದ ಕಾರ್ಯವನ್ನೇ ನೀನು ಮಾಡಿದ್ದೀಯೆ! ಎಂಬುದಾಗಿ ಹೇಳಿದರು. ॥೭೯॥

ಇತ್ಯೂಚತುಸ್ತುಷ್ಟುವತು ರ್ಮಂತ್ರಿಣೀ ದಂಡನಾಯಿಕೇ ।
ಏವಂ ಬಲಾಹಕಮುಖೇ ಹತೇ ಸೂರ್ಯೋಽಸ್ತಮಾಯಯೌ ॥೮೦॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಲಲಿತಾಮಾಹಾತ್ಮ್ಯೇ
ತಿರಸ್ಕರಣಿಕಾಯುದ್ಧೇ ವಲಾಹಕಾದಿ ವಧೇ
ಅಷ್ಟಷಷ್ಟಿತಮೋಽಧ್ಯಾಯಃ

ಈರೀತಿಯಲ್ಲಿ ಹೇಳಿ ಮಂತ್ರಿಣೀ ಮತ್ತು ದಂಡನಾಯಕಿಯರು ಆ ಶಕ್ತಿಯನ್ನು ಪ್ರಶಂಸಿಸಿದರು. ಹೀಗೆ ವಲಾಹಕ ಮೊದಲಾದ ಕ್ರೂರರಾಕ್ಷಸರುಗಳು ನಾಶವಾಗಲು ಸೂರ್ಯನು ಮುಳುಗಿದನು. ॥೮೦॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದ ಶ್ರೀಲಲಿತಾಮಾಹಾತ್ಮ್ಯೆಯಲ್ಲಿ ತಿರಸ್ಕರಣಿಕಾಶಕ್ತಿಯ
ಯುದ್ಧದಲ್ಲಿ ವಲಾಹಕ ಮುಂತಾದ ರಾಕ್ಷಸರ ನಾಶ ಎಂಬ
ಅರವತ್ತೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಏಕೋನಸಪ್ತತಿತಮೋಽಧ್ಯಾಯಃ ||

ಅರವತ್ತೊಂಬತ್ತನೆಯ ಅಧ್ಯಾಯವು

ಏವಂ ತಪನ ನೇತ್ರೇಷು ತಿರಸ್ಕೃತ್ಯಾಽಽಹತೇಷ್ವಪಿ ।
ತ್ರಿಪುರಾ ಮಾಯಯಾ ಮೂಢಾಃ ಸಂಕಲ್ಪಜಯಹರ್ಷಿತಾಃ ॥೧॥

ವಿಶುಕ್ರ ಕುಟಿಲಾಕ್ಷಾದ್ಯಾ ವಿಷಂಗಮಸುರೈರ್ವೃತಂ ।
ಪಾರ್ಷ್ಣಿಗ್ರಹವಿಧಾನಾಯ ಪ್ರೇಷಯಿತ್ವಾ ವಿಧಾನತಃ ॥೨॥

ಯುಯುಧುಃ ಶಕ್ತಿಸೇನಾಭಿರಾಹೃತಾಽತ್ಯಂತ ವಿಕ್ರಮಾಃ ।
ವಿಶುಕ್ರೋ ಮಂತ್ರಿಣೀಂ ದಂಡರಾಜ್ಞೀಂ ಸೇನಾಪತಿಃ ಸ್ವಯಂ ॥೩॥

ಬಾಲಾಂ ಭಂಡಸುತಶ್ಚಾಽಪಿ ಮಂತ್ರಿಣಶ್ಚ ತಿರಸ್ಕೃತಿಂ ।
ಉಲೂಕ ಜಿತ್ಪ್ರಭೃತಯೋ ಗಜವಾಜಿವಹೇ ತಥಾ ॥೪॥

ಈರೀತಿಯಾಗಿ ಸೂರ್ಯನ ದಾಹಶಕ್ತಿಯ ಅಂಶಗಳಿಂದಲೇ ಕೂಡಿರುವ ಕಣ್ಣುಗಳುಳ್ಳ ವಲಾಹಕ ಮುಂತಾದ ರಾಕ್ಷಸರುಗಳನ್ನು ತಿರಸ್ಕರಣೀದೇವಿಯು ಕೊಂದಿದ್ದಾಗ್ಯೂ ವಿಶುಕ್ರನೇ ಮೊದಲಾದ ರಾಕ್ಷಸರು ತ್ರಿಪುರಾದೇವಿಯ ಮಾಯೆಯಿಂದ ಮೂಢರಾಗಿ ಸಂಕಲ್ಪಮಾತ್ರದಿಂದಲೇ ಜಯವನ್ನು ಊಹಿಸಿಕೊಂಡು ಸಂತೋಷಪಡುತ್ತಿದ್ದರು. ||೧||

ವಿಶುಕ್ರ ಕುಟಿಲಾಕ್ಷ ಮುಂತಾದ ನಾಯಕರು ರಾಕ್ಷಸರಿಂದ ಕೂಡಿರುವ ವಿಷಂಗರಾಕ್ಷಸನಿಗೆ ಬೆಂಬಲವಾಗಿ ಜಯಕ್ಕೆ ನೆರವಾಗಲು ಕಳುಹಿಸಿ ತಾವು ಯುದ್ಧದಲ್ಲಿ ಗೆಲ್ಲಲು ಬಹಳ ಪ್ರಯತ್ನಿಸಿದರು. ||೨||

ರಾಕ್ಷಸರು ಬಹಳ ಪರಾಕ್ರಮವನ್ನು ತೋರಿಸುತ್ತಾ ಶಕ್ತಿ ಸೈನ್ಯಗಳೊಂದಿಗೆ ಯುದ್ಧವನ್ನು ಮಾಡಿದರು. ವಿಶುಕ್ರರಾಕ್ಷಸನು ಮಂತ್ರಿಣೀದೇವಿಯ ಜೊತೆಯ

ದೈತ್ಯಸೇನಾಃ ಶಕ್ತಿಸೇನಾಂ ಯೋಧಯಾಮಾಸ ಸಂಗತಾಃ ।
ಅಸ್ತಂ ಯಾತೇ ಸವಿತರಿ ಸರ್ವತಸ್ತಮಸಾಽಽವೃತೇ ॥೫॥

ಪ್ರವೃತ್ತಃ ಸಮರೋಽತ್ಯಂತ ದಾರುಣಃ ಶಕ್ತಿದೈತ್ಯಯೋಃ ।
ಮುಹೂರ್ತಮಾತ್ರಂ ಸಂಧ್ಯಾ(ಯಾಃ) ಪ್ರಕಾಶೈರಭವದ್ರಣಃ ॥೬॥

ತತೋ ಗಾಢೇಽಂಧತಮಸಿ ಪ್ರವೃತ್ತೇ ಸರ್ವತೋ ದಿಶಂ ।
ಅಭವದ್ದಾರುಣಂ ಯುದ್ಧಂ ಶಕ್ತಿದಾನವಸೈನ್ಯಯೋಃ ॥೭॥

ತಾರಾಜ್ಯೋತಿಃ ಸಮೂಹೇನ ಶಬ್ದೇನ ಚ ಪರಸ್ಪರಂ ।
ಯುಯುಧುಃ ಶಸ್ತ್ರಜಾಲೈಸ್ತೇ ಶಕ್ತಿಭಿರ್ದೈತ್ಯಪುಂಗವಾಃ ॥೮॥

ಲ್ಲಿಯೂ, ಕುಟಿಲಾಕ್ಷಸೇನಾಪತಿಯು ತಾನಾಗಿಯೇ ದಂಡನಾಯಕಿಯೊಡನೆಯೂ, ಯುದ್ಧವನ್ನು ಮಾಡಲು ಹೊರಟು ಬಂದರು. ॥೩॥

ಭಂಡರಾಕ್ಷಸನ ಮಗನು ಬಾಲಾದೇವಿಯ ಜೊತೆಯಲ್ಲಿಯೂ, ಮಂತ್ರಿಗಳು ತಿರಸ್ಕರಿಣೀ ಶಕ್ತಿಯೊಂದಿಗೂ, ಉಲೂಕಜಿತ್ ಮುಂತಾದ ರಾಕ್ಷಸರು ಸಂಪನ್ನಾಥಾ ಮತ್ತು ಅಶ್ವನಾಥಾ ಶಕ್ತಿಯರೊಂದಿಗೂ ಯುದ್ಧವನ್ನು ಮಾಡಲು ಸಿದ್ಧರಾದರು. ॥೪॥

ರಾಕ್ಷಸಸೈನ್ಯಗಳು ಶಕ್ತಿಗಳ ಸೈನ್ಯಗಳ ಜೊತೆಯಲ್ಲಿ ಸೇರಿದವರಾಗಿ ಯುದ್ಧ ಮಾಡಲು ಹೀಗೆ ಪ್ರಾರಂಭಿಸಿದರು. ಅಷ್ಟು ಹೊತ್ತಿಗೆ ಸೂರ್ಯನು ಮುಳುಗಲು ಎಲ್ಲಾ ಕಡೆಯಲ್ಲಿಯೂ ಕತ್ತಲೆಯು ಆವರಿಸಿತು. ॥೫॥

ಆಗ ಶಕ್ತಿಗಳ ಗುಂಪಿಗೂ ರಾಕ್ಷಸರಿಗೂ ಅತ್ಯಂತ ಭಯಂಕರವಾದ ಯುದ್ಧವು ಸಂಭವಿಸಿತು. ಸಾಯಂಕಾಲದ ಸಂಧ್ಯಾರಾಗದ ಪ್ರಕಾಶದಲ್ಲಿ ಒಂದು ಮುಹೂರ್ತಕಾಲ ಮಾತ್ರ ಯುದ್ಧವು ಮುಂದುವರಿಯಿತು. ॥೬॥

ಅನಂತರ ಗಾಢಾಂಧಕಾರವು ಎಲ್ಲಾ ದಿಕ್ಕುಗಳನ್ನೂ ವ್ಯಾಪಿಸಿರಲು ಶಕ್ತಿಗಳು ಮತ್ತು ರಾಕ್ಷಸಸೈನ್ಯಗಳಿಗೆ ಭಯಂಕರವಾದ ಯುದ್ಧವು ನಡೆಯಿತು. ॥೭॥

ರಾಕ್ಷಸಶ್ರೇಷ್ಠರು ನಕ್ಷತ್ರಗಳ ಬೆಳಕಿನಲ್ಲಿ ಭಯಂಕರವಾದ ಶಬ್ದಗಳನ್ನು ಪರಸ್ಪರವಾಗಿ ಮಾಡುತ್ತಾ ಶಸ್ತ್ರಸಮೂಹಗಳಿಂದ ಶಕ್ತಿಗಳೊಂದಿಗೆ ಯುದ್ಧವನ್ನು ಮಾಡಿದರು. ॥೮॥

ಅಥಾತಿಸಂಮರ್ದವಶಾತ್ ಸೇನಯೋಃ ರಜ ಉತ್ಥಿತಂ ।
ಆಚ್ಛಾದಯನ್ನಭೋಭಾಗಂ ತಾರಕಾಗಣಸಂವೃತಂ ॥೯॥

ಅಂಧಕಾರ ಸಮಾವಿಷ್ಟಾ ಭೂಯೋರೋಷಾಽಂಧತಾಂ ಗತಾಃ ।
ಯುಯುಧುಃ ಶಕ್ತಿ ದೈತ್ಯಾನಾಂ ಗಣಾಶ್ಚಾಽಕ್ರಮಯೋಗತಃ ॥೧೦॥

ಕೇಚಿತ್ತತ್ರಾಽಽಹ್ವಯಾಂ ಚಕ್ರು ರನ್ಯೇ ತಾನನುಸಂಯಯುಃ ।
ಶಸ್ತ್ರಾಣ್ಯನ್ಯೇಷು ಯುಜ್ಯಂತಿ ತಾನ್ಯನ್ಯಾನ್ ಘಾತಯಂತಿ ಹಿ ॥೧೧॥

ಶಬ್ದವೇಧಮಹಾಯುದ್ಧ ಮಭವದ್ಭೃಶದಾರುಣಂ ।
ತತ್ರದೈತ್ಯೈರ್ಹತಾ ದೈತ್ಯಾಃ ಶಕ್ತಿಭಿಃ ಶಕ್ತಯಸ್ತಥಾ ॥೧೨॥

ಏವಮತ್ಯಂತಭೀಭತ್ಸಂ ಯುದ್ಧಮಾಕ್ರಂದಭೀಷಣಂ ।
ಕೇಚಿಚ್ಛಸ್ತ್ರೈರ್ವಿನಿಹತಾಃ ಪರೇ ರಥವಿಘರ್ಷಿತಾಃ ॥೧೩॥

ಅನಂತರ ಎರಡು ಸೈನ್ಯಗಳ ಪರಸ್ಪರ ಘರ್ಷಣೆಯಿಂದ ಹೆಚ್ಚಾಗಿ ಎದ್ದ ಧೂಳಿನ ರಾಶಿಯು ನಕ್ಷತ್ರಗಳ ಗುಂಪಿನಿಂದ ಕೂಡಿರುವ ಆಕಾಶದ ಪ್ರದೇಶದ ಎಲ್ಲಾ ಭಾಗಗಳನ್ನೂ ಮುಚ್ಚಿತು. ॥೯॥

ಶಕ್ತಿಗಳ ಮತ್ತು ರಾಕ್ಷಸರ ಗುಂಪಿನವರು ಪರಸ್ಪರವಾಗಿ ಕೋಪದಿಂದ ಅಂಧರಾಗಿ ಆಕ್ರಮಿಸಿಕೊಳ್ಳಬೇಕೆಂಬ ಹಠದಿಂದ ಕತ್ತಲೆಯು ಎಲ್ಲಾ ಕಡೆಯಲ್ಲಿಯೂ ತುಂಬಿದ್ದರೂ ಲೆಕ್ಕಮಾಡದೇ ವಿಶೇಷವಾಗಿ ಕಾದಾಡಿದರು. ॥೧೦॥

ಕೆಲವರು ಅನ್ಯಶತ್ರುಗಳನ್ನು ನಿಕೃಷ್ಟವಾಗಿ ಕರೆಯುತ್ತಿದ್ದರು. ಕೆಲವರು ತಮ್ಮ ಶತ್ರುಗಳನ್ನು ಅಟ್ಟಿಕೊಂಡು ಹೋಗುತ್ತಿದ್ದರು. ಇನ್ನು ಕೆಲವರು ತಮ್ಮ ಶಸ್ತ್ರಗಳನ್ನು ವೈರಿಗಳ ಮೇಲೆ ಎಸೆಯುತ್ತಿದ್ದರು. ಅದನ್ನು ಇತರರು ನಾಶಪಡಿಸುತ್ತಿದ್ದರು. ॥೧೧॥

ಶಬ್ದದಿಂದಲೇ ಗುರುತಿಸಿ ಹೊಡೆಯುವ ಮಹಾಯುದ್ಧವು ಬಹಳ ಭಯಂಕರವಾಗಿ ನಡೆಯಿತು. ಅಲ್ಲಿ ರಾಕ್ಷಸರೇ ರಾಕ್ಷಸರುಗಳನ್ನೂ, ಶಕ್ತಿಗಳೇ ಶಕ್ತಿಗಳನ್ನೂ, ಗುರಿತಪ್ಪಿ ಕಾಣದೆ ಕೊಲ್ಲುತ್ತಿದ್ದರು. ॥೧೨॥

ಈರೀತಿಯಾಗಿ ಅತ್ಯಂತ ಜುಗುಪ್ಸೆಗೆ ಯೋಗ್ಯವಾದ ಪರಸ್ಪರ ಅಳುವಿಕೆಯಿಂದ ಕೂಡಿ ಬಹಳಭಯಂಕರವಾದ ಯುದ್ಧವು ನಡೆಯುತ್ತಲಿತ್ತು. ಕೆಲವರು ಶಸ್ತ್ರಗಳಿಗೆ

ಅಶ್ವೈರಾಸ್ಫಾಲಿತಾಶ್ಚಾಽನ್ಯೇ ಗಜಾಕ್ರಾನ್ತೈಃ ಸುಪೇಷಿತಾಃ ।
ಏವಂ ಮಹತ್ತರೇ ತತ್ರ ಸಂಮರ್ದೇ ಸತಿ ವೈಶಸೇ ॥೧೪॥

ನ ತೇಽಪಿ ಸಂವಿದುಃ ಸ್ವೀಯಾಂ ತಥಾ ಸೇನಾಂ ಪರಾಮಪಿ ।
ಅಂತಂ ಮಧ್ಯಮಥಾಽಽದಿಂ ವಾ ಸೇನಾಯೋಃ ಕೇಽಪಿ ನೋ ವಿದುಃ॥೧೫॥

ನಿಶಾಮ್ಯೈತನ್ಮಂತ್ರನಾಥಾ ಮತ್ವಾ ತಂ ವಿಷಮಂ ರಣಂ ।
ಜ್ವಾಲಾಮುಖೀಂ ಮಹಾದೇವೀಂ ಸಸ್ಮಾರ ತ್ರಿಪುರಾಂಽಶಜಾಂ ॥೧೬॥

ಸ್ಮೃತಮಾತ್ರೈವ ಸಾ ದೇವೀ ಪ್ರಾದುರಾಸೀದ್ರಣಾಽಜಿರೇ ।
ಜ್ವಲತ್ಪರ್ವತ ಸಂಕಾಶಾ ಜ್ವಾಲಾವ್ಯಾಪ್ತದಿಗಂತರಾ ॥೧೭॥

ಸಿಕ್ಕಿ ಕೊಲೆಯಾದರು. ಮತ್ತೆ ಕೆಲವರು ರಥಗಳಿಗೆ ಸಿಕ್ಕಿಕೊಂಡು ನುಚ್ಚು ನೂರಾದರು. ॥೧೩॥

ಕೆಲವರು ಕುದುರೆಗಳ ತುಳಿತಕ್ಕೆ ಸಿಕ್ಕಿ ಸತ್ತರು. ಮತ್ತೆ ಕೆಲವರು ಆನೆಗಳ ಆಕ್ರಮಣಕ್ಕೆ ಸಿಕ್ಕಿ ಅರೆದುಹೋದರು. ಈರೀತಿಯಾಗಿ ಬಹಳ ಹಿಂಸಾದಾಯಕವಾದ ಮಹತ್ತರವಾದ ಘರ್ಷಣೆಯು ಎರಡು ಸೈನ್ಯಗಳಿಗೂ ಉಂಟಾಯಿತು. ॥೧೪॥

ಅವರಲ್ಲಿ ತಮ್ಮ ಸೈನ್ಯವಾವುದು? ಅಥವಾ ಪರರ ಸೈನ್ಯವಾವುದು?. ಎಂಬುದನ್ನು ತಿಳಿಯಲೂ ಅವರು ಸಮರ್ಥರಾಗಿರಲಿಲ್ಲ. ಸೇನೆಯ ಕೊನೆ ಮಧ್ಯ ಅಥವಾ ಆದಿ ಇವಾವುದನ್ನೂ ತಿಳಿಯಲು ಯಾರೂ ಸಮರ್ಥರಾಗಲಿಲ್ಲ. ॥೧೫॥

ಮಂತ್ರಿಣೀದೇವಿಯು ಈ ವಿಷಯವನ್ನು ಕೇಳಿ ಯುದ್ಧವು ಬಹಳ ವಿಷಮ ಪರಿಸ್ಥಿತಿಗೆ ಬಂದಿದೆಯೆಂದು ತಿಳಿದು, ತತ್ಕ್ಷಣ ತ್ರಿಪುರಾದೇವಿಯ ಅಂಶದಿವಲೇ ಹುಟ್ಟಿದ ಜ್ವಾಲಾಮುಖೀದೇವಿಯನ್ನು ಸ್ಮರಿಸಿದಳು. ॥೧೬॥

ಜ್ವಾಲಾಮುಖೀದೇವಿಯನ್ನು ಸ್ಮರಿಸಿದ ಕೂಡಲೆ, ಆ ದೇವಿಯು ಯುದ್ಧಭೂಮಿಗೆ ಬಂದಳು. ಅವಳು ಜ್ವಲಿಸುವ ಪರ್ವತಕ್ಕೆ ಸಮಾನಳಾಗಿಯೂ, ದಿಕ್ಕುಗಳ ಪ್ರದೇಶವನ್ನು ಜ್ವಾಲೆಗಳಿಂದ ವ್ಯಾಪಿಸುವವಳಾಗಿಯೂ ಇದ್ದಳು. ॥೧೭॥

ತಸ್ಯಾ ಅಂಗಪ್ರಭಾಪೂರೈರ್ನಾಶಿತಂ ನಿಖಿಲಂ ತಮಃ ।
ತದಾ ದೈತ್ಯಾಃ ಶಕ್ತಯೋಽಪಿ ಯುಯುಧುಃ ಕ್ರಮಸಂಗತಾಃ ॥೧೮॥

ಏವಂ ಪುನಃ ಕ್ರಮಾದ್ಯುದ್ಧೇ ಪ್ರವೃತ್ತೇ ನಿಶಿ ಕುಂಭಜ ।
ಬಾಲಾ ಭಂಡಸುತೈರ್ಯುದ್ಧಂ ವಿಚಿತ್ರಮತನೋದ್ಭೃಶಂ ॥೧೯॥

ಚತುರ್ಬಾಹುಮುಖಾ ಭಂಡಸೂನವೋ ವಿಷ್ಣುವಿಕ್ರಮಾಃ ।
ತ್ರಿಂಶತ್ಸಂಖ್ಯಾ ಏಕಕಾಲಂ ಯುಯುಧುರ್ಬಾಲಯಾ ದೃಢಂ ॥೨೦॥

ರಥಾಽಽರೂಢಾ ವಿಚಿತ್ರೇಷೂನ್ ಕಿರಂತಃ ಸರ್ವತೋ ದಿಶಂ ।
ಬಾಲಾಂ ಸಮಾಚ್ಛದುಃ ಶಸ್ತ್ರೈ ರ್ದಿನೇಶಂ ಸ್ತು(ತು)ಹಿನೈರಿವ ॥೨೧॥

ಅಥ ಬಾಲಾಽಪಿ ಶಸ್ತ್ರೌಘಾ ನ್ನಿಜಶಸ್ತ್ರಸ್ಯ ತೇಜಸಾ ।
ನಾಶಯಾಮಾಸ ವೇಗೇನ ತಮಃ ಸೂರ್ಯೋದಯೋ ಯಥಾ ॥೨೨॥

ಆಕೆಯ ಅವಯವಗಳ ಕಾಂತಿಯು ಅಲ್ಲಿ ಎಲ್ಲಾ ಕಡೆಯಲ್ಲಿಯೂ ಹರಡಲು ಆಗ ಸಮಸ್ತವಾದ ಕತ್ತಲೆಯೂ ನಾಶವಾಯಿತು. ಆಗ ರಾಕ್ಷಸರೂ ಮತ್ತು ಶಕ್ತಿಗಳ ಗುಂಪಿನವರುಗಳೂ ಕೂಡ ಕ್ರಮವಾಗಿ ಸೇರಿಕೊಂಡು ಯುದ್ಧಭೂಮಿಯಲ್ಲಿ ಕಲೆಯ ಶಿಸ್ತಿನ ಯುದ್ಧವನ್ನು ಮಾಡಿದರು. ||೧೮||

ಎಲೈ ಆಗಸ್ತ್ಯನೇ, ಈ ರೀತಿಯಾಗಿ ಕ್ರಮವಾಗಿ ಪುನಃ ಯುದ್ಧವು ರಾತ್ರಿಯಲ್ಲಿ ಪ್ರಾರಂಭವಾಗಲು, ಕುಮಾರಿಯು ಭಂಡನ ಮಕ್ಕಳೊಂದಿಗೆ ಅನೇಕ ವಿಧವಾದ ಯುದ್ಧಗಳನ್ನು ಬಹಳ ವಿಧವಾಗಿ ಮಾಡಿದಳು. ||೧೯||

ನಾಲ್ಕು ತೋಳುಗಳು ಮತ್ತು ಮುಖಗಳುಳ್ಳ, ವಿಷ್ಣುವಿನಂತೆ ಪರಾಕ್ರಮಶಾಲಿಗಳಾದ, ಮೂವತ್ತು ಮಂದಿ ಭಂಡನ ಮಕ್ಕಳು ಏಕಕಾಲದಲ್ಲಿ ಕುಮಾರಿಯೊಂದಿಗೆ ಬಲವಾಗಿ ಯುದ್ಧಮಾಡಿದರು. ||೨೦||

ಆ ರಾಕ್ಷಸರು ರಥಗಳ ಮೇಲೆ ಕುಳಿತು ಎಲ್ಲಾ ಕಡೆಯಲ್ಲಿಯೂ ನಾನಾವಿಧವಾದ ಬಾಣಗಳನ್ನು ಎಸೆಯುತ್ತಾ, ಹಿಮವು ಸೂರ್ಯನನ್ನು ಮುಚ್ಚುವಂತೆ, ಕುಮಾರಿಯನ್ನು ಶಸ್ತ್ರಗಳಿಂದ ಮುಚ್ಚಿದರು. ||೨೧||

ಅನಂತರ ಕುಮಾರಿಯೂ ಕೂಡ ತನ್ನ ಶಸ್ತ್ರಗಳ ಶಕ್ತಿಯಿಂದ ರಾಕ್ಷಸರ ಸಮೂಹಗಳನ್ನು, ಸೂರ್ಯೋದಯವಾದ ಕೂಡಲೇ ಕತ್ತಲೆಯು ಹೇಗೆ ನಾಶವಾಗುವುದೋ ಹಾಗೆ, ಶೀಘ್ರವಾಗಿ ನಾಶಮಾಡಿದಳು. ||೨೨||

ತತೋಽತಿದ್ರುತಸಂಧಾನಾತ್ ಚತುರ್ಭಿರ್ನಿಶಿತೈಃ ಶರೈಃ ।
ಪ್ರತ್ಯೇಕಂ ಭಂಡತನುಜ ರಥಾಶ್ವಾನಕರೋನ್ಮೃತಾನ್ ॥೨೩॥

ರಥನೇತ್ರ್ಯಾಂಸ್ತಥೈಕೇನ ಧನೂಂಷ್ಯೇಕೇನ ಚಾಽಚ್ಛಿನತ್ ।
ತಥೈಕೇನ ಪುನಸ್ತೇಷಾಂ ಹೃದಿ ವಿವ್ಯಾಧ ಲೀಲಯಾ ॥೨೪॥

ಹತಾಽಶ್ವಾ ನಷ್ಟಶಸ್ತ್ರಾಸ್ತೇ ವಿದ್ಧಾ ಬಾಣೇನ ವಕ್ಷಸಿ ।
ಮೃತಪ್ರಾಯಾಃ ಸಮಭವನ್ ವ್ಯಥಯಾ ಗಾಢ ಮೂರ್ಚ್ಛಿತಾಃ ॥೨೫॥

ಉಲೂಕ ಜಿತ್ಪ್ರಭೃತಯೋ ಭಂಡಸ್ಯ ಭಗಿನೀಸುತಾಃ ।
ತೇ ಷಷ್ಠಿಸಂಖ್ಯಾ ಯುದ್ಧೇಷು ಭೀಮವೀರ್ಯಾಃ ಸುಯೋಧಿನಃ ॥೨೬॥

ತೈರ್ಯ್ಯಯೋಧ ಹಯಾರೂಢಾ ಸಂಪದ್ದೇವೀ ಚ ಸಾಯುಕೈಃ ।
ವಿಚಿತ್ರ ಯುದ್ಧಂ ತನ್ನಾತೇ ದ್ರುಷ್ಟೃವಿಸ್ಮಾಪನಂ ಪರಂ ॥೨೭॥

ಅನಂತರ ಬಹಳ ಶೀಘ್ರವಾಗಿ ನಾಲ್ಕು ತೀಕ್ಷ್ಣವಾದ ಬಾಣಗಳನ್ನು ಹೆದೆಗೇರಿಸಿ ವೇಗವಾಗಿ ಹೊಡೆದು ಕುಮಾರೀದೇವಿಯು ಭಂಡರಾಕ್ಷಸನ ಮಕ್ಕಳ ರಥಗಳನ್ನೂ ಕುದುರೆಗಳನ್ನೂ ಪ್ರತ್ಯೇಕವಾಗಿ ನಾಶಮಾಡಿದಳು. ॥೨೩॥

ಕುಮಾರಿಯು ಇದೇ ರೀತಿಯಲ್ಲಿ ಸಾರಥಿಗಳನ್ನೂ ಮತ್ತು ಭಂಡಕುಮಾರರ ಬಿಲ್ಲುಗಳನ್ನೂ ಒಂದೊಂದು ಬಾಣವನ್ನೂ ಪ್ರಯೋಗಿಸಿ ಕತ್ತರಿಸಿದಳು. ಹಾಗೆಯೇ ಇವಳು ರಾಕ್ಷಸನ ಕುಮಾರರ ಹೃದಯಕ್ಕೆ ಲೀಲೆಯಿಂದಲೇ ಒಂದು ತೀಕ್ಷ್ಣವಾದ ಬಾಣವನ್ನು ಹೊಡೆದಳು. ॥೨೪॥

ಆ ರಾಕ್ಷಸಕುಮಾರರ ಕುದುರೆಗಳೂ ಹಾಗೆಯೇ ಅವರ ಅಸ್ತ್ರಗಳೂ ನಾಶವಾಗಿ ಕುಮಾರಿಯ ಬಾಣದ ಪೆಟ್ಟು ಅವರ ವಕ್ಷಸ್ಥಳಕ್ಕೂ ಬಿದ್ದುದರಿಂದ ಬಹಳ ವ್ಯಥೆಯಿಂದ ಅವರು ಅತ್ಯಂತ ಮೂರ್ಛೆಗೊಳಗಾದರು. ॥೨೫॥

ಭಂಡರಾಕ್ಷಸನ ತಂಗಿಯ ಮಕ್ಕಳಾದ ಅರವತ್ತು ಮಂದಿ ಉಲೂಕಜಿತ್ ಮುಂತಾದವರು ಯುದ್ಧಗಳಲ್ಲಿ ಭಯಂಕರವಾದ ಪರಾಕ್ರಮವನ್ನು ತೋರಿಸುವವರಾಗಿಯೂ, ಮಹಾ ಯೋಧರಾಗಿಯೂ ಇದ್ದರು. ॥೨೬॥

ಸಂಪನ್ನಾಥಾದೇವಿಯು ಕುದುರೆಯ ಮೇಲೇರಿ ಅವರೊಂದಿಗೆ ಯುದ್ಧವನ್ನು ಮಾಡಿದಳು. ಸಂಪನ್ನಾಥಾ ದೇವಿಯೂ ಆ ಶಕ್ತಿಯರೂ ನೋಡುವವರಿಗೆ ಆಶ್ಚರ್ಯವನ್ನುಂಟುಮಾಡುವ ಶ್ರೇಷ್ಠವಾದ ಯುದ್ಧವನ್ನು ಮಾಡಿದರು. ॥೨೭॥

ಪೃಥಗ್ಯುದ್ಧಂ ಸಮುಭವತ್ತ್ರಿಂಶತ್ಸಂಖ್ಯೈರ್ದ್ವಿಧಾ ಸ್ಥಿತೈಃ ।
ಯುಧ್ವಾ ಚಿರಂ ಹಯಾರೂಢಾ ಬಧ್ವಾ ಪಾಶೇನ ತಾನ್ ಕ್ರಮಾತ್ ॥೨೮॥

ಚಿಚ್ಛೇದ ಸಿತಧಾರೇಣ ಶಿರಃ ಖಡ್ಗೇನ ರೋಷಿತಾ ।
ಸಂಪನ್ನಾಥಾಽಪಿ ತೈರ್ಯುದ್ಧ್ವಾ ಭೂಯೋ ಭಲ್ಲೇನ ತಾನ್ ಕ್ರಮಾತ್ ॥೨೯॥

ಹೃದಿ ವಿದ್ಧ್ವಾಽಂತಕಪುರಂ ಪ್ರೇಷಯಾಮಾಸ ಸತ್ವರಂ ।
ಉಗ್ರಕರ್ಮಪ್ರಭೃತಯೋ ಯುಯುಧುಸ್ತತ್ರ ಸಂಯುಗೇ ॥೩೦॥

ತಿರಸ್ಕರಣಿಕಾದೇವ್ಯಾ ಶಸ್ತ್ರೈರಸ್ತ್ರೈರನೇಕಶಃ ।
ಯುದ್ಧ್ವೈವಂ ಮಂತ್ರಿಭಿಃ ಸಾಽಪಿ ಕ್ರುದ್ಧಾ ಖಡ್ಗೇನ ಪಾತಯತ್ ॥೩೧॥

ಶಿರಃ ಕಾಯಾದುಗ್ರಕರ್ಮಮುಖಾನಾಮತಿವೇಗತಃ ।
ಯುಯೋಧ ಕುಟಿಲಾಕ್ಷೇಣ ದಂಡನಾಥಾ ರಥಸ್ಥಿತಾ ॥೩೨॥

ಸಂಪನ್ನಾಥಾದೇವಿಗೂ ಮತ್ತು ಇಬ್ಭಾಗವಾಗಿದ್ದ ಆ ಮುವ್ವತ್ತು ಮುವ್ವತ್ತು ಮಂದಿ ರಾಕ್ಷಸರಿಗೂ ಪ್ರತ್ಯೇಕವಾಗಿ ಯುದ್ಧವು ನಡೆಯಿತು. ಕುದುರೆಯ ಮೇಲೆ ಕುಳಿತಿದ್ದ ಸಂಪನ್ನಾಥಾ ಶಕ್ತಿಯು ಬಹಳ ಕಾಲ ಅವರೊಂದಿಗೆ ಯುದ್ಧಮಾಡಿ ಅವರನ್ನು ಕ್ರಮವಾಗಿ ತನ್ನ ಪಾಶದಿಂದ ಬಹಳ ಬಿಗಿಯಾಗಿ ಕಟ್ಟಿದಳು. ॥೨೮॥

ಸಂಪನ್ನಾಥಾಶಕ್ತಿಯು ಕೋಪಗೊಂಡು ತೀಕ್ಷ್ಣವಾದ ಅಲಗುಳ್ಳ ತನ್ನ ಶಕ್ತಿಯಿಂದ ಅವರ ತಲೆಗಳನ್ನು ಕತ್ತರಿಸಿ ಪುನಃ ಭರ್ಜಿಯಿಂದ ಅವರುಗಳನ್ನು ಕ್ರಮವಾಗಿ ತಿವಿದಳು. ॥೨೯॥

ಈರೀತಿಯಲ್ಲಿ ಸಂಪನ್ನಾಥಾಶಕ್ತಿಯು ಅವರ ಹೃದಯಕ್ಕೆ ಚುಚ್ಚಿ ಅವರುಗಳನ್ನು ಶೀಘ್ರವಾಗಿ ಯಮನ ಪಟ್ಟಣಕ್ಕೆ ಕಳುಹಿಸಿದಳು. ಆಗ ಉಗ್ರಕರ್ಮ ಮುಂತಾದ ರಾಕ್ಷಸರು ತಿರಸ್ಕರಣೀಶಕ್ತಿಯೊಂದಿಗೆ ಯುದ್ಧಮಾಡಿದರು. ॥೩೦॥

ತಿರಸ್ಕರಣಿಕಾದೇವಿಯೊಂದಿಗೆ ಉಗ್ರಕರ್ಮ ಮುಂತಾದ ರಾಕ್ಷಸರು ತಮ್ಮ ಮಂತ್ರಿಗಳ ಜೊತೆಯಲ್ಲಿ ಅನೇಕ ಶಸ್ತ್ರಾಸ್ತ್ರಗಳಿಂದ ಯುದ್ಧಮಾಡಿದರು. ಅವಳೂ ಕೂಡ ಅವರ ತಲೆಗಳನ್ನು ಕತ್ತಿಯಿಂದ ಬಹಳ ಕೋಪದಿಂದ ಕತ್ತರಿಸಿದಳು. ॥೩೧॥

ಆಗ ಬಹಳ ವೇಗವಾಗಿ ಅವರ ತಲೆಗಳೆಲ್ಲವೂ ಕತ್ತರಿಸಿ ಹೋಗಲು ಅವರು ಮೃತಿಯನ್ನೈದಿದರು. ರಥದಲ್ಲಿ ಕುಳಿತಿರುವ ದಂಡನಾಥಾಶಕ್ತಿಯು ಕುಟಿಲಾಕ್ಷನೊಂದಿಗೆ ಬಹಳ ಭಯಂಕರವಾದ ಯುದ್ಧವನ್ನು ಮಾಡಿದಳು. ॥೩೨॥

ಪರಸ್ಪರಂ ವವೃಷುತುಃ ಶರೈಃ ಸ್ವರ್ಣ ವಿಚಿತ್ರಿತೈಃ ।
ಪರಸ್ಪರಪ್ರಯುಕ್ತಾನಿ ನಾನಾಶಸ್ತ್ರಾಣಿ ಚಿಚ್ಛಿದುಃ ॥೩೩॥

ರಥಸ್ಥೋ ಭಂಡಸೈನ್ಯೇಶಃ ಕುಟಿಲಾಕ್ಷಃ ಪ್ರಕೋಪನಃ ।
ಪ್ರಹಸ್ಯ ಕೋಲವದನಾಂ ಯುಯುಧೇऽಥಾತಿಸುಶಿಕ್ಷಿತಃ ॥೩೪॥

ಯುದ್ಧ್ವೈವಂ ಕೋಲವದನಾ ವಾಜಿನಸ್ತಸ್ಯ ಪತ್ರಿಭಿಃ ।
ನಿಷ್ಪ್ರಾಣಾನಕರೋದಷ್ಟೌ ಕರ್ಣಾऽऽಕೃಷ್ಟೈರ್ಧನುಶ್ಚ್ಯುತೈಃ ॥೩೫॥

ಏಕೇನ ಸಾರಥಿಂ ಹತ್ವಾ ನಿಜಘಾನಾऽಪರಂ ಹೃದಿ ।
ಶರೇಣೋರಸಿ ಸಂವಿದ್ಧ ಈಷತ್ ನಿಷ್ಪ್ರಜ್ಞತಾಂ ಗತಃ ॥೩೬॥

ಪುನರ್ಮೂರ್ಛಾವಿನಿರ್ಮುಕ್ತೋ ಗದಾಂ ಪ್ರಾದಾಯ ಚೋತ್ಪ್ಲುತಃ ।
ಕಿರಿಚಕ್ರರಥಾऽऽಬದ್ಧ ಸಿಂಹಮೂರ್ಧ್ನಿ ಪ್ರಪಾತಯತ್ ॥೩೭॥

ಇವರಿಬ್ಬರೂ ನಾನಾಬಣ್ಣಗಳಿಂದ ವಿಚಿತ್ರವಾದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು. ಅಲ್ಲದೇ ಇವರಿಬ್ಬರೂ ಪರಸ್ಪರವಾಗಿ ಉಪಯೋಗಿಸುತ್ತಿರುವ ನಾನಾವಿಧವಾದ ಶಸ್ತ್ರಗಳನ್ನೂ ಕತ್ತರಿಸಿದರು. ॥೩೩॥

ಭಂಡಸೈನ್ಯಾಧಿಪತಿಯಾದ ಕುಟಿಲಾಕ್ಷನು ಕೋಪಗೊಂಡವನಾಗಿ ಬಲಾತ್ಕಾರ ವಾಗಿ ಬಹಳ ಚೆನ್ನಾಗಿ ಶಿಕ್ಷಿತನಾಗಿದ್ದ ಈತನು ದಂಡನಾಯಕಿಯೊಂದಿಗೆ ಬಹಳ ಚೆನ್ನಾಗಿ ಯುದ್ಧಮಾಡಿದನು. ॥೩೪॥

ದಂಡನಾಯಕಿಯು ಈರೀತಿಯಾಗಿ ಯುದ್ಧಮಾಡಿ ಬಾಣಗಳನ್ನು ಕಿವಿಯು ವರೆಗೂ ಸೆಳೆದು ಪ್ರಯೋಗಿಸಿ ಅವನ ರಥದ ಎಂಟು ಕುದುರೆಗಳನ್ನೂ ಕೊಂದಳು. ॥೩೫॥

ಅವಳು ಒಂದು ಬಾಣದಿಂದ ಸಾರಥಿಯನ್ನು ಕೊಂದು ಇನ್ನೊಂದನ್ನು ಅವನ ಹೃದಯಕ್ಕೆ ಹೊಡೆದಳು. ಆ ಬಾಣವು ಅವನ ವಕ್ಷಸ್ಥಳಕ್ಕೆ ನಾಟಿಕೊಳ್ಳಲು ಅವನು ಸ್ವಲ್ಪ ಮೂರ್ಛೆಯನ್ನು ಹೊಂದಿದನು. ॥೩೬॥

ಪುನಃ ಕುಟಿಲಾಕ್ಷನು ಮೂರ್ಛೆಯಿಂದ ತಿಳಿದೆದ್ದು ಗದೆಯನ್ನು ಹಿಡಿದು ಕೊಂಡು ಮೇಲೆ ಹಾರಿ ದಂಡನಾಯಕಿಯ ಕಿರಿಚಕ್ರರಥಕ್ಕೆ ಕಟ್ಟಿದ್ದ ಸಿಂಹದ ತಲೆಗೆ ಬಲವಾಗಿ ಹೊಡೆದನು. ॥೩೭॥

ಗದಾಂ ಸರ್ವಾಽಽಯಸೀಂ ವಜ್ರಕಲ್ಪಾಂ ಸರ್ವಬಲೇನ ಸಃ ।
ತಥಾ ಜಗರ್ಜ ಕರಿಣಂ ಹತ್ವೇವ ಹರಿಲೋಚನಃ ॥೩೮॥

ಸಿಂಹೋಽಪಿ ಗದಯಾಽಽವಿದ್ಧೋ ಮೂರ್ಛಾಂ ಪ್ರಾಪ್ಯ ನಿಮೇಷತಃ ।
ಪುನಃ ಪ್ರಜ್ಞಾಂ ಪ್ರಾಪ್ಯ ರುಷಾ ದೃಷ್ಟ್ವಾ ದೈತ್ಯಂ ಪುರಃಸ್ಥಿತಂ ॥೩೯॥

ತಲೇನ ವಕ್ಷಸ್ಯಹನದ್ಧತೋ ಹರಿತಲೇನ ಸಃ ।
ಪಾಟಿತೋರಃ ಸ್ಥಲೋ ರಕ್ತಧಾರಾಂ ಮುಂಚನ್ನನೇಕಧಾ ॥೪೦॥

ಪುನರಾಪ್ಲುತ್ಯ ವಾರಾಹೀ ರಥಂ ದಿತಿಕುಲೋದ್ಭವಃ ।
ಪರಿವಾರ ಶಕ್ತಿಗಣೈಃ ಕದನಂ ಕಲ್ಪಯದ್ರುಷಾ ॥೪೧॥

ಏವಂ ತಂ ರಥಮಾರುಹ್ಯ ಯುಧ್ಯಮಾನಂ ಮಹಾಸುರಂ ।
ವಾರಾಹ್ಯಾ ವೃತ್ತಿಮುಖ್ಯಾಯಾ ಜಂಭಿನೀಶಕ್ತಿರುತ್ತಮಾ ॥೪೨॥

ಪೂರ್ಣವಾಗಿ ಕಬ್ಬಿಣದಿಂದಲೇ ಮಾಡಿದ, ವಜ್ರಾಯುಧಕ್ಕೆ ಸಮಾನವಾದ ಅವನ ಗದೆಯನ್ನು ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ಅದರ ತಲೆಗೆ ಹೊಡೆದನು. ಗದೆಯ ಪೆಟ್ಟಿಗೆ ಸಿಂಹವು ತಾನೇ ಆನೆಯನ್ನು ಕೊಂದಂತೆ ಬಹಳ ಗಟ್ಟಿಯಾಗಿ ಗರ್ಜನೆಯನ್ನು ಮಾಡಿತು. ॥೩೮॥

ಸಿಂಹವೂ ಕೂಡ ಗದೆಯ ಪೆಟ್ಟಿಗೆ ಸಿಕ್ಕಿ ನಿಮಿಷಕಾಲ ಮೂರ್ಛೆಯನ್ನು ಹೊಂದಿ ಪುನಃ ಮೂರ್ಛೆಯಿಂದ ತಿಳಿದೆದ್ದು ಮುಂಭಾಗದಲ್ಲಿರುವ ಆ ರಾಕ್ಷಸನನ್ನು ಬಹಳ ಕೋಪದಿಂದ ನೋಡಿತು. ॥೩೯॥

ಸಿಂಹವು ತನ್ನ ಪಾದದ ಪಂಜಾ ಪ್ರದೇಶದಿಂದ ರಾಕ್ಷಸನನ್ನು ಹೊಡೆಯಿತು. ಸಿಂಹದ ಪಾದದ ಏಟಿಗೆ ಸಿಕ್ಕಿ ಕುಟಿಲಾಕ್ಷನ ವಕ್ಷಸ್ಥಳವು ಸೀಳಲು ಅವನು ಅನೇಕವಿಧವಾಗಿ ರಕ್ತಪ್ರವಾಹವನ್ನೇ ಕಾರಿದನು. ॥೪೦॥

ದಿತಿಯ ವಂಶದಲ್ಲಿ ಹುಟ್ಟಿದ ಕುಟಿಲಾಕ್ಷನು ಪುನಃ ಹಾರಿ ವಾರಾಹಿಯ ರಥವನ್ನು ಆಕ್ರಮಿಸಿ ಅವಳು ಮತ್ತು ಅವಳ ಪರಿವಾರದ ಶಕ್ತಿಯರೊಂದಿಗೆ ಕೋಪದಿಂದ ಕಾದಾಡಲಾರಂಭಿಸಿದನು. ॥೪೧॥

ಈ ರೀತಿಯಾಗಿ ರಥವನ್ನು ಹತ್ತಿ ಯುದ್ಧಮಾಡುತ್ತಿರುವ ಆ ಮಹಾರಾಕ್ಷಸನೊಂದಿಗೆ ವಾರಾಹಿಯ ಪರಿವಾರದಲ್ಲಿ ಕಾರ್ಯದಕ್ಷರಾದ ಶಕ್ತಿಗಳಲ್ಲಿ ಉತ್ತಮಳಾದ ಜಂಭಿನೀ ಎಂಬ ಶಕ್ತಿಯು ಯುದ್ಧಮಾಡಲಾರಂಭಿಸಿದಳು. ॥೪೨॥

ಸಾಯುಧತ್ಕುಟಿಲಾಕ್ಷೇಣ ಚಿರಂ ಪಶ್ಚಾದತೀವ ತಂ ।
ಯುಧ್ಯಮಾನಂ ಶರೇಣಾಽಸ್ಯೇ ನಿಜಘಾನ ಮಹಾಬಲಾ ॥೪೩॥

ಹತೋ ಗಾಢಂ ಶರೇಣಾಽಸ್ಯೇ ಕ್ಷಣಂ ಸ್ತಬ್ಧೋಽತಿಪೀಡಯಾ ।
ಪುನರುತ್ಪ್ಲುತ್ಯ ಗದಯಾ ತಾಂ ಮೂರ್ಧ್ನಿ ಪ್ರಾಹರದ್ರುಷಾ ॥೪೪॥

ಅಥ ಸಾ ಗಾಢಸಂವಿದ್ಧಾ ರಥೋಪಸ್ಥೇ(ಸ್ಥ) ಉಪಾಽವಿಶತ್ ।
ಏವಂ ವಿಧಾಂ ಶಕ್ತಿಗಣಾ ದೃಷ್ಟ್ವಾ ಹಾಹೇತಿ ಚುಕ್ರುಶುಃ ॥೪೫॥

ತಾವತ್ತಸ್ಯಾ ಧನುರ್ದೈತ್ಯೋ ಬಭಂಜಾಽಚ್ಛಿದ್ಯ ಸತ್ವರಂ ।
ಉತ್ಥಿತಾ ಜಂಭಿನೀ ಭೂಯೋ ದೃಷ್ಟ್ವಾ ಭಗ್ನಂ ನಿಜಂ ಧನುಃ ॥೪೬॥

ಮಹಾಬಲಿಷ್ಠಳಾದ ಆ ಶಕ್ತಿಯು ಬಹಳ ಕಾಲ ಕುಟಿಲಾಕ್ಷನೊಂದಿಗೆ ಯುದ್ಧಮಾಡಿದಳು. ಅವನೂ ಬಿಡದೆ ಬಹಳಕಾಲ ಕಾದಾಡುತ್ತಿದ್ದುದನ್ನು ಕಂಡು ಆಕೆಯು ಬಾಣದಿಂದ ಅವನ ಮುಖಕ್ಕೆ ಹೊಡೆದಳು. ॥೪೩॥

ಕುಟಿಲಾಕ್ಷನು ಆಕೆಯ ಬಾಣದ ಗಾಢಪ್ರಹಾರಕ್ಕೆ ಸಿಕ್ಕಿ ಕ್ಷಣಕಾಲ ಬಹಳ ಪೀಡೆಯಿಂದ ನಿಶ್ಚಲನಾಗಿದ್ದನು. ಅನಂತರ ಅವನು ಪುನಃ ಹಾರಿ ಕೋಪದಿಂದ ಆವಳ ತಲೆಯ ಮೇಲೆ ಗದಾಪ್ರಹಾರವನ್ನು ಮಾಡಿದನು. ॥೪೪॥

ಅನಂತರ ಅವನ ಗದೆಯ ಗಾಢಪ್ರಹಾರಕ್ಕೆ ಸಿಕ್ಕಿದ ಆ ಶಕ್ತಿಯು ಪೀಡೆಯಿಂದ ರಥದ ಸಮೀಪದಲ್ಲಿ ಸುಮ್ಮನೇ ಕುಳಿತುಬಿಟ್ಟಳು. ಈರೀತಿಯಾಗಿ ಕುಳಿತ ಆ ಶಕ್ತಿಯನ್ನು ನೋಡಿ ಶಕ್ತಿಗಳ ಗುಂಪಿನವರು ಅಯ್ಯಯ್ಯೋ ಎಂಬುದಾಗಿ ಗಟ್ಟಿಯಾಗಿ ಕಿರಿಚಿಕೊಂಡರು. ॥೪೫॥

ಅಷ್ಟರೊಳಗಾಗಿಯೇ ಕುಟಿಲಾಕ್ಷನು ಆಕೆಯ ಧನುಸ್ಸನ್ನು ಶೀಘ್ರವಾಗಿ ಕಿತ್ತುಕೊಂಡು ಮುರಿದುಹಾಕಿದನು. ಆಗ ಜಂಭಿನಿಯು ಪುನಃ ಎದ್ದು ತನ್ನ ಧನುಸ್ಸನ್ನು ರಾಕ್ಷಸನು ಮುರಿದುಹಾಕಿರುವುದನ್ನು ಕಂಡಳು. ॥೪೬॥

ರುಷಾ ಜ್ವಲಂತೀ ಮಹತೀಂ ಗದಾಂ ಸ್ವೀಯಾಂ ಪರಾಮೃಶತ್ ।
ಅಥಾಽಭವದ್ಗದಾಯುದ್ಧಂ ಭೀಮಂ ತ್ವಾಷ್ಟ್ರೇಂದ್ರ ಸನ್ನಿಭಂ ॥೪೭॥

ಜಂಭಿನೀ ದೈತ್ಯಯೋರ್ದೃಷ್ಟ್ವಾ ವಿಸ್ಮಿತಾ ದೇವದಾನವಾಃ ।
ಮತ್ವಾ ರಥಂ ಸಂಕುಚಿತಂ ಭೂಮೌ ಯುದ್ಧಮಭೂತ್ಕೃತಂ ॥೪೮॥

ಗದಾಯುದ್ಧಂ ಸುವಿಪುಲಂ ಭೀರುಹೃತ್ಕಂಪಕಾರಕಂ ।
ಪರಸ್ಪರ ಗದಾ ಪಾತ ಪ್ರಾದುರ್ಭೂತ ಮಹಾರವಂ ॥೪೯॥

ಗದಾ ಸಂಘಟ್ಟನೋದಂಚ ತ್ಪಾವಕೌಘ ಪ್ರವರ್ಷಣಂ ।
ವಿಚಿತ್ರಾಽಕ್ರಮಣೋತ್ಪ್ಲಾವ ಚಿತ್ರಸಂಸ್ಥಾನಸುಂದರಂ ॥೫೦॥

ತತ ಉತ್ಪ್ಲುತ್ಯ ವೇಗೇನ ಹಂತುಂ ತಾಮಭಿಚಕ್ರಮುತ್ ।
ಯಾವತ್ತಾವತ್ತಯಾ ಮೂರ್ಧ್ನಿ ಬಲವದ್ಗದಯಾ ಹತಃ ॥೫೧॥

ಆ ಶಕ್ತಿಯು ಕೋಪದಿಂದುರಿಯುತ್ತಾ ದೊಡ್ಡದಾದ ತನ್ನ ಗದೆಯನ್ನು ಕೈಗೆ ತೆಗೆದುಕೊಂಡಳು. ಅನಂತರ ತ್ವಾಷ್ಟ್ರನಿಗೂ ಇಂದ್ರನಿಗೂ ಆದ ಯುದ್ಧದಂತೆ, ಅವರಿಬ್ಬರಿಗೂ ಘೋರವಾದ ಗದಾಯುದ್ಧವು ಸಂಭವಿಸಿತು. ॥೪೭॥

ಇವರಿಬ್ಬರ ಗದಾಯುದ್ಧವನ್ನೂ ನೋಡಿ ದೇವತೆಗಳೂ ಮತ್ತು ರಾಕ್ಷಸರೂ ಅತ್ಯಂತ ಆಶ್ಚರ್ಯಪಟ್ಟರು. ರಥಗಳಲ್ಲಿ ತಮ್ಮ ಗದಾಯುದ್ಧಕ್ಕೆ ಸ್ಥಳವು ಸಾಲದೆಂದು ಭಾವಿಸಿ ಅವರು ಭೂಮಿಯಲ್ಲಿ ಯುದ್ಧಕ್ಕೆ ಪ್ರಾರಂಭಿಸಿದರು. ॥೪೮॥

ಇವರಿಬ್ಬರ ಗದಾಯುದ್ಧವು ಬಹಳ ಹೆಚ್ಚಾಗಿಯೂ, ಅಂಜುಪುರುಕರ ಹೃದಯವನ್ನು ನಡುಗಿಸುವಂತೆಯೂ, ಪರಸ್ಪರ ಗದಾಪ್ರಹಾರದಿಂದುಂಟಾದ ಮಹಾ ಶಬ್ದವುಳ್ಳದ್ದಾಗಿಯೂ ಭಯಂಕರವಾಗಿ ನಡೆಯಿತು. ॥೪೯॥

ಇವರಿಬ್ಬರ ಗದೆಗಳ ಪರಸ್ಪರ ಘರ್ಷಣೆಯಿಂದ ಏಳುತ್ತಿರುವ ಬೆಂಕಿಯ ಕಿಡಿಗಳ ಸುರಿಯುವಿಕೆಯೂ ನಾನಾವಿಧವಾದ ರೀತಿಯಲ್ಲಿ ಆಕ್ರಮಿಸಿತು! ಮತ್ತು ಹಾರುವುದೂ ನಿಲ್ಲುವುದೂ ಮುಂತಾದುವುಗಳಿಂದ ಸುಂದರವಾಗಿ ಈ ಗದಾಯುದ್ಧವು ನಡೆಯಿತು. ॥೫೦॥

ಅನಂತರ ಕುಟಿಲಾಕ್ಷನು ವೇಗವಾಗಿ ಹಾರಿ ಆವಳನ್ನು ಕೊಲ್ಲಲು ಮುಂದು ವರಿದನು. ಅಷ್ಟರೊಳಗಾಗಿ ಆಕೆಯು ತನ್ನ ಗದೆಯಿಂದ ಅವನ ತಲೆಗೆ ಬಲವಾದ ಪೆಟ್ಟನ್ನು ಕೊಟ್ಟಳು. ॥೫೧॥

ಪ್ರಸ್ಫುಟದ್ದೃಗ್ಗುಹಾವಕ್ತ್ರಾದುಚ್ಛಲದ್ರಕ್ತಧಾರಯಾ ।
ವರ್ಷಂ ಸ್ತ್ರಾಂ ಪತಿತೋ ಭೂಮೌ ಶೀರ್ಣಸರ್ವಾಂಗಬಂಧನಃ॥೫೨॥

ಗದಾ ಮಾಲಿಂಗ್ಯ ತರಸಾ ಮುಮೋಚಾಸೂನ್ ಲುಠನ್ ಭುವಿ ।
ಹತಂ ವೀಕ್ಷ್ಯ ಚಮೂನಾಥಂ ದೈತ್ಯಾ ಭೀತಾಃ ಪಲಾಯಿತಾಃ ॥೫೩॥

ದೇವತಾಃ ಶಕ್ತಯಶ್ಚಾಽಪಿ ಜಹೃಷುಃ ಶತ್ರುನಾಶನಾತ್ ।
ಏವಂ ದೈತ್ಯಂ ನಿಹತ್ಯಾಶು ಜಂಭಿನೀ ದಂಡನಾಯಿಕಾಂ ॥೫೪॥

ಪ್ರಣಮ್ಯ ಸಂಶ್ರಿತಾ ಪಾರ್ಶ್ವಂ ದಂಡಿನೀ ಚ ಪ್ರಹರ್ಷಿತಾ ।
ದದೌ ತಸ್ಯೈ ಪರೀರಂಭಾಂ ಪ್ರೇಮ್ಣಾತಾಂ ಪ್ರಸವಿಾಕ್ಷತ ॥೫೫॥

ಆಗ ಕುಟಿಲಾಕ್ಷನ ಕಣ್ಣುಗಳು ಒಡೆದು ಮುಖದಿಂದಲೂ ರಕ್ತದ ಪ್ರವಾಹವೇ ಹರಿಯುತ್ತಾ ಸಮಸ್ತ ದೇಹದ ಕಟ್ಟುಗಳೂ ಸಡಿಲವಾಗಿ ಅವನು ರಕ್ತಧಾರೆಯನ್ನು ಸುರಿಸುತ್ತಾ ಭೂಮಿಯಮೇಲೆ ಬಿದ್ದುಬಿಟ್ಟನು. ॥೫೨॥

ಕುಟಿಲಾಕ್ಷನು ಗದೆಯನ್ನು ಆಲಿಂಗಿಸಿಕೊಂಡು ಭೂಮಿಯಮೇಲೆ ಹೊರ ಲಾಡುತ್ತಾ ಶೀಘ್ರವಾಗಿ ಪ್ರಾಣಗಳನ್ನು ಬಿಟ್ಟನು. ತಮ್ಮ ಸೈನ್ಯಾಧಿಪತಿಯು ಈರೀತಿಯಾಗಿ ನಾಶವಾದದ್ದನ್ನು ಕಂಡು ರಾಕ್ಷಸರು ಭಯಗೊಂಡು ಪಲಾಯನ ಸೂಕ್ತವನ್ನು ಹೇಳಿದರು. ॥೫೩॥

ದೇವತೆಗಳೂ ಶಕ್ತಿಗಳೂ ಕೂಡ ತಮ್ಮ ಶತ್ರುವು ನಾಶವಾದುದರಿಂದ ಬಹಳ ಸಂತೋಷಪಟ್ಟರು. ಈರೀತಿಯಾಗಿ ರಾಕ್ಷಸನನ್ನು ನಾಶಮಾಡಿ ಜಂಭಿನೀ ಶಕ್ತಿಯು ಶೀಘ್ರವಾಗಿ ಹಿಂತಿರುಗಿ ಹೋಗಿ ದಂಡನಾಯಕಿಗೆ ನಮಸ್ಕರಿಸಿದಳು. ॥೫೪॥

ಜಂಭಿನೀಶಕ್ತಿಯು ದಂಡನಾಯಕಿಗೆ ನಮಸ್ಕರಿಸಿ ಆಕೆಯ ಪಕ್ಕದಲ್ಲಿ ನಿಂತು ಕೊಂಡಳು. ದಂಡನಾಯಿಕೆಯು ಇದರಿಂದ ಬಹಳ ಸಂತೋಷಪಟ್ಟಳು. ಅವಳು ಜಂಭಿನೀಶಕ್ತಿಯನ್ನು ಆಲಿಂಗಿಸಿಕೊಂಡು ಪ್ರೀತಿಪೂರ್ವಕವಾಗಿ ಅವಳನ್ನು ನೋಡಿದಳು. ॥೫೫॥

ವಿಶುಕ್ರೇಣ ಯುಯೋಧೋಚ್ಚೈರ್ಮಂತ್ರಿಣೀ ವೀರ್ಯವತ್ತರಾ ।
ವಿಶುಕ್ರೋಽಪಿ ಮಹಾಶೂರೋ ಯುವರಾಜೋಽತಿ ವೀರ್ಯವಾನ್ ॥೫೬॥

ವಿಚಿತ್ರಮಕರೋದ್ದೇವ್ಯಾ ರಣಮಾಶ್ಚರ್ಯಕಾರಣಂ ।
ಪರಸ್ಪರಸ್ಯ ಶಸ್ತ್ರಾಣಿ ಪ್ರತಿಶಸ್ತ್ರೈರ್ವಿನಾಶಯತ್ ॥೫೭॥

ಅಸ್ತ್ರೈರಸ್ತ್ರಾಣ್ಯಪಿ ತಥಾ ನಾಶಯಂತೌ ಪರಸ್ಪರಂ ।
ಏವಂ ಚಿರಂ ನಿಯುಧ್ಯಂತ ಮತ್ಯದ್ಭುತಪರಾಕ್ರಮಂ ॥೫೮॥

ದೃಷ್ಟ್ವಾತ್ವಮಂತ್ರ ಮಹಾರಾಜ್ಞೀ ದರ್ಶಯಂತೀ ಸ್ವಚಾತುರೀಂ ।
ಯುಗಪಚ್ಛರಸಂಘೇನ ರಥಮಶ್ವಾಂಶ್ಚ ಸಾರಥಿಂ ॥೫೯॥

ಬಹಳ ಬಲಿಷ್ಠಳಾದ ಮಂತ್ರಿಣೀದೇವಿಯು ವಿಶುಕ್ರರಾಕ್ಷಸನೊಂದಿಗೆ ವಿಶೇಷವಾಗಿ ಯುದ್ಧವನ್ನು ಮಾಡಿದಳು. ಮಹಾಶೂರನಾದ ಮತ್ತು ಬಲಿಷ್ಠನಾದ ಯುವರಾಜನಾದ ವಿಶುಕ್ರನೂ ಕೂಡ ಆಶ್ಚರ್ಯಕರವಾದ ರೀತಿಯಲ್ಲಿ ಯುದ್ಧಮಾಡಿದನು. ॥೫೬॥

ವಿಶುಕ್ರನು ಮಂತ್ರಿಣೀದೇವಿಯೊಂದಿಗೆ ಬಹಳ ಆಶ್ಚರ್ಯಕರವಾದ ಯುದ್ಧವನ್ನು ಮಾಡುತ್ತಾ ಒಬ್ಬರಿಗೊಬ್ಬರು ಹೊಡೆಯುವ ಶಸ್ತ್ರಗಳನ್ನು ಪ್ರತಿ ಶಸ್ತ್ರಗಳನ್ನು ಉಪಯೋಗಿಸುವುದರ ಮೂಲಕ ನಾಶಮಾಡುತ್ತಿದ್ದನು. ॥೫೭॥

ಇವರಿಬ್ಬರೂ ಪರಸ್ಪರರ ಅಸ್ತ್ರಗಳಿಗೆ ಪ್ರತಿಯಾಗಿ ಅಸ್ತ್ರಗಳನ್ನು ಉಪಯೋಗಿಸಿ ನಾಶಮಾಡುತ್ತಿದ್ದರು. ಈ ರೀತಿಯಾಗಿ ಬಹಳಕಾಲ ಯುದ್ಧಮಾಡುತ್ತಿರುವ ಶತ್ರುವಿನ ಅತ್ಯಂತ ಆಶ್ಚರ್ಯಕರವಾದ ಪರಾಕ್ರಮವನ್ನು ಮಂತ್ರಿಣೀದೇವಿಯು ಪರಿಶೀಲಿಸಿದಳು. ॥೫೮॥

ಮಂತ್ರಿಣೀದೇವಿಯು ವಿಶುಕ್ರನ ಪರಾಕ್ರಮವನ್ನು ನೋಡಿ ತನ್ನ ಯುದ್ಧನಿಪುಣತೆಯನ್ನು ತೋರಿಸುವವಳಾಗಿ ಏಕಕಾಲದಲ್ಲಿ ತನ್ನ ಬಾಣಗಳ ಸಮೂಹದಿಂದ ಅವನ ರಥ ಕುದುರೆಗಳು ಮತ್ತು ಸಾರಥಿ ಇವುಗಳನ್ನೆಲ್ಲವನ್ನೂ ಬಹಳ ಶೀಘ್ರವಾಗಿ ಕತ್ತರಿಸಿದಳು. ॥೫೯॥

ಧನುರ್ಮುಕುಟಕಂ ಕೇತುಂ ಚಿಚ್ಛೇದ ನಿಮಿಷಾರ್ಧತಃ ।
ಏವಂ ಯುದ್ಧೇ ಪರೀಭೂತೋ ವಿಶುಕ್ರೋಮನ್ಯುನಾ ಜ್ವಲನ್॥೬೦॥

ಜಗೃಹೇ ಖೇಟನಿಸ್ತ್ರಿಂಶೌ ಹಂತುಂ ದೇವೀಂ ಮನೋ ದಧೇ ।
ಅಥಾಽಽಯಾಂತಂ ಖಡ್ಗಕರಂ ದೂರಾದೇಕೇನ ಪತ್ರಿಣಾ ॥೬೧॥

ಕರವಾಲಂ ದ್ವಿಧಾ ಕೃತ್ವಾ ಖೇಟಮನ್ಯೇನ ಭೇದಯತ್ ।
ಛಿನ್ನಖೇಟಕ ನಿಸ್ತ್ರಿಂಶ ಮಾಯಾಂತಂ ಬದ್ಧಮುಷ್ಟಿಕಂ ॥೬೨॥

ಜಘಾನೋರಸಿ ಭಲ್ಲೇನ ನಿಶಿತೇನ ಗರೀಯಸಾ ।
ಭಲ್ಲಾಹತೋ ವಿಶುಕ್ರೋಽಪಿ ಸಫೇನಂ ರುಧಿರಂ ವಮನ್ ॥೬೩॥

ಅಲ್ಲದೇ ಮಂತ್ರಿಣೀದೇವಿಯು ವಿಶುಕ್ರನ ಕಿರೀಟ ಮತ್ತು ಬಾವುಟ ಇವೆಲ್ಲವನ್ನೂ ಒಂದರ್ಧನಿಮಿಷದಲ್ಲಿಯೇ ಕತ್ತರಿಸಿದಳು. ಈ ರೀತಿಯಲ್ಲಿ ಯುದ್ಧದಲ್ಲಿ ಸೋಲಿಗೆ ಗುರಿಯಾದ ವಿಶುಕ್ರನು ಕೋಪದಿಂದುರಿಯುತ್ತಿದ್ದನು. ||೬೦||

ಆಗ ವಿಶುಕ್ರರಾಕ್ಷಸನು ಮಂತ್ರಿಣೀದೇವಿಯನ್ನು ಕೊಲ್ಲಲು ನಿಶ್ಚಯಿಸಿ ಖೇಟಕ ಎಂಬ ಆಯುಧ ಮತ್ತು ಶಕ್ತಿಗಳನ್ನು ತೆಗೆದುಕೊಂಡನು. ಅನಂತರ ಕತ್ತಿಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಬರುತ್ತಿರುವ ವಿಶುಕ್ರನ ಕತ್ತಿಗೆ ದೇವಿಯು ಒಂದು ಅಮೋಘವಾದ ಬಾಣವನ್ನು ಪ್ರಯೋಗಿಸಿದಳು. ||೬೧||

ದೇವಿಯು ತನ್ನ ಒಂದು ಬಾಣದಿಂದ ಅವನ ಕತ್ತಿಯನ್ನು ಎರಡುಭಾಗವಾಗಿ ತುಂಡರಿಸಿ, ಬೇರೊಂದು ಬಾಣದಿಂದ ಅವನ ಖೇಟಾಯುಧವನ್ನು ತುಂಡರಿಸಿದಳು. ಖೇಟಕಾಯುಧ ಮತ್ತು ಕತ್ತಿಗಳು ಕತ್ತರಿಸಿ ಹೋಗಲು, ವಿಶುಕ್ರನು ಮುಷ್ಟಿಯನ್ನು ಕಟ್ಟಿಕೊಂಡು ದೇವಿಯ ಎದುರಿಗೆ ಬಂದನು. ||೬೨||

ಆಗ ದೇವಿಯು ಬಹಳ ತೀಕ್ಷ್ಣವೂ ದೊಡ್ಡದೂ ಆದ ಭರ್ಜಿಯನ್ನು ಅವನ ವಕ್ಷಸ್ಥಳಕ್ಕೆ ಚುಚ್ಚಿದಳು. ಭರ್ಜಿಯ ಇರಿತಕ್ಕೆ ಸಿಕ್ಕಿದ ವಿಶುಕ್ರನೂ ಕೂಡ ನೊರೆಯಿಂದ ಕೂಡಿದ ರಕ್ತವನ್ನು ಕಾರುತ್ತಿದ್ದನು. ||೬೩||

ಘೂರ್ಣಿತೋ ವಿಭ್ರಮನ್ ಕ್ರೋಶದ್ವಯೀ ವೇಗೇನ ಪಾತಿತಃ ।
ಅವಶಃ ಸಂವರ್ತಕೇನ ವಾಯುನೇವ ಮಹಾಗಿರಿಃ ॥೬೪॥

ಗಾಢಮೂರ್ಛಾಮುಪಗತೋ ಯಥಾಲೋಕಾಂತರಾತ್ ಕೃತೀ ।
ಏವಂ ವಿಶುಕ್ರೇಽಭಿಹತೇ ದೈತ್ಯಸೇನಾ ಹ್ಯಭಿದ್ರುತಾ ॥೬೫॥

ನಿಕ್ಷಿಪ್ಯ ಹೇತೀನ್ ಸಂತ್ಯಜ್ಯ ವಾಹನಾನಿ ದಿಶೋ ದಶ ।
ವಿಶುಕ್ರಂ ಮೂರ್ಛಿತಂ ದೈತ್ಯಾಃ ಸಮಾದಾಯ ಪುರಂ ಯಯುಃ ॥೬೬॥

ವಿಶುಕ್ರಾದಿಷು ಯುಧ್ಯತ್ಸು ನಿಃಶೇಷಶಕ್ತಿಸೇನಯಾ ।
ವಿದಿತ್ವಾ ಲಲಿತಾಂ ಚಕ್ರರಥಸ್ಥಾಂ ಏಕಲಾಂ ತದಾ ॥೬೭॥

ಕತಿಚಿತ್ಪರಿವಾರಾತ್ಮಾ ಶಕ್ತಿಸಂಘೈಕ ಸಂಶ್ರಯಾಂ ।
ಜೇತುಂ ಶಕ್ಯೇತಿ ಸಂಹೃಷ್ಟೋ ಯಯೌ ತತ್ರಾಸುರೋ ದ್ರುತಂ ॥೬೮॥

ಆಗ ವಿಶುಕ್ರನ ತಲೆಯು ತಿರುಗಿ ಹಾರುತ್ತಾ ವೇಗವಾಗಿ ಎರಡು ಹರಿದಾರೀ ದೂರಕ್ಕೆ ಹೋಗಲು ಸಂವರ್ತಕ ಎಂಬ ವಾಯುವಿನ ವೇಗಕ್ಕೆ ಸಿಕ್ಕಿದ ದೊಡ್ಡ ಪರ್ವತದಂತೆ, ಪರಾಧೀನನಾಗಿ ಅವನು ದೂರದಲ್ಲಿ ಬಿದ್ದನು. ॥೬೪॥

ಅವನು ಗಾಢವಾದ ಮೂರ್ಛೆಯನ್ನು ಹೊಂದಿ ಅನಂತರ ಕೃತಕೃತ್ಯನಾಗಿ ಲೋಕಾಂತರಕ್ಕೆ ತೆರಳಿದನು. ಈ ರೀತಿಯಾಗಿ ವಿಶುಕ್ರನು ಮರಣವನ್ನು ಹೊಂದಲು ರಾಕ್ಷಸರ ಸೈನ್ಯವು ಚದುರಿ ಓಡಿತು. ॥೬೫॥

ರಾಕ್ಷಸಸೈನ್ಯದವರೆಲ್ಲರೂ ತಮ್ಮ ಕತ್ತಿಗಳನ್ನೂ ವಾಹನಗಳನ್ನೂ ಅಲ್ಲಿಯೇ ಬಿಟ್ಟು ಗಾಢವಾದ ಮೂರ್ಛಾವಸ್ಥೆಯಲ್ಲಿದ್ದ ವಿಶುಕ್ರನನ್ನು ತೆಗೆದುಕೊಂಡು ತಮ್ಮ ಪಟ್ಟಣಕ್ಕೆ ಓಡಿದರು. ॥೬೬॥

ವಿಶುಕ್ರನೇ ಮೊದಲಾದವರು ಸಮಸ್ತವಾದ ಶಕ್ತಿ ಸೈನ್ಯಗಳೊಂದಿಗೆ ಯುದ್ಧ ಮಾಡುತ್ತಿರುವ ವಿಷಯವನ್ನು ತಿಳಿದು ಭಂಡರಾಕ್ಷಸನು ಲಲಿತಾದೇವಿಯು ಈಗ ಒಬ್ಬಂಟೆಗಳಾಗಿರುವಳೆಂದು ತಿಳಿದನು. ॥೬೭॥

ಭಂಡನು ಲಲಿತಾದೇವಿಯು ಕೆಲವು ಪರಿವಾರಗಳಿಂದಲೇ ಕೂಡಿ ತನಗೆ ಅತ್ಯಂತ ಹತ್ತಿರವಿರುವ ಶಕ್ತಿಗಳನ್ನು ಜೊತೆಯಲ್ಲಿರಿಸಿಕೊಂಡಿರುವುದರಿಂದ ಅವಳನ್ನು

ದಮನಾದ್ಯೈಃ ಪಂಚದಶಾಕ್ಷೌಹಿಣೀಪೈಃ ಸುಸಂವೃತಃ ।
ಅಲ್ಪಸೇನಾ ಪರೀವಾರಃ ಶಸ್ತ್ರಾಸ್ತ್ರಬಹುಸಂಕುಲಃ ॥೭೯॥

ಪ್ರಯಾಣೇಪಾದಸಂಘಾತ ಶಬ್ದಮಾಲಕ್ಷ್ಯಸೋಽಸುರಃ ।
ಗಜಾರೂಢೈರ್ಯುತೋ ಮತ್ತ ಗಜಮಾರುಹ್ಯ ಸಂಯಯೌ ॥೮೦॥

ಸರ್ವೇ ನೀಲಾಂಶುಕಧರಾ ನೀಲಾಭರಣಭೂಷಿತಾಃ ।
ಸಮೇತ್ಯ ಸಂವಿದಂ ಕೃತ್ವಾ ಪೃಥಜ್ನಾಗೈಶ್ಚ ಸಂಘಶಃ ॥೮೧॥

ಯಯುರ್ದ್ವೈತ್ಯ ಚಮೂಪೃಷ್ಠೇ ಯೋಜನದ್ವಯತಃ ಪರಂ ।
ತತಃ ಕೇಚಿಚ್ಛಕ್ತಿಸೇನಾಂ ವಾಮತೋಽನ್ಯೇ ಚ ದಕ್ಷತಃ ॥೮೨॥

ಜಯಿಸುವುದು ಈಗ ಸುಲಭವೆಂದು ನಂಬಿ ಸಂತೋಷದಿಂದ ಅಲ್ಲಿಗೆ ಶೀಘ್ರವಾಗಿ ಹೋದನು. ॥೭೮॥

ಭಂಡನು ದಮನ ಮೊದಲಾದ ಹದಿನೈದು ಆಕ್ಷೋಹಿಣೀ ಸೇನಾಪತಿಗಳಿಂದ ಕೂಡಿದವನಾಗಿ ಅಲ್ಪಸೈನ್ಯ ಮತ್ತು ಪರಿವಾರದಿಂದ ಕೂಡಿದವನಾಗಿ ಅನೇಕ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಹೊರಟನು. ॥೭೯॥

ಪ್ರಯಾಣ ಮಾಡುವಾಗ ಶಕ್ತಿಗಳ ಪಾದಗಳ ತುದಿಯ ತುಳಿಯುವಿಕೆಯ ಶಬ್ದದಿಂದ ಹಾದಿಯನ್ನು ಗುರುತಿಸುತ್ತಾ, ಆ ರಾಕ್ಷಸನು ಆನೆಗಳನ್ನು ಏರಿರುವ ಸೇನಾಪತಿಗಳೊಡನೆ ಮದಿಸಿದ ಆನೆಯನ್ನು ಏರಿ ಹೊರಟನು. ॥೮೦॥

ಎಲ್ಲರೂ ಕಪ್ಪುರೇಷ್ಮೆಯ ವಸ್ತ್ರಗಳನ್ನು ಧರಿಸಿದವರಾಗಿಯೂ, ಕಪ್ಪು ಆಭರಣಗಳನ್ನು ತೊಟ್ಟವರಾಗಿಯೂ, ಗುಂಪುಗುಂಪಾಗಿ ಆನೆಗಳನ್ನು ಬೇರೆಬೇರೇ ಕಡೆಗಳಿಂದ ತೆಗೆದುಕೊಂಡು ಹೋಗಿ, ಅನಂತರ ಒಟ್ಟಿಗೆ ಸೇರುವುದೆಂದು ಪ್ರತಿಜ್ಞೆಯನ್ನು ಮಾಡಿಕೊಂಡಿದ್ದರು. ॥೮೧॥

ಎರಡು ಯೋಜನದವರೆವಿಗೂ ಈರೀತಿಯಲ್ಲಿ ಪ್ರಯಾಣಮಾಡಿ ಅನಂತರ ಇವರು ರಾಕ್ಷಸಸೈನ್ಯಗಳ ಹಿಂಭಾಗದಲ್ಲಿ ಮರೆಯಾಗಿ ಕೆಲವರು ಶಕ್ತಿ ಸೈನ್ಯಗಳನ್ನು ಎಡಗಡೆಯಲ್ಲಿಯೂ ಮತ್ತು ಬಲಗಡೆಯಲ್ಲಿಯೂ, ಮುತ್ತಿದರು. ॥೮೨॥

ಪರಿಕ್ರಮ್ಯ ಯಯುರ್ಮಧ್ಯೇ ಹಿತ್ವಾ ಯೋಜನಯುಗ್ಮಕಂ ।
ಏವಂ ಪೃಥಕ್ಸಂಘಶಸ್ತೇ ಯಯುರ್ದಸ್ಯುರ್ಯಥಾ ತತಃ ॥೭೩॥

ಚಕ್ರರಾಜ ಶತಾಂಗಸ್ಯ ಕ್ರೋಶದೂರೇ ಹಿ ಪೃಷ್ಠತಃ ।
ಮಿಲಿತಾಸ್ತೇ ಸರ್ವ ಏವ ತತೋ ನಿಮಿಷಮಾತ್ರತಃ ॥೭೪॥

ಸಮಾಸೇದುಃ ಪೃಷ್ಠಭಾಗಂ ವಿಷಂಗಪ್ರಮುಖಾಃ ಸುರಾಃ ।
ವಿದ್ಯಾಮಯೀ ಶ್ರೀಲಲಿತಾ ಜ್ಞಾತ್ವಾಪ್ಯಸುರಸಂಮತಂ ॥೭೫॥

ತತ್ರಾಚಖ್ಯೌ ಲೀಲಯೈವ ಸ್ಥಿತಾ ಜ್ಞಾತೇವ ತತ್ರ ಸಾ ।
ಶಕ್ತಯೋ ಯುದ್ಧಸಂದೇಶಂ ಶ್ರುತ್ವಾ ದೂರೇ ಸುನಿರ್ಭಯಾಃ॥೭೬॥

ಸುಷ್ವಪುಃ ಸರ್ವ ಏವೈತಾಃ ಸ್ವಸ್ಥಾನೇಷು ರಥೋತ್ತಮೇ ।
ಸುಪ್ತಶಕ್ತಿಗಣೋಪೇತಂ ಪ್ರಜ್ವಲದ್ದೀಪ ಸಂಘಕಂ ॥೭೭॥

ಎರಡು ಯೋಜನದಷ್ಟು ದೂರ ಮಧ್ಯಭಾಗದಲ್ಲಿ ಬಿಟ್ಟು, ಸುತ್ತಿಕೊಂಡು ಇರುವ ಕಳ್ಳರಂತೆ, ಗುಟ್ಟಾಗಿ ಬೇರೆಬೇರೇ ಗುಂಪುಗಳಾಗಿಮಾಡಿಕೊಂಡು ರಾಕ್ಷಸರು ಹೋದರು. ॥೭೩॥

ಚಕ್ರರಾಜಶಕ್ತಿಗಳ ರಥಕ್ಕೆ ಎರಡು ಹರಿದಾರಿಗಳ ಹಿಂಭಾಗದಲ್ಲಿಯೇ ಇವರೆಲ್ಲರೂ ನಿಮಿಷಮಾತ್ರದಲ್ಲಿಯೇ ಒಟ್ಟಾಗಿ ಬಂದುಸೇರಿದರು. ॥೭೪॥

ವಿಷಂಗ ಮೊದಲಾದ ರಾಕ್ಷಸರು ಈರೀತಿಯಲ್ಲಿ ಲಲಿತಾದೇವಿಯ ಹಿಂಭಾಗಕ್ಕೆ ಬಂದರು. ಜ್ಞಾನಸ್ವರೂಪಳಾದ ಶ್ರೀಲಲಿತಾದೇವಿಯು ಈರೀತಿಯಾಗಿ ರಹಸ್ಯವಾಗಿ ರಾಕ್ಷಸರು ಸೇರಿರುವುದನ್ನು ಜ್ಞಾನದೃಷ್ಟಿಯಿಂದಲೇ ತಿಳಿದುಕೊಂಡಳು. ॥೭೫॥

ಆಗ ಲಲಿತಾದೇವಿಯು ಅನಾಯಾಸವಾಗಿಯೇ ಈ ವಿಷಯವನ್ನು ತಿಳಿದು, ಅದನ್ನು ಇತರ ಶಕ್ತಿಗಳಿಗೂ ಕೂಡಲೇ ತಿಳಿಸಿದಳು. ದೂರದಲ್ಲೇ ಶಕ್ತಿಗಳು ಲಲಿತಾದೇವಿಯ ಯುದ್ಧ ಸಂದೇಶವನ್ನು ಕೇಳಿ ಹೆದರಿಕೆಯನ್ನು ತೋರ್ಪಡಿಸಲೇ ಇಲ್ಲ. ॥೭೬॥

ಆಗ ಈ ಶಕ್ತಿಗಳು ತಮ್ಮತಮ್ಮ ಶ್ರೇಷ್ಠರಥಗಳಲ್ಲಿಯೇ ಆಯಾಯಾ ತಮ್ಮ ತಮ್ಮ ಸ್ಥಾನಗಳಲ್ಲಿಯೇ ಮಲಗಿದಂತಿದ್ದರು. ಆಗ ಅಲ್ಲಿ ಶಕ್ತಿಗಳ ಸಮೂಹಗಳೆಲ್ಲವೂ ಮಲಗಿದಂತಿರಲು, ದೀಪಗಳು ಎಲ್ಲಾ ಕಡೆಯಲ್ಲಿಯೂ ಉರಿಯುತ್ತಿದ್ದುವು! ॥೭೭॥

ದೀಪಪ್ರಭಾ ಮೂರ್ಛನೇನ ಸಮೇಧಿತಮಣಿಪ್ರಭಂ ।
ದೀಪಸಂಘೈರ್ಮಣಿಗಣೈರ್ದ್ಯೋತಮಾನಂ ಸಮಂತತಃ ॥೭೮॥

ದೃಷ್ಟ್ವಾ ಸಮೇತ್ಯ ದೈತೇಯಾ ದೂರಾದೇಕಪ್ರಪಾತತಃ ।
ಆರೋಢುಂ ರಥರಾಜಂ ತಂ ಸಮೀಪಮಭಿಸಂಯಯುಃ ॥೭೯॥

ಉತ್ಪಾತ ಕರವಾಲಾಸು ಸಹಸ್ರಮಿತಶಕ್ತಿಷು ।
ರಥಸ್ಯ ಪರಿತೋ ಗುಪ್ತ್ಯೈ ಪ್ರಾಕ್ರಮುತ್ಸುವಿಶೇಷತಃ ॥೮೦॥

ಕಾಶ್ಚಿದ್ದೃಷ್ಟ್ವಾ ದೈತ್ಯಸಂಘಂ ಗಜಾಽಽರೂಢಂ ಸಮಂತತಃ ।
ಕೃತ್ವಾಽಽಹ್ವಾನಮಹಾಶಬ್ದಂ ಪ್ರವಿಶುರ್ದೈತ್ಯವಾಹಿನೀಂ ॥೮೧॥

ಖಡ್ಗೇನ ಜಘ್ನುರ್ದೈತ್ಯಾಂ ಸ್ತಾನಾಕ್ಷಿಪಂತ್ಯೋ ವಚೋಗಣೈಃ ।
ತದಾ ದೈತ್ಯೈಃ ಶಕ್ತಿಭಿಶ್ಚ ಯುದ್ಧಮಾಸೀತ್ ಸುಭೈರವಂ ॥೮೨॥

ದೀಪಗಳ ಕಾಂತಿಗಳ ಬೀಳುವಿಕೆಯಿಂದ ಅಲ್ಲಿದ್ದ ಮಣಿಮಯ ಪ್ರದೇಶವೆಲ್ಲವೂ ಹೆಚ್ಚಾಗಿ ಥಳಥಳಿಸುತ್ತಿತ್ತು. ಆದ್ದರಿಂದ ಅಲ್ಲಿ ಎಲ್ಲಾ ಕಡೆಯಲ್ಲಿಯೂ, ದೀಪಗಳ ಸಮೂಹಗಳೂ ಮಣಿಗಳ ಸಮೂಹಗಳೂ, ವಿಶೇಷವಾಗಿ ಪ್ರಕಾಶಿಸುತ್ತಿದ್ದವು.॥೭೮॥

ಆಗ ರಾಕ್ಷಸರು ದೂರದಲ್ಲಿಯೇ ಒಂದೇ ಬಾರಿಗೆ ಒಟ್ಟು ಗೂಡಿ ಆ ರಥ ಶ್ರೇಷ್ಠವನ್ನು ಏರಲು ಅದರ ಹತ್ತಿರಕ್ಕೆ ಬಂದರು. ॥೭೯॥

ಕತ್ತಿಗಳನ್ನು ಎತ್ತಿಕೊಂಡು ಸಾವಿರಾರು ಶಕ್ತಿಗಳು ರಥದ ಸುತ್ತಲೂ ವಿಶೇಷ ವಾಗಿ ರಕ್ಷಿಸುವುದಕ್ಕೋಸ್ಕರ ಮುಂಚೆಯೇ ಸಿದ್ಧವಾಗಿದ್ದರು. ॥೮೦॥

ಆನೆಗಳನ್ನು ಏರಿ ಸುತ್ತಲೂ ಮುತ್ತಿಕೊಂಡಿರುವ ರಾಕ್ಷಸ ಸೈನ್ಯವನ್ನು ಕೆಲವು ಶಕ್ತಿಗಳು ನೋಡಿ, ತಮ್ಮ ಕಡೆಯವರನ್ನು ಕೂಗುವ ಮಹಾಶಬ್ದವನ್ನು ಮಾಡಿ, ತತ್‌ಕ್ಷಣ ಒಟ್ಟಾಗಿ ರಾಕ್ಷಸಸೈನ್ಯದೊಳಕ್ಕೆ ನುಗ್ಗಿದರು. ॥೮೧॥

ಆಗ ಶಕ್ತಿಗಳು ರಾಕ್ಷಸರನ್ನು ನಿಲ್ಲಿಸುತ್ತಾ ಕೊಲ್ಲುತ್ತಿದ್ದರು. ಈರೀತಿಯಲ್ಲಿ ರಾಕ್ಷಸರಿಗೂ ಮತ್ತು ಶಕ್ತಿಗಳಿಗೂ ಬಹಳ ಭಯಂಕರವಾದ ಯುದ್ಧವು ನಡೆಯಿತು. ॥೮೨॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ವಿಷಂಗಚ್ಛಲಸಂಗರೇ ಏಕೋನಸಪ್ತತಿತಮೋಽಧ್ಯಾಯಃ

ಇಲ್ಲಿಗೆ ಇತಿಹಾಸ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ವಿಷಂಗನ ಮೋಸದ ಯುದ್ಧ ಎಂಬ ಅರವತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಸಪ್ತತಿತಮೋಽಧ್ಯಾಯಃ ॥

ಎಪ್ಪತ್ತನೆಯ ಅಧ್ಯಾಯವು

ಅಥ ಶಕ್ತಿಸಮಾಹ್ವಾನಂ ಶ್ರುತ್ವಾಽಽವರಣಶಕ್ತಯಃ ।
ವಿಜ್ಞಾಯ ದೈತ್ಯಾಽಽಗಮನ ಮಣಿಮಾಪ್ರಮುಖಾಸ್ತದಾ ॥೧॥

ಸ್ವಸ್ವವಾಹ ಸಮಾರೂಢಾಃ ಶಸ್ತ್ರಾಸ್ತ್ರೈರಭಿಸಂವೃತಾಃ ।
ಯುಯುಧುರ್ದೈತ್ಯಸೇನಾಭಿಃ ಸಮೇತ್ಯ ಬಲವತ್ತರಂ ॥೨॥

ಶುಶ್ರುವುಃ ಕ್ರಮಶಃ ಸರ್ವಾಃ ಶಕ್ತಯೋ ರಥಸಂಸ್ಥಿತಾಃ ।
ವ್ಯಜಿಜ್ಞಪುಸ್ತಚ್ಛ್ರೀದೇವ್ಯೈ ನಿತ್ಯಾಃ ಕಾಮೇಶ್ವರೀಮುಖಾಃ ॥೩॥

ತಸ್ಯಾಽಽಜ್ಞಯಾಽಥ ತಾ ನಿತ್ಯಾ ಯುಯುರ್ಯುದ್ಧಾಯ ದಂಶಿತಾಃ ।
ತತ್ರಾಂಧಕಾರೇ ಯುದ್ಧಂ ತನ್ಮತ್ವಾಽತ್ಯಂತಸುದುಃಖದಂ ॥೪॥

ಅನಂತರ ಶಕ್ತಿಗಳ ಆಹ್ವಾನವನ್ನು ಕೇಳಿ ಅಣಿಮಾ ಮುಂತಾದ ಆವರಣ ಶಕ್ತಿಗಳು ರಾಕ್ಷಸರು ಯುದ್ಧಕ್ಕೆ ಬಂದಿರುತ್ತಾರೆಂಬ ವಿಷಯವನ್ನು ತಿಳಿದರು. ॥೧॥

ಆ ಶಕ್ತಿಗಳು ತಮ್ಮ ತಮ್ಮ ವಾಹನಗಳನ್ನೇರಿ ಶಸ್ತ್ರಾಸ್ತ್ರಗಳೊಡನೆ ಸಿದ್ಧರಾಗಿ ರಾಕ್ಷಸ ಸೈನ್ಯಗಳೊಂದಿಗೆ ಎದುರಾಗಿ ಕಲೆತು ಬಹಳ ಬಲವಾಗಿ ಯುದ್ಧ ಮಾಡಿದರು. ॥೨॥

ರಥದಲ್ಲಿ ಕುಳಿತಿರುವ ಸಮಸ್ತ ಶಕ್ತಿಗಳೂ ಕ್ರಮವಾಗಿ ಈ ವಿಷಯವನ್ನು ಕೇಳಿದರು. ಕಾಮೇಶ್ವರೀ ಮುಂತಾದ ಶಕ್ತಿಗಳು ಶ್ರೀ ಲಲಿತಾದೇವಿಗೆ ಈ ವಿಷಯವನ್ನು ವಿಜ್ಞಾಪನೆಮಾಡಿಕೊಂಡರು. ॥೩॥

ಅನಂತರ ದೇವಿಯ ಆಜ್ಞೆಯಂತೆ ನಿತ್ಯರಾದ ಆ ಶಕ್ತಿಗಳು ಕೋಪದಿಂದ

ಕಾಮೇಶ್ವರ್ಯಾಜ್ಞಯಾ ಜ್ವಾಲಾಮಾಲಿನೀ ಯಾ ಚತುರ್ದಶೀ ।
ನಿತ್ಯಾ ಸಾ ಪರ್ವತಾಽಽಕಾರ ವಪುಷಾ ಜ್ವಾಲಯಾಽಽವೃತಾ ॥೫॥

ಜಜ್ಜ್ವಾಲ ತಜ್ಜ್ವಾಲಯಾ ಹಿ ಪರಿತೋ ಯೋಜನಾಽಽಯುತಂ ।
ಪ್ರಕಾಶಿತಮಭೂತ್ತತ್ರ ಯುಯುಧುಃ ಶಕ್ತಯೋಽಸುರೈಃ ॥೬॥

ಜಘ್ನುರ್ವಿವಿಧಶಸ್ತ್ರೈಸ್ತಾನ್ ದೈತ್ಯಾನ್ ಯುದ್ಧಸಮಾಗತಾನ್ ।
ಏವಂ ತಾನಸುರಾನ್ ಯುದ್ಧ್ವಾ ನಿನ್ಯುರ್ಯಮಪುರಂ ದ್ರುತಂ ॥೭॥

ಅಥ ಶಿಷ್ಟಾ ದೈತ್ಯಗಣಾಃ ಪಲಾಯನಪರಾಽಭವನ್ ।
ತೇ ಶಕ್ತಿಭಿಃ ಪರಿವೃತಾ ನಾಲಭನ್ನಿರ್ಗಮಂ ಕ್ವಚಿತ್ ॥೮॥

ಯುದ್ಧಕ್ಕೆ ಸಿದ್ಧರಾದರು. ಆದರೆ ಕಾಮೇಶ್ವರೀ ಶಕ್ತಿಯು ಆ ಕತ್ತಲಿನಲ್ಲಿ ಯುದ್ಧವು ಅತ್ಯಂತ ದುಃಖಕರವೆಂದು ತಿಳಿದಳು. ॥೪॥

ಆಗ ಕಾಮೇಶ್ವರೀಶಕ್ತಿಯ ಅಪ್ಪಣೆಯ ಮೇರೆಗೆ ಹದಿನಾಲ್ಕನೆಯ ಶಕ್ತಿಯಾದ, ನಿತ್ಯಳಾದ, ಪರ್ವತದ ಆಕಾರದಂತಿರುವ ಶರೀರವುಳ್ಳ, ಜ್ವಾಲೆಯಿಂದ ಪೂರ್ಣಳಾದ ಜ್ವಾಲಾಮುಖಿಯು ತನ್ನ ಉರಿಯುತ್ತಿರುವ ಜ್ವಾಲೆಗಳನ್ನು ಹೊರಗೆಡಹಲಾರಂಭಿಸಿದಳು. ॥೫॥

ಜ್ವಾಲಾಮುಖಿಯು ಒಂದು ಯೋಜನದಷ್ಟು ಅಗಲವಾಗಿ ತನ್ನ ಜ್ವಾಲೆಗಳನ್ನು ಕಾರಲು ಉಪಕ್ರಮಿಸಿದಳು. ಆದ್ದರಿಂದ ಅಲ್ಲಿ ಎಲ್ಲೆಲ್ಲಿಯೂ ಬೆಳಕಾಗಿ ಶಕ್ತಿಗಳು ರಾಕ್ಷಸರೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದರು. ॥೬॥

ಯುದ್ಧಕ್ಕೆ ಬಂದು ಸೇರಿರುವ ಆ ರಾಕ್ಷಸರನ್ನೆಲ್ಲರನ್ನೂ ಆ ಶಕ್ತಿಗಳು ನಾನಾ ವಿಧವಾದ ಶಸ್ತ್ರಗಳಿಂದ ಕೊಲ್ಲುತ್ತಾ ಶೀಘ್ರವಾಗಿ ಅವರುಗಳನ್ನು ಯಮನ ಪಟ್ಟಣಕ್ಕೆ ಕಳುಹಿಸುತ್ತಾ ಇದ್ದರು. ॥೭॥

ಅನಂತರ ಉಳಿದ ರಾಕ್ಷಸರ ಗುಂಪಿನವರು ಪಲಾಯನ ಮಾಡಲು ಪ್ರಾರಂಭಿಸಿದರು. ಅವರನ್ನೂ ಶಕ್ತಿಗಳು ಮುತ್ತಿಕೊಂಡದ್ದರಿಂದ ಅವರು ಹೊರಗಡೆಗೆ ಹೋಗಲು ಅವಕಾಶವೇ ಆಗಲಿಲ್ಲ. ॥೮॥

ಹನ್ಯಮಾನಾಃ ಶಕ್ತಿಗಣೈರ್ಹಾಹೇತ್ಯುಚ್ಚೈರ್ವಿಚುಕ್ರುಶುಃ ।
ತದ್ದೃಷ್ಟ್ವಾ ದೈತ್ಯನಿಧನಂ ದಮನಾದ್ಯಾ ಮಹಾಸುರಾಃ ॥೯॥

ವಿಕಿರಂತಃ ಶರೈಃ ಶಕ್ತೀಃ ನ್ಯರುಂಧನ್ ಸರ್ವತೋ ಭೃಶಂ ।
ಉಚ್ಚಾವಚೈಃ ಶಸ್ತ್ರಗಣೈರ್ಜಘ್ನುಃ ಶಕ್ತೀಃ ಸಮಂತತಃ ॥೧೦॥

ಏವಂ ದೈತ್ಯೈರ್ಹತಾ ಗಾಢಂ ಶಕ್ತಯೋಽಪಿ ನಿಜಾಯುಧೈಃ ।
ವವೃಷುರ್ಗಿರಿಶೃಂಗಾಣಿ ಘನಾಘನ ಗಣಾ ಇವ ॥೧೧॥

ಮುಹೂರ್ತಮಭವದ್ಯುದ್ಧಂ ಶಕ್ತೀನಾಂ ದಮನಾದಿಭಿಃ ।
ತಾವತ್ತೇ ದೈತ್ಯಸೇನೇಶಾ ದಮನಾದ್ಯಾ ಮಹಾಬಲಾಃ ॥೧೨॥

ಶಕ್ತಿಗಳು ಈ ರೀತಿಯಾಗಿ ತಮ್ಮನ್ನು ಕೊಲ್ಲುತ್ತಿರಲು, ರಾಕ್ಷಸರು ಅಯ್ಯೋ ಅಯ್ಯೋ ಎಂದು ಕಿರಿಚಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ರಾಕ್ಷಸರ ಸಂಹಾರವಾಗುತ್ತಿದ್ದುದನ್ನು ಕಂಡು ದಮನ ಮೊದಲಾದ ರಾಕ್ಷಸರು ಶಕ್ತಿಗಳನ್ನು ಹೊಡೆಯಲಾರಂಭಿಸಿದರು. ॥೯॥

ದಮನ ಮೊದಲಾದ ರಕ್ಷಸರು ಅನೇಕ ಬಾಣಗಳನ್ನು ಬಿಟ್ಟು ಶಕ್ತಿಗಳನ್ನು ಎಲ್ಲಾ ಕಡೆಯಲ್ಲಿಯೂ ಬಲವಾಗಿ ತಡೆದರು. ಅನಂತರ ಅವರು ಎಲ್ಲಾ ಕಡೆಯಲ್ಲಿಯೂ ಅತ್ಯಂತ ದೊಡ್ಡದಾದ ಶಸ್ತ್ರಗಳಿಂದ ಶಕ್ತಿಗಳನ್ನು ಕೊಲ್ಲಲುಪಕ್ರಮಿಸಿದರು. ॥೧೦॥

ಈ ರೀತಿಯಾಗಿ ರಾಕ್ಷಸರ ಬಲವಾದ ಪೆಟ್ಟುಗಳಿಗೆ ಸಿಕ್ಕಿದ ಶಕ್ತಿಗಳೂ ಕೂಡ ತಮ್ಮ ಆಯುಧಗಳಿಂದ, ನೀರಿನಿಂದ ನಿಬಿಡವಾದ ಮೇಘಗಳು ಪರ್ವತದ ಶಿಖರದ ಮೇಲೆ ಮಳೆಯನ್ನು ಹೇಗೋ ಹಾಗೆ, ಬಾಣಗಳ ಮಳೆಯನ್ನು ಸುರಿಸಿದರು. ॥೧೧॥

ಅನಂತರ ಒಂದು ಮುಹೂರ್ತಕಾಲ ಶಕ್ತಿಗಳಿಗೂ ಮತ್ತು ದಮನ ಮುಂತಾದ ರಾಕ್ಷಸರಿಗೂ ಯುದ್ಧವು ಸಂಭವಿಸಿತು. ಅಷ್ಟರೊಳಗಾಗಿಯೇ ಮಹಾಬಲಿಷ್ಠರಾದ ದಮನ ಮೊದಲಾದ ರಾಕ್ಷಸರೂ ಸೈನ್ಯಾಧಿಪತಿಗಳೂ ಶಕ್ತಿಗಳನ್ನು ಶಸ್ತ್ರಗಳಿಂದ ಬಲವಾಗಿ ಹೊಡೆದರು. ॥೧೨॥

ಚಕ್ರುರ್ವ್ಯಾಕುಲಿತಂ ಶಕ್ತಿಗಣಂ ಶಸ್ತ್ರಾಸ್ತ್ರ ವರ್ಷಣೈಃ ।
ನಷ್ಟಬಾಹಾ ನಷ್ಟಶಸ್ತ್ರಾ ನಷ್ಟಾಂಗಾ ನಷ್ಟಜೀವಿತಾಃ ॥೧೩॥

ನ ಸೇಹುರ್ದೈತ್ಯಶಸ್ತ್ರಾಣಾಂ ಪ್ರಪಾತಂ ಪ್ರಾಣಕರ್ಷಣಂ ।
ಮೂರ್ಛಿತಾಃ ಶಕ್ತಯಃ ಕಾಶ್ಚಿತ್ ಕಾಶ್ಚಿತ್ಪ್ರಾಣಾನ್ ಜಹುಃ ಪರಾಃ॥೧೪॥

ಸಂಛಿನ್ನಾಃ ಖಂಡಶಶ್ಚಾನ್ಯಾಃ ಪಾಟಿತಾಂಗ್ಯೋ ಗತಾಯುಷಃ ।
ದೃಷ್ಟ್ವೈವಂ ನಿಹತಂ ಶಕ್ತಿಗಣಂ ಕಾಮೇಶ್ವರೀಮುಖಾಃ ॥೧೫॥

ತಿಥಿದೇವ್ಯೋ ರಥಾರೂಢಾ ಶ್ಚುಕ್ರುಧುರ್ಬಲವತ್ತರಾಃ ।
ದಮನಾದ್ಯೈಸ್ತಿಥಿಮಿತೈಃ ಸಂಗತಾಃ ಸಮಸಂಖ್ಯಕಾಃ ॥೧೬॥

ದಮನ ಮುಂತಾದ ರಾಕ್ಷಸರು ಅನೇಕ ಶಸ್ತ್ರ ಮತ್ತು ಅಸ್ತ್ರಗಳ ಸುರಿಮಳೆಗಳನ್ನು ಸುರಿಸಿ ಶಕ್ತಿಗಳು ಬಹಳ ಸಂಕಟಕ್ಕೀಡಾಗುವಂತೆ ಮಾಡಿದರು. ಶಕ್ತಿಗಳು ಈ ರೀತಿಯಲ್ಲಿ ತಮ್ಮ ತೋಳುಗಳು, ಶಸ್ತ್ರಗಳು ಮತ್ತು ಅಸ್ತ್ರಗಳು ಅವಯವಗಳು ಇವುಗಳನ್ನೂ ಮತ್ತು ಕೊನೆಯದಾಗಿ ಪ್ರಾಣವನ್ನೂ ಕಳೆದುಕೊಳ್ಳುತ್ತಿದ್ದರು. ॥೧೩॥

ರಾಕ್ಷಸರ ಶಸ್ತ್ರಗಳು ತಮ್ಮ ಪ್ರಾಣವನ್ನೇ ಸೀಗುತ್ತಿದ್ದುದರಿಂದ ಅವುಗಳನ್ನು ಶಕ್ತಿಗಳು ಸಹಿಸಲಾರದೇ ಹೋದರು. ಆಗ ಕೆಲವು ಶಕ್ತಿಗಳು ಮೂರ್ಛೆ ಹೊಂದಿದರು. ಇನ್ನು ಕೆಲವರು ಪ್ರಾಣವನ್ನೇ ಬಿಟ್ಟರು. ॥೧೪॥

ರಾಕ್ಷಸರ ಶಸ್ತ್ರಗಳಿಂದ ಕೆಲವು ಶಕ್ತಿಗಳು ಕತ್ತರಿಸಿಹೋದರು. ಮತ್ತೆ ಕೆಲವರ ಅವಯವಗಳು ಸೀಳಿಹೋಗಿ ಅವರು ಪ್ರಾಣಗಳನ್ನು ಕಳೆದುಕೊಂಡರು. ಕಾಮೇಶ್ವರೀ ಮುಂತಾದವರು ಶಕ್ತಿಗಳ ಸಮೂಹಗಳನ್ನು ಈ ರೀತಿಯಲ್ಲಿ ವಿಪರೀತವಾಗಿ ರಾಕ್ಷಸರು ಕೊಲ್ಲುತ್ತಿದ್ದುದನ್ನು ಕಂಡರು. ॥೧೫॥

ಬಹಳ ಬಲಿಷ್ಠರಾದ ಹದಿನೈದು ತಿಥಿಗಳಿಗೆ ಸಂಖ್ಯೆಯಲ್ಲಿ ಸಮಾನರಾದ ತಿಥಿಗಳಿಗೆ ಸಂಬಂಧಪಟ್ಟ ದೇವಿಯರು ಬಹಳ ಕೋಪಗೊಂಡು ರಥವನ್ನೇರಿ ದಮನ ಮುಂತಾದ ಹದಿನೈದು ಮಂದಿ ರಾಕ್ಷಸರೊಡನೆ ಯುದ್ಧವನ್ನು ಮಾಡಲು ಸಿದ್ಧರಾದರು. ॥೧೬॥

ಯುಯುಧುಃ ಶಸ್ತ್ರನಿಚಯೈಃ ಬಲವೀರ್ಯಸುಸಂಭೃತಾಃ ।
ಶಸ್ತ್ರಾಣಿ ಪ್ರತಿಶಸ್ತ್ರೈಸ್ತಾ ಅಸ್ತ್ರಾಣ್ಯಸ್ತ್ರೈರ್ವಿನಾಶ್ಯ ತಾನ್ ॥೧೭॥

ಜಘ್ನುರ್ಲಾಘವಯೋಗೇನ ದೈತ್ಯಾನ್ ಮರ್ಮಸು ಸಾಯಕೈಃ ।
ಏವಂ ತಾಭಿರ್ಹನ್ಯಮಾನಾ ದೈತ್ಯಾಃ ಕ್ರೋಧಂ ಪರಂ ಯಯುಃ॥೧೮॥

ಚಕ್ರುರತ್ಯದ್ಭುತಂ ಯುದ್ಧಂ ವೀರ್ಯಸಾಹಸ ಸಂಯುತಂ ।
ಬಡಬೇವ ಧನುರ್ವಕ್ತ್ರಾ ದುದ್ಗಿರಂತಃ ಶರಾಽರ್ಚಿಷಃ ॥೧೯॥

ಲೋಕಾನ್ ದಿಧಕ್ಷಂತ ಇವ ವ್ಯರಾಜಂತ ರಣಾಽಜಿರೇ ।
ಅಥ ತಾಂ ಸ್ತಿಥಿದೇವ್ಯಸ್ತಾ ಯುಯುಧ್ವಾಽದ್ಭುತಪರಾಕ್ರಮಾನ್ ॥೨೦॥

ಬಲಶೌರ್ಯಾದಿಗಳು ತುಂಬಿರುವ ತಿಥಿ ದೇವಿಯರು ತಮ್ಮ ಶಸ್ತ್ರಗಳ ಸಮೂಹ ಗಳಿಂದ ದಮನ ಮುಂತಾದ ರಾಕ್ಷಸರೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದರು. ಇವರು ರಾಕ್ಷಸರ ಶಸ್ತ್ರಗಳನ್ನು ತಮ್ಮ ಶಸ್ತ್ರಗಳಿಂದಲೂ ಮತ್ತು ಅವರ ಅಸ್ತ್ರ ಗಳನ್ನು ತಮ್ಮ ಅಸ್ತ್ರಗಳಿಂದಲೂ ನಾಶಮಾಡುತ್ತಿದ್ದರು. ॥೧೭॥

ಈ ದೇವಿಯರು ತಮ್ಮ ಕೈಚಳಕಗಳಿಂದ ಬಾಣಪ್ರಯೋಗವನ್ನು ಮಾಡಿ ರಾಕ್ಷಸರ ಮರ್ಮಸ್ಥಾನಗಳಿಗೆ ಹೊಡೆದರು. ಈರೀತಿಯಾಗಿ ಅವರು, ಬಾಣಗಳ ಹೊಡೆತಕ್ಕೆ ಸಿಕ್ಕಿದ ರಾಕ್ಷಸರು, ಬಹಳ ಕೋಪಗೊಂಡರು. ॥೧೮॥

ಆಗ ದಮನ ಮುಂತಾದ ರಾಕ್ಷಸರು ತಮ್ಮ ಪರಾಕ್ರಮದ ಸಾಹಸ ಮುಂತಾದುವನ್ನು ತೋರಿಸುವ ಅತ್ಯಂತ ಆಶ್ಚರ್ಯಕರವಾದ ಯುದ್ಧವನ್ನು ಮಾಡಿ ದರು. ಬಡಬಾ ಎಂಬ ಸಮುದ್ರದೊಳಗಿನ ಬೆಂಕಿಯಂತೆ, ವಿಶೇಷವಾಗಿ ಬೆಂಕಿಯ ಕಿಡಿಗಳಂತಿರುವ ಬಾಣಗಳನ್ನು ಹಾರಿಸುತ್ತಾ, ಅವರು ತಮ್ಮ ಧನುಸ್ಸುಗಳಿಂದ ಬಲವಾಗಿ ಬಾಣಗಳ ಪ್ರಯೋಗಗಳನ್ನೂ ಮಾಡುತ್ತಿದ್ದರು. ॥೧೯॥

ಆ ರಾಕ್ಷಸರು ಲೋಕಗಳನ್ನೆಲ್ಲವನ್ನೂ ಸುಟ್ಟುಹಾಕಿಬಿಡುವರೋ ಎಂಬಂತೆ ಯುದ್ಧಭೂಮಿಯಲ್ಲಿ ಪ್ರಕಾಶಿಸುತ್ತಿದ್ದರು. ಅನಂತರ ತಿಥಿದೇವಿಯರೂ ಕೂಡ ಆಶ್ಚರ್ಯಕರವಾದ ಪರಾಕ್ರಮವುಳ್ಳ ಅವರೊಂದಿಗೆ ಅಚ್ಚರಿಯನ್ನುಂಟುಮಾಡುವ ರೀತಿಯಲ್ಲಿ ಯುದ್ಧಮಾಡುತ್ತಿದ್ದರು! ॥೨೦॥

ಅಶ್ವಾನ್ ರಥಂ ಸಾರಥಿಂ ಚ ಧ್ವಜಂ ಛಿತ್ವಾ ಕ್ರಮೇಣ ತಾನ್ ।
ಭಙ್ತ್ವಾ ಚಾಪಂ ತೀಕ್ಷ್ಣ ಭಲ್ಲೈಃ ಶಿರಶ್ಛಿಚ್ಛಿದುರೋಜಸಾ ॥೨೧॥

ಅಥ ತೇಷು ಪ್ರಣಷ್ಟೇಷು ದೈತ್ಯೇಷು ದಮನಾದಿಷು ।
ವಿದ್ರುತಾ ದೈತ್ಯಸುಭಟಾಃ ಶಿಷ್ಟಾ ಭೀತ್ಯಾ ದಿಶೋ ದಶ ॥೨೨॥

ವಿಷಂಗೋ ಗಜ ಸಂರೂಢೋ ಯುಯೋಧ ತಿಥಿಶಕ್ತಿಭಿಃ ।
ಬಹುಭಿರ್ಬಲವಾನೇಕೋ ಯುಯೋಧಾತಿರುಷಾಽನ್ವಿತಃ ॥೨೩॥

ಯುಧ್ಯಂತಮತಿಧೈರ್ಯೇಣ ಪರಿವಾರ್ಯ ಸಮಂತತಃ ।
ಜಘ್ನುಃ ಕಾಮೇಶ್ವರಿಮುಖಾಃ ನಿತ್ಯಾಃ ಸಾಯಕವರ್ಷಣೈಃ ॥೨೪॥

ಅಥ ಕಾಮೇಶ್ವರೀ ಪ್ರಾಹ ವಿಷಂಗಂ ಯುದ್ಧಸಂಗತಂ ।
ದೈತ್ಯಾಽಧಮಾಲಂ ಯುದ್ಧೇನ ಪ್ರಾಣಾಽಂತ ಕರಣೇನ ತೇ ॥೨೫॥

ತಿಥಿದೇವಿಯರು ಆ ರಾಕ್ಷಸರ ಕುದುರೆಗಳು, ರಥ, ಸಾರಥಿ, ಬಾವುಟ ಇವುಗಳನ್ನೆಲ್ಲವನ್ನೂ ಕ್ರಮವಾಗಿ ಕತ್ತರಿಸಿ, ಅವರ ಬಿಲ್ಲನ್ನೂ ತಮ್ಮ ಭರ್ಜಿಗಳಿಂದ ತುಂಡರಿಸಿ, ಅವುಗಳಿಂದಲೇ ಬಹಳ ಶಕ್ತಿಯಿಂದ ಅವರ ತಲೆಗಳನ್ನೂ ಕಡಿದರು. ॥೨೧॥

ಅನಂತರ ದಮನ ಮೊದಲಾದ ರಾಕ್ಷಸರೂ ನಾಶವಾಗಲಾಗಿ ಉಳಿದ ರಾಕ್ಷಸ ಶ್ರೇಷ್ಠ ಸೈನಿಕರೂ ಕೂಡ ಭಯದಿಂದ ಹತ್ತುದಿಕ್ಕುಗಳಿಗೂ ಓಡುತ್ತಿದ್ದರು. ॥೨೨॥

ಬಲಿಷ್ಠನಾದ ವಿಷಂಗರಾಕ್ಷಸನು ಆನೆಯನ್ನೇರಿ ಒಬ್ಬಂಟಿಗನಾಗಿಯೇ ಬಹಳ ಕೋಪದಿಂದ ಕೂಡಿದವನಾಗಿ ತಿಥಿಶಕ್ತಿಗಳೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದನು. ॥೨೩॥

ವಿಷಂಗರಾಕ್ಷಸನು ಬಹಳ ಧೈರ್ಯದಿಂದ ಕಾದಾಡುತ್ತಿರಲು ಕಾಮೇಶ್ವರೀ ಮೊದಲಾದ ನಿತ್ಯರಾದ ಶಕ್ತಿಯರು ಅವನನ್ನು ಸುತ್ತುಗಟ್ಟಿ ಬಾಣಗಳ ಸುರಿಮಳೆಗಳಿಂದ ಹೊಡೆಯಲಾರಂಭಿಸಿದರು. ॥೨೪॥

ಅನಂತರ ಯುದ್ಧದಲ್ಲಿ ವಿಶೇಷವಾಗಿ ತೊಡಗಿದ್ದ ವಿಷಂಗರಾಕ್ಷಸನನ್ನು ಕುರಿತು ಕಾಮೇಶ್ವರಿಯು, ಎಲೋ ನೀಚರಾಕ್ಷಸನೇ, ನಿನ್ನ ಪ್ರಾಣಗಳನ್ನೇ ನೀಗುವ ಈ ಯುದ್ಧದ ಪ್ರಯತ್ನವನ್ನು ನಿಲ್ಲಿಸು! ಎಂದಳು. ॥೨೫॥

ಶಸ್ತ್ರಂ ತ್ಯಕ್ತ್ವಾ ಪಾದಚಾರೋ ಗಚ್ಛ ಶೀಘ್ರಂ ಯಥಾ ಸುಖಂ ।
ವಿಷಮಂ ಬಹುಭಿರ್ಯುದ್ಧ ಮೇಕಸ್ಯ ಪ್ರತಿಭಾತಿ ತೇ ॥೨೬॥

ಶ್ರುತ್ವಾ ಕಾಮೇಶ್ವರೀವಾಕ್ಯಂ ಜಹಾಸೋಚ್ಚೈರ್ಮಹಾಸುರಃ ।
ಕಿಂ ಕತ್ಥಸಿ ವೃಥಾ ದುಷ್ಟೇ ಹಿತ್ವಾ ಲಜ್ಜಾಂ ಸುದೂರತಃ ॥೨೭॥

ಅಹಮೇಕಃ ಕ್ಷಣೇನೈವ ಸರ್ವಾಂ ಶಕ್ತಿ ಚಮೂಮಿಮಾಂ ।
ಹತ್ವಾ ವೋ ಲಲಿತಾಂ ದೇವೀಂ ಬದ್ಧ್ವಾ ಜೀವಗ್ರಹೇಣ ವೈ ॥೨೮॥

ನೇಷ್ಯಾಮ್ಯತ್ರ ನ ಸಂದೇಹಃ ಶಸ್ತ್ರಂ ತೇ ಪುರ ಆಲಭೇ ।
ಸ್ತ್ರೀಷು ಕಾರುಣಿಕತ್ವಂ ಮೇ ಸರ್ವಥಾ ತೇನ ವೈ ಚಿರಂ ॥೨೯॥

ಇತ್ಯುಕ್ತ್ವಾ ನಿಶಿತೈರ್ಭಲ್ಲೈಃ ಪ್ರತ್ಯೇಕಂ ತಾಃ ಜಘಾನ ಹ ।
ತಚ್ಛ್ರುತ್ವಾ ಪ್ರಾಹ ನಿತ್ಯಾಽಽದ್ಯಾ ಏವಂ ಚೇದಸ್ತು ವೈ ರಣಃ ॥೩೦॥

ಆದ್ದರಿಂದ ಶಸ್ತ್ರವನ್ನು ಕೆಳಗಡೆ ಇಟ್ಟು ಪಾದಚಾರಿಯಾಗಿ ಸುಖವಾಗಿ ಶೀಘ್ರವಾಗಿ ಹಿಂತಿರುಗು. ಅನೇಕರಾದ ನಮ್ಮೊಂದಿಗೆ ನೀನೊಬ್ಬನೇ ಯುದ್ಧ ಮಾಡಲು ತೊಡಗಿರುವುದು ಧರ್ಮಯುದ್ಧದ ನೀತಿಗೆ ವಿರುದ್ಧವೆಂದು ತೋರುತ್ತದೆ. ॥೨೬॥

ಮಹಾರಾಕ್ಷಸನಾದ ವಿಷಂಗನು ಕಾಮೇಶ್ವರಿಯ ಈ ಮಾತನ್ನು ಕೇಳಿ ಬಹಳ ಗಟ್ಟಿಯಾಗಿ ನಕ್ಕನು. ಎಲೈ ನೀಚಳೇ, ದೂರದಲ್ಲಿಯೇ ನಿಂತುಕೊಂಡು ನಾಚಿಕೆಯನ್ನು ಬಿಟ್ಟು ಏನೇನನ್ನೋ ಹೇಳುತ್ತೀಯೆ ! ಎಂದನು. ॥೨೭॥

ನಾನೊಬ್ಬನೇ ಕ್ಷಣಮಾತ್ರದಲ್ಲಿಯೇ ಈ ಶಕ್ತಿಗಳ ಸೈನ್ಯವೆಲ್ಲವನ್ನೂ ಕೊಂದು ನಿಮ್ಮ ಲಲಿತಾದೇವಿಯನ್ನು ಜೀವಸಹಿತ ಸೆರೆಹಿಡಿದುಕೊಂಡು ಹೋಗುವೆನು. ॥೨೮॥

ಈ ಪರಿಯಾಗಿ ಅವಳನ್ನು ಒಯ್ಯುವೆನು. ಹೀಗಿದ್ದರೂ ಸ್ತ್ರೀಯರಲ್ಲಿ ಕರುಣೆಯನ್ನು ತೋರಿಸುವವನಾದುದರಿಂದಲೇ ನಾನು ಈ ವಿಷಯದಲ್ಲಿ ಬಹಳ ಕಾಲದಿಂದಲೂ ಸಾವಕಾಶವಾಗಿದ್ದೆನು. ಆದರೆ ಈಗ ನಾನು ಮುಂಚೆ ನಿನ್ನ ಶಸ್ತ್ರವನ್ನೇ ನಾಶಮಾಡುವೆನು. ॥೨೯॥

ಈ ರೀತಿಯಲ್ಲಿ ಹೇಳಿ ವಿಷಂಗನು ತನ್ನ ತೀಕ್ಷ್ಣವಾದ ಭರ್ಜಿಗಳಿಂದ

ಏಕೈಕಯಾ ಮಯಾ ಸಾಕಂ ಸಮುಭಾವೇನ ಸತ್ವರಂ ।
ಇತ್ಯುಕ್ತ್ವಾ ದೈತ್ಯರಾಜಂ ತಂ ಪ್ರಾಹ ಭೂಯೋ ಮಹೇಶ್ವರೀ ॥೩೧॥

ಭಗಮಾಲಿನಿ ಮುಖ್ಯಾ ಹೇ ಮದ್ವಾಕ್ಯಂ ಶೃಣುತಾಽಽದರಾತ್ ।
ಅಹಮೇನಂ ಯೋಧಯಾಮಿ ಯೂಯಮೇನಂ ಹಿ ರಕ್ಷಥ ॥೩೨॥

ಯಥಾ ಪಲಾಯ್ಯ ನೋ ಗಚ್ಛೇತ್ಸಾವಧಾನೇನ ಸರ್ವತಃ ।
ಇತ್ಯುಕ್ತ್ವಾ ದೃಢಬಾಣೇನ ವಿದ್ಧ್ವಾ ದೈತ್ಯಮುವಾಚ ಹ ॥೩೩॥

ರೇ ಮೂಢ ದೈತ್ಯ ಮಯಿ ತ್ವಂ ದಯಾಂ ತ್ಯಕ್ತ್ವಾ ಹಿ ಸರ್ವಥಾ ।
ಯುದ್ಧ್ಯಸ್ವ ಸರ್ವವಿರ್ಯೇಣ ಪಶ್ಯಾಮಿ ತವ ಪೌರುಷಂ ॥೩೪॥

ಪ್ರತ್ಯೇಕವಾಗಿ ಆವರನ್ನು ಹೊಡೆದನು. ಅವನ ಮಾತನ್ನು ಕೇಳಿ ನಿತ್ಯಾ ಮುಂತಾದ ಶಕ್ತಿಗಳು ಹಾಗಾದರೆ ಯುದ್ಧವೇ ನಡೆಯಲಿ. ಎಂದರು. ||೩೦||

ನೀನು ನಮ್ಮಲ್ಲಿ ಪ್ರತಿಯೊಬ್ಬರ ಮೇಲೂ ಪ್ರತ್ಯೇಕವಾಗಿ ಶೀಘ್ರವಾಗಿ ಯುದ್ಧಮಾಡು. ಎಂದು ಕಾಮೇಶ್ವರಿಯು ಹೇಳಿ ಮಹೇಶ್ವರಿಯು ಪುನಃ ತಮ್ಮ ಕಡೆಯವರನ್ನು ಕುರಿತು ಈ ರೀತಿಯಲ್ಲಿ ಹೇಳಿದಳು. ||೩೧||

ಎಲೈ ಭಗಮಾಲಿನೀ ಮುಂತಾದ ಶಕ್ತಿದೇವಿಯರೇ, ನನ್ನ ಮಾತನ್ನು ವಿಶ್ವಾಸಪೂರ್ವಕವಾಗಿ ಕೇಳಿರಿ. ನಾನು ಇವನೊಂದಿಗೆ ಯುದ್ಧವನ್ನು ಮಾಡುವೆನು. ಇವನು ಹಿಂದಕ್ಕೆ ಓಡಿಹೋಗದಂತೆ ಇವನಿಗೆ ಕಾವಲಾಗಿರಿ. ಎಂದಳು. ||೩೨||

ಇವನು ಪಲಾಯನಮಾಡಿ ಹೋಗದಂತೆ ನೀವುಗಳು ಬಹಳ ಜಾಗರೂಕತೆಯಿಂದ ಎಲ್ಲಾ ಕಡೆಯಲ್ಲಿಯೂ ಇವನಿಗೆ ಕಾವಲಾಗಿರಿ. ಎಂದು ಕಾಮೇಶ್ವರಿಯು ಹೇಳುತ್ತಾ ಆವಳು ಅನಂತರ ಬಲವಾದ ಬಾಣದಿಂದ ಆ ರಾಕ್ಷಸನನ್ನೇ ಹೊಡೆದು, ಅವನನ್ನು ಕುರಿತು, ಈ ರೀತಿಯಲ್ಲಿ ಹೇಳಿದಳು. ||೩೩||

ಎಲೈ ಮೂಢನಾದ ರಾಕ್ಷಸನೇ, ನೀನು ನನ್ನಲ್ಲಿ ಸ್ವಲ್ಪವೂ ಕರುಣೆಯನ್ನು ತೋರಿಸದೇ ನಿನ್ನ ಪರಾಕ್ರಮವೆಲ್ಲವನ್ನೂ ತೋರಿಸಿ ಯುದ್ಧಮಾಡು. ನಾನು ನಿನ್ನ ಶೌರ್ಯವನ್ನು ನೋಡುವೆನು! ಎಂದಳು. ||೩೪||

ಯದಿ ತ್ವಂ ಪುರುಷಸ್ತರ್ಹಿ ಅಪಲಾಯ್ಯ ವ್ರಜಷ್ಯಸಿ ।
ಹತಂ ತ್ವಾಂ ನೈವ ಹಿಂಸ್ಯಾಮಿ ಕುರ್ಯಾಂ ತ್ವಾಂ ಹಿ ಪಲಾಯಿತಂ ॥೩೫॥

ಶ್ರುತ್ವಾ ಪುರುಷಭಾವೇನ ಯುದ್ಧ್ಯಸ್ವ ವಿಗತತ್ರಪಃ ।
ಇತ್ಯುಕ್ತ್ವಾ ನಿಶಿತಾನ್ ಭಲ್ಲಾನ್ ದೇಹೇ ತಸ್ಯಸಮಾಕ್ಷಿಪತ್ ॥೩೬॥

ಯುಯುಧೇ ಸೋಽಪಿ ಕಾಮೇಶ್ಯಾ ಬಲಮಾಹಾರ್ಯರೋಷತಃ ।
ಅಥ ಕರ್ಣಾಂತ ಪೂರ್ಣೇನ ಶರೇಣ ತಸ್ಯ ವಾಹನಂ ॥೩೭॥

ಜಘಾನ ಕುಂಭಯೋರ್ಮಧ್ಯೇ ತೇನ ಬಾಣೇನ ಸ ದ್ವಿಪಃ ।
ದ್ವಿಧಾ ವಿದಲಿತೋ ಭೂಮೌ ಪಪಾತ ವ್ಯಸುರದ್ರಿವತ್ ॥೩೮॥

ಹತವಾಹೋ ವಿಷಂಗೋಽಪಿ ಗೃಹೀತ್ವಾ ಸಶರಂ ಧನುಃ ।
ಯೋದ್ಧುಮಭ್ಯಾಯಯೌ ಕ್ರೋಧಾದ್ಭ್ರುಕುಟೀ ಕುಟಿಲಾಽಽನನಃ॥೩೯॥

ನೀನು ಗಂಡಸೇ ಆಗಿದ್ದರೆ ಪಲಾಯನಮಾಡಿ ಹೋಗಲಾರೆ. ನೀನು ಪೆಟ್ಟನ್ನು ಪಡೆದಿರುವೆಯಾದುದರಿಂದ ಪಲಾಯನಮಾಡಲು ಇಷ್ಟಪಡುವುದೇ ಆದರೆ ನಿನ್ನನ್ನು ಹಿಂಸೆಮಾಡದೇ ನಿನ್ನಲ್ಲಿ ಕರುಣೆಯಿಂದ ಬಿಟ್ಟುಬಿಡುವೆನು. ॥೩೫॥

ಆದ್ದರಿಂದ ನಾಚಿಕೆಯನ್ನು ಬಿಟ್ಟು ಗಂಡಸೆಂಬ ಭಾವದಿಂದ ಧೈನ್ಯವನ್ನು ಹೊಂದದೆ ನನ್ನೊಂದಿಗೆ ಯುದ್ಧವನ್ನು ಮಾಡು. ಈರೀತಿಯಾಗಿ ಹೇಳಿ ಆ ಶಕ್ತಿಯು ತೀಕ್ಷ್ಣವಾದ ಭರ್ಜಿಗಳನ್ನು ಆ ರಾಕ್ಷಸನ ದೇಹಕ್ಕೆ ಹೊಡೆದಳು. ॥೩೬॥

ಅವನೂ ಕೂಡ ಬಹಳ ಕೋಪದಿಂದ ತನ್ನ ಶಕ್ತಿಎಲ್ಲವನ್ನೂ ಉಪಯೋಗಿಸಿ ಕಾಮೇಶ್ವರಿಯೊಂದಿಗೆ ಯುದ್ಧಮಾಡಿದನು. ಅನಂತರ ಆ ಶಕ್ತಿಯು ತನ್ನ ಒಂದು ಬಾಣವನ್ನು ಕಿವಿಯವರೆವಿಗೂ ಸೆಳೆದು ಅವನ ವಾಹನಕ್ಕೆ ಹೊಡೆದಳು. ॥೩೭॥

ಆ ಶಕ್ತಿಯು ರಾಕ್ಷಸನ ವಾಹನವಾದ ಆನೆಯ ಕುಂಭಗಳ ಸ್ಥಳಕ್ಕೆ ಆ ಬಾಣವನ್ನು ಹೊಡೆದಳು. ಆ ಆನೆಯು ಎರಡಾಗಿ ಸೀಳಿ ಪ್ರಾಣವನ್ನು ಬಿಟ್ಟು, ಪರ್ವತದೋಪಾದಿಯಲ್ಲಿ, ಭೂಮಿಯ ಮೇಲೆ ಬಿದ್ದಿತು. ॥೩೮॥

ವಿಷಂಗನು ತನ್ನ ವಾಹನವಾದ ಆನೆಯು ನಾಶವಾಗಲು ತನ್ನ ಬಾಣಸಮೇತವಾದ ಬಿಲ್ಲನ್ನು ತೆಗೆದುಕೊಂಡು ಕೋಪದಿಂದ ಹುಬ್ಬುಗಂಟ್ಟಿಕ್ಕಿದ ಮುಖವುಳ್ಳವನಾಗಿ ಆ ಶಕ್ತಿಯೊಂದಿಗೆ ಯುದ್ಧಮಾಡಲು ಹೊರಟನು. ॥೩೯॥

ಅಥ ತ್ರಿಭಿಃ ಶರೈರ್ದೇವೀ ಧನುಸ್ತೂಣೀರ ಮೇವ ಚ ।
ಮುಕುಟಂ ಚಾಽಪಿ ಚಿಚ್ಛೇದ ಕಾಮೇಶೀ ಕ್ಷಣಮಾತ್ರತಃ ॥೪೦॥

ತತಃ ಕರಾಲಂ ವಿಪುಲ ಮಾದಾಯ ಕರವಾಲಕಂ ।
ಉಪಧಾವದ್ಯಾವದಸೌ ತಾವತ್ತೀಕ್ಷ್ಣೇಷುಣಾ ಪುನಃ ॥೪೧॥

ತ್ರಿಧಾ ಛಿತ್ವಾ ಮಹಾಖಡ್ಗಂ ಸ್ಮಿತಪೂರ್ವಮುವಾಚ ತಂ ।
ದೈತ್ಯಶೂರತಮಸ್ತ್ವಂ ವೈ ಕಥಮೇವಂ ವಿಯುಧ್ಯಸಿ ॥೪೨॥

ಶಸ್ತ್ರಂ ನ ಖಲು ಕಸ್ಮಾನ್ಮೇ ಪಾತಿತಂ ಕಿಂಚಿದಂಗಕೇ ।
ಕಿಂ ದಯಾ ತೇ ಸುಮಹತೀ ಜಾತಃ ಕಸ್ಮಾನ್ನಿರಾಯುಧಃ ॥೪೩॥

ಕಥಂ ತಾಂ ಲಲಿತಾಂ ಬದ್ಧ್ವಾಽಸ್ಮಾನ್ ಜಿತ್ವಾ ನೇಷ್ಯಸೀರಯ ।
ಉಪಲಬ್ಧಂ ತ್ವಯಾ ಶಸ್ತ್ರಂ ವ್ಯರ್ಥಂ ವಿಜಯ ಹೇತವೇ ॥೪೪॥

ಅನಂತರ ಕಾಮೇಶ್ವರೀದೇವಿಯು ಮೂರು ಬಾಣಗಳಿಂದ ಅವನ ಬಿಲ್ಲನ್ನೂ ಮತ್ತು ಬತ್ತಳಿಕೆ ಕಿರೀಟ ಮುಂತಾದುವುಗಳನ್ನು ಕ್ಷಣಮಾತ್ರದಲ್ಲಿಯೇ ಕತ್ತರಿಸಿದಳು. ॥೪೦॥

ಆಮೇಲೆ ಆ ರಾಕ್ಷಸನು ದೊಡ್ಡದಾದ ಮತ್ತು ಭಯಂಕರವಾದ ಕತ್ತಿಯನ್ನು ಹಿಡಿದುಕೊಂಡು ಇವಳ ಹತ್ತಿರಕ್ಕೆ ಓಡುವಷ್ಟರಲ್ಲೇ ಆಕೆಯು ಇವನ ಮೇಲೆ ತೀಕ್ಷ್ಣವಾದ ಬಾಣ ಒಂದನ್ನು ಪುನಃ ಪ್ರಯೋಗಿಸಿದಳು. ॥೪೧॥

ಆಕೆಯು ತನ್ನ ಬಾಣದಿಂದ ಅವನ ದೊಡ್ಡ ಕತ್ತಿಯನ್ನು ಮೂರುತುಂಡಾಗಿ ಕತ್ತರಿಸಿ ಮುಗುಳುನಗೆಯೊಡನೆ ಅವನನ್ನು ಕುರಿತು, ಎಲೋ ರಾಕ್ಷಸನೇ, ನೀನು ಬಹಳ ಶೂರನಲ್ಲವೇ ? ಹೀಗೆಯೋ ಯುದ್ಧಮಾಡುವುದು ? ಎಂದಳು. ॥೪೨॥

ನನ್ನ ಶರೀರದ ಯಾವ ಅವಯವಗಳಿಗೂ ಶಸ್ತ್ರವನ್ನೇಕೆ ಹೊಡೆಯಲಿಲ್ಲ? ನಿನಗೆ ನನ್ನ ಮೇಲೆ ಬಹಳ ಕರುಣೆಯೇನೋ ? ಏತಕ್ಕಾಗಿ ಆಯುಧವೇ ಇಲ್ಲದವನಾಗಿದ್ದೀಯೆ ? ॥೪೩॥

ಹೀಗಿರುವಾಗ ಲಲಿತಾದೇವಿಯನ್ನೂ ಮತ್ತು ನಮ್ಮನ್ನೂ ಕಟ್ಟಿ ಹೇಗೆ ತೆಗೆದುಕೊಂಡು ಹೋಗುವೆ? ಹೇಳು. ಆದುದರಿಂದ ನೀನು ಜಯಿಸುತ್ತೇನೆಂಬ ಭ್ರಾಂತಿಯಿಂದ ಶಸ್ತ್ರವನ್ನು ಹಿಡಿದಿರುವುದು ವ್ಯರ್ಥವೆಂದು ತಿಳಿದು ಹಿಂತಿರುಗು. ॥೪೪॥

ಪಲಾಯ್ಯ ವಾ ಗಚ್ಛ ಮಮ ಪುರತೋ ಯದಿ ಪೌರುಷಂ ।
ಶ್ರುತ್ವಾ ಕಾಮೇಶ್ವರೀವಾಕ್ಯಂ ಕಟುಕಂ ಸೋಪಹಾಸಕಂ ॥೪೫॥

ಮುಷ್ಟಿಮುದ್ಯಮ್ಯ ತಾಂ ಹಂತುಂ ಪ್ರಯಯೌ ಸಂಮುಖೇ ತದಾ ।
ತದಾ ತ್ರಿಭಿಃ ಶರೈರ್ಭೂಯೋ ವಿವ್ಯಾಧಾಽತಿ ಬಲೇನ ತಂ ॥೪೬॥

ಪಾದಹೃನ್ಮುಷ್ಟಿಷು ತಥಾಽಽಹತಸ್ಥಾನ ತ್ರಯೋಽಽತುರಃ ।
ಪದಾನ್ನ ಚಲಿತುಂ ದ್ರಷ್ಟುಂ ಮುಷ್ಟಿಂ ಚ ವಿನಿವರ್ತಿತುಂ ॥೪೭॥

ಅಸಮರ್ಥೋ ಲಜ್ಜಿತೋಽಥ ಗತೋಽಂತರ್ಧಾನಮಾಶು ವೈ ।
ತಾವತ್ಕಾಮೇಶ್ವರೀದೇವೀ ಶರಜಾಲೈಶ್ಚ ಸರ್ವತಃ ॥೪೮॥

ಎಲೋ ರಾಕ್ಷಸನೇ, ಯುದ್ಧದಿಂದ ಪಲಾಯನ ಮಾಡಿ ಹೋಗು. ಇಲ್ಲವೇ ನನ್ನ ಮುಂದೆ ನಿಂತು ನಿನ್ನ ಪೌರುಷವನ್ನು ತೋರಿಸು. ವಿಷಂಗನು ಕಾಮೇಶ್ವರಿಯ ಬಹಳ ನೋವನ್ನುಂಟುಮಾಡುವ ಹಾಸ್ಯಕರವಾದ ಈ ಮಾತುಗಳನ್ನು ಕೇಳಿದನು. ॥೪೫॥

ಆಗ ವಿಷಂಗನೂ ಮುಷ್ಟಿಯನ್ನು ಕಟ್ಟಿಕೊಂಡು ಅವಳನ್ನು ಕೊಲ್ಲಲು ಎದುರಿಗೆ ಹೋದನು. ಅದಕ್ಕೆ ಪ್ರತಿಯಾಗಿ ಕಾಮೇಶ್ವರೀದೇವಿಯು ಪುನಃ ಮೂರು ಬಾಣಗಳನ್ನು ಪ್ರಯೋಗಿಸಿ ಅವನನ್ನು ಬಲವಾಗಿ ಹೊಡೆದಳು. ॥೪೬॥

ಆಗ ವಿಷಂಗರಾಕ್ಷಸನ ಪಾದಗಳು ಹೃದಯ ಮತ್ತು ಮುಷ್ಟಿಗಳಿಗೆ ಬಹಳ ಪೆಟ್ಟುಬಿದ್ದುದರಿಂದ ಅವನು ಪೀಡೆಗೆ ಒಳಗಾಗಿ ಪಾದಗಳನ್ನು ಹಿಂತಿರುಗಿಸುವುದಕ್ಕೂ ನೋಡುವುದಕ್ಕೂ, ಅಥವಾ ಮುಷ್ಟಿಯನ್ನು ಹಿಂತಿರುಗಿಸುವುದಕ್ಕೂ ಸಮರ್ಥನಾಗಲೇ ಇಲ್ಲ. ॥೪೭॥

ಈ ರೀತಿಯಲ್ಲಿ ಅಸಮರ್ಥನಾಗಿ ನಾಚಿಕೆಗೊಂಡು ಶೀಘ್ರದಲ್ಲಿಯೇ ವಿಷಂಗನು ಅಂತರ್ಧಾನವಾದನು. ಅಷ್ಟರೊಳಗಾಗಿಯೇ ಕಾಮೇಶ್ವರೀದೇವಿಯು ಬಾಣಗಳ ಸುರಿಮಳೆಗಳಿಂದ ಎಲ್ಲಾ ಕಡೆಯಲ್ಲಿಯೂ ಅವನನ್ನು ತಡೆದಳು. ॥೪೮॥

ರುರೋಧ ಮಾರ್ಗಂ ದೈತ್ಯಸ್ಯ ತದದ್ಭುತ ಮಿವಾಽಭವತ್ ।
ರುದ್ಧೋಽಥ ಸರ್ವತೋ ಮಾರ್ಗೇ ಮಾಯಾಂ ದೈತ್ಯೋ ವಿತಾನಯುತ್॥೪೯॥

ಶಸ್ತ್ರಾಽಶ್ಮರುಧಿರಾಽಹೀನಾಂ ಪಾಂಶ್ವಂಗಾರಮಹೀಭೃತಾಂ ।
ವೃಷ್ಟಿಂ ಚಕ್ರೇ ಮಹಾಭೂತಾನ್ ರಾಕ್ಷಸಪ್ರೇತಸಂಘಕಾನ್ ॥೫೦॥

ಪ್ರಾದುಶ್ಚಕಾರ ವಿವಿಧಾಂ ಮಾಯಾಮತಿಭಯಾಽವಹಾಂ ।
ಸೃಷ್ಟಾಂ ಸೃಷ್ಟಾಂ ಚ ತಾಂ ಮಾಯಾಂ ದೈತ್ಯಸ್ಯಾಽಸ್ತ್ರೈರಪಾಕರೋತ್॥೫೧॥

ಅಥೋನ್ಮತ್ತೋ ಮಹಾಮೂರ್ತಿಃ ಕರಾಲಃ ಕೃಷ್ಣಪಿಂಗಲಃ ।
ಸಹಸ್ರವಕ್ತ್ರೋ ನಿಯುತ ಹಸ್ತಪಾದೋಽತಿವೇಗವಾನ್ ॥೫೨॥

ಕಾಮೇಶ್ವರೀದೇವಿಯು ಈ ರೀತಿಯಾಗಿ ಆ ರಾಕ್ಷಸನ ಮಾರ್ಗವೆಲ್ಲವನ್ನೂ ತಡೆದಿದ್ದುದು ಅತ್ಯಂತ ಆಶ್ಚರ್ಯಕರವಾಗಿತ್ತು. ಈ ರೀತಿಯಲ್ಲಿ ಎಲ್ಲಾ ದಾರಿಗಳನ್ನೂ ತಡೆಯಲಾಗಿ ಆ ರಾಕ್ಷಸನು ತನ್ನ ಮಾಯೆಯನ್ನು ಬೀಸಿದನು. ||೪೯||

ವಿಷಂಗರಾಕ್ಷಸನು ಆ ಮಾಯೆಯಿಂದ ಶಸ್ತ್ರಗಳು, ಕಲ್ಲುಗಳು, ರಕ್ತ ಪ್ರವಾಹ, ಹಾವುಗಳು, ಧೂಳು, ಬೆಂಕಿಯ ಪರ್ವತಗಳು, ಮಹಾಭೂತಗಳು, ರಾಕ್ಷಸರು, ಪ್ರೇತಗಳ ಸಮೂಹಗಳು ಇವುಗಳ ಮಳೆಯನ್ನು ಅವಳ ಮೇಲೆ ಕರೆದನು. ||೫೦||

ವಿಷಂಗರಾಕ್ಷಸನು ಬಹಳ ಭಯಂಕರವಾದ ನಾನಾವಿಧವಾದ ಮಾಯೆ ಯನ್ನೇ ಹೊರಗೆಡಹಿದನು. ಈ ಮಾಯೆಯನ್ನು ರಾಕ್ಷಸನು ಸೃಷ್ಟಿಮಾಡುತ್ತಿದ್ದ ಕೂಡಲೇ ಕಾಮೇಶ್ವರಿಯು ಅವನ್ನು ಅಸ್ತ್ರಪ್ರಯೋಗಗಳ ಮೂಲಕ ನಾಶಮಾಡು ತ್ತಿದ್ದಳು. ||೫೧||

ಅನಂತರ ವಿಷಂಗರಾಕ್ಷಸನೇ ಸಾವಿರ ಮುಖಗಳೂ ಇಪ್ಪತ್ತು ಸಾವಿರ ಕೈಗಳೂ ಮತ್ತು ಪಾದಗಳೂ ಉಳ್ಳ, ಭಯಂಕರವೂ, ಕಪ್ಪು ಮತ್ತು ಹೊಂಬಣ್ಣ ಗಳ ಮಿಶ್ರಬಣ್ಣಗಳುಳ್ಳ ಬಹಳ ವೇಗಶಾಲಿಯಾದ ಹುಚ್ಚನಂತಿರುವ ದೊಡ್ಡ ಆಕಾರ ವನ್ನು ಧರಿಸಿದನು. ||೫೨||

ಭೂತ್ವಾ ಜಗಾಮ ತಾಂ ಹಂತುಂ ವ್ಯಾತ್ತಾಽಸ್ಯಃ ಪಾವಕಂ ವಮನ್ ।
ದೃಷ್ಟ್ವಾ ಭೀತಂ ಶಕ್ತಿಗಣಂ ತಂ ಯೋಜನಮಿತೋನ್ನತಂ ॥೫೩॥

ದೃಷ್ಟ್ವಾಽಸುರಸ್ಯ ಸಾ ಮಾಯಾಂ ನಿರ್ಮಾಯಾಽಸ್ತ್ರಮವಾಽಸೃಜತ್ ।
ತೇನಾಽಸ್ತ್ರೇಣ ಕ್ಷಣಾದೇವ ಮಾಯಾಃ ಸರ್ವಾ ವ್ಯನೀನಯತ್ ॥೫೪॥

ಅಥಾಽಪ್ಯಂತರ್ಹಿತಂ ದೈತ್ಯಂ ಕಾಮೇಶೀ ಮಂತ್ರಪಾಶತಃ ।
ಬದ್ಧ್ವಾ ನಿಪಾತಯಾಮಾಸ ಸ್ವಪುರಃ ಕ್ಷಣಮಾತ್ರತಃ ॥೫೫॥

ಸ ದೈತ್ಯಃ ಪಾಶಸಂಬದ್ಧಃ ಪತಿತಃ ಪಾದಸನ್ನಿಧೌ ।
ಲಜ್ಜಿತೋ ನಮ್ರವದನೋ ಮೃತವನ್ಮೀಲಿತೇಕ್ಷಣಃ ॥೫೬॥

ಬದ್ಧಮೇವಂ ವಿಷಂಗಂ ತಂ ಚಕ್ರರಾಜರಥಾಂತಿಕಂ ।
ಆನಯಧ್ವಂ ಶಕ್ತಿಗಣಾ ನಿತ್ಯಾಸಾಽಪ್ಯ(ಪಿ)ತದಾಹಿ(ಹ)ಸಾ ॥೫೭॥

ಈ ರೀತಿಯಾಗಿ ಭಯಂಕರವಾದ ಸ್ವರೂಪವನ್ನು ಧರಿಸಿ ಬಾಯನ್ನು ಆಗಲಿಸಿಕೊಂಡು ಬೆಂಕಿಯನ್ನು ಕಾರುತ್ತಾ ಅವಳನ್ನು ಕೊಲ್ಲಲು ಹೋದನು! ಒಂದು ಯೋಜನದಷ್ಟು ವಿಸ್ತಾರವುಳ್ಳ ಮತ್ತು ಎತ್ತರವುಳ್ಳ ವಿಷಂಗನ ಈ ಭಯಂಕರಸ್ವರೂಪವನ್ನು ನೋಡಿ, ಶಕ್ತಿಗಳ ಗುಂಪೆಲ್ಲವೂ ಭಯಪಟ್ಟಿತು. ॥೫೩॥

ಕಾಮೇಶ್ವರೀದೇವಿಯು ಆ ರಾಕ್ಷಸನ ಮಾಯೆಯನ್ನು ನೋಡಿದ ಕೂಡಲೆ ನಿರ್ಮಾಯಾಸ್ತ್ರವನ್ನು ಸೃಷ್ಟಿಸಿ ಪ್ರಯೋಗಿಸಿದಳು. ಈ ಅಸ್ತ್ರದ ಪ್ರಯೋಗದಿಂದ ಆ ರಾಕ್ಷಸನ ಮಾಯೆಗಳೆಲ್ಲವೂ ಕ್ಷಣಕಾಲದಲ್ಲಿಯೇ ನಾಶವಾದವು. ॥೫೪॥

ಆದಾಗ್ಯೂ ಅವರ ಒಳಗಡೆ ಅಡಗಿ ಕಾಣದಿರುವ ರಾಕ್ಷಸನನ್ನು ಕಾಮೇಶ್ವರಿಯು ತನ್ನ ಮಂತ್ರಪೂರ್ವಕವಾದ ಪಾಶದಿಂದ ಕಟ್ಟಿ ತನ್ನ ಮುಂದೆ ಕ್ಷಣಕಾಲದಲ್ಲಿಯೇ ಬೀಳಿಸಿದಳು. ॥೫೫॥

ಆ ರಾಕ್ಷಸನು ಈರೀತಿಯಾಗಿ ಪಾಶದ ಕಟ್ಟಿಗೆ ಸಿಕ್ಕಿ ಆಕೆಯ ಪಾದದ ಸಮೀಪದಲ್ಲಿ ನಾಚಿಕೆಗೊಂಡು ದೈನ್ಯವನ್ನು ತೋರಿಸುವ ಮುಖವುಳ್ಳವನಾಗಿ ಸತ್ತವನಂತೆ ಕಣ್ಣುಗಳನ್ನು ಮುಚ್ಚಿಕೊಂಡು ಬಿದ್ದನು. ॥೫೬॥

ಈರೀತಿಯಾಗಿ ಕಟ್ಟಿಹಾಕಿರುವ ವಿಷಂಗನನ್ನು ಚಕ್ರರಾಜ ರಥದ ಸಮೀಪಕ್ಕೆ ಒಯ್ಯಿರಿ. ಎಂಬುದಾಗಿ ಕಾಮೇಶ್ವರೀದೇವಿಯು ಶಕ್ತಿಗಳ ಗುಂಪಿಗೆ ಆಜ್ಞಾಪಿ

ಯಯೌ ನಿತ್ಯಾ ಪರಿವೃತಾ ಶ್ರೀದೇವೀಪಾದಸನ್ನಿಧಿಂ ।
ಗತ್ವಾ ರಥಂ ಸಮಾರುಹ್ಯ ಪ್ರಣೇಮುರ್ಲಲಿತಾಂಬಿಕಾಂ ॥೫೮॥

ಆಚಖ್ಯುರ್ವಿಜಯಂ ಚಾಽಪಿ ತಾವತಾ ಮಂತ್ರಿಣೀಮುಖಾಃ ।
ಸಮಾಜಗ್ಮುರ್ವಿಜಿತ್ಯಾರೀನ್ನತ್ವಾ ಪ್ರೋಚುರ್ಜಯಂ ರಣೇ ॥೫೯॥

ಶ್ರುತ್ವಾ ಸಾ ಮಂತ್ರಿಣೀ ಮುಖ್ಯಾ ದೈತ್ಯಾನಾಂ ಕೈತವೋದ್ಯಮಂ ।
ವಿಸ್ಮಿತಾ ಸ್ತತ್ರ ಸುರಾಶ್ಚಾಽಪಿ ದೈತ್ಯಾನಾಂ ಶಠತಾಂ ಪ್ರತಿ ॥೬೦॥

ಅಥಾಽನೀತಂ ಶಕ್ತಿಗಣೈರ್ಬದ್ಧಂ ದೈತ್ಯಾನುಜಂ ತದಾ ।
ನಿಶಾಮ್ಯ ಶಕ್ತಯಃ ಪ್ರೋಚು ರತಿಕ್ರೋಧತಯಾಽಽಕುಲಾಃ ॥೬೧॥

ಸಿದಳು. ನಿತ್ಯಾ ಎಂಬ ಶಕ್ತಿಯ ಪರಿವಾರದವರೂ ಆಕೆಯೂ ಈ ಕೆಲಸವನ್ನು ನಿರ್ವಹಿಸಿದರು. ॥೫೭॥

ನಿತ್ಯಾದೇವಿಯು ಪರಿವಾರದಿಂದ ಕೂಡಿದವಳಾಗಿ ಶ್ರೀ ಲಲಿತಾದೇವಿಯ ಪಾದಗಳ ಸಮೀಪಕ್ಕೆ ಹೋದಳು. ಅಲ್ಲಿ ಚಕ್ರರಾಜರಥವನ್ನೇರಿದ್ದ ಲಲಿತಾದೇವಿಗೆ ಎಲ್ಲರೂ ಭಕ್ತಿಪೂರ್ವಕವಾಗಿ ನಮಸ್ಕಾರವನ್ನು ಮಾಡಿದರು. ॥೫೮॥

ಅಷ್ಟರೊಳಗಾಗಿಯೇ ಮಂತ್ರಿಣೀದೇವಿಯೇ ಮೊದಲಾದವರು ತಮ್ಮ ಕಡೆಯ ವಿಜಯವನ್ನು ದೇವಿಗೆ ಬಿನ್ನೈಸಿದರು. ಈ ಶಕ್ತಿಗಳೂ ಕೂಡ ಶತ್ರುಗಳನ್ನು ಜಯಿಸಿ ಹಿಂತಿರುಗಿ ಬಂದು, ಯುದ್ಧದಲ್ಲಾದ ತಮ್ಮ ವಿಜಯವನ್ನು ಲಲಿತಾ ದೇವಿಗೆ ವಿಜ್ಞಾಪನೆ ಮಾಡಿಕೊಂಡರು. ॥೫೯॥

ಮಂತ್ರಿಣೀದೇವಿಯೇ ಮೊದಲಾದವರು ರಾಕ್ಷಸರ ಮೋಸದ ಪ್ರಯತ್ನವನ್ನು ಕೇಳಿ ಬಹಳ ಆಶ್ಚರ್ಯಪಟ್ಟರು. ಅಲ್ಲಿದ್ದ ದೇವತೆಗಳೂ ಕೂಡ ರಾಕ್ಷಸರ ಮೋಸವನ್ನು ಯೋಚಿಸಿ ಆಶ್ಚರ್ಯವನ್ನು ಹೊಂದಿದರು. ॥೬೦॥

ಅನಂತರ ಶಕ್ತಿಗಳ ಗುಂಪಿನವರು ಭಂಡರಾಕ್ಷಸನ ತಮ್ಮನಾದ ವಿಷಂಗನನ್ನು ಕಟ್ಟಿಹಾಕಿ ತಂದರು. ಆಗ ಶಕ್ತಿಗಳು ಈ ವಿಷಯವನ್ನು ಕೇಳಿ ಬಹಳ ಕೋಪದಿಂದ ಕೂಡಿದವರಾಗಿ ಈರೀತಿಯಾಗಿ ಹೇಳಿದರು. ॥೬೧॥

ವಧ್ಯತಾಂ ಹನ್ಯತಾಂ ಚೈವ ಛಿದ್ಯತಾಂ ಭಿದ್ಯತಾಮಿತಿ ।
ಶ್ರುತ್ವಾ ದಂಡಾಧಿ ಸಾಮ್ರಾಜ್ಞೀ ವಧಂ ತಸ್ಯ ವ್ಯಚಿಂತಯತ್ ॥೬೨॥

ಅಥ ಶ್ರೀಮಾತೃಸಂಮತ್ಯಾ ಮಂತ್ರಿಣೀ ಪ್ರಬ್ರವೀದ್ವಚಃ ।
ವಧೋ ನ ಯುಕ್ತೋ ಬದ್ಧಸ್ಯ ಮೃತತುಲ್ಯೋ ಹಿ ಸ ಸ್ಮೃತಃ॥೬೩॥

ಗಚ್ಛತ್ವೇಷ ಸಮಾಖ್ಯಾತುಂ ದೈತ್ಯರಾಜಾಯ ಸ್ವಾಂ ದಶಾಂ ।
ಇತ್ಯುಕ್ತ್ವಾ ಮೋಚಯಾಮಾಸ ಪ್ರಾಹ ತಂ ಮಂತ್ರಿಣೀ ತದಾ ॥೬೪॥

ರೇ ದೈತ್ಯ ಭೂಯೋ ಮೈವಂ ತ್ವಮಕಾರ್ಷೀಃ ಶೂರಗರ್ಹಿತಂ ।
ಶ್ರುತ್ವೈವಂ ಮಂತ್ರಿಣೀವಾಕ್ಯಂ ಲಜ್ಜಿತೋ ದೈತ್ಯಪುಂಗವಃ ॥೬೫॥

ನತಾನನೋ ಯಯೌ ಶೀಘ್ರ ಮಪಶ್ಯನ್ ಪೃಷ್ಠತಃ ಪುನಃ ।
ಅಥ ತತ್ರ ಶಕ್ತಿಗಣಂ ಸಮೇತಂ ಲಲಿತಾಂಬಯಾ ॥೬೬॥

ಕೊಲ್ಲಿರಿ, ಕತ್ತರಿಸಿರಿ, ಸೀಳಿರಿ ಇವನನ್ನು! ಎಂದು ಶಕ್ತಿಗಳು ಕೂಗುತ್ತಿದ್ದರು. ದಂಡನಾಯಕಿಯು ಅವನ ವಧೆಯ ವಿಷಯವನ್ನು ಕೇಳಿ ಈರೀತಿಯಲ್ಲಿ ಯೋಚಿಸಿದಳು. ॥೬೨॥

ಅನಂತರ ಶ್ರೀ ಮಾತೃವಿನ ಇಷ್ಟದಂತೆ ಮಂತ್ರಿಣಿಯು ಈರೀತಿಯಾಗಿ ಮಾತನಾಡಿದಳು. ಕಟ್ಟಿಹಾಕಿಸಿಕೊಂಡಿರುವವನ ವಧೆಯು ಯುಕ್ತವಲ್ಲ. ಏಕೆಂದರೆ ಅವನು ಸತ್ತವನಿಗೆ ಸಮಾನನಾಗಿಯೇ ಇರುತ್ತಾನೆ! ಎಂದು ಹೇಳಿದೆ. ॥೬೩॥

ಇವನು ತನ್ನ ಈ ದುರ್ದಶೆಯನ್ನು ರಾಕ್ಷಸರಾಜನಿಗೆ ಹೇಳಲು ಹೋಗಲಿ. ಎಂದು ಹೇಳಿ ಅವನನ್ನು ಬಿಡಿಸಿಬಿಟ್ಟಳು. ಆಗ ಮಂತ್ರಿಣೀದೇವಿಯು ಅವನನ್ನು ಕುರಿತು ಈರೀತಿಯಲ್ಲಿ ಹೇಳಿದಳು. ॥೬೪॥

ಎಲೋ ರಾಕ್ಷಸನೇ, ಶೂರರು ನಿಂದಿಸಲು ಯೋಗ್ಯವಾದ ಇಂಥಾ ಮೋಸವನ್ನು ಇನ್ನು ಮುಂದೆ ಪುನಃ ಮಾಡಬೇಡ. ಎಂಬುದಾಗಿ ಮಂತ್ರಿಣಿಯು ಹೇಳಿದ ಮಾತನ್ನು ಕೇಳಿ, ರಾಕ್ಷಸಶ್ರೇಷ್ಠನಾದ ವಿಷಂಗನು ನಾಚಿಕೆಗೊಂಡನು. ॥೬೫॥

ಹಿಂಭಾಗದಲ್ಲಿ ಪುನಃ ಹಿಂತಿರುಗಿ ನೋಡದೇ ಮುಖವನ್ನು ತಗ್ಗಿಸಿಕೊಂಡು ಶೀಘ್ರವಾಗಿ ವಿಷಂಗನು ಹೊರಟುಹೋದನು. ಅನಂತರ ಅಲ್ಲಿ ಲಲಿತಾಮಾತೆಯ ಸುತ್ತಲೂ ಶಕ್ತಿಗಳ ಗುಂಪಿನವರು ಸೇರಿದರು. ॥೬೬॥

ಪರಸ್ಪರಂ ಯುದ್ಧವೃತ್ತಂ ಪ್ರೋಚುರಾಶ್ಚರ್ಯವದ್ಭುತಂ ತದಾ ।
ತದಾ ಪ್ರಾಹ ದಂಡರಾಜ್ಞೀ ಮಂತ್ರಿಣೀಂ ಪ್ರತಿ ಮಂತ್ರಣೇ ॥೬೭॥

ದೇವಿ ವೃತ್ತಂ ಮಹಾಯುದ್ಧ ಮದ್ಯ ದೈತ್ಯೈಃ ಸುಭೀಷಣಂ ।
ರಾತ್ರಿರಲ್ಪಾವಶೇಷಾಽಸ್ತಿ ಪುನಃ ಸೂರ್ಯೋದಯಂ ಪ್ರತಿ ॥೬೮॥

ಭವೇದ್ಯುದ್ಧ ಮತೀವೋಗ್ರಂ ದೈತ್ಯಾಃ ಕಪಟಯೋಧಿನಃ ।
ತದಸ್ಮಾಭಿಃ ಪುನರ್ಯುದ್ಧೇ ಗಂತವ್ಯಂ ಸರ್ವಸೇನಯಾ ॥೬೯॥

ಪುನರತ್ರ ಚಕ್ರರಾಜರಥಸ್ತಿಷ್ಠೇತ ಚೈಕಲಃ ।
ಯದ್ಯಪಿ ಶ್ರೀಮಹಾದೇವ್ಯಾ ಮಹಿಮ್ನೋ ನಾಸ್ತಿ ದುರ್ಘಟಂ ॥೭೦॥

ತಥಾಽಪ್ಯ ಸಾಂಪ್ರತಂ ಚೈತದ್ಭಾತಿ ತತ್ರ ಕಥಂ ಭವೇತ್ ।
ವಿಮೃಶ್ಯ ಮಂತ್ರಂ ಬುದ್ಧ್ಯಾ ತದ್ಯುಕ್ತಂ ಜ್ಞಾತ್ವಾ ಸಮೀಾಕುರು ॥೭೧॥

ಆಗ ಆ ಶಕ್ತಿಗಳು ಪರಸ್ಪರ ಅತ್ಯಾಶ್ಚರ್ಯಕರವಾದ ಆ ಯುದ್ಧ ವೃತ್ತಾಂತವನ್ನು ಹೇಳಿಕೊಂಡರು. ಆಗ ದಂಡನಾಯಕಿಯು ಮಂತ್ರಿಣೀದೇವಿಯು ಈ ವಿಷಯದಲ್ಲಿ ಮಂತ್ರಾಲೋಚನೆಯನ್ನು ನಡೆಸುತ್ತಾ ಅವಳನ್ನು ಕುರಿತು ಹೀಗೆಂದಳು. ॥೬೭॥

ಎಲೌ ದೇವಿಯೇ, ಈಗ ಬಹಳ ಭಯಂಕರವಾದ ಮಹಾಯುದ್ಧವು ರಾಕ್ಷಸರಿಂದ ನಡೆದುಹೋಯಿತು. ರಾತ್ರಿಯು ಸ್ವಲ್ಪ ಭಾಗ ಮಾತ್ರ ಉಳಿದಿದೆ. ಸೂರ್ಯೋದಯವಾಗುವ ವೇಳೆಗೆ ಪುನಃ ಯುದ್ಧವಾಗಬಹುದು. ॥೬೮॥

ಪುನಃ ಘೋರಯುದ್ಧವು ಸಂಭವಿಸಬಹುದು. ಏಕೆಂದರೆ ರಾಕ್ಷಸರು ಕಪಟವಾಗಿ ಯುದ್ಧವನ್ನು ಮಾಡುವವರು. ಆದ್ದರಿಂದ ನಾವು ನಮ್ಮ ಸಮಸ್ತ ಸೈನ್ಯದೊಂದಿಗೂ ಪುನಃ ಯುದ್ಧಕ್ಕೆ ಹೋಗಬೇಕು. ॥೬೯॥

ಪುನಃ ಇಲ್ಲಿ ಚಕ್ರರಾಜ ರಥವು ಒಂಟಿಯಾಗಿಯೇ ಇರಬೇಕಾಗುವುದು. ಶ್ರೀಮಹಾದೇವಿಯ ಮಹಿಮೆಗೆ ಅಸಾಧ್ಯವಾದುದು ಯಾವುದೂ ಇರುವುದಿಲ್ಲವೆಂಬುದೇನೋ ನಿಜ. ॥೭೦॥

ಆದಾಗ್ಯೂ ಹೀಗಿರುವುದು ಯುಕ್ತವೆಂದೇ ನನಗೆ ತೋರುವುದು. ಈ ವಿಷಯದಲ್ಲಿ ಏನು ಮಾಡಬೇಕೆಂಬುದನ್ನು ವಿಮರ್ಶೆಮಾಡಿ ಮಂತ್ರಾಲೋಚನೆಯಿಂದ ಸಾಧುವಾದ ಮಾರ್ಗವನ್ನು ತಿಳಿದು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿ. ॥೭೧॥

ಇತಿ ವಾಕ್ಯಂ ಸಮಾಕರ್ಣ್ಯ ದಂಡಿನ್ಯಾ ಮಂತ್ರಿಣೀ ಸ್ವಯಂ ।
ಅಮಂಸತಾಽಥ ತದ್ಯುಕ್ತಂ ವಿಚಾರ್ಯ ಶುದ್ಧಯಾ ಧಿಯಾ ॥೭೨॥

ಲಲಿತಾಂ ಪ್ರಣಿಪತ್ಯಾಹ ಮಾತರಾ ಚಕ್ಷ್ವ ಮೇ ವಚಃ ।
ವದತ್ಯೇಷಾ ವರಾಹಾಸ್ಯಾ ಸೂರ್ಯಸ್ಯೋದಯನಂ ಪ್ರತಿ ॥೭೩॥

ಪುನರ್ಯುದ್ಧಾಯ ಗಂತವ್ಯ ಮಸ್ಮಾಭಿಃ ಶಕ್ತಿಸೇನಯಾ ।
ಅಕೋಶೇ ಸೇನಯಾ ಹೀನೇ ರಥ ಏಷ ತವಾಽಶ್ರಯಃ ॥೭೪॥

ನ ಶೋಭತೇ ಹ್ಯನೌಚಿತ್ಯಾ ದಥಶಕ್ತಿಗಣೋಽಖಿಲಃ ।
ನಿಯುದ್ಧಶ್ರಾಂತಿಮಭ್ಯೇತ್ಯ ರಾತ್ರೌ ವಿಶ್ರಾಂತಿಮೇಷ್ಯತಿ ॥೭೫॥

ದಂಡನಾಯಕಿಯು ಹೇಳಿದ ಮಾತನ್ನು ಕೇಳಿ ಮಂತ್ರಿಣಿಯು ಅದನ್ನು ಯುಕ್ತವೆಂದು ಭಾವಿಸಿ ತಾನೇ ಯುಕ್ತವಾದ ಬುದ್ಧಿಯಿಂದ ಆಗ ವಿಮರ್ಶೆ ಮಾಡಲು ತೊಡಗಿದಳು. ||೭೨||

ಮಂತ್ರಿಣೀದೇವಿಯು ಲಲಿತಾದೇವಿಗೆ ನಮಸ್ಕಾರವನ್ನು ಮಾಡಿ, ಆಕೆಯನ್ನು ಕುರಿತು “ಓ ದೇವಿಯೇ, ದಂಡನಾಯಕಿಯು ಸೂರ್ಯೋದಯಕ್ಕೆ ಮುಂಚೆ ನೀವೆಲ್ಲರೂ ಯುದ್ಧಕ್ಕೆ ಸಿದ್ಧರಾಗಬೇಕಾಗುವುದು. ಎಂದು ಅಭಿಪ್ರಾಯಪಡುವಳು. ಆದ್ದರಿಂದ ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ದಯವಿಟ್ಟು ತಿಳಿಸಬೇಕು.” ಎಂದಳು. ||೭೩||

ನಾವೆಲ್ಲರೂ ಶಕ್ತಿಸೇನೆಗಳೊಂದಿಗೆ ಪುನಃ ಈಗ ಸೂರ್ಯೋದಯವಾಗುವ ವೇಳೆಗೆ ಯುದ್ಧಕ್ಕೆ ಹೋಗಬೇಕಾಗುವುದು. ಆಗ ತಮಗೆ ಕಾವಲೇ ಇಲ್ಲದೇ ಸೈನ್ಯವು ಇಲ್ಲದಿರುವ ಈ ರಥವೇ ತಮಗೆ ಆಶ್ರಯವಾಗಿರಬೇಕಾಗಿರುವುದು. ||೭೪||

ಈರೀತಿಯಲ್ಲಿರುವುದು ಅನುಚಿತವೆಂದು ನನಗೆ ತೋರುವುದು. ಏಕೆಂದರೆ ಆಮೇಲೆ ಸಮಸ್ತ ಶಕ್ತಿಸೈನ್ಯವೂ ಯುದ್ಧಮಾಡಿ ಬಳಲಿ ರಾತ್ರಿಯಲ್ಲಿ ವಿಶ್ರಾಂತಿಯನ್ನು ಹೊಂದಲು ಬಯಸುವುದು. ||೭೫||

ಅಥ ಸಂವೃತ್ತಯುದ್ಧೇನ ಕೈತವೇನ ವಿಶಂಕಿತಾಃ ।
ನ ಸ್ವಸ್ಥಹೃದಯಾ ಭೂಯೋ ವಿಶ್ರಾಮಂ ನೋಪಯಾಂತಿ ವೈ॥೭೬॥

ಮನ್ಯಸೇ ಯದಿ ತತ್ರಾಽಲ ಮನುಜಾನೀಹಿ ಮಾಂ ಪುನಃ ।
ಪ್ರವೃತ್ತಿಂ ಭಾವಯಿಷ್ಯಾಮಿ ಶತ್ರೂಣಾಮಪ್ರಧರ್ಷಿಣೀಂ ॥೭೭॥

ಇತಿ ವಿಜ್ಞಾಪಿತಾ ದೇವೀ ಪ್ರವೃತ್ತೌ ತಾಂ ಸಮಾದಿಶತ್ ।
ಅಥ ಸಾ ತಿಥಿ ನಿತ್ಯಾಸು ಯಾ ತತ್ರಾಽಸ್ತಿ ಚತುರ್ದಶೀ ॥೭೮॥

ಆಜ್ಞಾಪಯತ್ತಾಂ ಹಿ ಸಾಲನಿರ್ಮಾಣೇ ಶತ್ರುರೋಧನೇ ।
ಆಜ್ಞಾಮಾತ್ರೇಣ ಸಾ ದೇವೀ ಜ್ವಾಲಾಮಾಲಿನಿಕಾಽಭಿಧಾ ॥೭೯॥

ವಹ್ನಿಜ್ವಾಲಾಮಹಾಸಾಲಂ ನಿರ್ಮಮೇಽಸುರರೋಧನಂ ।
ವಲಯೀಕೃತ್ಯ ಶಕ್ತೀನಾಂ ಸೇನಾಂ ಸಾಲಃ ಸಮಾಸ್ಥಿತಃ ॥೮೦॥

ಈಗ ಯುದ್ಧವು ಸಂಭವಿಸುವುದರಿಂದ ರಾಕ್ಷಸರ ಮೋಸದಿಂದ ಕಳವಳಗೊಂಡು ಮನಸ್ಸಿಗೆ ಶಾಂತಿಯೇ ಇಲ್ಲದೆ ಶಕ್ತಿಸೈನ್ಯಗಳೆಲ್ಲವೂ ವಿಶ್ರಾಂತಿಯನ್ನು ಹೊಂದಲಾರದೇ ಹೋಗುವುವು. ॥೭೬॥

ತಾವು ನನ್ನ ಮಾತಿಗೆ ಸಮ್ಮತಿಸುವುದಾದರೆ ಪುನಃ ನನಗೆ ನೀವು ಸಂಪೂರ್ಣವಾಗಿ ಅಪ್ಪಣೆಯನ್ನು ಕೊಡಿ. ಶತ್ರುಗಳು ನಮ್ಮನ್ನೆದುರಿಸಲಾರದಂಥಾ ಉಪಾಯವನ್ನು ನಾನು ಕಲ್ಪಿಸುವೆನು. ॥೭೭॥

ಈರೀತಿಯಲ್ಲಿ ಮಂತ್ರಿಣೀದೇವಿಯು ವಿಜ್ಞಾಪನೆ ಮಾಡಿಕೊಳ್ಳಲು, ದೇವಿಯು ಅದಕ್ಕೆ ಅಪ್ಪಣೆಯನ್ನು ಕೊಟ್ಟಳು. ಅನಂತರ ಮಂತ್ರಿಣೀದೇವಿಯು ಹದಿನೈದು ನಿತ್ಯಾ ಎಂಬ ತಿಥಿದೇವಿಯರ ಮಧ್ಯದಲ್ಲಿ ಚತುರ್ದಶೀದೇವಿಗೆ ಈರೀತಿಯಲ್ಲಿ ಹೇಳಿದಳು. ॥೭೮॥

ಆಕೆಯು ಚತುರ್ದಶೀದೇವಿಗೆ ಶತ್ರುಗಳನ್ನು ತಡೆಗಟ್ಟುವ ಕೋಟೆಯೊಂದನ್ನು ನಿರ್ಮಿಸಲು ಅಪ್ಪಣೆ ಮಾಡಿದಳು. ಆಕೆಯ ಆಜ್ಞಾಮಾತ್ರದಿಂದಲೇ ಜ್ವಾಲಾಮಾಲಿನಿಕಾ ಎಂಬ ದೇವಿಯು ಈ ಕಾರ್ಯಕ್ಕೆ ಸಿದ್ಧಳಾದಳು. ॥೭೯॥

ಜ್ವಾಲಾಮಾಲಿನೀ ಎಂಬ ಶಕ್ತಿಯು ರಾಕ್ಷಸರನ್ನು ತಡೆಗಟ್ಟುವ, ಬೆಂಕಿಯ ಜ್ವಾಲೆಯಿಂದಲೇ ರಚಿಸಿದ, ದೊಡ್ಡ ಕೋಟೆಯೊಂದನ್ನು ನಿರ್ಮಿಸಿದಳು. ಈ ದೊಡ್ಡ ಕೋಟೆಯು ಶಕ್ತಿಗಳ ಸೈನ್ಯವನ್ನು ಸುತ್ತುಗಟ್ಟಿತ್ತು. ॥೮೦॥

ಅನುಲ್ಲಂಘ್ಯೋಽನ್ನಪ್ರಮೂರ್ತಿಃ ಬಹಿರ್ಜ್ವಾಲೋಽತಿ ಭೀಷಣಃ ।
ಅಂತಃ ಶೀತಲಯನ್ ಶಕ್ತೀಃ ಬಹಿರ್ಯೋಜನದೂರಗಂ ॥೮೧॥

ದಹನ್ಯೋಜನವಿಸ್ತಾರ ಮಧ್ಯದ್ವಾರೋ ವ್ಯರಾಜತ ।
ಅಥೈವಂ ಸಾಲಮಾಲೋಕ್ಯ ಶಕ್ತಯೋ ಗತ ಸಾಧ್ವಸಾಃ ॥೮೨॥

ಸುಷ್ವಪುಃ ಸೌಖ್ಯತಸ್ತತ್ರ ಯುದ್ಧಶ್ರಾಂತಾ ಹಿ ಶಕ್ತಯಃ ।
ಸಹಸ್ರ ಸಂಖ್ಯಾ ರಕ್ಷಾರ್ಥಂ ಮಂತ್ರನಾಥಾ ಸಮಾದಿಶತ್ ॥೮೩॥

ಏವಂ ಜ್ವಾಲಾ ಸಾಲಮಧ್ಯೇ ಸ್ಥಿತಾ ಶ್ರೀಲಲಿತಾಂಬಿಕಾ ॥೮೪॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ವಿಷಂಗಪರಾಜಯೋನಾಮ ಸಪ್ತತಿತಮೋಽಧ್ಯಾಯಃ

ಈ ಕೋಟೆಯು ದಾಟಲು ಅಸಾಧ್ಯವಾಗಿರುವಂತೆ ಬಹಳ ಎತ್ತರವಾಗಿತ್ತು. ಕೋಟೆಯ ಎಲ್ಲಾಭಾಗವೂ ಬೆಂಕಿಯ ಜ್ವಾಲೆಯೇ ಆಗಿ ಬಹಳ ಭಯಂಕರವಾಗಿತ್ತು. ಒಳಭಾಗದಲ್ಲಿ ತಣ್ಣಗೆ ಶಕ್ತಿಗಳ ಸೈನ್ಯಕ್ಕೆ ಸೌಖ್ಯವನ್ನುಂಟುಮಾಡುವುದಾಗಿಯೂ, ಹೊರಪ್ರಾಕಾರದಲ್ಲಿ ಒಂದು ಯೋಜನದಷ್ಟು ದೂರ ಜ್ವಾಲೆಯುಳ್ಳದ್ದಾಗಿತ್ತು. ॥೮೧॥

ಒಂದು ಯೋಜನದಷ್ಟು ವಿಸ್ತಾರವಾದ ಮಧ್ಯಭಾಗದ ಬಾಗಿಲೂ ಕೂಡ ಸುಡುತ್ತಾ ಪ್ರಕಾಶಮಾನವಾಗಿತ್ತು. ಅನಂತರ ಇಂತಹ ಕೋಟೆಯನ್ನು ನೋಡಿ ಶಕ್ತಿಗಳು ತಮ್ಮ ಭಯವನ್ನೆಲ್ಲವನ್ನೂ ಬಿಟ್ಟರು. ॥೮೨॥

ಯುದ್ಧದಲ್ಲಿ ಬಳಲಿದ್ದ ಶಕ್ತಿಗಳು ಸೌಖ್ಯವಾಗಿ ಅಲ್ಲಿ ಮಲಗಿದ್ದರು. ಮಂತ್ರಿಣೀದೇವಿಯು ಸಾವಿರಾರು ಮಂದಿ ಶಕ್ತಿಗಳಿಗೆ ದೇವಿಗೆ ಕಾವಲಾಗಿರಬೇಕೆಂಬುದಾಗಿ ಅಪ್ಪಣೆಯನ್ನು ಮಾಡಿದಳು. ॥೮೩॥

ಈರೀತಿಯಲ್ಲಿ ಜ್ವಾಲೆಗಳ ಕೋಟೆಯ ಮಧ್ಯಭಾಗದಲ್ಲಿ ಶ್ರೀಲಲಿತಾದೇವಿಯು (ಲಲಿತಾಮಾತೆಯು) ಪ್ರಕಾಶಮಾನವಾಗಿದ್ದಳು. ॥೮೪॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ವಿಷಂಗರಾಕ್ಷಸನ
ಸೋಲನ್ನು ವರ್ಣಿಸಿರುವ ಎಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಏಕಸಪ್ತತಿತಮೋಽಧ್ಯಾಯಃ ॥

ಎಪ್ಪತ್ತೊಂದನೆಯ ಅಧ್ಯಾಯವು

ಬಂಧಮುಕ್ತೋ ವಿಷಂಗೋಽಥ ಯಯೌ ದೈತ್ಯಚಮೂಂ ಪ್ರತಿ ।
ದುಃಖಿತೋಽತಿತರಾಂ ದೀನೋ ಹತೋತ್ಸಾಹೋಽತಿನಿಶ್ವಸನ್ ॥೧॥

ಏಕಲೋ ವಿಜನೇ ಕ್ವಾಽಪಿ ನಿವಿಷ್ಟೋ ಹೀನವರ್ಚಸಃ ।
ತತ್ರ ಶುಶ್ರಾವ ಸೇನೇಶಂ ಕುಟಿಲಾಕ್ಷಂ ಚ ಮಂತ್ರಿಣಃ ॥೨॥

ಹತಾಂ ಸ್ತತೋಽಪಿ ದುಃಖಾಽಬ್ಧೌ ನಿಮಗ್ನಃ ಸಮಜಾಯತ ।
ತಾವದ್ವಿಶುಕ್ರೋಽಭಿಯಯೌ ರಾಜಪುತ್ರಸಮಾವೃತಃ ॥೩॥

ವಿಷಂಗರಾಕ್ಷಸನು ಬಂಧನದಿಂದ ಬಿಡುಗಡೆಯಾದ ನಂತರ ಬಹಳ ದುಃಖಗೊಂಡು, ಅವನ ಉತ್ಸಾಹವೇ ನಾಶವಾಗಿರಲು, ಬಹಳ ನಿಟ್ಟುಸಿರು ಬಿಡುತ್ತಾ ರಾಕ್ಷಸಸೈನ್ಯದ ಸಮೀಪಕ್ಕೆ ಹೋದನು. ॥೧॥

ವಿಷಂಗನು ಒಬ್ಬಂಟಿಗನಾಗಿ ಕಳೆಗುಂದಿದವನಾಗಿ ನಿರ್ಜನವಾದ ಪ್ರದೇಶ ಒಂದರಲ್ಲಿ ಕುಳಿತನು. ಅಲ್ಲಿ ಸೈನ್ಯಾಧಿಪತಿಯಾದ ಕುಟಿಲಾಕ್ಷನೂ ಮಂತ್ರಿಗಳೂ ಇವರೆಲ್ಲರೂ ನಾಶವಾದ ವಿಷಯವನ್ನು ಕೇಳಿದನು. ॥೨॥

ಅವರ ನಾಶದ ಈ ಸಮಾಚಾರವನ್ನು ಕೇಳಿ ಇನ್ನೂ ಹೆಚ್ಚಾಗಿ ದುಃಖದ ಸಮುದ್ರದಲ್ಲಿ ಇವನೂ ಮುಳುಗಿದನು. ಅಷ್ಟುಹೊತ್ತಿಗೆ ವಿಶುಕ್ರನೂ ಕೂಡ ರಾಜಪುತ್ರರೊಡಗೂಡಿದವನಾಗಿ ಅವನಿದ್ದ ಸ್ಥಳಕ್ಕೆ ಬಂದನು. ॥೩॥

ದದರ್ಶಾಽತಿವಿಷಣ್ಣಾಽಸ್ಯಂ ವಿಷಂಗಮನುಜಂ ಸ್ಥಿತಂ ।
ಪಪ್ರಚ್ಛ ವತ್ಸ ಕಿಂ ತೇಽದ್ಯ ಪಶ್ಯಾಮಿ ಮಲಿನಂ ಮುಖಂ ॥೪॥

ಪಾರ್ಷ್ಣಿಯುದ್ಧೇ ಕಿಮಾಸೀತ್ತೇ ವದ ಮೇ ತದಶೇಷತಃ ।
ಶ್ರುತ್ವೈವಂ ಭ್ರಾತೃವಚಸಂ ನಿಃಶ್ವಸನ್ ಪ್ರಾಹ ಸೋಽನುಜಃ ॥೫॥

ಭ್ರಾತಃ ಕಿಂ ತೇಽಭಿವಕ್ಷ್ಯಾಮಿ ನಾಽಽಸೀದೇವಂ ಕದಾಽಪಿ ಮೇ ।
ಜಾನಾಮಿ ದೈತ್ಯನಾಶಾಯ ಕಾಲ ಏಷೋಽಪ್ರದಕ್ಷಿಣಃ ॥೬॥

ಅಹೋಽತಿ ಚಿತ್ರಂ ದೈತ್ಯಾನಾಂ ವಿಷ್ಣುವೀರ್ಯಾತಿಯೋಧಿನಾಂ ।
ಪರಾಭವೋಽಬಲಾಸಂಘೈ ರ್ಮೃಗೇಶಸ್ಯೇವ ಜಂಬುಕೈಃ ॥೭॥

ಏವಂ ದಶಾಽಭಿಪನ್ನಸ್ಯ ನ ಯುಕ್ತಂ ಜೀವಿತಂ ಮಮ ।
ತತ್ಕಿಂ ಕರೋಮಿ ನಾಽಽಸೀನ್ಮೇ ಮೃತ್ಯುರ್ಯುದ್ಧೇಷು ಸರ್ವಥಾ ॥೮॥

ಅವನು ತನ್ನ ತಮ್ಮನಾದ ವಿಷಂಗನು ಬಹಳ ದುಃಖದಿಂದ ಕೂಡಿದ ಮುಖವುಳ್ಳವನಾಗಿರುವುದನ್ನು ಕಂಡು, ಎಲೈ ತಮ್ಮನೇ, ಇದೇನು? ನಿನ್ನ ಮುಖವು ಈ ದಿವಸ ಬಹಳ ಕಳೆಗುಂದಿದೆ! ಎಂದನು. ॥೪॥

ಮೋಸದ ಬೆಂಗಾವಲಿನ ಯುದ್ಧದಲ್ಲಿ ನಿನಗೇನು ಸಂಭವಿಸಿತು? ಇತರ ಎಲ್ಲಾ ವಿಷಯಗಳಿಗೂ ಉತ್ತರವನ್ನು ಹೇಳು. ಎಂಬುದಾಗಿ ಹೇಳಿದ ಅಣ್ಣನ ಮಾತನ್ನು ಕೇಳಿ ತಮ್ಮನಾದ ವಿಷಂಗನು ನಿಟ್ಟುಸಿರನ್ನು ಬಿಡುತ್ತಾ ಈರೀತಿಯಲ್ಲಿ ಹೇಳಿದನು.॥೫॥

ಎಲೈ ಅಣ್ಣನೇ, ನಿನಗೆ ನಾನೇನನ್ನು ಹೇಳಲಿ? ನನಗೆ ಈ ರೀತಿಯಲ್ಲಿ ಯಾವಾಗಲೂ ಆಗಿರಲಿಲ್ಲ! ರಾಕ್ಷಸರ ನಾಶಕ್ಕೋಸ್ಕರವೇ ಕೆಟ್ಟದಾದ ಈ ಕಾಲವು ಹಿಂತಿರುಗಿ ಬಂದಿರುವುದೆಂದು ತೋರುತ್ತಿದೆ. ॥೬॥

ವಿಷ್ಣುವಿನ ಪರಾಕ್ರಮವನ್ನೇ ಲೆಕ್ಕಿಸದೆ ಯುದ್ಧಮಾಡಿದ ರಾಕ್ಷಸರಿಗೆ, ನರಿಗಳಿಂದ ಸಿಂಹಕ್ಕೆ ಸೋಲಾದಂತೆ, ಸ್ತ್ರೀಯರಿಂದ ಸೋಲುಂಟಾದರೆ ಇದಕ್ಕಿಂತಲೂ ಬೇರೊಂದು ಆಶ್ಚರ್ಯವೇನಿದೆ? ॥೭॥

ಈ ರೀತಿಯ ದುರ್ದಶೆಗೆ ಒಳಗಾದ ನಾನು ಜೀವಿಸಿರುವುದು ಅಯುಕ್ತವೇ ಸರಿ. ನನಗೆ ಯುದ್ಧಗಳಲ್ಲಾದರೂ ಸರ್ವಥಾ ಮೃತ್ಯುವು ಸಂಭವಿಸಿದ್ದರೂ ಚೆನ್ನಾಗಿತ್ತು. ಆದರೆ ಹಾಗಾಗದೇ ಇದ್ದುದರಿಂದ ನಾನೀಗೇನನ್ನು ಮಾಡಲಿ? ॥೮॥

ಅಹೋ ಧನ್ಯಾ ಯೇ ಮೃತಾಸ್ತೇ ಕುಟಿಲಾಕ್ಷಾದಯೋಽಸುರಾಃ ।
ನ ತೈಃ ಸ್ವಾತ್ಮಾ ಪರೀಭೂತೋ ದೃಷ್ಟೋ ದುಃಖಾಯ ಕುತ್ರಚಿತ್ ॥೯॥

ಭರ್ತೃಪಿಂಡವಿನಿರ್ಯೋಗಂ ಕೃತ್ವೋತ್ತಮತಮಾಂ ಗತಿಂ ।
ಖ್ಯಾತಿಂ ಚ ಸಂಗತಾಸ್ತೇಽಸ್ಮಿನ್ ಲೋಕೇಽಮುಷ್ಮಿನ್ನಪಿ ಧ್ರುವಾಂ ॥೧೦॥

ಧಿಙ್ಮಾಮೇವಂ ದ್ವಿಧಂ ದೈತ್ಯಂ ನ ಜೀವಂತಂ ಚ ನೋ ಮೃತಂ ।
ಭ್ರಾತಃ ಕಿಂ ಬಹುನೋಕ್ತೇನ ಸಾರಂ ಶೃಣು ವದಾಮಿ ತೇ ॥೧೧॥

ದೈತ್ಯಾನಾಮೇಷ ಸಂಪ್ರಾಪ್ತಃ ಕಾಲೋಽತ್ಯಂತಮದಕ್ಷಿಣಃ ।
ತಸ್ಮಾದಹಂ ನ ಜೀವಿಷ್ಯೇ ಸ್ತ್ರೀಭಿರ್ಯುದ್ಧೇ ಪರಾಜಿತಃ ॥೧೨॥

ಕುಟಿಲಾಕ್ಷ ಮೊದಲಾದ ರಾಕ್ಷಸರೂ ನಾಶವಾದರೂ ಅವರು ಧನ್ಯರೆಂದೇ ನಾನು ಭಾವಿಸುವೆನು. ಏಕೆಂದರೆ ಹೀಗೆ ಸೋಲಿಗೆ ತುತ್ತಾಗಿರುವವರು ಬದುಕಿ ಕೊಂಡು ದುಃಖವನ್ನು ಎಲ್ಲಿಯೂ ಸಹಿಸಿರಲಿಲ್ಲ. ॥೯॥

ಸ್ವಾಮಿಯ ಅನ್ನವನ್ನು ತಿಂದುದಕ್ಕೆ ಪ್ರತಿಯಾಗಿ ಋಣವನ್ನು ತೀರಿಸಲೋಸುಗ ಯುದ್ಧವನ್ನು ಮಾಡಿ, ಅವರು ಉತ್ತಮವಾದ ಗತಿಯನ್ನೂ ಕೀರ್ತಿಯನ್ನೂ ಹೊಂದಿ ಅವರು ಪರಲೋಕದಲ್ಲಿಯೂ ಶಾಶ್ವತವಾದ ಸ್ಥಾನವನ್ನು ಕುಟಿಲಾಕ್ಷ ಮುಂತಾದವರು ಪಡೆದಿರುವರು. ॥೧೦॥

ಇಂತಹ ತುಚ್ಛವಾದ ಬದುಕನ್ನು ಹೊಂದಿ ಬದುಕಿದಂತಾಗಲಿ, ಸತ್ತಂತಾಗಲಿ, ಎರಡು ವಿಧವಾಗಿಯೂ ಇಲ್ಲದೆ ಕ್ಷುದ್ರಬಾಳನ್ನು ಬಾಳುತ್ತಿರುವ ರಾಕ್ಷಸನಾದ ನನ್ನ ಜಂಭವು ನಿಂದೆಗೆ ಯೋಗ್ಯವಾದದ್ದೇ ಸರಿ. ಓ ಅಣ್ಣನೇ, ಹೆಚ್ಚುಮಾತನಾಡಿ ಫಲವೇನು? ನಾನೀಗ ಸಾರಾಂಶವಾದ ಮಾತನ್ನಾಡುತ್ತೇನೆ. ಕೇಳಿ. ॥೧೧॥

ರಾಕ್ಷಸರಿಗೆ ಬಹಳ ಕೆಟ್ಟಕಾಲವು ಈಗ ಪ್ರಾಪ್ತವಾಗಿರುತ್ತದೆ. ಆದ್ದರಿಂದಲೇ ಯುದ್ಧದಲ್ಲಿ ಸ್ತ್ರೀಯರಿಂದ ಸೋಲನ್ನು ಅನುಭವಿಸಿದ ನಾನು ಇನ್ನು ಬದುಕಿರಲು ಇಷ್ಟಪಡುವುದಿಲ್ಲ ॥೧೨॥

ಇತೋ ದೈತ್ಯೈಃ ಸಮೇತೋಽಹಂ ಪ್ರಯಾತಃ ಕ್ಷಣದಾಮುಖೇ ।
ಪಾರ್ಷ್ಣಿಯುದ್ಧೇ ತಾಂ ವಿಜೇತುಂ ಸಮುಯುಸ್ಯಾಽನುರೋಧತಃ ॥೧೩॥

ತದ್ರಥಸ್ಯ ಪಾರ್ಷ್ಣಿಭಾಗೇ ವಯಂ ಸರ್ವೇ ಹಿ ಸಂಗತಾಃ ।
ಯಾವದ್ರಥಂ ಸಮಾರುಹ್ಯ ತಾಂ ಗ್ರಹೀತು ಮಭೀಪ್ಸವಃ ॥೧೪॥

ತಾವತ್ಪ್ರಸ್ತಾಃ ಶಕ್ತಿಗಣಾ ರಥರಕ್ಷಾ ವಿಧೌ ಸ್ಥಿತಾಃ ।
ತಂ ರಥಂ ಪರಿವರ್ತಂತ್ಯೋ ಧೃತೋತ್ಪಾತ ಕೃಪಾಣಿಕಾಃ ॥೧೫॥

ಅಸ್ಮಾಭಿಸ್ತರ್ಜಯಂತ್ಯಸ್ತಾ ಯುಯುಧುರ್ಬಲವತ್ತರಾಃ ।
ಅನಾಲೋಕೇ ಪ್ರಸ್ಖಲಂತ್ಯಸ್ತಮಿಸ್ರಾಯಾಂ ತು ಸರ್ವತಃ ॥೧೬॥

ತಾವತ್ತಸ್ಯಾ ರಥಶ್ರೇಷ್ಠಾನ್ನಿರ್ಗತ(ತಾ)ಸ್ತಿಥಿ ಸಂಖ್ಯಕಾಃ ।
ನಿರ್ಮಮುರ್ಜ್ವಲಿತಂ ಶೈಲಮಂಧಕಾರ ನಿವಾರಣಂ ॥೧೭॥

ರಾತ್ರಿಯು ಪ್ರಾರಂಭವಾಗುವ ಹೊತ್ತಿನಲ್ಲಿ ನಾನು ರಾಕ್ಷಸರೊಡನೆ ಕೂಡಿದವನಾಗಿ ಇಲ್ಲಿಂದ ಹೊರಟೆನು. ಕಾಲಕ್ಕನುಸಾರವಾಗಿ ಆಕೆಯನ್ನು ರಥದ ಪಕ್ಕದಿಂದ ಯುದ್ಧಮಾಡಿ ಜಯಿಸಲು ಪ್ರಯತ್ನಪಟ್ಟೆನು. ॥೧೩॥

ಆಕೆಯ ರಥದ ಪಕ್ಕದ ಪ್ರದೇಶದಲ್ಲಿ ನಾವೆಲ್ಲರೂ ಒಟ್ಟಾಗಿ ಸೇರಿದೆವು. ಆಕೆಯ ರಥವನ್ನು ಹತ್ತಿ ಅವಳನ್ನು ಹಿಡಿಯಲು ಇಷ್ಟಪಟ್ಟೆವು. ॥೧೪॥

ಅಷ್ಟರೊಳಗಾಗಿಯೇ ರಥದ ರಕ್ಷಣೆಗಾಗಿ ನಿಯುಕ್ತರಾಗಿದ್ದ ಶಕ್ತಿಗಳ ಗುಂಪಿನವರು ಆ ರಥವನ್ನು ಸುತ್ತುತ್ತಾ ಕತ್ತಿಗಳನ್ನು ಹಿಡಿದುಕೊಂಡು ಬಂದು ನಮ್ಮಮೇಲೆ ಸಾವನ್ನುಂಟುಮಾಡುವ ಆಯುಧಗಳನ್ನು ಪ್ರಯೋಗಿಸಲು ಇಷ್ಟಪಟ್ಟರು. ॥೧೫॥

ನಾವು ಅವರನ್ನು ನಿಂದಿಸುತ್ತಿರುವಾಗಲೇ ಬಲಿಷ್ಠರಾದ ಅವರು ಬೆಳಕಿಲ್ಲದೇ ಕತ್ತಲೆಯೇ ಎಲ್ಲಾ ಕಡೆಯಲ್ಲಿಯೂ ಆವರಿಸಿದ್ದುದರಿಂದ ಪದೇ ಪದೇ ಮುಗ್ಗರಿಸುತ್ತಲೇ ನಮ್ಮೊಂದಿಗೆ ಯುದ್ಧಮಾಡಿದರು. ॥೧೬॥

ಅಷ್ಟರೊಳಗಾಗಿಯೇ ಆ ದೇವಿಯು ಇದ್ದ ಶ್ರೇಷ್ಠರಥದಿಂದ ತಿಥಿಗಳಷ್ಟೇ ಸಂಖ್ಯೆಯುಳ್ಳ ದೇವಿಯರು ಹೊರಗೆ ಕಾಣಿಸಿಕೊಂಡರು. ಕತ್ತಲೆಯನ್ನು ಹೋಗಲಾಡಿಸುವ ಉರಿಯುತ್ತಿರುವ ಪರ್ವತ ಒಂದನ್ನು ಅವರು ಸೃಷ್ಟಿಸಿದರು ! ॥೧೭॥

ಪರಿವವ್ರುಃ ಸಮೇತ್ಯಾಸ್ಮಾನ್ ವರ್ಷಂತ್ಯಃ ಶರಸಂತತೀಃ ।
ಕ್ಷಣೇನ ದಮನಾದ್ಯಾಂಸ್ತಾ ಹತ್ವಾ ಮಾಮಭಿ ಸಂಯಯುಃ ॥೧೮॥

ತಾಸು ಮುಖ್ಯಾ ಶಕ್ತಿರೇಕಾ ಕಾಮೇಶ್ಯದ್ಭುತವಿಕ್ರಮಾ ।
ದ್ವಂದ್ವೇ ಮಮಾಭಿಸಂಗಮ್ಯ ಬಬಂಧಾರ್ಧನಿಮೇಷತಃ ॥೧೯॥

ನ ತಸ್ಯಾಂ ಮೇ ವಿಕ್ರಮೋಽಭೂದ್ವೀರ್ಯಂ ಮಾಯಾಬಲಂ ತಥಾ ।
ಬದ್ಧೋ ನೀತಃ ಪಾತಿತೋಽಥ ಲಲಿತಾ ಚರಣಾಂತಿಕೇ ॥೨೦॥

ತಸ್ಯಾ ಯಾ ಸಚಿವೇಶಾನೀ ತಮಾಲದಲ ಸಚ್ಛವಿಃ ।
ಸೌಂದರ್ಯ ಸಾರಸುತನು ರ್ಮಧುರಾಽಽಲಾಪಪೇಶಲಾ ॥೨೧॥

ತಯಾಽಹಂ ಬಂಧನಾನ್ಮುಕ್ತೋ ದಯಮಾನಸ್ವಭಾವಯಾ ।
ತತೋ ಮೇ ಜೀವತೋ ನಾಽರ್ಥೋ ಹತಕೀರ್ತೇರ್ಹತೌಜಸಃ॥೨೨॥

ನಮ್ಮನ್ನೆಲ್ಲರನ್ನೂ ಅವರು ಸುತ್ತು ಕಟ್ಟಿ ಬಾಣಗಳ ಮಳೆಯನ್ನೇ ಸುರಿಸ ಲಾರಂಭಿಸಿದರು. ಅವರು ಕ್ಷಣಕಾಲದಲ್ಲಿಯೇ ದಮನ ಮುಂತಾದ ರಾಕ್ಷಸರನ್ನು ಕೊಂದು ನನ್ನ ಎದುರಿಗೆ ಬಂದರು. ॥೧೮॥

ಆಶ್ಚರ್ಯಕರವಾದ ಪರಾಕ್ರಮವುಳ್ಳ ಕಾಮೇಶ್ವರೀ ಎಂಬ ಒಬ್ಬ ಶಕ್ತಿಯು ಅವರಲ್ಲಿ ಮುಖ್ಯಳು. ಆಕೆಯು ನನ್ನೊಂದಿಗೆ ಯುದ್ಧಕ್ಕೆ ಸೇರಿ ಅರ್ಧ ನಿಮಿಷ ಕಾಲದಲ್ಲಿಯೇ ನನ್ನನ್ನು ಕಟ್ಟಿಹಾಕಿದಳು. ॥೧೯॥

ಅವಳ ವಿಷಯದಲ್ಲಿ ನನ್ನ ಪರಾಕ್ರಮವಾಗಲಿ ಅಥವಾ ಮಾಯಾಶಕ್ತಿ ಯಾಗಲೀ ಒಂದೂ ಕೆಲಸಕ್ಕೆ ಬರಲಿಲ್ಲ! ಕೂಡಲೇ ಅವಳು ನನ್ನನ್ನು ಕಟ್ಟಿಹಾಕಿ ಲಲಿತಾದೇವಿಯ ಪಾದಗಳ ಸಮೀಪದಲ್ಲಿ ಬೀಳಿಸಿದಳು. ॥೨೦॥

ಆಕೆಯ ಶ್ರೇಷ್ಠಮಂತ್ರಿಣಿಯು ಹೊಂಗೆಯ ಹುವ್ವಿನ ದಳದಂತೆ ಸ್ವಚ್ಛವಾದ ಕಾಂತಿಯುಳ್ಳವಳಾಗಿಯೂ, ಸೌಂದರ್ಯಸಾರಭೂತವಾದ ಶರೀರವುಳ್ಳವಳಾಗಿಯೂ, ಮಧುರವಾದ ಮಾತಿನಿಂದ ಮನೋಹರಳಾಗಿಯೂ ಇದ್ದಾಳೆ. ॥೨೧॥

ಕರುಣಾಶಾಲಿಯಾದ ಸ್ವಭಾವವುಳ್ಳ ಆಕೆಯು ನನ್ನನ್ನು ಬಂಧನದಿಂದ ಪಾರುಮಾಡಿದಳು. ಆದ್ದರಿಂದ ನನ್ನ ಕೀರ್ತಿ ಮತ್ತು ಪರಾಕ್ರಮಗಳೆರಡೂ ನಾಶವಾದ ಮೇಲೆ ನಾನು ಬದುಕುವುದು ಫಲವಿಲ್ಲದೇ ವ್ಯರ್ಥವೇ ಸರಿ. ॥೨೨॥

ಶ್ರುತ್ವೈವಂ ಲಪಿತಂ ತಸ್ಯ ವಿಶುಕ್ರಃ ಪ್ರಾಹ ಸಸ್ಮಿತಂ ।
ಭಂಡಾಽಭಿಮತ ಸಿದ್ಧ್ಯರ್ಥಂ ಹತಧೀರ್ಲಲಿತಾಽಂಬಯಾ ॥೨೩॥

ವತ್ಸ ತ್ವಂ ನ ವಿಜಾನಾಸಿ ನೀತಿಂ ಯುದ್ಧಜಯಾಽವಹಾಂ ।
ಯುದ್ಧೇ ಮಹಾಂತಃ ಶೂರಾಶ್ಚ ಕ್ವಚಿದಲ್ಪೈರ್ಜಿತಾ ನನು ॥೨೪॥

ಭವಂತ್ಯೇವಂ ನ ತಚ್ಚಿತ್ರಂ ಫಲಂ ವಾ ಶೂರಸಂಮತಂ ।
ಗಚ್ಛನ್ ಹಿ ಪಾದವಾನ್ ಭೂಮೌ ದಿವಾಽಪಿ ಸ್ಖಲತಿ ಕ್ವಚಿತ್ ॥೨೫॥

ನ ಸ್ಖಲಂತಿ ಕ್ವಚಿದಪಿ ಸ್ಥಾವರಾಃ ಕಿಂ ತತೋ ಭವೇತ್ ।
ಜಯಾ ಜಯೌ ಯುದ್ಧವಿಧಾವನಿರ್ದೇಶ್ಯಾ ಕಥಂ ಚನ ॥೨೬॥

ವಿಷಂಗನ ಈ ಮಾತನ್ನು ಕೇಳಿ ವಿಶುಕ್ರನು ಮುಗುಳುನಗೆಯನ್ನು ನಕ್ಕು ಈ ರೀತಿಯಲ್ಲಿ ಹೇಳಿದನು. ಲಲಿತಾದೇವಿಯ ಪರಾಕ್ರಮದಿಂದ ನೀನು ಬುದ್ಧಿಯನ್ನು ಕೆಡಿಸಿಕೊಂಡು ಭಂಡಾಸುರನ ಇಷ್ಟಾರ್ಥಸಿದ್ಧಿಯ ಮಾರ್ಗವನ್ನು ತಿಳಿಯದೇ ಇರುತ್ತೀಯೆ. ||೨೩||

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ಜಯವನ್ನು ತಂದುಕೊಡುವ ರಾಜನೀತಿಯನ್ನು ನೀನು ಅರಿತಿಲ್ಲ. ಯುದ್ಧದಲ್ಲಿ ಕೆಲವು ವೇಳೆ ಅಲ್ಪಬಲವುಳ್ಳವರಾದವರೂ ಕೂಡ ದೊಡ್ಡವರೂ ಮತ್ತು ಶೂರರೂ ಆದವರನ್ನೂ ಜಯಿಸಿರುವುದುಂಟು ! ||೨೪||

ಈ ರೀತಿಯಾಗಿ ನಡೆಯುವುದೇನೂ ಆಶ್ಚರ್ಯಕರವಲ್ಲ. ಮತ್ತು ಇಂಥಾ ಸೋಲನ್ನು ಸೋಲೆಂದು ಶೂರರು ಒಪ್ಪುವುದೂ ಇಲ್ಲ. ಕಾಲಿನಿಂದ ನಡೆಯುವ ಮನುಷ್ಯನು ಹಗಲು ಹೊತ್ತಿನಲ್ಲೇ ಕೆಲವು ವೇಳೆ ಜಾರುವುದುಂಟು. ||೨೫||

ಚಲಿಸದೇ ಇರುವ ಜಡಪದಾರ್ಥಗಳು ಎಲ್ಲಿಯೂ ಜಾರುವುದೇ ಇಲ್ಲ. ಅಷ್ಟು ಮಾತ್ರದಿಂದ ಅದೇನು ವಿಶೇಷ ಪ್ರಯೋಜನವಾದಂತಾಯಿತು ? ಯುದ್ಧಕಾರ್ಯದಲ್ಲಿ ಜಯವನ್ನಾಗಲಿ ಅಥವಾ ಅಪಜಯವನ್ನಾಗಲೀ ಯಾವ ರೀತಿಯಲ್ಲಿಯೂ ಮುಂದಾಗಿ ನಿರ್ಧರಿಸುವುದು ಕಷ್ಟ. ||೨೬||

ಪರಂತು ಜಯ ಏವೈಷ ಯಃ ಪರ್ಯವಸಿತೋ ಭವೇತ್ ।
ನಾಽಸ್ಯೋ ಜಯೋ ಜಯಃ ಪ್ರೋಕ್ತ ಸ್ತ್ವಂತರಾ ಸಂವಿಭಾವಿತಃ ॥೨೭॥

ಅಹೋ ಮೋಹಸ್ಯ ಮಾಹಾತ್ಮ್ಯಂ ಕಿಂ ವದಾಮ್ಯಹ ಮದ್ಯ ತೇ ।
ವಿಚಾರೋ ಧೈರ್ಯಸಹಿತೋ ಮಂತ್ರಯುಕ್ತೋ ಜಯಾವಹಃ ॥೨೮॥

ವಿರಮೈವಂ ವಿಪರ್ಯಾಸಾ ಭಾವಾತ್ ಸರ್ವಾರ್ಥನಾಶನಾತ್ ।
ಶೃಣು ಮೇ ಮಂತ್ರಿತಂ ಸದ್ಯ ಸ್ತವ ದುಃಖ ವಿನಾಶನಂ ॥೨೯॥

ಯೇನೋಪಾಯೇನ ವಿಬುಧಾಃ ಶಕ್ರಮುಖ್ಯಾ ವಿನಿರ್ಜಿತಾಃ ।
ಪುರಾ ಭೂಯೋ ವಿಸ್ಮೃತಂ ತೇ ತದಹಂ ಶೃಣು ಯುದ್ಬ್ರುವೇ ॥೩೦॥

ಪ್ರತ್ಯರಿ ಪ್ರತ್ಯೂಹಕರ ಮಾಭಿಚಾರಾತ್ಮ ಕಂ ತು ತತ್ ।
ಯಂತ್ರಂ ಶತ್ರುಪ್ರತೀಘಾತಂ ವಿದಿತಂ ಭಾರ್ಗವಾನ್ಮಯಾ ॥೩೧॥

ಪರ್ಯವಸಾನದಲ್ಲಿ ನಮಗೆ ಜಯವನ್ನು ತಂದುಕೊಡುವ ಈ ಅಪಜಯವನ್ನೂ ಜಯವೆಂದೇ ತಿಳಿಯಬೇಕು. ಮಧ್ಯದಲ್ಲಿ ಬಂದೊದಗಿದ ಇಂತಹ ಅಪಜಯವು ಅಪಜಯವೇ ಅಲ್ಲವೆಂಬುದಾಗಿ ಹೇಳಿದೆ. ॥೨೭॥

ಆದರೂ ನಿನ್ನ ಈ ಮೋಹದ ಮಹಿಮೆಯು ಅತ್ಯಂತ ಆಶ್ಚರ್ಯಕರವಾಗಿದೆ. ನಾನೀಗೇನನ್ನು ಹೇಳಲಿ? ಧೈರ್ಯದಿಂದ ಕೂಡಿದ ಮಂತ್ರಾಲೋಚನೆಯಿಂದಲೇ ಮಾಡಿದ ವಿಚಾರವು ಜಯವನ್ನು ತಂದುಕೊಡುವುದೆಂದು ನಿರ್ಧರವಾಗಿ ಹೇಳುತ್ತೇನೆ. ॥೨೮॥

ಎಲ್ಲಾ ಪ್ರಯೋಜನಗಳನ್ನೂ ಹಾಳುಮಾಡುವ ಈ ವ್ಯತ್ಯಾಸವಾದ ಮನೊಭಾವವನ್ನು ಸಾಕುಮಾಡು. ನಿನ್ನ ದುಃಖವನ್ನು ಹೋಗಲಾಡಿಸುವ ನನ್ನ ಮಂತ್ರಾಲೋಚನೆಯನ್ನು ಈಗ ಹೇಳುವೆನು ಕೇಳು. ॥೨೯॥

ಇಂದ್ರನೇ ಮೊದಲಾದವರನ್ನು ಯಾವ ಉಪಾಯದಿಂದ ನಾವು ಹಿಂದೆ ಜಯಿಸಿದೆವೋ ಅದನ್ನು ನೀನು ಮರೆತಿರುವಹಾಗೆ ತೋರುತ್ತದೆ. ಆದ್ದರಿಂದ ಪುನಃ ಹೇಳುವ ನನ್ನ ಈ ಮಾತುಗಳನ್ನು ಕೇಳುವವನಾಗು. ॥೩೦॥

ಶತ್ರುಗಳಿಗೆ ವಿಘ್ನವನ್ನುಂಟುಮಾಡುವ ಮಾಟದ ರೂಪವಾದ ಕರ್ಮವಿದೆ ಎಂದು ತಿಳಿ. ಪರಶುರಾಮನಿಂದ ನಮ್ಮ ಶತ್ರುಗಳನ್ನು ನಾಶಮಾಡುವ ಯಂತ್ರ ರಚನೆಯನ್ನು ನಾನು ತಿಳಿದಿದ್ದೇನೆ. ॥೩೧॥

ತದದ್ಯ ರಚಯಾಮ್ಯಾಶು ವಿಧಿದೃಷ್ಟೇನ ವರ್ತ್ಮನಾ ।
ತತ್ಪ್ರಯೋಗಾದ್ಭವೇದೇವಂ ನಿಹತಂ ಶಕ್ತಿಸೈನಿಕಂ ॥೩೨॥

ಲಿಖಿತ್ವಾಽಹಂ ಶಿಲಾಪದೇ ತುಭ್ಯಂ ದಾಸ್ಯಾಮಿ ಸಂಪ್ರತಿ ।
ತ್ವಂ ಯುಕ್ತ್ಯಾ ಶಕ್ತಿಸೇನಾಸು ಪ್ರಕ್ಷಿಪ್ಯಾಽಽಗಚ್ಛ ಸತ್ವರಂ ॥೩೩॥

ತತಸ್ತಾಃ ಶಕ್ತಯೋ ನಷ್ಟ ವೀರ್ಯೋದ್ಯೋಗಾಸ್ತತೋ ವಯಂ ।
ಗತ್ವಾ ದೈತ್ಯ ಚಮೂಯುಕ್ತಾ ಅನಾಯಾಸೇನ ಸತ್ವರಂ ॥೩೪॥

ನಾಶಯಾಮಃ ಶಕ್ತಿಗಣಂ ನಾಽತ್ರ ಸಂಶಯಮಾಪ್ನುಹಿ ।
ಉತ್ತಿಷ್ಠ ಜಹಿ ಸಂತಾಪಂ ಶೋಕಜಂ ವೀರ್ಯನಾಶನಂ ॥೩೫॥

ಶ್ರುತ್ವೇತ್ಥಂ ಭ್ರಾತೃಕಥಿತಂ ಮಹಾಮಾಯಾವಿಮೋಹಿತಃ ।
ಜಿತಮಿತ್ಯೇವ ನಿಶ್ಚಿತ್ಯ ಹರ್ಷಮಾಹಾರಯತ್ಪರಂ ॥೩೬॥

ಶಾಸ್ತ್ರೋಕ್ತವಾದ ಮಾರ್ಗದಲ್ಲಿ ಆ ಯಂತ್ರವನ್ನು ಈಗ ರಚಿಸುವೆನು. ಅದರ ಪ್ರಯೋಗದಿಂದ ಶಕ್ತಿಸೈನ್ಯಗಳೆಲ್ಲವೂ ನಾಶವಾಗುವುವು. ॥೩೨॥

ಅದನ್ನು ಕಲ್ಲಿನ ಮೇಲಿನ ಪ್ರದೇಶದಲ್ಲಿ ಬರೆದು ನಿನಗೆ ಕೊಡುವೆನು. ನೀನು ಉಪಾಯದಿಂದ ಶಕ್ತಿಸೈನ್ಯಗಳಲ್ಲಿ ಅದನ್ನು ಹಾಕಿ ಶೀಘ್ರವಾಗಿ ಹಿಂತಿರುಗಿ ಬಾ. ॥೩೩॥

ಅನಂತರ ಆ ಶಕ್ತಿಗಳು ತಮ್ಮ ಪರಾಕ್ರಮ ಪ್ರಯತ್ನ ಇವೆಲ್ಲವನ್ನೂ ಕಳೆದುಕೊಳ್ಳುವರು. ಆಗ ನಾವುಗಳು ರಾಕ್ಷಸಸೈನಿಕರೊಂದಿಗೆ ಶೀಘ್ರವಾಗಿ ಹೋಗಿ ಅವರುಗಳನ್ನು ಎದುರಿಸೋಣ. ॥೩೪॥

ಆಮೇಲೆ ನಾವುಗಳು ಆ ಶಕ್ತಿಗಳ ಸಮೂಹಗಳನ್ನು ನಾಶಮಾಡೋಣ. ಈ ವಿಚಾರದಲ್ಲಿ ಸಂಶಯವನ್ನೇ ಪಡಬೇಡ. ಏಳು. ದುಃಖದಿಂದುಂಟಾದ, ಪರಾಕ್ರಮವನ್ನೇ ಹಾಳುಮಾಡುವ, ಈ ಪಶ್ಚಾತ್ತಾಪವನ್ನು ಬಿಡು. ॥೩೫॥

ತಮ್ಮ ಅಣ್ಣನು ಹೇಳಿದ ಈ ಮಾತನ್ನು ಕೇಳಿ ವಿಷಂಗರಾಕ್ಷಸನು ಮಹಾಮಾಯೆಯಿಂದ ಮೋಹಗೊಂಡವನಾಗಿ, ನಾವು ಶಕ್ತಿಗಳನ್ನು ಜಯಿಸಿದಂತೆಯೇ ಸರಿ! ಎಂದು ನಿಶ್ಚಯಿಸಿ ಬಹಳ ಸಂತೋಷವನ್ನು ಹೊಂದಿದನು. ॥೩೬॥

ತುಷ್ಟಾವ ಭ್ರಾತರಂ ಭ್ರಾತಾ ಸಂಶ್ಲಾಘನ್ ಬುದ್ಧಿಕೌಶಲಂ ।
ಅಥೈತದ್ದೈತ್ಯರಾಜಾಯ ಮಂತ್ರಮಾವೇದ್ಯ ಸಮ್ಮತಃ ॥೩೭॥

ನಿರ್ಗಮೋ ತದ್ವಿಘ್ನಕರಂ ಯಂತ್ರಂ ದಾರ್ಷದಪಟ್ಟಕೇ ।
ಸ್ನಾತ್ವಾ ಶುಚಿವಿಧಾನೇನ ಯಂತ್ರ ಮಾಲಿಖ್ಯ ತದ್ದ್ರುತಂ ॥೩೮॥

ಸಂಪೂಜ್ಯ ತತ್ರ ದೇವೀಂ ತಾ ಮಾಸುರೀಂ ವಿಘ್ನಕಾರಿಣೀಂ ।
ಸುರಾ ಮಾಂಸೋಪಹಾರಾಽದ್ಯೈ ರ್ನಿವೇದ್ಯ ವಿವಿಧೈಸ್ತದಾ ॥೩೯॥

ಸ್ವಯಂ ದಿಗ್ವಸನೋ ಭೂತ್ವಾ ಶ್ಮಶಾನಭಸಿತಾಽಶ್ರಯಃ ।
ಪಪೌ ಸುರಾಂ ಕರೋಟೀಸ್ಥಾಂ ವಾಮಮಾರ್ಗ ಸಮಾಶ್ರಯಃ ॥೪೦॥

ಜಜಾಪ ಜಪ್ಯಂ ಕೈಕಸ್ಯಾ ಮಾಲಯಾ ದಕ್ಷ ದಿಙ್ಮುಖಃ ।
ಸಮಂತಾನ್ನಗ್ನಯುವತೀಗಣೇನ ಪರಿವಾರಿತಃ ॥೪೧॥

ಅಣ್ಣನ ಮಾತನ್ನು ಕೇಳಿ ವಿಷಂಗನು ಅವನ ಬುದ್ಧಿಯ ನಿಪುಣತೆಗೆ ಮೆಚ್ಚಿ ಅವನನ್ನು ಪ್ರಶಂಸೆ ಮಾಡಿದನು. ಅನಂತರ ಅವನು ಈ ಮಂತ್ರಾಲೋಚನೆಯನ್ನು ರಾಕ್ಷಸರಾಜನಾದ ಭಂಡನಿಗೆ ತಿಳಿಸಿ ಅವನ ಒಪ್ಪಿಗೆಯನ್ನು ಪಡೆದನು. ॥೩೭॥

ಆಮೇಲೆ ಅವನು ಕಲ್ಲಿನ ತುಂಡಿನಲ್ಲಿ ಶಕ್ತಿಗಳಿಗೆ ಯುದ್ಧದಲ್ಲಿ ವಿಘ್ನವನ್ನುಂಟು ಮಾಡುವ ಯಂತ್ರವನ್ನು ರಚಿಸಿದನು. ಆಮೇಲೆ ಸ್ನಾನಮಾಡಿ ಪರಿಶುದ್ಧನಾಗಿ ಶೀಘ್ರವಾಗಿ ಅವನು ಆ ಯಂತ್ರವನ್ನು ಬರೆದನು. ॥೩೮॥

ಅದರಲ್ಲಿ ಅವನು ರಾಕ್ಷಸರಿಗೆ ಸಂಬಂಧಪಟ್ಟ ಶಕ್ತಿಗಳಿಗೆ ವಿಘ್ನವನ್ನುಂಟು ಮಾಡುವ ದೇವಿಯನ್ನು ಪೂಜಿಸಿ ಅನೇಕ ವಿಧವಾದ ಮದ್ಯಗಳು ಮತ್ತು ಮಾಂಸ ಗಳು ಮುಂತಾದುವುಗಳಿಂದ ಆರಾಧಿಸಿದನು. ॥೩೯॥

ಆ ರಾಕ್ಷಸನು ವಾಮಾಚಾರದಲ್ಲಿ ತೊಡಗಿದವನಾಗಿ ತಾನು ದಿಗಂಬರನಾಗಿ ಸ್ಮಶಾನದಲ್ಲಿರುವ ಬೂದಿಯನ್ನು ಮೈಗೆಲ್ಲಕ್ಕೂ ಹಚ್ಚಿಕೊಂಡು ರುಂಡದಲ್ಲಿದ್ದ ಮದ್ಯ ವನ್ನು ಚೆನ್ನಾಗಿ ಪಾನಮಾಡಿದನು. ॥೪೦॥

ದಕ್ಷಿಣ ದಿಕ್ಕಿಗೆ ಎದುರಾಗಿ ಕುಳಿತುಕೊಂಡು ಆ ರಾಕ್ಷಸನು ಕೈಕಸೀ ಎಂಬ ಮೊಳೆಗಳ ಹಾರವನ್ನು ಹಾಕಿಕೊಂಡು ಜಪಿಸಬೇಕಾದ ಮಂತ್ರಗಳನ್ನು ಜಪಿಸಿದನು. ಆಗ ಅವನ ಸುತ್ತಲೂ ನಗ್ನರಾಗಿದ್ದ ತರುಣಿಯರು ನಿಂತಿದ್ದರು. ॥೪೧॥

ಏವಂ ಸಂಸಾಧ್ಯ ತದ್ಯಂತ್ರಂ ವಿಷಂಗಾಯ ದದೌ ತದಾ ।
ವತ್ಸೈತಚ್ಛಕ್ತಿಸೇನಾಯಾ ಮಧ್ಯೇಽಭಿಮುಖಭಾವತಃ ॥೪೨॥

ಲಲಿತಾರಥರಾಜಸ್ಯ ನಿಕ್ಷಿಪ್ಯಾಽಽಯಾಹಿ ಸತ್ವರಂ ।
ಅನೋಘಂ ವಿಘ್ನಯಂತ್ರಂ ತದಾದಾಯ ತತ್ರ ಸಂಯಯೌ ॥೪೩॥

ರಾತ್ರಿಶೇಷೇ ವಿಷಂಗೋಽಽಥ ಜ್ವಾಲಾಸಾಲಂ ದದರ್ಶ ಹ ।
ಅಧೃಷ್ಯಂ ತಂ ಸಮಾಲಕ್ಷ್ಯ ದ್ವಾರೇ ಶಕ್ತಿಗಣಂ ತಥಾ ॥೪೪॥

ನ ತತ್ಸಮೀಪಂ ಗತವಾನ್ ಭೀತ್ಯಾ ದೂರೇ ಸಮಾಸ್ಥಿತಃ ।
ವಿಚಾರ್ಯ ಖಮವಪ್ಲುತ್ಯ ಸಾಲಂ ತಮತಿವರ್ತಿತುಂ ॥೪೫॥

ಈ ರೀತಿಯಾಗಿ ಆ ಯಂತ್ರವನ್ನು ಸಾಧಿಸಿ ವಿಶುಕ್ರನು ಅದನ್ನು ವಿಷಂಗನಿಗೆ ಕೊಟ್ಟನು. ಮತ್ತು ಅವನು ಎಲೈ ಪ್ರೀತಿಪಾತ್ರನೇ, ನೀನು ಈ ಯಂತ್ರವನ್ನು ಶಕ್ತಿಸೇನೆಯ ಮಧ್ಯಭಾಗದಲ್ಲಿ ಅದಕ್ಕೆ ಎದುರಾಗಿಡು. ಎಂದು ವಿಷಂಗನಿಗೆ ಹೇಳಿದನು. ॥೪೨॥

ನೀನು ಹೋಗಿ ಈ ಯಂತ್ರವನ್ನು ಶಕ್ತಿಸೈನ್ಯದ ಮಧ್ಯಭಾಗದಲ್ಲ ಲಲಿತಾದೇವಿಯ ಶ್ರೇಷ್ಠರಥದ ಮುಂದೆ ಇಟ್ಟು ಶೀಘ್ರವಾಗಿ ಬಾ. ಎಂಬುದಾಗಿ ಹೇಳಿದನು. ವಿಷಂಗನು ಅದರಂತೆಯೇ ವ್ಯರ್ಥವಾಗದ ಆ ವಿಘ್ನಕಾರಕವಾದ ಯಂತ್ರವನ್ನು ತೆಗೆದುಕೊಂಡು ಅಲ್ಲಿಗೆ ಶೀಘ್ರವಾಗಿ ಹೋದನು. ॥೪೩॥

ಅನಂತರ ವಿಷಂಗನು, ರಾತ್ರಿಯು ಸ್ವಲ್ಪ ಭಾಗ ಉಳಿದಿರಲು, ಶಕ್ತಿಸೈನ್ಯದ ಮುಂದುಗಡೆ ಜ್ವಾಲೆಯಿಂದಲೇ ಮಾಡಿದ ಕೋಟೆಯನ್ನು ನೋಡಿದನು. ಆಗ ಅವನು ಆ ಕೋಟೆಯನ್ನು ದಾಟಲು ಅಸಾಧ್ಯವೆಂದು ತಿಳಿದು ಶಕ್ತಿಗಳ ಗುಂಪಿನವರಿರುವ ಆ ಕೋಟೆಯ ಬಾಗಿಲಿಗೆ ಹೋಗಲೇ ಇಲ್ಲ. ॥೪೪॥

ದೂರದಲ್ಲೇ ಇದ್ದವನಾಗಿ ವಿಷಂಗನು ಭಯದಿಂದ ಆ ಕೋಟೆಯ ಸಮೀಪಕ್ಕೆ ಹೋಗಲೇ ಇಲ್ಲ. ಆಗ ಅವನು ಯೋಚಿಸಿ ಆಕಾಶಕ್ಕೆ ಹಾರಿ ಆ ಕೋಟೆಯನ್ನು ದಾಟಲು ಪ್ರಯತ್ನಪಟ್ಟನು. ॥೪೫॥

ಅಸಮರ್ಥೋಽಬಲೇನಾಂತಃ ಪ್ರಕ್ಷಿಪ್ಯ ಪ್ರಯಯೌ ಪುನಃ ।
ಮತ್ವಾ ಕೃತಾರ್ಥಮಾತ್ಮಾನ ಮಾಚಖ್ಯಾವಗ್ರಜಾಯ ತತ್ ॥೪೬॥

ವಿಘ್ನಯಂತ್ರೇಣ ವಿಹತಾಃ ಶಕ್ತಯಃ ಸ್ಯುರತೋ ದ್ರುತಂ ।
ಯಸ್ಮಾದಮೋಘಂ ತದ್ಯಂತ್ರ ಮಾಪೂರ್ಯ ಸಮಧಿಷ್ಠಿತಂ ॥೪೭॥

ಇತಿಮತ್ವಾ ಯುದ್ಧವಿಧಾ ವುದ್ಯೋಗಂ ವಿದಧೇಽಸುರಃ ।
ವಿಶುಕ್ರಃ ಸರ್ವದೈತ್ಯಾನಾಂ ಸೇನಯಾ ಭ್ರಾತೃಸಂಯುತಃ ॥೪೮॥

ರಾಜಪುತ್ರೈಶ್ಚ ರಾಜ್ಞಾ ಚ ನಿರ್ಯಯೌ ನಗರಾದ್ಬಹಿಃ ।
ಯೋಷಿತ್ಸ್ಥವಿರ ಬಾಲಾಂಶ್ಚ ವರ್ಜಯಿತ್ವಾಽಖಿಲಾಽಸುರಾಃ ॥೪೯॥

ರಕ್ಷಣಾರ್ಥಂ ಶೂನ್ಯಕಸ್ಯ ನಿಕ್ಷಿಪ್ಯಾಽಕ್ಷೌಹಿಣೀಮಿತಾಂ ।
ನಿರ್ಯಯುಃ ಸರ್ವ ಏವೈತೇ ದೈತ್ಯಾ ಯುದ್ಧಾಯ ದಂಶಿತಾಃ ॥೫೦॥

ಆದರೆ ವಿಷಂಗನು ಹಾರಲೂ ಅಸಮರ್ಥನಾಗಿ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ಆ ಯಂತ್ರವನ್ನು ಒಳಕ್ಕೆ ಎಸೆದು, ತಾನು ಧನ್ಯನೆಂದೂ ಬಗೆದು, ಹಿಂತಿರುಗಿ ಪುನಃ ಅಣ್ಣನ ಹತ್ತಿರದಲ್ಲಿ ಈ ವಿಷಯವನ್ನು ವಿಜ್ಞಾಪಿಸಿದನು. ॥೪೬॥

ಆ ವಿಶುಕ್ರರಾಕ್ಷಸನೂ ಕೂಡ ಆ ವ್ಯರ್ಥವಲ್ಲದ ಯಂತ್ರದಲ್ಲಿ ಶಕ್ತಿಯನ್ನು ತುಂಬಿಟ್ಟಿದ್ದುದರಿಂದ ವಿಘ್ನಕಾರಕವಾದ ಆ ಯಂತ್ರದಿಂದ ಶಕ್ತಿಗಳು ಶೀಘ್ರದಲ್ಲಿಯೇ ನಾಶವಾಗುವರೆಂದು ಯೋಚಿಸಿ ಪುನಃ ಯುದ್ಧ ಮಾಡಲು ಎಲ್ಲವನ್ನೂ ಸಿದ್ಧಗೊಳಿಸಿದನು. ॥೪೭॥

ಈರೀತಿಯಾಗಿ ಯೋಚಿಸಿ ವಿಶುಕ್ರರಾಕ್ಷಸನು ಯುದ್ಧಕಾರ್ಯಕ್ಕೆ ತೊಡಗಿದವನಾಗಿ ಎಲ್ಲಾ ರಾಕ್ಷಸರ ಸೈನ್ಯದೊಂದಿಗೂ ಮತ್ತು ತಮ್ಮ ತಮ್ಮಂದಿರೊಂದಿಗೂ ಕೂಡಿದವನಾಗಿ ಯುದ್ಧಕ್ಕೆ ಹೊರಟನು. ॥೪೮॥

ವಿಶುಕ್ರನೂ ರಾಜಪುತ್ರರೂ ಮತ್ತು ಭಂಡರಾಕ್ಷಸರಾಜ ಇವರೊಂದಿಗೂ ಪಟ್ಟಣದ ಹೊರಗೆ ಹೊರಟನು. ಅಲ್ಲದೆ ಅವನು ಹೆಂಗಸರು ವೃದ್ಧರು ಬಾಲಕರು ಇವರುಗಳನ್ನು ಪಟ್ಟಣದಲ್ಲಿಯೇ ಬಿಟ್ಟು ಉಳಿದಿದ್ದ ಸಮಸ್ತ ರಾಕ್ಷಸರುಗಳನ್ನೂ ಕೂಡ ಕರೆದುಕೊಂಡು ಯುದ್ಧಕ್ಕೆ ಹೋದನು. ॥೪೯॥

ಆದರೆ ಅವನು ಒಂದು ಅಕ್ಷೌಹಿಣಿಯಷ್ಟು ಸೈನ್ಯವನ್ನು ಶೂನ್ಯಕ ಎಂಬ ತಮ್ಮ ರಾಜಧಾನಿಯ ರಕ್ಷಣೆಗಾಗಿ ಬಿಟ್ಟನು. ಇತರ ಸಮಸ್ತ ರಾಕ್ಷಸರೂ ಕೋಪದಿಂದ ಹಲ್ಲುಗಳನ್ನು ಕಡಿಯುತ್ತಾ ಶಕ್ತಿಗಳೊಂದಿಗೆ ಯುದ್ಧಕ್ಕಾಗಿ ಹೊರಟರು. ॥೫೦॥

ಆಜಗ್ಮುರಗ್ನಿಸಾಲಸ್ಯ ಸಮೀಪಮತಿವೇಗತಃ ।
ದೃಷ್ಟ್ವಾಽಪ್ರಧೃಷ್ಯಂ ತಂ ಸಾಲಂ ಭೇತ್ತುಂ ತೇ ಮನ ಆದಧುಃ॥೫೧॥

ವಿಶುಕ್ರಪ್ರಮುಖಾ ದೈತ್ಯಾ ಅಸ್ತ್ರಾಣಿ ಸಸೃಜುಸ್ತತಃ ।
ವಾಯವ್ಯಂ ಪಾರ್ವತಂ ಚಾಂದ್ರಂ ಶೈಶಿರಂ ಪಾರ್ಥಿವಂ ತಥಾ ॥೫೨॥

ಸಾಮುದ್ರಂ ವಾರುಣಂ ವಾರ್ಷಂ ಪಾರ್ಜನ್ಯಪ್ರಮುಖಾನಿ ಚ ।
ವಿಸೃಷ್ಟಂ ಸಾಲಮಭಿತೋ ಮಂತ್ರಸಂಧಾನ ಸಾಧಿತಂ ॥೫೩॥

ಸಂವರ್ತಾಽಗ್ನಿ ಸ್ತೃಣಮಿವ ಸಾಲೋ ನಿಃಶೇಷತಾಂ ನಯೆತ್ ।
ಮತ್ವಾಽಭೇದ್ಯಂ ತು ತಂ ಸಾಲಂ ವಿಶುಕ್ರಪ್ರಮುಖಾಽಸುರಾಃ ॥೫೪॥

ಉತ್ಪತ್ಯ ಯಾತು ಮಂತಸ್ತೇ ಮನ ಉಚ್ಚೈಃ ಸಮಾ ದಧುಃ ।
ಉತ್ಪ್ಲುತ್ಯ ಯಾವದ್ಯೋ ದೈತ್ಯೋ ಗಂತುಮಂತಃ ಸಮೀಪ್ಸತಿ॥೫೫॥

ಅವರೆಲ್ಲರೂ ಬಹಳ ಜಾಗ್ರತೆಯಾಗಿ ಬೆಂಕಿಯಿಂದ ಮಾಡಿದ್ದ ಆ ಕೋಟೆಯ ಹತ್ತಿರಕ್ಕೆ ಬಂದರು. ನಾಶಮಾಡಲು ಸಾಧ್ಯವಾಗದ ಆ ಕೋಟೆಯನ್ನು ಒಡೆಯಲು ಅವರೆಲ್ಲರೂ ಮನೋನಿಶ್ಚಯಮಾಡಿದರು. ||೫೧||

ವಿಶುಕ್ರ ಮೊದಲಾದ ರಾಕ್ಷಸರು ವಾಯುವ್ಯ, ಪಾರ್ವತ, ಚಾಂದ್ರ, ಶೈಶಿರ, ಪಾರ್ಥಿವ ಮುಂತಾದ ಅನೇಕವಿಧವಾದ ಅಸ್ತ್ರಗಳನ್ನು ಕೋಟೆಯ ಗೋಡೆಗೆ ಹೊಡೆದರು. ||೫೨||

ಅವರು ಮಂತ್ರಪುರಸ್ಸರವಾಗಿ ಸಾಮುದ್ರ, ವಾರುಣ, ವಾರ್ಷ, ಪಾರ್ಜನ್ಯ ಮುಂತಾದ ಅಸ್ತ್ರಗಳನ್ನು ಕೋಟೆಯ ಸುತ್ತಲೂ ಪ್ರಯೋಗಿಸಿದರು. ||೫೩||

ಸಂವರ್ತ ಎಂಬ ಅಗ್ನಿಯಿಂದ ರಚಿಸಲ್ಪಟ್ಟಿದ್ದ ಆ ಕೋಟೆಯು ಆ ಅಸ್ತ್ರಗಳನ್ನೆಲ್ಲವನ್ನೂ ಕ್ಷಣಕಾಲದಲ್ಲಿ ನಾಶಮಾಡಿತು! ಆದ್ದರಿಂದ ಆ ಕೋಟೆಯನ್ನು ಭೇದಿಸುವುದು ಅಸಾಧ್ಯವೆಂದು ವಿಶುಕ್ರ ಮೊದಲಾದ ರಾಕ್ಷಸರು ತಿಳಿದರು. ||೫೪||

ಆಗ ಅವರೆಲ್ಲರೂ ಮೇಲೆ ಹಾರಿ ಕೋಟೆಯ ಒಳಗೆ ಪ್ರವೇಶಿಸಲು ದೃಢ ನಿಶ್ಚಯಮಾಡಿದರು. ಹೀಗೆ ಹಾರಿ ಪ್ರತಿಯೊಬ್ಬ ರಾಕ್ಷಸನೂ ಒಳಗಡೆ ಹೋಗಲು ಇಷ್ಟಪಟ್ಟನು. ||೫೫||

ತತೋಽಧಿಕತರಂ ತತ್ರ ಪ್ರಾಕಾರಃ ಸಮವರ್ಧತ ।
ತದಪ್ಯಶಕ್ಯಂ ಮತ್ವಾ ತೇ ಪ್ರವೇಷ್ಟುಂ ದ್ವಾರಮಾಯಯುಃ ॥೫೬॥

ಪ್ರವಿಶಂತಂ ತತೋಽಪ್ಯಗ್ನಿಃ ಕ್ಷಣಾದ್ಭಸ್ಮೀಕರೋತ್ಯಲಂ ।
ಮತ್ವಾಽಂತರ್ಗಮನಂ ತಸ್ಯ ದುರ್ಘಟಂ ದ್ವಾರದೇಶಗಾಃ ॥೫೭॥

ಶಸ್ತ್ರಾಣಿ ದ್ವಾರಮಾರ್ಗೇಣ ಚಾಸ್ತ್ರಾಣ್ಯಲಮವಾಽಸೃಜುಃ ।
ವಿದಿತ್ವಾ ದೈತ್ಯಸೇನಾಯಾಃ ಸನ್ನಾಹಂ ದ್ವಾರರೋಧನಂ ॥೫೮॥

ದಂಡರಾಜ್ಞೀ ಶಕ್ತಿಸೇನಾ ಸಜ್ಜನಾಽರ್ಥಂ ಸಮಾದಿಶತ್ ।
ವಿಘ್ನಯಂತ್ರೇಣ ವಿಹತಾಃ ಶಕ್ತಯಃ ಸರ್ವತಃ ಸ್ಥಿತಾಃ ॥೫೯॥

ಆಲಸ್ಯೋಽಪಹತಾಶ್ಚಾಽನ್ಯಾ ನಿದ್ರಾಮೋಽಹ ಸಮಾಕುಲಾಃ ।
ದಂಡರಾಜ್ಞೀ ಸಮಾದೇಶಂ ನ ಕಿಂಚಿನ್ಮಾನಯಂತಿ ತಾಃ ॥೬೦॥

ಆಗ ಅವರು ಹಾರುವುದಕ್ಕೂ ಅವಕಾಶಕೊಡದಂತೆ ಅವರಿಗಿಂತಲೂ ಎತ್ತರದಲ್ಲಿ ಹೆಚ್ಚಾಗಿ ಕೋಟೆಯು ಬೆಳೆಯಿತು. ಇದೂ ಅಸಾಧ್ಯವೆಂದು ತಿಳಿದು ಅವರು ಪ್ರವೇಶಿಸುವುದಕ್ಕಾಗಿ ಬಾಗಿಲಿನ ಬಳಿಗೆ ಬಂದರು. ||೫೬||

ಈರೀತಿಯಾಗಿ ಪ್ರವೇಶಮಾಡುತ್ತಿರುವ ಪ್ರತಿಯೊಬ್ಬ ರಾಕ್ಷಸನನ್ನೂ ಕ್ಷಣಕಾಲದಲ್ಲಿಯೇ ಆ ಬೆಂಕಿಯು ಚೆನ್ನಾಗಿ ಬೂದಿಮಾಡಿತು. ಬಾಗಿಲಿನ ಬಳಿಯಲ್ಲಿರುವ ರಾಕ್ಷಸರು ಈರೀತಿಯಾಗಿ ಒಳಗೆ ಪ್ರವೇಶಿಸುವುದನ್ನೂ ಅಸಾಧ್ಯವೆಂದು ತಿಳಿದರು. ||೫೭||

ಆಗ ಅವರು ಆ ಬಾಗಿಲಿನ ಮೂಲಕವೇ ಅನೇಕ ಶಸ್ತ್ರಗಳು ಮತ್ತು ಅಸ್ತ್ರಗಳನ್ನು ಚೆನ್ನಾಗಿ ಪ್ರಯೋಗಿಸಿದರು. ದಂಡನಾಯಕಿಯು ರಾಕ್ಷಸರು ನುಗ್ಗಲು ಪ್ರಯತ್ನಪಡುತ್ತಿರುವರೆಂಬುದನ್ನು ತಿಳಿದು ಬಾಗಿಲನ್ನು ಭದ್ರವಾಗಿ ತಡೆದು ರಕ್ಷಿಸಲು ತನ್ನ ಸೈನ್ಯಕ್ಕೆ ಅಪ್ಪಣೆ ಮಾಡಿದಳು. ||೫೮||

ದಂಡನಾಯಕಿಯು ಶಕ್ತಿಸೈನ್ಯವನ್ನು ಸಿದ್ಧವಾಗುವಂತೆ ಅಪ್ಪಣೆಮಾಡಿದಳು. ಆದರೆ ಆಗ ವಿಘ್ನಯಂತ್ರದಿಂದ ಎಲ್ಲಾ ಕಡೆಯಲ್ಲಿಯೂ ಇದ್ದ ಅನೇಕ ಶಕ್ತಿಗಳು ತಮ್ಮ ಶಕ್ತಿಯನ್ನು ಕಳೆದುಕೊಂಡು ಮೌನವಾಗಿ ಇದ್ದರು ! ||೫೯||

ಬೇರೇ ಕೆಲವು ಶಕ್ತಿಯರು ಸೋಮಾರಿತನದಿಂದ ಕೂಡಿ, ನಿದ್ರೆಯ ಮೋಹಕ್ಕೊಳಗಾಗಿದ್ದರು ! ಆದ್ದರಿಂದ ಅವರು ದಂಡನಾಯಕಿಯ ಅಪ್ಪಣೆಯನ್ನು ಗೌರವಿಸಲೇ ಇಲ್ಲ. ಅಲ್ಲದೆ ಹೇಗೆ ಚಿಂತಿಸುತ್ತಿದ್ದರು ! ||೬೦||

ಕಿನ್ನಃ ಕೃತ್ಯಂ ಯುದ್ಧವಿಧೌ ದೈತ್ಯಾನಾಂ ಘಾತನಂ ಕುತಃ ।
ನ ನೋಽಪರಾದ್ಧಂ ದೈತೇಯೈಃ ಕಥಂ ತೈರ್ವಿಗ್ರಹೋ ಮತಃ ॥೬೦॥

ಕುತೋ ವಧ್ಯಾ ದೈತ್ಯಗಣಾ ದೇವಾನಾಮಿಷ್ಟಸಿದ್ಧಯೇ ।
ದೈತ್ಯೇಷ್ಟಸಿದ್ಧಯೇ ಕಸ್ಮಾನ್ನ ವಧ್ಯಾ ದೇವತಾಗಣಾಃ ॥೬೨॥

ಪ್ರಕೃತ್ಯಾ ಕೋಪನಾ ದಂಡರಾಜ್ಞೀ ಸಾ ಮಂತ್ರಿಣೀ ತಥಾ ।
ಪಾನಪ್ರಕರ್ಷತೋ ಮತ್ತಾ ವಿಚಾರಃ ಸ್ಯಾತ್ತಯೋಃ ಕುತಃ ॥೬೩॥

ಮಹಾರಾಜ್ಞ್ಯಪಿ ಕಾಮೇಶ ವಿಲಾಸಪರಮಾ ಸದಾ ।
ಯುಕ್ತಾಽಯುಕ್ತವಿಚಾರೇಣ ಸ್ವತೋ ಹೀನಾ ತು ಸರ್ವದಾ ॥೬೪॥

ಮಂತ್ರಿಣ್ಯಾ ಮತ್ತಯಾ ಪ್ರೋಕ್ತಂ ಮನುತೇ ಸರ್ವಥಾ ಹಿತಂ ।
ಬಾಲಾಯಾಃ ಕೋ ವಿಚಾರಃ ಸ್ಯಾತ್ಕ್ರೀಡಾಽಸಕ್ತಾ ಹಿ ಸಾ ಸದಾ ॥೬೫॥

ನಾವು ಏಕೆ ಯುದ್ಧಮಾಡಬೇಕು? ರಾಕ್ಷಸರನ್ನು ತಾನೇ ಏಕೆ ಕೊಲ್ಲಬೇಕು? ರಾಕ್ಷಸರು ನಮಗೇನೂ ತಪ್ಪು ಮಾಡಿಲ್ಲವಲ್ಲವೇ? ಇಂಥಾವರೊಂದಿಗೆ ನಾವೇಕೆ ಯುದ್ಧವನ್ನು ಮಾಡಬೇಕು? ॥೬೦॥

ದೇವತೆಗಳ ಇಷ್ಟವನ್ನು ನೆರವೇರಿಸುವುದಕ್ಕೋಸ್ಕರ ನಾವೇಕೆ ರಾಕ್ಷಸರನ್ನು ಯುದ್ಧದಲ್ಲಿ ಕೊಲ್ಲಬೇಕು? ರಾಕ್ಷಸರುಗಳಿಗೆ ಇಷ್ಟವನ್ನುಂಟುಮಾಡುವುದಕ್ಕೋಸ್ಕರ ನಾವೇಕೆ ದೇವತೆಗಳೊಂದಿಗೆ ಯುದ್ಧವನ್ನು ಮಾಡಬಾರದು? ॥೬೨॥

ದಂಡನಾಯಕಿ ಮತ್ತು ಮಂತ್ರಿಣೀದೇವಿಯರು ಸ್ವಾಭಾವಿಕವಾಗಿ ಕೋಪಿಸಿಕೊಳ್ಳುವವರು. ಅಲ್ಲದೆ ಅವರು ಹೆಚ್ಚಾಗಿ ಮದ್ಯಪಾನಮಾಡಿರುವುದರಿಂದ ಮದಿಸಿರುವ ಅವರಿಗೆ ಯುಕ್ತಾಯುಕ್ತ ವಿಚಾರಶಕ್ತಿಯೆಲ್ಲಿದೆ? ॥೬೩॥

ಮಹಾರಾಣಿಯಾದ ಲಲಿತಾದೇವಿಯೂ ಕೂಡ ಯಾವಾಗಲೂ ಕಾಮೇಶ್ವರನೊಂದಿಗೆ ವಿಲಾಸಮಾಡುವುದರಲ್ಲೇ ಕಾಲಕಳೆಯುವಳು. ಆಕೆಯು ಯಾವಾಗಲೂ ಇದು ಯುಕ್ತ ಅಥವಾ ಅಯುಕ್ತ ಎಂಬ ವಿಚಾರವನ್ನು ಸ್ವತಃ ಮಾಡಲು ಅಸಮರ್ಥಳಾಗಿದ್ದಾಳೆ. ॥೬೪॥

ಮಂತ್ರಿಣೀದೇವಿಯು ಹೇಳಿದ ಎಲ್ಲಾ ವಿಷಯವನ್ನೂ ಹಿತಕರವೆಂದು ಆಕೆಯು ನಂಬುತ್ತಾಳೆ. ಕುಮಾರಿಯ ವಿಷಯದಲ್ಲಿ ಏನನ್ನೂ ಹೇಳಬೇಕಾಗಿಯೇ

ಅಹೋ ಮೋಹಸ್ಯ ಮಾಹಾತ್ಮ್ಯಂ ಕಿಮರ್ಥಮಸುರಾ ಹತಾಃ ।
ವ್ಯರ್ಥಹಿಂಸಾಽಪರಾಧೇನ ಪ್ರಾಪ್ಸ್ಯಾಮೋ ನಾಶಮಂಜಸಾ ॥೬೬॥

ಇತೋ ನಿರ್ಗತ್ಯ ತೀರ್ಥೇಷು ಗತ್ವಾ ವಿಹಿತಮಾರ್ಗತಃ ।
ದೈತ್ಯ ಹಿಂಸನ ದೋಷಸ್ಯ ಕುರ್ನೋ ನಿಷ್ಕೃತಿಮಾದರಾತ್ ॥೬೭॥

ಕಾಶ್ಚಿದಾಹುರ್ವೃಥಾ ಯುದ್ಧಾದಲಂ ನೋ ದುಃಖವರ್ಧನಾತ್ ।
ಗತ್ವಾ ಸ್ಥಾನೇಷು ತಪಸಾ ಸಾಧಯಾಮಃ ಸಮೀಹಿತಂ ॥೬೮॥

ಅನ್ಯಾ ಊಚುರಲಂ ಯುದ್ಧೈಃ ದುಃಖದೈರ್ದೇಹ ನಾಶನೈಃ ।
ಅನುರೂಪಂ ಪತಿಂ ಪ್ರಾಪ್ಯ ಕ್ರೀಡಾಮೋಽವಿರತಂ ಸುಖಂ ॥೬೯॥

ಇಲ್ಲ? ಏಕೆಂದರೆ ಅವಳು ಯಾವಾಗಲೂ ಆಟದಲ್ಲಿ ಆಸಕ್ತಿಯನ್ನು ತೋರಿಸುತ್ತಾಳೆ. ||೬೫||

ಮೋಹದ ಮಹಿಮೆಯು ಅತ್ಯಾಶ್ಚರ್ಯಕರವಾಗಿದೆ! ರಾಕ್ಷಸರನ್ನು ಹಿಂದೆ ನಾವೇತಕ್ಕಾಗಿ ಕೊಂದೆವು? ಹೀಗೆ ವ್ಯರ್ಥವಾಗಿ ನಾವು ರಾಕ್ಷಸರನ್ನು ಇನ್ನೂ ಹಿಂಸೆಮಾಡಿದರೆ ನಾವೂ ಶೀಘ್ರದಲ್ಲಿಯೇ ನಾಶವಾಗುವೆವು. ||೬೬||

ಆದ್ದರಿಂದ ನಾವು ಈಗ ಇಲ್ಲಿಂದ ಹೊರಟು ತೀರ್ಥಗಳಿಗೆ ಹೋಗಿ ರಾಕ್ಷಸರನ್ನು ಹಿಂಸೆಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಶಾಸ್ತ್ರೋಕ್ತಕ್ರಮದಲ್ಲಿ ವ್ರತಕರ್ಮವನ್ನು ಮಾಡೋಣ. ||೬೭||

ನಮಗೆ ಹೆಚ್ಚಾಗಿ ದುಃಖವನ್ನುಂಟುಮಾಡುವ ಯುದ್ಧಕ್ಕೆ ತೊಡಗಿರುವುದು ಸಾಕು. ಎಂದೂ ಕೆಲವರು ನಮಗೆ ಹೇಳುತ್ತಾರೆ. ಆದ್ದರಿಂದ ನಾವು ಶ್ರೇಷ್ಠವಾದ ಕ್ಷೇತ್ರಪ್ರದೇಶಗಳಿಗೆ ಹೋಗಿ ನಮ್ಮ ಇಷ್ಟಾರ್ಥಗಳನ್ನು ಸಾಧಿಸಿಕೊಳ್ಳೋಣ. ||೬೮||

ಬೇರೇ ಕೆಲವರು ದೇಹಕ್ಕೆ ಪೀಡೆಯನ್ನುಂಟುಮಾಡುವ, ದುಃಖಕರವಾದ, ಇಂತಹ ಯುದ್ಧಗಳು ಸಾಕು. ನಾವೆಲ್ಲರೂ ನಮಗೆ ಅನುರೂಪನಾದ ಪತಿಯನ್ನು ಹೊಂದಿ ಯಾವಾಗಲೂ ಸುಖವನ್ನು ಅನುಭವಿಸುವುದರಲ್ಲಿ ಆಸಕ್ತರಾಗಿರೋಣ. ||೬೯||

ವದಂತ್ಯ ಇತ್ಯಾದಿ ಬಹು ಪೃಥಜ್ಮತ ಸಮಾಶ್ರಯಾಃ ।
ನ ಯುದ್ಧಾಮ್ಯನೋ ವಯಂ ವ್ಯರ್ಥಂ ತವಾಽಜ್ಞಾಯಾಂ ನ ಚ ಸ್ಥಿತಾಃ॥೭೦॥

ಕ್ರೋಧಂ ಕರಿಷ್ಯಸಿ ಯದಿ ಯುಧ್ಯಾಮಸ್ತರ್ಹಿ ವೈ ತ್ವಯಾ ।
ವೃಥಾಽಭಿಮಾನಂ ಮಾಕಾರ್ಷೀಃ ಮಂತ್ರಿಣ್ಯಾ ಮತ್ತಯಾ ಸಹ ॥೭೧॥

ಅಸ್ಮಾನ್ಯುದ್ಧೇ ಸಮಾಸಾದ್ಯ ವಿಮುದಾ ಶೀಘ್ರಮೇಷ್ಯಸಿ ।
ತತೋಽಚುರನ್ಯಾಃ ಸಂಕ್ರುದ್ಧಾ ಶೂಕರಾಸ್ಯೇ ಸದಾ ಹಿ ನಃ ॥೭೨॥

ಕುತಃ ಕ್ರುಧ್ಯಸಿ ನೇತ್ರಾಣಿ ಕರಾಲಾನ್ಯವಮುಂಚಸಿ ।
ವ್ರಜ ಶೀಘ್ರಮಿತೋ ನೋ ಚೇದಕ್ಷೀಣಿ ವಿನಿಪಾತಯೇ ॥೭೩॥

ಹೀಗೆ ನಾನಾವಿಧವಾದ ಅಭಿಪ್ರಾಯಗಳನ್ನು ತೋರಿಸುವ ಅನೇಕ ವಿಧವಾದ ಮಾತುಗಳನ್ನು ಶಕ್ತಿಗಳು ಆಡಿಕೊಳ್ಳುತ್ತಿದ್ದರು. ಅಲ್ಲದೇ ಅವರು ನಾವು ಯುದ್ಧ ಮಾಡುವುದಿಲ್ಲ. ಮತ್ತು ನಿನ್ನ ಅಪ್ಪಣೆಯನ್ನೂ ಕೇಳುವುದಿಲ್ಲ ಎಂದು ದಂಡನಾಯಕಿಗೆ ಹೇಳಿದರು. ||೭೦||

ನೀನೇನಾದರೂ ಕೋಪಿಸಿಕೊಳ್ಳುವುದಾದರೆ ನಾವು ನಿನ್ನೊಂದಿಗೇ ಯುದ್ಧ ಮಾಡುವೆವು ! ಮದಿಸಿರುವ ಮಂತ್ರಿಣಿಯೊಂದಿಗೆ ಸೇರಿಕೊಂಡು ನಮ್ಮ ಮುಂದೆ ವ್ಯರ್ಥವಾಗಿ ಪ್ರತಾಪವನ್ನು ತೋರಿಸಬೇಡ. ||೭೧||

ಎಲೌ ದಂಡನಾಯಕಿಯೇ, ನಮ್ಮೊಂದಿಗೆ ನೀನು ಯುದ್ಧಮಾಡಿದರೆ ಶೀಘ್ರದಲ್ಲಿಯೇ ನಿನ್ನಲ್ಲಿರುವ ಪ್ರತಾಪವೆಲ್ಲವೂ ಅಡಗಿಹೋಗುವುದು. ಮತ್ತು ಕೆಲವರು ಅವಳನ್ನು ಕುರಿತು, ಎಲೌ ಹಂದಿಯ ಮುಖದಂತಿರುವ ಮುಖವುಳ್ಳ ದಂಡನಾಯಕಿಯೇ, ನೀನೇಕೆ ನಮ್ಮ ಮೇಲೆ ಕೋಪದಿಂದ ಕಿಡಿಕಿಡಿಯಾಗುತ್ತೀಯೆ ? ಎಂದರು. ||೭೨||

ಎಲೌ ದಂಡನಾಯಕಿಯೇ, ಬಹಳ ಕೋಪವನ್ನು ತೋರಿಸುವ ತುಂಬ ಭಯಂಕರವಾದ ಕಣ್ಣುಗಳನ್ನು ನಮ್ಮ ಮೇಲೇಕೆ ಬಿಡುತ್ತೀಯೆ ? ಇಲ್ಲಿಂದ ಕೂಡಲೇ ಹೊರಡು. ಇಲ್ಲದಿದ್ದರೆ ನಾನು ನಿನ್ನ ಕಣ್ಣುಗಳನ್ನು ಕಿತ್ತುಬಿಡುವೆನು ! ||೭೩||

ನ ನಿರ್ಲಜ್ಜಾ ಶೂಕರಾಸ್ಯಾ ತ್ವತ್ಸಮಾ ಭವತಿ ಕ್ವಚಿತ್ ।
ಅನ್ಯಾಽಬ್ರವೀತ್ತ್ವಷ್ಟಕರಾ ನಿಪತ್ಯಾಽಭಿಮುಖೀ ತತಃ ॥೭೪॥

ಕಿಂ ಬಲಾಸ್ಯತಿ ಮೇ ವಾಕ್ಯಂ ಶೃಣು ಕೋಲಾಽಽನನೇ ಯದಿ ।
ದರ್ಪೋಽಸ್ತಿ ಚೇನ್ಮಯಾ ಯುದ್ಧೇ ವೀರ್ಯಾದ್ಬುದ್ಧಿಂ ಸಮಾಕುರು॥೭೫॥

ಜೀವಿತಂ ಹಾಸ್ಯಸಿ ಮುಧಾ ಯುದ್ಧ್ವಾ ಶಸ್ತ್ರಹತಾ ಮಯಾ ।
ಇತಿ ದೃಷ್ಟ್ವಾ ಶಕ್ತಿಗಣಂ ದಂಡಿನ್ಯತ್ಯಂತ ವಿಸ್ಮಿತಾ ॥೭೬॥

ಕುತ ಏತದಕಾಂಡೇ ವೈ ಶಕ್ತೀನಾಂ ಬುದ್ಧಿನಾಶನಂ ।
ಇತಿ ಮತ್ವಾ ದ್ರುತಂ ಗತ್ವಾ ಮಂತ್ರಿಣ್ಯೈತನ್ನಿವೇದಯತ್ ॥೭೭॥

ನಾಚಿಕೆಯಿಲ್ಲದ ಹಂದಿಯ ಮುಖದಂತೆ ಮುಖವುಳ್ಳ ನಿನ್ನಂಥವಳು ಬೇರೊಬ್ಬಳಿಲ್ಲ. ಎಂದಳು. ಮತ್ತೊಬ್ಬ ಶಕ್ತಿಯು ಅವಳ ಮುಂದೆ ಬಂದು ಕತ್ತಿಯನ್ನು ಹಿಡಿದುಕೊಂಡು ಈರೀತಿಯಲ್ಲಿ ಹೇಳಿದಳು. ॥೭೪॥

ಎಲೌ ಹಂದಿಯಮುಖದಂತಿರುವ ಮುಖವುಳ್ಳವಳೇ, ನೀನು ಹೆಚ್ಚಾದ ಬಲದಿಂದ ಹೆಮ್ಮೆಗೊಂಡಿದ್ದರೆ ನಾನು ಹೇಳುವ ಮಾತನ್ನು ಕೇಳು. ನಿನಗೆ ಶೌರ್ಯದ ಹೆಮ್ಮೆಯಿದ್ದರೆ ನನ್ನೊಂದಿಗೆ ಯುದ್ಧಮಾಡಿ ನನ್ನನ್ನು ಸರಿಪಡಿಸು. ನೋಡೋಣ! ಎಂದಳು. ॥೭೫॥

ನೀನು ನನ್ನೊಂದಿಗೆ ಯುದ್ಧಮಾಡಿದರೆ ನನ್ನ ಶಸ್ತ್ರದ ಪೆಟ್ಟಿಗೆ ಸಿಕ್ಕಿ ನೀನು ವ್ಯರ್ಥವಾಗಿ ಪ್ರಾಣವನ್ನು ಬಿಡುತ್ತೀಯೆ! ಹೀಗೆ ಸ್ವೇಚ್ಛೆಯಾಗಿ ಮಾತನಾಡುತ್ತಿದ್ದ ಶಕ್ತಿಗಳ ಸಮೂಹವನ್ನು ನೋಡಿ ದಂಡನಾಯಕಿಯು ಅತ್ಯಂತವಾಗಿ ಆಶ್ಚರ್ಯವನ್ನು ಹೊಂದಿದಳು! ॥೭೬॥

ಈ ರೀತಿಯಲ್ಲಿ ಶಕ್ತಿಗಳಿಗೆ ಆ ಕಾಲದಲ್ಲಿ ಬುದ್ಧಿಯು ಇಷ್ಟು ವ್ಯತ್ಯಾಸವಾಗಲು ಕಾರಣವೇನು? ಎಂದು ದಂಡನಾಯಕಿಯು ಯೋಚಿಸಿ ಶೀಘ್ರವಾಗಿ ಹೋಗಿ ಮಂತ್ರಿಣೀದೇವಿಗೆ ವಿಜ್ಞಾಪನೆಮಾಡಿಕೊಂಡಳು. ॥೭೭॥

ಮಂತ್ರಿಣ್ಯಪಿ ಚ ಶಕ್ತೀನಾಂ ಬುದ್ಧಿನಾಶಂ ನಿಶಾಮ್ಯ ತು ।
ವಿಸ್ಮಿತಾ ಶ್ರೀಮಹಾರಾಜ್ಞೀ ಮಾಸಾದ್ಯ ಪ್ರಣತಾಽಬ್ರವೀತ್ ॥೭೮॥

ಮಾತರತ್ಯದ್ಭುತೋ ವಿಘ್ನೋ ನಸ್ತ್ವಸ್ಮಾಕಮುಪಸ್ಥಿತಃ ।
ನೂನಂ ಭವೇತ್ತು ದುಷ್ಟಾನಾಂ ದೈತ್ಯಾನಾಮೇವ ಚೇಷ್ಟಿತಂ ॥೭೯॥

ಶಕ್ತೀನಾಂ ಬುದ್ಧಿನಾಶೋಽತ್ರ ದೃಶ್ಯತೇಽತಿಭಯಂಕರಃ ।
ದೈತ್ಯಾಃ ಸಾಲಮುಖಪ್ರಾಂತೇ ಸನ್ನದ್ಧಾಃ ಸಮುಪಸ್ಥಿತಾಃ ॥೮೦॥

ದಂಡಿನೀಂ ಮಾಂ ಚ ಚಕ್ರಸ್ಥ ಶಕ್ತೀರ್ಹಿತ್ವಾ ಹ್ಯಶೇಷತಃ ।
ಭಿನ್ನಸ್ವಭಾವಾಃ ಸಂಭೂತಾಃ ಶಕ್ತಯೋ ರೋಷಭೀಷಣಾಃ ॥೮೧॥

ದ್ರುತಂ ವಿಧೇಹಿ ಯತ್ಕೃತ್ಯಂ ನಾಽರ್ಹಃ ಕಾಲೋ ವಿಲಂಬನೇ ।
ಯದ್ಯಪ್ಯಖಿಲ ದೈತ್ಯಾಶ್ಚ ತವ ಭ್ರೂಭಂಗಮಾತ್ರತಃ ॥೮೨॥

ಮಂತ್ರಿಣೀದೇವಿಯೂ ಕೂಡ ಶಕ್ತಿಗಳಿಗೆ ಉಂಟಾಗಿರುವ ಬುದ್ಧಿಯ ಈ ವ್ಯತ್ಯಾಸವನ್ನು ಕೇಳಿ ಆಶ್ಚರ್ಯಗೊಂಡು ಶ್ರೀಲಲಿತಾಮಹಾರಾಣಿಯನ್ನು ಸಮೀಪಿಸಿ ನಮಸ್ಕರಿಸಿ ಈ ವಿಷಯವನ್ನು ವಿಜ್ಞಾಪನೆಮಾಡಿಕೊಂಡಳು. ||೭೮||

ಓ ತಾಯಿಯೇ, ನಮಗೆ ಅತ್ಯಂತ ಆಶ್ಚರ್ಯಕರವಾದ ವಿಘ್ನವು ಪ್ರಾಪ್ತವಾಗಿದೆ. ಬಹುಶಃ ದುಷ್ಟರಾದ ರಾಕ್ಷಸರ ಚೇಷ್ಟೆಯೇ ಇದಾಗಿರಬಹುದು. ||೭೯||

ಶಕ್ತಿಗಳ ಗುಂಪಿನವರ ಬುದ್ಧಿಯು ಬಹಳ ಭಯಂಕರವಾದ ರೀತಿಯಲ್ಲಿ ವ್ಯತ್ಯಾಸವಾಗಿರುವಂತೆ ತೋರುತ್ತದೆ. ರಾಕ್ಷಸರೂ ಕೂಡ ಕೋಟೆಯ ಬಾಗಿಲಿನ ಹತ್ತಿರಕ್ಕೆ ಯುದ್ಧಕ್ಕೆ ಸಿದ್ಧರಾಗಿ ಬಂದಿದ್ದಾರೆ. ||೮೦||

ದಂಡನಾಯಕೀ, ನಾನು, ಮತ್ತು ಚಕ್ರದಲ್ಲಿರುವ ಶಕ್ತಿಗಳು, ಇವರನ್ನು ಬಿಟ್ಟು ಇತರ ಶಕ್ತಿಗಳೆಲ್ಲರೂ ವ್ಯತ್ಯಾಸವಾದ ಸ್ವಭಾವವುಳ್ಳವರಾಗಿ ಕೋಪದಿಂದ ಕಿಡಿಕಿಡಿಯಾಗುತ್ತಿದ್ದಾರೆ. ||೮೧||

ನಾವು ಮಾಡಬೇಕಾದದ್ದನ್ನು ಶೀಘ್ರವಾಗಿ ತಿಳಿಸಬೇಕು. ಈಗ ಕಾಲವಿಲಂಬ ಮಾಡುವುದು ಯುಕ್ತವಲ್ಲ. ಯದ್ಯಪಿ ನೀವು ನಿಮ್ಮ ಹುಬ್ಬುಗಂಟಿಕ್ಕಿಕ್ಕೊಳ್ಳೋಣದರಿಂದಲೇ ಸಕಲ ರಾಕ್ಷಸರನ್ನೂ ಕೊಲ್ಲಲು ಸಮರ್ಥರಾಗಿದ್ದೀರಿ. ||೮೨||

ನ ಭವೇಯುಸ್ತಥಾಽಪ್ಯೇತನ್ನಾಽಸ್ಮಾಕಂ ಸಂಮತಂ ಭವೇತ್ ।
ಅಸ್ಮಾಸು ದಯಯಾ ಮಾತರ್ದ್ರುತಂ ಪ್ರತಿವಿಧತ್ಸ್ವ ತತ್ ॥೮೩॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ವಿಘ್ನಯಂತ್ರಪ್ರಯೋಗ ಫಲವರ್ಣನಂ ನಾಮ ಏಕಸಪ್ತತಿತಮೋಽಧ್ಯಾಯಃ

ಈರೀತಿಯಲ್ಲಿಯೂ ತಾವು ಅವರನ್ನು ನಾಶಮಾಡಬಲ್ಲರಿ. ಆದಾಗ್ಯೂ ಇದು ನಮಗೆ ಯುಕ್ತವೆಂದು ತೋರುವುದಿಲ್ಲ. ತಾಯಿಯೇ, ತಾವು ದಯಮಾಡಿ ಶೀಘ್ರ ವಾಗಿ ಇದಕ್ಕೆ ಪರಿಹಾರವನ್ನು ಮಾಡಬೇಕು. ||೮೩||

ಇಲ್ಲಿಗೆ ಇತಿಹಾಸ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ರಾಕ್ಷಸರಿಂದ ಆದ ವಿಘ್ನಯಂತ್ರಪ್ರಯೋಗದ ಫಲವರ್ಣನೆ ಎಂಬ ಎಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ದ್ವಿಸಪ್ತತಿತಮೋಽಧ್ಯಾಯಃ ||

ಎಪ್ಪತ್ತೆರಡನೆಯ ಅಧ್ಯಾಯವು

ಪ್ರಾರ್ಥಿತೈವಂ ಶ್ಯಾಮಲಯಾ ಶ್ರೀಮಾತಾ ಪರಮೇಶ್ವರೀ ।
ಲೀಲಾಂ ವಿತನ್ವತೀ ಶೀಘ್ರಂ ಸಸ್ಮಿತಪ್ರೇಮಭಾವತಃ ॥೧॥

ಕೋಟೀಂದು ಕಿರಣಾಽಽಭಾಸಾನ್ ಶೃಂಗಾರಾಽಮೃತವರ್ಷಣಾನ್ ।
ಕಟಾಕ್ಷಾನ್ ಕಾಮೇಶಮುಖಸೌಂದರ್ಯಾಽಬ್ಧಾವ ಮೂರ್ಛಯತ್ ॥೨॥

ಅಥೋ ದೇವೀಸ್ಮಿತಾಽಽಲೋಕ ಕಾಮೇಶಮುಖಸಂಗತೇಃ ।
ಗಣನಾಥಃ ಸಮುದಭೂದಿಭಾಸ್ಯೋಽರುಣ ಸಂಪ್ರಭಃ ॥೩॥

ಶ್ಯಾಮಲಾದೇವಿಯು ಈರೀತಿಯಲ್ಲಿ ಪ್ರಾರ್ಥಿಸಲಾಗಿ ಪರಮೇಶ್ವರಿಯಾದ ಶ್ರೀ ಲಲಿತಾದೇವಿಯು ವಿನೋದವನ್ನು ಮಾಡುತ್ತಾ ಶೀಘ್ರನಾಗಿ ಮುಗುಳುನಗೆಯನ್ನು ನಗುತ್ತಾ ಮಂತ್ರಿಣಿಯನ್ನು ಪ್ರೇಮಭಾವದಿಂದ ನೋಡಿದಳು. ||೧||

ಆಕೆಯು ಕೋಟಿಚಂದ್ರನಿಗೆ ಸಮಾನವಾದ ಕಾಂತಿಯನ್ನು ಬೀರುವ, ಶೃಂಗಾರವೆಂಬ ಅಮೃತವನ್ನು ಸುರಿಸುವ, ಕಟಾಕ್ಷಗಳನ್ನು ಕಾಮೇಶ್ವರನ ಮುಖದ ಸೌಂದರ್ಯವೆಂಬ ಸಮುದ್ರದಲ್ಲಿ ಬೀಳಿಸಿದಳು. ||೨||

ಅನಂತರ ಲಲಿತಾದೇವಿಯು ಮುಗುಳುನಗೆಯನ್ನು ನಗುತ್ತಾ ನೋಡಿದ ಆಕೆಯ ನೋಟವು ಕಾಮೇಶ್ವರನ ಮುಖದೊಳಗೆ ಸಂಬಂಧವನ್ನು ಹೊಂದಲು, ಕೂಡಲೇ ಅರುಣನಂತೆ ಕೆಂಪುಕಾಂತಿಯುಳ್ಳ, ಆನೆಯ ಮುಖವುಳ್ಳ, ಗಣಪತಿಯು ಹುಟ್ಟಿದನು. ||೩||

ಗದಾಂ ಶೂಲಂ ಶಂಖಮಬ್ಜಂ ವಿಷಾಣಂ ದಕ್ಷಬಾಹುಭಿಃ ।
ಮಾತುಲುಂಗಂ ಧನುಶ್ಚಕ್ರಂ ಪಾಶಂ ಧಾನ್ಯಸ್ಯ ಮಂಜರೀಂ ॥೪॥

ವಹನ್ ವಾಮಕರೈಃ ಶುಂಡಾಸಮಾತ್ತಮಣಿಭಾಜನಃ ।
ರಕ್ತಕೌಶೇಯ ವಸನೋ ದಿವ್ಯಮಾಲ್ಯವಿಭೂಷಣಃ ॥೫॥

ತ್ರಿನೇತ್ರಶ್ಚಂದ್ರಚೂಡಾಲೋ ಮಣಿಕೋಟೀರಮಂಡಿತಃ ।
ಶಕ್ತ್ಯಾ ಸಮಾಶ್ಲಿಷ್ಟದೇಹೋ ಗಲನ್ಮದಜಲಾಽಽವಿಲಃ ॥೬॥

ಪ್ರಣಮ್ಯ ಲಲಿತಾಂ ದೇವೀಂ ಬದ್ಧಾಂಜಲಿಪುಟೋಽಬ್ರವೀತ್ ।
ದೇವಿ ಬ್ರೂಹಿ ಮಯಾ ಯತ್ತತ್ಕೃತ್ಯಮತ್ರ ರಣೋದ್ಯಮೇ ॥೭॥

ಅವನು ಗದೆ, ಶೂಲ, ಶಂಖ, ಕೊಂಬುಗಳನ್ನು ಎಡಕೈಗಳಲ್ಲಿಯೂ, ಮಾತುಲುಂಗ ಎಂಬ ಆಯುಧ, ಧನುಸ್ಸು, ಚಕ್ರಾಯುಧ, ಪಾಶ, ಧಾನ್ಯದ ಗೊಂಚಲು ಇವನ್ನೆಲ್ಲವನ್ನೂ ತನ್ನ ಬಲಗಡೆಯ ಕೈಗಳಲ್ಲಿಯೂ ಧರಿಸಿದ್ದನು. ॥೪॥

ಮೇಲೆ ಹೇಳಿದ ಆಯುಧಗಳನ್ನು ಎರಡುಭಾಗದ ಕೈಗಳಲ್ಲಿಯೂ ಹಿಡಿದು, ಸೊಂಡಲಿನಲ್ಲಿ ಮಣಿಮಯವಾದ ಪಾತ್ರೆಯನ್ನು ಹಿಡಿದುಕೊಂಡು, ಕೆಂಪಗಿರುವ, ರೇಷ್ಮೆಯ ವಸ್ತ್ರವನ್ನೂ ಧರಿಸಿದ್ದ, ಗಣಪತಿಯು ದಿವ್ಯವಾದ ಹಾರವನ್ನೂ ಅಲಂಕಾರಕ್ಕಾಗಿ ಹಾಕಿಕೊಂಡಿದ್ದನು. ॥೫॥

ಗಜಾನನನು ಮುಕ್ಕಣ್ಣನಾಗಿಯೂ, ಚಂದ್ರನನ್ನೇ ಆ ಶಿರಸ್ಸಿನ ಆಭರಣವನ್ನಾಗಿ ಧರಿಸಿದವನಾಗಿಯೂ, ಮಣಿಮಯವಾದ ವಂಕಿಗಳನ್ನು ಅಲಂಕಾರವನ್ನಾಗಿ ಧರಿಸಿದವನಾಗಿಯೂ, ಶಕ್ತಿಯಿಂದ ಸಂಬಂಧಿಸಿದ ದೇಹವುಳ್ಳವನಾಗಿಯೂ ಮದೋದಕ ಪ್ರವಾಹವನ್ನೇ ಹೊರಸೂಸುತ್ತಿದ್ದನು. ॥೬॥

ಗಜಾನನನು ಲಲಿತಾದೇವಿಗೆ ನಮಸ್ಕರಿಸಿ ಕೈಜೋಡಿಸಿಕೊಂಡು ಈರೀತಿಯಲ್ಲಿ ಬಿನ್ನೈಸಿದನು. ಓ ದೇವಿಯೇ, ಯುದ್ಧಕಾರ್ಯದಲ್ಲಿ ನಾನು ಏನನ್ನು ಮಾಡಬೇಕು? ಎಂಬ ವಿಷಯವನ್ನು ದಯವಿಟ್ಟು ತಿಳಿಸು. ॥೭॥

ತತ್ತೇ ಕೃಪಾವಶಾದೇವ ಸಾಧಯಾಮ್ಯತಿದುಷ್ಕರಂ ।
ಶ್ರುತ್ವೈವಂ ಪ್ರಾಹ ಗಣಪಂ ಲಲಿತಾಂಬಾ ಮಹೇಶ್ವರೀ ॥೮॥

ಗಚ್ಛ ವತ್ಸ ದೈತ್ಯಕೃತ ಮಭಿಚಾರಂ ವಿನಾಶಯ ।
ಏವಂ ತಯಾ ಸಮಾಜ್ಞಪ್ತೋ ಗಣೇಶೋ ಧೂನಯನ್ ಕರಂ ॥೯॥

ವಿಚಿನ್ವನ್ನಭಿತಸ್ತತ್ರ ಕ್ಷಣಾದ್ಯಂತ್ರಂ ಸಮಾಸದತ್ ।
ಆಸಾದ್ಯ ವಿಘ್ನಯಂತ್ರಂ ತಚ್ಛಕ್ತಿಸಂಘಸ್ಯ ಪಶ್ಯತಃ ॥೧೦॥

ವಜ್ರಸಾರಮಪಿ ಕ್ರೋಧಾದ್ವಿಭೇದ ರದ ಘಾತತಃ ।
ನಿಮಿಷಾತ್ತಚ್ಚೂರ್ಣಯಿತ್ವಾ ತಿಲಶಸ್ತದನಂತರಂ ॥೧೧॥

ಜ್ವಲತ್ಸಾಲದ್ವಾರಭಾಗಾ ನ್ನಿರ್ಯಯೌ ಯೋದ್ಧುಮುತ್ಸುಕಃ ।
ನಿವಿಶ್ಯ ದೈತ್ಯಸೇನಾಂ ತಾಂ ಯುಯುಧೇ ದೈತ್ಯಪುಂಗವೈಃ ॥೧೨॥

ನಿನ್ನ ಕೃಪೆಯಿಂದಲೇ ಬಹಳ ಕಷ್ಟವಾದ ಕಾರ್ಯವನ್ನೂ ನಾನು ಸಾಧಿಸಬಲ್ಲೆನು. ಎಂದು ಹೇಳಿದ ಗಣಪತಿಯ ಮಾತನ್ನು ಕೇಳಿ ಮಹೇಶ್ವರಿಯಾದ ಲಲಿತಾದೇವಿಯು ಈರೀತಿಯಲ್ಲಿ ಹೇಳಿದಳು. ||೮||

ಎಲೈ ಮಗುವೇ, ನೀನು ಕೂಡಲೇ ಹೋಗಿ ರಾಕ್ಷಸರು ಮಾಡಿದ ಅಡ್ಡಿಯ ಕಾರ್ಯವನ್ನು ನಾಶಮಾಡು. ಎಂದು ಲಲಿತಾದೇವಿಯು ಅಪ್ಪಣೆಮಾಡಲು, ಗಣೇಶನು ತನ್ನ ಸೊಂಡಿಲನ್ನು ಅಲ್ಲಾಡಿಸುತ್ತಾ ಹೊರಟನು. ||೯||

ಗಣೇಶನು ಸುತ್ತಲೂ ಹುಡುಕುತ್ತಾ ಹೋಗಿ ಕ್ಷಣಕಾಲದಲ್ಲಿಯೇ ಆ ವಿಘ್ನಯಂತ್ರವನ್ನು ಸಮೀಪಿಸಿದನು. ಶಕ್ತಿಗಳ ಸಮೂಹವು ನೋಡುತ್ತಿರುವಾಗಲೇ ಅದನ್ನು ಮುರಿಯಲು ಗಣೇಶನು ಸಿದ್ಧನಾದನು. ||೧೦||

ಗಣೇಶನು ತನ್ನ ಕೊಂಬಿನಿಂದ ಹೊಡೆದು ಕೋಪದಿಂದ ವಜ್ರಾಯುಧದಷ್ಟು ಗಟ್ಟಿಯಾದ ಆ ಯಂತ್ರವನ್ನೂ ಕೂಡ ಕ್ಷಣಕಾಲದಲ್ಲಿಯೇ ಮುರಿದು ಅನಂತರ ನಿಮಿಷಮಾತ್ರದಲ್ಲಿಯೇ ಅದನ್ನು ಚೂರುಚೂರುಮಾಡಿದನು. ||೧೧||

ಅನಂತರ ಗಣೇಶನು ಉರಿಯುತ್ತಿರುವ ಕೋಟೆಯ ಬಾಗಿಲಿನಿಂದ ಯುದ್ಧದಲ್ಲಿ ಉತ್ಸಾಹವುಳ್ಳವನಾಗಿ ಹೊರಗೆ ಹೊರಟನು. ಅವನು ರಾಕ್ಷಸರ ಸೈನ್ಯವನ್ನು ಪ್ರವೇಶಿಸಿ ರಾಕ್ಷಸಶ್ರೇಷ್ಠರೊಡನೆ ಯುದ್ಧಮಾಡಲು ಪ್ರಾರಂಭಿಸಿದನು. ||೧೨||

ಪಿಪೇಷ ಗದಯಾ ಕಾಂಶ್ಚಿತ್ಕಾಂಶ್ಚಿತ್ ಚಿಚ್ಛೇದ ಚಕ್ರತಃ ।
ಶೂಲೇನ ದಾರಯಚ್ಚಾನ್ಯಾನ್ ಶರೈರನ್ಯಾನ್ ಬಿಭೇದ ಚ ॥೧೩॥

ಅಮಾರಯದ್ವಿಷಾಣೇನ ದೈತ್ಯಾನನ್ಯಾನ್ ಸಹಸ್ರಶಃ ।
ಏವಂ ದೈತ್ಯಪತೀನ್ ಭೂಯೋ ಗಣೇಶಃ ಕ್ಷಯಮಾನಯತ್ ॥೧೪॥

ಕರ್ಣತಾಲಮಹಾವಾಯು ವಿಧೂತಾ ದೈತ್ಯವಾಹಿನೀ ।
ನಾಸಾವಾಯುಮಹಾವೇಗ ವಿಕೃಷ್ಟಾಃ ಸಂಘಶೋಽಸುರಾಃ ॥೧೫॥

ಅವಶಾ ವಿವಿಶುಃ ಶೀಘ್ರಂ ಶುಂಡಾಸುಷಿರಮಾರ್ಗತಃ ।
ಶುಂಡಾಂತರ್ಭಾಗ ಸಂಘಟ್ಟಾನ್ಕೃತಾಶ್ಛಿನ್ನಾಂಗಬಂಧನಾಃ ॥೧೬॥

ಕೇಚಿನ್ಮೂರ್ಛಾಮನುಪ್ರಾಪ್ತಾ ನಿಃಶ್ವಾಸಾದ್ಭುವಿ ಪ್ರೋಥಿತಾಃ ।
ಪ್ರಾಣಾನ್ ಜಹುಸ್ತಥಾಽನ್ಯೇ ಚಾಽಕ್ಷತಾಃ ಶ್ರೋತ್ರಬಿಲಾಯನಾತ್ ॥೧೭॥

ಗಣೇಶನು ತನ್ನ ಗದೆಯಿಂದ ಕೆಲವು ರಾಕ್ಷಸರನ್ನು ಪುಡಿಪುಡಿಮಾಡಿದನು. ಅವನು ಮತ್ತೆ ಕೆಲವು ರಾಕ್ಷಸರನ್ನು ಚಕ್ರಾಯುಧದಿಂದ ಕತ್ತರಿಸಿದನು. ಅಲ್ಲದೇ ಅವನು ತನ್ನ ಶೂಲದಿಂದ ಇನ್ನು ಕೆಲವರನ್ನು ಸೀಳಿದನು. ಅವನು ಮತ್ತೆ ಕೆಲವರನ್ನು ತನ್ನ ಬಾಣಗಳಿಂದ ಹೊಡೆದನು. ॥೧೩॥

ಗಣೇಶನು ಕೆಲವು ರಾಕ್ಷಸರನ್ನು ತನ್ನ ಕೊಂಬಿನಿಂದ ತಿವಿದು ಕೊಂದನು. ಇನ್ನೂ ಸಾವಿರಾರು ಮಂದಿ ರಾಕ್ಷಸರನ್ನೂ ಇದೇ ರೀತಿಯಲ್ಲಿ ನಾಶಮಾಡಿದನು. ಈ ರೀತಿಯಲ್ಲಿ ಅವನು ಕ್ಷಣಕಾಲದಲ್ಲಿಯೇ ಅನೇಕ ರಾಕ್ಷಸರ ಯಜಮಾನರನ್ನೂ ನಾಶಮಾಡಿದನು. ॥೧೪॥

ರಾಕ್ಷಸರೆಂಬ ಪ್ರವಾಹವನ್ನು ಗಣೇಶನ ತಾಳೆಯಂತಿರುವ ಕಿವಿಗಳಿಂದ ಉಂಟಾದ ಮಹಾವಾಯುವು ಓಡಿಸಿತ್ತು. ಅಲ್ಲದೇ ಅವನ ಮೂಗಿನ ವಾಯುವಿನ ಮಹಾವೇಗದಿಂದ ಗುಂಪುಗುಂಪಾಗಿ ರಾಕ್ಷಸ ಪಡೆಗಳು ಚದರುತ್ತಿದ್ದವು. ॥೧೫॥

ಗಣೇಶನ ಸೊಂಡಲಿನ ರಂಧ್ರದ ಮಾರ್ಗದಿಂದ ಪರಾಧೀನರಾಗಿ ರಾಕ್ಷಸರು ಅದರೊಳಕ್ಕೆ ನುಗ್ಗುತ್ತಿದ್ದರು. ಸೊಂಡಲಿನ ಒಳಗಡೆಯ ಪ್ರದೇಶದಿಂದ ನುಚ್ಚು ನೂರಾಗಿ ಅವರ ಅವಯವಗಳೆಲ್ಲವೂ ಕತ್ತರಿಸಲು ಅವರು ಸಾಯುತ್ತಿದ್ದರು. ॥೧೬॥

ಕೆಲವರು ಮೂರ್ಛೆಯನ್ನು ಹೊಂದಿದವರಾಗಿ ಅವನ ನಿಟ್ಟುಸಿರಿನಿಂದ

ವಿನಿರ್ಗತಾಃ ಕರ್ಣತಾಲಾಽಽಸ್ಫಾಲಿತಾಃ ಜೀವಿತಂ ಜಹುಃ ।
ಏವಂ ವಿನಾಶಯನ್ ದೈತ್ಯಾಂ ಸ್ತತ್ಸೇನಾಯಾಂ ಗಣೇಶ್ವರಃ ॥೧೮॥

ಭಂಡಪುತ್ರಾನ್ ಸಮಾದಾಯ ಗದಾಪಾತೈರಪಾತಯತ್ ।
ವಿಷಂಗಂ ಹೃದಿ ದಂತೇನ ಚಕಾರಾಽತ್ಯಂತವಿಕ್ಷತಂ ॥೧೯॥

ವಿಷಂಗೋ ರಾಜಪುತ್ರಾಶ್ಚ ತದಾ ಮೂರ್ಛಾಮುಪಾಽಽಯಯುಃ ।
ತದಾ ದೃಷ್ಟ್ವಾ ದೈತ್ಯಗಣಾಃ ಮತ್ವಾ ಪ್ರತ್ಯಕ್ಷಮಂತಕಂ ॥೨೦॥

ಹಾಹೇತಿ ಭೀತಾಃ ಸಮರಂ ತ್ಯಕ್ತ್ವಾದೂರಂ ಪಲಾಯಿತಾಃ ।
ದೃಷ್ಟ್ವೈವಂ ವಿದ್ರುತಂ ಸೈನ್ಯಂ ವಿಶುಕ್ರೋಽತಿರುಷಾಽನ್ವಿತಃ ॥೨೧॥

ಭೂಮಿಯಲ್ಲಿ ಬಿದ್ದು ನುಚ್ಚುನುಚ್ಚಾದರು. ಹಾಗೆಯೇ ಮತ್ತೆ ಕೆಲವರು ಅವನ ಕಿವಿಗಳ ಬಡಿತದಿಂದ ನಾಶವಾಗಿ ಪ್ರಾಣವನ್ನು ಬಿಡುತ್ತಿದ್ದರು. ॥೧೭॥

ಗಣೇಶನ ತಾಳೆಯಲೆಯಂತಿರುವ ಕಿವಿಗಳ ಬಡಿತಕ್ಕೆ ಸಿಕ್ಕಿ ಹೊರಕ್ಕೆ ಎಸೆಯಲ್ಪಟ್ಟು ಕೆಲವರು ಪ್ರಾಣಗಳನ್ನು ಬಿಟ್ಟರು. ಗಣೇಶನು ಈ ರೀತಿಯಲ್ಲಿ ರಾಕ್ಷಸರ ಸೈನ್ಯಕ್ಕೆ ನುಗ್ಗಿ ಆ ಸೈನ್ಯವನ್ನು ನಾಶಮಾಡುತ್ತಿದ್ದನು! ॥೧೮॥

ಗಣೇಶನು ಭಂಡರಾಕ್ಷಸನ ಮಕ್ಕಳನ್ನೂ ಸೆಳೆದು ತನ್ನ ಗದೆಗಳಿಂದ ಅವರಿಗೆ ಬಲವಾದ ಪೆಟ್ಟುಗಳನ್ನು ಕೊಟ್ಟು ಬೀಳಿಸಿದನು. ಅವನು ತನ್ನ ಕೊಂಬಿನಿಂದ ವಿಷಂಗರಾಕ್ಷಸನು ಬಹಳ ಗಾಯಗೊಳ್ಳುವಂತೆ ಮಾಡಿದನು. ॥೧೯॥

ಆಗ ವಿಷಂಗ ಮತ್ತು ರಾಜಕುಮಾರರು ಇವರೆಲ್ಲರೂ ಮೂರ್ಛೆಯನ್ನು ಹೊಂದಿದರು. ಆಗ ರಾಕ್ಷಸರ ಗುಂಪಿನವರು ಸಾಕ್ಷಾತ್ ಯಮನಂತೆ ಬಂದಿರುವ ಗಣೇಶನನ್ನು ನೋಡಿ ಬಹಳ ಭಯಪಟ್ಟರು. ॥೨೦॥

ರಾಕ್ಷಸರು ಅಯ್ಯಯ್ಯೋ! ಎಂದು ಕೂಗುತ್ತಾ ಭಯಪಟ್ಟವರಾಗಿ ಯುದ್ಧವನ್ನು ಬಿಟ್ಟು ದೂರವಾಗಿ ಪಲಾಯನ ಮಾಡಿದರು. ಈರೀತಿಯಾಗಿ ಪಲಾಯನ ಮಾಡಿದ ತನ್ನ ಕಡೆಯ ಸೈನ್ಯವನ್ನು ನೋಡಿ ವಿಶುಕ್ರನು ಬಹಳ ಕೋಪಗೊಂಡನು. ॥೨೧॥

ಆಯಯೌ ರಥಸಂಸ್ಥಾನೋ ಯುಧ್ಯಂತಂ ವಿಘ್ನನಾಯಕಂ ।
ಅಥಾಽಭವನ್ ಮಹಾಯುದ್ಧಂ ವಿಶುಕ್ರ ಗಜವಕ್ತ್ರಯೋಃ ॥೨೨॥

ಶಸ್ತ್ರಾಽಸ್ತ್ರವರ್ಷಣಂ ಘೋರಂ ಪರಸ್ಪರ ಜಯೈಷಣಂ ।
ಅಥೇಭವಕ್ತ್ರಃ ಸಂಕ್ರುದ್ಧೋ ಗದಾಪಾತೇನ ತದ್ರಥಂ ॥೨೩॥

ಸಾಽಶ್ವಂ ಸಸಾರಥಿಂ ಶೀಘ್ರಂ ಚೂರ್ಣಯಾಮಾಸ ಸಂಯುಗೇ ।
ಅಥ ಕ್ರುದ್ಧೋ ವಿಶುಕ್ರೋಽಪಿ ಗದಾಮುದ್ಯಮ್ಯ ವೇಗತಃ ॥೨೪॥

ಪ್ರಾಹರತ್ಕುಂಭಯೋಸ್ತಸ್ಯ ಸರ್ವಪ್ರಾಣೇನ ಮನ್ಯುನಾ ।
ಗದಾಪ್ರಹಾರಸಂಭಿನ್ನ ಕುಂಭದೇಶಾದ್ಗಣೇಶಿತುಃ ॥೨೫॥

ಆಗ ವಿಶುಕ್ರನು ರಥದ ಮೇಲೆ ಕುಳಿತುಕೊಂಡು ಯುದ್ಧಮಾಡುತ್ತಿರುವ ವಿಘ್ನೇಶ್ವರನಿಗೆ ಎದುರಾಗಿ ಬಂದನು. ಅನಂತರ ವಿಶುಕ್ರ ಮತ್ತು ಗಣೇಶ್ವರರಿಗೆ ದೊಡ್ಡ ಯುದ್ಧವು ಸಂಭವಿಸಿತು. ॥೨೨॥

ಅವರಿಬ್ಬರು ಶಸ್ತ್ರಾಸ್ತ್ರಗಳನ್ನು ಸುರಿಸುತ್ತಲೂ ಪರಸ್ಪರ ಜಯವನ್ನು ಅಪೇಕ್ಷಿಸುತ್ತಲೂ ಭಯಂಕರವಾದ ಯುದ್ಧವನ್ನು ಮಾಡಿದರು. ಅನಂತರ ಗಣೇಶನು ಕೋಪಗೊಂಡು ಗದೆಯನ್ನು ಪ್ರಯೋಗಿಸಿ ಅವನ ರಥವನ್ನು ಚೂರುಚೂರು ಮಾಡಿದನು. ॥೨೩॥

ಗಣೇಶನು ವಿಶುಕ್ರನ ರಥವನ್ನೂ, ಕುದುರೆಗಳನ್ನೂ ಮತ್ತು ಸಾರಥಿಯನ್ನೂ ಯುದ್ಧದಲ್ಲಿ ಶೀಘ್ರವಾಗಿ ಚೂರುಚೂರು ಮಾಡಿದನು. ಅನಂತರ ವಿಶುಕ್ರನೂ ಕೋಪಗೊಂಡು ಗದೆಯನ್ನೆತ್ತಿ ವೇಗವಾಗಿ ಗಣೇಶನ ತಲೆಗೆ ಹೊಡೆದನು. ॥೨೪॥

ವಿಶುಕ್ರನು ಕೋಪದಿಂದ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ಗಣೇಶನ ಕುಂಭಸ್ಥಳಗಳಿಗೆ ಹೊಡೆದನು. ವಿಶುಕ್ರನ ಗದಾಪ್ರಹಾರದಿಂದ ಗಣೇಶನ ಕುಂಭಸ್ಥಳವು ಒಡೆದು ರಕ್ತವು ಸುರಿಯಿತು. ॥೨೫॥

ಬಹು ಸುಸ್ರಾವ ರುಧಿರಮಥಕ್ರುದ್ಧೋ ಗಣಾಧಿಪಃ ।
ಜಘಾನ ಶೂಲೇನ ಹೃದಿ ವಿಶುಕ್ರಸ್ಯಾಽತಿವೇಗತಃ ॥೨೬॥

ಶೂಲನಿರ್ಭಿನ್ನಹೃದಯೋ ವಿಶುಕ್ರೋ ಮೂರ್ಛಿತೋಽಪತತ್ ।
ಏವಂ ವಿಶುಕ್ರಂ ನಿರ್ಜಿತ್ಯ ಯಯೌ ಭಂಡರಥಂ ಪ್ರತಿ ॥೨೭॥

ದೃಷ್ಟ್ವಾಽಽಯಾಂತಂ ನಿಯುದ್ಧಾಯ ಗಣೇಶಂ ಸ್ವಾತ್ಮನಾ ಸಹ ।
ವಿಚಾರಯನ್ ಸ್ವಾಂತರಂಗೇ ತಮಜೇಯಂ ವಿಭಾವಯನ್ ॥೨೮॥

ಏಷ ಯೋದ್ಧುಂ ಸಮಾಯಾತಿ ಸಿಂಧುರಾಸ್ಯೋ ಮಯಾ ಸಹ ।
ಅಜೇಯೋಽಯಂ ಮಹಾವೀರ್ಯಃ ಸರ್ವದೇವಾಽಸುರೈರಪಿ ॥೨೯॥

ಮಮ ಸಂಕಲ್ಪ ಏಷೋಽಸ್ತಿ ತದಾ ಶ್ರೀಲಲಿತಾಂಬಯಾ ।
ಶಸ್ತ್ರೈರ್ಹತ ಇಮಂ ದೇಹಂ ತ್ಯಕ್ತ್ವಾ ತಲ್ಲೋಕಮಾಪ್ನುಯಾಂ ॥೩೦॥

ಗಣೇಶನ ಕುಂಭಸ್ಥಳದಿಂದ ರಕ್ತವು ಬಹಳವಾಗಿ ಸುರಿಯಿತು. ಅನಂತರ ಗಣೇಶನೂ ಬಹಳ ಕೋಪಗೊಂಡು ಬಹಳ ವೇಗವಾಗಿ ತನ್ನ ಶೂಲವನ್ನು ಪ್ರಯೋಗಿಸಿ ವಿಶುಕ್ರನ ಹೃದಯಕ್ಕೆ ಬಲವಾಗಿ ಹೊಡೆದನು. ॥೨೬॥

ವಿಶುಕ್ರನು ಗಣೇಶನ ಶೂಲದ ಪೆಟ್ಟಿನಿಂದ ತನ್ನ ಹೃದಯವು ಸೀಳಲಾಗಿ ಮೂರ್ಛೆಹೋಗಿ ಕೆಳಗೆ ಬಿದ್ದುಬಿಟ್ಟನು. ಈ ರೀತಿಯಾಗಿ ವಿಶುಕ್ರನನ್ನು ಜಯಿಸಿ ಗಣೇಶನು ಭಂಡರಾಕ್ಷಸನ ರಥದ ಸಮೀಪಕ್ಕೆ ಹೋದನು. ॥೨೭॥

ಗಣೇಶನು ತನ್ನ ಕಡೆಗೆ ಯುದ್ಧಮಾಡಲು ಬರುತ್ತಿರುವುದನ್ನು ಕಂಡು ಭಂಡರಾಕ್ಷಸನು ತನ್ನ ಮನಸ್ಸಿನೊಳಗೆಯೇ ಯೋಚಿಸುತ್ತಾ, ತಾನು ಗಣೇಶನನ್ನು ಜಯಿಸುವುದು ಕಷ್ಟವೆಂದು ಮನಸ್ಸಿನಲ್ಲಿಯೇ ಭಾವಿಸಿದನು. ॥೨೮॥

ಮಹಾಪರಾಕ್ರಮಶಾಲಿಯಾದ ಆನೆಯ ಮುಖವುಳ್ಳ ಗಣಪತಿಯು ತನ್ನೊಂದಿಗೆ ಯುದ್ಧಮಾಡಲು ಬರುತ್ತಿದ್ದಾನೆ. ಇವನನ್ನು ಜಯಿಸಲು ಎಲ್ಲಾ ದೇವತೆಗಳೂ ಮತ್ತು ರಾಕ್ಷಸರೂ ಸಮರ್ಥರಾಗಲಾರರು. ॥೨೯॥

ಶ್ರೀ ಲಲಿತಾಮಾತೆಯ ಶಸ್ತ್ರಗಳ ಪೆಟ್ಟಿಗೆ ಸಿಕ್ಕಿ ನಾನು ಈ ನನ್ನ ದೇಹವನ್ನು ಬಿಟ್ಟು ಆಕೆಯ ಲೋಕಕ್ಕೆ ಸೇರಬೇಕು ಎಂಬುದೇ ನನ್ನ ಸಂಕಲ್ಪವಾಗಿದೆ. ॥೩೦॥

ತತ್ರ ವಿಘ್ನಮಿಮಂ ಮನ್ಯೇ ಕಥಂ ಮೇ ಸ್ಯಾತ್ಸಮೀಹಿತಂ ।
ನೂನಮೇಷ ಪುರಾ ಯುದ್ಧಂ ಚಕ್ರೇ ಯೇನ ಮಹೌಜಸಾ ॥೩೧॥

ದ್ವಿಪಾಽಸುರೇಣ ತಂ ಸೃಕ್ಷ್ಯೇ ತೇನೈಷ ಸಮಿಯಾದ್ರಣೇ ।
ತತೋಽಹಂ ತಾಂ ಸಮಾಯಾಸ್ಯೇ ಯೋದ್ಧುಂ ಶ್ರೀಲಲಿತಾಽಂಬಿಕಾಂ॥೩೨॥

ಇತಿ ನಿಶ್ಚಿತ್ಯ ಸಸೃಜೇ ಗಜದೈತ್ಯಂ ಮಹಾಽದ್ಭುತಂ ।
ಪರ್ವತಾಽಽಭಂ ಮಹಾಭೀಮಂ ಪರಿಘೋದ್ಯತ್ಸುಪುಷ್ಕರಂ ॥೩೩॥

ಅಭಿದ್ರವದ್ಗಣಪತಿಂ ಸ ದೈತ್ಯೋ ಭಂಡಪೇಶಿತಃ ।
ಆಸಾದ್ಯ ಗಜದೈತ್ಯಂ ತಂ ಯುಯೋಧ ಗಣನಾಯಕಃ ॥೩೪॥

ಈ ವಿಚಾರದಲ್ಲಿ ಇವನನ್ನು ನಾನು ವಿಘ್ನವೆಂದೇ ಭಾವಿಸುವೆನು. ಹೀಗಿರುವಾಗ ನನ್ನ ಇಷ್ಟಾರ್ಥವು ಸಿದ್ಧಿಸುವ ಬಗೆಯೆಂತು? ಹಿಂದೆ ಮಹಾಪರಾಕ್ರಮಶಾಲಿಯಾದ ರಾಕ್ಷಸನೊಬ್ಬನೊಂದಿಗೆ ಈತನು ಯುದ್ಧವನ್ನು ಮಾಡಿದ್ದು ನಿಜ. ॥೩೧॥

ಆ ರಾಕ್ಷಸನನ್ನೇ ನಾನು ಈಗ ಸೃಷ್ಟಿಸುವೆನು. ಗಜಾಸುರನೆಂಬ ನಾಮಧೇಯವುಳ್ಳ ಅವನೊಂದಿಗೆ ಇವನು ಯುದ್ಧಮಾಡಲಿ. ಅನಂತರ ನಾನು ಶ್ರೀಲಲಿತಾದೇವಿಯೊಂದಿಗೆ ಯುದ್ಧಮಾಡಲು ಹೋಗುವೆನು. ॥೩೨॥

ಈ ರೀತಿಯಾಗಿ ನಿಶ್ಚಯಿಸಿ ಭಂಡರಾಕ್ಷಸನು ಅತ್ಯಂತ ಆಶ್ಚರ್ಯಕರನಾದ ಗಜಾಸುರನನ್ನು ಸೃಷ್ಟಿಸಿದನು. ಅವನು ಪರ್ವತಕ್ಕೆ ಸಮಾನನಾಗಿಯೂ, ಬಹಳ ಭಯಂಕರನಾಗಿಯೂ, ಪರಿಘಾ ಎಂಬ ಆಯುಧ ಮತ್ತು ಶ್ರೇಷ್ಠವಾದ ಪುಷ್ಕರವೆಂಬ ಆಯುಧ ಇವುಗಳನ್ನು ಎತ್ತಿ ಹಿಡಿದವನಾಗಿಯೂ, ಅತಿ ಕ್ರೂರನಾಗಿಯೂ ಇದ್ದನು. ॥೩೩॥

ಭಂಡನ ಅಪ್ಪಣೆಯಂತೆ ಗಜಾಸುರನು ಗಣಪತಿಯೊಂದಿಗೆ ಯುದ್ಧಮಾಡಲು ಅವನಿಗೆ ಎದುರಾಗಿ ಓಡಿದನು. ಅನಂತರ ಗಣಪತಿಯು ಗಜರಾಕ್ಷಸನನ್ನು ಸಮೀಪಿಸಿ ಅವನೊಂದಿಗೆ ಯುದ್ಧಮಾಡಿದನು. ॥೩೪॥

ಏವಂ ಯುಧ್ಯತಿ ನಾಗಾಸ್ಯೇ ವಿಘ್ನಯಂತ್ರಸ್ಯ ನಾಶನಾತ್ ।
ಶಕ್ತಯಃ ಪ್ರಕೃತಿಂ ಪ್ರಾಪ್ಯ ನಿರ್ಯಯುರ್ಯುದ್ಧಹೇತವೇ ॥೩೫॥

ಆಲಕ್ಷ್ಯ ಯುದ್ಧಸನ್ನಾಹಂ ಭಂಡದೈತ್ಯಸ್ಯ ಸರ್ವಥಾ ।
ಅಶೇಷ ದೈತ್ಯಸೇನಾನಾಂ ಮಂತ್ರಿಣೀ ದಂಡಿನೀಯುತಾ ॥೩೬॥

ಮಂತ್ರಯಿತ್ವಾ ಮಹಾರಾಜ್ಞೀ ಸ್ವಯಂ ಯುದ್ಧಾಯ ನಿರ್ಯಯೌ ।
ಅಶೇಷಶಕ್ತಿಸೇನಾಭಿಃ ದಂಶಿತಾಭಿಃ ಪರೀವೃತಾ ॥೩೭॥

ಆದೌ ಸಂಪತ್ಕರೀ ದೇವೀ ರಣಕೋಲಾಹಲಾಭಿಧೇ ।
ಸಮಾರುಹ್ಯೇಭಸೇನಾಭಿರ್ನಿಜಗಾಮಾತಿ ಸಂಭ್ರಮಾತ್ ॥೩೮॥

ಈ ರೀತಿಯಾಗಿ ಗಜಾಸುರನು ಗಣಪತಿಯೊಂದಿಗೆ ಯುದ್ಧಮಾಡುತ್ತಿದ್ದನು. ವಿಘ್ನಯಂತ್ರವು ನಾಶವಾದ್ದರಿಂದ ಶಕ್ತಿಗಳು ತಮ್ಮ ಪೂರ್ವಸ್ವಭಾವವನ್ನು ಹೊಂದಿ ಯುದ್ಧಮಾಡುವುದಕ್ಕಾಗಿ ಹೊರಟುಬಂದರು. ॥೩೫॥

ಭಂಡರಾಕ್ಷಸನು ಸರ್ವವಿಧದಲ್ಲೂ ಸಮಸ್ತ ರಾಕ್ಷಸರ ಸೈನ್ಯವನ್ನೂ ಸೇರಿಸಿ ಯುದ್ಧಸಿದ್ಧತೆಯನ್ನು ಮಾಡಿಕೊಂಡಿರುವುದನ್ನು ಕಂಡು ಮಂತ್ರಿಣಿಯೂ ಕೂಡ ದಂಡನಾಯಕಿಯೊಂದಿಗೆ ಮಂತ್ರಾಲೋಚನೆ ಮಾಡಿ ಯುದ್ಧಕ್ಕೆ ಸಿದ್ಧಳಾದಳು. ॥೩೬॥

ಈ ರೀತಿಯಲ್ಲಿ ಮಂತ್ರಿಣಿಯು ದಂಡನಾಯಕಿಯೊಂದಿಗೆ ಮಂತ್ರಾಲೋಚನೆಯನ್ನು ನಡೆಸಿ ತಾನೂ ಯುದ್ಧಕ್ಕೆ ಹೊರಟಳು. ಆಗ ಆಕೆಯ ಸುತ್ತಲೂ ಸಮಸ್ತ ಶಕ್ತಿಯ ಸೈನ್ಯಗಳೂ ರಾಕ್ಷಸರ ಮೇಲಿನ ಕೋಪದಿಂದ ಹಲ್ಲನ್ನು ಕಡಿಯುತ್ತಾ ಹೊರಟವು. ॥೩೭॥

ಮೊದಲು ಸಂಪನ್ನಾಥಾದೇವಿಯು ರಣಕೋಲಾಹಲವೆಂಬ ಆನೆಯ ಮೇಲೆ ಕುಳಿತು ಆನೆಗಳ ಮೇಲೇರಿರುವ ಶಕ್ತಿಗಳ ಸೈನ್ಯಗಳೊಂದಿಗೆ ಬಹಳ ಸಂಭ್ರಮದಿಂದ ಹೊರಟಳು. ॥೩೮॥

ಅಥಾಽಪರಾಜಿತಾಽಶ್ವಸ್ಥಾ ನಿರ್ಯಯೌ ಪರಮೇಶ್ವರೀ ।
ಅಶ್ವಾರೂಢಾಽಶ್ವಸೇನಾಭಿರಾವೃತಾ ಯುದ್ಧಸಂಭ್ರಮಾತ್ ॥೩೯॥

ತನ್ಮಧ್ಯೇ ಶ್ರೀಮಹಾರಾಜ್ಞ್ಯಾ ಪ್ರತಿರುದ್ಧಾ ರಣೋತ್ಸುಕಾ ।
ಬಾಲಂ ಪ್ರಣಮ್ಯ ಲಲಿತಾಂ ಪ್ರಾಹ ಮಂಜುಲಯಾ ಗಿರಾ ॥೪೦॥

ಮಾತರ್ಮಾ ಮನುಜಾನೀಹಿ ಯುದ್ಧಾಯ ಕೃತನಿಶ್ಚಯಾಂ ।
ಸದಾ ಯುದ್ಧವಿಧಾನಾಯ ಸಮುತ್ಸುಕಿತಮಾನಸಾಂ ॥೪೧॥

ತ್ವಯಾಽಹಂ ಪ್ರತಿರುದ್ಧಾಽಸ್ಮಿ ಪ್ರಸಕ್ತೇಽಪಿ ಮಹಾರಣೇ ।
ಪಾದೌ ಮೂರ್ಧ್ನಾಸ್ಪೃಶಾಮ್ಯೇಷಾ ದೇಹ್ಯಾಜ್ಞಾಂ ಸಮರಾಯ ಮೇ॥೪೨॥

ಚಿರಾದುತ್ಕಂಠಿತಾ ಯುದ್ಧೇ ನಿರ್ಗಮಂ ನೋ ಲಭಾಮ್ಯಹಂ ।
ಆದ್ಯೇ ದಿನೇಽಪಿ ಮೇ ಯುದ್ಧಂ ನಾಽಽಸೀನ್ಮಾನಸ ಪೂರಣಂ ॥೪೩॥

ಅನಂತರ ಪರಮೇಶ್ವರಿಯಾದ ಅಶ್ವಾರೂಢಾ ಎಂಬ ಶಕ್ತಿಯು ಅಪರಾಜಿತಾ ಎಂಬ ಕುದುರೆಯಮೇಲೆ ಕುಳಿತು ಕುದುರೆಯ ಸೈನ್ಯಗಳಿಂದ ಕೂಡಿದವಳಾಗಿ ಯುದ್ಧದಮೇಲಿನ ಸಡಗರದಿಂದ ಹೊರಟಳು. ॥೩೯॥

ಈ ಮಧ್ಯದಲ್ಲಿ ಶ್ರೀ ಲಲಿತಾಮಹಾರಾಣಿಯು ತಡೆಯುತ್ತಿದ್ದರೂ ಯುದ್ಧದಲ್ಲಿ ಉತ್ಸಾಹವನ್ನು ತೋರಿಸುತ್ತಿದ್ದ ಕುಮಾರಿಯು ಶ್ರೀ ಲಲಿತಾದೇವಿಗೆ ನಮಸ್ಕರಿಸಿ ಮನೋಹರವಾದ ಈ ಮಾತುಗಳನ್ನಾಡಿದಳು. ॥೪೦॥

ಓ ತಾಯಿಯೇ, ಯುದ್ಧಮಾಡಬೇಕೆಂಬ ದೃಢನಿಶ್ಚಯವುಳ್ಳ ನನಗೆ ಅಪ್ಪಣೆಯನ್ನು ಕೊಡು. ನನಗೆ ಯಾವಾಗಲೂ ಯುದ್ಧಮಾಡಲು ಮನಸ್ಸು ತವಕಪಡುತ್ತಿದೆ. ॥೪೧॥

ದೊಡ್ಡಯುದ್ಧವು ಪ್ರಾಪ್ತವಾಗಿದ್ದರೂ ನೀನು ನನ್ನನ್ನೇ ತಡೆಯುತ್ತಿದ್ದೀಯೆ ! ನನ್ನ ತಲೆಯಿಂದ ನಿನ್ನ ಕಾಲುಗಳನ್ನು ಮುಟ್ಟಿ ನಮಸ್ಕಾರಮಾಡುವೆನು. ಯುದ್ಧಕ್ಕಾಗಿ ನನಗೆ ಅಪ್ಪಣೆಯನ್ನು ದಯಪಾಲಿಸಬೇಕು. ॥೪೨॥

ನನಗೆ ಬಹಳ ಕಾಲದಿಂದಲೂ ಯುದ್ಧ ಮಾಡಬೇಕೆಂಬ ಪ್ರಬಲವಾದ ಆಸೆಯಿದೆ. ಆದರೂ ನನಗೆ ಹೊರಡಲು ಅಪ್ಪಣೆ ದೊರೆತಿಲ್ಲ. ಮೊದಲು ದಿನ ಮಾಡಿದ ಯುದ್ಧದಲ್ಲಿ ನನ್ನ ಮನಸ್ಸಿಗೆ ತೃಪ್ತಿಯುಂಟಾಗಿಲ್ಲ. ॥೪೩॥

ಮಧ್ಯೇ ತಯಾ ಕೋಲಮುಖ್ಯಾ ವಿಹತಾ ಯುಧಿ ನೈ ಮುಧಾ ।
ಅದ್ಯ ಮೇ ಪೂರಯಸ್ವಾಽಽಶಾಂ ಚಿರಾದ್ಯುದ್ಧಾಯ ಸಂಭೃತಾಂ ॥೪೪॥

ಇತಿ ಬಾಲಾ ವಚಃ ಶ್ರುತ್ವಾ ಲಲಿತಾ ಶ್ರೀಪರಾಽಂಬಿಕಾ ।
ಪ್ರಹಸಂತೀ ಮಂತ್ರನಾಥಾಮುಖಂ ಸಮವಲೋಕಯತ್ ॥೪೫॥

ದೇವ್ಯಾಶಯಂ ವಿದಿತ್ವಾ ಸಾ ಕುಮಾರೀಂ ಪ್ರಾಹ ಮಂತ್ರಿಣೀ ।
ಕುಮಾರಿ ಶೃಣು ಮೇ ವಾಕ್ಯಂ ಯದಿ ತ್ವಂ ಯೋದ್ಧುಮಿಚ್ಛಸಿ ॥೪೬॥

ತತ್ತ್ವಯಾ ಸಮ(ಮ)ನ್ಯೇನೈವ ಯೋದ್ಧವ್ಯಂ ಯದಿ ಮನ್ಯಸೇ ।
ಏಕೇನ ಸಹ ಯುಧ್ಯಸ್ವ ದಂಡಿನ್ಯಾ ಚ ಮಯಾ ಸಹ ॥೪೭॥

ಯುದ್ಧೇ ನೌ ನ ಪರಿತ್ಯಜ್ಯ ದೈತ್ಯಸೇನಾಸು ಚೈಕಲಾ ।
ಪ್ರವೇಷ್ಟವ್ಯಂ ಕ್ವಚಿದ್ವಾಽಪಿ ತವಾಽಽವಾಂ ಪಕ್ಷಸಂಶ್ರಯೇ ॥೪೮॥

ಏಕೆಂದರೆ ನಾನು ಯುದ್ಧ ಮಾಡುತ್ತಿದ್ದಾಗ ದಂಡನಾಯಕಿಯು ಅಡಚಣೆಯನ್ನು ವ್ಯರ್ಥವಾಗಿ ಉಂಟುಮಾಡಿದಳು. ಬಹಳ ಕಾಲದಿಂದಲೂ ಯುದ್ಧ ಸಿದ್ಧತೆಯನ್ನು ಮಾಡಿಕೊಂಡಿರುವ ನನ್ನ ಆಶೆಯನ್ನು ದಯವಿಟ್ಟು ಪೂರ್ತಿಮಾಡು. ||೪೪||

ಈರೀತಿಯಾಗಿ ಕುಮಾರಿಯಾಡಿದ ಮಾತನ್ನು ಕೇಳಿ ಶ್ರೇಷ್ಠಮಾತೆಯಾದ ಲಲಿತಾದೇವಿಯು ನಗುತ್ತಾ ಮಂತ್ರಿಣಿಯ ಮುಖವನ್ನು ನೋಡಿದಳು. ||೪೫||

ಲಲಿತಾದೇವಿಯ ಅಭಿಪ್ರಾಯವನ್ನು ತಿಳಿದು ಮಂತ್ರಿಣಿಯು ಕುಮಾರಿಯನ್ನು ಕುರಿತು, ಎಲೌ ಕುಮಾರಿಯೇ, ನಿನಗೆ ಯುದ್ಧಮಾಡಲು ಇಷ್ಟವಿರುವುದೇ ಆದರೆ ನನ್ನ ಮಾತನ್ನು ಕೇಳು ಎಂದಳು. ||೪೬||

ನೀನೊಬ್ಬಳೇ ಬೇರೆಯೊಬ್ಬನೊಂದಿಗೆ ಯುದ್ಧಮಾಡಲು ಬಯಸುವುದಾದರೆ ನೀನು ದಂಡನಾಯಕಿ ಮತ್ತು ನಾನು ಹೀಗೆ ಇಬ್ಬರನ್ನೂ ಜೊತೆಯಲ್ಲಿ ಸೇರಿಸಿಕೊಂಡು ಯುದ್ಧಕ್ಕೆ ಹೋಗು. ||೪೭||

ನೀನು ಯುದ್ಧದಲ್ಲಿ ನಮ್ಮಿಬ್ಬರ ಜೊತೆಯಲ್ಲಿಲ್ಲದೇ ಒಬ್ಬಂಟಿಗಳಾಗಿಯೇ ರಾಕ್ಷಸರ ಸೈನ್ಯವನ್ನೆಂದಿಗೂ ಪ್ರವೇಶಿಸಲಾಗದು. ನಾವು ನಿನ್ನ ಪಕ್ಷದಲ್ಲಿ ಯಾವಾಗಲೂ ಇರುವೆವು. ||೪೮||

ಭವಾವಸ್ತದ್ವದತ್ರೈವ ಕೇನ ಯೋದ್ಧುಂ ಹಿ ವಾಂಛಸಿ ।
ಶ್ರುತ್ವೈವಂ ಮಂತ್ರಿಣೀವಾಕ್ಯಂ ಪ್ರಾಹ ಬಾಲಾಂಬಿಕಾ ಪುನಃ ॥೪೯॥

ಯುಧ್ಯಾಮ್ಯಹಂ ಭಂಡಪುತ್ರೈರ್ನ ತೇಷ್ವನ್ಯಾ ಕಥಂಚನ ।
ಸರ್ವಥಾ ಬಾಣಮೇಕಂ ವಾ ವಿಸೃಜೇದಹಮೇಕಲಾ ॥೫೦॥

ಯುದ್ಧ್ವಾ ತೈಸ್ತಾನ್ನಿಹನ್ಮ್ಯೇವ ನ ತದ್ವಾಹಾ ರಥಾ ಅಪಿ ।
ಆಯುಧಾದೀನಿ ನಾಶ್ಯಾನಿ ಅನ್ಯಾಭಿರ್ಜಾತು ಕುತ್ರಚಿತ್ ॥೫೧॥

ಶ್ರುತ್ವಾ ಬಾಲಾವಚೋ ಭೂಯೋ ಮಂತ್ರಿಣೀ ತಾಮುವಾಚ ಹ ।
ಏಕೇನ ಯುಧ್ಯಸ್ವ ರಣೇ ದೇವ್ಯಾದಿಷ್ಟೋ ಕಥಂ ತ್ವಯಾ ॥೫೨॥

ತ್ರಿಂಶದ್ಭಿಃ ಪ್ರಿಯತೇ ಯುದ್ಧಂ ನೇದಮೌಪಯಿಕಂ ತವ ।
ಭಂಡಪುತ್ರಾ ಮಹಾಶೂರಾ ಭಂಡತುಲ್ಯಪರಾಕ್ರಮಾಃ ॥೫೩॥

ನಾವು ಯಾವಾಗಲೂ ನಿನ್ನ ಸಹಾಯಕ್ಕಾಗಿ ಜೊತೆಯಲ್ಲಿರುವೆವು. ಹಾಗೆಯೇ ನೀನು ಯಾರೊಂದಿಗೆ ಯುದ್ಧಮಾಡಲು ಅಪೇಕ್ಷಿಸುತ್ತೀಯೆ? ಈ ರೀತಿಯಲ್ಲಿ ಹೇಳಿದ ಮಂತ್ರಿಣಿಯ ಮಾತನ್ನು ಕೇಳಿ ಪುನಃ ಬಾಲೆಯಾದ ಕುಮಾರಿಯು ಅವರನ್ನು ಕುರಿತು ಈರೀತಿಯಲ್ಲಿ ಮಾತನಾಡಿದಳು. ॥೪೯॥

ನಾನು ಭಂಡಾಸುರನ ಕುಮಾರರೊಂದಿಗೆ ಯುದ್ಧಮಾಡುವೆನು. ಈ ಸಂದರ್ಭದಲ್ಲಿ ಮತ್ತಾರೂ ನನ್ನ ಕಡೆಯಲ್ಲಿ ಹೇಗೂ ಅವರ ಮೇಲೆ ಬಾಣ ಪ್ರಯೋಗವನ್ನು ಮಾಡಬಾರದು. ನಾನು ಒಬ್ಬಂಟಿಗಳಾಗಿಯೇ ಅವರೊಂದಿಗೆ ಯುದ್ಧಮಾಡಬೇಕು. ॥೫೦॥

ಅವರೊಂದಿಗೆ ನಾನು ಯುದ್ಧಮಾಡಿ ಅವರನ್ನು ನಾನು ಕೊಲ್ಲುವೆನು. ಅವರ ವಾಹನಗಳು, ರಥಗಳು, ಆಯುಧಗಳು ಮುಂತಾದವು ಇವನ್ನೂ ಸಹ ನಾನಲ್ಲದೇ ಮತ್ತಾರೂ ಎಂದಿಗೂ ನಾಶಮಾಡಲಾಗದು. ॥೫೧॥

ಕುಮಾರಿಯ ಆ ಮಾತನ್ನು ಕೇಳಿ ಮಂತ್ರಿಣಿಯು ಪುನಃ ಅವಳನ್ನು ಕುರಿತು ಈ ರೀತಿಯಲ್ಲಿ ಹೇಳಿದಳು.—ನೀನು ಕೇವಲ ಒಬ್ಬನೊಂದಿಗೆ ಯುದ್ಧ ಮಾಡಬೇಕೆಂದು ದೇವಿಯ ಆಜ್ಞೆಯಾಗಿದೆ. ॥೫೨॥

ಅವನ ಮುವ್ವತ್ತು ಮಕ್ಕಳೊಂದಿಗೆ ನೀನೊಬ್ಬಳೇ ಯುದ್ಧಮಾಡುವುದು

ಭೀಮಸಂಹನನಾಃ ಸರ್ವೇ ಕೂಟಯುದ್ಧವಿಶಾರದಾಃ ।
ಏಕೇನ ತೇಷು ಯುಧ್ಯಸ್ವ ಯೇನಯೋದ್ಧುಂ ಸಮೀಪ್ಸಿತಂ ॥೩೪॥

ಇತಿ ವಾಕ್ಯಂ ಶ್ಯಾಮಲಾಯಾಃ ಶ್ರುತ್ವಾ ಬಾಲಾಂಬಿಕಾ ತತಃ ।
ಪ್ರಣಮ್ಯ ಭೂಯಸ್ತೈರ್ಯುದ್ಧ ಮಯಾಚತ ಕೃತಾಂಜಲಿಃ ॥೩೫॥

ಯಾಚತೀಂ ತಾಂ ಸಮಾಲೋಕ್ಯ ಪ್ರೀತಾ ಸಾ ಲಲಿತಾಂಬಿಕಾ ।
ದದಾವನುಜ್ಞಾಂ ಸಮರೇ ಆಶ್ಲಿಷ್ಯ ಪ್ರೀತಿಪೂರ್ವಕಂ ॥೩೬॥

ಅಥ ಪ್ರಾಹ ಪುನರ್ದೇವೀಂ ಬಾಲಾ ಶ್ರೀತ್ರಿಪುರಾಂ ತದಾ ।
ಮಾತರನ್ಯಚ್ಛೃಣು ವಚೋ ದಂಡಿನ್ಯೇಷಾ ಮಯಾ ಸಹ ॥೩೭॥

ಯುಕ್ತವಾಗಿ ತೋರುವುದಿಲ್ಲ. ಏಕೆಂದರೆ ಭಂಡನ ಮಕ್ಕಳು ಮಹಾ ಶೂರರಾಗಿ ಭಂಡನಷ್ಟೇ ಪರಾಕ್ರಮಶಾಲಿಗಳಾಗಿದ್ದಾರೆ. ||೩೩||

ಅವರೆಲ್ಲರೂ ಭಯಂಕರವಾದ ಮೈಕಟ್ಟುಳ್ಳವರಾಗಿಯೂ ಮೋಸದ ಯುದ್ಧದಲ್ಲಿ ನಿಪುಣರಾಗಿಯೂ ಇದ್ದಾರೆ. ಅವರ ಪೈಕಿ ನಿನಗೆ ಇಷ್ಟಬಂದವನೊಬ್ಬನೊಡನೆ ಮಾತ್ರ ಯುದ್ಧವನ್ನು ಮಾಡು. ||೩೪||

ಈರೀತಿಯಾಗಿ ಲಲಿತಾದೇವಿಯು ಹೇಳಿದ ಮಾತನ್ನು ಕೇಳಿ ಕುಮಾರಿಯು ಆಕೆಗೆ ನಮಸ್ಕರಿಸಿ ಕೈಜೋಡಿಸಿಕೊಂಡು ಪುನಃ ಅವರೊಂದಿಗೆ ಯುದ್ಧಮಾಡಲು ಆಕೆಯನ್ನು ಪ್ರಾರ್ಥಿಸಿಕೊಂಡಳು. ||೩೫||

ಹೀಗೆ ಬೇಡುತ್ತಿರುವ ಆಕೆಯನ್ನು ನೋಡಿ ಸಂತುಷ್ಟಳಾದ ಲಲಿತಾದೇವಿಯು ಅವಳನ್ನು ಪ್ರೀತಿಪೂರ್ವಕವಾಗಿ ಆಲಿಂಗಿಸಿಕೊಂಡು ಯುದ್ಧಮಾಡುವುದಕ್ಕಾಗಿ ಅಪ್ಪಣೆಯನ್ನು ಕೊಟ್ಟಳು. ||೩೬||

ಅನಂತರ ಕುಮಾರಿಯು ಶ್ರೀ ಲಲಿತಾತ್ರಿಪುರಸುಂದರೀದೇವಿಗೆ ನಮಸ್ಕರಿಸಿ ಅವಳನ್ನು ಕುರಿತು, ಓ ತಾಯಿಯೇ, ನನ್ನ ಇನ್ನೊಂದು ಮಾತನ್ನು ದಯವಿಟ್ಟು ಲಾಲಿಸು. ನನ್ನೊಂದಿಗೆ ಯುದ್ಧರಂಗದಲ್ಲಿ ದಂಡನಾಯಕಿಯು ಇರುವುದು ಬೇಡ! ಎಂಬುದಾಗಿ ಬಿನ್ನೈಸಿದಳು. ||೩೭||

15

ನ ತಿಷ್ಠತು ಯುದ್ಧಭುವಿ ಭೂಯ ಏಷಾ ಪುರಾ ಮಮ ।
ವಿನಾಶಯೇದ್ಯುದ್ಧರಸಂ ಯದ್ಯಾಗಚ್ಛೇನ್ಮಯಾ ಸಹ ॥೫೮॥

ಪೃಷ್ಠತಸ್ತಿಷ್ಠತು ನ ತು ವಿಘ್ನಂ ಭೂಯಃ ಕರಿಷ್ಯತಿ ।
ಯದಿ ಯುದ್ಧೇ ಪುನರ್ವಿಘ್ನಂ ಕರಿಷ್ಯತಿ ತದಾ ಶೃಣು ॥೫೯॥

ಮಯಾ ಪರಾಹತಾಂ ಯುದ್ಧೇ ದ್ರುತಮೇನಾಂ ಪ್ರಪಶ್ಯಸಿ ।
ಏವಂ ವದಂತೀಂ ಬಾಲಾಂ ತಾಂ ಮತ್ವಾ ರುಷ್ಟಾಂ ಚ ಪೋತ್ರಿಣೀ॥೬೦॥

ನತ್ವಾ ತಾಂ ಸಾಂತ್ವಯಾಮಾಸ ಮೃದುವಾಕ್ಯೈಃ ಸುಪೇಶಲೈಃ ।
ದೇವಿ ಶಂಕಾಂ ತ್ಯಜ ಮಯಿ ಆಗಚ್ಛಾಮಿ ತ್ವಯಾ ಸಹ ॥೬೧॥

ಹಿಂದಿನಂತೆ ದಂಡನಾಯಕಿಯು ಯುದ್ಧಭೂಮಿಯಲ್ಲಿ ನನ್ನೊಡನೆ ಇರಬಾರದು. ಇವಳು ನನ್ನ ಜೊತೆಯಲ್ಲಿ ಬಂದರೆ ನನ್ನ ಯುದ್ಧದ ಸ್ವಾರಸ್ಯವನ್ನೇ ಹಾಳುಮಾಡುವಳು. ॥೫೮॥

ನನ್ನ ಜೊತೆಯಲ್ಲಿ ಬಂದರೆ ಇವಳು 'ನನ್ನ ಹಿಂಭಾಗದಲ್ಲಿ ನಿಂತಿರುವುದು ಬೇಡ. ಏಕೆಂದರೆ ಇವಳು ಪುನಃ ವಿಘ್ನವನ್ನುಂಟುಮಾಡುವಳು. ಇವಳೇನಾದರೂ ಪುನಃ ನನ್ನ ಯುದ್ಧದಲ್ಲಿ ವಿಘ್ನವನ್ನುಂಟುಮಾಡುವುದಾದರೆ ನಾನು ಏನನ್ನು ಮಾಡುವೆನು? ಎಂಬುದನ್ನು ದಯವಿಟ್ಟು ಕೇಳಿ. ॥೫೯॥

ಆಗ ನಾನು ಇವಳನ್ನೇ ಶೀಘ್ರವಾಗಿ ಯುದ್ಧದಿಂದ ಹಿಂತಿರುಗಿಸಿ ಓಡಿಸುವೆನು. ಈ ರೀತಿಯಾಗಿ ಹೇಳುತ್ತಿರುವ ಕೋಪಗೊಂಡಿರುವ ಕುಮಾರಿಯನ್ನು ಕುರಿತು ದಂಡನಾಯಕಿಯು ಈ ರೀತಿಯಲ್ಲಿ ಹೇಳಿದಳು. ॥೬೦॥

ಎಲೌ ದೇವಿಯೇ, ನನ್ನ ವಿಷಯದಲ್ಲಿರುವ ಈ ಸಂದೇಹವನ್ನು ಬಿಟ್ಟುಬಿಡು. ಆದರೆ ನಾನು ನಿಮ್ಮೊಂದಿಗೆ ಬರುವೆನು. ಎಂದು ಕುಮಾರಿಯನ್ನು ಕುರಿತು ದಂಡನಾಯಕಿಯು ನಮಸ್ಕರಿಸಿ, ಹೇಳಿ, ಮನೋಹರವಾದ ಮತ್ತು ಮೃದುವಾದ ಈ ಮಾತುಗಳಿಂದ ಅವಳನ್ನು ಸಮಾಧಾನಪಡಿಸಿದಳು. ॥೬೧॥

ನಿಶಾಮಯಾಮಿ ತೇ ಯುದ್ಧಂ ಕರೋಮಿ ತವ ಯತ್ಪ್ರಿಯಂ ।
ತವಾಽಽಜ್ಞಾಮನುರುಧ್ಯೈವ ಪುರತಃ ಪೃಷ್ಠತೋಽಪಿ ವಾ ॥೬೨॥

ಸ್ಥಾಸ್ಯಾಮಿ ನ ಹಿ ವಿಘ್ನಂ ಮೇ ಭವಿಷ್ಯತಿ ಚ ತೇ ಯುಧಿ ।
ಇತಿ ಶ್ರುತ್ವಾ ದಂಡಿನೀಂ ಸಾ ಮೋದಾದಾಶ್ಲಿಷ್ಯ ಸತ್ವರಂ ॥೬೩॥

ರಥಮಾರುಹ್ಯ ತರಸಾ ನಿರ್ಯಯೌ ಸಮರೋತ್ಸುಕಾ ।
ಮಂತ್ರಿಣೀ ದಂಡನಾಥಾ ಚ ಸ್ವಸ್ವಸ್ಯಂದನಸಂಸ್ಥಿತೇ ॥೬೪॥

ಯಯತುಃ ಪಾರ್ಶ್ವತಸ್ತಸ್ಯಾಃ ಶಕ್ತಿಸೇನಾಸಮಾವೃತೇ ।
ಅಥ ಶ್ರೀ ಚಕ್ರರಾಜಾಽಽಖ್ಯ ರಥಮಾರುಹ್ಯ ಸತ್ವರಂ ॥೬೫॥

ಯುದ್ಧಾಯ ನಿರ್ಯಯೌ ದೇವೀ ವೀರಸನ್ನಾಹಸನ್ನುತಾ ।
ತತ್ಪೃಷ್ಠತಃ ಸಮಾರುಹ್ಯ ತಿಮಿರಸ್ತೋಮ ಸಂಪ್ರಭಂ ॥೬೬॥

ನೀನು ಹೇಳಿದಂತೆಯೇ ಕೇಳುತ್ತಾ ನಿನಗೆ ಇಷ್ಟವಾದ ರೀತಿಯಲ್ಲಿ ನಾನು ಯುದ್ಧದಲ್ಲಿ ಸಹಾಯಕಳಾಗಿರುವೆನು. ನಿನ್ನ ಅಪ್ಪಣೆಗೆ ಅನುಸಾರವಾಗಿಯೇ ನಿನ್ನ ಮುಂಭಾಗ ಅಥವಾ ಹಿಂಭಾಗಗಳಲ್ಲಿರುವೆನು. ॥೬೨॥

ನಾನು ನೀನು ಹೇಳಿದಂತೆಯೇ ನಿಲ್ಲುವೆನು. ನೀನು ಮಾಡುವ ಯುದ್ಧದಲ್ಲಿ ನಾನು ವಿಘ್ನವನ್ನುಂಟುಮಾಡುವುದಿಲ್ಲ! ಎಂದು ಹೇಳಿದ ದಂಡಿನಿಯ ಮಾತನ್ನು ಕೇಳಿ ಕುಮಾರಿಯು ಸಂತೋಷದಿಂದ ಶೀಘ್ರವಾಗಿ ಅವಳನ್ನು ಆಲಿಂಗಿಸಿದಳು. ॥೬೩॥

ಈರೀತಿಯಲ್ಲಿ ಕುಮಾರಿಯು ಅವಳ ಮಾತಿಗೊಪ್ಪಿ ರಥವನ್ನೇರಿ ಯುದ್ಧದಲ್ಲಿ ಉತ್ಸಾಹವುಳ್ಳವಳಾಗಿ ಹೊರಟಳು. ಮಂತ್ರಿಣಿಯೂ ಮತ್ತು ದಂಡನಾಯಕಿಯೂ ತಮ್ಮ ತಮ್ಮ ರಥವನ್ನೇರಿದರು. ॥೬೪॥

ಮಂತ್ರಿಣೀ ಮತ್ತು ದಂಡನಾಯಕೀ ಇವರಿಬ್ಬರೂ ಶಕ್ತಿಸೈನ್ಯಗಳಿಂದ ಕೂಡಿದವರಾಗಿ ಅವಳ ಪಕ್ಕಗಳಲ್ಲಿ ಹೊರಟರು. ಆನಂತರ ಲಲಿತಾದೇವಿಯು ಶ್ರೀ ಚಕ್ರರಾಜ ಎಂಬ ರಥವನ್ನೇರಿ ಶೀಘ್ರವಾಗಿ ಹೊರಟಳು. ॥೬೫॥

ವೀರರಿಗೆ ಬೇಕಾದ ಯುದ್ಧಸಿದ್ಧತೆಗಳೊಡನೆ ಕೂಡಿದವಳಾಗಿ ಲಲಿತಾದೇವಿಯು ಹೊರಟಳು. ಕುಮಾರಿಯ ಹಿಂಭಾಗದಲ್ಲಿ ತಿರಸ್ಕರಿಣೀಶಕ್ತಿಯು

ತುರಗಂ ಮಾರುತಜವಂ ನಿರ್ಯಯೌ ಸಾ ತಿರಸ್ಕೃತಿಃ ।
ವಿಕರ್ಷಂತೀ ಶಕ್ತಿಸೇನಾಮಮೇಯಾಂ ಸಾಗರೋಪಮಾಂ ||೬೭||

ಅಥ ಸೇನಾದ್ವಯಮುಖಮಭೂದ್ಭೀಮಂ ಸುಸಂಗತಂ ।
ಯುದ್ಧವಾದ್ಯ ಚಿತ್ರರವೋ ನೇಮಿ ಘೋಷೋಽತಿ ಮಾಂಸಲಃ ||೬೮||

ವೀರಾಃಸ್ಫೋಟೈರ್ಹುಂಕೃತೈಶ್ಚ ಗಜಮಂಡಲಚೀತ್ಕೃತೈಃ ।
ಹಯಹ್ರೇಷಿತ ಸಂರಾವೈರ್ವವೃಧೇಽತಿತರಾಂ ತದಾ ||೬೯||

ಅಥ ಶಸ್ತ್ರಪ್ರಪಾತೋಽಭೂಚ್ಚಟಚ್ಚಟರವೋದ್ಧತೈಃ ।
ಲೋಹಿತಾನಾಂ ಮಹಾಽಸಾರವರ್ಷಣೋಽತಿಭಯಂಕರಃ ||೭೦||

ಕತ್ತಲೆಯ ರಾಶಿಯಂತೆ ಅಚ್ಚಕಪ್ಪಿನ ಕಾಂತಿಯನ್ನು ಬೀರುತ್ತಿರುವ ಕುದುರೆಯ ಮೇಲೇರಿ ಹೊರಟಳು. ||೬೬||

ತಿರಸ್ಕರಣೀಶಕ್ತಿಯು ವಾಯುವೇಗವುಳ್ಳ ಕುದುರೆಯನ್ನೇರಿ ಸಾಗರಕ್ಕೆ ಸಮಾನವಾಗಿ ಅಪಾರವಾದ ಶಕ್ತಿಸೈನ್ಯವನ್ನು ನಡೆಸುತ್ತಾ ಹೊರಟಳು. ||೬೭||

ಅನಂತರ ಎರಡು ಸೇನೆಗಳ ಮುಂಭಾಗವೂ ಬಹಳ ಭಯಂಕರವಾಗಿಯೂ ತುಂಬ ನಿಬಿಡವಾಗಿಯೂ ಇತ್ತು. ಎಲ್ಲೆಲ್ಲಿಯೂ ಯುದ್ಧವಾದ್ಯಗಳ ನಾನಾವಿಧವಾದ ಶಬ್ದಗಳೂ ಕೇಳಿಬರುತ್ತಿದ್ದವು, ರಥಗಳ ಚಕ್ರದ ಸುತ್ತುಪಟ್ಟಿಗಳ ಶಬ್ದವೂ ಯುದ್ಧ ಭೂಮಿಯಲ್ಲೆಲ್ಲಾ ಕಡೆಯಲ್ಲಿಯೂ ತುಂಬಿತ್ತು. ||೬೮||

ವೀರರು ತೋಳುಗಳನ್ನು ತಟ್ಟಿಕೊಳ್ಳುವ ಶಬ್ದಗಳಿಂದಲೂ, ಅವರ ಹುಂಕಾರ ಧ್ವನಿಗಳಿಂದಲೂ, ಆನೆಗಳ ಸಮೂಹಗಳ ಚೀತ್ಕಾರಗಳಿಂದಲೂ, ಕುದುರೆಗಳ ಕೆನೆಯುವಿಕೆಗಳ ಶಬ್ದಗಳಿಂದಲೂ ಅಲ್ಲಿ ಧ್ವನಿಗಳು ಹೆಚ್ಚಾಗಿ ಕೇಳಿಸುತ್ತಿದ್ದವು. ||೬೯||

ಅನಂತರ ಚಟಚಟ ಎಂಬ ಶಬ್ದವು ವಿಶೇಷವಾಗಿ ಉಂಟಾಗುತ್ತಾ ಬಹಳ ಭಯಂಕರವಾದ ಕಬ್ಬಿಣದ ಆಯುಧಗಳನ್ನೇ ಸುರಿಸುತ್ತಾ ಕೆಂಪಗೆ ಕಿಡಿಗಳನ್ನು ಕಾರಿಸುತ್ತಿರುವ ಶಸ್ತ್ರಗಳ ಸುರಿಮಳೆಯೇ ಅಲ್ಲಿ ಸಂಭವಿಸಿತು. ||೭೦||

ಹತೋಽಸಿ ಹಂಸ್ಯಸೇ ಶೀಘ್ರಂ ತಿಷ್ಠಮಾ ವಿದ್ರುತಿಂ ತ್ಯಜ ।
ದ್ರುತಂ ವೀರ್ಯಂ ದರ್ಶಯ ತೇ ಪಶ್ಯ ನೋಽದ್ಯ ಪರಾಕ್ರಮಂ ॥೭೦॥

ಏವಂ ವಚಾಂಸಿ ಬಹುಧಾ ಶ್ರೂಯಂತೇ ತತ್ರ ಸಂಗರೇ ।
ಶಿಥಿಲಾಂಗಾಃ ಶರೈಃ ಕೇಚಿತ್ ಕೇಚಿತ್ ಪರಶುದಾರಿತಾಃ ॥೭೨॥

ಶೂಲೇಷ್ವನ್ಯೇಽಭಿಸಂಪ್ರೋತಾಃ ಪರೇ ಖಡ್ಗೈರ್ವಿಪಾಟಿತಾಃ ।
ನಿಷ್ಪಿಷ್ಟಾಃ ಪರಿಘೈರನ್ಯೇ ಚಕ್ರೈಶ್ಛಿನ್ನಗಲಾಃ ಪರೇ ॥೭೩॥

ತೋಮರೈರ್ಭೇದಿತಾಃ ಕೇಚಿದ್ವಿಕ್ಷತಾಃ ಪ್ರಾಸಪಟ್ಟಿಶೈಃ ।
ಭಿಂದಿಪಾಲೈಃ ಶಕಲಿತಾ ಗದಾಭಿರ್ಭಿನ್ನಮಸ್ತಕಾಃ ॥೭೪॥

ನೀನು ಹಾಳಾದೆ. ನಿನ್ನನ್ನು ನಾನು ಈಗಲೇ ಕೊಂದುಬಿಡುವೆನು. ನಿಲ್ಲು. ಓಡಬೇಡ. ಶೀಘ್ರವಾಗಿ ನಿನ್ನ ಪರಾಕ್ರಮುವನ್ನು ತೋರಿಸು. ನನ್ನ ಪರಾಕ್ರಮವನ್ನು ನೋಡು! ಎಂಬ ಮುಂತಾದ ಮಾತುಗಳನ್ನು ಎರಡು ಸೈನ್ಯಗಳಲ್ಲಿಯೂ ಸೈನಿಕರಾಡುತ್ತಿದ್ದರು. ॥೭೧॥

ಈರೀತಿಯಾಗಿ ನಾನಾವಿಧವಾದ ವೀರಘೋಷಗಳು ಯುದ್ಧದ ಸಮಯದಲ್ಲಿ ಸೈನಿಕರ ಬಾಯಿಗಳಿಂದ ಕೇಳಿಬರುತ್ತಿದ್ದವು. ಕೆಲವರು ಬಾಣಗಳ ಹೊಡೆತಕ್ಕೆ ಸಿಕ್ಕಿ ತಮ್ಮ ಅವಯುವಗಳನ್ನೇ ಮುರಿದುಕೊಂಡರು. ಇನ್ನು ಕೆಲವರು ಶತ್ರುಗಳ ಕೊಡಲಿಗಳ ಪೆಟ್ಟಿಗೆ ಸಿಕ್ಕಿ ಸೀಳಿಹೋದರು. ॥೭೨॥

ಕೆಲವರು ಶತ್ರುಗಳ ಶೂಲಗಳಲ್ಲಿ ಪೋಣಿಸಿದ ಹಾಗೆ ಸಿಕ್ಕಿಕೊಂಡರು. ಇನ್ನು ಕೆಲವರು ಕತ್ತಿಗಳಿಂದ ಸೀಳಿಹೋದರು. ಮತ್ತೆ ಕೆಲವರು ಪರಿಘಾಯುಧದಿಂದ ಚೂರುಚೂರಾದರು. ಇತರ ಕೆಲವರ ಕತ್ತುಗಳು ಚಕ್ರಗಳ ಹೊಡೆತದಿಂದ ಕತ್ತರಿಸಿಹೋದವು. ॥೭೩॥

ಕೆಲವರು ತೋಮರಾಯುಧಗಳ ಪೆಟ್ಟಿಗೆ ಸಿಕ್ಕಿ ಸೀಳಿಹೋದರು. ಕೆಲವರು ಪ್ರಾಸ ಮತ್ತು ಪಟ್ಟಿಕಾಯುಧಗಳಿಗೆ ಸಿಕ್ಕಿ ಮೃತರಾದರು. ಕೆಲವರುಗಳನ್ನು ಶತ್ರುಗಳು ಭಿಂದಿಪಾಲಾಯುಧಗಳಿಂದ ಚೂರು ಚೂರು ಮಾಡಿದರು. ಕೆಲವರ ತಲೆಗಳನ್ನು ಶತ್ರುಗಳು ಗದಾಪ್ರಹಾರದಿಂದ ಸೀಳಿದರು. ॥೭೪॥

ದೈತ್ಯಾ ಅಭೂರ್ವ ಸಮರೇ ಶಕ್ತಿಭಿರ್ಗಾಢಸಂಹತಾಃ ।
ಸರಿತಃ ಶೋಣಿತವಹಾ ವವೃಸ್ತತ್ರ ಸಹಸ್ರಶಃ ॥೭೫॥

ಏವಂ ಶಕ್ತಿಭಿರತ್ಯಂತಮರ್ದಿತಾ ದೈತ್ಯವಾಹಿನೀ ।
ಪಲಾಯಿತಾ ಕ್ರಂದಮಾನಾ ಶಕ್ತಿಶಸ್ತ್ರಾಸ್ತ್ರವೇಧಿತಾ ॥೭೬॥

ಅಸಹಂತೀ ಶಕ್ತಿಸೇನಾ ಸಂಮರ್ದ(ಂ)ಬಲವತ್ತರಂ ।
ಜಲಾಶಯಾಚ್ಛಿನ್ನಬಂಧಾತ್ತೋಯಾನೀವ ಕ್ಷಯಂ ಗತಾ ॥೭೭॥

ತದ್ದೃಷ್ಟ್ವಾ ವಿಹತಾಂ ಸೇನಾಂ ದೈತ್ಯಾನಾಂ ಭಂಡಸೂನವಃ ।
ಚತುರ್ಬಾಹು ಮುಖಾಸ್ತ್ರಿಂಶತ್ಸಂಖ್ಯಾಶ್ಚಿತ್ರಪರಾಕ್ರಮಾಃ ॥೭೮॥

ಭಂಡತುಲ್ಯಬಲಾಃ ಶಸ್ತ್ರಾಽಸ್ತ್ರಾಽಭಿಜ್ಞಾಃ ಯುದ್ಧದುಸ್ಸಹಾಃ ।
ರಥಾಽಽರೂಢಾಃ ಶಕ್ತಿಸೇನಾಂ ಜಘ್ನುಃ ಸಾಯಕವೃಷ್ಟಿಭಿಃ ॥೭೯॥

ಶಕ್ತಿಗಳ ಆಯುಧಗಳ ಗಾಢಪ್ರಹಾರಕ್ಕೆ ತುತ್ತಾದ ಸಾವಿರಾರು ಮಂದಿ ರಾಕ್ಷಸರು ರಕ್ತಗಳನ್ನು ಕಾರುತ್ತಾ ಮಡಿದರು. ಆಗ ಅವರ ರಕ್ತಗಳ ಪ್ರವಾಹವೇ ವಿಶೇಷವಾಗಿ ಹರಿಯಿತು. ||೭೫||

ಈ ರೀತಿಯಾಗಿ ಶಕ್ತಿಗಳು ರಾಕ್ಷಸರ ಸೈನ್ಯವನ್ನು ಚೆನ್ನಾಗಿ ಬಡಿಯುತ್ತಿರಲು ರಾಕ್ಷಸಸೈನ್ಯವು ಶಕ್ತಿಗಳ ಬಾಣಗಳ ಪೆಟ್ಟಿನಿಂದ ವಿಶೇಷವಾಗಿ ನೋವನ್ನು ಅನುಭವಿಸಿ ಅಳುತ್ತಾ ಪಲಾಯನಮಾಡಲಾರಂಭಿಸಿತು. ||೭೬||

ಶಕ್ತಿಗಳ ಬಲವಾದ ಪೆಟ್ಟುಗಳನ್ನು ಸಹಿಸಲಾರದೇ ರಾಕ್ಷಸ ಸೈನ್ಯವು ಕಟ್ಟೆಯೊಡೆದ ಸರೋವರದ ನೀರಿನಂತೆ ನಾಶವಾಗುತ್ತಿದ್ದಿತು. ||೭೭||

ರಾಕ್ಷಸ ಸೈನ್ಯವು ಈ ರೀತಿಯಾಗಿ ನಾಶವಾಗುತ್ತಿರುವುದನ್ನು ಕಂಡು ಚತುರ್ಬಾಹು ಮುಂತಾದ, ಆಶ್ಚರ್ಯಕರವಾದ ಪರಾಕ್ರಮವುಳ್ಳ, ಮೂವತ್ತು ಮಂದಿ ಭಂಡರಾಜನ ಕುಮಾರರು ಯುದ್ಧಕ್ಕೆ ಸಿದ್ಧರಾದರು. ||೭೮||

ಭಂಡನಷ್ಟೇ ಬಲಶಾಲಿಗಳಾದ, ಶಸ್ತ್ರಾಸ್ತ್ರಗಳ ಮರ್ಮವನ್ನು ಚೆನ್ನಾಗಿ ಅರಿತಿರುವ, ಯುದ್ಧದಲ್ಲಿ ಸಹಿಸಲಸಾಧ್ಯವಾದ ಪರಾಕ್ರಮವುಳ್ಳ ಭಂಡಕುಮಾರರು ರಥಗಳ ಮೇಲೇರಿ ಶಕ್ತಿಸೈನ್ಯಗಳನ್ನು ತಮ್ಮ ಬಾಣಗಳ ಸುರಿಮಳೆಯಿಂದ ಹೊಡೆದರು. ||೭೯||

ತೈಃ ಕಲಿತಮುಭೂಚ್ಛಕ್ತಿ ಸೈನ್ಯಂ ಸಮುರತಾಪನ್ನೈಃ।
ಶಸ್ತ್ರಾಸ್ತ್ರತೇಜೋ ದೈತ್ಯಾನಾಮುಸಹ್ಯಂ ಪ್ರಾಪ್ಯ ಸರ್ವತಃ ॥೮೦॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಸರ್ವಸೇನಾಸಮಾಗಮ ಫಲವರ್ಣನಂ ನಾಮ ದ್ವಿಸಪ್ತತಿತಮೋಽಧ್ಯಾಯಃ

ಯುದ್ಧಗಳಲ್ಲಿ ಬಹಳ ಭಯಂಕರರಾದ ಭಂಡಕುಮಾರರೇ ಎಲ್ಲೆಲ್ಲಿಯೂ ಶಕ್ತಿಸೈನ್ಯಗಳಲ್ಲಿ ಮುನ್ನುಗ್ಗಿದ್ದರು. ಈ ರೀತಿಯಲ್ಲಿ ಶಕ್ತಿಸೈನ್ಯಗಳೂ ಕೂಡ ಎಲ್ಲಾ ಕಡೆಯಲ್ಲಿಯೂ ರಾಕ್ಷಸರ ಶಸ್ತ್ರ ಮತ್ತು ಅಸ್ತ್ರಗಳ ಅಸಹ್ಯವಾದ ಜ್ವಾಲೆಗೆ ಗುರಿಯಾಗಿತ್ತು. ॥೮೦॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಎಲ್ಲಾ ಸೈನ್ಯಗಳ ಸೇರುವಿಕೆಯ ಪರಿಣಾಮವನ್ನು ವರ್ಣಿಸಿರುವ ಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ತ್ರಿಸಪ್ತತಿತಮೋಽಧ್ಯಾಯಃ ॥

ಎಪ್ಪತ್ತುಮೂರನೆಯ ಅಧ್ಯಾಯವು

ಏವಂ ಯುದ್ಧಕಥಾಂ ಶ್ರುತ್ವಾ ಪ್ರಾಹ ಕುಂಭಭವೋ ಮುನಿಃ ।
ಹಯಾಽಽನನ ಮಹಾಶ್ಚರ್ಯಮಾಖ್ಯಾನಂ ಸಮ್ಯಗೀರಿತಂ ॥೧॥

ಗಣನಾಥಸ್ಯ ಕಥಿತೋ ಗಜಾಸುರಸಮಾಗಮಃ ।
ಯುದ್ಧಂ ತಯೋಃ ಕಥಮಭೂತ್ತನ್ಮಮಾಽಽಚಕ್ಷ್ವ ಪೃಚ್ಛತಃ ॥೨॥

ಇತಿ ಪೃಷ್ಟಃ ಕುಂಭಭವ ಮುನಿನಾ ತುರಗಾಽಽನನಃ ।
ಗಣನಾಥ ಮಹಾಯುದ್ಧಂ ಪ್ರವಕ್ತುಮುಪಚಕ್ರಮೇ ॥೩॥

ಅಗಸ್ತ್ಯ ಶೃಣು ವಕ್ಷ್ಯಾಮಿ ಕಥಾಮತ್ಯದ್ಭುತಾಂ ತವ ।
ಗಣನಾಥ ಮಹಾವೀರ್ಯ ಸಂಭೃತಾಂ ಸಂಯುತಾಂ ರಸೈಃ ॥೪॥

ಈ ರೀತಿಯಾಗಿ ಯುದ್ಧದ ಕಥೆಯನ್ನು ಕೇಳಿ ಅಗಸ್ತ್ಯಋಷಿಯು ಹಯಗ್ರೀವನನ್ನು ಕುರಿತು, ಓ ಹಯಗ್ರೀವರೇ, ತಾವು ಈಗ ಹೇಳಿದ ಕಥೆಯು ಅತ್ಯಂತ ಆಶ್ಚರ್ಯಕರವಾಗಿತ್ತು. ಆದರೆ. ॥೧॥

ಗಣೇಶನೊಂದಿಗೆ ಯುದ್ಧಮಾಡಲು ಗಜಾಸುರನು ಬಂದನೆಂದು ಅಪ್ಪಣೆ ಕೊಡಿಸಿದಿರಿ. ಅವರಿಬ್ಬರಿಗೂ ಮುಂದೆ ಯುದ್ಧವು ಹೇಗೆ ನಡೆಯಿತೆಂಬ ವಿಷಯವನ್ನು ಕೇಳಬೇಕೆನ್ನುವ ನನಗೆ ದಯವಿಟ್ಟು ತಿಳಿಸಿ. ॥೨॥

ಈ ರೀತಿಯಾಗಿ ಪ್ರಶ್ನಿಸಿದ ಅಗಸ್ತ್ಯಮುನಿಗೆ ಹಯಗ್ರೀವನು ಗಣೇಶ ಮತ್ತು ಗಜಾಸುರರಿಗೆ ಸಂಭವಿಸಿದ ಯುದ್ಧವೃತ್ತಾಂತವನ್ನು ಹೇಳಲುಪಕ್ರಮಿಸಿದನು. ॥೩॥

ಎಲೈ ಅಗಸ್ತ್ಯನೇ, ಕೇಳು. ಗಣೇಶನ ವೀರ್ಯವನ್ನು ಚೆನ್ನಾಗಿ ಪ್ರದರ್ಶಿಸುವ

ಭಂಡಸೃಷ್ಟೇನ ದೈತ್ಯೇನ ಯುಯೋಧ ಸ ಗಣೇಶ್ವರಃ ।
ಮುಹೂರ್ತಮಾತ್ರಮಭವತ್ತಯೋರ್ಯುದ್ಧಂ ಸುದುಸ್ಸಹಂ ॥೫॥

ಅಥ ದೈತ್ಯಃ ಸಸರ್ಜಾನ್ಯಾನ್ ದೈತ್ಯಾನಾತ್ಮಪರಾಕ್ರಮಾನ್ ।
ತುಲ್ಯರೂಪಾಂ ಸ್ತುಲ್ಯಜವಾಂ ಸ್ತುಲ್ಯಸಾಹಸ ವಿಕ್ರಮಾನ್ ॥೬॥

ತಾನನೇಕಾನ್ ಯುಧ್ಯಮಾನಾನ್ ದೃಷ್ಟ್ವಾ ಕ್ರುದ್ಧೋ ಗಣೇಶ್ವರಃ ।
ಸಸರ್ಜ ಸ್ವಾತ್ಮನ ಸ್ತುಲ್ಯಾನ್ ಗಣೇಶಾನಪಿ ಕೋಟಿಶಃ ॥೭॥

ತತ್ರೈಕೈಕೇನ ದೈತ್ಯೇನ ಪ್ರತ್ಯೇಕಂ ಗಣನಾಯಕಾಃ ।
ಯುಯುಧು ಶ್ಚಿತ್ರಶಸ್ತ್ರಾಸ್ತ್ರೈ ಸ್ತದದ್ಭುತಮಿವಾಭವತ್ ॥೮॥

ಅನೇಕವಿಧವಾದ ವೀರ, ಅದ್ಭುತ ಮುಂತಾದ ರಸಗಳಿಂದ ಮನೋಹರವೂ ಮತ್ತು ಆಶ್ಚರ್ಯಕರವೂ ಆದ ಈ ಕಥೆಯನ್ನು ಹೇಳುವೆನು. ||೪||

ಗಣೇಶನು ಭಂಡರಾಕ್ಷಸನು ಸೃಷ್ಟಿಮಾಡಿದ ಗಜಾಸುರನೊಂದಿಗೆ ಯುದ್ಧ ಮಾಡಿದನು. ಅವರಿಬ್ಬರಿಗೂ ಸಂಭವಿಸಿದ ಸಹಿಸಲಸಾಧ್ಯವಾದ ಯುದ್ಧವೂ ಒಂದು ಮುಹೂರ್ತಕಾಲ ನಡೆಯಿತು. ||೫||

ಅನಂತರ ಆ ರಾಕ್ಷಸನು ತನ್ನಂತೆಯೇ ಪರಾಕ್ರಮಶಾಲಿಗಳಾದ, ದೊಡ್ಡದಾದ ಆಕಾರವುಳ್ಳ, ಹೆಚ್ಚಾದ ವೇಗವುಳ್ಳ, ತನ್ನ ಹಾಗೆ ಸಾಹಸ ಮತ್ತು ಪರಾಕ್ರಮಗಳುಳ್ಳ ಇತರ ಕೆಲವು ರಾಕ್ಷಸರುಗಳನ್ನು ಸೃಷ್ಟಿಸಿದನು. ||೬||

ಈ ರೀತಿಯಲ್ಲಿ ಅವನಂತೆಯೇ ಇರುವ ಅನೇಕ ರಾಕ್ಷಸರು ಯುದ್ಧಮಾಡುತ್ತಿರುವುದನ್ನು ನೋಡಿ ಕೋಪಗೊಂಡ ಗಣೇಶನು ತನಗೆ ಸಮಾನವಾದ ಪರಾಕ್ರಮವೇ ಮುಂತಾದ ಗುಣಗಳನ್ನು ಹೊಂದಿರುವ ಇತರ ಗಣೇಶರನ್ನು ಕೋಟಿಗಟ್ಟಲೆಯಾಗಿ ಸೃಷ್ಟಿಮಾಡಿದನು. ||೭||

ಅಲ್ಲಿ ಆ ಗಣೇಶರು ಪ್ರತ್ಯೇಕವಾಗಿ ಒಬ್ಬೊಬ್ಬ ರಾಕ್ಷಸನನ್ನೂ ಎದುರಿಸಿ, ನಾನಾವಿಧವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವುದರ ಮೂಲಕ ಯುದ್ಧಮಾಡಿದರು! ಅದು ಅತ್ಯಂತ ಆಶ್ಚರ್ಯಕರವಾಗಿತ್ತು. ||೮||

ದೈತ್ಯಾಃ ಶಕ್ತಿಗಣಾಶ್ಚಾಽಪಿ ತಯೋರ್ಯುದ್ಧಂ ಮಹಾದ್ಭುತಂ ।
ದದೃಶುಃ ಪ್ರೇಕ್ಷಕಾ ಭೂತ್ವಾ ಯುದ್ಧಸಂರಂಭ ವಿಸ್ಮೃತೇಃ ॥೯॥

ಅಥ ತೇ ಗಣನಾಥಾಸ್ತು ಜಘ್ನುರ್ವಿಕ್ರಮ್ಯ ಹೇತಿಭಿಃ।
ಕಶ್ಚಿಚ್ಛೂಲಾಹತಃ ಕಶ್ಚಿಚ್ಚಕ್ರೇಣ ಶಕಲೀಕೃತಃ ॥೧೦॥

ಕಶ್ಚಿದ್ಗದಾ ಭಗ್ನತುಂಡಃ ಕಶ್ಚಿದ್ದಂತ ವಿದಾರಿತಃ ।
ಕಶ್ಚಿನ್ನಿಷ್ಪಿಷ್ಟ ಉರಸಾ ಕಶ್ಚಿತ್ಪಾದಪ್ರಪೇಷಿತಃ ॥೧೧॥

ಕಶ್ಚಿತ್ ಕುಂಭಾಽಽಹತೇರ್ಭಿನ್ನ ಕುಂಭಃ ಪ್ರಾಣಾನ್ ಜಹೌ ಯುಧಿ ।
ಏವಂ ತೇ ನಾಶಿತಾ ದೈತ್ಯಾ ದೈತ್ಯಸೃಷ್ಟಾ ಗಜಾಽಽನನೈಃ ॥೧೨॥

ಅಥೈಕಲಃ ಸಮಭವತ್ ಪುನರ್ಗಜ ಮಹಾಽಸುರಃ ।
ಯುಯೋಧ ಬಲವಾಂಸ್ತತ್ರ ಗಣೇಶೇನಾಽತಿ ಸಾಹಸೀ ॥೧೩॥

ರಾಕ್ಷಸರು ಮತ್ತು ಶಕ್ತಿಗಳ ಗುಂಪಿನವರೂ ಕೂಡ ಯುದ್ಧವನ್ನು ನೋಡುವ ಸಡಗರದಲ್ಲಿ ಇತರ ಕಾರ್ಯಗಳೆಲ್ಲವನ್ನೂ ಮರೆತು ಅವರಿಬ್ಬರ ಅತ್ಯಾಶ್ಚರ್ಯಕರವಾದ ಯುದ್ಧಕ್ರಮವನ್ನು ನೋಡುತ್ತಿದ್ದರು. ॥೯॥

ಅನಂತರ ಗಣನಾಯಕರು ತಮ್ಮ ಆಯುಧಶಕ್ತಿಗಳಿಂದ ರಾಕ್ಷಸರನ್ನು ಹೊಡೆಯುತ್ತಿದ್ದರು. ದೈತ್ಯರಲ್ಲಿ ಒಬ್ಬನು ಶೂಲಕ್ಕೂ ಮತ್ತೊಬ್ಬನು ಚಕ್ರಕ್ಕೂ ಸಿಕ್ಕಿ ಚೂರುಚೂರಾದರು. ॥೧೦॥

ಗಣೇಶನ ಗದೆಯಿಂದ ಒಬ್ಬ ರಾಕ್ಷಸನ ಮುಖವೇ ಭಗ್ನವಾಯಿತು. ಅವನ ಕೊಂಬಿನಿಂದ ಮತ್ತೊಬ್ಬ ರಾಕ್ಷಸನು ಸೀಳಿಹೋದನು. ಗಣೇಶನು ಮಗದೊಬ್ಬ ರಾಕ್ಷಸನನ್ನು ತನ್ನ ವಕ್ಷಸ್ಥಳದಿಂದಲೇ ಗುದ್ದಿದನು. ಇನ್ನೊಬ್ಬನು ಗಣೇಶನ ಕಾಲಿನ ತುಳಿತಕ್ಕೆ ಸಿಕ್ಕಿ ನುಚ್ಚುನುಚ್ಚಾದನು. ॥೧೧॥

ಒಬ್ಬನು ಗಣೇಶನ ಕುಂಭಸ್ಥಳಕ್ಕೆ ಬಡಿದು ತನ್ನ ತಲೆಯನ್ನೇ ಸೀಳಿಕೊಂಡು ಯುದ್ಧದಲ್ಲಿ ಪ್ರಾಣವನ್ನು ಬಿಟ್ಟನು. ಈ ರೀತಿಯಲ್ಲಿ ಗಣೇಶರು ಗಜಾಸುರನು ಸೃಷ್ಟಿಸಿದ್ದ ರಾಕ್ಷಸರುಗಳನ್ನು ನಾಶಮಾಡುತ್ತಿದ್ದರು. ॥೧೨॥

ಅನಂತರ ಇತರ ರಾಕ್ಷಸರೆಲ್ಲರೂ ನಾಶವಾಗಲಾಗಿ ಗಜಮಹಾರಾಕ್ಷಸನು ಒಬ್ಬಂಟಿಗನಾದನು. ಬಹಳ ಸಾಹಸಿಯಾದ ಮತ್ತು ಬಲಿಷ್ಠನಾದ ಅವನು ಗಣೇಶನೊಂದಿಗೆ ದ್ವಂದ್ವ ಯುದ್ಧವನ್ನು ಮಾಡಿದನು. ॥೧೩॥

ಮಹಾಗಣೇಶೋಽಪಿ ದೃಷ್ಟ್ವಾ ದೈತ್ಯಂ ಪೂರ್ವವದೇಕಲಂ ।
ಸಂಜಹಾರ ಗಣಪತೀನ್ ಸ್ವಾಂಗೇ ನಿಮಿಷಮಾತ್ರತಃ ॥೧೪॥

ಅಥಾಽಭವನ್ಮಹಾಯುದ್ಧಂ ತಯೋರ್ವಿಕ್ರಮತೋರ್ಯುಧಿ ।
ಅನೇಕ ಶಸ್ತ್ರಾಸ್ತ್ರಗಣೈಃ ಸಂಕುಲಂ ಸುಭಯಂಕರಂ ॥೧೫॥

ಅಥ ಸೋಽಪಿ ಮಹಾದೈತ್ಯೋ ಮಾಯಯಾಽಭೂನ್ಮಹೋನ್ನತಃ ।
ಸಹಸ್ರಾಸ್ಯಸ್ತದ್ದ್ವಿಗುಣ ಭುಜಶ್ಚಿತ್ರಾಽಽಯುಧೈರ್ವೃತಃ ॥೧೬॥

ಕ್ಷಣೇಕ್ಷಣೇ ಚ ಶಸ್ತ್ರಾಣಾಂ ಸಹಸ್ರಂ ಸ ಸಸರ್ಜ ಹ ।
ಸೃಷ್ಟಂ ಸೃಷ್ಟಂ ಶಸ್ತ್ರಗಣಂ ನಾಶಯದ್ಗಣನಾಯಕಃ ॥೧೭॥

ದೃಷ್ಟ್ವಾ ದೈತ್ಯಸ್ಯ ಮಾಯಾಂ ತಾಂ ಗಣೇಶೋಽತಿರುಷಾಽನ್ವಿತಃ ।
ಚಿಚ್ಛೇದ ಯುಗಪತ್ತಸ್ಯ ಧೃತಂ ಶಸ್ತ್ರಸಹಸ್ರಕಂ ॥೧೮॥

ಹಿಂದಿನಂತೆಯೇ ಒಬ್ಬಂಟಿಗನಾದ ಗಜಾಸುರನನ್ನು ನೋಡಿ, ಮಹಾಗಣೇಶನೂ ಕೂಡ ಇತರ ಗಣೇಶರನ್ನೂ ನಿಮಿಷಮಾತ್ರದಲ್ಲಿಯೇ ತನ್ನ ಅವಯುವಗಳಲ್ಲಿ ಅಡಗಿಸಿಕೊಂಡನು. ||೧೪||

ಅನಂತರ ಬಹಳ ಪರಾಕ್ರಮಶಾಲಿಗಳಿಂದ ಅವರಿಬ್ಬರಿಗೂ ಕೂಡ ಅನೇಕ ಶಸ್ತ್ರಾಸ್ತ್ರಪ್ರಯೋಗಗಳ ಮೂಲಕ ಬಹಳ ಭಯಂಕರವಾಗಿ ಯುದ್ಧವು ನಡೆಯಿತು. ||೧೫||

ಅನಂತರ ಆ ಮಹಾರಾಕ್ಷಸನು ಮಾಯೆಯಿಂದ ಬಹು ಎತ್ತರವಾಗಿ ಬೆಳೆದು ಸಾವಿರಮುಖವುಳ್ಳವನಾಗಿಯೂ, ಅವುಗಳ ಎರಡರಷ್ಟು ತೋಳುಗಳುಳ್ಳವನಾಗಿಯೂ, ನಾನಾವಿಧವಾದ ಆಯುಧಗಳಿಂದ ಕೂಡಿದವನಾಗಿಯೂ ತೋರಿದನು. ||೧೬||

ಅವನು ಪ್ರತಿಕ್ಷಣದಲ್ಲಿಯೂ ಸಾವಿರಗಟ್ಟಲೆ ಶಸ್ತ್ರಗಳನ್ನು ಸೃಷ್ಟಿಸುತ್ತಿದ್ದನು. ಗಣೇಶನು ಅವನು ಸೃಷ್ಟಿಸುತ್ತಿದ್ದ ಶಸ್ತ್ರಗಳೆಲ್ಲವನ್ನೂ ಕ್ಷಣಮಾತ್ರದಲ್ಲಿಯೇ ನಾಶಮಾಡುತ್ತಿದ್ದನು. ||೧೭||

ರಾಕ್ಷಸನ ಆ ಮಾಯೆಯನ್ನು ಕಂಡು ಗಣೇಶನು ಬಹಳ ಕೋಪದಿಂದ ಕೂಡಿದವನಾಗಿ ಅವನು ಹಿಡಿದಿದ್ದ ಸಾವಿರ ಶಸ್ತ್ರಗಳನ್ನೂ ಕೂಡ ಏಕಕಾಲದಲ್ಲಿಯೇ ಕತ್ತರಿಸಿ ಕೆಳಗೆ ಕೆಡವಿದನು. ||೧೮||

ಅಥಾಽಭವದ್ಗದಾಯುದ್ಧಂ ಗಣೇಶ ಗಜದೈತ್ಯಯೋಃ ।
ಮಹತ್ಯಾ ಗದಯಾ ನೂನಂ ನಿಘ್ನತೋರಿತರೇತರಂ ॥೧೯॥

ತದಾ ಗಣೇಶಗದಯಾ ತಾಡಿತಾ ತಸ್ಯ ಸಾ ಗದಾ ।
ಶಕಲೀಭೂಯ ಪತಿತಾ ತತೋ ದೈತ್ಯೋ ನಿರಾಯುಧಃ ॥೨೦॥

ಮುಷ್ಟಿಮುದ್ಯಮ್ಯ ಗಣಪಂ ಹಂತುಮಾಯಾನ್ಮಹಾಸುರಃ ।
ದೃಷ್ಟ್ವಾಽಽಯಾಂತಂ ದೈತ್ಯವರಂ ಗಣೇಶಃ ಪ್ರಾಕ್ಷಿಪದ್ಗದಾಂ ॥೨೧॥

ಸಾ ಗದಾ ಪ್ರಾಪ್ಯ ತದ್ದೇಹಂ ನೈ(ಽ)ಷದ್ರುಜಮುದಾವಹತ್ ।
ಗದಾ ಪ್ರತಿಹತಾಽಂಗೇನ ಪಪಾತ ಭುವಿ ಸಾ ವೃಥಾ ॥೨೨॥

ಅಥ ಚಕ್ರಂ ತ್ರಿಶೂಲಂ ಚ ಪರಿಘಂ ಶಕ್ತಿಮೇವಚ ।
ಕ್ಷಿಪ್ತಂ ಕ್ಷಿಪ್ತಂ ವೃಥಾ ಭೂಮಾ ವಪತದ್ದೇಹಸಂಗತಃ ॥೨೩॥

ಅನಂತರ ಗಣೇಶ ಮತ್ತು ಗಜಾಸುರರಿಗೆ ಗದಾಯುದ್ಧವು ಪ್ರಾರಂಭವಾಯಿತು. ಅವರು ಪರಸ್ಪರ ದೊಡ್ಡಗದೆಗಳಿಂದ ಹೊಡೆದಾಡುತ್ತಿದ್ದರು. ॥೧೯॥

ಆಗ ಗಣೇಶನು ತನ್ನಗದೆಯಿಂದ ರಾಕ್ಷಸನಗದೆಗೆ ಬಲವಾಗಿಹೊಡೆದು ಚೂರು ಚೂರುಮಾಡಿ ಅದನ್ನು ಕೆಳಗೆಬೀಳುವಂತೆ ಮಾಡಿದನು. ಅನಂತರ ಗಜಾಸುರನು ಆಯುಧವೇ ಇಲ್ಲದವನಾದನು. ॥೨೦॥

ಗಜಮುಖಾರಾಕ್ಷಸನು ಮುಷ್ಟಿಯನ್ನು ಎತ್ತಿಹಿಡಿದು ಗಣಪತಿಯನ್ನು ಕೊಲ್ಲಲು ಬಂದನು. ಈ ರೀತಿಯಾಗಿ ಬರುತ್ತಿರುವ ಶ್ರೇಷ್ಠರಾಕ್ಷಸನನ್ನುನೋಡಿ ಗಣೇಶನು ಗದೆಯನ್ನು ಎಸೆದನು. ॥೨೧॥

ಆಗದೆಯು ರಾಕ್ಷಸನಿಗೆತಗುಲಿ ಅವನಿಗೆ ಯಾವತೊಂದರೆಯನ್ನೂ ಮಾಡಲಿಲ್ಲ! ಏಕೆಂದರೆ ಅವನಗದೆಯು ರಾಕ್ಷಸನ ಶರೀರಕ್ಕೆಬಡಿದು ಏನನ್ನೂ ಮಾಡಲಾರದೇ ವ್ಯರ್ಥವಾಗಿ ಭೂಮಿಯಮೇಲೆ ಬಿದ್ದುಬಿಟ್ಟಿತು. ॥೨೨॥

ಅನಂತರ ಗಣೇಶನು ಪದೇಪದೇ ಬಿಡುತ್ತಿದ್ದ ಚಕ್ರಾಯುಧ ತ್ರಿಶೂಲ ಪರಿಘಾಯುಧ ಶಕ್ತ್ಯಾಯುಧಗಳು ಅವನದೇಹಕ್ಕೆ ಸೋಕಿ ಕೂಡಲೇ ವ್ಯರ್ಥವಾಗಿ ಭೂಮಿಯಮೇಲೆ ಬೀಳುತ್ತಿದ್ದವು! ॥೨೩॥

ಉಪಲಾನಾಂ ವೃಷ್ಟಿರಿವ ಗಂಡಶೈಲ ಇವಾಽಭವತ್ ।
ದೃಷ್ಟ್ವಾ ದೈತ್ಯಂ ಸರ್ವಶಸ್ತ್ರೈ ರಜೇಯಂ ಸ ಗಣಾಧಿಪಃ ॥೨೪॥

ಚಿಂತಾಽಽಕುಲಃ ಸಮಭವತ್ತಾವನ್ಮುಷ್ಟ್ಯಾ ಜಘಾನ ಸಃ ।
ಅಥಾಽಭವತ್ತಯೋರ್ಮುಷ್ಟಿಯುದ್ಧಮತ್ಯಂತ ದಾರುಣಂ ॥೨೫॥

ಮುಷ್ಟಿಸಂಹನ ನೋದಂಚ ದಗ್ನಿವರ್ಷಣ ಸಂಯುತಂ ।
ತಂ ತತೋ ಬಾಹುಬಂಧೇನ ಬದ್ಧ್ವಾ ದೈತ್ಯಂ ನಿಪಾತಯತ್ ॥೨೬॥

ನಿಪಾತ್ಯ ಪಾದೇನಾಽಽಕ್ರಮ್ಯ ಹೃದಿ ದಂತೇನ ದಾರಯತ್ ।
ಏವಂ ವಿದಾರಿತೋ ದೈತ್ಯೋ ಜಹೌ ಪ್ರಾಣಾಂ ಸ್ತದಾ ರಣೇ ॥೨೭॥

ಹತ್ವೈವಮಿಭದೈತ್ಯಂ ತಂ ಪುನರ್ಭಂಡಾಽಸುರಂ ಪ್ರತಿ ।
ಯುದ್ಧಾಯಾಽಭ್ಯಾಜಗಾಮಾಽಽಶು ಗಣೇಶೋಽದ್ಭುತವಿಕ್ರಮಃ ॥೨೮॥

ಆ ರಾಕ್ಷಸನು, ಗಂಡಪರ್ವತಕ್ಕೆ ಎಷ್ಟುಕಲ್ಲುಗಳನ್ನು ಎಸೆದರೂ ಹೇಗೆ ವಿಕಾರವಾಗಲಾರದೋ ಹಾಗೆ, ಸ್ಥಿರನಾಗಿದ್ದನು! ಎಲ್ಲಾಶಸ್ತ್ರಗಳಿಂದಲೂ ಆರಾಕ್ಷಸನನ್ನು ಜಯಿಸಲಸಾಧ್ಯನೆಂಬುದನ್ನು ಗಣಪತಿಯು ಆಗ ಮನಗಂಡನು. ||೨೪||

ಅನಂತರ ಗಣಪತಿಯು ಚಿಂತಾಕ್ರಾಂತನಾಗಿದ್ದನು. ಅಷ್ಟರೊಳಗಾಗಿಯೇ ಗಜಾಸುರನು ಮುಷ್ಟಿಯಿಂದ ಅವನಿಗೆ ಹೊಡೆದನು. ಅನಂತರ ಅವರಿಬ್ಬರಿಗೂ ಅತ್ಯಂತಭಯಂಕರವಾದ ಮುಷ್ಟಿಯುದ್ಧವು ಸಂಭವಿಸಿತು. ||೨೫||

ಅವರಿಬ್ಬರಿಗೂ ಮುಷ್ಟಿಯ ಬಲವಾದ ಪ್ರಯೋಗದಿಂದಲೂ ಅಗ್ನಿಯನ್ನು ಕಾರುವಬಾಣಗಳ ಸುರಿಮಳೆಗಳಿಂದಲೂ ಯುದ್ಧವು ನಡೆಯಿತು. ಅನಂತರ ಗಣೇಶನು ತನ್ನ ತೋಳುಗಳೊಳಗೆ ಆರಾಕ್ಷಸನನ್ನು ಕಟ್ಟಿಹಾಕಿಕೊಂಡು ಕೆಳಗೆಬೀಳಿಸಿದನು. ||೨೬||

ಗಣೇಶನು ಗಜಾಸುರನನ್ನು ಬೀಳಿಸಿ ತನ್ನಕಾಲಿನಿಂದ ಮೆಟ್ಟಿಕೊಂಡು ತನ್ನ ಕೊಂಬಿನಿಂದ ಅವನ ಹೃದಯವನ್ನು ಸೀಳಿದನು ಈ ರೀತಿಯಾಗಿ ಅವನ ಹೃದಯವೇ ಸೀಳಲು ರಾಕ್ಷಸನು ಯುದ್ಧಭೂಮಿಯಲ್ಲಿಯೇ ಪ್ರಾಣಗಳನ್ನು ಬಿಟ್ಟನು. ||೨೭||

ಈರೀತಿಯಾಗಿ ಗಜಾಸುರನನ್ನು ಗಣೇಶನು ಕೊಂದನು. ಭಂಡರಾಕ್ಷಸನಿದ್ದೆಡೆಗೆ

ತದಾಽಽಯಾಂತಂ ಗಣಪತಿಂ ದೃಷ್ಟ್ವಾ ಭಂಢಮಹಾಽಸುರಃ ।
ಚಿಂತಯಲ್ಲಲಿತಾದೇವೀಂ ಭೀತಸ್ತಸ್ಯ ಪರಾಕ್ರಮಾತ್ ॥೨೯॥

ಮಾತಸ್ತ್ವಯಾಽಯಂ ಸಮರೇ ಹತೋ ದೇಹೋ ವಿನಶ್ಯತು ।
ಇತಿ ಪೂರಯ ಮದ್ವಾಂಛಾಂ ಪ್ರಪನ್ನಸ್ತ್ವತ್ಪದಾಂಬುಜಂ ॥೩೦॥

ತದ್ವಿದಿತ್ವಾ ಭಕ್ತವಾಂಛಾ ಪೂರಣಾಯ ಮಹೇಶ್ವರೀ ।
ಸಸ್ಮಾರ ಸಿಂಧುರಮುಖಂ ಚಕ್ರರಾಜರಥಸ್ಥಿತಾ ॥೩೧॥

ವಿದಿತ್ವಾ ಸಂಸ್ಮೃತಿಂ ದೇವ್ಯಾ ಆಜಗಾಮ ಗಜಾನನಃ ।
ಪ್ರಣಮ್ಯ ಪ್ರಾಹ ಮಾತಃ ಕಿಂ ಸ್ಮೃತೋ ಯುದ್ಧವಿಧೌ ಸ್ಥಿತಃ ॥೩೨॥

ಪ್ರಾಹ ಶ್ರುತ್ವಾ ವಚಸ್ತಸ್ಯ ಲಲಿತಾ ಪರಮೇಶ್ವರೀ ।
ವತ್ಸಾಽಲಂ ಯುದ್ಧವಿಧಿನಾ ತಿಷ್ಠ ಮತ್ಪಾರ್ಶ್ವತೋಽಧುನಾ ॥೩೩॥

ಆಶ್ಚರ್ಯಕರವಾದ ಪರಾಕ್ರಮವುಳ್ಳ ಈತನು ಯುದ್ಧಮಾಡುವುದಕ್ಕಾಗಿ ಬಹುಶೀಘ್ರವಾಗಿ ಬಂದನು. ॥೨೮॥

ಗಣಪತಿಯು ಬರುತ್ತಿರುವುದನ್ನು ಕಂಡು ಭಂಡಮಹಾರಾಕ್ಷಸನು ಅವನ ಪರಾಕ್ರಮಕ್ಕೆ ಹೆದರಿ ಲಲಿತಾದೇವಿಯನ್ನು ಚಿಂತಿಸಿದನು. ॥೨೯॥

ಓ ತಾಯಿಯೇ, ಈ ಯುದ್ಧದಲ್ಲಿ ನೀನೇ ನನ್ನನ್ನು ಕೊಂದು ನನ್ನ ಈ ದೇಹವು ನಾಶವಾಗಲಿ. ನಿನ್ನ ಪಾದಕಮಲಗಳಲ್ಲಿ ಶರಣಾಗತನಾಗಿರುವ ನನ್ನ ಈ ಬಯಕೆಯನ್ನು ದಯವಿಟ್ಟು ಈಡೇರಿಸು. ॥೩೦॥

ಈ ವಿಷಯವನ್ನು ತಿಳಿದು ಭಕ್ತರ ಇಷ್ಟಾರ್ಥವನ್ನು ನೆರವೇರಿಸುವುದಕ್ಕಾಗಿ ಮಹೇಶ್ವರಿಯಾದ ಲಲಿತಾದೇವಿಯು ತನ್ನ ಚಕ್ರರಾಜರಥದಲ್ಲಿಯೇ ಇದ್ದುಕೊಂಡು ಗಣೇಶನನ್ನು ಜ್ಞಾಪಿಸಿಕೊಂಡಳು. ॥೩೧॥

ಲಲಿತಾದೇವಿಯು ಸ್ಮರಿಸಿದುದನ್ನು ತಿಳಿದು ಗಣೇಶನು ಬಂದು ಆಕೆಗೆ ನಮಸ್ಕರಿಸಿ, ಓ ತಾಯಿಯೇ, "ಯುದ್ದಮಾಡುತ್ತಿದ್ದ ನನ್ನನ್ನು ತಾವೇಕೆ ಸ್ಮರಿಸಿದಿರಿ? ಎಂದು ಕೇಳಿದನು. ॥೩೨॥

ಗಣೇಶನ ಮಾತನ್ನು ಕೇಳಿ ಲಲಿತಾಪರಮೇಶ್ವರೀದೇವಿಯು ಎಲೈ ಮಗುವೇ, ನೀನು ಯುದ್ಧಮಾಡಿದ್ದು ಸಾಕು. ಇನ್ನು ಮೇಲೆ ನೀನು ನನ್ನ ಪಕ್ಕದಲ್ಲಿಯೇ ಇರು ಎಂದಳು. ॥೩೩॥

ಏತಾ ಯುದ್ಧೋತ್ಸುಕಾ ದೇವ್ಯೋ ಯುಧ್ಯಂತ್ವ ಸುರಸೇನಯಾ ।
ಇತ್ಯಾಜ್ಞಪ್ತೋ ಗಣೇಶಾನೋ ವಿರರಾಮ ನಿಯುದ್ಧತಃ ॥೩೪॥

ಅಥ ಭಂಡಸುತೈಃ ಶಕ್ತಿ ಸೇನಾಂ ದೃಷ್ಟ್ವಾಽತಿ ವಿಕ್ಷತಾಂ ।
ತಾನ್ ಸಾಯಕೈಃ ಕಿರಂತೀ ಸಾ ಬಾಲಾ ಯುದ್ಧೇ ಸಮಾಸದತ್ ॥೩೫॥

ಅಸಂಖ್ಯದೈತ್ಯಸೇನಾಭಿರ್ಯುತಾ ದೈತ್ಯೇಶ ಸೂನವಃ ।
ಅತ್ಯದ್ಭುತಕ್ರಿಯಾಂ ಯುದ್ಧೇ ಬಾಲಾಂ ವವ್ರೂ ರಣಾಽಜಿರೇ ॥೩೬॥

ಕೋಟಿಶೋ ದೈತ್ಯಸುಭಟಾ ವಿಚಿತ್ರಾಽಽಯುಧವರ್ಷಣೈಃ ।
ಬಾಲಾಂ ರಥಸ್ಥಾಂ ವವೃಷುರ್ಗರ್ಜಂತೋ ಯುದ್ಧದುರ್ಮದಾಃ ॥೩೭॥

ಅಥ ಶಕ್ತಿಗಣಂ ಪ್ರಾಹ ದಂಡಿನೀಪರಮಂ ವಚಃ ।
ಶೃಣುಧ್ವಂ ಶಕ್ತಯಃ ಸರ್ವಾ ಬಾಲಾಽಂಬಾಽಽಜ್ಞಾಂ ಬ್ರವೀಮಿ ವಃ ॥೩೮॥

ಯುದ್ಧದಲ್ಲಿ ಉತ್ಸಾಹವುಳ್ಳ ಈ ದೇವಿಯರು ರಾಕ್ಷಸರ ಸೈನ್ಯದೊಂದಿಗೆ ಇನ್ನು ಯುದ್ಧಮಾಡಲಿ. ಎಂದು ಲಲಿತಾದೇವಿಯು ಅಪ್ಪಣೆಮಾಡಲು, ಗಣೇಶನು ಅವಳ ಮಾತಿಗೆ ಒಪ್ಪಿ ಯುದ್ಧಮಾಡುವುದನ್ನು ನಿಲ್ಲಿಸಿದನು. ॥೩೪॥

ಅನಂತರ ಭಂಡರಾಕ್ಷಸನ ಕುಮಾರರು ಶಕ್ತಿಗಳ ಸೈನ್ಯವನ್ನು ಬಹಳವಾಗಿ ನಾಶಮಾಡುತ್ತಿರುವುದನ್ನು ಕಂಡು ಕುಮಾರಿಯು ಅವರಿಗೆ ಬಾಣಪ್ರಯೋಗಗಳನ್ನು ಮಾಡುತ್ತಾ ಅವರೊಂದಿಗೆ ಯುದ್ಧಮಾಡಲು ಬಂದಳು. ॥೩೫॥

ಲೆಕ್ಕವಿಲ್ಲದಷ್ಟು ರಾಕ್ಷಸಸೈನ್ಯದೊಡನೆ ಭಂಡರಾಕ್ಷಸನ ಕುಮಾರರು ಕುಮಾರಿಯೊಂದಿಗೆ ಅತ್ಯಂತಾಶ್ಚರ್ಯಕರವಾದ ರೀತಿಯಲ್ಲಿ ಯುದ್ಧವನ್ನು ಮಾಡಿದರು. ॥೩೬॥

ಕೋಟ್ಯಾಂತರ ರಾಕ್ಷಸಸೈನಿಕರು ಅನೇಕವಿಧವಾದ ಆಯುಧಗಳನ್ನು ಪ್ರಯೋಗಿಸುವುದರಮೂಲಕ ಯುದ್ಧದಲ್ಲಿ ವಿಶೇಷ ಮದವನ್ನು ತೋರಿಸುತ್ತಾ ಗರ್ಜಿಸುತ್ತಾ ರಥದಲ್ಲಿ ಕುಳಿತಿರುವ ಕುಮಾರಿಯೊಂದಿಗೆ ಯುದ್ಧಮಾಡಿದರು. ॥೩೭॥

ಅನಂತರ ದಂಡನಾಯಕಿಯು ಶಕ್ತಿಗಳ ಗುಂಪಿನವರನ್ನು ಕುರಿತು, ಕುಮಾರೀದೇವಿಯು ಅಪ್ಪಣೆಮಾಡಿರುವ ವಿಷಯವನ್ನು ನಿಮಗೆ ಹೇಳುವೆನು. ಕೇಳಿರಿ. ಎಂದು ಶ್ರೇಷ್ಠವಾದ ಮಾತನ್ನು ಹೀಗೆ ಹೇಳಿದಳು. ॥೩೮॥

ಏಷಾ ಯೈರ್ಯುಧ್ಯತಿ ಯುಧಿ ನ ತೇಷು ಸಹಸಾ ಕ್ವಚಿತ್ ।
ಪ್ರಯೋಕ್ತವ್ಯಂ ಶಸ್ತ್ರಗಣಂ ದಂಡ್ಯಾ ಸಾ ಮೇಽನ್ಯಥಾ ಭವೇತ್॥೩೯॥

ಪ್ರೇಕ್ಷಧ್ವಮಸ್ಯಾಃ ಸಮರಂ ನ ಯೋದ್ಧವ್ಯಂ ಕಥಂಚನ ।
ಇತಿ ಸಂಘೋಷ್ಯ ಸೇನಾಸು ಮಂತ್ರಿಣ್ಯಾ ಸಹಿತಾ ಸ್ವಯಂ ॥೪೦॥

ಪಾರ್ಶ್ವಂ ಸಮಾಶ್ರಿತವತೀ ತಸ್ಯಾಃ ಸಮರವೈಭವೇ ।
ಅಥ ಶ್ರುತ್ವಾ ದಂಡರಾಜ್ಞ್ಯಾಃ ಶಾಸನಂ ಮುದಿತಾ ಹಿ ಸಾ ॥೪೧॥

ಅಸಂಖ್ಯೈರ್ದೈತ್ಯ ಸುಭಟೈರೇಕಲಾ ಯುಯುಧೇಽದ್ಭುತಂ ।
ಸಿದ್ಧರ್ಷಿ ದೇವತಾಮುಖ್ಯಾಃ ಪಶ್ಯಂತ್ಯಾಕಾಶಮಾಶ್ರಿತಾಃ ॥೪೨॥

ಯುದ್ಧ್ಯಂತೀಂ ಬಹುಭಿಶ್ಚೈಕಾಂ ಕುಮಾರೀಂ ವಿಸ್ಮಿತಾಽಭವನ್ ।
ಅಥ ದೈತ್ಯೋತ್ಸೃಷ್ಟಶಸ್ತ್ರ ವೃಂದೈರಾಚ್ಛಾದಿತಾಽಭವತ್ ॥೪೩॥

ಏನೆಂದರೆ, ಕುಮಾರಿಯು ಯಾರೊಂದಿಗೆ ಯುದ್ಧಮಾಡುತ್ತಾಳೆಯೋ ಅವರ ಮೇಲೆ ನೀವಾರೂ ಶಸ್ತ್ರಗಳ ಸಮೂಹಗಳನ್ನು ಕೂಡಲೇ ಬಿಡಕೂಡದು. ಹಾಗೇನಾದರೂ ಮಾಡಿದರೆ ನಾನು ಅಂಥಹವಳನ್ನು ಶಿಕ್ಷಿಸುವೆನು. ॥೩೯॥

ನೀವೆಲ್ಲರೂ ಕುಮಾರಿಯು ನಡೆಸುವ ಯುದ್ಧವನ್ನು ನೋಡುತ್ತಿರಿ. ಆದರೆ ನೀವಾರೂ ಹೇಗೂ ಯುದ್ಧಕ್ಕೆ ಪ್ರವೇಶಿಸಬಾರದು. ಈ ರೀತಿಯಾಗಿ ಸೈನ್ಯಗಳಲ್ಲಿ ಘೋಷಣೆಮಾಡಿ ದಂಡನಾಯಕಿಯು ಮಂತ್ರಿಣಿಯೊಂದಿಗೆ ಹೊರಟಳು. ॥೪೦॥

ಅನಂತರ ದಂಡನಾಯಕಿಯು ಕುಮಾರಿಯ ಪಕ್ಕದಲ್ಲಿ ಆಕೆಯ ಯುದ್ಧ ಮಹಿಮೆಯನ್ನು ನೋಡುವುದರಲ್ಲಿ ತಾನೂ ಭಾಗವಹಿಸಿದಳು. ದಂಡನಾಯಕಿಯ ಆಜ್ಞೆಯನ್ನು ಕೇಳಿ ಕುಮಾರಿಯೂ ಸಂತೋಷಗೊಂಡಳು. ॥೪೧॥

ಕುಮಾರಿಯೊಬ್ಬಳೇ ಲೆಕ್ಕವಿಲ್ಲದಷ್ಟು ರಾಕ್ಷಸಸೈನಿಕರೊಂದಿಗೆ ಆಶ್ಚರ್ಯಕರವಾದ ರೀತಿಯಲ್ಲಿ ಯುದ್ಧಮಾಡಿದಳು. ಸಿದ್ಧರ್ಷಿಗಳೂ, ದೇವತೆಗಳೂ ಮೊದಲಾದವರು ಆಕಾಶದಲ್ಲಿದ್ದುಕೊಂಡು ಕುಮಾರಿಯ ಯುದ್ಧವನ್ನು ನೋಡುತ್ತಿದ್ದರು. ॥೪೨॥

ಅವರೆಲ್ಲರೂ ಕುಮಾರಿಯು ಅವರೊಂದಿಗೆ ಒಬ್ಬಂಟಿಗಳಾಗಿ ಯುದ್ಧಮಾಡುತ್ತಿದ್ದುದನ್ನು ಕಂಡು ಅತ್ಯಂತ ಆಶ್ಚರ್ಯಪಟ್ಟರು. ಅನಂತರ ರಾಕ್ಷಸರು ಬಿಡುತ್ತಿದ್ದ ಶಸ್ತ್ರಗಳ ಸಮೂಹದಿಂದ ಎಲ್ಲಾ ಪ್ರದೇಶವೂ ತುಂಬಿ ಮುಚ್ಚಿಹೋಯಿತು. ॥೪೩॥

ಬಾಲಸೂರ್ಯೋಽಭ್ರಪಟಲೈರಿವ ಸಾ ಸರ್ವತೋ ದಿಶಂ ।
ದೃಷ್ಟ್ವಾ ಛನ್ನಾಂ ಶಸ್ತ್ರಗಣೈರ್ವಿಮತಾಃ ಶಕ್ತಯೋಽಭವನ್ ॥೪೪॥

ತತಃ ಕ್ಷಣೇನೈವ ಬಾಲಾ ಪ್ರತಿಶಸ್ತ್ರಾಭಿವರ್ಷಣೈಃ ।
ವಿನಾಶ್ಯ ತಾಂ ಶಸ್ತ್ರವೃಷ್ಟಿಂ ಭೂಯಃ ಸರ್ವಾನ್ ಜಘಾನ ಹ ॥೪೫॥

ಅಥ ತೇಷಾಮಸಂಖ್ಯಾನಾಂ ಯುಗಪಲ್ಲಘುವಿಕ್ರಮಾ ।
ಆಯುಧಾನಿ ವಾಹನಾನಿ ನಾಶಯಚ್ಚಿತ್ರವಿಕ್ರಮಾ ॥೪೬॥

ಭೂಯೋ ಗೃಹೀತಮಾತ್ರಾಣಿ ಶಸ್ತ್ರಾಣ್ಯಪಿ ಸಮಾಚ್ಛಿನತ್ ।
ಅಥ ತೀಕ್ಷ್ಣೈಃ ಶರೈರ್ದೈತ್ಯಾನ್ನಾಶಯತ್ಸಾಽತಿವೇಗತಃ ॥೪೭॥

ಶರಾಽಽದಾನಂ ಚ ಸಂಧಾನಂ ಪೂರಣಂ ಚ ವಿಸರ್ಜನಂ ।
ನಲಕ್ಷ್ಯತೇಽತ ನಿಪುಣ ದೃಶಾ ಕೇನಾಽಪಿ ಸರ್ವಥಾ ॥೪೮॥

ಆ ಶಸ್ತ್ರಗಳು ಎಲ್ಲಾ ದಿಕ್ಕುಗಳನ್ನೂ, ಮೇಘದ ಸಮೂಹಗಳು ಬಾಲಸೂರ್ಯನನ್ನು ಹೇಗೋ ಹಾಗೆ, ಮುಚ್ಚುತ್ತಿದ್ದವು. ಶಸ್ತ್ರಗಳ ಸಮೂಹದಿಂದ ಕುಮಾರಿಯು ಮುಚ್ಚಿಹೋಗಿರಲು ಶಕ್ತಿಗಳು ಖೇದಗೊಂಡರು. ||೪೪||

ಅನಂತರ ಕುಮಾರಿಯು ಪ್ರತಿಯಾಗಿ ಶಸ್ತ್ರಗಳನ್ನು ಸುರಿಸುವುದರ ಮೂಲಕ ಕ್ಷಣಕಾಲದಲ್ಲಿಯೇ ರಾಕ್ಷಸರ ಬಾಣಗಳ ಸುರಿಮಳೆಯನ್ನು ನಾಶಮಾಡಿ ಪುನಃ ಅವರನ್ನೆಲ್ಲರನ್ನೂ ಶಸ್ತ್ರಗಳಿಂದ ಹೊಡೆದಳು. ||೪೫||

ಅನಂತರ ಆಶ್ಚರ್ಯಕರವಾದ ಪರಾಕ್ರಮವುಳ್ಳ, ಶೌರ್ಯದಿಂದ ಕೈಚಳಕವನ್ನು ಸೊಗಸಾಗಿ ತೋರಿಸುವ, ಕುಮಾರಿಯು ಕ್ಷಣಕಾಲದಲ್ಲಿಯೇ ರಾಕ್ಷಸರ ಆಯುಧಗಳೂ ವಾಹನಗಳು ಮುಂತಾದುವನ್ನು ಲೆಕ್ಕವಿಲ್ಲದಷ್ಟು ನಾಶಮಾಡಿದಳು. ||೪೬||

ಪುನಃ ರಾಕ್ಷಸರು ಕೈಗಳಿಗೆ ತೆಗೆದುಕೊಂಡಿದ್ದ ಅಸ್ತ್ರಗಳನ್ನೂ ಕೂಡಲೇ ನಾಶಮಾಡಿದಳು. ಅನಂತರ ಕುಮಾರಿಯು ಬಹಳ ವೇಗದಿಂದ ತೀಕ್ಷ್ಣಗಳಾದ ಬಾಣಗಳನ್ನೂ ಪ್ರಯೋಗಿಸಿ ರಾಕ್ಷಸರನ್ನು ನಾಶಮಾಡಿದಳು. ||೪೭||

ಕುಮಾರಿಯು ಬಾಣಗಳನ್ನು ತೆಗೆದುಕೊಳ್ಳುವುದಾಗಲಿ, ಅವನ್ನು ಹೆದೆಗೆ ಏರಿಸುವುದಾಗಲಿ, ಅವನ್ನು ರಾಕ್ಷಸರಿಗೆ ಬಿಡುವುದಾಗಲಿ, ಇವನ್ನು ಯಾವನೊಬ್ಬನೂ

ಕಿಂ ತು ತಸ್ಯಾ ಧನುರ್ಮಧ್ಯಾ ದ್ಭೂಬಿಲಾಚ್ಛಲಭಾ ಇವ ।
ಪ್ರಸರಂತಿ ಶರಾಸ್ತೀಕ್ಷ್ಣಾಃ ದಿಕ್ಷ್ವಂತರವಿಹೀನತಃ ॥೪೯॥

ಸಂಘಶೋ ದೈತ್ಯಮೂರ್ಧಾನಃ ಪತಂತಿ ತೃಣರಾಜತಃ ।
ಫಲಾನೀವ ಸುಪಕ್ವಾನಿ ಚಟಚ್ಚಟಮಹಾರವಾಃ ॥೫೦॥

ಕೇಚಿಚ್ಛಿನ್ನ ಕರಾಂಘ್ರ್ಯುರುವಕ್ಷಃ ಕುಕ್ಷಿಗಲಾಃ ಪರೇ ।
ನಿರಂತರತಯಾ ವಿದ್ಧಾಃ ಸಹಸ್ರಾಕ್ಷ ಇವಾಭವನ್ ॥೫೧॥

ಅನ್ಯೇ ಚ ಖಂಡಿತಾ ದೈತ್ಯಾ ಸ್ತಿಲಶಃ ಕೀರ್ಣದೇಹಕಾಃ ।
ಕೇಚಿದ್ವಕ್ಷಸಿ ಸಂವಿದ್ಧಾ ಹೃತಪ್ರಾಣಾಃ ಸ್ಥಿರಂ ಸ್ಥಿತಾಃ ॥೫೨॥

ಬಹಳ ಸೂಕ್ಷ್ಮದೃಷ್ಟಿಯಿಂದ ನೋಡಿದರೂ ಗೊತ್ತಾಗದಿರುವಷ್ಟು ಚಮತ್ಕಾರವಾಗಿ ಆಕೆಯು ಬಾಣಗಳನ್ನು ಪ್ರಯೋಗಿಸುತ್ತಿದ್ದಳು. ||೪೮||

ಆದರೆ ಆಕೆಯ ಬಿಲ್ಲಿನ ಮಧ್ಯಭಾಗದಿಂದ, ಭೂಮಿಯ ಬಿಲದಿಂದ ಶಲಭ ಎಂಬ ಹುಳುಗಳು ಬರುವಂತೆ, ಎಲ್ಲಾ ದಿಕ್ಕುಗಳಲ್ಲಿಯೂ ಸ್ವಲ್ಪ ಅವಕಾಶವೂ ಇಲ್ಲದಂತೆ ತೀಕ್ಷ್ಣವಾದ ಬಾಣಗಳು ಹೊರಬೀಳುತ್ತಿದ್ದವು. ||೪೯||

ಆ ಬಾಣಗಳ ಪ್ರಹಾರಕ್ಕೆ ಸಿಕ್ಕಿ ರಾಕ್ಷಸರ ತಲೆಗಳು ಛಟಛಟ ಎಂದು ದೊಡ್ಡದಾಗಿ ಶಬ್ದಗಳನ್ನುಂಟುಮಾಡುತ್ತಾ, ಶ್ರೇಷ್ಠವಾದ ತಾಳ ಅಥವಾ ತೆಂಗಿನವೃಕ್ಷಗಳಿಂದ ಚೆನ್ನಾಗಿ ಪಕ್ವವಾದ ಹಣ್ಣುಗಳು ಉದುರುವಂತೆ, ಉರುಳುತ್ತಿದ್ದವು. ||೫೦||

ಕೆಲವರು ಕತ್ತರಿಸಿದ ಕೈಗಳುಳ್ಳವರಾಗಿಯೂ, ಕೆಲವರು ಕಾಲುಗಳು ವಕ್ಷಸ್ಥಳ, ಹೊಕ್ಕುಳು, ಕತ್ತುಗಳು, ಇವುಗಳನ್ನು ನಾಶಮಾಡಿಕೊಂಡವರಾಗಿಯೂ, ಆಕೆಯ ಎಡಬಿಡದ ಬಾಣಪ್ರಯೋಗದ ಬಡಿತಕ್ಕೆ ಸಿಕ್ಕಿ, ಇಂದ್ರನಂತೆ, ಸಾವಿರಾರು ಕಣ್ಣುಗಳುಳ್ಳವರಂತೆ, ಚೂರು ಚೂರಾಗುತ್ತಿದ್ದರು. ||೫೧||

ಇನ್ನು ಕೆಲವರ ಶರೀರಗಳು ಕತ್ತರಿಸಿಹೋಗಿ ಅವು ಚೂರುಚೂರಾದವು. ಕೆಲವರಿಗೆ ವಕ್ಷಸ್ಥಳಕ್ಕೆ ಬಲವಾದ ಪೆಟ್ಟುಬಿದ್ದು ಪ್ರಾಣಹೋದುದರಿಂದ ಸ್ವಲ್ಪವೂ ಅಲ್ಲಾಡದೇ ಇದ್ದರು. ||೫೨||

ಧೃತಶಸ್ತ್ರಾಃ ಪ್ರದೃಶ್ಯಂತೇ ಲಿಖಿತಾಃ ಸುಭಟಾ ಇವ ।
ಕೇಚಿಚ್ಛರಾಽಽಹತೇರ್ವೇಗಾನ್ನಿಃಯಂತೇ ಗತಜೀವನಾಃ ॥೫೩॥

ಯುದ್ಧಕಾತರ ಭಾವೇನ ಪಲಾಯನಪರಾ ಇವ ।
ಏವಂ ತಯಾ ಮುಹೂರ್ತೇನ ಕೋಟಿಶೋ ದೈತ್ಯಪುಂಗವಾಃ ॥೫೪॥

ಗತಾಽಸವೋಽಭವನ್ ಪೇತುರ್ವಿಕ್ಷತಾಸ್ತೇ ಶತೋತ್ತರಾಃ ।
ನ ತತ್ರ ದೈತ್ಯಃ ಶೂರೋಽಪಿ ಕಶ್ಚಿತ್ ಸ್ವಾತ್ಮಾವನೇ ವಿಭುಃ ॥೫೫॥

ಕ್ವ ಯುದ್ಧಂ ಕ್ವಚ ವಾ ಶಸ್ತ್ರ ಪಾತನಂ ಕರ್ತುಮರ್ಹತಿ ।
ನ ದೈತ್ಯಾ ಯುದ್ಧಮತ್ಯಂತ ಮೇಕಾಕಿನ್ಯಾ ವಿದುಃ ಕ್ವಚಿತ್ ॥೫೬॥

ಕೋಟಿಶಃ ಶಕ್ತಿಸೇನಾನಾಂ ಯುದ್ಧಂ ಜಾನೀಯುರಂಜಸಾ ।
ಶಕ್ತಿಸೇನಾಂ ನಭಃ ಸಂಸ್ಥಾ ದೇವಾಽದ್ಯಾಶ್ಚ ಸಮಂತತಃ ॥೫೭॥

ಕೆಲವರು ಶಸ್ತ್ರಗಳನ್ನು ಹಿಡಿದಿದ್ದರೂ ಪ್ರಾಣ ಹೋದುದರಿಂದ ಚಿತ್ರದಲ್ಲಿ ಬರೆದ ಸೈನಿಕರಂತಿದ್ದರು. ಆಕೆಯ ಬಾಣಗಳ ಪೆಟ್ಟುಗಳ ಬಡಿತಕ್ಕೆ ಗುರಿಯಾಗಿ ಕೆಲವರು ಪ್ರಾಣಗಳನ್ನು ಬಿಡುತ್ತಿದ್ದರು. ||೫೩||

ಕೆಲವರು ಬಾಣವೇಗದಿಂದ, ಅಂಜಿಕೆಯಿಂದ ಪಲಾಯನ ಮಾಡುವಂತೆ, ಕಾಣಿಸುತ್ತಿದ್ದರು. ಈರೀತಿಯಾಗಿ ಆಕೆಯು ಕೋಟ್ಯಾಂತರ ರಾಕ್ಷಸಶ್ರೇಷ್ಠರನ್ನು ಮುಹೂರ್ತಮಾತ್ರದಲ್ಲಿಯೇ ನಾಶಮಾಡಿದಳು. ||೫೪||

ಈರೀತಿಯಾಗಿ ಲೆಕ್ಕವಿಲ್ಲದಷ್ಟು ಮಂದಿ ರಾಕ್ಷಸರು ಆಕೆಯ ಬಾಣಕ್ಕೆ ಸಿಕ್ಕಿ ಪ್ರಾಣಗಳನ್ನು ಕಳೆದುಕೊಂಡರು. ಶೂರನಾಗಿದ್ದರೂ ರಾಕ್ಷಸನಾದವನು ಅವರ ಮಧ್ಯದಲ್ಲಿ ತಮ್ಮ ಪ್ರಾಣಸಂರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥನಾಗಲಿಲ್ಲ. ||೫೫||

ಹೀಗಿರಲು ಅವರ ಮಧ್ಯೆ ಯಾವನು ತಾನೇ ಆಕೆಯೊಂದಿಗೆ ಯುದ್ಧ ಮಾಡಲಾಗಲೀ, ಶಸ್ತ್ರಗಳನ್ನು ಪ್ರಯೋಗಿಸುವುದಕ್ಕಾಗಲಿ ಸಮರ್ಥನಾದಾನು ? ಆಕೆಯೊಬ್ಬಳೇ ಇಷ್ಟರ ಮಟ್ಟಿಗೆ ಸಹಿಸಲಾರದ ಯುದ್ಧವನ್ನು ತಮ್ಮೊಂದಿಗೆ ಮಾಡುವಳೆಂದು ಅವರು ನಂಬಿರಲಿಲ್ಲ. ||೫೬||

ಆಕಾಶದಲ್ಲಿದ್ದ ಶಕ್ತಿಸೈನ್ಯ ಮತ್ತು ದೇವತೆಗಳೇ ಮುಂತಾದವರು ಎಲ್ಲಾ

ದೃಷ್ಟ್ವಾ ಬಾಲಾವಿಕ್ರಮಂ ತ ಮಾಶ್ಚರ್ಯಂ ಪರಮಂ ಗತಾಃ ।
ಅಥೈವಂ ನಿಘ್ನತೀಂ ಬಾಲಾಂ ದೃಷ್ಟ್ವಾದೈತ್ಯಾಶ್ಚಮೂಂ ಗತಾಃ ॥೫೮॥

ಭೀತಾಃ ಶಸ್ತ್ರಾಣಿ ನಿಕ್ಷಿಪ್ಯ ಪಲಾಯನಪರಾಃಭವನ್ ।
ಹಾ ಹತಾಃಸ್ಮೋ ನ ಚೇಯಂ ಸ್ತ್ರೀ ಯೋಷಿದ್ಬಾಲಾ ಕುಮಾರಿಕಾ॥೫೯॥

ಪ್ರತ್ಯಕ್ಷಮಂತಕಃ ಪ್ರಾಪ್ತ ಏವಮಸ್ಮಾನ್ ವಿಹಿಂಸಿತುಂ ।
ಅದ್ಯ ನಿಃಶೇಷಿತಂ ಸೈನ್ಯಂ ದೈತ್ಯಾನಾಂ ಭವತಿ ಕ್ಷಣಾತ್ ॥೬೦॥

ವದಂತ ಏವಂ ಕ್ರೋಶಂತೋ ದುದ್ರುವುಃ ಸರ್ವತೋ ದಿಶಂ ।
ಶಸ್ತ್ರಧಾರಾ ಸುನಿಚಿತೇ ಮಾರ್ಗಮಪ್ರಾಪ್ಯ ನಿರ್ಗಮೇ ॥೬೧॥

ಕಡೆಯಲ್ಲಿಯೂ ಕೋಟ್ಯಾಂತರ ಶಕ್ತಿಗಳು ಸೇರಿದರೂ ಮಾಡಲಾಗದ ಆ ಕುಮಾರಿಯ ಯುದ್ಧವನ್ನು ನೋಡಿ ಕೂಡಲೇ ಅತ್ಯಂತ ಆಶ್ಚರ್ಯಭರಿತರಾದರು. ॥೫೭॥

ಕುಮಾರಿಯ ಪರಾಕ್ರಮವನ್ನು ನೋಡಿ ದೇವತೆಗಳೇ ಮುಂತಾದವರು ಅತ್ಯಂತಾಶ್ಚರ್ಯವನ್ನು ಹೊಂದಿದರು. ಅನಂತರ ಕುಮಾರಿಯು ಈ ರೀತಿಯಾಗಿ ತಮ್ಮ ಕಡೆಯವರನ್ನು ನಾಶಮಾಡುತ್ತಿರುವುದನ್ನು ನೋಡಿ ರಾಕ್ಷಸಸೈನಿಕರು ಹೆದರಿದರು. ॥೫೮॥

ಆಗ ಅವರು ಭಯಗೊಂಡವರಾಗಿ ತಮ್ಮ ಶಸ್ತ್ರಗಳನ್ನು ಅಲ್ಲಿಯೇ ಬಿಟ್ಟು ಪಲಾಯನಮಾಡಿದರು. ಅಯ್ಯಯ್ಯೋ, ನಾವು ಹಾಳಾದೆವು. ಇವಳು ಸ್ತ್ರೀಯು ಪ್ರಸವಿಸಿದ ಕುಮಾರಿಯೇ ಅಲ್ಲವೆಂದು ತೋರುವುದು. ಎನ್ನುತ್ತಾ ಓಡುತ್ತಿದ್ದರು.॥೫೯॥

ಸಾಕ್ಷಾತ್ ಯಮನೇ ಈ ಕುಮಾರಿಯ ರೂಪದಲ್ಲಿ ನಮ್ಮನ್ನು ನಾಶಮಾಡಲು ಬಂದಿರುವ ಹಾಗೆ ಕಾಣುತ್ತದೆ. ಈಗ ರಾಕ್ಷಸರಾದ ನಮ್ಮ ಸೈನ್ಯವೆಲ್ಲವೂ ಕ್ಷಣಕಾಲದಲ್ಲಿಯೇ ನಾಶವಾಗುವುದು. ॥೬೦॥

ಈ ರೀತಿಯಾಗಿ ಹೇಳುತ್ತಾ ಕಿರಿಚುತ್ತಾ ರಾಕ್ಷಸರು ಎಲ್ಲಾ ದಿಕ್ಕುಗಳಲ್ಲಿಯೂ ಓಡುತ್ತಿದ್ದರು. ಆದರೆ ಕುಮಾರಿಯು ತನ್ನ ಶಸ್ತ್ರಗಳ ಸಮೂಹಗಳಿಂದಲೇ, ಬೇಲಿಯಂತೆ, ತಡೆದುದರಿಂದ ಅವರು ಹೋಗಲು ದಾರಿಯನ್ನೇ ಕಾಣಲಿಲ್ಲ. ॥೬೧॥

ಶರಧಾರಾ ಶಕಲಿತಾಃ ಪೇತುರ್ದೈತ್ಯಾಸ್ತು ಸಂಘಶಃ ।
ಕೇಚಿಚ್ಛರೈಃ ಸುಸಂನಿದ್ಧಾಃ ಪತಿತಾಃ ಶವರಾಶಿಷು ॥೬೨॥

ಭೀತಾ ನಿವಿಶ್ಯಸ್ವಾಽತ್ಮಾನ ಮರಕ್ಷನ್ ಮೃತ್ಯುಭೀತಿತಃ ।
ಏವಂ ತದಾ ದೈತ್ಯಸೈನ್ಯಂ ಪ್ರಾಯೋ ನಷ್ಟಂ ಪಲಾಯಿತಂ ॥೬೩॥

ಶಿಷ್ಟಂ ಚಾಽಪಿ ನಿಶಾಮ್ಯಾಽಥ ಭಂಡಪುತ್ರಾಃ ಸಮಾಯಯುಃ ।
ರಥಾರೂಢಾಃ ಸಿಂಹವಾಹಾಃ ಮಹಾಚಾಪಧರಾ ಭೃಶಂ ॥೬೪॥

ಕ್ರುದ್ಧಾ ಏಕಪ್ರಪಾತೇನ ಬಾಲಾಂ ವವ್ರುಃ ಸಮಂತತಃ ।
ಮಹಾಮೇಘಾ ಇವ ಶ್ಯಾಮಾ(ಂ) ಗರ್ಜಂತೀ(ಂ) ಮೃಗರಾಜವತ್॥೬೫॥

ವರ್ಷಂತಃ ಶರಧಾರಾಭಿರ್ಬಾಲಾಂ ಸೂರ್ಯಮಿವಾಽಂಬರೇ ।
ತೈರನೇಕೈಃ ಕುಮಾರೀ ಸಾ ವಿಷ್ಣುತುಲ್ಯಪರಾಕ್ರಮೈಃ ॥೬೬॥

ಕುಮಾರಿಯ ಬಾಣಗಳ ಪ್ರವಾಹಕ್ಕೆ ಸಿಕ್ಕಿ ಚೂರುಚೂರಾಗಿ ಗುಂಪು ಗುಂಪಾಗಿ ರಾಕ್ಷಸರು ಅಲ್ಲಿಯೇ ಬಿದ್ದರು. ಕೆಲವು ರಾಕ್ಷಸರು ಆಕೆಯ ಬಾಣಗಳ ಬಡಿತಕ್ಕೆ ಸಿಕ್ಕಿ ಹೆಣಗಳ ರಾಶಿಗಳ ಮೇಲೆಯೇ ಬಿದ್ದರು. ||೬೨||

ಅವರು ಭಯಗೊಂಡು ಅವುಗಳೊಳಗೆ ತಮ್ಮನ್ನು ಮುಚ್ಚಿಕೊಂಡು ಮೃತ್ಯು ಭಯದಿಂದ ತಮ್ಮನ್ನು ರಕ್ಷಿಸಿಕೊಂಡರು. ಈ ರೀತಿಯಾಗಿ ರಾಕ್ಷಸಸೈನ್ಯವೆಲ್ಲವೂ ಪ್ರಾಯಶಃ ನಷ್ಟವಾಗಲು, ಉಳಿದ ಕೆಲವರು ಪಲಾಯನಮಾಡಿದರು. ||೬೩||

ಹೀಗೆ ರಾಕ್ಷಸಸೈನ್ಯವು ಸ್ವಲ್ಪವೇ ಉಳಿದಿರುವುದನ್ನು ಕೇಳಿ ಭಂಡಕುಮಾರರು ಸಿಂಹಗಳನ್ನು ಕಟ್ಟಿದ ರಥಗಳನ್ನೇರಿ ದೊಡ್ಡ ದೊಡ್ಡ ಬಿಲ್ಲುಗಳನ್ನು ಹಿಡಿದುಕೊಂಡು ಗುಂಪಾಗಿ ಅಲ್ಲಿಗೆ ಬಂದರು. ||೬೪||

ಅವರು ಕೋಪಗೊಂಡವರಾಗಿ ಒಂದೇಸಲಕ್ಕೆ ದೊಡ್ಡ ಮೇಘದಂತೆ ಕಪ್ಪ ಗಿರುವ ಮತ್ತು ಸಿಂಹದಂತೆ ಘರ್ಜನೆಮಾಡುತ್ತಿದ್ದ ಕುಮಾರಿಯ ಮೇಲೆ ಬಿದ್ದರು. ||೬೫||

ಮಾಹಾಮೇಘಗಳು ಆಕಾಶದಲ್ಲಿರುವ ಸೂರ್ಯನನ್ನು ಮುಚ್ಚಿ ಹೇಗೆ ಮಳೆಗರೆ ವುವೋ ಹಾಗೆ, ರಾಕ್ಷಸರು ಕುಮಾರಿಯ ಮೇಲೆ ಬಾಣಗಳ ಮಳೆಯನ್ನು ಕರೆದರು.

ಸಂಗತಾ ಯುಧಿ ದೃಷ್ಟ್ವಾಽಭೂ ಲ್ಲೀಲಯಾ ತಾನ್ ಯುಯೋಧ ಚ ।
ಮಂತ್ರಿಣೀ ದಂಡಿನೀಮುಖ್ಯಾ ದೃಷ್ಟ್ವಾ ಬಾಲಾ ಪರಾಕ್ರಮಂ ॥೧೭॥

ವಿಸ್ಮಿತಾಃ ಶ್ರೀಪರಾದೇವ್ಯೈ ಸಮಾಚಖ್ಯುರ್ಮಹಾರಣಂ ।
ದೇವಿ ನೂನಂ ಸಾ ಕುಮಾರೀ ನ ಶೇಷಯಿತು ಮರ್ಹತಿ ॥೧೮॥

ಭಂಡಂ ತದ್ಭ್ರಾತರೌ ವಾಽಪಿ ಪುತ್ರಾನ್ ಸೇನಾಗತಾನಪಿ ।
ಲೀಲಯೈವಾಽದ್ಯ ನಿಃಶೇಷಂ ಕರಿಷ್ಯತಿ ನ ಸಂಶಯಃ ॥೧೯॥

ಏವಂ ಯುಧ್ವಾ ಕ್ಷಣಂ ಮಂದಂ ಭಂಡಪುತ್ರೈಃ ಪ್ರತಾಪನೈಃ ।
ತೇಷಾಂ ವಾಹಾನ್ ಧ್ವಜಂ ಛತ್ರಂ ಯುಗಪನ್ನಾಶಯಚ್ಛರೈಃ ॥೨೦॥

ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳ ಅನೇಕ ರಾಕ್ಷಸರೊಂದಿಗೆ ಕುಮಾರಿಯೊಬ್ಬಳೇ ಕಾದಾಡಿದಳು. ||೧೬||

ಕುಮಾರಿಯು ಅವರೊಂದಿಗೆ ಹೀಗೆ ಕಾದಾಡುತ್ತಾ ಅನಾಯಾಸವಾಗಿಯೇ ಯುದ್ಧಮಾಡುತ್ತಿದ್ದಳು. ಮಂತ್ರಿಣೀ ದಂಡಿನೀ ಮುಂತಾದವರು ಕುಮಾರಿಯ ಪರಾಕ್ರಮವನ್ನು ನೋಡಿ ಆಶ್ಚರ್ಯಪಟ್ಟರು. ||೧೭||

ಅವರಿಬ್ಬರೂ ಆಶ್ಚರ್ಯಪಟ್ಟು ಪರಾಶಕ್ತಿಸ್ವರೂಪಳಾದ ಲಲಿತಾದೇವಿಗೆ ಕುಮಾರಿಯು ನಡೆಸುತ್ತಿದ್ದ ದೊಡ್ಡ ಯುದ್ಧದ ವಿಷಯವನ್ನು ತಿಳಿಸಿ, ಓ ದೇವಿಯೇ, ನಿಜವಾಗಿಯೂ ಕುಮಾರಿಯು ಅವರ ಪೈಕಿ ಯಾರನ್ನೂ ಉಳಿಸುವಹಾಗೆ ಕಾಣುವುದಿಲ್ಲವು! ಎಂದರು. ||೧೮||

ಭಂಡಾಸುರ ಅವನ ಸಹೋದರರೂ ಮಕ್ಕಳೂ ಸೇನಾಸಮೇತರಾಗಿ ಬಂದರೂ ಕುಮಾರಿಯೇ ಇವರನ್ನೆಲ್ಲರನ್ನೂ ಅನಾಯಾಸವಾಗಿಯೇ ನಿರ್ಮೂಲ ಮಾಡುವ ವಿಷಯದಲ್ಲಿ ಸಂದೇಹವೇ ಇಲ್ಲ! ಎಂದು ವಿಜ್ಞಾಪಿಸಿದರು. ||೧೯||

ಈರೀತಿಯಲ್ಲಿ ಕ್ಷಣಕಾಲ ಬಹಳ ಪರಾಕ್ರಮಶಾಲಿಗಳಾದ ಭಂಡನ ಮಕ್ಕಳೊಂದಿಗೆ ಕುಮಾರಿಯು ಯುದ್ಧಮಾಡಿ, ಅವರ ರಥಗಳು, ವಾಹನಗಳು, ಬಾವುಟ, ಛತ್ರಿ ಇವನ್ನೆಲ್ಲವನ್ನೂ ಬಾಣಪ್ರಯೋಗದ ಮೂಲಕ ಏಕಕಾಲದಲ್ಲಿ ಕತ್ತರಿಸಿ ಹಾಕಿದಳು. ||೨೦||

ತೇಷಾಂ ಸಾಯಕವೃಷ್ಟಿಂ ತಾಂ ವಿಧೂಯ ಪ್ರತಿವೃಷ್ಟಿಭಿಃ ।
ಶರಾಸನಂ ಕ್ರಮಾತ್ತೇಷಾಂ ಚಿಚ್ಛೇದ ಸುಪತತ್ರಿಭಿಃ ॥೭೦॥

ಅಥ ತೇ ರೋಷಿತಾಃ ಖಡ್ಗ ಗದಾಪ್ರಮುಖ ಮಾಯುಧಂ ।
ಪರಾಮೃಶುರ್ನಿಹಂತುಂ ತಾಂ ಯಾವತ್ತಾವದಿಯಂ ದ್ರುತಂ ॥೭೨॥

ಆತ್ತಮಾತ್ತಂ ಪ್ರಚಿಚ್ಛೇದ ತದದ್ಭುತಮಿವಾಽಭವತ್ ।
ಏವಂ ನಿರಾಯುಧಾ ದೈತ್ಯಾ ಜಾತಾಸ್ತಸ್ಯಾಃ ಪರಾಕ್ರಮಂ ॥೭೩॥

ಅತ್ಯದ್ಭುತಂ ಮೇನಿರೇ ತೇ ಚಿಂತಾಂ ಚಾಽಽಪುರ್ನಿರ್ಹತ್ತರಾಂ ।
ಏವಂ ಬಾಲಾಮಹಾಕಾಲಗ್ರಸ್ತಾನ್ ಯುಧಿ ನಿಶಾಮ್ಯ ವೈ ॥೭೪॥

ಅಲ್ಲದೇ ಕುಮಾರಿಯು ರಾಕ್ಷಸರ ಬಾಣಗಳ ಸುರಿಮಳೆಗಳನ್ನು ಪ್ರತಿಯಾಗಿ ಬಾಣಗಳ ಸುರಿಮಳೆಯ ಮೂಲಕ ನಾಶಮಾಡಿ ತನ್ನ ಸೊಗಸಾದ ಬಾಣಗಳಿಂದ ಕ್ರಮವಾಗಿ ಅವರ ಬಿಲ್ಲುಗಳನ್ನೂ ಕತ್ತರಿಸಿಹಾಕಿದಳು. ॥೭೧॥

ಅನಂತರ ಕೋಪಗೊಂಡ ಆ ರಾಕ್ಷಸರು ಕುಮಾರಿಯನ್ನು ನಾಶಮಾಡಲು ಕತ್ತಿ, ಗದೆ, ಮುಂತಾದ ಆಯುಧಗಳನ್ನು ಎತ್ತುವಷ್ಟರಲ್ಲಿಯೇ ಕುಮಾರಿಯೂ ಕೂಡ ಪ್ರತಿಯಾಗಿ ಜಾಗ್ರತೆಯಾಗಿ ಅವನ್ನು ನಾಶಮಾಡುತ್ತಾ ಬಂದಳು. ॥೭೨॥

ಈ ರೀತಿಯಾಗಿ ರಾಕ್ಷಸರು ಪ್ರಯೋಗಿಸುತ್ತಿದ್ದ ಆಯುಧಗಳನ್ನೆಲ್ಲವನ್ನೂ ಪ್ರತಿಯಾಗಿ ಆಯುಧಗಳನ್ನು ಪ್ರಯೋಗಿಸುವುದರ ಮೂಲಕವೂ ಕತ್ತರಿಸುತ್ತಿದ್ದಳು. ಅದು ಆಶ್ಚರ್ಯಕರವಾಗಿತ್ತು. ಆಕೆಯ ಪರಾಕ್ರಮದಿಂದ ರಾಕ್ಷಸರು ಈ ರೀತಿಯಲ್ಲಿ ಆಯುಧಗಳೇ ಇಲ್ಲದವರಾದರು. ॥೭೩॥

ಅವರು ಕುಮಾರಿಯು ಅತ್ಯಾಶ್ಚರ್ಯಕರಳಾದ ಯುದ್ಧಪ್ರವೀಣಳೆಂದು ತಿಳಿದು ಬಹಳ ಚಿಂತೆಗೊಳಗಾದರು. ಈ ರೀತಿಯಾಗಿ ಕುಮಾರಿಯೆಂಬ ಮಹಾ ಕಾಲಸರ್ಪದ ಬಾಯಿಗೆ, ಮಹಾಮೃತ್ಯುವಿಗೆ, ರಾಕ್ಷಸರು ತುತ್ತಾಗಿರುವರೆಂಬುದನ್ನು ವಿಷಂಗ ಮೊದಲಾದವರು ಕೇಳಿ, ನೋಡಿದರು. ॥೭೪॥

ವಿಷಂಗಶ್ಚ ವಿಶುಕ್ರಶ್ಚ ಮಹಾಸೈನ್ಯಪರೀವೃತೌ ।
ರಕ್ಷಿತುಂ ತಾನ್ ರಾಜಪುತ್ರಾ ನಭ್ಯಾಯಯತುರಾಶು ವೈ ॥೭೫॥

ಮಾಬಿಭ್ಯತಾ ಗತಾ ವಾವಾಂ ವದಂತಾ ವಿತಿ ಸಾ ಶಿವಾ ।
ದದೃಶೇ ಶಸ್ತ್ರವರ್ಷಾಣಿ ಕುರ್ವಂತೌ ಕಾಲಮೇಘವತ್ ॥೭೬॥

ದೃಷ್ಟ್ವಾ ಬಾಲಾಽತಿಹರ್ಷೇಣ ತಾಂ ವೃಷ್ಟಿಂ ಶಸ್ತ್ರಸಂಕುಲಾಂ ।
ನಿವಾರಯಲ್ಲೀಲಯೈವ ತತಸ್ತಾಂ ದೈತ್ಯವಾಹಿನೀಂ ॥೭೭॥

ಕ್ಷಣೇನ ವಾಯವ್ಯಾಸ್ತ್ರೇಣ ಮಹಾವಾಯುರ್ಘನಾನಿವ ।
ನಾಮಶೇಷಾಂ ಕೃತವತೀ ತತಸ್ತಾವತಿರೋಷಿತೌ ॥೭೮॥

ಆಯಾಂತಾವತಿವೇಗೇನ ಗದಾ ಖಡ್ಗಕರಾವುಭೌ ।
ದೃಷ್ಟ್ವಾ ಶರೈರ್ವಾಹನೇಭಾನ್ ಯುದ್ಧೇಽನಾಶಯದಂಜಸಾ ॥೭೯॥

ಆಗ ವಿಷಂಗ ವಿಶುಕ್ರ ಇವರಿಬ್ಬರೂ ದೊಡ್ಡಸೈನ್ಯಗಳಿಂದೊಡಗೂಡಿ ಆ ರಾಜಕುಮಾರರನ್ನು ಕಾಪಾಡಲು ಅಲ್ಲಿಗೆ ಬಲು ಶೀಘ್ರವಾಗಿ ಬಂದರು. ॥೭೫॥

ಎಲೈ ರಾಜಪುತ್ರರೇ, ಹೆದರಬೇಡಿ. ನಾವು ನಿಮ್ಮ ಸಹಾಯಕ್ಕೆ ಬಂದಿದ್ದೇವೆ. ಎಂದು ಹೇಳುತ್ತಾ, ಕಾಲಮೇಘಗಳಂತೆ ಬಾಣಗಳ ಸುರಿಮಳೆಯನ್ನು ಸುರಿಸುತ್ತಿರುವ ಆ ರಾಕ್ಷಸರನ್ನು ಕುಮಾರಿಯು ನೋಡಿದಳು. ॥೭೬॥

ಕುಮಾರಿಯು ಬಹಳ ಸಂತೋಷದಿಂದ ಶಸ್ತ್ರಾಸ್ತ್ರಗಳಿಂದ ಕೂಡಿರುವ ಆ ರಾಕ್ಷಸರ ಆಯುಧಗಳ ಸುರಿಮಳೆಯನ್ನು ನೋಡಿ ಆ ರಾಕ್ಷಸ ಸೈನ್ಯವನ್ನು ಅನಾಯಾಸವಾಗಿ ಬಾಣಪ್ರಯೋಗಮಾಡಿ ಓಡಿಸಿದಳು. ॥೭೭॥

ಕುಮಾರಿಯು ವಾಯವ್ಯಾಸ್ತ್ರವನ್ನು ಪ್ರಯೋಗಿಸಿ, ಮಹಾವಾಯುವು ಮೇಘಗಳನ್ನು ಹೇಗೋ ಹಾಗೆ, ಅವರನ್ನು ನಾಮಾವಶೇಷರನ್ನಾಗಿ ಮಾಡಿದಳು. ಇದರಿಂದ ಅವರಿಬ್ಬರೂ ಬಹಳ ಕೋಪಗೊಂಡರು. ॥೭೮॥

ಅವರಿಬ್ಬರೂ ಬಹಳ ವೇಗದಿಂದ ಗದೆ, ಕತ್ತಿ ಇವುಗಳನ್ನು ಹಿಡಿದುಕೊಂಡು ಅವಳಿಗೆ ಎದುರಾಗಿ ಬಂದರು. ಇದನ್ನು ನೋಡಿ ಕುಮಾರಿಯು ತನ್ನ ಬಾಣಗಳಿಂದ ಯುದ್ಧದಲ್ಲಿ ಅವರ ವಾಹನವಾದ ಆನೆಗಳನ್ನು ಶೀಘ್ರವಾಗಿ ನಾಶಮಾಡಿದಳು. ॥೭೯॥

ಅಥೈಕೇನ ಪೃಥಗ್ವಕ್ಷೋ ದೇಶೇ ಬಲವದಾಹತೌ ।
ಮೂರ್ಛಿತೌ ಪೇತತುರ್ಭೂಮೌ ವಜ್ರಾಽಽಹತ ನಗಾವಿವ ॥೮೦॥

ತದಂತರೇ ಭಂಡಪುತ್ರಾಃ ಶಸ್ತ್ರಹೇತೋಃ ಪರಾವೃತಾಃ ।
ತಾನ್ನಿವೃತ್ತಾನ್ ಸಮಾಲೋಕ್ಯ ವಿರಥಾನಕರೋತ್ಕ್ಷಣಾತ್ ॥೮೧॥

ಪಾದಚಾರಾನ್ನಿಹತ್ಯಾಶು ಜಂಘಯೋರ್ನಿಶಿತೈಃ ಶರೈಃ ।
ಪ್ರಾಹ ರೇ ಭಂಡದಾಯದಾಃ ಶೂರಾಣಾಂ ವಃ ಕಥಂ ತ್ವಿದಂ ॥೮೨॥

ದರ್ಶನಂ ಯುಧಿ ಪೃಷ್ಠಸ್ಯ ಯೋಗ್ಯಂ ಬ್ರೂತ ಪಲಾಯತಾಂ ।
ಶ್ರುತ್ವಾ ಕಟುರಸೋದರ್ಕಂ ಭಾಷಿತಂ ತೇಽತಿಮಾನಿನಃ ॥೮೩॥

ಅನಂತರ ಕುಮಾರಿಯು ಪ್ರತ್ಯೇಕವಾಗಿ ಒಂದೊಂದು ಬಾಣಗಳನ್ನು ಅವರ ವಕ್ಷಸ್ಥಳಕ್ಕೂ ಬಲವಾಗಿ ಹೊಡೆದಳು. ಇದರಿಂದ ವಜ್ರಾಯುಧದ ಪೆಟ್ಟಿಗೆ ಸಿಕ್ಕಿದ ಪರ್ವತಗಳಂತೆ, ಅವರಿಬ್ಬರೂ ಭೂಮಿಯ ಮೇಲೆ ಬಿದ್ದರು. ॥೮೦॥

ಈ ಮಧ್ಯದಲ್ಲಿ ಭಂಡಕುಮಾರರು ಶಸ್ತ್ರಗಳನ್ನು ತರಲು ಹಿಂತಿರುಗಿದರು. ಅವರು ಹೀಗೆ ಹಿಂತಿರುಗಿ ಹೋಗುತ್ತಿರುವುದನ್ನು ಕಂಡು ಅವರನ್ನು ಕ್ಷಣಕಾಲ ದಲ್ಲಿಯೇ ಕುಮಾರಿಯು ರಥಗಳೇ ಇಲ್ಲದವರನ್ನಾಗಿ ಮಾಡಿದಳು. ॥೮೧॥

ಆಗ ಕಾಲುಗಳಲ್ಲಿಯೇ ನಡೆಯುತ್ತಿದ್ದ ಅವರ ಮೊಳಕಾಲುಗಳಿಗೆ ಶೀಘ್ರ ವಾಗಿ ತೀಕ್ಷ್ಣವಾದ ಬಾಣಪ್ರಯೋಗಮಾಡಿ, ಎಲೈ ಭಂಡನ ಮಕ್ಕಳಿರಾ, ಶೂರರಾದ ನೀವು ಹೀಗೆ ಯುದ್ಧದಿಂದ ಹಿಂತಿರುಗಬಹುದೇ? ಎಂದು ಹೀಯ್ಯಾಳಿಸಿ ದಳು. ॥೮೨॥

ಶೂರರಾದ ನೀವು ಈ ರೀತಿಯಲ್ಲಿ ಯುದ್ಧದಲ್ಲಿ ಬೆನ್ನನ್ನು ತೋರಿಸಿ ಪಲಾಯನಮಾಡಲು ನಿಮಗೆ ನಾಚಿಕೆಯಾಗುವುದಿಲ್ಲವೆ? ಎಂಬುದಾಗಿ ಹೇಳಿದ ಕುಮಾರಿಯ ಕಹಿಯಾದ ದುಃಸಹವಾದ ಮಾತುಗಳನ್ನು ಕೇಳಿ ಬಹಳ ಗರ್ವವುಳ್ಳ ಆ ಭಂಡಪುತ್ರರಾದ ರಾಕ್ಷಸರು ಕೋಪಗೊಂಡರು. ॥೮೩॥

ಬಭ್ರಿಯುರ್ಮನ್ಯುಜ್ವಲನ್ನೇತ್ರಾ ನಿವೃತ್ತಾಃ ಸಮ್ಮುಖೇ ರಣೇ ।
ಧಿಙ್ ಮುಗ್ಧೇ ಬಾಲಿಕಾಂ ದೃಷ್ಟ್ವಾ ದಯಮಾನಸ್ವಭಾವತಃ ॥೮೪॥

ಜೀವಸ್ಯಸ್ಮಾನ್ ಸಮಾಸಾದ್ಯ ಮೃತ್ಯುಕಲ್ಪಾನ್ ಕಥಂಚನ ।
ತತ್ಪಶ್ಯ ಸದ್ಯ ಸ್ತ್ವಾಂ ಕುರ್ಮೋ ವಿಮದಾಂ ತತ್ಸ್ಥಿರೀಭವ ॥೮೫॥

ಇತ್ಯುಕ್ತ್ವಾ ಮುಷ್ಟಿಮುದ್ಯಮ್ಯ ಧಾವಮಾನಾನ್ ಸ್ವಸಮ್ಮುಖೇ ।
ಪ್ರತ್ಯೇಕಂ ನಿಶಿತೈರ್ಭಲ್ಲೈ ಸ್ತಚ್ಛಿರಾಂಸಿ ಚಕರ್ತ ಹ ॥೮೬॥

ಪಕ್ವತಾಲಫಲಾನೀವ ಪೇತುಸ್ತನ್ಮಸ್ತಕಾನ್ಯಥ ।
ಹಾಹಾಕಾರಃ ಸಮುದಭೂತ್ ದೈತ್ಯಾನಾಂ ವಾಹಿನೀಮುಖೇ ॥೮೭॥

ವವರ್ಷ ಬಾಲಾಂ ಕುಸುಮೈಃ ಸುಗಂಧಿಭಿಃ ಸುರೇಶ್ವರಃ ।
ಜಯಶಬ್ದೋ ಮಹಾನಾಸೀ ಚ್ಛಕ್ತಿಸೇನಾಸು ಸರ್ವತಃ ॥೮೮॥

ಅವರು ಕೋಪದಿಂದ ಉರಿಯುತ್ತಿರುವ ಕಣ್ಣುಗಳುಳ್ಳವರಾಗಿ ಪುನಃ ಯುದ್ಧಕ್ಕಾಗಿ ಅವಳ ಎದುರಿಗೆ ಬಂದರು. ಮತ್ತು ಅವರು ಎಲೌ ಮೂಢಳಾದ ಬಾಲಿಕೆಯೇ, ನೀನು ಇನ್ನೂ ಕೇವಲ ಹುಡುಗಿಯೆಂದು ಕರುಣೆಯಿಂದ ನಾವುಗಳು ನಿನ್ನನ್ನು ಸುಮ್ಮನೆ ಬಿಟ್ಟಿದೇವೆ. ಎಂದರು. ||೮೪||

ಮೃತ್ಯುವಿಗೆ ಸಮಾನರಾದ ನಮ್ಮನ್ನು ಎದುರಿಸಿ ನೀನು ಹೇಗೂ ಬದುಕಲಾರೆ. ಇಗೋ ನೋಡು ನಿನ್ನ ಅಹಂಕಾರವನ್ನೆಲ್ಲವನ್ನೂ ಕೂಡ ಈಗಲೇ ಅಡಗಿಸುವೆವು. ಅದಕ್ಕೆ ಸ್ಥಿರಳಾಗಿ ನಿಲ್ಲು. ||೮೫||

ಈರೀತಿಯಾಗಿ ಹೇಳಿ ತನ್ನ ಎದುರುಗಡೆಗೆ ಓಡಿಬರುತ್ತಿರುವ ರಾಕ್ಷಸರಿಗೆ ಪ್ರತ್ಯೇಕವಾಗಿ ತೀಕ್ಷ್ಣಗಳಾದ ಭರ್ಜಿಗಳನ್ನು ಪ್ರಯೋಗಿಸಿ ಕುಮಾರಿಯು ಅವರುಗಳ ತಲೆಗಳನ್ನು ಕತ್ತರಿಸಿದಳು. ||೮೬||

ಅನಂತರದಲ್ಲಿ ಆ ರಾಕ್ಷಸರುಗಳ ತಲೆಗಳು, ಮಾಗಿದ ತಾಳೆಯ ಹಣ್ಣುಗಳಂತೆ, ಕೆಳಗೆ ಬಿದ್ದವು. ರಾಕ್ಷಸರ ಸೈನ್ಯದ ಮುಂಭಾಗದಲ್ಲಿ ಬಹಳ ಹೆಚ್ಚಾದ ಹಾಹಾಕಾರವು ಕೇಳಿಸಿತು. ||೮೭||

ದೇವಶ್ರೇಷ್ಠರು ಸುವಾಸನೆಯಾದ ಹುವ್ವುಗಳನ್ನು ಕುಮಾರಿಯ ಮೇಲೆ ಸುರಿಸಿದರು. ಶಕ್ತಿಸೈನ್ಯಗಳಲ್ಲೆಲ್ಲಾ ಕಡೆಯಲ್ಲಿಯೂ ಜಯಜಯಕಾರವಾಯಿತು. ||೮೮||

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ತ್ರಿಸಪ್ತತಿತಮೋಽಧ್ಯಾಯಃ

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಭಂಡಾಸುರನ ಪುತ್ರರ ನಾಶವನ್ನು ವರ್ಣಿಸಿರುವ

ಎಪ್ಪತ್ತುಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಚತುಸ್ಸಪ್ತತಿತಮೋಽಧ್ಯಾಯಃ ॥

ಎಪ್ಪತ್ತುನಾಲ್ಕನೆಯ ಅಧ್ಯಾಯವು

ಏವಂ ಹತೇಷು ಭಂಡಸ್ಯ ಪುತ್ರೇಷು ಸಮರೋತ್ಸುಕಾಂ ।
ಬಾಲಾಂ ಭೂಯಃ ಸಮಾಲಕ್ಷ್ಯ ಮಂತ್ರಿಣೀ ದಂಡನಾಯಿಕೇ ॥೧॥

ಊಚತುರ್ದೇವಿ ಶ್ರೀರಾಜ್ಞೀಂ ದೃಷ್ಟ್ವಾ ನತ್ವಾ ನಿವೇದ್ಯ ಚ ।
ಅನುಜ್ಞಾತಾ ಪುನರ್ಯುದ್ಧಂ ಯಾಸ್ಯಾಮಃ ಕರ್ತುಮಂಜಸಾ ॥೨॥

ತಾವದ್ದೈತ್ಯಾಃ ಸಮಾಯಾಂತು ಸಮರಾಯ ಸುದಂಶಿತಾಃ ।
ತ್ವಮಸಾಧ್ಯಂ ಕೃತವತೀ ನೈತದಸ್ಮಚ್ಛಕಂ ಕ್ವಚಿತ್ ॥೩॥

ಈ ರೀತಿಯಾಗಿ ಕುಮಾರಿಯು ಭಂಡರಾಕ್ಷಸನ ಕುಮಾರರನ್ನು ಕೊಂದ ಮೇಲೂ ಪುನಃ ಯುದ್ಧದಲ್ಲಿ ಉತ್ಸಾಹವನ್ನು ತೋರಿಸುತ್ತಿದ್ದ ಅವಳನ್ನು ನೋಡಿ ಮಂತ್ರಿಣೀ ಮತ್ತು ದಂಡನಾಯಕೀ ಇವರಿಬ್ಬರೂ ಈ ರೀತಿಯಲ್ಲಿ ಹೇಳಿದರು. ॥೧॥

ಅವರಿಬ್ಬರೂ ಕುಮಾರಿಯನ್ನು ಕುರಿತು, ಎಲೌ ದೇವಿಯೇ, ಶ್ರೀಮಹಾರಾಣಿ ಯಾದ ಲಲಿತಾದೇವಿಯನ್ನು ನೋಡಿ ಆಕೆಗೆ ನಮಸ್ಕರಿಸಿ ಈ ವಿಚಾರವನ್ನು ಬಿನ್ನೈಸಿಕೊಂಡು ಆಕೆಯ ಅಪ್ಪಣೆಯನ್ನು ಪಡೆದು ಪುನಃ ಶೀಘ್ರವಾಗಿ ಯುದ್ಧಕ್ಕೆ ಬರೋಣ. ॥೨॥

ಅಷ್ಟುಹೊತ್ತಿಗೆ ಬಹಳ ಕೋಪದಿಂದ ಹಲ್ಲುಕಡಿಯುತ್ತಾ ರಾಕ್ಷಸರೂ ಕೂಡಿ ಯುದ್ಧಕ್ಕೆ ಬರಲಿ. ನಾವೆಂದಿಗೂ ಮಾಡಲಸಾಧ್ಯವಾದ ಕೆಲಸವನ್ನು ನೀನೊಬ್ಬಳೇ ಮಾಡಿರುತ್ತೀಯೆ ! ॥೩॥

ಇತ್ಯುಕ್ತ್ವಾ ತಾಂ ಸಮಾದಾಯ ಗತ್ವಾ ಶ್ರೀಮಾತೃ ಸನ್ನಿಧಿಂ ।
ಆರುಹ್ಯ ಚಕ್ರರಾಜಾಽಖ್ಯರಥಂ ನತ್ವಾ ಪರಾಽಂಬಿಕಾಂ ॥೪॥

ಊಚತು ರ್ವಿಕ್ರಮಂ ಯುದ್ಧೇ ಬಾಲಾಯಾ ಅದ್ಭುತಂ ಮಹತ್ ।
ವಿಜಯಂ ಚ ತತಃ ಶ್ರುತ್ವಾ ತುಷ್ಟಾ ಶ್ರೀ ಲಲಿತಾಽಂಬಿಕಾ ॥೫॥

ಆಶ್ಲಿಷ್ಯ ಬಾಲಾಂ ಸುಪ್ರೀತ್ಯಾ ಪಾರ್ಶ್ವೇ ಚ ಸುನಿವೇಶಯತ್ ।
ಭಂಡಪುತ್ರಾನ್ ಹತಾನ್ ದೃಷ್ಟ್ವಾ ಹಾಹೇತ್ಯುಚ್ಚೈರ್ವಿಚುಕ್ರುಶುಃ ॥೬॥

ಪಲಾಯಿತಾಶ್ಚ ಪರಿತಃ ಶುಷ್ಯದ್ವಕ್ತ್ರಾಃ ಹತಪ್ರಭಾಃ ।
ಪುತ್ರನಾಶಂ ನಿಶಮ್ಯಾಽಥ ಭಂಡದೈತ್ಯೋಽತಿದುಃಖಿತಃ ॥೭॥

ಪುನರ್ವಿಮೃಶ್ಯ ಸದ್ಬುದ್ಧ್ಯಾ ಧೈರ್ಯಮಾಲಂಬ್ಯ ಸತ್ವರಂ ।
ಅಹೋ ಮೇ ವಿಪುಲೋ ಮೋಹಃ ಸ್ಮೃತಿಭ್ರಂಶಃ ಸಮುದ್ಗತಃ ॥೮॥

ಈರೀತಿಯಲ್ಲಿ ಹೇಳಿ ಅವರಿಬ್ಬರೂ ಕುಮಾರಿಯನ್ನು ಕರೆದುಕೊಂಡು ಶ್ರೀ ಲಲಿತಾಮಾತೆಯ ಸನ್ನಿಧಿಗೆ ಹೋಗಿ ಚಕ್ರರಾಜರಥವನ್ನು ಹತ್ತಿ ಆಕೆಗೆ ನಮಸ್ಕಾರವನ್ನು ಮಾಡಿದರು. ||೪||

ಯುದ್ಧದಲ್ಲಿ ಕುಮಾರಿಯು ತೋರಿಸಿದ ಅತ್ಯಂತ ಆಶ್ಚರ್ಯಕರವಾದ ಪರಾಕ್ರಮವನ್ನು ಆಕೆಗೆ ವಿಜ್ಞಾಪನೆಮಾಡಿಕೊಂಡರು. ಶ್ರೀಲಲಿತಾಂಬಿಕೆಯು ತನ್ನ ಕುಮಾರಿಯ ವಿಜಯವೃತ್ತಾಂತವನ್ನು ಕೇಳಿ, ಬಹಳ ಸಂತೋಷಪಟ್ಟಳು. ||೫||

ಲಲಿತಾದೇವಿಯು ಬಹಳ ಪ್ರೀತಿಯಿಂದ ಕುಮಾರಿಯನ್ನು ಆಲಿಂಗಿಸಿಕೊಂಡು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡಳು. ರಾಕ್ಷಸರು ಭಂಡನ ಮಕ್ಕಳು ನಾಶವಾದ ವಿಷಯವನ್ನು ಕೇಳಿ, ಅಯ್ಯಯ್ಯೋ! ಎಂಬುದಾಗಿ ಗಟ್ಟಿಯಾಗಿ ಕಿರಿಚಿಕೊಂಡರು. ||೬||

ಅವರು ಭಂಡನ ಮಕ್ಕಳು ನಾಶವಾದದ್ದನ್ನು ಕೇಳಿ ನಿಸ್ಸಾರವಾದ ಮುಖವುಳ್ಳವರಾಗಿ ಕಾಂತಿಹೀನರಾಗಿ ದಿಕ್ಕಾಪಾಲಾಗಿ ಪಲಾಯನಮಾಡಿದರು. ಮಕ್ಕಳ ನಾಶವನ್ನು ಕೇಳಿ ಭಂಡರಾಕ್ಷಸನೂ ಕೂಡ ಬಹಳ ದುಃಖಗೊಂಡನು. ||೭||

ಪುನಃ ಭಂಡನು ಒಳ್ಳೆಯ ಬುದ್ಧಿಯಿಂದ ವಿಚಾರಮಾಡಿ, ಶೀಘ್ರವಾಗಿಯೇ ಧೈರ್ಯವನ್ನು ತಂದುಕೊಂಡು, ಅಯ್ಯೋ, ನನ್ನ ಕೋರಿಕೆಯ ಸ್ಮರಣೆಯನ್ನೇ ಹಾಳುಮಾಡುವ ಮೋಹವು ನನಗುಂಟಾಗಿದೆ! ಎಂದುಕೊಂಡನು. ||೮||

ಕಿಂ ಶೋಚಾಮಿ ವೃಥೈವಾಽಹಂ ದೇವ್ಯಾ ಮೇಽಭಿಮತಂ ಕೃತಂ ।
ಯಥಾ ಯಥಾ ಪ್ರಾರ್ಥಿತಂ ಮೇ ತತ್ತಥೈವ ಕೃತಂ ತಥಾ ॥೯॥

ನೂನಂ ಮದರ್ಥೇ ಶೋಚೇಯುರೇತೇ ತಸ್ಮಾನ್ಮಮಾಽಗ್ರತಃ ।
ಯಾಂತು ಪಂಚತ್ವ ಮಥ ವೈ ತಯಾ ದೇವ್ಯಾ ರಣೇ ಹತಾಃ ॥೧೦॥

ಪ್ರಾಪ್ನೋಮಿ ತಲ್ಲೋಕಗತಿಂ ಪರೀವಾರೇಣ ಸಂಯುತಃ ।
ಇತಿ ಮೇ ಪ್ರಾಗ್ವ್ಯವಸಿತಂ ಪ್ರಾರ್ಥಿತಾ ಚ ಪರಾಽಂಬಿಕಾ ॥೧೧॥

ಅಥ ಸಾ ಭಕ್ತಕಾಮಾನಾಂ ದೋಗ್ಧ್ರೀ ಕಾಮಪ್ರಪೂರಣಂ ।
ಚಕ್ರೇ ತತ್ರ ಮಹಾಮೋಹೋ ವೃಥಾ ಕಿಂ ಮಾಮುಪಾಗತಃ ॥೧೨॥

ತದಲಂ ಮೇ ವಿಮೋಹೇನ ದೇವಿ ತ್ವಾಂ ಶರಣಾಗತಃ ।
ತನ್ಮೇಽವಶೇಷಿತಂ ಕಾಮಂ ಪೂರಯಾಽಽಶು ಮಹೇಶ್ವರಿ ॥೧೩॥

ನಾನು ಏತಕ್ಕಾಗಿ ವ್ಯರ್ಥವಾಗಿ ದುಃಖಪಡಬೇಕು? ದೇವಿಯು ನನ್ನ ಇಷ್ಟಾರ್ಥವನ್ನೇ ನೆರವೇರಿಸಿರುತ್ತಾಳೆ. ನಾನು ಹೇಗೆ ಹೇಗೆ ಪ್ರಾರ್ಥಿಸಿದೆನೋ, ಆ ನನ್ನ ಕೋರಿಕೆಗಳು ಎಲ್ಲವೂ ಹಾಗೆ ಹಾಗೆಯೇ ನೆರವೇರುವಂತೆ ಆಕೆಯು ಅನುಗ್ರಹಿಸಿರುತ್ತಾಳೆ. ||೯||

ಇವರು ಬದುಕಿದ್ದರೆ ನನಗಾಗಿ ದುಃಖಪಡಬೇಕಾಗಿತ್ತು. ಆದ್ದರಿಂದ ನನ್ನ ಮುಂದುಗಡೆಯೇ ದೇವಿಯು ಯುದ್ಧದಲ್ಲಿ ಇವರನ್ನು ನಾಶಮಾಡಿರುತ್ತಾಳೆ. ||೧೦||

ನನ್ನ ಪರಿವಾರದೊಂದಿಗೆ ಕೂಡಿದವನಾಗಿ ಆಕೆಯ ಲೋಕಕ್ಕೆ ನಾನು ಹೋಗುವೆನು ಎಂಬುದಾಗಿಯೇ ನಾನು ಹಿಂದೆ ನಿಶ್ಚಯಿಸಿದೆನು. ಮತ್ತು ಈ ವಿಷಯವನ್ನೇ ಶ್ರೇಷ್ಠಮಾತೆಯಾದ ಆಕೆಯನ್ನು ಪ್ರಾರ್ಥಿಸಿದೆನು. ||೧೧||

ಅನಂತರ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ದೇವಿಯು ನನ್ನ ಇಷ್ಟಾರ್ಥಗಳನ್ನು ನೆರವೇರಿಸುವುದಕ್ಕಾಗಿಯೇ ಈರೀತಿಯಾಗಿ ಮಾಡಿದ್ದಾಳೆ. ಈ ವಿಷಯದಲ್ಲಿ ನನಗೆ ಮಹಾಮೋಹವು ವ್ಯರ್ಥವಾಗಿ ಏತಕ್ಕುಂಟಾಯಿತು? ||೧೨||

ಆದ್ದರಿಂದ ನಾನು ಹೀಗೆ ಮೋಹಪಡುವುದನ್ನು ಸಾಕುಮಾಡಬೇಕು. ಓ ದೇವಿಯೇ, ನಿನಗೆ ನಾನು ಶರಣಾಗತನಾಗಿದ್ದೇನೆ. ಓ ಮಹೇಶ್ವರಿಯೇ, ನನ್ನ ಉಳಿದಿರುವ ಇಷ್ಟಾರ್ಥವನ್ನೂ ನೀನು ದಯವಿಟ್ಟು ನೆರವೇರಿಸು. ||೧೩||

ಸಂಹೃತ್ಯ ಶಿಷ್ಟಾಂ ಸೇನಾಂ ಮೇ ಭ್ರಾತೃಭ್ಯಾಂ ಸಹಿತಾಂ ತತಃ ।
ಮಾಂ ಸಯೋಷಿದ್ಗಣಂ ಶೀಘ್ರಂ ಯುದ್ಧೇ ಶಸ್ತ್ರಾಗ್ನಿ ಪಾವಿತಂ ॥೧೪॥

ವಿಧಾಯ ಸ್ವಪದಾಂಭೋಜಸವಿಧಂ ನೇತುಮರ್ಹಸಿ ।
ಕದಾಹಂ ಚಂದ್ರಚೂಡಾಲಂ ನೇತ್ರತ್ರಯ ಸುಶೋಭನಂ ॥೧೫॥

ಕ್ರೋಧಾರುಣಿತನೇತ್ರಾಂತ ಸಭ್ರೂಕುಟಿಲದರ್ಶನಂ ।
ಪಶ್ಯನ್ ಶ್ರೀಮಾತೃವದನಂ ದಗ್ಧಸ್ತತ್ಸಾಯಕಾಗ್ನಿನಾ ॥೧೬॥

ವ್ರಜಾಮ್ಯಶೋಕಮಮೃತಂ ಸ್ಥಾನಂ ಯೋಗಿಸುದುರ್ಲಭಂ ।
ಪ್ರಾರ್ಥಯನ್ನಿತಿ ತದ್ರೂಪಂ ಕೋಟಿಕಂದರ್ಪಸುಂದರಂ ॥೧೭॥

ನನ್ನ ಉಳಿದಿರುವ ಸೈನ್ಯವನ್ನೂ ನನ್ನ ತಮ್ಮಂದಿರೊಂದಿಗೆ ನನ್ನನ್ನೂ ನನ್ನ ಪತ್ನಿಯರನ್ನೂ ನೀನು ದಯವಿಟ್ಟು ನಿನ್ನ ಶಸ್ತ್ರಗಳ ಬೆಂಕಿಯಿಂದ ಪರಿಶುದ್ಧವಾದವರನ್ನಾಗಿ ಮಾಡು. ॥೧೪॥

ಈ ರೀತಿಯಾಗಿ ಮಾಡಿ ನಿನ್ನ ಪಾದಕಮಲಗಳ ಸಮೀಪಕ್ಕೆ ನಮ್ಮನ್ನೆಲ್ಲರನ್ನೂ ಸೇರಿಸಬೇಕಾಗಿದೆ. ಚಂದ್ರನನ್ನೇ ಶಿರಸ್ಸಿಗೆ ಆಭರಣವನ್ನಾಗಿ ಮಾಡಿಕೊಂಡಿರುವ, ಮೂರು ಕಣ್ಣುಗಳಿಂದ ಶೋಭಿಸುತ್ತಿರುವ, ನಿನ್ನ ಮುಖದರ್ಶನವು ನಮಗೆಂದು ಲಭಿಸುವುದು ? ॥೧೫॥

ನಿನ್ನ ಬಾಣವೆಂಬ ಬೆಂಕಿಯಿಂದ ಶುದ್ಧನಾಗಿರಲು, ಕೋಪದಿಂದ ಕೆಂಪಗಿರುವ ಕಣ್ಣುಗಳ ಅಂಚಿನಿಂದ ಕೂಡಿ ಹುಬ್ಬು ಗಂಟಿಕ್ಕಿರುವ ಶ್ರೀಮಾತೃಸ್ವರೂಪಳಾದ ನಿನ್ನ ಮುಖದ ದರ್ಶನವು ನಮಗೆ ಎಂದು ಉಂಟಾಗುವುದು ? ॥೧೬॥

ನಾನು ಆಗ ಯೋಗಿಗಳಿಗೂ ಅತ್ಯಂತ ದುರ್ಲಭವಾದ, ದುಃಖಸಂಪರ್ಕವಿಲ್ಲದ, ಅಮೃತಸ್ವರೂಪವಾದ, ,ನಿನ್ನ ಲೋಕದಲ್ಲಿ ಸ್ಥಾನವನ್ನು ಹೊಂದುವೆನು! ಎಂದು ಭಂಡರಾಕ್ಷಸನು ಪ್ರಾರ್ಥನೆಮಾಡುತ್ತಾ ಆಕೆಯ ಕೋಟಿ ಮನ್ಮಥರಂತೆ ಸುಂದರವಾದ ರೂಪವನ್ನು ಧ್ಯಾನಿಸಿದನು. ॥೧೭॥

ಧ್ಯಾಯನ್ ಶ್ರೀಲಲಿತಾದೇವ್ಯಾ ನಿರ್ವಿಕಲ್ಪೋಽಭವತ್ಕ್ಷಣಂ ।
ತಾವತ್ತತ್ರಾಽಽಜಗ್ಮತುಸ್ತೌ ದೈತ್ಯರಾಜಸ್ಯ ಭ್ರಾತರೌ ॥೧೮॥

ತಂ ದದರ್ಶತುರತ್ಯಂತ ನಿಶ್ಚೇಷ್ಟಂ ಸ್ಥಾಣುವತ್ಸ್ಥಿತಂ ।
ಅಮಂಸತುಃ ಪುತ್ರಶೋಕಭರಾಽಽಕ್ರಾಂತಂ ಸುಮೂರ್ಛಿತಂ ॥೧೯॥

ಸಮಾಧಾನವಚಸ್ತತ್ರ ಪ್ರೋಚತುಃ ಕಾಲಸಮ್ಮಿತಂ ।
ತಯೋಃ ಶಮಪರೈಃ ಶಬ್ದೈರ್ಧ್ಯೇಯಾ ನ್ನಿರ್ಗತಮಾನಸಃ ॥೨೦॥

ಉನ್ಮೀಲ್ಯ ನೇತ್ರೇ ಪುರತೋ ದದರ್ಶ ಭ್ರಾತರೌ ಸ್ಥಿತೌ ।
ಸ್ವರೂಪಗೋಪನಾರ್ಥಂ ಸ ಭ್ರಾತ್ರೋಃ ಸಮ್ಮುಖತಃ ಸ್ಥಿತಃ ॥೨೧॥

ಪುತ್ರಾನ್ ಶುಶೋಚ ನಿತರಾಂ ಮನಸಾ ತೌ ಹಸಂಸ್ತದಾ ।
ಹಾ ಪುತ್ರಾ ಮಾಂ ಪರಿತ್ಯಜ್ಯ ಪಿತರಂ ದುಃಖಸಾಗರೇ ॥೨೨॥

ಶ್ರೀಲಲಿತಾದೇವಿಯ ರೂಪವನ್ನು ಭಂಡನು ಧ್ಯಾನಿಸುತ್ತಾ ಕ್ಷಣಕಾಲ ನಿಶ್ಚಲವಾದ ಮನಸ್ಸಿನಿಂದಿದ್ದನು. ಅಷ್ಟರೊಳಗೆ ರಾಕ್ಷಸರಾಜನ ತಮ್ಮಂದಿರು ಅಲ್ಲಿಗೆ ಬಂದರು. ॥೧೮॥

ಸ್ವಲ್ಪವೂ ಚಲನೆಯೇ ಇಲ್ಲದೇ ಮರದ ತಾಳತುಂಡಿನಂತಿದ್ದ ಭಂಡರಾಕ್ಷಸ ನನ್ನು ನೋಡಿ ಅವನ ತಮ್ಮಂದಿರು ಭಂಡರಾಕ್ಷಸನು ಮಕ್ಕಳ ಸಾವಿನಿಂದುಂಟಾದ ಹೆಚ್ಚಾದ ದುಃಖದಿಂದ ಕೂಡಿದವನಾಗಿ ಮೂರ್ಛೆಹೊಂದಿರುವನೆಂದು ತಿಳಿದರು.॥೧೯॥

ಆಗ ಅವರು ಭಂಡನಿಗೆ ಆ ಕಾಲಕ್ಕೆ ಉಚಿತವಾದ ಸಮಾಧಾನವನ್ನುಂಟು ಮಾಡುವ ಮಾತುಗಳನ್ನು ಹೇಳಿದರು. ಅವರಿಬ್ಬರ ಶಾಂತಿಪ್ರಧಾನವಾದ ಮಾತು ಗಳನ್ನು ಕೇಳಿ ಭಂಡರಾಕ್ಷಸರಾಜನು ತನ್ನ ಧ್ಯಾನದ ವಿಷಯದಲ್ಲಿ ಲೀನನಾಗಿದ್ದ ಸ್ಥಿತಿಯನ್ನು ಬಿಟ್ಟು ಬಹಿರ್ಮುಖನಾದನು. ॥೨೦॥

ಅವನು ತನ್ನ ಎರಡು ಕಣ್ಣುಗಳನ್ನೂ ತೆರೆದವನಾಗಿ ತನ್ನ ತಮ್ಮಂದಿರು ನಿಂತಿರುವುದನ್ನು ಕಂಡನು. ಆದರೆ ಅವನು ತನ್ನ ಸ್ವರೂಪವನ್ನು ಮುಚ್ಚುವುದ ಕ್ಕಾಗಿ ತಮ್ಮಂದಿರುಗಳ ಎದುರಿನಲ್ಲಿ ಪುತ್ರಶೋಕವನ್ನು ಪ್ರದರ್ಶಿಸಿದನು. ॥೨೧॥

ಭಂಡನು ಮನಸ್ಸಿನಲ್ಲಿ ನಗುತ್ತಾ, ಹೊರಗಡೇ ಮಾತ್ರ ಅವರೊಂದಿಗೆ ಸಾವಿಗೆ ತುತ್ತಾದ ಮಕ್ಕಳನ್ನುದ್ದೇಶಿಸಿ ಅಯ್ಯೋ! ಮಕ್ಕಳಿರಾ, ನಿಮ್ಮ ತಂದೆಯಾದ ನನ್ನನ್ನು

ಮಜ್ಜಂತಂ ದೀನಮತ್ಯಂತಂ ಕ್ವಯಾತಾಸ್ತ್ಯಕ್ತಸೌಹೃದಾಃ ।
ಮಾತರೋ ವೋಽತಿವಾತ್ಸಲ್ಯಕಾತರಾ ಈದೃಶೀಂ ದಶಾಂ ॥೨೩॥

ಶ್ರುತ್ವಾ ಕಥಂ ಭವೇಯುಸ್ತಾ ವಿದೀರ್ಣಹೃದಯಾ ಇವ ।
ಇತ್ಯಾದಿ ವಿಲಪಂತಂ ತಂ ದೃಷ್ಟ್ವಾ ತೌ ಭ್ರಾತರೌ ತದಾ ॥೨೪॥

ಶ್ರೀದೇವೀ ಮಾಯಯಾ ಮುಗ್ಧೌ ದೈತ್ಯೇಶಂ ಪ್ರೋಚತುರ್ವಚಃ ।
ಅಲಂ ದೈತ್ಯೇಶ ಶೋಕೇನ ಧೈರ್ಯವೀರ್ಯಾಽಪಹಾರಿಣಾ ॥೨೫॥

ಶೋಚಂತಂ ತ್ವಾಂ ಸಮಾಲೋಕ್ಯಾಽಸಂಖ್ಯಾತಭುವನೇಶ್ವರಂ ।
ಜ್ವರೋ ದಹತಿ ನೌ ದೇಹಂ ಕರೀಷಮಿವ ಪಾವಕಃ ॥೨೬॥

ದುಃಖವೆಂಬ ಸಮುದ್ರದಲ್ಲಿ ಮುಳುಗಿಸಿ ಏಕೆ ಮೃತರಾದಿರಿ? ಎಂದು ಮುಂತಾಗಿ ಶೋಕಿಸಿದನು. ॥೨೨॥

ದುಃಖಸಾಗರದಲ್ಲಿ ಮುಳುಗಿರುವ ಬಹಳ ದೀನನಾದ ನನ್ನನ್ನು ಬಿಟ್ಟು ಸ್ನೇಹವೇ ಇಲ್ಲದವರಂತೆ ಎಲ್ಲಿಗೆ ಹೋಗಿದ್ದೀರಿ? ಬಹಳ ಪ್ರೀತಿಯಿಂದ ಭಯಪಡುವ ನಿಮ್ಮ ತಾಯಿಯವರು ಈ ಸ್ಥಿತಿಯನ್ನು ಹೇಗೆ ಅನುಭವಿಸಬಲ್ಲರು ? ॥೨೩॥

ಈ ಸಮಾಚಾರಗಳನ್ನು ಕೇಳಿ ನಿಮ್ಮ ತಾಯಿಯವರ ಹೃದಯಗಳೇ ಸೀಳಿ ಹೋಗುವಂತಾಗುವುದಿಲ್ಲವೆ? ಎಂದು ಮುಂತಾಗಿ ಅಳುತ್ತಿರುವ ಭಂಡನನ್ನು ನೋಡಿ ಅವನ ತಮ್ಮಂದಿರು ಅವನನ್ನು ಕುರಿತು ಈ ರೀತಿಯಲ್ಲಿ ಹೇಳಿದರು. ॥೨೪॥

ಶ್ರೀಲಲಿತಾದೇವಿಯ ಮಾಯೆಗೆ ಒಳಗಾದ ಮೂಢರಾದ ಅವನ ತಮ್ಮಂದಿರು ರಾಕ್ಷಸರಾಜನನ್ನು ಕುರಿತು ಓ ರಾಕ್ಷಸರಾಜನೇ, ಧೈರ್ಯ ಮತ್ತು ವೀರ್ಯಗಳನ್ನು ಅಪಹಾರಮಾಡುವ ಈ ದುಃಖವನ್ನು ಕೊನೆಗಾಣಿಸಿ. ಎಂದು ಬಿನ್ನೈಸಿದರು. ॥೨೫॥

ಲೆಕ್ಕವಿಲ್ಲದಷ್ಟು ಲೋಕಗಳಿಗೆ ಅಧಿಪತಿಗಳಾದ ತಾವೇ ಈ ರೀತಿಯಲ್ಲಿ ದುಃಖಪಡುತ್ತಿರುವುದನ್ನು ಕಂಡು, ಸಗಣಿಯ ಮೂಢವನ್ನು ಬೆಂಕಿಯು ಹೇಗೋ ಹಾಗೆ, ನಮ್ಮನ್ನು ದುಃಖವೆಂಬ ಬೆಂಕಿಯು ಸುಡುತ್ತದೆ. ॥೨೬॥

ಮುಹೂರ್ತಂ ಧೈರ್ಯಮಾಲಂಬ್ಯ ರಾಜಂಸ್ತ್ವಂ ಸುಸ್ಥಿರೋ ಭವ ।
ಗತ್ವಾಽವಾಮೇಕಪಾತೇನ ತಾಂ ಹತ್ವಾ ನಿಶಿತೈಃ ಶರೈಃ ॥೨೭॥

ಪುತ್ರಘ್ನೀಂ ಲಲಿತಾಽಽಖ್ಯಾತಾಂ ಮಾರೀಂ ದೈತ್ಯೇಷ್ವಿವಾಽಽಗತಾಂ ।
ಜೀವಂತೀಂ ವಾ ಮೃತಾಂ ವಾಽಪಿ ಬದ್ಧ್ವಾನೇಷ್ಯಾವ ಆಶು ವೈ ॥೨೮॥

ಇತ್ಯುಕ್ತ್ವಾ ಸಶರಂ ಚಾಪಮಾದಾಯ ಸ್ಯಂದನಾಽಽಶ್ರಯೌ ।
ಯುದ್ಧಾರ್ಥಮಭ್ಯಾಯಯತು ರತಿವೀರ್ಯ ಪರಾಕ್ರಮೌ ॥೨೯॥

ದ್ವಿಶತಾಽಕ್ಷೌಹಿಣೀಸೇನಾ ಪರೀವಾರೌ ಸುದಂಶಿತೌ ।
ಪೃಥಕ್ ಶಕ್ತಿಮಹಾಸೇನಾ ಪಾರ್ಶ್ವಭಾಗೇ ಪ್ರಪೇತತುಃ ॥೩೦॥

ಚಕ್ರರಾಜರಥವರದಕ್ಷಪಾರ್ಶ್ವೇಽತಿ ವೇಗತಃ ।
ಶತಾಕ್ಷೌಹಿಣೀ ಸೇನಾಭಿರ್ವಿಷಂಗಃ ಪ್ರಾಪತದ್ಬಲೀ ॥೩೧॥

ಓ ರಾಜನೇ, ನೀವು ಒಂದು ಮುಹೂರ್ತಕಾಲವಾದರೂ ಧೈರ್ಯವನ್ನು ತಂದುಕೊಂಡು ಸ್ಥಿರವಾಗಿರಿ. ನಾವು ಒಂದೇ ಸಲಕ್ಕೆ ಆ ಕುಮಾರಿಯ ಮೇಲೆ ಬಿದ್ದು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಅವಳನ್ನು ಕೊಂದುಬರುವೆವು. ||೨೭||

ರಾಕ್ಷಸರನ್ನು ಆಕ್ರಮಿಸಿರುವ ಲಲಿತಾ ಎಂಬ ಮಾರಿಯನ್ನೂ, ನಿಮ್ಮ ಮಕ್ಕಳನ್ನೂ ಕೊಲ್ಲಿಸಿರುವುದರಿಂದ, ಅವಳು ಬದುಕಿರುವಂತೆಯಾಗಲಿ ಅಥವಾ ಮೃತಳನ್ನಾಗಿಯಾಗಲೀ ಹೇಗಾದರೂ ಶೀಘ್ರವಾಗಿ ನಿಮ್ಮ ಬಳಿಗೆ ಒಯ್ಯುವೆವು. ||೨೮||

ಈರೀತಿಯಲ್ಲಿ ಹೇಳಿ ಬಾಣಬಿಲ್ಲುಗಳನ್ನು ತೆಗೆದುಕೊಂಡು ಬಹಳ ಶೌರ್ಯ ಮತ್ತು ಪರಾಕ್ರಮಗಳುಳ್ಳ ಅವನ ತಮ್ಮಂದಿರಿಬ್ಬರೂ ರಥವನ್ನೇರಿ ಆಕೆಯೊಂದಿಗೆ ಯುದ್ಧಕ್ಕಾಗಿ ಬಂದರು. ||೨೯||

ಅವರು ಇನ್ನೂರು ಅಕ್ಷೌಹಿಣೀ ಸೈನ್ಯ ಮತ್ತು ಪರಿವಾರದೊಂದಿಗೆ ಹಲ್ಲುಗಳನ್ನು ಕಡಿಯುತ್ತಾ ಶಕ್ತಿಮಹಾಸೈನ್ಯದೊಂದಿಗೆ ಯುದ್ಧಮಾಡಲು ಬೇರೆ ಬೇರೆಯಾಗಿ ಸೈನ್ಯದ ಪಕ್ಕಗಳಿಂದ ಅವರ ಮೇಲೆ ಬಿದ್ದರು. ||೩೦||

ಶ್ರೇಷ್ಠವಾದ ಚಕ್ರರಾಜ ರಥದ ಚಕ್ರದ ಬಲಭಾಗದಲ್ಲಿ ಬಹಳ ವೇಗವಾಗಿ ಬಲಿಷ್ಠನಾದ ವಿಷಂಗನು ನೂರು ಅಕ್ಷೌಹಿಣೀ ಸೈನ್ಯದೊಂದಿಗೆ ಆಕೆಯ ಮೇಲೆ ಯುದ್ಧಕ್ಕೆ ಬಿದ್ದನು. ||೩೧||

ವಿಶುಕ್ರಶ್ಚಾಽಪಿ ವಾಮೇನ ತಥಾಽಪ್ಯಪತದಂಜಸಾ ।
ತೃತೀಯೇ ಯುದ್ಧದಿವಸೇ ಪ್ರಾತಃ ಸೂರ್ಯೋದಯಂ ಪ್ರತಿ ॥೩೨॥

ಅಕಸ್ಮಾಚ್ಛಕ್ತಿಸೇನಾಯಾಃ ಪಕ್ಷಯೋಃ ಪತಿತೌ ತದಾ ।
ತದಾಽಭವನ್ಮಹಾಶಬ್ದಃ ಶಕ್ತಿಸೇನಾ ಸುಪಾರ್ಶ್ವಯೋಃ ॥೩೩॥

ತದಾ ಶ್ರುತ್ವಾ ಯುದ್ಧಶಬ್ದಂ ಮಂತ್ರಿಣೀ ದಂಡನಾಯಕೀ ।
ಅಭೂತಾಂ ಶಂಕಿತೇಽತ್ಯಂತ ಮೂಚತುಃ ಶ್ರೀಪರಾಽಂಬಿಕಾಂ ॥೩೪॥

ದೇವಿ ದೈತ್ಯ ಶಕ್ತಿಸೇನಾ ಸಮಾಗಮ ಮಹಾಧ್ವನಿಃ ।
ಶ್ರೂಯತೇ ಭೈರವತರೋ ದೈತ್ಯಾಃ ಕಪಟಯೋಧಿನಃ ॥೩೫॥

ಯುದ್ಧಕೃತ್ಯಕಾಂಡೇ ಸನ್ನದ್ಧಾ ಅಕೃತ್ವಾ ಸಂವಿದಂ ಪುರಾ ।
ತದ್ಯಾವ ಆವಾಮನುಜಾನೀಹಿ ಶೀಘ್ರಂ ಮಹೇಶ್ವರಿ ॥೩೬॥

ವಿಶುಕ್ರನೂ ಕೂಡ ರಥದ ಎಡಭಾಗದಿಂದ ಶೀಘ್ರವಾಗಿ ಆಕೆಯ ಮೇಲೆ ಯುದ್ಧಕ್ಕೆ ಬಂದನು. ಮೂರನೇ ದಿವಸದ ಯುದ್ಧದಲ್ಲಿ ಬೆಳಿಗ್ಗೆ ಸೂರ್ಯೋದಯ ವಾಗುವ ವೇಳೆಗೆ ಇವರಿಬ್ಬರೂ ಈರೀತಿಯಾಗಿ ಆಕೆಯೊಂದಿಗೆ ಯುದ್ಧಕ್ಕೆ ಎದುರಿಸಿದರು. ॥೩೨॥

ಅವರು ಹೀಗೆ ಅಕಸ್ಮಾತ್ತಾಗಿ ಶಕ್ತಿಸೈನ್ಯಗಳ ಪಕ್ಕದಲ್ಲಿ ಯುದ್ಧಕ್ಕೆ ಪ್ರಾರಂಭಿಸಿದರು. ಶಕ್ತಿಸೈನ್ಯಗಳ ಎರಡು ಪಕ್ಕಗಳಲ್ಲಿಯೂ ಮಹಾಶಬ್ದವುಂಟಾಯಿತು.॥೩೩॥

ಆಗ ಯುದ್ಧದ ಶಬ್ದವನ್ನು ಕೇಳಿ ಮಂತ್ರಿಣೀ ಮತ್ತು ದಂಡನಾಯಕೀ ಇವರಿಬ್ಬರೂ ಬಹಳ ಕಳವಳಕ್ಕೀಡಾಗಿ ಶ್ರೀಲಲಿತಾಮಾತೆಯನ್ನು ಕುರಿತು ಈ ರೀತಿಯಲ್ಲಿ ಹೇಳಿದರು. ॥೩೪॥

ಓ ದೇವಿಯೇ, ರಾಕ್ಷಸರೂ ಮತ್ತು ಶಕ್ತಿಸೈನ್ಯಗಳೂ ಸೇರಿ ಯುದ್ಧಮಾಡುವ ಮಹಾಭಯಂಕರವಾದ ಶಬ್ದವು ಕೇಳಿಸುತ್ತಿದೆ. ರಾಕ್ಷಸರು ಕಪಟದಿಂದ ಯುದ್ಧ ಮಾಡುವವರು. ಎಂಬ ವಿಷಯವೂ ತಮಗೆ ಗೊತ್ತಿದೆ. ॥೩೫॥

ರಾಕ್ಷಸರು ಮೊದಲು ತಿಳಿವಳಿಕೆಯನ್ನೇ ಕೊಡದೆ ಅಕಾಲದಲ್ಲಿಯೇ ಯುದ್ಧಕ್ಕೆ ಬಂದವರಾಗಿರುತ್ತಾರೆ. ಓ ಮಹೇಶ್ವರಿಯೇ, ಆದ್ದರಿಂದ ನಮಗೆ ಅಪ್ಪಣೆಯನ್ನು ಕೊಡಿ. ನಾವು ಶೀಘ್ರದಲ್ಲಿಯೇ ಯುದ್ಧಕ್ಕೆ ಹೋಗುವೆವು. ॥೩೬॥

ಅನುಜ್ಞಾತೇ ತತೋ ನತ್ವಾ ಮಂತ್ರಿಣೀ ದಂಡನಾಯಿಕೇ ।
ಚೇಲತುಃ ಸಮರಾಯಾಽಽಶು ಪೃಥಕ್ಶಕ್ತಿಗಣಾಽಽವೃತೇ ॥೩೭॥

ದೇವ್ಯಾ ದಕ್ಷಿಣಪಾರ್ಶ್ವಸ್ಥಾ ದಂಡಿನೀ ಚಂಡವಿಕ್ರಮಾ ।
ನಿರ್ಯಯೌ ಶ್ರೀಚಕ್ರರಾಜ ರಥದಕ್ಷಿಣದ್ವಾರತಃ ॥೩೮॥

ಕಿರಿಚಕ್ರರಥಂ ಪಂಚ ಪರ್ವಶೋಭಿ ಸಮುನ್ನತಂ ।
ಮಹಾ ಸಿಂಹಯುಗಂ ಪಾರ್ಶ್ವೇ ಸೈರಿಭಾಗ್ರ್ಯಂ ತಥಾ ಪುರಃ ॥೩೯॥

ಯೋಜಿತಂ ಭೈರವೋ ಯತ್ರ ರಥನೇತಾ ಸ್ವಯಂ ಸ್ಥಿತಃ ।
ತತ್ಪಾರ್ಶ್ವೇ ಸಿಂಹ ಸಂವಾಹ ರಥಾರೂಢೇ ವಿಚೇಲತುಃ ॥೪೦॥

ಸ್ವಪ್ನೇಶ್ವರೀ ತಥಾ ಕಾಲ ಸಂಕರ್ಷಾ ಯುದ್ಧಸಂಭ್ರಮಾ ।
ವಟುಕೈಃ ಕಾಲಿಕಾವೃಂದೈರ್ವರಾಹ ಮುಖಶಕ್ತಿಭಿಃ ॥೪೧॥

ಆಕೆಯ ಅಪ್ಪಣೆಯಾಗಲು ಮಂತ್ರಿಣೀ ಮತ್ತು ದಂಡನಾಯಕಿಯರಿಬ್ಬರೂ ಆಕೆಗೆ ನಮಸ್ಕರಿಸಿ, ಬೇರೆ ಬೇರೆಯಾಗಿ ಶಕ್ತಿಗಳ ಸಮೂಹಗಳಿಂದ ಕೂಡಿದವರಾಗಿ ಯುದ್ಧಕ್ಕೋಸ್ಕರ ಶೀಘ್ರವಾಗಿ ಹೊರಟರು. ||೩೭||

ದೇವಿಯ ಬಲಪಕ್ಕದಲ್ಲಿ ಪ್ರಚಂಡ ಪರಾಕ್ರಮವುಳ್ಳ ದಂಡನಾಯಕಿಯಿದ್ದಳು. ಆಕೆಯು ಶ್ರೀಚಕ್ರರಾಜರಥದ ಬಲಭಾಗದಿಂದ ಹೊರಟಳು. ||೩೮||

ದಂಡನಾಯಕಿಯು ಐದು ಅಂತಸ್ತುಗಳಿಂದ ಕೂಡಿ ಬಹಳ ಎತ್ತರವಾಗಿರುವ ಕಿರಿಚಕ್ರ ಎಂಬ ರಥವನ್ನು ಏರಿದ್ದಳು. ಅದಕ್ಕೆ ಎರಡು ಪಕ್ಕಗಳಲ್ಲಿಯೂ ದೊಡ್ಡ ಸಿಂಹಗಳನ್ನು ಮತ್ತು ಒಂದು ಶ್ರೇಷ್ಠವಾದ ವೃಷಭವನ್ನೂ ಮುಂದುಗಡೆಯಲ್ಲಿ ಕಟ್ಟಿದ್ದರು. ||೩೯||

ಈರೀತಿಯಾಗಿ ಸಜ್ಜುಗೊಳಿಸಿದ್ದ ಆ ರಥಕ್ಕೆ ಭೈರವನೇ ಸಾರಥಿಯಾಗಿದ್ದನು. ಆದರ ಎರಡು ಪಕ್ಕಗಳಲ್ಲಿಯೂ ಸಿಂಹವನ್ನು ವಾಹನವಾಗಿ ಉಳ್ಳ ರಥಗಳನ್ನು ಏರಿ ಇಬ್ಬರು ಶಕ್ತಿನಾಯಕಿಯರೂ ಹೊರಟಿದ್ದರು. ||೪೦||

ಯುದ್ಧದಲ್ಲಿ ಸಡಗರವನ್ನು ತೋರಿಸುವ ಸ್ವಪ್ನೇಶ್ವರೀ ಮತ್ತು ಕಾಲಸಂಕರ್ಷಾ ಎಂಬ ಶಕ್ತಿಯರಿಂದ ಕೂಡಿದವಳಾಗಿ ದಂಡನಾಯಕಿಯು ಹೀಗೆ ಹೊರಟಿದ್ದಳು. ಅಲ್ಲದೆ ವರಾಹ ಮುಂತಾದ ಶಕ್ತಿಗಳಿಂದಲೂ ಕಾಳಿಕಾ ಮುಂತಾದ ಶಕ್ತಿಗಳ ಸಮೂಹಗಳಿಂದಲೂ ದಂಡನಾಯಕಿಯು ಕೂಡಿದವಳಾಗಿದ್ದಳು. ||೪೧||

ಅಸಂಖ್ಯಾಭಿಃ ಪರಿಕ್ರಾಂತಾ ನಿರ್ಯಯೌ ಕದನಾಯ ಸಾ ।
ಏವಂ ಚಕ್ರರಥದ್ವಾರಾದುತ್ತರಸ್ಮಾಚ್ಚ ಮಂತ್ರಿಣೀ ॥೪೨॥

ವಿನಿರ್ಗತ್ಯ ಗೇಯಚಕ್ರರಥರಾಜೇ ಮಹೋನ್ನತೇ ।
ಸಪ್ತಪರ್ವಯುತೇ ವೇದಹರಿದಶ್ವಪ್ರಚಾಲಿತೇ ॥೪೩॥

ಹಸಂತೀ ಶ್ಯಾಮಲಾ ತತ್ರ ರಥನೇತ್ರ್ಯಭವತ್ಪರಾ ।
ಶುಕಾಽದ್ಯಾ ಸಾರಿಕಾಽದ್ಯಾ ಚ ಶ್ಯಾಮಲಾ ದಕ್ಷಪಾರ್ಶ್ವಗಾ ॥೪೪॥

ಸಂಗೀತಸಾಹಿತ್ಯಪೂರ್ವೇ ಶ್ಯಾಮಲೇ ವಾಮಪಾರ್ಶ್ವಗೇ ।
ಲಘುಶ್ಯಾಮಲಿಕಾಪೃಷ್ಠೇ ಚೈವಮೇತಾ ರಥಾಽಽಶ್ರಯಾಃ ॥೪೫॥

ಪರಿತೋ ಗೇಯಚಕ್ರಾಽಽತ್ಮರಥಸ್ಯಾಽಽಶು ವಿನಿರ್ಯಯುಃ ।
ಮಂತ್ರಿಣ್ಯಂಗ ಸಮುದ್ಭೂತಾಃ ಶ್ಯಾಮಲಾಃ ಕೋಟಿಕೋಟಿಶಃ ॥೪೬॥

ದಂಡನಾಯಕಿಯು ಲೆಕ್ಕವಿಲ್ಲದಷ್ಟು ಶಕ್ತಿಗಳಿಂದ ಕೂಡಿದವಳಾಗಿ ಯುದ್ಧಕ್ಕಾಗಿ ಹೊರಟಳು. ಈರೀತಿಯಲ್ಲಿ ಚಕ್ರರಥದ ಉತ್ತರಭಾಗದ ಬಾಗಿಲಿನಿಂದ ಮಂತ್ರಿಣೀದೇವಿಯು ಹೊರಟಳು. ॥೪೨॥

ಮಂತ್ರಿಣಿಯು ಅತ್ಯಂತ ಎತ್ತರವಾದ ಗೇಯಚಕ್ರರಾಜ ಎಂಬ ರಥದಲ್ಲಿ ಕುಳಿತು ಹೊರಟಳು. ಈ ರಥವು ಏಳು ಅಂತಸ್ತುಗಳಿಂದ ಶೋಭಿಸುತ್ತಿರುವುದಾಗಿಯೂ ವೇದಗಳೆಂಬ ಹಸುರು ಬಣ್ಣದ ಕುದುರೆಗಳಿಂದ ಕೂಡಿ ಚಲಿಸುತ್ತಿತ್ತು. ॥೪೩॥

ನಗುತ್ತಿರುವ ಶ್ಯಾಮಲಾ ಎಂಬ ಶಕ್ತಿಯು ಸಾರಥಿಯಾಗಿದ್ದಳು. ಶುಕಾ, ಸಾರಿಕಾ, ಶ್ಯಾಮಲಾ ಮುಂತಾದ ಶಕ್ತಿಗಳು ಬಲಬಾಗದಲ್ಲಿ ಹೋಗುತ್ತಿದ್ದರು. ॥೪೪॥

ಸಂಗೀತಶ್ಯಾಮಲಾ, ಸಾಹಿತ್ಯಶ್ಯಾಮಲಾ ಎಂಬ ಶಕ್ತಿಯರು ದೇವಿಯ ಎಡಭಾಗದಲ್ಲಿಯೂ, ಲಘುಶ್ಯಾಮಲಿಕಾ ಎಂಬ ಶಕ್ತಿಯು ದೇವಿಯ ಹಿಂಭಾಗದಲ್ಲಿಯೂ, ಈ ರೀತಿಯಲ್ಲಿ ಎಲ್ಲರೂ ರಥದ ಮೇಲೆ ಕುಳಿತು ಹೋಗುತ್ತಿದ್ದರು. ॥೪೫॥

ಗೇಯಚಕ್ರವೆಂಬ ರಥದ ಸುತ್ತಲೂ ಮಂತ್ರಿಣಿಯ ಶರೀರದಿಂದಲೇ ಹುಟ್ಟಿದ ಅನೇಕ ಕೋಟಿ ಶ್ಯಾಮಲಾ ಎಂಬ ಶಕ್ತಿಗಳು ಶೀಘ್ರವಾಗಿ ಯುದ್ಧಕ್ಕಾಗಿ ಹೋಗುತ್ತಿದ್ದರು. ॥೪೬॥

ರಥಾಽಽಶ್ರಯಾಃ ಪ್ರಚೇಲುರ್ವೈ ಯುದ್ಧಸಂಭಾರಸಂಭೃತಾಃ ।
ಸರ್ವಾಃ ಷೋಡಶವಾರ್ಷಿಕ್ಯಸ್ತಾರುಣ್ಯ ಶ್ರೀನಿಷೇವಿತಾಃ ॥೪೭॥

ರಕ್ತಕೌಶೇಯ ವಸನಾ ನವರತ್ನ ವಿಭೂಷಣಾಃ ।
ಕಟಾಕ್ಷ ಮಂದಹಾಸಾಭ್ಯಾಂ ಮೋಹಯಂತ್ಯೋಽಖಿಲಂ ಜಗತ್ ॥೪೮॥

ಕಾಪಿಶಾಯನಪಾನೋದ್ಯನ್ಮದಘೂರ್ಣಿತಲೋಚನಾಃ ।
ಕಾವ್ಯಾಽಽಲಾಪರಸಾಽಭಿಜ್ಞಾ ಗೀತವಾದ್ಯ ವಿನೋದಿತಾಃ ॥೪೯॥

ನರ್ಮಕ್ರೀಡಾಪರಾಶ್ಚಾಽತಿಹಾಸ್ಯಲೀಲಾಪರಾಯಣಾಃ ।
ಮಂತ್ರನಾಥಾವಾಹಿನೀ ಸಾ ಶುಶುಭೇಽತಿತರಾಂ ತದಾ ॥೫೦॥

ಈ ಶಕ್ತಿಗಳೆಲ್ಲರೂ ಯುದ್ಧಸಾಮಗ್ರಿಗಳಿಂದ ತುಂಬಿದ್ದ ರಥದಲ್ಲಿ ಕುಳಿತು ಹದಿನಾರು ವರ್ಷ ಪ್ರಾಯದವರಾಗಿ ಯೌವ್ವನವೆಂಬ ಲಕ್ಷ್ಮಿಗೆ ಆಶ್ರಯರಾಗಿದ್ದರು. ||೪೭||

ಇವರು ಕೆಂಪುರೇಷ್ಮೆಯ ಬಟ್ಟೆಗಳನ್ನು ಧರಿಸಿದವರಾಗಿ, ಒಂಬತ್ತು ವಿಧವಾದ ರತ್ನಗಳ ಅಲಂಕಾರಗಳನ್ನು ಹಾಕಿಕೊಂಡು, ಕಟಾಕ್ಷಗಳು ಮತ್ತು ಮುಗುಳು ನಗೆಗಳಿಂದ ಸಮಸ್ತ ಪ್ರಪಂಚಗಳನ್ನೂ ಮೋಹಗೊಳಿಸುತ್ತಿದ್ದರು. ||೪೮||

ಮದ್ಯಪಾನದಿಂದುಂಟಾಗಿರುವ ಮದದಿಂದ ಸುತ್ತುತ್ತಿರುವ ಕಣ್ಣುಗಳುಳ್ಳ ಇವರು ಕಾವ್ಯವನ್ನು ಪರೀಕ್ಷಿಸಿ ಅವುಗಳ ರಸವನ್ನು ಅನುಭವಿಸುವವರಾಗಿಯೂ, ಸಂಗೀತ ಮತ್ತು ವಾದ್ಯ ಇವುಗಳ ವಿನೋದವನ್ನು ಅನುಭವಿಸುವವರಾಗಿಯೂ ಇದ್ದರು. ||೪೯||

ಇವರು ಶೃಂಗಾರ ಕ್ರೀಡೆಯ ವಿಷಯದಲ್ಲಿ ಆಸಕ್ತರಾಗಿಯೂ ಅತಿ ಹಾಸ್ಯ ವಿನೋದಗಳಲ್ಲಿ ಆಸಕ್ತಿಯುಳ್ಳವರಾಗಿಯೂ ಇದ್ದರು. ಈರೀತಿಯಾಗಿ ಮಂತ್ರಿಣಿಯ ಸೈನ್ಯವು ಅತ್ಯಂತವಾಗಿ ಶೋಭಿಸುತ್ತಿದ್ದಿತು. ||೫೦||

ತಾಪಿಚ್ಛವನಮಾಲೇವ ವಿಕಸಚ್ಚಾರುಮಂಜರೀ ।
ಅಥಾಽಭವಚ್ಛಕ್ತಿಸೇನಾ ದೈತ್ಯಸೇನಾ ಸಮಾಗಮಃ ॥೫೦॥

ಉದ್ವೇಲಯೋಃ ಸಾಗರಯೋರಿವ ಸಂಗಮನಂ ಭುವಿ ।
ಅಥ ಧ್ವನದ್ಯುದ್ಧವಾದ್ಯ ಹುಂಕಾರಸ್ಫೋಟ ನಿಸ್ವನಃ ॥೫೨॥

ರಥ ಘೋಷ ತುರಂಗೋಚ್ಚ ಹ್ರೇಷಾಗಂಭೀರಮಾಂಸಲಃ ।
ಸೇನಯೋರುಭಯೋಸ್ತತ್ರ ಬಧಿರೀಕೃತದಿಙ್ಮುಖಃ ॥೫೩॥

ಶಕ್ತಿಸಂಘಮಹಾಮೇಘ ನಿರ್ಮುಕ್ತೇಷು ಪ್ರವರ್ಷಣೈಃ ।
ದೈತ್ಯಸೇನಾಮುಖತಟಂ ವಿದೀರ್ಣಂ ಶತಧಾಽಭವತ್ ॥೫೪॥

ಹೊಂಗೆಯ ಹುವ್ವಿನಿಂದ ರಚಿತವಾದ ವನಮಾಲಾಸರದಂತೆಯೂ, ಅರಳಿದ ಮನೋಹರವಾದ ಹೂಗಳ ಗೊಂಚಲಿನಂತೆಯೂ, ಶಕ್ತಿಸೈನ್ಯವು ಶೋಭಿಸುತ್ತಿದ್ದಿತು. ಅನಂತರ ಶಕ್ತಿಸೈನ್ಯ ಮತ್ತು ರಾಕ್ಷಸರ ಸೈನ್ಯಗಳಿಗೆ ಯುದ್ಧಕ್ಕಾಗಿ ಘರ್ಷಣೆಯುಂಟಾಯಿತು. ||೫೦||

ಎಲ್ಲೆಮೀರಿದ ಸಾಗರಗಳಂತಿರುವ ಆ ಎರಡು ಸೈನ್ಯಗಳಿಗೂ ಭೂಮಿಯಲ್ಲಿಯೇ ವಿಶೇಷವಾದ ಘರ್ಷಣೆಯುಂಟಾಯಿತು. ಅನಂತರ ಶಬ್ದಮಾಡುತ್ತಿರುವ ಯುದ್ಧವಾದ್ಯಗಳ, ಹುಂಕಾರಗಳ ಮತ್ತು ಭುಜಗಳನ್ನು ತಟ್ಟುವಿಕೆಯಿಂದುಂಟಾದ ಮಹಾಶಬ್ದವು ಅಲ್ಲಿ ಎಲ್ಲೆಲ್ಲಿಯೂ ಕೇಳಿಸಿತು. ||೫೨||

ರಥಧ್ವನಿಗಳು ಮತ್ತು ಕುದುರೆಗಳ ಗಟ್ಟಿಯಾಗಿ ಕೆನೆಯುವ ಶಬ್ದಗಳು ಇವುಗಳಿಂದ ತುಂಬಿ ಎಲ್ಲೆಲ್ಲಿಯೂ ದೊಡ್ಡ ಧ್ವನಿಯೇ ಕೇಳಿಬರುತ್ತಿತ್ತು. ಈ ಎರಡು ಸೈನ್ಯಗಳ ಮಹಾಶಬ್ದವೂ ಕೂಡ ದಿಕ್ಕಿನ ಪ್ರದೇಶಗಳನ್ನೆಲ್ಲವನ್ನೂ ಕಿವುಡಾಗಿ ಮಾಡುತ್ತಿತ್ತು. ||೫೩||

ಶಕ್ತಿಸೈನ್ಯಗಳೆಂಬ ಮಹಾಮೇಘಗಳಿಂದ ಹೊರಗೆ ಬರುತ್ತಿದ್ದ ಬಾಣಗಳ ಸಾಲುಗಳೆಂಬ ಸುರಿಮಳೆಗಳಿಂದ ರಾಕ್ಷಸ ಸೈನ್ಯಗಳ ಮುಂಭಾಗವೆಂಬ ದಡವು ಸೀಳಿ ನೂರಾರು ಭಾಗವಾಗಿ ಚೂರುಚೂರಾಯಿತು. ||೫೪||

ದೈತ್ಯಸೇನಾ ಭಿನ್ನಮುಖ ದ್ವಾರೇಣವಿವಿಶುರ್ದ್ರುತಂ ।
ದೈತ್ಯಸೇನಾ ಹ್ರದಂ ಶಕ್ತಿಸೇನಾ ಸ್ರೋತಃ ಸಮಂತತಃ ॥೫೫॥

ನಿವಿಶ್ಯ ದೈತ್ಯಸೇನಾಂ ತಾಂ ಶಕ್ತಯೋ ಬಲವತ್ತರಾಃ ।
ಶಸ್ತ್ರಾಽಗ್ನಿಭಿಃ ದೈತ್ಯಸೇನಾಽವನಂ ಚಕ್ರುರ್ಹಿ ಭಸ್ಮಸಾತ್ ॥೫೬॥

ಕೇಚಿಚ್ಛರೈಃ ಸುನಿಚಿತಾಃ ಕೇಚಿತ್ಪರಿಘಪ್ರೋಥಿತಾಃ ।
ಅನ್ಯೇ ಕೃಪಾಣೆನಾ ಛಿನ್ನ ನಿಖಿಲಾಽಂಗಾಃ ಗತಾಸವಃ ॥೫೭॥

ಪರೇ ಚಕ್ರವಿಕೃತ್ತಾಽಂಗಾಃ ಪರಶುಚ್ಛಿನ್ನಕಂಧರಾಃ ।
ಇತರೇ ಶೂಲಸೂತ್ರೇಷು ಪ್ರೋತಾ ಮಣಿಗಣಾ ಇವ ॥೫೮॥

ಅಪರೇ ಶಕ್ತಿಪ್ರಮುಖೈರ್ಭಿನ್ನಮೂರ್ಧೋದರಾಽಭವನ್ ।
ಏವಂ ವಿನಾಶ್ಯಮಾನಾಯಾಂ ಸೇನಾಯಾಂ ಶಕ್ತಿಸೇನಯಾ ॥೫೯॥

ರಾಕ್ಷಸರ ಸೈನ್ಯದಲ್ಲಿ ಸೀಳಿರುವ ಮುಂಭಾಗದಿಂದ, ರಾಕ್ಷಸ ಸೈನ್ಯವೆಂಬ ಕೊಳದೊಳಕ್ಕೆ ಶಕ್ತಿಸೈನ್ಯವೆಂಬ ಪ್ರವಾಹವು ಎಲ್ಲಾ ಕಡೆಯಲ್ಲಿಯೂ ಶೀಘ್ರವಾಗಿ, ಒಳಗೆ ನುಗ್ಗಿತು. ॥೫೫॥

ಬಹಳ ಬಲಿಷ್ಠರಾದ ಶಕ್ತಿಗಳು ರಾಕ್ಷಸ ಸೈನ್ಯದಲ್ಲಿ ಪ್ರವೇಶವನ್ನು ಹೊಂದಿ ತಮ್ಮ ಶಸ್ತ್ರಗಳೆಂಬ ಬೆಂಕಿಯಿಂದ ರಾಕ್ಷಸ ಸೈನ್ಯವೆಂಬ ಕಾಡನ್ನು ಬೂದಿಯಾಗಿ ಮಾಡಿದರು. ॥೫೬॥

ಕೆಲವು ಶಕ್ತಿಗಳ ಬಾಣಗಳು ದೈತ್ಯರನ್ನು ವ್ಯಾಪಿಸಿದವು. ಕೆಲವರು ಅವರ ಪರಿಘಾಯುಧದ ಪೆಟ್ಟಿಗೆ ಸಿಕ್ಕಿದರು. ಶಕ್ತಿಗಳು ಇನ್ನು ಕೆಲವರನ್ನು ಕತ್ತಿಯಿಂದ ಅವರ ಸಮಸ್ತ ಅವಯುವಗಳನ್ನು ಕತ್ತರಿಸಿ ನಾಶಮಾಡಿದರು. ॥೫೭॥

ಇತರರ ಅವಯುವಗಳು ಶಕ್ತಿಗಳ ಚಕ್ರಾಯುಧಗಳಿಗೆ ಸಿಕ್ಕಿ ಕತ್ತರಿಸಿ ಹೋದವು. ಇನ್ನು ಕೆಲವರ ಕತ್ತುಗಳನ್ನು ಕೊಡಲಿಗಳಿಂದ ಕತ್ತರಿಸಿಹಾಕಿದರು. ಅಲ್ಲದೇ ಬೇರೆ ಕೆಲವರು ಶಕ್ತಿಗಳ ಶೂಲಗಳೆಂಬ ದಾರಕ್ಕೆ ಮಣಿಗಳ ಸಮೂಹ ಗಳಂತೆ ಪೋಣಿಸಲ್ಪಟ್ಟರು. ॥೫೮॥

ಇತರ ಕೆಲವು ರಾಕ್ಷಸರ ಹೊಟ್ಟೆಗಳು ಶಿರಸ್ಸುಗಳು ಮುಂತಾದುವನ್ನು ಶಕ್ತಿ ಗಳು ತಮ್ಮ ಶಸ್ತ್ರಗಳಿಂದ ಸೀಳಿದರು. ಈರೀತಿಯಾಗಿ ಶಕ್ತಿಸೈನ್ಯಗಳಿಂದ ರಾಕ್ಷಸ ಸೈನ್ಯವು ನಾಶವಾಗುತ್ತಿದ್ದಿತು. ॥೫೯॥

ದೃಷ್ಟ್ವಾ ವಿಶುಕ್ರೋ ಹ್ಯತ್ಯಂತಂ ರೋಷಾಗ್ನಿಜ್ವಲಿತೇಕ್ಷಣಃ ।
ರಥೇನಾಭ್ಯದ್ರವಚ್ಛಕ್ತಿವಾಹಿನೀಂ ಶಸ್ತ್ರವರ್ಷಣೈಃ ॥೬೦॥

ಜೀಮೂತ ಇವ ವರ್ಷಾಸು ಧಾರಾಃ ಶರಪ್ರಾಯಾಸ್ತತಃ ।
ಶಕ್ತಿಸೇನಾಪಿ ಯುಯುಧೇ ವಿಶುಕ್ರೇ ಚ ಬಲೀಯಸಿ ॥೬೧॥

ಅಥ ಪುತ್ರಾ ವಿಶುಕ್ರಸ್ಯ ಪಿತೃತುಲ್ಯ ಪರಾಕ್ರಮಾಃ ।
ಜೀಮೂತಕಾಯೋ ದೇವಾರಿಃ ಕರಂಭಃ ಶಿಖಿಭಾಷಣಃ ॥೬೨॥

ನಿವಿಶ್ಯ ಶಕ್ತಿಸೇನಾಂತರ್ಜಘ್ನುಸ್ತಾ ಬಲವತ್ತರಾಃ ।
ವಿಶುಕ್ರಾತ್ಮಜ ಸಂಖಿನ್ನಾಂ ನಿಶಾಮ್ಯ ಶಕ್ತಿವಾಹಿನೀಂ ॥೬೩॥

ಈರೀತಿಯಾಗಿ ರಾಕ್ಷಸ ಸೈನ್ಯವು ನಾಶವಾಗುತ್ತಿರುವುದನ್ನು ಕಂಡು ವಿಶುಕ್ರನು ಬಹಳ ಕೋಪದಿಂದ ಉರಿಯುತ್ತಿರುವ ಕಣ್ಣುಗಳುಳ್ಳವನಾಗಿ ತನ್ನ ರಥವನ್ನು ಶಕ್ತಿಸೈನ್ಯದ ಮುಂದಕ್ಕೋಡಿಸಿ ಶಸ್ತ್ರಗಳ ಸುರಿಮಳೆಗಳನ್ನು ಮಾಡುವುದರ ಮೂಲಕ ಅದನ್ನು ಕೂಡಲೇ ನಾಶಮಾಡಲು ಹೊರಟನು. ॥೬೦॥

ಅನಂತರ ವಿಶುಕ್ರನು, ಮೇಘವು ಮಳೆಗಾಲದಲ್ಲಿ ಧಾರಾಕಾರವಾಗಿ ಮಳೆಯನ್ನು ಸುರಿಸುವಂತೆ, ಬಾಣಗಳ ಮಳೆಯನ್ನು ಶಕ್ತಿಸೈನ್ಯಗಳ ಮೇಲೆ ಸುರಿಸುತ್ತಿದ್ದನು. ಬಲಿಷ್ಠವಾದ ಶಕ್ತಿಸೈನ್ಯವೂ ಕೂಡ ಅವನೊಂದಿಗೆ ಪ್ರಬಲವಾಗಿ ಯುದ್ಧ ಮಾಡುತ್ತಿತ್ತು. ॥೬೧॥

ಅನಂತರ ತಂದೆಗೆ ಸಮಾನವಾದ ಪರಾಕ್ರಮವುಳ್ಳ ವಿಶುಕ್ರನ ಮಕ್ಕಳಾದ ಜೀಮೂತಕಾಯ, ದೇವಾರಿ, ಕರಂಭ, ಶಿಖಿಭಾಷಣ ಎಂಬುವರೂ ಯುದ್ಧ ಮಾಡಲು ಬಂದು ಇಳಿದರು. ॥೬೨॥

ಆ ರಾಕ್ಷಸ ಕುಮಾರರು ಬಹಳ ಬಲಿಷ್ಠರಾಗಿದ್ದು ಶಕ್ತಿಸೈನ್ಯದ ಒಳಕ್ಕೆ ನುಗ್ಗಿ ಅವರನ್ನು ಹೊಡೆಯಲಾರಂಭಿಸಿದರು. ವಿಶುಕ್ರನ ಪೆಟ್ಟಿಗೆ ಸಿಕ್ಕಿ ನರಳುತ್ತಿದ್ದ ಶಕ್ತಿಸೈನ್ಯದ ವಿಷಯವನ್ನು ಶುಕಾ ಮುಂತಾದ ಶಕ್ತಿದೇವಿಯರು ಕೇಳಿದರು. ॥೬೩॥

ಚತುರ್ದಿಕ್ಷು ಕಾಲ್ಯಮಾನಾಂ ಶುಕಾಽದಿಶ್ಯಾಮಲಾಮುಖಾಃ ।
ವಿಶುಕ್ರಪುತ್ರಾನಾಸೇದುರ್ವರ್ಷಂತ್ಯ ಇಷುಸಂತತಿಂ ॥೬೪॥

ತತ್ರ ಜೀಮೂತಕಾಯೇನ ಯುಯೋಧ ಶುಕಶ್ಯಾಮಲಾ ।
ಚಿರಂ ಯುದ್ಧ್ವಾ ಶರೈಸ್ತತ್ರ ರಥಂ ಸೂತಂ ಶರಾಸನಂ ॥೬೫॥

ಚಿಚ್ಛೇದ ನಿಮಿಷಾರ್ಧೇನ ತತಃ ಪ್ರಕುಪಿತೋಽಸುರಃ ।
ಜಘಾನ ತೀಕ್ಷ್ಣಧಾರೇಣ ಖಡ್ಗೇನ ರಥವಾಹನಂ ॥೬೬॥

ತಸ್ಯಾ ರಥಾಽಶ್ವೇ ನಿಹತಃ ಪ್ರಸ್ಖಲದ್ಭಿನ್ನಮಸ್ತಕಃ ।
ತಾವಚ್ಛುಕಶ್ಯಾಮಲಿಕಾ ಅರ್ಧಚಂದ್ರೇಷುಣಾ ಜವಾತ್ ॥೬೭॥

ಶುಕ, ಶ್ಯಾಮಲಾ ಮುಂತಾದ ಶಕ್ತಿಯರು ನಾಲ್ಕು ದಿಕ್ಕುಗಳಲ್ಲಿಯೂ ರಾಕ್ಷಸರ ಪೆಟ್ಟಿಗೆ ಗುರಿಯಾದ ಶಕ್ತಿಸೈನ್ಯದ ವಿಷಯವನ್ನು ಕೇಳಿ ಬಾಣಗಳ ಸುರಿಮಳೆಗಳನ್ನು ಸುರಿಸುತ್ತಾ ವಿಶುಕ್ರನ ಮಕ್ಕಳ ಮೇಲೆ ಬಿದ್ದರು. ॥೬೪॥

ಅವರ ಪೈಕಿ ಶುಕಶ್ಯಾಮಲಾ ಎಂಬ ಶಕ್ತಿಯು ಜೀಮೂತಕಾಯ ಎಂಬ ರಾಕ್ಷಸಕುಮಾರನೊಂದಿಗೆ ಯುದ್ಧಮಾಡಿದಳು. ಅವನೊಂದಿಗೆ ಬಹಳಕಾಲ ಯುದ್ಧ ಮಾಡಿ, ತನ್ನ ಬಾಣಗಳಿಂದ ಅವನ ರಥ ಸಾರಥಿ ಮತ್ತು ಬತ್ತಳಿಕೆಗಳನ್ನು ಕತ್ತರಿಸಿ ಹಾಕಿದಳು. ॥೬೫॥

ಈ ರೀತಿಯಾಗಿ ಶುಕಶ್ಯಾಮಲಾಶಕ್ತಿಯು ರಥ ಮುಂತಾದುವನ್ನು ಕತ್ತರಿಸಲಾಗಿ ಬಹಳ ಕೋಪಗೊಂಡ ಆ ರಾಕ್ಷಸ ಪುತ್ರನು ಅವಳ ಮೇಲೆ ಚುಚ್ಚುವ ಬಾಣಗಳಿಂದ ಬಲವಾಗಿ ಹೊಡೆದನು. ಅನಂತರ ತನ್ನ ಕತ್ತಿಯಿಂದ ಅವಳ ರಥ ಮತ್ತು ವಾಹನಗಳನ್ನು ನಾಶಮಾಡಿದನು. ॥೬೬॥

ಆಗ ಆ ಶಕ್ತಿಯ ರಥದ ಕುದುರೆಗಳ ತಲೆಗಳು ಕತ್ತರಿಸಲ್ಪಡಲು ಅವು ನಾಶವಾದವು. ಅಷ್ಟರೊಳಗಾಗಿ ಶುಕಶ್ಯಾಮಲಿಕಾ ಎಂಬ ಶಕ್ತಿಯು ಶೀಘ್ರವಾಗಿ ಅವನ ತಲೆಗೆ ಅರ್ಧಚಂದ್ರಬಾಣವನ್ನು ಪ್ರಯೋಗಿಸಿದಳು. ॥೬೭॥

ಅಪಾತಯಚ್ಛಿರೋ ದೇಹಾತ್ ಪಕ್ವತಾಲಫಲಂ ಯಥಾ ।
ದೇವಾಽರಿಣಾ ಶಾರಿಕಾಽಽಖ್ಯಾ ಸಂಗತಾ ಯುದ್ಧಕರ್ಮಣಿ ॥೬೮॥

ಭಿನ್ನಧ್ವಜರಥಾಽಶ್ವಂ ತಂ ಯುಧ್ಯಂತಂ ಗದಯಾ ದೃಢಂ ।
ಸ್ವಕೀಯ ಗದಯಾಽಽಪ್ಲುತ್ಯ ಜಘಾನಾಽಸುರಮಸ್ತಕೇ ॥೬೯॥

ಭಿನ್ನಮೂರ್ಧಾ ನಿಪತಿತೋ ದೇವಾಽರಿರ್ಗತ ಜೀವನಃ ।
ಸಂಗೀತಶ್ಯಾಮಲಾಯುದ್ಧಂ ಕರಂಭೇಣ ಚಕಾರ ಹ ॥೭೦॥

ಯುದ್ಧ್ವಾಚಿರಂ ತೇನ ಸಹ ಖಡ್ಗೇನ ಶಿರ ಆಚ್ಛಿನತ್ ।
ಸಾಹಿತ್ಯಶ್ಯಾಮಲಾ ಯುದ್ಧ್ವಾ ಬಲಿನಂ ಶಿಖಿಭಾಷಣಂ ॥೭೧॥

ಶಸ್ತ್ರಾಽಸ್ತ್ರೈಸ್ತಂ ವಿನಿರ್ಜಿತ್ಯ ಸ್ರಾಕ್ಷಿಪದ್ವಕ್ಷಸಿ ದ್ರುತಂ ।
ತ್ರಿಶೂಲಂ ತೇನ ದಲಿತ ಹೃದಯಃ ಪ್ರಾಪತದ್ವ್ಯಸುಃ ॥೭೨॥

ಆಗ ಜೀಮೂತಕಾಯನೆಂಬ ರಾಕ್ಷಸನ ದೇಹದಿಂದ ಮಾಗಿದ ತಾಳೆಯ ಹಣ್ಣಿನಂತೆ ಅವನ ಶಿರಸ್ಸು ಕೆಳಗೆ ಬಿದ್ದುಹೋಯಿತು. ಅನಂತರ ಶಾರಿಕಾ ಎಂಬ ಶಕ್ತಿಯು ದೇವಾರಿ ಎಂಬ ವಿಶುಕ್ರನ ಮಗನೊಂದಿಗೆ ಯುದ್ಧಕ್ಕೆ ತೊಡಗಿದಳು. ||೬೮||

ಅವನ ಬಾವುಟ ರಥ ಮತ್ತು ಕುದುರೆಗಳು ಕತ್ತರಿಸಿಹೋದರೂ ತನ್ನ ಗದೆಯಿಂದ ದೃಢವಾಗಿ ಯುದ್ಧಮಾಡುತ್ತಿರುವ ಅವನೊಂದಿಗೆ ಯುದ್ಧಮಾಡುತ್ತಾ ಶಾರಿಕಾಶಕ್ತಿಯು ಮೇಲೆ ಹಾರಿ ಅವನ ತಲೆಗೆ ತನ್ನ ಗದಾಪ್ರಯೋಗವನ್ನು ಮಾಡಿದಳು. ||೬೯||

ದೇವಾರಿಯ ತಲೆಯು ಸೀಳಿಹೋಗಿ ಪ್ರಾಣವನ್ನು ಬಿಟ್ಟು ಕೆಳಗೆ ಬಿದ್ದನು. ಸಂಗೀತಶ್ಯಾಮಲಾಶಕ್ತಿಯು ಕರಂಭರಾಕ್ಷಸನೊಂದಿಗೆ ಯುದ್ಧಮಾಡಿದಳು. ||೭೦||

ಸಂಗೀತಶ್ಯಾಮಲಾಶಕ್ತಿಯು ಅವನೊಂದಿಗೆ ಬಹಳಕಾಲ ಯುದ್ಧಮಾಡಿ ತನ್ನ ಕತ್ತಿಯಿಂದ ಅವನ ತಲೆಯನ್ನು ಕತ್ತರಿಸಿದಳು. ಸಾಹಿತ್ಯಶ್ಯಾಮಲಾಶಕ್ತಿಯು ಬಲಿಷ್ಠನಾದ ಶಿಖಿಭಾಷಣನೊಂದಿಗೆ ಯುದ್ಧಮಾಡಿದಳು. ||೭೧||

ಸಾಹಿತ್ಯಶ್ಯಾಮಲಾಶಕ್ತಿಯು ಶಸ್ತ್ರಾಸ್ತ್ರಗಳಿಂದ ಅವನನ್ನು ಸೋಲಿಸಿ ಅವನ ವಕ್ಷಸ್ಥಳಕ್ಕೆ ಶೀಘ್ರವಾಗಿ ತ್ರಿಶೂಲವನ್ನು ಚುಚ್ಚಿದಳು. ಇದರಿಂದ ಅವನ ಹೃದಯವು ಸೀಳಿ ಅವನು ಪ್ರಾಣವನ್ನು ಬಿಟ್ಟನು. ||೭೨||

ಯಾವತ್ಪುತ್ರಾ ನಿಯುದ್ಧ್ಯಂತಿ ವಿಶುಕ್ರಸ್ತಾವದಾಶು ವೈ ।
ಛನ್ನರೂಪಃ ಶ್ಯಾಮಲಾಯಾ ರಥಪಾರ್ಷ್ಣಿಂ ಸಮಾಸದತ್ ॥೭೩॥

ತತ್ರ ಚೋರವದಾಯಾಂತಂ ಗದಾಹಸ್ತಂ ಮಹಾಬಲಂ ।
ದೃಷ್ಟ್ವಾ ಲಘುಶ್ಯಾಮಲಾಖ್ಯಾ ಸನ್ನಿಧಾನಂ ಸಮಾಗತಂ ॥೭೪॥

ಮಂತ್ರೇಶ್ಯಾ ರಥವರ್ಯಂ ತಮಾರುರುಕ್ಷುಂ ತಮಂಜಸಾ ।
ಜಘಾನ ಮೂರ್ಧ್ನಿ ತರಸಾ ಖಡ್ಗೇನಾಽಪಿ ಬಲೀಯಸಾ ॥೭೫॥

ಖಡ್ಗಪ್ರಪಾತತಸ್ತಸ್ಯ ಮುಕುಟಂ ಶಕಲೀಕೃತಂ ।
ವಿಶುಕ್ರೋ ಭ್ರಷ್ಟಮುಕುಟಃ ಕ್ರೋಧಾಽರುಣಿತಲೋಚನಃ ॥೭೬॥

ಗದಾಮಾದಾಯ ವೇಗೇನ ಹಂತುಂ ತಾಮಭಿಸಂಯಯೌ ।
ತಾವಚ್ಛರೇಣ ದೈತ್ಯಸ್ಯ ಗದಾಂ ಚಿಚ್ಛೇದ ಸಪ್ತಧಾ ॥೭೭॥

ತನ್ನ ಮಕ್ಕಳು ಕತ್ತಿಗಳೊಂದಿಗೆ ಯುದ್ಧಮಾಡುತ್ತಿರುವ ವೇಳೆಯಲ್ಲಿಯೇ ವಿಶುಕ್ರನು ಶೀಘ್ರವಾಗಿ ರಹಸ್ಯವಾಗಿ ಶ್ಯಾಮಲಾದೇವಿಯ ರಥದ ಪಕ್ಕಕ್ಕೆ ಸೇರಿದನು. ॥೭೩॥

ಅಲ್ಲಿ ಮಹಾಬಲಿಷ್ಠನಾದ ವಿಶುಕ್ರನು ಗದೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಕಳ್ಳನಂತೆ ಬರುತ್ತಾ ಮಂತ್ರಿಣಿಯ ಸಮೀಪಕ್ಕೆ ಸೇರಿದ್ದನ್ನು ಲಘುಶ್ಯಾಮಲಾ ಎಂಬ ಶಕ್ತಿಯು ನೋಡಿದಳು. ॥೭೪॥

ಅವನು ಕಳ್ಳನಂತೆ ಮಂತ್ರಿಣೀದೇವಿಯ ಶ್ರೇಷ್ಠರಥವನ್ನು ಹತ್ತಲು ಇಷ್ಟಪಡುತ್ತಿರುವುದನ್ನು ಅವಳು ನೋಡಿ ಬಹಳ ಗಟ್ಟಿಯಾಗಿ ತನ್ನ ಕತ್ತಿಯಿಂದ ತಲೆಗೆ ಶೀಘ್ರವಾಗಿ ಹೊಡೆದಳು. ॥೭೫॥

ಆಕೆಯ ಕತ್ತಿಯು ತನ್ನ ಮೇಲೆ ಬಿದ್ದುದರಿಂದ ಅವನ ಕಿರೀಟವು ಚೂರು ಚೂರಾಯಿತು. ವಿಶುಕ್ರನು ಕಿರೀಟವನ್ನು ಕಳೆದುಕೊಂಡುದರಿಂದ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾದನು. ॥೭೬॥

ಆಗ ಅವನು ತನ್ನ ಗದೆಯನ್ನು ತೆಗೆದುಕೊಂಡು ಬಹಳ ವೇಗವಾಗಿ ಅವಳನ್ನು ಕೊಲ್ಲಲು ಹೋದನು. ಅಷ್ಟರೊಳಗಾಗಿ ಆಕೆಯು ತನ್ನ ಬಾಣವನ್ನು ಪ್ರಯೋಗಿಸಿ ಆ ರಾಕ್ಷಸನ ಗದೆಯನ್ನು ಎರಡು ಭಾಗವಾಗಿ ತುಂಡರಿಸಿದಳು. ॥೭೭॥

ನಿರಾಯುಧೋ ವಿಶುಕ್ರೋಽಪಿ ಮುಷ್ಟಿನಾ ರಥವಾಜಿನಾಂ ।
ತಸ್ಯಾ ಜಘಾನ ತಾವತ್ಸಾ ಪ್ರಾಹರನ್ಮೂರ್ಧ್ನಿಸಾಯಕೈಃ ॥೭೮॥

ಸಾಯಕೈರ್ವಿದಲನ್ಮೂರ್ಧಾ ಪಪಾತ ಭುವಿ ಮೂರ್ಛಿತಃ ।
ಈಷತ್ಪ್ರಜ್ಞಸ್ತಾವದೇನಂ ಗೃಹೀತುಂ ಲಘುಶ್ಯಾಮಲಾ ॥೭೯॥

ರಥಾದವಪ್ಲುತ್ಯ ಶೀಘ್ರಂ ಬಾಹುಭ್ಯಾಂ ತಂ ಪರಾಮೃಶತ್ ।
ಪ್ರತಿಬುದ್ಧಸ್ತಾವದಸೌ ಮತ್ವಾ ಸ್ವಸ್ಯ ಹಿ ಬಂಧನಂ ॥೮೦॥

ಮುಷ್ಟಿನಾಽಭ್ಯಹನದ್ದೇವೀಂ ಸಾಽಪೀಷತ್ಕಶ್ಮಲಂ ಯಯೌ ।
ತಾವತ್ ಜ್ಞಾತ್ವಾ ರಥಸ್ಥಾನಾಃ ಶಕ್ತಯೋ ರಿಪುಮಂತಿಕೇ ॥೮೧॥

ವಿಶುಕ್ರನು ಆಯುಧವೇ ಇಲ್ಲದವನಾಗಿ ಆಕೆಯ ರಥ ಮತ್ತು ಕುದುರೆಗಳಿಗೆ ತನ್ನ ಮುಷ್ಟಿಯಿಂದಲೇ ಹೊಡೆದನು. ಅಷ್ಟರೊಳಗಾಗಿ ಆಕೆಯು ತನ್ನ ಬಾಣ ಗಳಿಂದ ಅವನ ತಲೆಗೆ ಹೊಡೆದಳು. ||೭೮||

ಆಕೆಯ ಬಾಣಪ್ರಹಾರಕ್ಕೆ ಸಿಕ್ಕಿ ಅವನ ತಲೆಯು ಸೀಳಿದಂತಾಗಲು ಅವನು ಮೂರ್ಛಾಕ್ರಾಂತನಾಗಿ ಕೆಳಗೆ ಬಿದ್ದನು. ಆಗ ಅವನು ಸ್ವಲ್ಪಜ್ಞಾನವುಳ್ಳವನಾಗಿದ್ದನು. ಅಷ್ಟರೊಳಗಾಗಿಯೇ ಲಘುಶ್ಯಾಮಲಾಶಕ್ತಿಯು ಇವನನ್ನು ಹಿಡಿಯಲು ಪ್ರಯತ್ನ ಪಟ್ಟಳು. ||೭೯||

ಕೂಡಲೇ ಆ ಶಕ್ತಿಯು ರಥದಿಂದ ಹಾರಿ ಶೀಘ್ರವಾಗಿ ಅವನನ್ನು ತನ್ನ ತೋಳುಗಳಿಂದ ಹಿಡಿದಳು. ಅಷ್ಟರೊಳಗಾಗಿಯೇ ಇವನು ಎಚ್ಚರಗೊಂಡು ಇವಳು ತನ್ನನ್ನು ಕಟ್ಟಿಹಾಕುತ್ತಿರುವಳೆಂದು ತಿಳಿದನು. ||೮೦||

ಆಗ ಅವನು ಆ ದೇವಿಯನ್ನು ಮುಷ್ಟಿಯಿಂದ ಹೊಡೆದನು. ಇದರಿಂದ ಅವಳು ಸ್ವಲ್ಪ ಮೂರ್ಛೆಹೊಂದಿದಳು. ಅಷ್ಟರೊಳಗಾಗಿಯೇ ದೇವಿಯ ರಥದಲ್ಲಿದ್ದ ಶಕ್ತಿಗಳು ತಮ್ಮ ಶತ್ರುವು ಸಮೀಪಕ್ಕೆ ಬಂದಿರುವುದನ್ನು ತಿಳಿದು ಜಾಗರೂಕ ರಾದರು. ||೮೧||

ಕೋಟಿಶಸ್ತ್ರಂ ಸಮುತ್ಪೇತುರ್ವಾಹಿನೀ ಶಕ್ತಯೋಽಪಿ ಚ ।
ತಾವನ್ಮತ್ವಾ ಶಕ್ತಿಗಣಂ ದುಃಸಹಂ ದೈತ್ಯಶೇಖರಃ ॥೮೨॥

ಉತ್ಪ್ಲುತ್ಯ ಸ್ವರಥಂ ಪ್ರಾಪ್ತೋ ದೈತ್ಯಸೇನಾಮುಖಸ್ಥಿತಂ ।
ತತ್ರ ದೃಷ್ಟ್ವಾ ಮೃತಾನ್ ಪುತ್ರಾನ್ ಶೋಕಸಂವಿಗ್ನಮಾನಸಃ ॥೮೩॥

ವಿಲಪ್ಯ ಕಿಂಚಿದತ್ಯಂತ ರೋಷಾಽರುಣಿತ ಲೋಚನಃ ।
ಪ್ರಜ್ವಲನ್ ಶಕ್ತಿಸೇನಾಂ ತಾಂ ವಿಧಮುಚ್ಚೈರವರ್ಷಣೈಃ ॥೮೪॥

ದೃಷ್ಟ್ವಾ ವಿಶುಕ್ರಂ ಶಕ್ತೀನಾಂ ಸೇನಾಪ್ರಾಣಾಽಪಹಾರಿಣಂ ।
ಮಂತ್ರಿಣೀ ಸಾಯಕಾಽಽಸಾರೈರ್ಧನುರ್ಜೀಮೂತನಿಃಸೃತೈಃ ॥೮೫॥

ವವರ್ಷ ನೀಲಶೈಲೋಚ್ಚ ಶೃಂಗಂ ಪರ್ಜನ್ಯವದ್ಭೃಶಂ ।
ತೀಕ್ಷ್ಣಸಾಯಕಧಾರಾಭಿರ್ವಿಶುಕ್ರೋಽತ್ಯಂತ ವಿಕ್ಷತಃ ॥೮೬॥

ಆಗ ಕೋಟ್ಯಾಂತರ ಶಕ್ತಿಗಳೂ ಆ ಸೈನ್ಯದ ಇತರ ಶಕ್ತಿಗಳೂ ಕೂಡ ಅವನ ಮೇಲೆ ಬಿದ್ದವು. ಅಷ್ಟರೊಳಗಾಗಿ ರಾಕ್ಷಸಶ್ರೇಷ್ಠನಾದ ವಿಶುಕ್ರನು ಶಕ್ತಿಗಳ ಗುಂಪನ್ನು ಎದುರಿಸುವುದು ಕಷ್ಟವೆಂದು ಮನಗಂಡನು. ॥೮೨॥

ಕೂಡಲೇ ಹಾರಿ ಆವನು ರಾಕ್ಷಸಸೈನ್ಯದ ಮುಂಭಾಗದಲ್ಲಿದ್ದ ತನ್ನ ರಥಕ್ಕೆ ಬಂದನು. ಅಲ್ಲಿ ಅವನು ತನ್ನ ಮಕ್ಕಳು ಸತ್ತಿರುವುದನ್ನು ನೋಡಿ ದುಃಖದಿಂದ ಕಳವಳಗೊಂಡ ಮನಸ್ಸುಳ್ಳವನಾದನು. ॥೮೩॥

ಅವನು ಸ್ವಲ್ಪಕಾಲ ಅತ್ತನು. ಅನಂತರ ಕೋಪದಿಂದ ಕೆಂಪೇರಿರುವ ಕಣ್ಣುಗಳುಳ್ಳವನಾಗಿ ಉರಿಯುತ್ತಾ ತನ್ನ ಬಾಣವನ್ನು ಶಕ್ತಿಸೈನ್ಯಗಳ ಮೇಲೆ ಬೇಕಾದಷ್ಟು ಸುರಿಸಿದನು. ॥೮೪॥

ಶಕ್ತಿಗಳ ಪ್ರಾಣಗಳನ್ನು ಅಪಹಾರಮಾಡುತ್ತಿದ್ದ ವಿಶುಕ್ರನನ್ನು ಮಂತ್ರಿಣಿಯು ನೋಡಿ, ತನ್ನ ಬಿಲ್ಲೆಂಬ ಮೇಘದಿಂದ ಹೊರಡುತ್ತಿದ್ದ ಬಾಣಗಳ ಸುರಿಮಳೆಗಳನ್ನು ಅವನ ಮೇಲೆ ಸುರಿಸಿದಳು. ॥೮೫॥

ಆಕೆಯು, ಮೇಘವು ಕಪ್ಪುಪರ್ವತದ ಎತ್ತರವಾದ ಶಿಖರವನ್ನು ಹೇಗೋ ಹಾಗೆ, ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದಳು. ಆಕೆಯ ತೀಕ್ಷ್ಣವಾದ ಬಾಣಗಳ ಸುರಿಮಳೆಗಳಿಂದ ವಿಶುಕ್ರನು ಬಹಳ ಗಾಯಗೊಂಡನು. ॥೮೬॥

ದೇಹಕ್ಷತೇಭ್ಯೋಽತಿತರಾಮಸೃಗ್ಧಾರಾಂ ಮುಮೋಚ ವೈ ।
ನೀಲಾದ್ರಿರ್ವೃಷ್ಟಿಧಾರಾಭಿರ್ಗೈರಿಕಾರಸವತ್ಕ್ಷಣಂ ॥೮೭॥

ಮಂತ್ರಿಣ್ಯಾ ಗಾಢಸಂವಿದ್ಧೋ ರೋಷಾತ್ಪ್ರಜ್ವಲಿತಾಽಽಕೃತಿಃ ।
ವಿಚಿತ್ರಶಸ್ತ್ರಶಲಭೈರಾಚ್ಛಾದಯತ ಮಂತ್ರಿಣೀಂ ॥೮೮॥

ವಿರೇಜೇ ಮಂತ್ರಿಣೀ ಚ್ಛನ್ನಾ ದೈತ್ಯಶಸ್ತ್ರಮಧುವ್ರತೈಃ ।
ತಮಾಲಮಂಜರೀವಾಽತಿ ಮಕರಂದ ಸುಬೃಂಹಿತಾ ॥೮೯॥

ಕ್ಷಣೇನ ದೈತ್ಯಶಸ್ತ್ರಾಣಿ ನಿವಾರ್ಯ ಶರವರ್ಷಣೈಃ ।
ಆಕರ್ಣಪೂರ್ಣಭಲ್ಲೇನ ಧನುರ್ಜ್ಯಾಮಾಚ್ಛಿನದ್ದ್ರುತಂ ॥೯೦॥

ಯಾವಜ್ಜ್ಯಾಮಪರಾಂ ಚಾಪೇ ನಿವೇಶಯಿತುಮೀಹತೇ ।
ತಾವತ್ತೀಕ್ಷ್ಣ ಪೃಷತ್ಕೇನ ಮುಷ್ಟಿದೇಶೇ ಜಘಾನ ತಂ ॥೯೧॥

ಅವನ ದೇಹದ ಗಾಯಗಳಿಂದ ಬಹಳ ರಕ್ತದ ಪ್ರವಾಹವು ಹೊರಗೆ ಬರುತ್ತಿತ್ತು. ಆ ರಕ್ತಪ್ರವಾಹವು, ಕಪ್ಪುಪರ್ವತವು ಮಳೆನೀರಿನ ಪ್ರವಾಹದಿಂದ ಗೈರಿಕಾ ಎಂಬ ರಸದ ಪ್ರವಾಹವನ್ನು ಸುರಿಸುವಂತೆ, ಕ್ಷಣಕಾಲ ಕಾಣುತ್ತಿತ್ತು. ॥೮೭॥

ಮಂತ್ರಿಣಿಯ ಬಾಣಗಳ ಗಾಢಪ್ರಹಾರಕ್ಕೆ ತುತ್ತಾದ ವಿಶುಕ್ರನು ಕೋಪದಿಂದ ಉರಿಯುತ್ತಿರುವ ಆಕಾರವುಳ್ಳವನಾಗಿ ವಿಚಿತ್ರವಾದ ಶಸ್ತ್ರಗಳೆಂಬ ಶಲಭಗಳಿಂದ ಮಂತ್ರಿಣಿಯನ್ನು ಮುಚ್ಚಿದನು. ॥೮೮॥

ರಾಕ್ಷಸನ ಶಸ್ತ್ರಗಳೆಂಬ ದುಂಬಿಯ ಹುಳುಗಳಿಂದ ಮುಚ್ಚಿದ ಶರೀರವುಳ್ಳ ಮಂತ್ರಿಣೀದೇವಿಯು, ಬಹಳವಾಗಿ ಪುಷ್ಪರಸದಿಂದ ತುಂಬಿದ ಹೊಂಗೆಮರದ ಗೊಂಚಲಿನಂತೆ, ಶೋಭಿಸುತ್ತಿದ್ದಳು. ॥೮೯॥

ಅಕೆಯು ಕ್ಷಣಕಾಲದಲ್ಲಿಯೇ ತನ್ನ ಬಾಣಗಳ ಸುರಿಮಳೆಗಳನ್ನು ಸುರಿಸುವುದರ ಮೂಲಕ ಅವನ ಶಸ್ತ್ರಗಳನ್ನು ನಾಶಮಾಡಿ ಕಿವಿಯ ವರೆವಿಗೂ ಎಳೆದ ಭರ್ಜಿಯಿಂದ ಅವನ ಧನುಸ್ಸು ಮತ್ತು ಹೆದೆಗಳನ್ನೂ ಶೀಘ್ರವಾಗಿ ಕತ್ತರಿಸಿ ಹಾಕಿದಳು. ॥೯೦॥

ಅವನು ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಬಾಣವನ್ನು ಹೆದೆಗೇರಿಸುವಷ್ಟರಲ್ಲಿಯೇ ಆಕೆಯು ತೀಕ್ಷ್ಣವಾದ ಬಾಣಗಳಿಂದ ಅವನ ಮುಷ್ಟಿಪ್ರದೇಶಕ್ಕೆ ಹೊಡೆದಳು. ॥೯೧॥

ಗಾಢಪಿದ್ಧದೈತ್ಯಮುಷ್ಟೇಃ ದೈತ್ಯಸ್ಯ ಧನುರಾಪತತ್ ।
ಪತಿತಂ ಧನುರಾದಾತುಂ ಯಾವನ್ನಮ್ರೋ ಮಹಾಸುರಃ ॥೯೨॥

ತಾವದನ್ಯೇನಾಽಭಿಹನತ್ ಪತ್ರಿಣಾ ಮೂರ್ಧ್ನಿ ಮಂತ್ರಿಣೀ ।
ಸ ತಾವದಿಷುಣಾ ಭಿನ್ನ ಮೂರ್ಧಾ ಗಾಢ ಸುಮೂರ್ಛಯಾ ॥೯೩॥

ಅಪತತ್ಸ್ವರಥೋಪಸ್ಥೇ ವಜ್ರಾಹತ ಇವಾಽದ್ರಿರಾಟ್ ।
ಅಥ ಕ್ಷಣೇನ ಮಂತ್ರಿಣ್ಯಾ ನಾಶಿತಂ ದೈತ್ಯವಾಹನಂ ॥೯೪॥

ಸಾರಥಿಶ್ಛತ್ರಮುಕುಟೇ ಶಸ್ತ್ರಸಂಘಂ ಶರೈಃ ಪೃಥಕ್ ।
ತಾವನ್ಮೂರ್ಛಾವಿನಿರ್ಮುಕ್ತೋ ದದರ್ಶಾಽಹವಸಾಧನಂ ॥೯೫॥

ಸಾಕಲ್ಯೇನ ವಿನಷ್ಟಂ ತತ್ ಕ್ರುದ್ಧ ಉತ್ಪ್ಲುತ್ಯ ತಾಂ ರುಷಾ ।
ಶೀರ್ಣಂ ರಥಾಽಂಗಮಾದಾಯ ನಿಹಂತು ಮುಪಸಂಯಯೌ ॥೯೬॥

ಆಕೆಯ ಬಾಣದ ಗಾಢವಾದ ಪೆಟ್ಟಿಗೆ ಸಿಕ್ಕಿದ ಅವನ ಮುಷ್ಟಿಯ ಪ್ರದೇಶದಿಂದ ಅವನ ಧನುಸ್ಸು ಬಿದ್ದುಹೋಯಿತು. ಅದನ್ನು ಪುನಃ ಕೈಗೆ ತೆಗೆದುಕೊಳ್ಳಲು ಆ ಮಹಾರಾಕ್ಷಸನು ಬಗ್ಗಿದನು. ॥೯೨॥

ಅಷ್ಟರೊಳಗಾಗಿಯೇ ಮಂತ್ರಿಣಿಯು ಬೇರೊಂದು ಬಾಣದಿಂದ ಅವನ ತಲೆಗೆ ಹೊಡೆದಳು. ಆ ಬಾಣದ ಪೆಟ್ಟಿನಿಂದ ಅವನ ತಲೆಯು ಸೀಳಿದಂತಾಗಿ ಅವನು ಬಹಳ ಮೂರ್ಛಾಕ್ರಾಂತನಾದನು. ॥೯೩॥

ಆಗ ಆ ರಾಕ್ಷಸನು, ವಜ್ರಾಯುಧದ ಪೆಟ್ಟಿಗೆ ಸಿಕ್ಕಿದ ಪರ್ವತಶ್ರೇಷ್ಠದಂತೆ, ತನ್ನ ರಥದ ಸಮೀಪದಲ್ಲಿಯೇ ಬಿದ್ದನು. ಅನಂತರ ಮಂತ್ರಿಣಿಯು ಕ್ಷಣಕಾಲದಲ್ಲಿಯೇ ಆ ರಾಕ್ಷಸನ ವಾಹನವನ್ನು ನಾಶಮಾಡಿದಳು. ॥೯೪॥

ಅಲ್ಲದೇ ಮಂತ್ರಿಣಿಯು ಆ ರಾಕ್ಷಸನ ಛತ್ರಿ ಕಿರೀಟ ಇವುಗಳನ್ನೂ ಶಸ್ತ್ರಗಳ ಸಮೂಹಗಳನ್ನೂ ಬೇರೆ ಬೇರೆಯಾಗಿ ಬಾಣಪ್ರಯೋಗವನ್ನು ಮಾಡುವುದರ ಮೂಲಕ ಕತ್ತರಿಸಿದಳು. ಅಷ್ಟರೊಳಗಾಗಿಯೇ ಆ ರಾಕ್ಷಸನು ಮೂರ್ಛೆಯಿಂದ ತಿಳಿದೆದ್ದು ತನ್ನ ಯುದ್ಧಸಾಮಗ್ರಿಗಳೆಲ್ಲವೂ ನಾಶವಾಗಿರುವುದನ್ನು ಕಂಡನು. ॥೯೫॥

ಹೀಗೆ ಅವೆಲ್ಲವೂ ನಷ್ಟವಾಗಿರುವುದನ್ನು ಕಂಡು ವಿಶುಕ್ರನು ಕೋಪಗೊಂಡು ಮುರಿದುಬಿದ್ದಿದ್ದ ಚಕ್ರವನ್ನು ತೆಗೆದುಕೊಂಡು ಅದರಿಂದಲೇ ಆವಳನ್ನು ಕೊಲ್ಲಲು ಮೇಲೆ ಹಾರಿ ಹೋದನು. ॥೯೬॥

ತಾವದ್ದಕ್ಷಭುಜೇಽತ್ಯಂತ ವೇಗಾಚ್ಛರಮುಪಾತಯತ್ ।
ಶರೇಣಾಽಭಿಹತಾದ್ಧಸ್ತಾದ್ಪ್ರಥಾಽಂಗಂ ಪ್ರಾಪ ತತ್ಕ್ಷಿತೌ ॥೯೭॥

ತತೋ ಮುಷ್ಟಿಂ ಸಮುದ್ಯಮ್ಯ ರಥ ಆಪ್ಲುತ್ಯ ಸತ್ವರಂ ।
ಮಂತ್ರಿಣೀಹಸ್ತಗಂ ಚಾಪಂ ಭಙ್ತುಂ ಯಾವತ್ ಸಮಾಚ್ಛಿನತ್ ॥೯೮॥

ತಾವತ್ತೀಕ್ಷ್ಣೇಽಸಿನಾ ಕಾಯಾ ಚ್ಛಿರಸ್ತಸ್ಯ ನಿಪಾತಯತ್ ।
ದೃಷ್ಟ್ವಾ ವಿಶುಕ್ರಂ ನಿಹತಂ ವಿದ್ರುತಾ ದೈತ್ಯವಾಹಿನೀ ॥೯೯॥

ಪರಿಶಿಷ್ಟಾಽತಿವಿತ್ರಸ್ತಾ(ಃ) ಶಸ್ತ್ರಾಣ್ಯುತ್ಸೃಜ್ಯ ಸರ್ವತಃ ।
ಜಯಶಬ್ದಂ ಶಕ್ತಿಗಣಾಶ್ಚಕ್ರುರ್ದೇವಮುಖಾ ಅಪಿ ॥೧೦೦॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ವಿಶುಕ್ರವಧೋ ನಾಮ
ಚತುಸ್ಸಪ್ತತಿತಮೋಽಧ್ಯಾಯಃ

ಅಷ್ಟರೊಳಗಾಗಿಯೇ ಆಕೆಯು ಅವನ ಬಲತೋಳಿಗೆ ಬಾಣಪ್ರಯೋಗವನ್ನು ಮಾಡಿ ಅದನ್ನು ಬೀಳಿಸಿದಳು. ಆಕೆಯ ಬಾಣಪ್ರಹಾರದಿಂದ ಅವನ ಬಲತೋಳು ಭೂಮಿಯಮೇಲೆ ಬಿದ್ದಿತು. ॥೯೭॥

ಅನಂತರ ಅವನು ಮುಷ್ಟಿಯನ್ನೆತ್ತಿ ಆಕೆಯ ರಥಕ್ಕೆ ಶೀಘ್ರವಾಗಿ ಹಾರಿ ಮಂತ್ರಿಣಿಯ ಕೈಯ್ಯಲ್ಲಿರುವ ಬಿಲ್ಲನ್ನು ಮುರಿಯಲು ಪ್ರಯತ್ನಪಟ್ಟನು. ॥೯೮॥

ಅಷ್ಟರೊಳಗಾಗಿಯೇ ಆಕೆಯು ತನ್ನ ತೀಕ್ಷ್ಣವಾದ ಕತ್ತಿಯಿಂದ ಅವನ ದೇಹದಿಂದ ತಲೆಯನ್ನು ಕೆಳಗೆ ಬೀಳಿಸಿದಳು. ವಿಶುಕ್ರನು ಹೀಗೆ ನಾಶವಾದುದನ್ನು ನೋಡಿ ರಾಕ್ಷಸಸೈನ್ಯವು ಪಲಾಯನಮಾಡಿತು. ॥೯೯॥

ಬಹಳ ಭಯಗೊಂಡ ಉಳಿದ ರಾಕ್ಷಸರು ತಮ್ಮ ಶಸ್ತ್ರಗಳನ್ನು ಅಲ್ಲಿಯೇ ಬಿಟ್ಟು ಎಲ್ಲಾ ಕಡೆಗೂ ಓಡಿಹೋದರು. ಶಕ್ತಿಗಳ ಗುಂಪಿನವರೂ ಕೂಡ ಜಯ ಜಯಕಾರವನ್ನು ಮಾಡಿದರು. ॥೧೦೦॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ವಿಶುಕ್ರನ ವಧೆ ಎಂಬ
ಎಪ್ಪತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಪಂಚಸಪ್ತತಿತಮೋಽಧ್ಯಾಯಃ ||

ಎಪ್ಪತ್ತೈದನೆಯ ಅಧ್ಯಾಯವು

ವಿಷಂಗೇನಾಪಿ ವಾರಾಹೀ ಸಂಗತಾ ಸಮರೇ ಯದಾ ।
ತದಾ ದೈತ್ಯಶಕ್ತಿಚಮ್ವೋರಭವದ್ಭೈರವೋ ರಣಃ ॥೧॥

ಶಕ್ತೀನಾಂ ಖಡ್ಗಚಕ್ರಾಽಸಿಪರಿಘಪ್ರಾಸತೋಮರೈಃ ।
ವಟುಕಾನಾಂ ತ್ರಿಶೂಲಾದ್ಯೈಃ ದೈತ್ಯಾ ಭೂಯೋಽಭಿವಿಕ್ಷತಾಃ ॥೨॥

ತಿಲಶಃ ಛಿನ್ನವರ್ಷ್ಮಾಣಿ ಜಹುಃ ಪ್ರಾಣಾನ್ ರಣಾಽಜಿರೇ ।
ದೃಷ್ಟ್ವಾ ದೈತ್ಯಚಮೂಂ ಶಕ್ತಿಗಣೈಃ ಪ್ರಾಯೋ ವಿನಾಶಿತಾಂ ॥೩॥

ವಿಷಂಗರಾಕ್ಷಸನೊಂದಿಗೆ ವಾರಾಹೀ ಎಂಬ ಶಕ್ತಿಯು ಯುದ್ಧಕ್ಕೆ ತೊಡಗಿದ ಕೂಡಲೇ ರಾಕ್ಷಸಸೈನ್ಯ ಮತ್ತು ಶಕ್ತಿಸೈನ್ಯಗಳಿಗೆ ಭಯಂಕರವಾದ ಯುದ್ಧವಾಯಿತು. ||೧||

ಶಕ್ತಿಗಳ ಕತ್ತಿ, ಚಕ್ರಾಯುಧ, ಮತ್ತು ಪರಿಘಾಯುಧ ಇವುಗಳಿಂದಲೂ ವಟುಕಾ ಎಂಬ ಶಕ್ತಿಗಳ ತ್ರಿಶೂಲ ಮುಂತಾದ ಆಯುಧಗಳಿಂದಲೂ ರಾಕ್ಷಸರಿಗೆ ಪುನಃಪುನಃ ಗಾಯಗಳಾಗುತ್ತಿದ್ದವು. ||೨||

ಅನೇಕ ರಾಕ್ಷಸರ ದೇಹವು ಕತ್ತರಿಸಿಹೋಗಿ ಅವರು ಯುದ್ಧರಂಗದಲ್ಲಿ ಪ್ರಾಣವನ್ನು ಬಿಟ್ಟರು. ಶಕ್ತಿಗಳ ಸಮೂಹಗಳು ಪ್ರಾಯಶಃ ರಾಕ್ಷಸರ ಸೈನ್ಯಗಳೆಲ್ಲ ವನ್ನೂ ನಾಶಮಾಡಿದ್ದುದನ್ನು ವಿಷಂಗರಾಕ್ಷಸನ ಮಕ್ಕಳು ಕಂಡರು. ||೩||

ಕ್ರುದ್ಧಾಽಭಿದುದ್ರುವುಃ ಶಕ್ತಿಚಮೂಂ ಪರ್ವತಸನ್ನಿಭಾಃ ।
ವಿಷಂಗಪುತ್ರಾಃ ಪ್ರೋದ್ದಂಡ ವಿಕ್ರಮಾ ವೀರ್ಯವತ್ತರಾಃ ॥೪॥

ಕರಾಲವಕ್ತ್ರೋ ವಿಶಿಖೋ ವಿಭಾಂಡೋ ವಿಕಟೇಕ್ಷಣಃ ।
ಇಂದ್ರಶತ್ರುಃ ಸುರಾಽರಾತಿಃ ಮಹಾಕುಕ್ಷಿರ್ಮದೋದ್ಧತಃ ॥೫॥

ಏತೇಽಷ್ಟೌ ಭೀಮಬಲಿನೋ ಶಕ್ತೀರ್ಜಘ್ನುಃ ಸಮಂತತಃ ।
ತೈರ್ಹನ್ಯಮಾನಾಂ ತಾಂ ಶಕ್ತಿವಾಹಿನೀ ಮಭಿವೀಕ್ಷ್ಯತು ॥೬॥

ಅಭ್ಯಾಯಯುಸ್ತಾಂ ನಿಯೋದ್ಧುಂ ಜಂಭಿನೀ ಸ್ತಂಭಿನೀತಥಾ ।
ಅಂಧಿನೀ ಮೋಹಿನೀ ಚೈವ ಭೈರವಾ ಕಾಲಕರ್ಷಿಣೀ ॥೭॥

ಸ್ವಪ್ನೇಶ್ವರೀ ಚ ವಟುಕಾ ಇತ್ಯಷ್ಟೌ ಸುವಿಭೀಷಣಾಃ ।
ಕರಾಲವಕ್ತ್ರೇಣ ಯುಧಿ ಜಂಭಿನೀ ಸಂಗತಾಽಭವತ್ ॥೮॥

ಪರ್ವತಕ್ಕೆ ಸಮಾನವಾದ ಪ್ರಚಂಡ ಪರಾಕ್ರಮವುಳ್ಳ ಬಹಳ ಬಲಿಷ್ಠರಾದ ವಿಷಂಗನ ಮಕ್ಕಳು ಬಹಳ ಕೋಪಗೊಂಡು ಶಕ್ತಿಗಳ ಸೈನ್ಯಗಳಿಗೆದುರಾಗಿ ಓಡಿಬಂದರು. ॥೪॥

ಕರಾಲವಕ್ತ್ರ, ವಿಶಿಖ, ವಿಭಾಂಡ, ವಿಕಟೇಕ್ಷಣ, ಇಂದ್ರಶತ್ರು, ಸುರಾರಾತಿ, ಮಹಾಕುಕ್ಷಿ, ಮದೋದ್ಧತ, ಎಂಬುವರು ವಿಷಂಗನ ಮಕ್ಕಳೆಂದು ತಿಳಿಯಬೇಕು. ॥೫॥

ಇವರು ಎಂಟು ಮಂದಿ ಭಯಂಕರ ಪರಾಕ್ರಮವುಳ್ಳ ವಿಷಂಗನ ಮಕ್ಕಳು ಶಕ್ತಿಗಳನ್ನು ಎಲ್ಲಾ ಕಡೆಯಲ್ಲಿಯೂ ಕೊಲ್ಲುತ್ತಾಬಂದರು. ಇವರು ಕೊಲ್ಲುತ್ತಿರುವ ಶಕ್ತಿಸೈನ್ಯವನ್ನು ಜಂಭಿನಿಯೇ ಮುಂತಾದ ಶಕ್ತಿಯರು ನೋಡಿದರು. ॥೬॥

ಇವರ ಜೊತೆಯಲ್ಲಿ ಯುದ್ಧಮಾಡಲು ಜಂಭಿನೀ, ಸ್ತಂಭಿನೀ, ಅಂಧಿನೀ, ಮೋಹಿನೀ, ಭೈರವಾ, ಕಾಲಕರ್ಷಿಣೀ, ಎಂಬ ಶಕ್ತಿಯರು ಬಂದರು. ಅಲ್ಲದೆ ॥೭॥

ಸ್ವಪ್ನೇಶ್ವರೀ, ವಟುಕಾ, ಎಂಬ ಈ ಎಂಟುಮಂದಿ ಭಯಂಕರಿಯರಾದ ಶಕ್ತಿಯರು ರಾಕ್ಷಸರೊಂದಿಗೆ ಯುದ್ಧಮಾಡಲು ಬಂದರು. ಕರಾಲವಕ್ತ್ರರಾಕ್ಷಸನೊಂದಿಗೆ ಯುದ್ಧಮಾಡಲು ಜಂಭಿನೀ ಶಕ್ತಿಯು ಸಿದ್ಧಳಾದಳು. ॥೮॥

ಯುದ್ಧ್ವಾ ಚಿರಂ ತಯಾ ಸಾಕಂ ಶಸ್ತ್ರಾಸ್ತ್ರೈರ್ದೈತ್ಯಪುಂಗವಃ ।
ಗದಯಾಽಭಿಜಘಾನಾಽಽಶು ವರಾಹಂ ಶಕ್ತಿವಾಹನಮ್ ॥೯॥

ತಾಡಿತೋ ಜಂಭಿನೀವಾಹೋ ಶೂಕರೋ ಭಿನ್ನಮಸ್ತಕಃ ।
ಈಷತ್ಪ್ರಪಾತ ಪುರತೋ ಜಾನುಭ್ಯಾಮವನೀಂ ಗತಃ ॥೧೦॥

ತಾವತ್ಕ್ರುದ್ಧಾ ಜಂಭಿನೀ ಚ ಖಡ್ಗೇನ ಶಿರ ಆಹರತ್ ।
ವಿಶಿಖಃ ಸ್ತಂಭಿನೀಂ ಪ್ರಾಪ್ಯ ಯುಯೋಧಾಽತಿಬಲೀ ದೃಢಂ ॥೧೧॥

ಸ್ತಂಭಿನೀ ಹರಿಣಾಽಽರೂಢಾ ವಿಶಿಖೈರ್ವಿಶಿಖಂ ತ್ರಿಭಿಃ ।
ಜಘಾನ ತೈಃ ಮೂರ್ಧ್ನಿಲಗ್ನೈರ್ವಿಶಿಖೋಽತಿವ್ಯರಾಜತ ॥೧೨॥

ತ್ರಿಶೃಂಗ ಇವ ದೈತ್ಯೇಂದ್ರಃ ಸುಸ್ರಾವ ಬಹುಶೋಣಿತಂ ।
ಸೋಽಪಿ ಕ್ರುದ್ಧೋಽತಿವೇಗೇನ ತೀಕ್ಷ್ಣಧಾರೇಣ ಕರ್ಣಿನಾ ॥೧೩॥

ರಾಕ್ಷಸ ಶ್ರೇಷ್ಠನಾದ ಕರಾಲವಕ್ತ್ರಾಸುರನು ಬಹಳಕಾಲದವರೆಗೆ ಅವಳೊಂದಿಗೆ ಶಸ್ತ್ರಾಸ್ತ್ರಗಳಿಂದ ಯುದ್ಧ ಮಾಡಿ ಜಂಭಿನೀಶಕ್ತಿಯ ವಾಹನವಾದ ವರಾಹಕ್ಕೆ ಗದೆಯಿಂದ ಶೀಘ್ರವಾಗಿ ಬಲವಾಗಿ ಹೊಡೆದನು. ||೯||

ಜಂಭಿನೀಶಕ್ತಿಯ ವಾಹನವಾದ ಹಂದಿಯ ತಲೆಯು ಗದೆಯ ಬಡಿತಕ್ಕೆ ಸಿಕ್ಕಿ ಸೀಳಿಹೋಗಿ ಸ್ವಲ್ಪ ಹೊತ್ತಿನಲ್ಲೇ ಮೊಣಕಾಲನ್ನು ಮುಂದೆ ಮಾಡಿಕೊಂಡು ಭೂಮಿಯಮೇಲೆ ಬಿದ್ದುಬಿಟ್ಟಿತು. ||೧೦||

ಅಷ್ಟರೊಳಗಾಗಿ ಜಂಭಿನಿಯು ಕೋಪಗೊಂಡು ತನ್ನ ಕತ್ತಿಯಿಂದ ಅವನ ತಲೆಯನ್ನು ಕತ್ತರಿಸಿದಳು. ಅನಂತರ ಸ್ತಂಭಿನೀಶಕ್ತಿಯೊಂದಿಗೆ ಬಹಳ ಬಲಿಷ್ಠನಾದ ವಿಶಿಖ ರಾಕ್ಷಸನು ಬಲವಾಗಿ ಯುದ್ಧವನ್ನು ಮಾಡಿದನು. ||೧೧||

ಸ್ತಂಭಿನೀಶಕ್ತಿಯು ಜಿಂಕೆಯ ಮೇಲೇರಿ ಮೂರು ಬಾಣಗಳಿಂದ ವಿಶಿಖನ ತಲೆಗೆ ಗುರಿಯಿಟ್ಟು ಹೊಡೆದಳು. ಆ ಮೂರು ಬಾಣಗಳೂ ಅವನ ತಲೆಗೆ ನೆಟ್ಟುಕೊಂಡು ಇರಲು ಅವನು ಬಹಳವಾಗಿ ಪ್ರಕಾಶಿಸುತ್ತಿದ್ದನು. ||೧೨||

ಆಗ ಆ ರಾಕ್ಷಸಶ್ರೇಷ್ಠನು ಮೂರು ಶಿಖರಗಳುಳ್ಳ ಪರ್ವತದಂತೆ ಕಾಣುತ್ತಾ ಬಹಳ ರಕ್ತವನ್ನು ಸುರಿಸಿದನು. ಅವನೂ ಕೂಡ ಕೋಪಗೊಂಡು ಕಿವಿಯವರೆಗೂ

ಧನುರ್ಜ್ಯಾಗ್ರಮಾಚ್ಛಿನದ್ಭೂಯೋ ವಿಕೀರ್ಯ ನಿಶಿತೈಃ ಶರೈಃ ।
ತಾವತ್ಕ್ರುದ್ಧಾ ಸ್ತಂಭಿನೀ ಚ ಗಾರ್ಧ್ರಪತ್ರೇಣ ತೇಜಿನಾ ॥೧೪॥

ತದ್ವಾಹನೋಷ್ಟ್ರಮನಯಚ್ಛಿತ್ವಾಽಂತಕಪುರಂ ಪ್ರತಿ ।
ಅಥ ತಸ್ಯ ಕ್ಷಣೇನೈವ ನಿಶಿತೈರ್ವಿಶಿಖೈ ಸ್ತ್ರಿಭಿಃ ॥೧೫॥

ನಿಷಂಗಂ ಮುಕುಟಂ ಚಾಪಂ ಚಿಚ್ಛೇದ ಯುಗಪದ್ಯುಧಿ ।
ಸ ಛಿನ್ನಧನ್ವಾಽತಿರುಷಾ ತ್ರಿಶೂಲಮತಿಭಾಸ್ವರಂ ॥೧೬॥

ಸ್ತಂಭಿನೀಂ ಪ್ರತಿ ಚಿಕ್ಷೇಪ ತಾವತ್ಸಾ ಲಘುವಿಕ್ರಮಾ ।
ಛಿತ್ವಾ ತ್ರಿಶೂಲಂ ಭಲ್ಲೇನ ಶಿರೋ ದೈತ್ಯಸ್ಯ ಪಾತಯತ್ ॥೧೭॥

ಎಳೆದ ತೀಕ್ಷ್ಣವಾದ ಮುಖವುಳ್ಳ ಬಾಣದಿಂದ ಬಹಳ ವೇಗವಾಗಿ ಅವಳಿಗೆ ಹೊಡೆದನು. ॥೧೩॥

ಅನಂತರ ಅವನು ತನ್ನ ತೀಕ್ಷ್ಣವಾದ ಬಾಣಗಳನ್ನು ಪುನಃಪುನಃ ಪ್ರಯೋಗಿಸಿ ಆಕೆಯ ಧನುಸ್ಸು ಮತ್ತು ಹೆದೆಗಳನ್ನು ಕತ್ತರಿಸಿದನು. ಅಷ್ಟರೊಳಗಾಗಿ ಕೋಪಗೊಂಡ ಸ್ತಂಭಿನೀಶಕ್ತಿಯೂ, ಹದ್ದಿನ ಗರಿಯುಳ್ಳ ಚೂಪಾದ ಬಾಣವನ್ನು ಅವನ ವಾಹನವಾದ ಒಂಟೆಗೆ ಹೊಡೆದಳು. ॥೧೪॥

ಈ ರೀತಿಯಲ್ಲಿ ಬಾಣವನ್ನು ಪ್ರಯೋಗಿಸುವುದರ ಮೂಲಕ ಸ್ತಂಭಿನೀ ಶಕ್ತಿಯು ಅವನ ವಾಹನವಾದ ಒಂಟೆಯನ್ನು ಯಮನ ಪಟ್ಟಣಕ್ಕೆ ಕಳುಹಿಸಿದಳು. ಅನಂತರ ಆಕೆಯು ತೀಕ್ಷ್ಣವಾದ ಮೂರು ಬಾಣಗಳಿಂದ ಕ್ಷಣಕಾಲದಲ್ಲಿಯೇ ನಿಷಂಗನಿಗೆ ಹೊಡೆದಳು. ॥೧೫॥

ಆಕೆಯು ಹೀಗೆ ಬಾಣಪ್ರಯೋಗವನ್ನು ಏಕಕಾಲದಲ್ಲಿ ಮಾಡಿ, ಯುದ್ಧದಲ್ಲಿ ಅವನ ಬತ್ತಳಿಕೆ, ಕಿರೀಟ ಮತ್ತು ಬಿಲ್ಲುಗಳನ್ನು ಕತ್ತರಿಸಿದಳು. ಅವನ ಧನುಸ್ಸು ಕತ್ತರಿಸಿಹೋಗಲು ತುಂಬ ಕೋಪದಿಂದ ಬಹಳ ಪ್ರಕಾಶಮಾನವಾದ ತ್ರಿಶೂಲವನ್ನು ಕೈಗೆ ತೆಗೆದುಕೊಂಡನು. ॥೧೬॥

ಅದರಿಂದ ಆ ರಾಕ್ಷಸನು ಸ್ತಂಭಿನಿಗೆ ಪ್ರತಿಯಾಗಿ ಹೊಡೆದನು. ಅಷ್ಟರೊಳಗಾಗಿಯೇ ಹಗುರವಾದ ಪರಾಕ್ರಮವುಳ್ಳ ಆವಳು ಅವನ ತ್ರಿಶೂಲವನ್ನು ತನ್ನ

ಅಂಧಿನ್ಯಾ ಯುಯುಧೇ ತತ್ರ ವಿಭಂಡೋ ಬಲಗರ್ವಿತಃ ।
ಶಸ್ತ್ರೈರಸ್ತ್ರೈರನೇಕೈಶ್ಚ ಕೃತಪ್ರತಿಕೃತೈರಯಂ ॥೧೮॥

ಅಂಧಿನೀ ಮಹಿಷಾಽಽರೂಢಾ ವಿಭಂಡಃ ಖರವಾಹನಃ ।
ಚಿರಂ ಯುದ್ಧ್ವಾ ತೇನ ತತ್ರ ಕರ್ಣಾಂತಾಽಽಕೃಷ್ಟಪತ್ರಿಣಾ ॥೧೯॥

ಜಘಾನ ದೈತ್ಯ ಮುರಸಿ ತಥಾ ವಿದ್ಧೋ ವಿಭಂಡಕಃ ।
ಪಪಾತ ಮೂರ್ಛಿತೋ ಗಾಢಂ ಛಿನ್ನಪಕ್ಷ ಇವಾಽದ್ರಿರಾಟ್ ॥೨೦॥

ಅಥ ತದ್ವಾಹನಃ ಖರೋ ಪರ್ವತಾಽಽಭೋಽತಿಧೂಸರಃ ।
ಕ್ವಾಶಬ್ದಂ ಭೀಷಣಂ ಕೃತ್ವಾ ಸಮುನ್ನಮ್ಯ ಚ ಬಾಲಧಿಂ ॥೨೧॥

ಭರ್ಜಿಯಿಂದ ಕತ್ತರಿಸಿ ಅನಂತರ ಅದರಿಂದಲೇ ಆ ರಾಕ್ಷಸನ ಶಿರಸ್ಸನ್ನು ಕತ್ತರಿಸಿ ಕೆಳಗೆ ಬೀಳಿಸಿದಳು. ॥೧೭॥

ಬಲದಿಂದ ಕೊಬ್ಬಿದ್ದ ವಿಭಂಡನು ಅಂಧಿನೀಶಕ್ತಿಯೊಂದಿಗೆ ಯುದ್ಧಮಾಡಿದನು. ಇವನು ಆಕೆಯು ಪ್ರಯೋಗಿಸುವ ಶಸ್ತ್ರಗಳಿಗೆ ಪ್ರತಿಯಾದ ಶಸ್ತ್ರಗಳನ್ನು ಪ್ರಯೋಗಿಸುತ್ತಿದ್ದನು. ॥೧೮॥

ಅಂಧಿನೀಶಕ್ತಿಯು ಕೋಣನಮೇಲೇರಿದವಳಾಗಿಯೂ, ವಿಭಂಡನು ಕತ್ತೆಯ ವಾಹನವುಳ್ಳವನಾಗಿಯೂ, ಬಹಳ ಕಾಲ ಯುದ್ಧಮಾಡುತ್ತಿದ್ದರು. ಕೊನೆಗೆ ಆ ಶಕ್ತಿಯು ಕಿವಿಯ ವರೆವಿಗೂ ಸೆಳೆದ ಬಾಣವನ್ನು ಅವನಿಗೆ ಬಿಟ್ಟಳು. ॥೧೯॥

ಆ ಶಕ್ತಿಯು ರಾಕ್ಷಸನ ವಕ್ಷಸ್ಥಳಕ್ಕೆ ಬಾಣಪ್ರಯೋಗಮಾಡಿದಳು. ಅದರ ಗಾಢಪ್ರಹಾರದಿಂದ ವಿಭಂಡಕನು ರೆಕ್ಕೆಯನ್ನು ಕತ್ತರಿಸಿರುವ ಪರ್ವತ ಶ್ರೇಷ್ಠದಂತೆ ಗಾಢಮೂರ್ಛಾಕ್ರಾಂತನಾಗಿ ಕೆಳಗೆ ಭೂಮಿಯಮೇಲೆ ಬಿದ್ದು ಬಿಟ್ಟನು. ॥೨೦॥

ಅನಂತರ ಪರ್ವತಕ್ಕೆ ಸಮಾನವಾಗಿ ಎತ್ತರವಾಗಿದ್ದ ಬಹಳ ಮಾಸಲು ಬಣ್ಣವಾದ ಅವನ ವಾಹನವಾದ ಕತ್ತೆಯು ಕ್ವ, ಎಂಬ ಭಯಂಕರವಾದ ಶಬ್ದವನ್ನು ಮಾಡಿ, ತನ್ನ ಬಾಲವನ್ನೆತ್ತಿಕೊಂಡು ಶಕ್ತಿ ಸೈನ್ಯದೊಳಗೆ ನುಗ್ಗಿತು. ॥೨೧॥

ನಿವಿಷ್ಟಃ ಶಕ್ತಿಸೇನಾಸು ಸಂಸ್ತಬ್ಧಾಂಗರುಹೋ ಬಲೀ ।
ಕಾಶ್ಚಿತ್ಪ್ರತ್ಯಕ್ಪಾದಘಾತೈಃ ದಶನೈಶ್ಚಾವಧೂನನೈಃ ॥೨೨॥

ಅನ್ಯಾಃ ಸ್ವಗತಿವೇಗೇನ ಖರಃ ಶಕ್ತೀರ್ನಿಪಾತಯತ್ ।
ಏವಂ ಶಕ್ತೀರ್ವಿನಿಘ್ನಂತಂ ಖರಂ ದೃಷ್ಟ್ವಾಽಂಧಿನೀ ತದಾ ॥೨೩॥

ಶರೇಣಾಽಕರ್ಣಪೂರ್ಣೇನ ಜಘಾನಾಽತಿ ರುಷಾಽನ್ವಿತಾ ।
ಸ ವಿದ್ಧಸ್ತೀಕ್ಷ್ಣಬಾಣೇನ ಮೂರ್ಛಿತಃ ಪ್ರಾಪತದ್ಭುವಿ ॥೨೪॥

ತಾವನ್ಮೂರ್ಛಾವಿನಿರ್ಮುಕ್ತೋ ವಿಭಂಡೋಽತ್ಯಂತ ರೋಷಿತಃ ।
ವೇಗೇನ ಗದಯಾ ತಸ್ಯಾ ವಾಹನಂ ತಾಡಯದ್ಬಲೀ ॥೨೫॥

ಅಂಧಿನೀವಾಹಮಹಿಷ ಸ್ತಾಡಿತೋ ಗದಯಾ ಭೃಶಂ ।
ವಿದ್ರುತ್ಯ ಮನ್ಯುಜ್ವಲಿತಸ್ತಂ ಶೃಂಗಾಭ್ಯಾಂ ಸಮಾಕ್ಷಿಪತ್ ॥೨೬॥

ಬಲಶಾಲಿಯಾದ ಕತ್ತೆಯು ತನ್ನ ದೇಹದ ಕೂದಲುಗಳನ್ನೆಲ್ಲವನ್ನೂ ನೆಟ್ಟಗೆ ನಿಲ್ಲಿಸಿಕೊಂಡು ಶಕ್ತಿಸೈನ್ಯದೊಳಗಡೆಗೆ ನುಗ್ಗಿ ಕೆಲವರನ್ನು ಹಿಂಭಾಗದ ಕಾಲುಗಳಿಂದ ಒದೆಯೋಣದರಿಂದಲೂ, ಕಡಿಯೋಣದರಿಂದಲೂ, ಎತ್ತಿ ಎಸೆಯೋಣದರಿಂದಲೂ, ಬೀಳಿಸುತ್ತಿತ್ತು. ॥೨೨॥

ಕತ್ತೆಯು ಕೆಲವು ಶಕ್ತಿಗಳನ್ನು ತಾನು ವೇಗವಾಗಿ ಅವರಲ್ಲಿಗೆ ಓಡಿ ಅವರನ್ನು ಕೆಳಗೆ ಬೀಳಿಸಿತು. ಈರೀತಿಯಾಗಿ ಶಕ್ತಿಗಳನ್ನು ನಾಶಮಾಡುತ್ತಿದ್ದ ಕತ್ತೆಯನ್ನು ಅಂಧಿನೀಶಕ್ತಿಯು ನೋಡಿದಳು. ॥೨೩॥

ಅಂಧಿನೀಶಕ್ತಿಯು ಬಹಳ ಕೋಪದಿಂದ ಕೂಡಿದವಳಾಗಿ ಕಿವಿಯವರೆಗೂ ಬಾಣವನ್ನು ಎಳೆದು ಅದರ ಮೇಲೆ ಪ್ರಯೋಗಿಸಿದಳು. ಆಕೆಯ ತೀಕ್ಷ್ಣವಾದ ಬಾಣದ ಪೆಟ್ಟಿಗೆ ಸಿಕ್ಕಿಬಿದ್ದ ಆ ಕತ್ತೆಯು ಮೂರ್ಛೆಗೊಂಡು ಭೂಮಿಯಮೇಲೆ ಬಿದ್ದಿತು. ॥೨೪॥

ಅಷ್ಟರೊಳಗಾಗಿ ಮೂರ್ಛೆಯಿಂದ ತಿಳಿದೆದ್ದ ಭಂಡರಾಕ್ಷಸನು ಬಹಳ ಕೋಪಗೊಂಡು ವೇಗವಾಗಿ ತನ್ನ ಗದೆಯಿಂದ ಆಕೆಯ ವಾಹನಕ್ಕೆ ಹೊಡೆದನು. ॥೨೫॥

ಅಂಧಿನೀಶಕ್ತಿಯ ವಾಹನವಾದ ಕೋಣವನ್ನು ವಿಭಂಡರಾಕ್ಷಸನು ಚೆನ್ನಾಗಿ ಹೊಡೆದನು. ಅದು ಅತ್ಯಂತವಾಗಿ ಕೋಪಗೊಂಡು ಆ ರಾಕ್ಷಸನನ್ನು ತನ್ನ ಕೊಂಬುಗಳಿಂದ ತಿವಿದು, ಎತ್ತಿ ಎಸೆಯಿತು. ॥೨೬॥

ವಿಭಂಢೋ ಮಹಿಷಾಽಽಕ್ಷಿಪ್ತ ಆಕಾಶಂ ಪ್ರಾಪ್ಯ ವೇಗತಃ ।
ಪರತೋ ಯೋಜನಾದ್ಭೂಮೌ ಪಪಾತ ಸುವಿಮೂರ್ಛಿತಃ ॥೨೭॥

ತಾವದಭ್ಯಾಯಯೌ ತಸ್ಯ ವಾಹನೋ ರಾಸಭಶೇಖರಃ ।
ಮುಂಚನ್ ಸುಶೀಘ್ರಂ ಕ್ವಾಶಬ್ದಂ ಸಘುರ್ಘುರಮಹಾರವಂ ॥೨೮॥

ಆಗತ್ಯ ಮಹಿಷಂ ಭೂಯಃ ಪರಾವೃತ್ಯ ಸುವೇಗತಃ ।
ಪಾಶ್ಚಾತ್ಯಪಾದಘಾತೇನ ಸಂತಾಡ್ಯ ಬಲವತ್ತರಂ ॥೨೯॥

ದದಂಶ ತಂ ಪುನಃ ಕಂಠೇ ತಾವತ್ಕ್ರುದ್ಧಃ ಸ ಸೈರಿಭಃ ।
ಶೃಂಗಾಭ್ಯಾಂ ದಾರಯತ್ ಕುಕ್ಷಿಂ ಭೂಮಾವಾಸ್ಫಾಲ್ಯ ವೇಗತಃ॥೩೦॥

ನಿರ್ಗತಾಂತ್ರಃ ಖರೋ ಮೃತ್ಯುಂ ಪ್ರಾಪ ನಿರ್ಯಾತಿತೇಕ್ಷಣಃ ।
ವಿಮೂರ್ಛಸ್ತಾವದಭ್ಯೇತ್ಯ ವಿಭಂಡೋಽಭಿಹನತ್ಪದಾ ॥೩೧॥

ವಿಭಂಡರಾಕ್ಷಸನನ್ನು ಕೋಣವು ಎತ್ತಿ ಎಸೆಯಲಾಗಿ ಅವನು ವೇಗವಾಗಿ ಆಕಾಶವನ್ನು ಹೊಂದಿ ಒಂದು ಯೋಜನಕ್ಕಿಂತಲೂ ಹೆಚ್ಚಾದ ದೂರದಲ್ಲಿ ಭೂಮಿಗೆ ಬಿದ್ದು ವಿಶೇಷವಾಗಿ ಮೂರ್ಛಾಕ್ರಾಂತನಾದನು. ॥೨೭॥

ಅಷ್ಟರೊಳಗಾಗಿ ಅವನ ವಾಹನವಾದ ಶ್ರೇಷ್ಠಕತ್ತೆಯು ಕ್ವಾ, ಎಂದರಚುತ್ತಾ ಘುರ್, ಘುರ್, ಎಂದು ಭಯಂಕರ ಶಬ್ದವನ್ನೂ ಮಾಡುತ್ತಾ, ಶೀಘ್ರವಾಗಿ ಅವನ ಹತ್ತಿರಕ್ಕೆ ಓಡಿಬಂದಿತು. ॥೨೮॥

ಆ ಕತ್ತೆಯು ಪುನಃ ಆ ಕೋಣವನ್ನು ವೇಗವಾಗಿ ಹಿಂತಿರುಗಿಸಿ ತನ್ನ ಹಿಂಭಾಗದ ಕಾಲುಗಳಿಂದ ಒದೆಯುತ್ತಾ ಬಹಳ ಬಲವಾಗಿ ಅದಕ್ಕೆ ಹೊಡೆಯಿತು. ॥೨೯॥

ಬಹಳ ಕೋಪಗೊಂಡ ಆ ಕೋಣನು ಆ ಕತ್ತೆಯ ಕತ್ತನ್ನು ಚೆನ್ನಾಗಿ ಕಚ್ಚಿತು. ಅಲ್ಲದೇ ಅದು ಕತ್ತೆಯನ್ನು ವೇಗವಾಗಿ ಭೂಮಿಗೆ ಅಪ್ಪಳಿಸಿ ಕೊಂಬುಗಳಿಂದ ತಿವಿದು ಸೀಳಿತು. ॥೩೦॥

ಕತ್ತೆಯ ಕರುಳು ಸೀಳಿ ಹೋಗಿ ಅದರ ಕಣ್ಣುಗಳೂ ಕಿತ್ತು ಹೋದ್ದರಿಂದ ಅದು ಮರಣವನ್ನು ಹೊಂದಿತು. ಅಷ್ಟರೊಳಗಾಗಿ ಮೂರ್ಛೆಯಿಂದ ತಿಳಿದೆದ್ದ ವಿಭಂಡ ರಾಕ್ಷಸನು ಕೋಣವನ್ನು ತನ್ನ ಪಾದದಿಂದ ಒದ್ದನು. ॥೩೧॥

ಮಹಿಷಂ ತಾವದಿಷುಣಾಽಂಧಿನೀ ದೈತ್ಯಸ್ಯ ಮಸ್ತಕಂ ।
ಅಪಾಹರದತಿಕ್ರೋಧಾತ್ ಕೃತ್ತಮೂರ್ಧಾ ಮಮಾರ ಸಃ ॥೩೨॥

ಯುಯೋಧ ಮೋಹಿನೀ ದೈತ್ಯಂ ಶಸ್ತ್ರಾಸ್ತ್ರೈರ್ವಿಕಟೇಕ್ಷಣಂ ।
ಮೋಹಿನೀ ಗರುಡಾಽಽರೂಢಾ ಗೃಧ್ರಸ್ಥೋ ವಿಕಟೇಕ್ಷಣಃ ॥೩೩॥

ಸುಪರ್ಣ ಗೃಧ್ರಯೋರ್ಭೀಮ ಮಾಸೀದ್ಯುದ್ಧಂ ನಭೋಽಂಗಣೇ ।
ಸಪಕ್ಷಯೋಃ ಪರ್ವತಯೋರಿವಾಽತ್ಯಂತ ವಿಚಿತ್ರಿತಂ ॥೩೪॥

ತದಾ ಸುಪರ್ಣಪಕ್ಷಾಭ್ಯಾಂ ಪ್ರೋಥಿತೋ ಗೃಧ್ರಶೇಖರಃ ।
ನಖೈಸ್ತುಂಡೈರ್ದಾರಿತಾಽಂಗೋ ಮಮಾರ ಪತಿತೋಽವನೌ ॥೩೫॥

ವಿಕಟಾಕ್ಷೋ ಹತೇ ವಾಹೇ ಕ್ರುದ್ಧೋ ಯುದ್ಧ್ವಾ ಚಿರಂ ತಯಾ ।
ಮೋಹಿನೀಚಕ್ರಸಂಭಿನ್ನಗಲೋ ಮೃತ್ಯುಮುಪಾಗತಃ ॥೩೬॥

ಅಷ್ಟರೊಳಗಾಗಿಯೇ ಅಂಧಿನೀಶಕ್ತಿಯು ಬಹಳ ಕೋಪದಿಂದ ವಿಭಂಡ ರಾಕ್ಷಸನ ತಲೆಯನ್ನು ತನ್ನ ಕತ್ತಿಯಿಂದ ಕತ್ತರಿಸಿದಳು. ಅವನ ತಲೆಯು ಕತ್ತರಿಸಲ್ಪಡಲಾಗಿ ಅವನು ಮೃತನಾದನು. ||೩೨||

ಮೋಹಿನೀಶಕ್ತಿಯು ತನ್ನ ಶಸ್ತ್ರಾಸ್ತ್ರಗಳ ಪ್ರಯೋಗದ ಮೂಲಕ ವಿಕಟೇಕ್ಷಣ ರಾಕ್ಷಸನೊಂದಿಗೆ ಯುದ್ಧ ಮಾಡಿದಳು. ಮೋಹಿನೀಶಕ್ತಿಯು ಗರುಡನಮೇಲೇರಿದವಳಾಗಿಯೂ, ವಿಕಟೇಕ್ಷಣನು ಹದ್ದಿನಮೇಲೇರಿದವನಾಗಿಯೂ, ಇದ್ದರು. ||೩೩||

ಆಕಾಶದ ಪ್ರದೇಶದಲ್ಲಿ ರೆಕ್ಕೆಗಳುಳ್ಳ ಪರ್ವತಗಳಿಗೆ ಹೇಗೋ ಹಾಗೆ ಆ ಗರುಡ ಮತ್ತು ಹದ್ದುಗಳಿಗೆ ಅತ್ಯಂತಾಶ್ಚರ್ಯಕರವಾದ ಯುದ್ಧವು ಸಂಭವಿಸಿತು. ||೩೪||

ಆಗ ಗರುಡನ ರೆಕ್ಕೆಗಳ ಬಡಿತಕ್ಕೆ ಸಿಕ್ಕಿದ ಶ್ರೇಷ್ಠ ಹದ್ದು ತನ್ನ ಅವಯವಗಳೆಲ್ಲವೂ ಗರುಡನ ಉಗುರುಗಳು ಕೊಕ್ಕು ಮುಂತಾದುದರಿಂದ ಸೀಳಿಹೋಗಲಾಗಿ ಅದು ಭೂಮಿಗೆ ಬಿದ್ದು ಮೃತವಾಯಿತು. ||೩೫||

ತನ್ನ ವಾಹನವಾದ ರಣಹದ್ದು ನಾಶವಾಗಲು ವಿಕಟಾಕ್ಷನು ಬಹಳ ಕೋಪಗೊಂಡು ಮೋಹಿನೀಶಕ್ತಿಯೊಂದಿಗೆ ಬಹಳ ಕಾಲ ಯುದ್ಧಮಾಡಿದನು.

ಇಂದ್ರಶತ್ರುಃ ಸರ್ಪಸಂಸ್ಥೋ ಭೈರವೇಣಾಭಿ ಸಂಗತಃ ।
ಸ್ವವಾಹೇನಾತಿಭೀಮೇನ ಯುಯುಧೇಽತ್ಯಂತಸಾಹಸೀ ॥೩೭॥

ಭೈರವಃ ಕಾಲಮೇಘಾಭಃ ಸ್ವಸಮಾನಾಕಾರಭೈರವೈಃ ।
ಕೋಟಿಸಂಖ್ಯಾಗಣಯುತೈರಷ್ಟಭಿಃ ಸೇವಿತೋಽನಿಶಂ ॥೩೮॥

ಸರ್ವೇ ತ್ರಿಶೂಲದಂಡಾಢ್ಯಾ ಸ್ತ್ರಿನೇತ್ರಾಶ್ಚಂದ್ರಶೇಖರಾಃ ।
ಕಾಲಮೇಘನಿಭಾಃ ಸರ್ಪಭೂಷಣಾಃ ಕೃತ್ತಿವಾಸಸಃ ॥೩೯॥

ಇಂದ್ರಶತ್ರೋಶ್ಚಮೂಂ ಭೀಮಾಂ ದಶಾಕ್ಷೌಹಿಣಿ ಸಮ್ಮಿತಾಂ ।
ನಿವಿಶ್ಯ ತೇ ನಿಮೇಷೇಣ ನಿಶ್ಶೇಷಾಂ ಚಕ್ರುರೋಜಸಾ ॥೪೦॥

ಕೇಚಿಚ್ಛೂಲೇಷು ಸಂಪ್ರೋತಾಃ ಕೇಚಿದ್ದಂಡೈರ್ವಿದಾರಿತಾಃ ।
ಕೇಚಿನ್ನಖೈಃ ಪಾಟಿತಾಂಗಾಃ ಕೇಚಿನ್ಮುಷ್ಟಿಭಿರಾಹತಾಃ ॥೪೧॥

ಅನಂತರ ಮೋಹಿನೀಶಕ್ತಿಯು ಚಕ್ರಾಯುಧದ ಪೆಟ್ಟಿನಿಂದ ಅವನ ಕತ್ತು ಕತ್ತರಿಸಲ್ಪಡಲು ಅವನು ಮೃತ್ಯುವನ್ನೈದಿದನು. ॥೩೬॥

ಇಂದ್ರ ಶತ್ರುವು ಸರ್ಪವಾಹನವನ್ನು ಏರಿ ಭೈರವನೊಂದಿಗೆ ಯುದ್ಧದಲ್ಲಿ ಮಿಳಿತನಾಗಲು ಬಹಳ ಭಯಂಕರವಾದ ತನ್ನ ವಾಹನದಿಂದ ಅತ್ಯಂತ ಸಾಹಸಿಯಾದ ಈತನು ಕಾದಾಡುತ್ತಿದ್ದನು. ॥೩೭॥

ಭೈರವನು ಕಾಲಮೇಘಕ್ಕೆ ಸಮಾನವಾಗಿ ಬಹಳ ಭಯಂಕರನಾಗಿದ್ದು ತನಗೆ ಸಮಾನವಾದ ಆಕಾರಗಳಿಂದ ಬಹಳ ಭಯಂಕರವಾದ ಕೋಟ್ಯಂತರ ರಾಕ್ಷಸರ ಗುಂಪುಗಳಿಂದ ಯಾವಾಗಲೂ ಸೇವೆಯನ್ನು ಕೈಗೊಳ್ಳುತ್ತಿದ್ದನು. ॥೩೮॥

ಅವರೆಲ್ಲರೂ ತ್ರಿಶೂಲದಂಡಗಳಿಂದ ಶೋಭಿತರಾಗಿಯೂ, ಮುಕ್ಕಣ್ಣರಾಗಿಯೂ, ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದವರಾಗಿಯೂ, ಕಾಲಮೇಘಕ್ಕೆ ಸಮಾನರಾಗಿಯೂ, ಚರ್ಮವನ್ನು ಹೊದ್ದವರಾಗಿಯೂ ಇದ್ದರು. ॥೩೯॥

ಇಂದ್ರ ಶತ್ರುವಿನ ಹತ್ತು ಅಕ್ಷೌಹಿಣಿಗಿಂತಲೂ ಹೆಚ್ಚಾದ ಮತ್ತು ಭಯಂಕರವಾದ ಸೈನ್ಯವನ್ನು ಹೊಕ್ಕು ಅವರೆಲ್ಲರೂ ತಮ್ಮ ಪರಾಕ್ರಮದಿಂದ ಎಲ್ಲವನ್ನೂ ನಿರ್ನಾಮವಾಗಿ ಮಾಡಿದರು. ॥೪೦॥

ಭೈರವ ಸೈನ್ಯದವರು ರಾಕ್ಷಸರಲ್ಲಿ ಕೆಲವರನ್ನು ಶೂಲಗಳಿಂದ ಚುಚ್ಚಿ

ದಧುರ್ದೈತ್ಯಾಂತ್ರಮಾಲಾಂ ತೇ ಭೈರವಾಣಾಂ ಗಣಾಸ್ತದಾ ।
ಏವಂ ದೃಷ್ಟ್ವಾ ಪ್ರನಷ್ಟಾಂ ಸ್ವಾಮಿಂದ್ರಶತ್ರುಶ್ಚಮೂಂ ರುಷಾ ॥೪೨॥

ಗದಯಾ ಭೈರವಗಣಂ ಮರ್ದಯಾಮಾಸ ಸರ್ವತಃ ।
ಏವಂ ಗಣಾನರ್ದ್ಯಮಾನಾನ್ ವೀಕ್ಷ್ಯ ದೈತ್ಯೇನ ಸಂಯುಗೇ ॥೪೩॥

ಮಂಥಾನಾದ್ಯಪರಾಹ್ವಾನಾ ಅಸಿತಾಂಗಾದಿ ಭೈರವಾಃ ।
ಇಂದ್ರಶತ್ರುಂ ಪರ್ವತಾಭಂ ಯುಯುಧುಃ ಸರ್ಪವಾಹನಂ ॥೪೪॥

ತಾನ್ ಯೋಧಯಾಮಾಸ ದೈತ್ಯಃ ಸರ್ವಾನೇಕೋ ರಣಾಜಿರೇ ।
ವಜ್ರಸಂಹನನಂ ತಸ್ಯ ಶೂಲೈರ್ದಂಡಪ್ರಪಾತನೈಃ ॥೪೫॥

ಪೋಣಿಸುತ್ತಿದ್ದರು. ಮತ್ತೆ ಕೆಲವರನ್ನು ದಂಡಗಳಿಂದ ಒಡೆದರು. ಕೆಲವರನ್ನು ಉಗುರುಗಳಿಂದ ಸೀಳಿದರು. ಕೆಲವರನ್ನು ಮುಷ್ಟಿಗಳಿಂದ ಹೊಡೆದರು. ॥೪೧॥

ಅನಂತರ ಭೈರವರೆಲ್ಲರೂ ರಾಕ್ಷಸರ ಕರುಳಿನ ಮಾಲೆಗಳನ್ನೇ ತಮ್ಮ ಕತ್ತುಗಳಿಗೆ ಹಾಕಿಕೊಂಡರು. ಈ ರೀತಿಯಾಗಿ ತನ್ನ ಕಡೆಯ ಸೈನ್ಯವೆಲ್ಲವೂ ನಾಶವಾದದ್ದನ್ನು ಕಂಡು ಇಂದ್ರಶತ್ರುವು ಕೋಪಗೊಂಡನು. ॥೪೨॥ ,

ಅನಂತರದಲ್ಲಿ ಇಂದ್ರಶತ್ರುವು ಭೈರವರ ಗುಂಪಿನವರನ್ನು ಎಲ್ಲಾ ಕಡೆಯ ಲ್ಲಿಯೂ ಸದೆಬಡಿದನು. ಈ ರೀತಿಯಾಗಿ ರಾಕ್ಷಸನ ಬಡಿತಕ್ಕೆ ಸಿಕ್ಕಿ ನಾಶವಾಗು ತ್ತಿರುವ ಭೈರವರ ಗುಂಪಿನವರನ್ನು ಇತರ ಕೆಲವು ಭೈರವರು ನೋಡಿದರು. ॥೪೩॥

ಮಂಥಾನ ಎಂಬ ಬೇರೆ ಬೇರೆ ಹೆಸರುಳ್ಳ ಅಸಿತಾಂಗನೇ ಮೊದಲಾದ ಭೈರವರು ಸರ್ಪವನ್ನೇ ವಾಹನವಾಗಿ ಮಾಡಿಕೊಂಡಿರುವ, ಪರ್ವತಕ್ಕೆ ಸಮಾನ ವಾದ ಇಂದ್ರಶತ್ರುವಿನೊಂದಿಗೆ ಯುದ್ಧಮಾಡಿದರು. ॥೪೪॥

ಅವರೆಲ್ಲರಿಗೂ ಎದುರಾಗಿ ಒಬ್ಬಂಟಿಗನಾಗಿಯೇ ಯುದ್ಧಭೂಮಿಯಲ್ಲಿ ಆ ರಾಕ್ಷಸನು ಯುದ್ಧಮಾಡಿದನು. ಭೈರವರು ಶೂಲ ಮತ್ತು ದಂಡಗಳನ್ನು ಅವನ ಮೇಲೆ ಎಸೆಯುತ್ತಿದ್ದರೂ ವಜ್ರಾಯುಧದಂತೆ ಮೈಕಟ್ಟುಳ್ಳ ಅವನಿಗೆ ಏನೂ ಅಪಾಯ ವಾಗಲೇ ಇಲ್ಲ. ॥೪೫॥

ಅಕ್ಷತಂ ಸರ್ವಥಾ ಯದ್ವದ್ಗಂಡಶೈಲಃ ಫಲೈರ್ಹತಃ ।
ತಂ ದೃಷ್ಟ್ವಾ ನಿರುಜಂ ದೈತ್ಯಂ ಭೈರವಾಣಾಂ ಭಯಂಕರಂ ॥೪೬॥

ಯುಯುಧೇ ತೇನ ಸಮರೇ ಭೈರವಾಣಾಮಧೀಶ್ವರಃ ।
ಯುದ್ಧ್ವಾ ಚಿರಮುತ್ಪತಂತಂ ಗದಯಾ ಹಂತು ಮಂಬರಂ ॥೪೭॥

ಆವಿಧ್ಯ ಹೃದಿ ಶೂಲೇನ ಭುವಿ ತಂ ವ್ಯಸುಮಾಕ್ಷಿಪತ್ ।
ಯುದ್ಧ್ವಾ ಸುರಾಽರಾತಿರಪಿ ಕಾಲಕರ್ಷಣಿಕಾಽಹ್ವಯಾಂ ॥೪೮॥

ಕಾಕಸಂಸ್ಥೋ ಲುಲಾವಾಽಧಿರೂಢಯಾ ಸುಚಿರಂ ಬಲೀ ।
ತಚ್ಛಕ್ತಿಗಣನಿಶ್ಶೇಷೀಕೃತ ದೈತ್ಯಮಹಾಗಣಃ ॥೪೯॥

ಗಂಡಪರ್ವತಕ್ಕೆ ಎಷ್ಟು ಕಲ್ಲುಹಣ್ಣುಗಳನ್ನು ಎಸೆದಾಗ್ಯೂ ಹೇಗೆ ಏನೂ ಆಗಲಾರದೋ ಹಾಗೆ ಅವನ ಶರೀರವು ಭೈರವರ ಶೂಲ ಮುಂತಾದುದರ ಪ್ರಯೋಗವಾದರೂ ಏನೂ ವ್ಯತ್ಯಾಸವಾಗಲೇ ಇಲ್ಲ. ಹೀಗೆ ಯಾವ ವಿಧವಾದ ಯಾತನೆಯೂ ಇಲ್ಲದ ಭೈರವರಿಗೆ ಭಯವನ್ನುಂಟುಮಾಡುವ ಇಂದ್ರಶತ್ರುವನ್ನು ಭೈರವನು ನೋಡಿದನು. ॥೪೬॥

ಭೈರವಾಧಿಪತಿಯು ಇಂದ್ರಶತ್ರುವಿನೊಡನೆ ಯುದ್ಧಮಾಡಲು ಪ್ರಾರಂಭಿಸಿದನು. ಹಾಗೆ ಬಹಳಕಾಲ ಯುದ್ಧಮಾಡಿ ತನ್ನಮೇಲೆ ಹಾರಿಬರುತ್ತಿರುವ ಮತ್ತು ಗದೆಯಿಂದ ತನ್ನನ್ನು ಕೊಲ್ಲಲು ಇಚ್ಛಿಸುತ್ತಿರುವ ಇಂದ್ರಶತ್ರುವನ್ನು ಬಲವಾಗಿ ಭೈರವಾಧಿಪತಿಯು ಹಿಡಿದುಕೊಂಡನು. ॥೪೭॥

ಅನಂತರ ಭೈರವಾಧಿಪತಿಯು ಇಂದ್ರ ಶತ್ರುವಿನ ಹೃದಯಕ್ಕೆ ಶೂಲವನ್ನು ಚುಚ್ಚಿ ಅವನನ್ನು ನಾಶಮಾಡಿದನು. ಕಾಲಕರ್ಷಿಣೀ ಎಂಬ ಶಕ್ತಿಯೊಂದಿಗೆ ಪುರಾರಾತಿ ಯೆಂಬ ರಾಕ್ಷಸನು ಯುದ್ಧಮಾಡಿದನು. ॥೪೮॥

ಬಲಿಷ್ಠನಾದ ಆ ರಾಕ್ಷಸನು ಕಾಗೆಯಮೇಲೆ ಕುಳಿತುಕೊಂಡು ಹದ್ದಿನ ಮೇಲೆ ಕುಳಿತಿರುವ ಆ ಶಕ್ತಿಯೊಂದಿಗೆ ಬಹಳ ಹೊತ್ತು ಯುದ್ಧವನ್ನು ಮಾಡಿದನು. ಆ ಶಕ್ತಿಗಳ ಸಮೂಹವು ರಾಕ್ಷಸರ ದೊಡ್ಡಗುಂಪುಗಳನ್ನು ನಾಶಮಾಡುತ್ತಿದ್ದಿತು. ॥೪೯॥

ತದಂಕುಶಪ್ರಹಾರೇಣ ಭಿನ್ನಮೂರ್ಧಾ ಮಮಾರ ಹ ।
ಸ್ವಪ್ನೇಶ್ಯಾ ಯುಯುಧೇ ದೈತ್ಯೋ ಮಹಾಕುಕ್ಷಿರ್ನೃಕಾಽಽಶ್ರಯಃ ॥೫೦॥

ರಥಾಽಧಿರೂಢಯಾ ಸೇನಾ ನಾಶಿತಾ ಶಕ್ತಿಸಂಘಕೈಃ ।
ಚಿರಂ ಯೋಧಯತಸ್ತಸ್ಯ ಮಹಾಕುಕ್ಷೇರ್ಬಲೀಯಸಃ ॥೫೧॥

ವಿದಾರ್ಯ ಕುಕ್ಷಿಂ ಖಡ್ಗೇನ ನಾಶಯದ್ದೈತ್ಯಪುಂಗವಂ ।
ಮದೋದ್ಧತೋಽಪಿ ವಟುಕ ಭೈರವೇಣ ಸುಸಂಗತಃ ॥೫೨॥

ವಟುಕೈಃ ಸ್ವಸಮಾಕಾರೈರ್ಧಶಕೋಟಿಮಿತೈಸ್ತಥಾ ।
ಮಹಾಕಪಾಲ ದಂಡಾಽಢ್ಯೈಃ ಸರ್ಪಭೂಷಣಸಂಯುತೈಃ ॥೫೩॥

ಪಂಚಹಾಯನಕೈರ್ಮತ್ತೈರ್ದಿಗ್ವಸ್ತ್ರೈರರುಣೇಕ್ಷಣೈಃ ।
ತಮಸ್ತೋಮನಿಭೈಶ್ಚಂದ್ರಚೂಡೈರ್ಯುಕ್ತೇನ ಸರ್ವತಃ ॥೫೪॥

ಅನಂತರ ಆಕೆಯ ಅಂಕುಶ ಪ್ರಹಾರದಿಂದ ಸುರಾರಾತಿಯ ತಲೆಯು ಸೀಳಲ್ಪಡಲಾಗಿ ಅವನು ಮೃತನಾದನು. ಮಹಾಕುಕ್ಷಿಯೆಂಬ ರಾಕ್ಷಸನು ತೋಳದಮೇಲೆ ಕುಳಿತು ಸ್ವಪ್ನೇಶೀಎಂಬ ಶಕ್ತಿಯೊಂದಿಗೆ ಯುದ್ಧಮಾಡಿದನು. ॥೫೦॥

ಆಕೆಯು ರಥದಮೇಲೆ ಕುಳಿತು ರಾಕ್ಷಸ ಸೈನ್ಯವನ್ನು ನಾಶಮಾಡುತ್ತಿದ್ದಳು. ಶಕ್ತಿಗಳ ಸಮೂಹಗಳೊಂದಿಗೆ ಬಲಿಷ್ಠನಾದ ಮಹಾಕುಕ್ಷಿರಾಕ್ಷಸನು ಬಹಳಕಾಲ ಯುದ್ಧವನ್ನು ಮಾಡುತ್ತಿದ್ದನು. ॥೫೧॥

ಆಗ ಸ್ವಪ್ನೇಶೀಶಕ್ತಿಯು ತನ್ನ ಕತ್ತಿಯಿಂದ ಮಹಾಕುಕ್ಷಿಯ ಹೊಕ್ಕುಳನ್ನು ಕತ್ತರಿಸಿ ಆ ರಾಕ್ಷಸ ಶ್ರೇಷ್ಠನನ್ನು ನಾಶಮಾಡಿದಳು. ವಟುಕಭೈರವ ಎಂಬುವನೊಂದಿಗೆ ಮದೋದ್ಧತ, ಎಂಬ ರಾಕ್ಷಸನು ಯುದ್ಧಕ್ಕೆ ಪ್ರಾರಂಭಿಸಿದನು. ॥೫೨॥

ಅವನು ತನಗೆ ಸಮಾನರಾದ ಹತ್ತುಕೋಟಿ ವಟುಗಳಿಂದ ಕೂಡಿದ್ದನು. ಅವರು ಮಹಾಕಪಾಲ ಮತ್ತು ದಂಡಗಳನ್ನು ಹಿಡಿದಿದ್ದರು. ಮತ್ತು ಹಾವನ್ನೇ ಅಲಂಕಾರವಾಗಿ ಮಾಡಿಕೊಂಡಿದ್ದರು. ॥೫೩॥

ಆ ಬ್ರಹ್ಮಚಾರಿಗಳು ಐದುವರ್ಷ ವಯಸ್ಸಿನವರಾಗಿಯೂ, ಮದಿಸಿದವರಾಗಿಯೂ, ದಿಗಂಬರರಾಗಿಯೂ, ಕೆಂಪಗಿರುವ ಕಣ್ಣುಗಳುಳ್ಳವರಾಗಿಯೂ, ಕತ್ತಲೆ

ದಶಾಽಕ್ಷೌಹಿಣಿಕಾಯುಕ್ತೋ ಯುಯೋಧಾಽತಿತರಾಂ ಬಲೀ ।
ವಟುಕಾನಾಂ ಗಣಾಃ ಕ್ರುದ್ಧಾ ನಿವಿಶ್ಯಾಽಸುರವಾಹಿನೀಂ ॥೫೫॥

ದಂಡೈರ್ನಿಹತ್ಯ ತರಸಾ ನಾಶಂ ನಿನ್ಯುರ್ಯಥಾಽಽಶುನಃ ।
ಅಥ ಕ್ರುದ್ಧಂ ದೈತ್ಯಪತಿಂ ನಿಪತಂತಂ ಗದಾಧರಂ ॥೫೬॥

ವಟುಕೇಶೋ ಜಘಾನೋಚ್ಚೈರ್ಮೂರ್ಧ್ನಿ ದಂಡೇನ ಲೀಲಯಾ ।
ದಂಡಾಽಽಹತ್ಯಾದಲನ್ಮೂರ್ಧಾ ವಮನ್‌ರಕ್ತಂ ಸಫೇನಿಲಂ ॥೫೭॥

ಪತಿತ್ವಾಽಽಶು ವಿನಿಶ್ಚೇಷ್ಟೋ ಮಮಾರಾಽಸುರಶೇಖರಃ ।
ಏವಂ ವಿಷಂಗಃ ಪುತ್ರೇಷು ನಷ್ಟೇಷ್ವತ್ಯಂತ ದುಃಖಿತಃ ॥೫೮॥

ಯರಾಶಿಯಂತೆ ಅಚ್ಚಕಪ್ಪಾದವರಾಗಿಯೂ, ಚಂದ್ರನನ್ನೇ ಆಭರಣವನ್ನಾಗಿ ಶಿರಸ್ಸಿನಲ್ಲಿ ಧರಿಸಿದವನಾಗಿಯೂ ಇದ್ದರು. ವಟುಕಭೈರವನು ಇವರನ್ನು ತನ್ನ ಜೊತೆಯಲ್ಲಿಟ್ಟುಕೊಂಡಿದ್ದನು. ॥೫೪॥

ಬಲಿಷ್ಠನಾದ ಮದೋದ್ಧತನು ಹತ್ತು ಅಕ್ಷೌಹಿಣೀ ಸೈನ್ಯದೊಂದಿಗೆ ಕೂಡಿದವನಾಗಿ ಅವರೊಂದಿಗೆ ಬಹಳ ಕಾದಾಡಿದನು. ಬ್ರಹ್ಮಚಾರಿಗಳ ಗುಂಪುಗಳು ಬಹಳ ಕೋಪಗೊಂಡವರಾಗಿ ರಾಕ್ಷಸನ ಸೈನ್ಯದೊಳಕ್ಕೆ ನುಗ್ಗಿದರು. ॥೫೫॥

ಅನಂತರ ಅವರು ತಮ್ಮ ದಂಡಗಳನ್ನು ಅವರ ಮೇಲೆ ಪ್ರಯೋಗಿಸಿ ಶೀಘ್ರವಾಗಿ ಅವರನ್ನು ನಾಶಮಾಡಿದರು. ಆಮೇಲೆ ರಾಕ್ಷಸ ಸೇನಾಪತಿಯಾದ ಮದೋದ್ಧತನು ಕೋಪಗೊಂಡು ಗದೆಯನ್ನು ಹಿಡಿದುಕೊಂಡು ಅವರಮೇಲೆ ಬಿದ್ದನು. ॥೫೬॥

ವಟುಕಾಧಿಪತಿಯು ಅನಾಯಾಸವಾಗಿಯೇ ತನ್ನ ದಂಡದಿಂದ ಅವನ ತಲೆಯ ಮೇಲಕ್ಕೆ ಹೊಡೆದನು. ಮದೋದ್ಧತನ ತಲೆಯು ಸೀಳಿಹೋಗಿ ಶ್ರೇಷ್ಠರಾಕ್ಷಸನಾದ ಇವನು ನೊರೆಯಿಂದತುಂಬಿರುವ ರಕ್ತವನ್ನು ಕಾರಿದನು. ॥೫೭॥

ಕೂಡಲೇ ರಾಕ್ಷಸಶ್ರೇಷ್ಠನಾದ ಇವನು ಕೆಳಗೆಬಿದ್ದು ಚಲಿಸದವನಾಗಿ ಮೃತನಾದನು. ಈ ರೀತಿಯಾಗಿ ತನ್ನ ಮಕ್ಕಳುಸಾಯಲು ವಿಷಂಗನು ಅತ್ಯಂತ ದುಃಖಪಟ್ಟನು. ॥೫೮॥

ಕ್ರೋಧನಾಹಾರಯತ್ತೀಪ್ರಂ ವಿಂಶತ್ಯಕ್ಷೌಹಿಣೀಯುತಃ ।
ನಿಪಪಾತೈಕ ಪಾತೇನ ಪ್ರಲಯಾಽನಿಲವಜ್ಞವಾತ್ ॥೫೯॥

ಕಿರಿಚಕ್ರೋಪರಿ ತದಾ ಧ್ವನದ್ವಾದಿತ್ರ ನಿಸ್ವನಃ ।
ಶಸ್ತ್ರಧಾರಾಂ ವಿಮುಂಚನ್ ವೈ ಕುರ್ವನ್ ಸತಿಮಿರಾ ದಿಶಃ ॥೬೦॥

ಜ್ವಲದ್ವಹ್ನಿ ಮಹಾಕೋಟೀ ಶಲಭಾನಾಂ ಗಣಾ ಇವ ।
ಅಥ ಜಂಭಿನೀಮುಖ್ಯಾಭಿರ್ನಾಶಿತಾ ಕ್ಷಣಮಾತ್ರತಃ ॥೬೧॥

ವಿಷಂಗಸೈನ್ಯಂ ಶಸ್ತ್ರಾಗ್ನಿ ಜ್ವಾಲಾಭಿಃ ಶಲಭಾನಿವ ।
ಕೇಚಿತ್ತ್ರಿಶೂಲ ಸ್ಫುಟಿತ ಹೃದಯಾ ಜೀವಿತಂ ಜಹುಃ ॥೬೨॥

ಪರೇ ದಂಡವಿಕೀರ್ಣಾಽಂಗಾ ಅನ್ಯೇ ಪರಿಘಪೋಥಿತಾಃ ।
ಅಪರೇ ಸಾಯಕೈಶ್ಛಿನ್ನಾ ತತೋಽನ್ಯೇ ಮುಷ್ಟಿದಾರಿತಾಃ ॥೬೩॥

ವಿಷಂಗನು ಬಹಳ ಕೋಪಗೊಂಡು ಇಪ್ಪತ್ತು ಅಕ್ಷೌಹಿಣೀ ಸೈನ್ಯದಿಂದ ಕೂಡಿದವನಾಗಿ, ಪ್ರಳಯಕಾಲದ ಬೆಂಕಿಯಂತೆ, ಶೀಘ್ರವಾಗಿ ಒಂದೇಬಾರಿಗೆ ಶಕ್ತಿಸೈನ್ಯಗಳ ಮೇಲೆ ಬಿದ್ದನು. ॥೫೯॥

ವಿಷಂಗನು ಕಿರಿ ಚಕ್ರರಥದಮೇಲೆ ಕುಳಿತು, ವಾದ್ಯಗಳು ಮೊಳಗುತ್ತಿರಲು, ಎಲ್ಲಾ ಕಡೆಯಲ್ಲಿಯೂ ಕತ್ತಲೆಯು ಕವಿಯುವಂತೆ ಶಸ್ತ್ರಗಳ ಸುರಿಮಳೆಗಳನ್ನು ಶಕ್ತಿಗಳಮೇಲೆ ಸುರಿಸುತ್ತಾ ಯುದ್ಧಕ್ಕೆ ಬಂದನು. ॥೬೦॥

ಉರಿಯುತ್ತಿರುವ ಬೆಂಕಿಯ ಎತ್ತರವಾದ ತುದಿಯಲ್ಲಿ ಪತಂಗದ ಹುಳುಗಳ ಗುಂಪು ಹೇಗೆ ನಾಶವಾಗುವುದೋ ಹಾಗೆ, ಜಂಭಿನೀ ಮುಂತಾದ ಶಕ್ತಿಯರಿಂದ ಕ್ಷಣಮಾತ್ರದಲ್ಲಿಯೇ ರಾಕ್ಷಸರು ನಾಶವಾದರು. ॥೬೧॥

ಶಕ್ತಿಗಳ ಶಸ್ತ್ರಗಳಿಂದುಂಟಾದ ಅಗ್ನಿಗಳ ಜ್ವಾಲೆಗಳಿಂದ ಪತಂಗದ ಹುಳುಗಳಂತೆ, ವಿಷಂಗರಾಕ್ಷಸನ ಸೈನ್ಯವು ನಾಶವಾಯಿತು. ಕೆಲವು ರಾಕ್ಷಸರು ತ್ರಿಶೂಲದಿಂದ ಸೀಳಿದ ಹೃದಯವುಳ್ಳವರಾಗಿ ಪ್ರಾಣವನ್ನು ಬಿಟ್ಟರು. ॥೬೨॥

ಇತರ ಕೆಲವು ರಾಕ್ಷಸರು ಶಕ್ತಿಗಳದಂಡಗಳಿಗೆ ಸಿಕ್ಕಿ ಅವರ ಅವಯವಗಳು ಛಿದ್ರಛಿದ್ರವಾಗುತ್ತಿದ್ದವು. ಇತರ ಕೆಲವು ರಾಕ್ಷಸರು ಶಕ್ತಿಗಳ ಪರಿಘಾಯುಧದಿಂದ

ಖಡ್ಗಚ್ಛಿನ್ನಾಂಘ್ರಿಬಾಹೂರು ಕಂಧರಾಃದ್ಯಾ ಅಪೀತರೇ ।
ಕೇಚಿಚ್ಛಸ್ತ್ರೌಘ ಸಂಪಾತ ಶಕಲೀಕೃತದೇಹಕಾಃ ॥೬೪॥

ಏವಂ ವಿನಷ್ಟೇ ಸೈನ್ಯೇ ಸ್ವೇ ವಿಷಂಗಃ ಕ್ರೋಧಮೂರ್ಛಿತಃ ।
ನಿಹತ್ಯ ಗದಯಾ ಶಕ್ತಿಸೇನಾಂ ಭಿತ್ವಾ ಹ್ಯಶೇಷತಃ ॥೬೫॥

ದಂಡರಾಜ್ಞೀರಥವಹಂ ಮಹಿಷಂ ಚ ಮೃಗಾಧಿಪೌ ।
ಗದಯೈವ ಹಿ ಸಂತಾಡ್ಯ ರಥರಾಜಂ ಸಮಾರುಹತ್ ॥೬೬॥

ಆರೋಹಂತಂ ರಥಂ ವೇಗಾದ್ವಿಷಂಗಂ ವೀಕ್ಷ್ಯ ಸರ್ವತಃ ।
ಶಕ್ತಿಸೇನಾಸು ಸಮಭೂದ್ಧಾಹಾಕಾರಮಹಾಧ್ವನಿಃ ॥೬೭॥

ಚೂರು ಚೂರಾದರು. ಮತ್ತೆ ಕೆಲವು ರಾಕ್ಷಸರು ಶಕ್ತಿಗಳ ಬಾಣಗಳಿಂದ ಕತ್ತರಿಸಿ ಹೋದರು. ಬೇರೆ ಕೆಲವು ರಾಕ್ಷಸರು ಶಕ್ತಿಗಳ ಮುಷ್ಟಿಗಳಿಂದ ಸೀಳಿಹೋದರು. ||೬೩||

ಇತರ ಕೆಲವು ರಾಕ್ಷಸರ ಕಾಲುಗಳು ತೋಳುಗಳು ತೊಡೆಗಳು ಮತ್ತು ಕತ್ತು ಮೊದಲಾದುವುಗಳು ಶಕ್ತಿಗಳ ಪೆಟ್ಟಿಗೆ ಸಿಕ್ಕಿ ಕತ್ತರಿಸಿಹೋದವು. ಇನ್ನು ಕೆಲವು ರಾಕ್ಷಸರ ಶರೀರಗಳು ಶಕ್ತಿಗಳ ಶಸ್ತ್ರಗಳ ಸಮೂಹಗಳ ಬೀಳುವಿಕೆಯಿಂದ ಚೂರು ಚೂರಾದವು. ||೬೪||

ಈ ರೀತಿಯಾಗಿ ತನ್ನ ಸೈನ್ಯವು ನಾಶವಾಗಲು ವಿಷಂಗನು ಕೋಪದಿಂದ ಮೈಮರೆತವನಾಗಿ ಗದೆಯಿಂದ ಶಕ್ತಿ ಸೈನ್ಯವನ್ನು ಸಂಪೂರ್ಣವಾಗಿ ನಾಶಮಾಡಿದನು. ||೬೫||

ಅನಂತರ ವಿಷಂಗನು ದಂಡನಾಯಕಿಯ ಸಾರಥಿಯನ್ನೂ ಕೋಣನನ್ನೂ ಮತ್ತು ಎರಡು ಸಿಂಹಗಳನ್ನೂ ಗದೆಯಿಂದಲೇ ಬಲವಾಗಿಹೊಡೆದು ಆಕೆಯ ಶ್ರೇಷ್ಠ ರಥಕ್ಕೆ ಹತ್ತಿದನು. ||೬೬||

ಅನಂತರ ವೇಗವಾಗಿ ಹತ್ತುತ್ತಿರುವ ವಿಷಂಗನನ್ನು ನೋಡಿ ಶಕ್ತಿ ಸೈನ್ಯಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಹಾಹಾಕಾರದ ಮಹಾಶಬ್ದವುಂಟಾಯಿತು. ||೬೭||

ರಥಪರ್ವಸ್ಥಿತಾಃ ಶಕ್ತೀರಪಿ ಸಂಮರ್ದ್ಯ ವೇಗತಃ ।
ಚತುರ್ಥ ಪರ್ವಾಽಂತರಾಲಂ ಪ್ರಾವಿಶತ್ ಸತ್ವರಂ ಬಲೀ ॥೬೮॥

ದಂಡರಾಜ್ಞ್ಯಪಿ ತಂ ದೃಷ್ಟ್ವಾ ದೈತ್ಯಮಾಯಾಂತಮಂತಿಕಂ ।
ಅವರುಹ್ಯ ಯುಯೋಧೋಚ್ಚೈರ್ಮುಸಲೇನ ಸ್ವಪರ್ವತಃ ॥೬೯॥

ತತ್ರಾಽಭವನ್ಮಹಾಯುದ್ಧಂ ದಂಡಿನೀ ದೈತ್ಯರಾಜಯೋಃ ।
ಶಸ್ತ್ರೈರ್ವಿಚಿತ್ರೈರಸ್ತ್ರೈಶ್ಚ ಸರ್ವಲೋಕಭಯಂಕರಂ ॥೭೦॥

ಜ್ಞಾತ್ವಾಽಜೇಯಾ ಮಸ್ತ್ರಶಸ್ತ್ರೈರ್ದಂಡಿನೀಂ ದೈತ್ಯಪುಂಗವಃ ।
ಮಾಯಾಂ ಪ್ರಾದುಶ್ಚಕಾರೋಚ್ಚೈಃ ಸರ್ವಲೋಕಭಯಾಽವಹಂ ॥೭೧॥

ಅಂಧಕಾರಂ ಪಾಂಸುವರ್ಷ ಮುಶ್ಮವರ್ಷಂ ಮಹಾರವಂ ।
ಅಗ್ನಿವರ್ಷಂ ವಜ್ರವರ್ಷಂ ರಕ್ತಾಽಮೇಧ್ಯಾಽದಿವರ್ಷಣಂ ॥೭೨॥

ಬಲಿಷ್ಠನಾದ ವಿಷಂಗನು ರಥದಒಳಗಿನ ಅಂತಸ್ತುಗಳಲ್ಲಿರುವ ಶಕ್ತಿಗಳನ್ನು ಗದೆಯಿಂದ ವೇಗವಾಗಿ ಹೊಡೆದು ನಾಲ್ಕನೆಯ ಅಂತಸ್ತಿನ ಒಳಭಾಗವನ್ನು ಅತಿಶೀಘ್ರವಾಗಿ ಪ್ರವೇಶಿಸಿದನು. ॥೬೮॥

ದಂಡನಾಯಕಿಯೂಕೂಡ ತನ್ನ ಸಮೀಪಕ್ಕೆ ಬರುತ್ತಲಿರುವ ರಾಕ್ಷಸನನ್ನು ನೋಡಿ ತನ್ನ ಅಂತಸ್ತಿನಿಂದ ಇಳಿದು ಬಂದು ಅವನೊಂದಿಗೆ ಒನಕೆಯ ಆಯುಧದಿಂದ ಬಲವಾಗಿ ಯುದ್ಧಮಾಡಿದಳು. ॥೬೯॥

ಅಲ್ಲಿ ದಂಡನಾಯಕೀ ಮತ್ತು ರಾಕ್ಷಸರಾಜನಾದ ವಿಷಂಗನಿಗೆ ನಾನಾ ವಿಧವಾದ ಶಸ್ತ್ರಗಳು ಮತ್ತು ಅಸ್ತ್ರಗಳಿಂದ ಎಲ್ಲಾ ಲೋಕಕ್ಕೂ ಭಯವನ್ನುಂಟುಮಾಡುವ ಮಹಾಯುದ್ಧವು ನಡೆಯಿತು. ॥೭೦॥

ರಾಕ್ಷಸಶ್ರೇಷ್ಠನಾದ ವಿಷಂಗನು ಅಸ್ತ್ರಗಳು ಮತ್ತು ಶಸ್ತ್ರಗಳಿಂದ ದಂಡನಾಯಕಿಯನ್ನು ಜಯಿಸಲು ಅಸಾಧ್ಯವೆಂದುತಿಳಿದು ಎಲ್ಲಾ ಲೋಕಗಳಿಗೂ ಭಯವನ್ನುಂಟುಮಾಡುವಂಥಾ ಮಾಯೆಯನ್ನು ವಿಶೇಷವಾಗಿ ಉಂಟುಮಾಡಿದನು. ॥೭೧॥

ಈ ಮಾಯೆಯು ಕತ್ತಲೆ, ಧೂಳಿನಸುರಿಮಳೆ, ಕಲ್ಲಿನಸುರಿಮಳೆ, ದೊಡ್ಡಶಬ್ದ, ಬೆಂಕಿಯಸುರಿಮಳೆ, ವಜ್ರದಸುರಿಮಳೆ, ರಕ್ತ,ಮಲ, ಮುಂತಾದುದರ ಸುರಿಮಳೆ, ಇವೆಲ್ಲವನ್ನೂ ಉಂಟುಮಾಡಿತು. ॥೭೨॥

ಮುಂಡವೃಷ್ಟಿಂ ಮಹಾಭೀಮಾ ಮಥ ದೈತ್ಯಮಹಾಚಮೂಂ ।
ಸಹಸ್ರಪಾದ ಬಾಹ್ವಾಸ್ಯ ಮಾತ್ಮಾನಂ ಶತಧಾಽಪಿಚ ॥೭೩॥

ತಾದೃಶ್ಯಾ ಮಾಯಯಾ ತಸ್ಯ ಭೀತಾಸ್ತಾಃ ಸರ್ವಶಕ್ತಯಃ ।
ಭೀತಾಃ ಶಕ್ತೀಃ ಸಮಾಲೋಕ್ಯ ದಂಡಿನೀ ಶರವೃಷ್ಟಿಭಿಃ ॥೭೪॥

ವ್ಯನಾಶಯನ್ಮಾಯಿಕಾಂಸ್ತಾನಥ ಭೂಯೋಽಪಿ ದೈತ್ಯರಾಟ್ ।
ಮಾಯಾಂ ಸಸರ್ಜ ಮಹತೀಂ ದದೃಶುಃ ಸರ್ವಶಕ್ತಯಃ ॥೭೫॥

ಚಕ್ರರಾಜರಥಂ ತತ್ರ ಸಮಾಯಾಂತಂ ದ್ರುತಂ ತಥಾ ।
ಸ್ವಯಂ ವಾಹಾನ್ನಿಹತ್ಯಾಽಽಶು ರಥಂ ಛಿತ್ವಾಽಪ್ಯನೇಕಧಾ ॥೭೬॥

ಅಲ್ಲದೆ ಈ ಮಾಯೆಯು ಬಹಳ ಭಯಂಕರವಾದ ಮುಂಡಗಳ ಸುರಿಮಳೆಗಳನ್ನೂ, ಉಂಟುಮಾಡಿತು. ಅನಂತರ ಈ ಮಾಯೆಯು ಸಾವಿರಕಾಲುಗಳನ್ನೂ, ಮತ್ತು ಮುಖಗಳನ್ನೂ ತೋರಿಸುತ್ತಾ ತನ್ನನ್ನೇ ನೂರುವಿಧವಾಗಿ ಮಾಡಿಕೊಂಡು ರಾಕ್ಷಸರ ದೊಡ್ಡಸೈನ್ಯವನ್ನು ಹೆದರಿಸಿತು. ||೭೩||

ಅಂಥಾ ಮಾಯೆಯಿಂದ ರಾಕ್ಷಸನಿಗೆ ಎಲ್ಲಾ ಶಕ್ತಿಗಳೂ ಹೆದರಿದವು. ದಂಡನಾಯಕಿಯು ತನ್ನ ಶಕ್ತಿಗಳು ಭಯಗೊಂಡಿರುವುದನ್ನು ಕಂಡು ಆ ಮಾಯೆಯಿಂದ ಹುಟ್ಟಿದ ವಸ್ತುಗಳಿಗೆ ಬಾಣಗಳ ಮಳೆಗಳನ್ನು ಸುರಿಸಿ ಅವನ್ನು ನಾಶಮಾಡಿದಳು. ||೭೪||

ಈ ರೀತಿಯಾಗಿ ದಂಡನಾಯಕಿಯು ಆಮಾಯೆಯ ಪದಾರ್ಥಗಳನ್ನು ನಾಶಮಾಡಿದಳು. ಅನಂತರ ರಾಕ್ಷಸರಾಜನಾದ ವಿಷಂಗನು ಪುನಃ ಇನ್ನೊಂದು ದೊಡ್ಡದಾದ ಮಾಯೆಯನ್ನು ಸೃಜಿಸಿದನು. ಎಲ್ಲಾ ಶಕ್ತಿಗಳೂ ಆ ಮಾಯೆಯನ್ನು ನೋಡಿದರು. ||೭೫||

ಆ ಮಾಯೆಯು ಚಕ್ರರಾಜರಥದ ಹತ್ತಿರಕ್ಕೆ ಶೀಘ್ರವಾದ ಬರುತ್ತಿದ್ದಿತು. ಆದು ತನ್ನ ರಥದಿಂದನೆಗೆದು ಆ ರಥವನ್ನು ಅನೇಕ ವಿಧವಾಗಿ ಚೂರು ಚೂರು ಮಾಡಿತು. ||೭೬||

ಜವೇನ ದೇವೀಂ ಲಲಿತಾಂ ಕೇಶಪಾಶೇ ಪರಾಮೃಶತ್ ।
ಚುಕ್ರುಶುರ್ಮಾಯಯಾ ತಸ್ಯ ಹಾಹೇತ್ಯುಚ್ಚೈಸ್ತು ಶಕ್ತಯಃ ॥೭೭॥

ತಾವತ್ ಶ್ರೀಭೈರವೋ ದೇವೀಂ ಬಭಾಷೇ ರಥನಾಯಕಃ ।
ಅಲಂ ದೈತ್ಯೇಷು ತೇ ದೇವಿ ಲೀಲಯಾ ಭೀತಿದಾನಯಾ ॥೭೮॥

ಪಶ್ಯ ಶಕ್ತೀರ್ಭಯಾಽಽಕ್ರಾಂತಾಃ ಶೋಚಂತೀಃ ಸರ್ವತಃ ಶಿವೇ ।
ನಿರ್ಮಾಯಾಽಸ್ತ್ರೇಣ ದೈತೇಯಂ ವಿಮಾಯಂ ನಾಶಯ ದ್ರುತಂ ॥೭೯॥

ಸಂಧ್ಯಾ ಸಮುಭ್ಯೇತಿ ಪುರಸ್ತಸ್ಯಾಂ ಮಾಯಾ ದುರತ್ಯಯಾ ।
ರಥನೇತುರ್ವಚಃ ಶ್ರುತ್ವಾ ಮತ್ವಾ ಯುಕ್ತಂ ಚ ದಂಡಿನೀ ॥೮೦॥

ನಿರ್ಮಾಯಾಽಸ್ತ್ರಂ ಸಮುತ್ಸೃಜ್ಯ ಮಾಯಾಂ ತಸ್ಯ ವ್ಯನಾಶಯತ್ ।
ವಾಯುನೇವ ಚ ನೀಹಾರೋ ನಷ್ಟಾಂ ಮಾಯಾಂ ಚ ಸರ್ವತಃ ॥೮೧॥

ಅದು ಶೀಘ್ರವಾಗಿ ಲಲಿತಾದೇವಿಯ ಕೇಶಪಾಶವನ್ನೇ ಹಿಡಿದಂತೆ ತೋರಿತು. ಈ ಮಾಯೆಯಿಂದ ಶಕ್ತಿಗಳೆಲ್ಲರೂ ಅಯ್ಯಯ್ಯೋ, ಎಂದು ಕೂಗಿದರು. ॥೭೭॥

ಅಷ್ಟರೊಳಗಾಗಿ ಸಾರಥಿಯಾದ ಶ್ರೀ ಭೈರವನು ಲಲಿತಾದೇವಿಯನ್ನು ಕುರಿತು ಓ ದೇವಿಯೇ, ರಾಕ್ಷಸನ ಮಾಯೆಯ ವಿಷಯದಲ್ಲಿ ಕಪಟವಾದ ಭಯವನ್ನು ತೋರಿಸುತ್ತಿರುವ ನಿನ್ನ ಈ ಭಯದ ವಿನೋದವನ್ನು ದಯವಿಟ್ಟು ಸಾಕುಮಾಡು. ಎಂದನು. ॥೭೮॥

ಓ ಶಿವನಪತ್ನಿಯೇ, ಭಯಾಕ್ರಾಂತರಾಗಿ ಎಲ್ಲಾ ಕಡೆಯಲ್ಲಿಯೂ ದುಃಖ ಪಡುತ್ತಿರುವ ಈ ಶಕ್ತಿಗಳನ್ನು ನೋಡು. ನಿನ್ನ ನಿರ್ಮಾಯಾಸ್ತ್ರವನ್ನು ದಯವಿಟ್ಟು ಪ್ರಯೋಗಿಸಿ ಈ ರಾಕ್ಷಸನನ್ನು ಶೀಘ್ರವಾಗಿ ನಾಶಮಾಡು. ॥೭೯॥

ಇನ್ನು ಸ್ವಲ್ಪಹೊತ್ತಿಗೆ ಸಾಯಂಕಾಲವು ಬರುತ್ತದೆ. ಆಕಾಲದಲ್ಲಿ ಈ ಮಾಯೆಯನ್ನು ನಾಶಮಾಡಲಾಗದೇ ಇರಬಹುದು. ಸಾರಥಿಯ ಈ ಮಾತನ್ನು ಕೇಳಿ ದಂಡನಾಯಕಿಯು ಇದಕ್ಕೊಪ್ಪಿದಳು. ॥೮೦॥

ದಂಡನಾಯಕಿಯು ನಿರ್ಮಾಯಾಸ್ತ್ರವನ್ನು ಪ್ರಯೋಗಮಾಡಿ, ಅವನ ಮಾಯೆಯನ್ನು ನಾಶಮಾಡಿದಳು. ಆಗ ವಾಯುವಿನಿಂದ ಹಿಮವು ನಾಶವಾಗುವಂತೆ ಮಾಯೆಯು ಎಲ್ಲಾ ಕಡೆಯಲ್ಲಿಯೂ ನಾಶವಾಯಿತು. ॥೮೧॥

ತದಾ ಗದಾಧರೋ ಭೂಯಃ ದದೃಶೇ ಸಮ್ಮುಖಾಽಽಗತಂ ।
ದೃಷ್ಟ್ವೈವ ತಂ ದಂಡಿನೀ ಸಾ ಕ್ರುದ್ಧಾ ಖಡ್ಗೇನ ತಚ್ಛಿರಃ ॥೮೨॥

ಚಕರ್ತ ನಿಮಿಷಾರ್ಧೇನ ವಜ್ರೇಣ ತ್ವಾಷ್ಟ್ರಕಂ ಯಥಾ ।
ಏವಂ ತಸ್ಮಿನ್ ವಿನಿಹತೇ ವಿಷಂಗೇ ಭೀಮವಿಕ್ರಮೇ ॥೮೩॥

ದೇವದುಂದುಭಯೋ ನೇದುರಪತತ್ಪುಷ್ಪ ವರ್ಷಣಂ ।
ದಿಶೋ ವಿತಿಮಿರಾ ಜಾತಾಃ ಸಪ್ರಭಶ್ಚ ದಿವಾಕರಃ ॥೮೪॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ವಿಷಂಗವಧೋ ನಾಮ
ಪಂಚಸಪ್ತತಿತಮೋಽಧ್ಯಾಯಃ

ಆಗ ರಾಕ್ಷಸನು ಪುನಃ ಗದೆಯನ್ನು ಎತ್ತಿಕೊಂಡು ತನ್ನೆದುರಿಗೆ ಬಂದುದನ್ನು ದಂಡನಾಯಕಿಯು ನೋಡಿದಳು. ಕೂಡಲೇ ದಂಡನಾಯಕಿಯು ಕೋಪಗೊಂಡವಳಾಗಿ ಅವನ ತಲೆಯನ್ನು ತನ್ನ ಕತ್ತಿಯಿಂದ ಕತ್ತರಿಸಿದಳು. ||೮೨||

ದಂಡನಾಯಕಿಯು, ಇಂದ್ರನು ವಜ್ರಾಯುಧದಿಂದ ತ್ವಾಷ್ಟ್ರಕ ಎಂಬುವನನ್ನು ಕೊಂದಂತೆ, ಆ ರಾಕ್ಷಸನನ್ನು ಕತ್ತರಿಸಿಹಾಕಿದಳು. ಈರೀತಿಯಾಗಿ ಭಯಂಕರ ಪರಾಕ್ರಮವುಳ್ಳ ವಿಷಂಗನು ನಾಶವಾದನು. ||೮೩||

ದೇವದುಂದುಭಿಗಳು ಕೂಡಲೇ ಮೊಳಗಿದವು. ದೇವಿಯ ಮೇಲೆ ಹೂಮಳೆಗರೆಯಿತು. ದಿಕ್ಕುಗಳಲ್ಲೆಲ್ಲಾ ಕತ್ತಲೆಯು ನಾಶವಾಯಿತು. ಸೂರ್ಯನು ಬಹಳ ಪ್ರಕಾಶಮಾನನಾಗಿ ಕಾಣಿಸಿದನು. ||೮೪||

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ "ವಿಷಂಗರಾಕ್ಷಸನ ವಧೆ" ಎಂಬ ಎಪ್ಪತ್ತೈದನೆಯ ಅಧ್ಯಾಯವು ಮುಗಿಯಿತು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಷಟ್‌ಸಪ್ತತಿತಮೋಽಧ್ಯಾಯಃ ॥

ಎಪ್ಪತ್ತಾರನೆಯ ಅಧ್ಯಾಯವು

ಏವಂ ವಿಷಂಗೇ ನಿಹತೇ ಜಯಶಬ್ದೋ ಮಹಾನಭೂತ್ ।
ಮುದಿತಾಃ ಶಕ್ತಯಃ ಸರ್ವಾಸ್ತುಷ್ಟುವುರ್ದಂಡನಾಯಿಕಾಂ ॥೧॥

ಭ್ರಾತರೌ ಸಪರೀವಾರೌ ಶ್ರುತ್ವಾ ಯುಧಿ ನಿಪಾತಿತೌ ।
ಶೋಕ ಕಾತರತಾಂ ಪ್ರಾಪ ಮೋಹೇನೇಷನ್ಮಹಾಸುರಃ ॥೨॥

ವಿಮೃಶ್ಯಾಥ ಶುಚಂ ಹಿತ್ವಾ ಸ್ವಮಾತ್ಮಾನಂ ಹಸನ್ನಿವ ।
ಅಹೋ ಮಾಂ ಕಿಂ ವದಾಮೀಹ ಶೋಚಂತಂ ಮುಕ್ತಿಭಾವತಃ ॥೩॥

ಈ ರೀತಿಯಾಗಿ ವಿಷಂಗನು ನಾಶವಾಗಲು ಜಯಕಾರವು ಎಲ್ಲೆಲ್ಲಿಯೂ ಕೇಳಿಸಿತು. ಎಲ್ಲಾ ಶಕ್ತಿಯರೂ ಸಂತೋಷಗೊಂಡು ದಂಡನಾಯಕಿಯನ್ನು ಹೊಗಳಿದರು. ॥೧॥

ಭಂಡರಾಕ್ಷಸನು ತನ್ನ ತಮ್ಮಂದಿರಿಬ್ಬರೂ ಯುದ್ಧದಲ್ಲಿ ನಾಶವಾದದ್ದನ್ನು ಕೇಳಿ ಮೋಹದಿಂದ ದುಃಖಕ್ಕೊಳಗಾಗಿ ಸ್ವಲ್ಪ ಕಳವಳವನ್ನು ಹೊಂದಿದನು. ॥೨॥

ಅನಂತರ ಅವನು ಸ್ವಲ್ಪ ವಿಮರ್ಶೆಮಾಡಿಕೊಂಡು ದುಃಖವನ್ನು ಬಿಟ್ಟು, ತನ್ನನ್ನು ತಾನೇ ಹಾಸ್ಯಮಾಡುವಂತೆ, ಸಂಬಂಧಿಗಳು ನನ್ನನ್ನು ಅಗಲಿದರು ಎಂಬ ಭಯದಿಂದ, ಮೋಕ್ಷಲಾಭವನ್ನೂ ಗಮನಿಸದೆ ದುಃಖಪಡುತ್ತಿರುವ ನನ್ನ ಶೋಕವು ಆಶ್ಚರ್ಯಕರವಾದುದೇ ಸರಿ! ಎಂದುಕೊಂಡನು. ॥೩॥

ಯದರ್ಥಿತಂ ಜಗನ್ಮಾತ್ರಾ ಚಿರಂ ತನ್ಮೇ ಪ್ರಪೂರಿತಂ ।
ಏವಂ ಸಾ ಪೂರಯೇಚ್ಛೇಷ ಮಾಶು ನಾಸ್ತ್ಯತ್ರ ಸಂಶಯಃ ॥೪॥

ತದ್ವ್ರಜಾಮಿ ಶೇಷಗಣೈಃ ಶ್ರೀಮಾತುರ್ದೃಷ್ಟಿಗೋಚರಂ ।
ವಿಲಂಬೇನ ಮಮಾತ್ರಾಲಂ ಶ್ರೇಯೋವಿಘ್ನೈರ್ಹಿ ಸಂಕುಲಂ ॥೫॥

ಅಹೋ ಲೋಕೇ ಸರ್ವಥೈವ ಏಕಾಂತೇನಾಭಿಯಾಚಿತಂ ।
ದಿಶತ್ಯೇವ ಪರಾಂಬಾ ಸಾ ಭಾವರೂಪಾ ಹಿ ಕಾಮಧುಕ್ ॥೬॥

ಏವಂ ಸ್ವಾಂತಃ ಸಮಾಸೀನಾಂ ವಾಂಛಾಧಿಕಫಲಪ್ರದಾಂ ।
ಪರಮಾನಂದ ಜನನೀಂ ಹಿತ್ವಾ ದೈವಹತೋ ಜನಃ ॥೭॥

ದುಃಖಸಾರಾಲ್ಪವಿಷಯ ಪ್ರೇಪ್ಸಯಾ ಭೀಮರೂಪಯಾ ।
ನೀಯತೇ ವ್ಯರ್ಥಮನಿಶಂ ಮೃತ್ಯೋರ್ಭಕ್ಷ್ಯೋಪಸೇಕತಾಂ ॥೮॥

ಜಗನ್ಮಾತೆಯಾದ ದೇವಿಯು ನಾನು ಬಹುಕಾಲದಿಂದ ಪ್ರಾರ್ಥಿಸಿದ್ದನ್ನೇ ಪೂರ್ತಿಮಾಡಿದ್ದಾಳೆ! ಇದೇ ರೀತಿಯಾಗಿ ನನ್ನುಳಿದ ಇಷ್ಟಾರ್ಥಗಳನ್ನೂ ಪೂರ್ತಿಗೊಳಿಸುವುದರಲ್ಲಿ ಸಂದೇಹವೇ ಇಲ್ಲ. ॥೪॥

ಆದ್ದರಿಂದ ಇನ್ನುಳಿದ ರಾಕ್ಷಸರ ಗುಂಪುಗಳೊಡನೆ ಶ್ರೀ ಲಲಿತಾಮಾತೆಯ ಕಣ್ಣಿಗೆ ಗೋಚರವಾಗುವೆನು. ನಾನು ಇನ್ನು ಸಾವಕಾಶಮಾಡಬಾರದು. ಶ್ರೇಯಸ್ಸುಂಟಾಗಲು ಅನೇಕ ವಿಘ್ನಗಳು ಬರುವುವಲ್ಲವೇ! ॥೫॥

ಅತ್ಯಂತಭಕ್ತಿಯಿಂದ ಭಕ್ತನು ಏಕಾಂತವಾಗಿ ಅಪೇಕ್ಷಿಸಿದ ಇಷ್ಟಾರ್ಥವನ್ನು ಲೋಕದಲ್ಲಿ ಶ್ರೀಪ್ರಮಾತೆಯಾದ ದೇವಿಯು ಕರುಣಿಸಿಯೇ ಕರುಣಿಸುವಳು. ಆಕೆಯು ಸಕಲ ಇಷ್ಟಾರ್ಥಗಳನ್ನೂ ಕೊಡುವುದರಲ್ಲಿ ಕಾಮಧೇನುವೇ ಆಗಿದ್ದಾಳೆ.॥೬॥

ಈ ರೀತಿಯಾಗಿ ತಿಳಿದು ತನ್ನ ಮನಸ್ಸಿನೊಳಗೂ ಇರುವ, ಅಪೇಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿ ಫಲವನ್ನು ನೀಡುವ, ಅತ್ಯಂತ ಆನಂದದಾಯಕಳಾದ ದೇವಿಯನ್ನು ಅದೃಷ್ಟವಿಲ್ಲದ ಪ್ರಾಣಿಯೊಬ್ಬನೇ ಸೇವಿಸದೇ ಬಿಡುವನು! ॥೭॥

ಅದೃಷ್ಟಹೀನನಾದ ಮನುಷ್ಯನು ದೇವಿಯಲ್ಲಿ ಭಕ್ತಿಹೀನನಾಗಿ ದುಃಖವೇ ಹೆಚ್ಚಾಗಿರುವ ಅಲ್ಪವಾದ ಮತ್ತು ಭಯಂಕರವಾದ ಪ್ರಾಪಂಚಿಕವಾದ ಈ ಸುಖದ

ಧನ್ಯೋಽಹಂ ಕೃತಕೃತ್ಯೋಽಹಂ ಯಚ್ಛ್ರೀದೇವೀಪದಾಂಬುಜಂ ।
ಸನಿರೀಕ್ಷನ್ ಕಶ್ಮಲಮಮುಂ ವಿಮುಚ್ಯ ಹತದೇಹಕಂ ॥೯॥

ವಿಶೋಕಂ ಪರಮಂ ಸ್ಥಾನಂ ಸಮುಪೈಷ್ಯವಿಶಂಕಿತಂ ।
ಇತಿ ಸಂಚಿಂತ್ಯ ದೈತ್ಯೇಂದ್ರಃ ಸ್ವಾಂತರಸ್ಯಾಭಿಗುಪ್ತಯೇ ॥೧೦॥

ಭೂತ್ವಾತ್ಯಂತ ಕ್ರುದ್ಧ ಇವ ಸಂಯೋಜ್ಯಾಸುರವಾಹಿನೀಂ ।
ನಿಃಶೇಷಾಂ ತರಸಾ ಯುಕ್ತ ಸ್ತಯಾ ಯುದ್ಧಾಯ ದಂಶಿತಃ ॥೧೧॥

ರಥಮಾರುಹ್ಯ ಸಾಹಸ್ರ ಸಿಂಹವಾಹಂ ಮಹೋನ್ನತಂ ।
ಶ್ವೇತ ಮುಕ್ತಾತಪತ್ರೇಣ ವೀಜ್ಯಮಾನಶ್ಚ ಚಾಮರೈಃ ॥೧೨॥

ಆಸೆಗೆ ಮರುಳಾಗಿ ಮೃತ್ಯುವಿಗೆ ತನ್ನನ್ನು ಆಹಾರವನ್ನಾಗಿ ಮಾಡಿಕೊಡುವವನಾಗಿ ವ್ಯರ್ಥವಾಗಿ ಯಾವಾಗಲೂ ಪ್ರಯತ್ನಪಡುತ್ತಾನೆ ! ॥೮॥

ಶ್ರೀ ಲಲಿತಾದೇವಿಯ ಪಾದಕಮಲಗಳನ್ನು ನೋಡುತ್ತಾ ನನ್ನ ಈ ಕ್ಷುದ್ರ ದೇಹವನ್ನೂ ಮತ್ತು ತುಚ್ಛವಾದ ಪ್ರಾಣವನ್ನೂ ನೀಗಿಕೊಳ್ಳುವ ನಾನೇ ಅತ್ಯಂತ ಕೃತಾರ್ಥನೆಂಬುದರಲ್ಲಿ ಸಂದೇಹವಿಲ್ಲ. ॥೯॥

ಅನಂತರ ನನ್ನ ನಿಜವಾದ ಶ್ರೇಷ್ಠಸ್ಥಾನಕ್ಕೆ ದುಃಖವೇ ಇಲ್ಲದೇ ಮತ್ತು ನಿರ್ಭಯವಾಗಿ ತೆರಳುವೆನು. ಎಂದು ರಾಕ್ಷಸಶ್ರೇಷ್ಠನು ಆಲೋಚಿಸಿ ತನ್ನ ಮನಸ್ಸಿನಲ್ಲಿಯೇ ಈ ವಿಷಯವನ್ನು ಮುಚ್ಚಿಕೊಂಡನು ! ॥೧೦॥

ಈ ರೀತಿಯಲ್ಲಿ ಆಲೋಚಿಸಿ ಭಂಡರಾಕ್ಷಸನು ಹೊರಗೆ ಅತ್ಯಂತ ಕೋಪವನ್ನು ತೋರಿಸುತ್ತಾ, ಸಮಸ್ತ ರಾಕ್ಷಸರ ಸೈನ್ಯವನ್ನು ಜೊತೆಮಾಡಿಕೊಂಡು ಹಲ್ಲು ಕಡಿಯುತ್ತಾ ಬಹಳ ಶೀಘ್ರವಾಗಿ ದೇವಿಯೊಡನೆ ಯುದ್ಧಕ್ಕೆ ಹೊರಟನು. ॥೧೧॥

ಅನಂತರ ಭಂಡರಾಕ್ಷಸನು ಬಹಳ ಎತ್ತರವಾದ ಸಾವಿರ ಸಿಂಹವಾಹನವುಳ್ಳ ರಥವನ್ನೇರಿ ಬಿಳಿಯ ಮುತ್ತಿನ ಛತ್ರಿಯನ್ನು ಸೇವಕರು ಹಿಡಿದಿರಲು ಮತ್ತು ಅವರು ಚಾಮರವನ್ನು ಬೀಸುತ್ತಿರಲು ಯುದ್ಧಕ್ಕೆ ಹೊರಟನು. ॥೧೨॥

ಯುಕ್ತಃ ಸೇನೇಶ್ವರೈಃ ಪಂಚಾಶತ್ಸಂಖ್ಯಾಕೈರ್ಬಲೋದ್ಧತೈಃ ।
ನದದ್ವಾದಿತ್ರ ವಿಪುಲೈರಾಸ್ಫೋಟಾಽಽರವಬೃಂಹಿತೈಃ ॥೧೩॥

ರಥನೇಮಿ ನದೀಘೋಷೈರ್ಹೇಷಿತಪ್ರಾಯಮಾಂಸಲೈಃ ।
ರಥವಾಹನ ಸಿಂಹಾನಾಂ ಗರ್ಜಿತೈಃ ಪೂರಯನ್ ಜಗತ್ ॥೧೪॥

ನಿರ್ಯಯೌ ಜೈತ್ರಯಾತ್ರಾಽರ್ಥಂ ಚಾಲಯನ್ನಿವ ಮೇದಿನೀಂ ।
ಅಥಾಽಪಶ್ಯಚ್ಛಕ್ತಿಸೇನಾ ಭಂಡಸೇನಾಮಹಾರ್ಣವಂ ॥೧೫॥

ಅಪಾರಮಪ್ರಧೃಷ್ಯಂ ಚ ಭೀಮಗಂಭೀರನಿಸ್ವನಂ ।
ತತ್ರ ಮಂತ್ರ ಮಹಾರಾಜ್ಞೀ ಭಂಡಂ ಯುದ್ಧಾಯ ಸಂಗತಂ ॥೧೬॥

ಆಲಕ್ಷ್ಯ ಶ್ರೀಮಹಾರಾಜ್ಞೀಂ ನತ್ವಾ ವೃತ್ತಂ ವ್ಯಜಿಜ್ಞಪತ್ ।
ದೇವಿ ಭಂಡಃ ಸ್ವಯಂ ಪ್ರಾಪ್ತೋ ಯೋದ್ಧುಮತ್ಯಂತಸಂಯುತಃ ॥೧೭॥

ಬಹಳ ಬಲದಿಂದ ಕೊಬ್ಬಿರುವ ಐವತ್ತುಮಂದಿ ಸೇನಾಪತಿಗಳಿಂದ ಕೂಡಿದವನಾಗಿ ವಾದ್ಯಘೋಷವು ವಿಶೇಷವಾಗಿ ಮೊಳಗುತ್ತಿರಲು, ಸೈನಿಕರು ಭುಜಗಳನ್ನು ತಟ್ಟಿಕೊಳ್ಳುತ್ತಿರುವ ಶಬ್ದವು ಕೇಳುತ್ತಿರಲು ಭಂಡರಾಕ್ಷಸನು ಯುದ್ಧಕ್ಕಾಗಿ ಹೊರಟನು. ||೧೩||

ರಥದ ಚಕ್ರದ ಸುತ್ತುಪಟ್ಟಿಗಳ ಶಬ್ದಗಳಿಂದಲೂ, ಕುದುರೆಗಳ ಕೆನೆಯುವಿಕೆಯ ಮಹಾಶಬ್ದದಿಂದಲೂ, ರಥದ ವಾಹನವಾದ ಸಿಂಹಗಳ ಗರ್ಜನೆಗಳಿಂದಲೂ, ಲೋಕವೆಲ್ಲವೂ ತುಂಬಿಹೋಯಿತು. ||೧೪||

ಭಂಡರಾಕ್ಷಸನು ತನ್ನ ವಿಜಯಯಾತ್ರೆಗಾಗಿ ಭೂಮಿಯನ್ನೇ ಅಲ್ಲಾಡಿಸುವವನೋ ಎಂಬಂತೆ ಹೋದನು. ಅನಂತರ ಶಕ್ತಿಸೈನ್ಯವು ಭಂಡರಾಕ್ಷಸನ ಸೈನ್ಯವೆಂಬ ಮಹಾಸಾಗರವನ್ನೇ ನೋಡಿತು. ||೧೫||

ಆ ಸೈನ್ಯವು ಅಪಾರವಾಗಿಯೂ, ಸೋಲಿಸಲು ಅಸಾಧ್ಯವಾಗಿಯೂ, ಭಯಂಕರವಾಗಿಯೂ, ಗಂಭೀರವಾದ ಧ್ವನಿಮಾಡುವುದಾಗಿಯೂ, ಇದ್ದಿತು. ಆಗ ಮಂತ್ರಿಣಿಯು ಯುದ್ಧಕ್ಕಾಗಿ ಬಂದಿದ್ದ ಭಂಡನನ್ನು ನೋಡಿದಳು. ||೧೬||

ಮಂತ್ರಿಣಿಯು ಶ್ರೀ ಲಲಿತಾಮಹಾರಾಣಿಯನ್ನು ನೋಡಿ ನಮಸ್ಕರಿಸಿ ಈ ಸಮಾಚಾರವನ್ನು ಈರೀತಿಯಾಗಿ ಬಿನ್ನೈಸಿದಳು. ಓ ದೇವಿಯೇ, ಭಂಡಾಸುರನು

ಸರ್ವಸೇನಾ ಸಮಾಯುಕ್ತಃ ಸರ್ವಸೇನಾಧಿಪೈರಪಿ ।
ಜೈತ್ರಯಾತ್ರಾ ಭವತ್ಯಾಶ್ಚ ಯುಕ್ತಾತ್ರ ಯದಿ ಮನ್ಯಸೇ ॥೧೮॥

ನಿಜ್ಞಾಪಿತೈವಂ ಮಂತ್ರಿಣ್ಯಾ ಯುಕ್ತಂ ತಚ್ಚಾಪ್ಯಮಂಸತ ।
ಅಥಾಭವಚ್ಛಕ್ತಿಸೇನಾ ಸನ್ನದ್ಧಾ ನಿಮಿಷಾರ್ಧತಃ ॥೧೯॥

ಅಶ್ವಾರೂಢಾಽಶ್ವಸೇನಾಭಿಃ ಸೇನಾಮುಖಮಧಿಷ್ಠಿತಾಃ ।
ಗಜಾನೀಕಸ್ವಾಮಿನೀ ಸಾ ತತ್ಪಶ್ಚಾತ್ಸಂಪದೀಶ್ವರೀ ॥೨೦॥

ತತೋ ಬಾಲಾ ರಥಾರೂಢಾ ಕುಮಾರೀಗಣಸಂವೃತಾ ।
ತದನುಪ್ರಚಚಾಲಾಜೌ ಚಕ್ರರಾಜಮಹಾರಥಃ ॥೨೧॥

ಬಹಳ ಯುದ್ಧಸಾಮಗ್ರಿಗಳನ್ನು ತೆಗೆದುಕೊಂಡು ಎಲ್ಲ ಸೇನೆ ಮತ್ತು ನಾಯಕರೊಡನೆ ತಾನೇ ಯುದ್ಧಮಾಡಲು ಬಂದಿರುತ್ತಾನೆ! ಎಂದಳು. ॥೧೭॥

ನೀವೂ ಸಮಸ್ತ ಶಕ್ತಿಸೈನ್ಯದಿಂದಲೂ ಹಾಗೆಯೇ ಸಮಸ್ತ ಸೈನ್ಯಗಳ ಅಧೀಶ್ವರಿಯರಿಂದಲೂ ಕೂಡಿದವರಾಗಿ ವಿಜಯ ಯಾತ್ರೆಗೆ ಹೊರಡುವುದು ಉಚಿತವೆಂದು ನಿಮಗೆ ಒಪ್ಪಿದರೆ ಅದಕ್ಕೆ ದಯವಿಟ್ಟು ಸಿದ್ಧರಾಗಿ. ॥೧೮॥

ಮಂತ್ರಿಣಿಯು ಈರೀತಿಯಾಗಿ ಬಿನ್ನೈಸಲಾಗಿ ಲಲಿತಾದೇವಿಯು ಅದನ್ನು ಉಚಿತವೆಂದೇ ಒಪ್ಪಿದಳು. ಅನಂತರ ಶಕ್ತಿಸೈನ್ಯವೆಲ್ಲವೂ ಒಂದು ನಿಮಿಷಾರ್ಧದಲ್ಲಿಯೇ ಯುದ್ಧಕ್ಕೆ ಸಿದ್ಧವಾಯಿತು. ॥೧೯॥

ಕುದುರೆಯ ಸೈನ್ಯದೊಂದಿಗೆ ಅಶ್ವಾರೂಢಾ ಶಕ್ತಿಯು ಸೈನ್ಯದ ಮುಂಭಾಗವನ್ನಾಶ್ರಯಿಸಿದಳು. ಆನೆಯ ಸೈನ್ಯಕ್ಕೆ ಅಧಿಪತಿಯಾದ ಸಂಪನ್ನಾಥಾಶಕ್ತಿಯು ಸೈನ್ಯದ ಹಿಂಭಾಗದಲ್ಲಿದ್ದಳು. ॥೨೦॥

ಅನಂತರ ಶಕ್ತಿಗಳ ಗುಂಪಿನವರಿಂದ ಕೂಡಿದವಳಾಗಿ ಬಾಲಕಿಯಾದ ಕುಮಾರಿಯು ರಥವನ್ನೇರಿ ಹೊರಟಳು. ಅನಂತರ ಚಕ್ರರಾಜವೆಂಬ ಮಹಾರಥವು ಯುದ್ಧಭೂಮಿಗೆ ಹೊರಟಿತು. ॥೨೧॥

ನವಪರ್ವಸಮಾಯುಕ್ತೋ ಹ್ಯಣಿಮಾಽದಿಭಿರಾವೃತಃ ।
ಮುಕ್ತಾಚ್ಛತ್ರಮಹೋನ್ನಮ್ರಃ ಪದ್ಮಕೇತುಧ್ವಜೋಚ್ಛ್ರಯಃ॥೨೨॥

ನವರತ್ನಸಮಾಕೀರ್ಣ ಇಂದ್ರಿಯಾಽತ್ಮಾಶ್ವಯೋಜಿತಃ ।
ವಾಹಯಂತೀ ತಂ ರಥೇಂದ್ರಂ ಮಹಾತ್ರಿಪುರಸುಂದರೀ ॥೨೩॥

ಚಕ್ರೇಶ್ವರೀ ವಿವೇಕಾಽತ್ಮತೋದಹಸ್ತಾ ವ್ಯರಾಜತ ।
ಚಕ್ರರಾಜ ರಥಾಽಂಗಸ್ಯ ವಾಮದಕ್ಷಿಣಭಾಗಯೋಃ ॥೨೪॥

ಕಿರಿಗೇಯ ಚಕ್ರರಥೌ ವ್ಯರಾಜೇತಾಂ ಮಹೋನ್ನತೌ ।
ದಂಡಿನೀ ಮಂತ್ರಿಣೀಭ್ಯಾಂ ತೌ ದಂಶಿತಾಭ್ಯಾಮಧಿಷ್ಠಿತೌ ॥೨೫॥

ಸ್ವಸ್ವಸೇನಾ ಸಮಾಯುಕ್ತೌ ಯುದ್ಧಸಂಭಾರ ಸಂಭೃತೌ ।
ತಿರಸ್ಕೃತಿಶ್ಚಕ್ರರಾಜರಥ ಪೃಷ್ಠಸಮಾಶ್ರಿತಾ ॥೨೬॥

ಆ ಶ್ರೇಷ್ಠ ರಥವು ಒಂಬತ್ತು ಅಂತಸ್ತುಗಳಿಂದ ಕೂಡಿದುದಾಗಿಯೂ ಅಣಿಮಾ ಮುಂತಾದ ಶಕ್ತಿಗಳಿಂದ ಕೂಡಿದ್ದಾಗಿಯೂ, ಮುತ್ತಿನ ಛತ್ರಿಯಿಂದ ಮತ್ತು ಕಮಲದ ಬಾವುಟದಿಂದ ಬಹಳ ಎತ್ತರವಾಗಿಯೂ ಕಾಣುತ್ತಿತ್ತು. ॥೨೨॥

ಆ ರಥವು ಒಂಬತ್ತು ವಿಧವಾದ ರತ್ನಗಳಿಂದ ನಕಾಶೆಯ ಕೆಲಸಗಳಿಂದ ಕೂಡಿದ್ದಾಗಿಯೂ, ಇಂದ್ರಿಯಗಳ ಸ್ವರೂಪಗಳಾದ ಕುದುರೆಗಳನ್ನು ಜೋಡಿಸಿದುದಾಗಿಯೂ ಇತ್ತು. ಆ ಶ್ರೇಷ್ಠರಥವನ್ನು ಮಹಾ ತ್ರಿಪುರಸುಂದರೀ ದೇವಿಯು ನಡೆಸುತ್ತಿದ್ದಳು. ॥೨೩॥

ವಿವೇಕಸ್ವರೂಪವಾದ ಚಾವಟಿಯನ್ನು ಕೈಯ್ಯಲ್ಲಿ ಹಿಡಿದಿರುವ ದೇವಿಯೂ, ಚಕ್ರರಾಜರಥದ ಎಡಭಾಗ ಬಲಭಾಗಗಳಲ್ಲಿ ಚಕ್ರೇಶ್ವರಿಯರೂ ಪ್ರಕಾಶಿಸುತ್ತಿದ್ದರು. ॥೨೪॥

ಬಹಳ ಎತ್ತರವಾದ ಕಿರಿಚಕ್ರ ಗೇಯಚಕ್ರ ಎಂಬ ರಥಗಳಲ್ಲಿ ದಂಡಿನೀ ಮತ್ತು ಮಂತ್ರಿಣೀ ಎಂಬ ಆ ಇಬ್ಬರು ಚಕ್ರೇಶ್ವರಿಯರೂ ಕೂಡ ಕೋಪದಿಂದ ಹಲ್ಲುಕಡಿಯುತ್ತಾ ಹೋಗುತ್ತಿದ್ದರು. ॥೨೫॥

ಅವರುಗಳು ತಮ್ಮ ತಮ್ಮ ಸೈನ್ಯಗಳಿಂದ ಕೂಡಿದವರಾಗಿ ಯುದ್ಧದ ಸಾಮಗ್ರಿಗಳನ್ನು ತುಂಬಿಕೊಂಡು ಹೊರಟರು. ತಿರಸ್ಕರಣೀಶಕ್ತಿಯು ಚಕ್ರರಾಜರಥದ ಹಿಂಭಾಗದಲ್ಲಿದ್ದಳು. ॥೨೬॥

ತಿಮಿರೌಘನಿಭಾಽತ್ಯುಚ್ಚಾ ತುರಂಗಮಮಧಿಷ್ಠಿತಾ ।
ಉತ್ಪಾತವೇಲ್ಲದತ್ಯಂತ ಕರಾಲಕರವಾಲಿನೀ ॥೨೭॥

ಸ್ವಸಮಾಽಽಕಾರಶಕ್ತ್ಯೌಘ ಮಂಡಲೀಕೃತಮಂಡಲಾ ।
ಏವಂ ಶ್ರೀಲಲಿತಾದೇವೀ ಸೇನಯಾ ಸಹ ನಿರ್ಯಯೌ ॥೨೮॥

ಯುದ್ಧಾಯ ಕೃತಸನ್ನಾಹಾ ಸಂಸ್ತುತಾ ವಿಬುಧೇಶ್ವರೈಃ ।
ಮಿಲಿತಂ ಸೇನಯೋರ್ವಕ್ತ್ರಂ ವ್ಯರಾಜತ ವಿಶೇಷತಃ ॥೨೯॥

ಸಮುದ್ರಯೋರಿವೋದ್ವೇಲಂ ಗತಯೋಃ ಪ್ರತಿಸಂಚರೇ ।
ಸೇನಯೋರುಭಯೋರಶ್ವ ರಥೇಭಪದಚಾರಿಣಾಂ ॥೩೦॥

ಪಾದವೇಗಾಭಿಸಂಘಾತ ಪ್ರಾಂಶುಪಾಂಸು ಸುಸಂಹತಿಃ ।
ಜನಯದ್ಗಾಢತಿಮಿರಂ ದಾರ್ಶನೈಶಮಿವ ಕ್ಷಣಾತ್ ॥೩೧॥

ಕತ್ತಲೆಯ ಸಮುದಾಯದಂತಿರುವ ಬಹಳ ಎತ್ತರವಾದ ಕುದುರೆಯನ್ನೇರಿ ತಿರಸ್ಕರಣೀಶಕ್ತಿಯು ಮೇಲೆ ಎತ್ತಿಹಿಡಿದ ಚಲಸುತ್ತಿರುವ ಬಹಳ ಭಯಂಕರವಾದ ಕತ್ತಿಯುಳ್ಳವಳಾಗಿದ್ದಳು. ॥೨೭॥

ತನಗೆ ಸಮಾನವಾದ ಶಕ್ತಿಗಳ ಸಮೂಹಗಳು ಮಂಡಲಾಕಾರವಾಗಿ ತನ್ನ ಸುತ್ತಲೂ ಬರುತ್ತಿರಲು ತಿರಸ್ಕರಣೀಶಕ್ತಿಯು ಯುದ್ಧಕ್ಕೆ ಹೊರಟಳು. ಈ ರೀತಿ ಯಾಗಿ ಶ್ರೀ ಲಲಿತಾದೇವಿಯು ಸೇನೆಯೊಂದಿಗೆ ಯುದ್ಧಕ್ಕೆ ಸಿದ್ಧಳಾಗಿ ಹೊರಟಿದ್ದಳು. ॥೨೮॥

ಶ್ರೀ ಲಲಿತಾದೇವಿಯು ಯುದ್ಧದ ಸಕಲ ಸಾಮಗ್ರಿಗಳೊಡನೆ ಕೂಡಿದವ ಳಾಗಿ, ದೇವಶ್ರೇಷ್ಠರು ಸ್ತೋತ್ರಮಾಡುತ್ತಿರಲು, ಯುದ್ಧಕ್ಕೆ ಹೊರಟಳು. ಆಗ ಎರಡು ಸೈನ್ಯಗಳ ಮುಂಭಾಗವೂ ವಿಶೇಷವಾಗಿ ಪ್ರಕಾಶಿಸುತ್ತಿತ್ತು. ॥೨೯॥

ಎಲ್ಲೆ ಮೀರಿದ ಸಮುದ್ರಗಳಂತೆ ಎರಡು ಸೈನ್ಯಗಳೂ ಮುಂದುವರಿದಿದ್ದವು. ಎರಡು ಸೈನ್ಯಗಳಿಗೂ ಸಂಬಂಧಿಸಿದ ಆನೆಗಳು, ಕುದುರೆಗಳು, ರಥಗಳು ಮತ್ತು ಕಾಲಾಳುಗಳು ಇವರ ಶಬ್ದವು ಎಲ್ಲೆಲ್ಲಿಯೂ ಕೇಳಿಬರುತ್ತಿತ್ತು. ॥೩೦॥

ಈ ಸೈನ್ಯದವರ ಕಾಲುಗಳ ವೇಗದ ಬಡಿತದಿಂದ ಎತ್ತರವಾಗಿ ಏಳುತ್ತಿದ್ದ ಧೂಳಿನ ಸಮೂಹವು, ಅಮಾವಾಸ್ಯೆ ರಾತ್ರಿಯ ಕತ್ತಲೆಯಂತೆ, ವಿಶೇಷವಾದ ಕತ್ತಲೆಯನ್ನು ಎಲ್ಲೆಲ್ಲಿಯೂ ಉಂಟುಮಾಡಿತು. ॥೩೧॥

ಸೇನಾಭರಾಽಽಕ್ರಾಂತಮಹೀ ನಿವೇಶಾತ್ತಲ ಸಂಸ್ಥಿತಂ ।
ತಮಃ ಸ್ಯಾದುದ್ಗತಮಿದಂ ಮಹೀ ವಾ ಸೈನ್ಯಮರ್ದಿತಾ ॥೩೨॥

ಕ್ಲೇಶಾತ್ ಪ್ರಾಪ್ತಾಽತಿ ಕೃಶತಾಂ ಭೀತ್ಯಾ ನಾಥಮುಪೇಯುಷೀ ।
ತಥಾ ರಜೋಮಹಾಸಂಘ ವೇಗೋರ್ಧ್ವಗತಿ ಹೇತುತಃ ॥೩೩॥

ಭೂಮ್ಯಭಾವಾದಥೋ ವೇಗಾತ್ ಸೇನಾ ಯಾಂತೀವ ಲಕ್ಷ್ಯತೇ ।
ಇತ್ಯಾದಿ ತರ್ಕಮಾಪನ್ನಾ ವೈಮಾನಿಕ ಗಣಾಸ್ತದಾ ॥೩೪॥

ಅಥಾಽಭವನ್ಮಹಾಯುದ್ಧಂ ಸೇನಯೋಃ ಶಕ್ತಿದೈತ್ಯಯೋಃ ।
ನದತ್ಸು ಯುದ್ಧವಾದ್ಯೇಷು ಯುಕ್ತೇಷ್ವಾಸ್ಫೋಟಗರ್ಜನೈಃ ॥೩೫॥

ಹೆಚ್ಚಾದ ಸೈನ್ಯವು ಆಕ್ರಮಿಸಿದುದರಿಂದ ಎದ್ದ ಧೂಳಿನ ರಾಶಿಯು ಭೂಮಿಯ ಕೆಳಭಾಗದಲ್ಲಿದ್ದ ಕತ್ತಲೆಯೇ ಮೇಲಕ್ಕೆದ್ದಿತೋ ಅಥವಾ ಸೈನ್ಯದ ತುಳಿತಕ್ಕೆ ಸಿಕ್ಕಿದ ಭೂಮಿಯೇ ಮೇಲಕ್ಕೆದ್ದಿತೋ ಎಂಬ ಸಂದೇಹಕ್ಕೆ ಅವಕಾಶವನ್ನು ಉಂಟುಮಾಡುತ್ತಿತ್ತು. ||೩೨||

ಸೈನ್ಯದ ಆಕ್ರಮಣದಿಂದ ಉಂಟಾದ ಕ್ಲೇಶದಿಂದ ಕೃಶವಾದ ಭೂಮಿಯು ಈ ಕಷ್ಟವನ್ನು ಹೇಳಿಕೊಳ್ಳಲು ಭಯದಿಂದ ತನ್ನ ಅಧಿಪತಿಯ ಕಡೆಗೆ ಇಕ್ಕಟ್ಟಾಗಿ ಸೇರಿ ಕಿರಿದಾಗಿ ಹೋಗುತ್ತಿದೆಯೋ ಎಂಬಂತೆ ಕಾಣಿಸುತ್ತಿತ್ತು. ಹಾಗೆಯೇ ಧೂಳಿನ ದೊಡ್ಡ ರಾಶಿಗಳ ವೇಗದಿಂದ ಮೇಲುಭಾಗಕ್ಕೆ ಭೂಮಿಯು ಹೋಗುತ್ತಿದೆಯೋ ಎಂಬಂತೆ ಕಾಣಿಸುತ್ತಿದ್ದಿತು. ||೩೩||

ಕೆಳಗೆ ಹೋಗಲು ಭೂಮಿಯೇ ಇಲ್ಲದಿರುವುದರಿಂದ ಸೈನ್ಯವು ಮೇಲೆ ಹೋಗುತ್ತಿದೆಯೋ ಎಂಬಂತೆ ಕಾಣಿಸುತ್ತಿತ್ತು ! ಇವೇ ಮುಂತಾದ ಸಂಶಯಗಳನ್ನು ಹೊಂದಿದವರಾಗಿ ದೇವತೆಗಳು ಮೇಲೆ ಆಶ್ಚರ್ಯಭರಿತರಾಗಿದ್ದರು. ||೩೪||

ಅನಂತರ ಶಕ್ತಿಗಳ ಮತ್ತು ರಾಕ್ಷಸರ ಸೈನ್ಯಗಳಿಗೆ ದೊಡ್ಡ ಯುದ್ಧವು ನಡೆಯಿತು. ಆಗ ಎರಡು ಕಡೆಗಳಲ್ಲಿಯೂ ಸೈನಿಕರು ಭುಜಗಳ ತಟ್ಟುವಿಕೆ, ಗರ್ಜನೆಗಳು, ಯುದ್ಧವಾದ್ಯಗಳು, ಇವೆಲ್ಲವುಗಳೂ ಕೇಳಿಬರುತ್ತಿದ್ದವು. ||೩೫||

ಶರಶಕ್ತ್ಯೃಷ್ಟಿಶೂಲಾಽಸಿ ಪಟ್ಟಾಽಸಿಪ್ರಾಸತೋಮರೈಃ ।
ಗದಾಚಕ್ರಭಿಂದಿಪಾಲ ಪರಿಘಾಽಂಕುಶಯಷ್ಟಿಭಿಃ ॥೩೬॥

ನಿರಂತರ ಮುಭೊಪ್ವಾಪ್ಯ ಪ್ರಯುಕ್ತೈಃ ಸೈನ್ಯಯುಗ್ಮಕಂ ।
ಹತಾಃ ಸ್ಮಃ ಸರ್ವಥಾಽಸ್ಮಾಕಂ ಶೋಕಃ ಪುತ್ರಾದಿನಾಶತಃ ॥೩೭॥

ಪ್ರಾಪ್ತಃ ಕಿಂ ಜೀವಿತೇನ ಸ್ಯಾಚ್ಛತ್ರುಭಿಃ ನಿರ್ಜಿತಾಽತ್ಮನಾಂ ।
ವಿಕ್ರಮ್ಯ ಯುಧಿ ಜಿತ್ವೇಮಾಃ ಶಕ್ತೀಃ ಪ್ರಾಪ್ಸ್ಯಾಮ ಆಶಿಷಂ ॥೩೮॥

ಅನ್ಯಥಾ ನಿಹತಾ ಯುದ್ಧೇ ವಸಾಮೋ ನಂದನೇ ವನೇ ।
ಇತಿ ನಿಶ್ಚಿತ್ಯ ತೇ ದೈತ್ಯಾ ಯುಯುಧುರ್ಬಲವತ್ತರಂ ॥೩೯॥

ಶಕ್ತಿಯೋಽಪ್ಯೇಷ ದೈತ್ಯಾನಾಮಧಿಃ ಸರ್ವಥಾ ತ್ವಿಮಾನ್ ।
ಹತ್ವಾ ಜಯಂ ಪರಮಕಂ ಪ್ರಾಪ್ಸ್ಯಾಮೋಽದ್ಯೈವ ಸರ್ವಥಾ ॥೪೦॥

ಬಾಣಗಳು, ಶಕ್ತ್ಯಾಯುಧಗಳು, ಋಷ್ಟಿ ಎಂಬ ಆಯುಧಗಳು, ಕತ್ತಿಗಳು, ಪಟ್ಟಾಯುಧಗಳು, ಪ್ರಾಸಾಯುಧಗಳು, ತೋಮರಾಯುಧಗಳು, ಗದೆ, ಚಕ್ರಾಯುಧಗಳು, ಭಿಂಧಿಪಾಲಾಯುಧ, ಪರಿಘಾಯುಧ, ಅಂಕುಶ, ದೊಣ್ಣೆಗಳು ಇವೆಲ್ಲವನ್ನೂ ಪ್ರಯೋಗಿಸುತ್ತಾ ಅವರು ಯುದ್ಧಮಾಡುತ್ತಿದ್ದರು. ॥೩೬॥

ಈರೀತಿಯಾಗಿ ಈ ಎಲ್ಲಾ ಆಯುಧಗಳನ್ನೂ ಎಡೆಬಿಡದೇ ಎರಡು ಸೈನ್ಯದವರೂ ಪ್ರಯೋಗಿಸುತ್ತಿದ್ದರು. ಅಯ್ಯಯ್ಯೋ ಹಾಳಾದೆವು! ನಮ್ಮ ಮಕ್ಕಳೇ ಮುಂತಾದವರು ನಾಶವಾದುದರಿಂದ ನಮಗೆ ದುಃಖವಾಗುತ್ತಿದೆ. ಎಂಬುದಾಗಿ ಸೈನಿಕರು ಕೂಗುತ್ತಿದ್ದರು. ॥೩೭॥

ಶತ್ರುಗಳು ನಮ್ಮನ್ನು ಸೋಲಿಸಿದ ಮೇಲೆ ನಾವು ಬದಿಕಿದ್ದು ತಾನೇ ಏನು ಪ್ರಯೋಜನ? ಆದ್ದರಿಂದ ನಾವುಗಳು ಶಕ್ತಿಗಳೊಂದಿಗೆ ಯುದ್ಧದಲ್ಲಿ ಬಲವಾಗಿ ಹೋರಾಡಿ ಜಯಿಸಿ ನಮ್ಮ ರಾಜನ ಅಶೀರ್ವಾದಕ್ಕೆ ಪಾತ್ರರಾಗೋಣ. ॥೩೮॥

ಹಾಗಲ್ಲದಿದ್ದರೆ ಯುದ್ಧದಲ್ಲಿ ಹಿಮ್ಮೆಟ್ಟದೆ ಸತ್ತು ವೀರಸ್ವರ್ಗದ ನಂದನ ವನದಲ್ಲಿ ವಾಸಮಾಡುವೆವು. ಎಂದು ನಿಶ್ಚಯಿಸಿ ಆ ರಾಕ್ಷಸರು ಬಹಳ ಬಲವಾಗಿ ಆ ಶಕ್ತಿಸೇನೆಯವರೊಂದಿಗೆ ಯುದ್ಧವನ್ನು ಮಾಡಿದರು. ॥೩೯॥

ರಾಕ್ಷಸರಿಗೆ ಮೇಲಿನ ಅಧಿಪತಿಯಾದ ರಾಜನು ಇವನಾಗಿದ್ದಾನೆ. ಆದ್ದರಿಂದ

ಇತಿ ಮತ್ವಾಽತಿವೇಗೇನ ಯುಯುಧುರ್ವೀರ್ಯವತ್ತರಾಃ ।
ಏವಂ ನಿಯುದ್ಧ್ಯಮಾನೇಷು ಶಕ್ತಿಭಿರ್ದಿತಿ ಜೇಷ್ವಥ ॥೪೧॥

ಪರಸ್ಪರಂ ಶಸ್ತ್ರಹತಾಃ ಪೇತುರ್ನಿರ್ಗತ ಜೀವನಾಃ ।
ಕೇಚಿಚ್ಛಾಲೀಕೃತಾಽಂಗಾಸ್ತು ಶರಜಾಲೈರ್ಗತಾಽಸವಃ ॥೪೨॥

ಯುದ್ಧವ್ರತಸ್ಯೇವ ಸಿದ್ಧ್ಯೈ ಸಹಸ್ರಾಽಕ್ಷಾಽತ್ಮತಾಂ ಯಯುಃ ।
ಕೇಷಾಂಚಿತ್ ಖಡ್ಗಘಾತೇನ ಶಿರಶ್ಚಟಿತಿ ಚೋತ್ಪತತ್ ॥೪೩॥

ರಾಹೋಃ ಶಿರ ಇವಾಽಽಕಾಶೇ ವ್ಯಾತ್ತಾಽಽಸ್ಯಂ ಗ್ರಸಿತುಂ ರವೇಃ ।
ಪೇಷಿತಾ ಮುದ್ಗರಾ ಘಾತೈಶ್ಚಕ್ರೈರ್ಮಧ್ಯೇ ವಿದಾರಿತಾಃ ॥೪೪॥

ನಾವು ಸರ್ವವಿಧದಲ್ಲೂ ಪ್ರಯತ್ನ ಮಾಡಿ ಇವನನ್ನು ಕೊಂದು ಶ್ರೇಷ್ಠವಾದ ಜಯವನ್ನು ಹೊಂದುವೆವು. ॥೪೦॥

ಈ ರೀತಿಯಾಗಿ ನಿಶ್ಚಯಿಸಿ ಬಹಳ ಬಲಿಷ್ಠರಾದ ರಾಕ್ಷಸರು ಬಹಳ ವೇಗವಾಗಿಯುದ್ಧಮಾಡಿದರು. ಹೀಗೆ ಶಕ್ತಿಗಳೂ ಕೂಡ ರಾಕ್ಷಸರೊಂದಿಗೆ ಬಲವಾಗಿ ಕಾದಾಡಿದರು. ॥೪೧॥

ಶಕ್ತಿಸೈನ್ಯ ಮತ್ತು ರಾಕ್ಷಸಸೈನ್ಯಗಳೆರಡೂ ಒಬ್ಬರಿಗೊಬ್ಬರು ಶಸ್ತ್ರಗಳಿಂದ ಹೊಡೆದಾಡಿ ತಮ್ಮ ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದರು. ಕೆಲವು ರಾಕ್ಷಸರ ಅವಯವಗಳು ಛಿದ್ರಛಿದ್ರವಾದವು. ಕೆಲವು ರಾಕ್ಷಸರುಗಳು ಶಕ್ತಿಗಳ ಬಾಣಗಳ ಸಮೂಹಗಳಿಂದ ಪ್ರಾಣಗಳನ್ನು ಬಿಟ್ಟರು. ॥೪೨॥

ಶಕ್ತಿಗಳು ಯುದ್ಧದಲ್ಲಿ ಜಯಿಸಬೇಕೆಂಬ ದೃಢವ್ರತದಿಂದ ಶಸ್ತ್ರಪ್ರಯೋಗವನ್ನು ಮಾಡಿದ್ದರಿಂದ ಕೆಲವು ರಾಕ್ಷಸರ ಶಿರಸ್ಸುಗಳು ಶಕ್ತಿಗಳ ಕತ್ತಿಗಳ ಪೆಟ್ಟುಗಳಿಂದ ಚಟ್ ಚಟ್ ಎಂದು ಸಿಡಿಯುತ್ತಾ ಮೇಲಕ್ಕೆ ಹಾರುತ್ತಿದ್ದವು. ॥೪೩॥

ಸೂರ್ಯನನ್ನು ನುಂಗುವುದಕ್ಕಾಗಿ ಬಾಯಿತೆರದಿರುವ ರಾಹುವಿನ ತಲೆಯಂತೆ, ಕೆಲವು ರಾಕ್ಷಸರ ತಲೆಗಳು ಶಕ್ತಿಗಳ ಹಾರೆಯೆಂಬ ಆಯುಧಗಳಿಂದಲೂ ಚಕ್ರಾಯುಧಗಳಿಂದಲೂ ಮಧ್ಯಭಾಗದಲ್ಲಿ ಸೀಳಿಹೋದವು. ॥೪೪॥

ಪ್ರೋತಾ ದೀರ್ಘೇಷು ಭಲ್ಲೇಷು ಸಂಘಶಸ್ತತ್ರ ಕೇಚನ ।
ಶರೈಃ ಶಿರಾಂಸಿ ಕೃತ್ತಾನಿ ಗಗನೇ ಯಾಂತಿ ವೇಗತಃ ॥೪೫॥

ಪ್ರವೃದ್ಧಕಾಕಪಕ್ಷಾಣಿ ಚಲತ್ಪಕ್ಷಿಗಣಾ ಇವ ।
ವಿಕೀರ್ಣಾಂಗೈಶ್ಚಿತಾ ಯುದ್ಧೇ ಭೂಮಿರ್ವಿರುರುಚೇ ತದಾ ॥೪೬॥

ಪಟೇ ವಿಲಿಖಿತಾನೀವ ಪ್ರತಿಮಾಂಗಾನ್ಯುಪಕ್ರಮೇ ।
ಅಸೃಗ್ವಹಾ ವವೌ ತತ್ರ ಚಿತ್ರಕಾರಪ್ರಮಾದತಃ ॥೪೭॥

ಸ್ಖಲಿತೋ ಹ್ಯಾಲಕ್ತಕ ಇವ ಕ್ವಚಿಚ್ಛೋಷಂ ಸಮಾಗತಾ ।
ಚಿತ್ರಕಾರೇಣ ಝುಟಿತಿ ಪ್ರಮೃಷ್ಟ ಇವ ಭಾಸತೇ ॥೪೮॥

ಶರವಿದ್ಧಾ ಗತಪ್ರಾಣಾ ಸ್ತಸ್ಥುಃ ಕೇಚಿತ್ ಕ್ವಚಿತ್ ಕ್ವಚಿತ್ ।
ಸಮಗ್ರಲಿಖಿತಾನೀವ ಚಿತ್ರಾಣಿ ದದೃಶುರ್ಜನು ॥೪೯॥

ಶಕ್ತಿಗಳ ಉದ್ದವಾದ ಭರ್ಜಿಗಳಲ್ಲಿ ಕೆಲವು ರಾಕ್ಷಸರು ಗುಂಪು ಗುಂಪಾಗಿ ಪೋಣಿಸಿದಂತಿದ್ದರು. ಅಲ್ಲದೆ ಕೆಲವು ರಾಕ್ಷಸರ ತಲೆಗಳು ಶಕ್ತಿಗಳ ಬಾಣಗಳ ಹೊಡೆತದಿಂದ ಆಕಾಶದಲ್ಲಿ ವೇಗವಾಗಿ ಹಾರುತ್ತಿದ್ದವು. ॥೪೫॥

ರಾಕ್ಷಸರ ತಲೆಗಳ ನಾನಾವಿಧವಾದ ಜುಟ್ಟುಗಳು ಚಲಿಸುತ್ತಿರುವ ಹಕ್ಕಿಗಳ ಸಮೂಹಗಳಂತೆ ಕಾಣುತ್ತಾ ಇದ್ದವು. ಚೂರು ಚೂರಾದ ಅವಯವಗಳುಳ್ಳ ರಾಕ್ಷಸರ ದೇಹಗಳಿಂದ ಯುದ್ಧಭೂಮಿಯು ಪ್ರಕಾಸಿಸುತ್ತಿತ್ತು. ॥೪೬॥

ಬಟ್ಟೆಯಲ್ಲಿ ಬರೆದ ಅಥವಾ ಕಲ್ಲಿನಲ್ಲಿ ಕೆತ್ತಿದ ಪ್ರತಿಮೆಯ ದೇಹಗಳಂತೆ ರಾಕ್ಷಸರ ದೇಹಗಳು ಚಲಿಸದೇ, ಚಿತ್ರಕಾರನ ಅಜಾಗರೂಕತೆಯಿಂದ ಸುರಿದು ಹೋದ ಬಣ್ಣದಂತೆ, ರಕ್ತದ ಕೋಡಿಗಳನ್ನೇ ಹರಿಯಿಸುತ್ತಿದ್ದವು. ॥೪೭॥

ಚಿತ್ರಕಾರನ ಕೈಯ್ಯಿಂದ ಜಾರಿದ ಅರಗಿನರಸದಂತೆ ಕೆಲವುಕಡೆ ಶಕ್ತಿಪ್ರವಾಹವು ಒಣಗಿತ್ತು. ಕೂಡಲೇ ಅದನ್ನು ಚಿತ್ರಕಾರನು ಒರೆಸಿರುವಂತೆ ರಕ್ತಪ್ರವಾಹವು ಅಳಿಸಿಹೋಗಿತ್ತು ॥೪೮॥

ಕೆಲವುಕಡೆ ರಾಕ್ಷಸರು ಶಕ್ತಿಗಳ ಬಾಣಗಳಿಗೆ ಸಿಕ್ಕಿ ಪ್ರಾಣವನ್ನು ಕಳೆದುಕೊಂಡಿದ್ದರು. ಅಲ್ಲಿ ಸಂಪೂರ್ಣವಾಗಿ ಬರೆದ ಚಿತ್ರಗಳಂತೆ ಅವರು ಕಾಣುತ್ತಿದ್ದರು. ॥೪೯॥

ಏವಂ ಮುಹೂರ್ತ ಮಾತ್ರೇಣ ಭಂಡದೈತ್ಯ ಮಹಾಚಮೂಃ ।
ನನಾಶಾಽಽಸಾದ್ಯ ಶಕ್ತೀನಾಂ ಸೇನಾಽಗ್ನಿಂ ಶಲಭೋ ಯಥಾ ॥೫೦॥

ಅಥ ಸೇನಾಽಧಿಪಾಸ್ತಸ್ಯ ಕ್ರೋಧಾರುಣಿತ ಲೋಚನಾಃ ।
ಶಕ್ತಿಸೇನಾಂ ಶಸ್ತ್ರವರ್ಷೈ ರರ್ದಯಾಮಾಸುರುಚ್ಚಕೈಃ ॥೫೧॥

ದೃಷ್ಟ್ವಾ ಸೇನಾಧಿಪೈಃ ಸೇನಾಮರ್ದಿತಾ ಮತಿವಿಹ್ವಲಾಂ ।
ಮಂತ್ರಿಣೀ ದಂಡಿನೀ ಚಾಽಶ್ವಾಽಽರೂಢಾ ಸಂಪದಧೀಶ್ವರೀ ॥೫೨॥

ಪರಿವಾರಶಕ್ತಿಯುಕ್ತಾ ಯುಯುಧುರ್ಮನ್ಯುದೀಪಿತಾಃ ।
ತಾ ಯುದ್ಧ್ವಾ ಸುಚಿರಂ ದೈತ್ಯೈಃ ಸೇನಾಽಧೀಶೈರ್ಮಹಾಬಲೈಃ ॥೫೩॥

ಪ್ರಸಹ್ಯ ನಾಶಯಾಮಾಸುಃ ಸರ್ವಾನ್ ಸೇನಾಪತೀನ್ ಹಿ ತಾಃ ।
ವಕ್ರಾಕ್ಷಂ ವಾಮನಂ ತಾಲಂ ದೀರ್ಘನಾಸಂ ಸುಬಾಹುಕಂ ॥೫೪॥

ಈ ರೀತಿಯಾಗಿ ಭಂಡರಾಕ್ಷಸನ ದೊಡ್ಡಸೈನ್ಯವು ಶಕ್ತಿಗಳ ಸೈನ್ಯದ ಬಾಣಗಳ ಅಗ್ನಿಗೆ ಆಹುತಿಯಾಗಿ ಪತಂಗದ ಹುಳುಗಳ ಗುಂಪುಗಳಂತೆ ನಾಶವಾಗುತ್ತಿದ್ದಿತು. ॥೫೦॥

ಅನಂತರ ಆ ರಾಕ್ಷಸರ ರಾಜನ ಸೇನಾಪತಿಗಳು ಕೋಪದಿಂದ ಕೆಂಪೇರಿದ ಕಣ್ಣುಳ್ಳವರಾಗಿ ಶಕ್ತಿಗಳ ಸೈನ್ಯಕ್ಕೆ ಶಸ್ತ್ರಗಳ ಸಮೂಹಗಳನ್ನೇ ಸುರಿಸುತ್ತಾ ಅವರನ್ನು ಬಲವಾಗಿ ಪೀಡಿಸಿದರು. ॥೫೧॥

ಸೇನಾಪತಿಗಳು ತಮ್ಮ ಸೈನ್ಯವನ್ನು ಪೀಡಿಸಿದ್ದರಿಂದ ಅದು ಬಹಳ ಕಳವಳಕ್ಕೀಡಾಗಿರುವುದನ್ನು ಕಂಡು ಮಂತ್ರಿಣೀ, ದಂಡಿನೀ, ಅಶ್ವಾರೂಢಾ, ಸಪನ್ನಾಥಾ ಎಂಬ ನಾಲ್ವರು ಶಕ್ತಿಯರೂ ಯುದ್ಧಕ್ಕೆ ತೊಡಗಿದರು. ॥೫೨॥

ಆ ನಾಲ್ವರು ಶಕ್ತಿಯರೂ ಕೋಪದಿಂದುರಿಯುತ್ತಾ ತಮ್ಮ ಪರಿವಾರ ಶಕ್ತಿಯರೊಂದಿಗೆ ಕೂಡಿದವರಾಗಿ ಯುದ್ಧಮಾಡಿದರು. ಮಹಾ ಬಲಿಷ್ಠರಾದ ಸೇನಾಧಿಪತಿಗಳೊಡನೆ ಬಹಳ ಕಾಲದವರೆಗೆ ಕಾದಾಡಿದರು. ॥೫೩॥

ಅವರು ಬಲವಾಗಿ ಕಾದಾಡಿ ಎಲ್ಲಾ ಸೇನಾಪತಿಗಳನ್ನೂ ನಾಶಮಾಡಿದರು. ಈರೀತಿಯಲ್ಲಿ ವಕ್ರಾಕ್ಷ, ವಾಮನ, ತಾಲ, ದೀರ್ಘನಾಸ, ಸುಬಾಹುಕ ಎಂಬ ಸೇನಾಪತಿಗಳೂ ನಾಶವಾದರು. ॥೫೪॥

ವಿದ್ಯುಜ್ಜಿಹ್ವಂ ಚ ಸಮರೇ ನಾಶಯತ್ತುರಗಾಶ್ರಯಾ ।
ಸಂಪತ್ಕರೀ ತಾಲಜಂಘಂ ಕುಟಿಲಾಕ್ಷಂ ರಣೋದ್ಧತಂ ॥೫೫॥

ನಿಶಠಂ ಶಂಬರಂ ಕ್ರೂರಂ ಚಕಾರ ವ್ಯಸುಮಾಹವೇ ।
ಜಂಭಿನೀ ಕ್ರೂರವದನಂ ಸ್ತಂಭಿನೀ ಸೂಚಿಕಾಮುಖಂ ॥೫೬॥

ಅಂಧಿನೀ ಕಂಟಕಕರಂ ಮೃಗವಕ್ತ್ರಂ ಚ ಮೋಹಿನೀ ।
ಕಾಲಕೇಯಂ ಭೈರವೋಽಪಿ ವ್ಯಾಘ್ರಾಸ್ಯಂ ಕಾಲಕರ್ಷಿಣೀ ॥೫೭॥

ಸ್ವಪ್ನೇಶೀ ಮುಂಡಮೂರ್ಧಾನಂ ವಟುಕೋ ಭಂಡಭಾಷಣಂ ।
ಉಮ್ಲುಕಂ ಕರಭಾಸ್ಯಂ ಚ ಮಹಾಕುಕ್ಷಿಂ ಶಿವಾರವಂ ॥೫೮॥

ಶೋಣಿತಾಕ್ಷಂ ಕಾಲಕೇತುಂ ಕಾಲಗ್ರೀವಂ ಮಹಾಹನುಂ ।
ಗೃಧ್ರವಾಹಂ ಕಾಕಮುಖಂ ದಂಡಿನೀ ನಾಶಯದ್ಯುಧಿ ॥೫೯॥

ಸಂಪತ್ಕರೀಶಕ್ತಿಯು ಕುದುರೆಯ ಮೇಲೆ ಕುಳಿತುಕೊಂಡು ಯುದ್ಧದಲ್ಲಿ ವಿದ್ಯುಜ್ಜಿಹ್ವ, ತಾಲಜಂಘ, ಕುಟಿಲಾಕ್ಷ, ರಣೋದ್ಧತ ಎಂಬ ರಾಕ್ಷಸರ ಸೇನಾನಾಯಕರನ್ನು ನಾಶಮಾಡಿದಳು. ॥೫೫॥

ಸಂಪನ್ನಾಥಾಶಕ್ತಿಯು, ನಿಶಠ, ಶಂಬರ, ಕ್ರೂರ, ಎಂಬ ಸೇನಾಪತಿಗಳನ್ನೂ ಯುದ್ಧದಲ್ಲಿ ನಾಶಮಾಡಿದಳು. ಜಂಭಿನೀಶಕ್ತಿಯು ಕ್ರೂರವದನನೆಂಬ ರಾಕ್ಷಸ ಸೇನಾಪತಿಯನ್ನೂ, ಸ್ತಂಭಿನೀಶಕ್ತಿಯು ಸೂಚಿಕಾಮುಖನೆಂಬ ಸೇನಾಪತಿಯನ್ನೂ ನಾಶಮಾಡಿದರು. ॥೫೬॥

ಅಂಧಿನೀಶಕ್ತಿಯು ಕಂಟಕಕರ, ಎಂಬ ಸೇನಾಪತಿಯನ್ನೂ ಮೋಹಿನೀ ಶಕ್ತಿಯು ಮೃಗವಕ್ತ್ರನೆಂಬ ಸೇನಾನಾಯಕನನ್ನೂ ಭೈರವನುಕಾಲಕೇಯನೆಂಬ ಸೇನಾಪತಿಯನ್ನೂ ಕಾಲಕರ್ಷಿಣೀಶಕ್ತಿಯು ವ್ಯಾಘ್ರಾಸ್ಯನನ್ನೂ ನಾಶಮಾಡಿದರು. ॥೫೭॥

ಸ್ವಪ್ನೇಶೀಶಕ್ತಿಯು ಮುಂಡಮೂರ್ಧ ಎಂಬ ರಾಕ್ಷಸನನ್ನೂ, ವಟುಕನು ಭಂಡಭಾಷಣ ಎಂಬ ರಾಕ್ಷಸನನ್ನೂ, ಉಮ್ಲುಕ, ಕರಭಾಸ್ಯ,ಮಹಾಕುಕ್ಷಿ, ಶಿವಾರವ, ಎಂಬರಾಕ್ಷಸರನ್ನೂ, ನಾಶಮಾಡಿದರು. ॥೫೮॥

ದಂಡನಾಯಕಿಯು ಶೋಣಿತಾಕ್ಷ, ಕಾಲಕೇತು, ಕಾಲಗ್ರೀವ, ಮಹಾಹನು, ಗೃಧ್ರವಾಹ, ಕಾಕಮುಖ, ಎಂಬ ರಾಕ್ಷಸ ಸೇನಾಪತಿಗಳನ್ನೂ ನಾಶಮಾಡಿದಳು. ॥೫೯॥

ಶುಕಶ್ಯಾಮಾ ಶಾರಿಕಾಖ್ಯಾ ಸಂಗೀತಾ ಲಘುಪೂರ್ವಿಕಾ ।
ಸಾಹಿತ್ಯಶ್ಯಾಮಲಾಚೇತಿ ನಿಕುಂಭಂ ಕುಂಭಮಸ್ತಕಂ ॥೬೦॥

ಚಕ್ರಾಽಕ್ಷಂ ದೀರ್ಘದಂಷ್ಟ್ರಂ ಚ ನಾಶಯಾಮಾಸುರುಲ್ಬಣಂ ।
ಕಟಂಕಟಂ ಕರಂಜಾಕ್ಷಂ ಮುಂಡಂ ಚಂಡಂ ವೃಕಾನನಂ ॥೬೧॥

ಸಾಲಸೀರಂ ದ್ವಿಶೃಂಗಂ ಚ ಶುನಕಂ ಶೂರ್ಪಕರ್ಣಕಂ ।
ವಕ್ರಕುಕ್ಷಿಂ ವಾಮಮುಖಂ ಕಾಲಕಂ ಕೋಟರಂ ವಿಟಂ ॥೬೨॥

ಮಂತ್ರಿಣೀ ನಾಶಯಾಮಾಸ ಬಲಾದಾಕ್ರಮ್ಯ ದಾನವಾನ್ ।
ಏವಂ ನಿಶ್ಶೇಷತಃ ಸೇನಾ ಸೇನಪೇಷು ಹತೇಷ್ವಥ ॥೬೩॥

ಭಂಡೋ ಹೃಷ್ಟಮನಾಃ ಪ್ರಾಹ ಸಾರಥಿಂ ರಥ ಆಸ್ಥಿತಃ ।
ರಥಂ ಪ್ರಾಪಯ ಮೇ ಶೀಘ್ರಂ ಸಾರಥೇ ಶಕ್ತಿವಾಹಿನೀಂ ॥೬೪॥

ಶುಕಶ್ಯಾಮಾ, ಶಾರಿಕಾ, ಲಘುಸಂಗೀತಾ, ಸಾಹಿತ್ಯಶಾಮಲಾ, ಎಂಬ ಶಕ್ತಿಯರು ನಿಕುಂಭ ಮತ್ತು, ಕುಂಭಮಸ್ತಕ, ಎಂಬ ರಾಕ್ಷಸರನ್ನೂ ಯುದ್ಧದಲ್ಲಿ ನಾಶಮಾಡಿದರು. ॥೬೦॥

ಮೇಲೆಹೇಳಿದ ಶುಕಶ್ಯಾಮಲಾ ಮುಂತಾದ ಶಕ್ತಿಯರು ಚಕ್ರಾಸ್ಯ, ದೀರ್ಘದಂಷ್ಟ್ರ, ಕರಂಟಕ, ಕರಂಡಾಕ್ಷ, ಮುಂಡ, ಚಂಡ, ವೃಕಾನನ, ಎಂಬ ರಾಕ್ಷಸರನ್ನು ಬಲವಾಗಿ ಯುದ್ಧಮಾಡಿ ನಾಶಮಾಡಿದರು. ॥೬೧॥

ದಂಡನಾಯಕಿಯು ಸಾಲಸೀರ, ದ್ವಿಶೃಂಗ, ಶುನಕ, ಶೂರ್ಪಕರ್ಣಕ, ವಕ್ರಕುಕ್ಷಿ, ವಾಮಮುಖ, ಕಾಲಕ, ಕೋಟರ, ವಿಟ, ಎಂಬ ರಾಕ್ಷಸ ಸೇನಾಪತಿಗಳನ್ನೂ ನಾಶಮಾಡಿದಳು. ॥೬೨॥

ಮಂತ್ರಿಣಿಯು ರಾಕ್ಷಸರನ್ನು ಬಲವಾಗಿ ಆಕ್ರಮಿಸಿ ಇತರ ರಾಕ್ಷಸ ಸೇನಾಪತಿಗಳನ್ನೂ ನಾಶಮಾಡಿದಳು. ಈರೀತಿಯಾಗಿ ರಾಕ್ಷಸ ಸೈನ್ಯ ಮತ್ತು ಸೇನಾಪತಿಗಳು ಸಂಪೂರ್ಣವಾಗಿ ನಾಶಮಾಡಲ್ಪಟ್ಟರು. ॥೬೩॥

ಭಂಡನು ಸಂತೋಷದಿಂದ ರಥದಲ್ಲಿ ಕುಳಿತು ಸಾರಥಿಗೆ ಈರೀತಿಯಲ್ಲಿ ಹೇಳಿದನು. ಎಲೈ ಸಾರಥಿಯೇ, ನನ್ನ ರಥವನ್ನು ಶಕ್ತಿಸೈನ್ಯದೊಳಕ್ಕೆ ಶೀಘ್ರವಾಗಿ ನುಗ್ಗಿಸು. ॥೬೪॥

ಪಶ್ಯಾಽದ್ಯ ಮಮ ವೀರ್ಯಂ ತ್ವಂ ವಿಚಿತ್ರಂ ರೋಮಹರ್ಷಣಂ ।
ಶ್ರುತ್ವಾ ವಾಕ್ಯಂ ದೈತ್ಯಪತೇ ರ್ವಾಹಯನ್ ರಥಮಾಶು ಸಃ ॥೬೫॥

ಸಂದಿಹಾನೋ ದೈತ್ಯಪತಿಂ ಪಪ್ರಚ್ಛ ಪ್ರಣತಸ್ತದಾ ।
ದೈತ್ಯೇಶ್ವರ ತ್ವಯಾಽಽಜ್ಞಪ್ತಃ ಕಿಂಚಿತ್ಪ್ರಷ್ಟುಂ ಸಮೀಹಿತಂ ॥೬೬॥

ತದ್ದೇಹಿ ಪ್ರಣತಾಯ ತಂ ಸಂದಿಹಾನೋಽಸ್ಮಿ ಸರ್ವಥಾ ।
ಇತಿ ಪೃಷ್ಟೇನ ಚಾಽಜ್ಞಪ್ತೋ ಪ್ರಾಹ ದೈತ್ಯೇನ ಸಾರಥಿಃ ॥೬೭॥

ದೈತ್ಯೇಶ್ವರೈತಾಂ ಶಕ್ತೀನಾಂ ಸೇನಾಂ ಮನ್ಯೇಽಪರಾಜಯಾಂ ।
ವಿಶುಕ್ರಾದ್ಯಾ ಯಯಾ ಯುದ್ಧೇ ಹತಾ ಲೀಲಾ ವಿಲಾಸತಃ ॥೬೮॥

ಅಥ ತ್ವಾಮಭಿಪಶ್ಯಾಮಿ ಹತಭ್ರಾತೃ ಸುತಾಽದಿಕಂ ।
ಹೃಷ್ಟಾಂತರಂ ಶೋಕಲೇಶಾಽಸ್ಪೃಷ್ಟಂ ಪ್ರವ್ರಜಿತಂ ಯಥಾ ॥೬೯॥

ಈಗ ನೀನು ರೋಮಾಂಚವನ್ನುಂಟುಮಾಡುವ ನನ್ನ ಪರಾಕ್ರಮವನ್ನು ನೋಡುವೆ. ಎಂಬುದಾಗಿ ಭಂಡನು ಹೇಳಿದ ಮಾತನ್ನು ಕೇಳಿ ಅವನು ಶೀಘ್ರನಾಗಿ ರಥವನ್ನು ಮುಂದಕ್ಕೆ ಬಿಟ್ಟನು. ॥೬೫॥

ಆಗಸಾರಥಿಯು ನಮಸ್ಕರಿಸಿ ಸಂದೇಹಪಟ್ಟು ರಾಕ್ಷಸರಾಜನಾದ ಭಂಡನನ್ನು ಕುರಿತು, ಓ ರಾಕ್ಷಸರಾಜನೇ, ತಮ್ಮ ಅಪ್ಪಣೆಯನ್ನು ಪಡೆದು ಒಂದು ವಿಚಾರವನ್ನು ಕೇಳಬಯಸುತ್ತೇನೆ. ಎಂದನು. ॥೬೬॥

ಸಂದೇಹಪಡುತ್ತಿರುವ ಮತ್ತು ನಿನ್ನನ್ನು ನಮಸ್ಕರಿಸಿ ಸೇವಕನಾಗಿರುವ ನನಗೆ ದಯವಿಟ್ಟು ಸರ್ವವಿಧದಲ್ಲೂ ಆ ಪ್ರಶ್ನೆಯನ್ನು ಕೇಳಲು ಅಪ್ಪಣೆಯನ್ನು ಕೊಡಿ. ಎಂದು ಕೇಳಿದ ಸಾರಥಿಗೆ ಭಂಡನು ಅಪ್ಪಣೆಯನ್ನಿತ್ತನು. ॥೬೭॥

ಓ ರಾಕ್ಷಸರಾಜನೇ, ಶಕ್ತಿಗಳ ಸೈನ್ಯವನ್ನು ಸೋಲಿಸುವುದು ಅಸಾಧ್ಯವೆಂದು ನನಗೆ ತೋರುವುದು. ಏಕೆಂದರೆ ದೇವಿಯು ಲೀಲಾವಿಲಾಸಗಳಿಂದಲೇ ವಿಶುಕ್ರ ಮುಂತಾದವರೂ ಯುದ್ಧದಲ್ಲಿ ನಾಶವಾದರು. ॥೬೮॥

ಅನಂತರ ನಿಮ್ಮತಮ್ಮಂದಿರು, ಮಕ್ಕಳು ಮುಂತಾದವರೂ ನಾಶವಾದದ್ದನ್ನೂ ನಾನು ನೋಡುತ್ತಾ ಇದ್ದೇನೆ. ಇದನ್ನೆಲ್ಲವನ್ನೂ ಕಂಡಿದ್ದರೂ ಸ್ವಲ್ಪವೂ ದುಃಖವೇ ಇಲ್ಲದಂತೆ ಬಹಳ ಸಂತೋಷದಿಂದ ತಾವು ಹೇಗೆ ಹೊರಟಿರುವಿರಿ? ॥೬೯॥

ಬಾಲಯಾ ಸಹ ತೇ ಯುದ್ಧೇ ಪೂರ್ವಂ ಸಮುಭಿಲಕ್ಷಿತಾ ।
ಭಕ್ತಿರ್ದೇವ್ಯಾ ಮತಿತರಾಂ ತನ್ಮೇ ಬ್ರೂಹಿ ಯಥಾ ತಥಂ ॥೭೦॥

ಏವಂ ಪರಾಭವಂ ದುಃಖಹೇತಾವತಿ ಭಯಂಕರೇ ।
ನ ಶೋಕಂ ನಾಽಪಿ ಭೀತಿಂ ವಾ ಲಕ್ಷಯೇ ತವ ಲೇಶತಃ ॥೭೧॥

ಇತಿ ಭೂಯಃ ಸುಪೃಚ್ಛಂತಂ ದೈತ್ಯಂ ತಂ ಚಿರಸೇವಿನಂ ।
ಪ್ರಾಹ ಭಂಡಃ ಸ್ಮಯನ್ ಕಿಂಚಿತ್ ಶೃಣು ದೈತ್ಯೇತ್ಯುಪಾಕ್ರಮತ್॥೭೨॥

ಏಷಾ ಯಾ ಲಲಿತಾ ದೇವೀ ಸಾ ಪರಾತ್ಪರಮಾ ಶಿವಾ ।
ಏತಯಾ ನಿಹತೋ ಯುದ್ಧೇ ಪ್ರಾಪ್ಸ್ಯಾಮ್ಯುತ್ತಮಂ ಫಲಂ॥೭೩॥

ತಾವು ಕುಮಾರಿಯೊಂದಿಗೆ ಯುದ್ಧಮಾಡಿ ಈ ವಿಷಯವನ್ನು ಮನಗಂಡಿದ್ದೀರಿ; ಅಲ್ಲದೆ ತಮಗೆ ದೇವಿಯಲ್ಲಿ ಭಕ್ತಿಯು ಅತಿಶಯವಾಗಿದೆಯೆಂದು ತೋರುತ್ತದೆ. ಈ ವಿಷಯಗಳಿಗೆಲ್ಲಕ್ಕೂ ತಾವು ನನಗೆ ದಯವಿಟ್ಟು ಸಮಾಧಾನವನ್ನು ಹೇಳಿ. ||೭೦||

ಈ ರೀತಿಯಾಗಿ ಅತಿಭಯಂಕರವೂ ಬಹಳ ದುಃಖಕ್ಕೆ ಕಾರಣವೂ ಆದ ಸೋಲುಸಂಭವಿಸಿದ್ದಾಗ್ಯೂ ತಮಗೆ ಶೋಕ, ಅಥವಾ ಭಯವು ಲೇಶಮಾತ್ರವೂ ಕಾಣುವುದಿಲ್ಲ. ||೭೧||

ಈ ರೀತಿಯಾಗಿ ಪುನಃ ಪುನಃ ಚೆನ್ನಾಗಿ ಪ್ರಶ್ನಿಸುತ್ತಿರುವ, ತನ್ನನ್ನು ಬಹಳ ಕಾಲದಿಂದಲೂ ಸೇವಿಸುತ್ತಿರುವ, ಸಾರಥಿಯನ್ನು ಕುರಿತು ಭಂಡರಾಕ್ಷಸನು ಮುಗುಳು ನಗೆಯನ್ನು ನಗುತ್ತಾ, ಎಲೈ ರಾಕ್ಷಸರಾಜನೇ, ಸ್ವಲ್ಪ ನನ್ನ ಮಾತನ್ನು ಕೇಳು. ಎಂದು ಹೇಳಲು ಪ್ರಾರಂಭಿಸಿದನು. ||೭೨||

ಈ ಲಲಿತಾದೇವಿಯು ಶಿವನಪತ್ನಿಯಾದ ಪರಾತ್ಪರಶಕ್ತಿಯೆಂದು ತಿಳಿ. ಈಕೆಯು ನನ್ನನ್ನು ಯುದ್ಧದಲ್ಲಿ ಕೊಂದಮೇಲೆ ನಾನು ಅತ್ಯಂತ ಶ್ರೇಷ್ಠವಾದ ಫಲವನ್ನು ಪಡೆಯುವೆನು. ||೭೩||

ತಲ್ಲೋಕಂ ಶೋಕರಹಿತಮಭಯಂ ಸರ್ವತಃ ಸುಖಂ ।
ಇಮಂ ಲೋಕಂ ಸಶೋಕಂ ವೈ ಸಭಯಂ ದುಃಖಮಾತ್ರಕಂ ॥೭೪॥

ಮಾಯಯಾ ಮೋಹಿತೋ ಜಂತುರ್ಮನ್ಯತೇಽತ್ಯುತ್ತಮಂ ಮುಧಾ ।
ತತ್ರಾಽಪ್ಯ ಸುರಲೋಕೋ ವೈ ರಾಜಸೋಽತಿ ಭಯಂಕರಃ ॥೭೫॥

ಇಮಂ ವರಂ ಯೋ ಮನುತೇ ಸಮುಗ್ಧಪಶುಕಃ ಸ್ಮೃತಃ ।
ಅಹಂ ಶ್ರೀಪದ್ಮಸಂಸ್ಥಾನದೂತೋ ಮಾಣಿಕ್ಯಶೇಖರಃ ॥೭೬॥

ಸ್ವಕರ್ಮಪಾಕವಶತ ಏತಾಂ ಪ್ರಾಪ್ತೋಽವರಾಂ ದಶಾಂ ।
ತಥಾಽಪಿ ಕೃಪಯಾ ದೇವ್ಯಾ ಮಾಂ ಸ್ಮೃತಿರ್ನೋಜಹಾತಿ ವೈ ॥೭೭॥

ಏಷಾ ಸರ್ವೇಶ್ವರೀ ದೇವೀ ಬ್ರಹ್ಮಾದಿಜನನೀ ಪರಾ ।
ಏತಯಾ ನಿಹತಾ ಯುದ್ಧೇ ಭ್ರಾತರೋ ಮೇ ಸುತಾ ಅಪಿ ॥೭೮॥

ಆಕೆಯ ಲೋಕವು ದುಃಖವಿಲ್ಲದುದಾಗಿಯೂ, ಭಯವಿಲ್ಲದುದಾಗಿಯೂ, ಎಲ್ಲಾ ಬಗೆಯಲ್ಲಿಯೂ ಸುಖವನ್ನೇ ಉಂಟುಮಾಡುವುದಾಗಿದೆ. ಈ ಲೋಕವಾದರೋ ದುಃಖದಿಂದ ಕೂಡಿರುವುದಾಗಿಯೂ, ಭಯ ಮತ್ತು ದುಃಖಗಳಿಂದ ಪೂರ್ಣವಾಗಿಯೂ ಇದೆ. ॥೭೪॥

ಮಾಯೆಯಿಂದ ಮೋಹಗೊಂಡಿರುವ ಪ್ರಾಣಿಯು ಈ ಲೋಕವೇ ಸರ್ವಶ್ರೇಷ್ಠವೆಂದು ವ್ಯರ್ಥವಾಗಿ ತಿಳಿಯುತ್ತಾನೆ. ಅದರಲ್ಲಿಯೂ, ಈ ರಾಕ್ಷಸಲೋಕವು ರಜೋಗುಣದಿಂದ ಕೂಡಿಯೂ, ಬಹಳ ಭಯಂಕರವಾಗಿಯೂ ಇದೆ. ॥೭೫॥

ಈ ಲೋಕವೇ ಸರ್ವಶ್ರೇಷ್ಠವೆಂದು ತಿಳಿಯುವ ಪ್ರಾಣಿಯನ್ನು ಕೇವಲ ಮೂಢನಾದಪಶುವೆಂದೇ ತಿಳಿಯಬೇಕು. ನಾನು ಶ್ರೀಪದ್ಮದಮೇಲೆ ಮಂಡಿಸಿರುವ ಶ್ರೀತ್ರಿಪುರಸುಂದರೀದೇವಿಯ ದೂತನಾದ ಮಾಣಿಕ್ಯಶೇಖರನೆಂದು ತಿಳಿ. ॥೭೬॥

ನನ್ನ ಪೂರ್ವಕರ್ಮದ ಫಲಕ್ಕನುಸಾರವಾಗಿ ಇಂತಹ ದುರ್ದಶೆಗೆ ಇಳಿದೆನು. ಆದಾಗ್ಯೂ ದೇವಿಯ ಕೃಪೆಯಿಂದ ನನ್ನ ನಿಜವಾದ ಸ್ವರೂಪಜ್ಞಾಪಕವು ನಾಶವಾಗಿಲ್ಲ. ॥೭೭॥

ಬ್ರಹ್ಮನೇ ಮೊದಲಾದವರನ್ನು ಸೃಷ್ಟಿಸಿದ, ಶ್ರೇಷ್ಠಳಾದ ಮತ್ತು ಎಲ್ಲರಿಗೂ ಅಧೀಶ್ವರಿಯಾದ ದೇವಿಯೇ ಈಕೆಯೆಂದು ತಿಳಿ. ಈಕೆಯೇ ಯುದ್ಧದಲ್ಲಿ ನನ್ನ ತಮ್ಮಂದಿರು ಮತ್ತು ಮಕ್ಕಳನ್ನೂ ನಾಶಮಾಡಿದ್ದಾಳೆ. ॥೭೮॥

ಶಸ್ತ್ರಾಽಗ್ನಿ ಪಾವಿತಾಸ್ತಸ್ಯಾ ಲೋಕಂ ಪ್ರಾಪ್ತಾಃ ಪರಾತ್ಪರಂ ।
ಮಯಾ ಸಹ ತ್ವಮಪ್ಯಾಶು ತಲ್ಲೋಕಂ ಪ್ರಾಪ್ಯ ಭ್ರಾತೃಭಿಃ ॥೭೯॥

ಪುತ್ರೈಃ ಸಮೇಷ್ಯಸಿ ಪುನಸ್ತತೋ ಯಾಸ್ಯಮೃತಾಂ ಗತಿಂ ।
ಇತಿ ಶ್ರುತ್ವಾ ಭಂಡವಚೋ ವಿಸ್ಮಿತೋಽಭೂತ್ ಸ ಸಾರಥಿಃ ॥೮೦॥

ಸಂಶ್ಲಾಘ್ಯ ದೈತ್ಯರಾಜಂ ತಂ ಜಹೌ ಶೋಕಂ ಸ್ವಹೃದ್ಗತಂ ।
ದೃಷ್ಟ್ವಾ ಶ್ರೀಲಲಿತಾಮಗ್ರೇ ನಮಶ್ಚಕ್ರೇ ಸುಭಕ್ತಿತಃ ॥೮೧॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಭಂಡ, ಲಲಿತಾ ಸಮಾಗಮೋ ನಾಮ ಷಟ್ಸಪ್ತತಿತಮೋಽಧ್ಯಾಯಃ

ಆಕೆಯ ಶಸ್ತ್ರಗಳ ಅಗ್ನಿಯಿಂದ ನನ್ನ ತಮ್ಮಂದಿರೇ ಮೊದಲಾದವರು ಪರಿಶುದ್ಧರಾಗಿ ಅತ್ಯಂತ ಶ್ರೇಷ್ಠವಾದ ಆಕೆಯ ಲೋಕವನ್ನೇ ಹೊಂದಿದರು. ನನ್ನ ತಮ್ಮಂದಿರೊಡನೆ ನಾನೂ ಮತ್ತೂ ನೀನೂ ಕೂಡ ಆಕೆಯ ಶ್ರೇಷ್ಠವಾದ ಲೋಕವನ್ನೇ ಶೀಘ್ರವಾಗಿ ಹೊಂದೋಣ! ॥೭೯॥

ನೀನೂ ಸಹ ನನ್ನ ಜೊತೆಯಲ್ಲಿ ಆಕೆಯ ಲೋಕವನ್ನೇ ಹೊಂದುವೆ. ಅನಂತರ ಅಮೃತವಾದ ಆ ಸದ್ಗತಿಯನ್ನು ಹೊಂದುವೆವು! ಎಂದು ಹೇಳಿದ ಭಂಡನ ಮಾತನ್ನು ಕೇಳಿ ಆ ಸಾರಥಿಯು ಬಹಳ ಆಶ್ಚರ್ಯಪಟ್ಟನು. ॥೮೦॥

ಆಗ ಸಾರಥಿಯು ರಾಕ್ಷಸರಾಜನಾದ ಆತನನ್ನು ಚೆನ್ನಾಗಿ ಹೊಗಳಿ ತನ್ನ ಮನಸ್ಸಿನಲ್ಲಿದ್ದ ದುಃಖವನ್ನು ಬಿಟ್ಟನು. ಶ್ರೀಲಲಿತಾದೇವಿಯನ್ನು ಮುಂದುಗಡೆಯಲ್ಲಿ ನೋಡುತ್ತಾ ಬಹಳ ಭಕ್ತಿಭಾವದಿಂದ ನಮಸ್ಕಾರಮಾಡಿದನು. ॥೮೧॥

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಭಂಡ ಲಲಿತಾದೇವಿಯರ ಯುದ್ಧಕ್ಕಾಗಿ ಪರಸ್ಪರ ಸೇರುವಿಕೆ ಎಂಬ ಎಪ್ಪತ್ತಾರನೆಯ ಅಧ್ಯಾಯವು ಮುಗಿಯಿತು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಸಪ್ತಸಪ್ತತಿತಮೋಽಧ್ಯಾಯಃ ॥

ಎಪ್ಪತ್ತೇಳನೆಯ ಅಧ್ಯಾಯವು

ಅಥ ಯುದ್ಧೇ ಸಂಪದೀಶೀಮಶ್ವಾರೂಢಾಂ ಚ ದಂಡಿನೀಂ ।
ಮಂತ್ರಿಣೀಂ ಚ ಸಮಾಸಾದ್ಯ ಯುದ್ಧಕೌಶಲಮುಲ್ಬಣಂ ॥೧॥

ಪ್ರದರ್ಶ್ಯ ತಾಃ ಸುಸಂತೋಷ್ಯ ಕ್ರಮಾತ್ ಪ್ರೋವಾಚ ಸಂಗರೇ ।
ದೇವ್ಯೋ ವೋ ಯುದ್ಧಚಾತುರ್ಯ ವಿಕ್ರಮ್ಯೈಸ್ತೋಷಿತೋಽಸ್ಮ್ಯಹಂ ॥೨॥

ಯೋದ್ಧು ಮುತ್ಕಂಠಿತಂ ಚಿತ್ತಂ ಸ್ವಾಮಿನ್ಯಾ ಚ ಇಮಂ ಕ್ಷಣಂ ।
ಯೂಯಂ ಸಮೀಕ್ಷಕಾಃ ಸರ್ವಾ ಸ್ತಯಾ ಮೇ ಯುದ್ಧಕರ್ಮಣಿ ॥೩॥

ಅನಂತರ ಭಂಡರಾಕ್ಷಸನು ಸಂಪನ್ನಾಥಾ, ಅಶ್ವಾರೂಢಾ, ದಂಡನಾಯಕೀ, ಮಂತ್ರಿಣೀ, ಇವರುಗಳೊಂದಿಗೆ ಯುದ್ಧಮಾಡುತ್ತಾ ಯುದ್ಧಮಾಡುವುದರಲ್ಲಿರುವ ತನ್ನ ವಿಶೇಷ ಸಾಮರ್ಥ್ಯವನ್ನು ತೋರಿಸಿದನು. ॥೧॥

ಈರೀತಿಯಲ್ಲಿ ಭಂಡರಾಕ್ಷಸನು ವಿಶೇಷ ಪರಾಕ್ರಮವನ್ನು ತೋರಿಸಿ ಕ್ರಮವಾಗಿ ಅವರಿಗೆ ಯುದ್ಧದಲ್ಲಿ ಸಂತೋಷವನ್ನುಂಟುಮಾಡಿ, ಅವರನ್ನು ಕುರಿತು ಓ ದೇವಿಯರೇ, ನಿಮ್ಮ ಯುದ್ಧದ ನಿಪುಣತೆ ಮತ್ತು ಪರಾಕ್ರಮಗಳನ್ನು ನೋಡಿ ನಾನು ವಿಶೇಷವಾಗಿ ಸಂತೋಷಪಟ್ಟಿದ್ದೇನೆ! ಎಂದನು. ॥೨॥

ನನಗೆ ಈಕ್ಷಣದಲ್ಲಿ ನಿಮ್ಮ ಅಧೀಶ್ವರಿಯಾದ ದೇವಿಯೊಡನೆ ಯುದ್ಧ ಮಾಡಬೇಕೆಂದು ಕುತೂಹಲವುಂಟಾಗಿದೆ. ಈಗ ನೀವೆಲ್ಲರೂ ನಾವಿಬ್ಬರೂ ಯುದ್ಧ ಮಾಡುವ ಸಾಮರ್ಥ್ಯವನ್ನು ನೋಡುತ್ತಾ ಪ್ರೇಕ್ಷಕರಾಗಿ ಇರಿ. ॥೩॥

ಮನ್ಯೈಷ ಲಜ್ಜಿತೋ ಬಾಹುರ್ಯುದ್ಧೇ ಚೇಟೀಗಣೈಃ ಸಹ ।
ತಸ್ಯಾಃ ಪದಂ ವಿನಿರ್ಜಿತ್ಯ ಯುದ್ಧೇ ವೋಽಭಿಜಯಾಮ್ಯಹ ॥೪॥

ತನ್ಮೇ ಪ್ರಯಾಚತೋಽಸ್ತ್ವೇವಂ ಇತಿ ತಸ್ಯ ವಚಸ್ತದಾ ।
ನಿಶಮ್ಯ ದೇವ್ಯೋ ಮತ್ವಾಚಾಽಜೇಯಂ ಸ್ವೀಯಪರಾಕ್ರಮೈಃ॥ ೫॥

ಉಚಿತಂ ಚ ಮಹಾದೇವ್ಯಾ ದೈತ್ಯೇಶಸ್ಯ ಪರಾಜಯಂ ।
ದದುರ್ಮಾರ್ಗಂ ನಿಯುದ್ಧಾಯ ಮಹಾರಾಜ್ಞ್ಯಾಽಸುರಸ್ಯ ವೈ ॥೬॥

ಅಥ ಶ್ರೀ ಚಕ್ರರಾಜಾಽಖ್ಯಂ ರಥಮಾಸಾದ್ಯ ಸಂಗರೇ ।
ಸಮಾರಭದ್ಭಂಡದೈತ್ಯೋ ಯುದ್ಧಮತ್ಯದ್ಭುತಂ ತದಾ ॥೭॥

ಆಕೆಯ ಸೇವಕಿಯರಾದ ನಿಮ್ಮೊಂದಿಗೆ ಯುದ್ಧವನ್ನು ಮಾಡಲು ನನ್ನ ತೋಳುಗಳೇ ನಾಚಿಕೆಗೊಳ್ಳುತ್ತಿವೆ. ಆದ್ದರಿಂದ ನಾನು ಆಕೆಯ ಸ್ಥಾನವನ್ನೇ ಮೊದಲು ಜಯಿಸಿ ಅನಂತರ ನಿಮ್ಮನ್ನು ಜಯಿಸುವೆನು ! ॥೪॥

ಆದ್ದರಿಂದ ನಾನು ನಿಮ್ಮನ್ನು ಈ ರೀತಿಯಾಗಿ ಬೇಡುತ್ತೇನೆ. ಎಂದು ಹೇಳಿದ ಭಂಡರಾಕ್ಷಸನ ಮಾತನ್ನು ಕೇಳಿ, ಹಾಗೆಯೇ ಆಗಲಿ. ಎಂಬುದಾಗಿ ಹೇಳುತ್ತಾ ಅವರು ತಮ್ಮ ಪರಾಕ್ರಮದಿಂದ ಅವನನ್ನು ಜಯಿಸಲು ಅಸಾಧ್ಯವೆಂದು ತಿಳಿದು, ಅವನ ಮಾತಿಗೆ ಒಪ್ಪಿಗೆಯನ್ನಿತ್ತರು. ॥೫॥

ಅಲ್ಲದೆ ಅವರು ತಮ್ಮ ಅಧೀಶ್ವರಿಯಾದ ಮಹಾದೇವಿಯೇ ದೈತ್ಯರಾಜನಾದ ಅವನನ್ನು ಕೊಲ್ಲಲು ಸಮರ್ಥಳೆಂದೂ ಉಚಿತವೆಂದೂ ಬಗೆದರು. ಆದ್ದರಿಂದ ಅವರು ತಮ್ಮ ಮಹಾರಾಣಿಯಾದ ದೇವಿಯೇ ಭಂಡರಾಕ್ಷಸನೊಂದಿಗೆ ಯುದ್ಧಮಾಡುವುದಕ್ಕಾಗಿ ಅವಕಾಶವನ್ನು ಕಲ್ಪಿಸಿದರು. ॥೬॥

ಅನಂತರ ಯುದ್ಧದಲ್ಲಿ ದೇವಿಯು ಕುಳಿತಿರುವ ಶ್ರೀಚಕ್ರರಾಜ ಎಂಬ ರಥದ ಸಮೀಪಕ್ಕೆ ಭಂಡರಾಕ್ಷಸನು ಬಂದು ಅತ್ಯಂತ ಆಶ್ಚರ್ಯಕರವಾದ ಯುದ್ಧವನ್ನು ಪ್ರಾರಂಭಿಸಿದನು. ॥೭॥

ತತ್ರಶಕ್ತಿಮಹಾಸೈನ್ಯ ಮಭೂದ್ಯುದ್ಧಸಮೀಕ್ಷಕಂ ।
ವೈಮಾನಿಕೈ ರ್ದೇವಗಣೈಃ ಸಿದ್ಧೈಃ ಋಷಿಗಣೈಸ್ತಥಾ ॥೮॥

ಪ್ರೇಕ್ಷಣಾಯಾಽಽಗತೈಃ ಸರ್ವಂ ವ್ಯಾಪ್ತಮಾಸೀನ್ನಭಸ್ತದಾ ।
ಭಂಡ ಆಸಾದ್ಯ ಲಲಿತಾಂ ಪುರೋ ದೃಷ್ಟ್ವಾಽತಿ ಹರ್ಷಿತಃ ॥೯॥

ಮನಸಾಽಭಿ ನಮಶ್ಚಕ್ರೇ ಭಕ್ತ್ಯಾ ತದನು ಸತ್ವರಂ ।
ವಿವ್ಯಾಧ ಪಂಚಭಿರ್ಬಾಣೈಸ್ತದದ್ಭುತಮಿವಾಽಭವತ್ ॥೧೦॥

ತತ್ರ ದ್ವಯಂ ಸುಕುಸುಮ ನಿಚಯಂ ಪಾದಯೋಃ ಪತತ್ ।
ತೃತೀಯಂ ಕಂಠದೇಶೇಽಭೂನ್ಮಾಲಿಕಾ ಫುಲ್ಲಪಾಂಕಜೀ ॥೧೧॥

ತತಃ ಪರಂ ಮೂರ್ಧ್ನ್ಯ ಪತತ್ ಪುಷ್ಪವರ್ಷಣರೂಪತಃ ।
ಅಂತ್ಯಂ ರತ್ನಮಯಂ ಮೂರ್ಧ್ನಿ ಭೂಷಣಂ ಮುಕುಟೇ ಸ್ಥಿತಂ ॥೧೨॥

ಅಲ್ಲಿ ಶಕ್ತಿಗಳ ಮಹಾಸೈನ್ಯವು ಈ ಮಹಾಯುದ್ಧವನ್ನು ನೋಡುತ್ತಿತ್ತು. ವಿಮಾನದ ಮೇಲೆ ಕುಳಿತು ದೇವತೆಗಳು, ಸಿದ್ಧರು ಮತ್ತು ಋಷಿಗಳೂ ಯುದ್ಧವನ್ನು ನೋಡುತ್ತಿದ್ದರು. ॥೮॥

ಈ ರೀತಿಯಾಗಿ ನೋಡಲು ಬಂದದೇವತೆಗಳೇ ಮೊದಲಾದವರಿಂದ ಆಕಾಶವು ತುಂಬಿಹೋಗಿತ್ತು. ಆಗ ಭಂಡರಾಕ್ಷಸನು ಲಲಿತಾದೇವಿಯನ್ನು ಮುಂದುಗಡೆಯಲ್ಲಿ ನೋಡಿ, ಬಹಳ ಸಂತೋಷಪಟ್ಟನು. ॥೯॥

ಅನಂತರ ಭಂಡರಾಕ್ಷಸನು ಭಕ್ತಿಭಾವದಿಂದ ಶೀಘ್ರವಾಗಿ ಮನಸ್ಸಿನಿಂದಲೇ ಆಕೆಗೆ ನಮಸ್ಕರಿಸಿದನು. ಆದರೆ ಅವನು ಐದು ಬಾಣಗಳನ್ನು ಆಕೆಗೆ ಹೊಡೆದುದನ್ನು ನೋಡಲು ಆತ್ಯಾಶ್ಚರ್ಯಕರವಾಗಿತ್ತು. ॥೧೦॥

ಅವುಗಳಪೈಕಿ ಎರಡು ಬಾಣಗಳು ಶ್ರೇಷ್ಠವಾದ ಹುವ್ವಿನ ರಾಶಿಯರೂಪವನ್ನು ಹೊಂದಿ ಆಕೆಯ ಕಾಲುಗಳ ಮೇಲೆ ಬಿದ್ದವು! ಮೂರನೆಯ ಬಾಣವು ಅರಳಿದ ತಾವರೆಯಿಂದ ಮಾಡಿರುವ ಹಾರವಾಗಿ ಪರಿಣಮಿಸಿ ಆಕೆಯ ಕತ್ತಿನ ಪ್ರದೇಶದಲ್ಲಿ ಬಿದ್ದಿತು. ॥೧೧॥

ಅನಂತರ ಭಂಡರಾಕ್ಷಸನ ಮತ್ತೊಂದು ಬಾಣವು ದೇವಿಯ ತಲೆಯಮೇಲೆ ಹುಷ್ಪಿನ ಸುರಿಮಳೆಯ ರೂಪವನ್ನು ಹೊಂದಿ ಬಿದ್ದಿತು. ಕೊನೆಯ ಬಾಣವು ರತ್ನ

ಏವಂ ತದ್ವಿಹಿತಾಂ ಪೂಜಾಂ ದೃಷ್ಟ್ವಾ ದೇವ್ಯತಿಹರ್ಷಿತಾ ।
ದೇವಾದಯೋಽಪಿ ತದ್ದೃಷ್ಟ್ವಾ ಶಂಕಿತಾ ಸ್ತತ್ರ ಸರ್ವಥಾ ॥೧೩॥

ನಾರದಾದ್ಭಂಡದೈತ್ಯಸ್ಯ ಶ್ರುತ್ವಾ ಭಕ್ತಾಗ್ರಗಣ್ಯತಾಂ ।
ದೇವೇಶೋಽತಿತರಾಂ ತತ್ರ ವಿಸ್ಮಯಂ ಸಮುಪದ್ಯತ ॥೧೪॥

ಅಥಾಭವನ್ಮಹಾಯುದ್ಧಂ ಲಲಿತಾ ಭಂಡದೈತ್ಯಯೋಃ ।
ಚಿತ್ರಶಸ್ತ್ರಾಸ್ತ್ರನಿಚಯ ವ್ಯಾಪ್ತಾಽಕಾರಮಹೋದರಂ ॥೧೫॥

ಭಂಡದೈತ್ಯೋಽಪಿ ವೀರ್ಯೇಣ ನಿಜೇನ ಪರಮೇಶ್ವರೀಂ ।
ಸಂತೋಷಯಿತು ಮುದ್ಯುಕ್ತೋ ಯುಯೋಧ ಪರಮಾಸ್ತ್ರವಿತ್ ॥೧೬॥

ಗಳಿಂದ ಪೂರ್ಣವಾದ ಅಲಂಕಾರರೂಪವನ್ನು ಹೊಂದಿ ಆಕೆಯ ಕಿರೀಟದ ಮೇಲು ಭಾಗದಲ್ಲಿ ಸಿಂತಿತು. ॥೧೨॥

ಈರೀತಿಯಾಗಿ ಭಂಡರಾಕ್ಷಸನು ಮಾಡಿದ ಪೂಜೆಯನ್ನು ನೋಡಿ ದೇವಿಯು ಬಹಳ ಸಂತೋಷಗೊಂಡಳು. ದೇವತೆಗಳೇ ಮೊದಲಾದವರೂ ಕೂಡ ಇದನ್ನು ನೋಡಿ ಸರ್ವವಿಧದಲ್ಲೂ ಆಶ್ಚರ್ಯಗೊಂಡರು. ॥೧೩॥

ಅನಂತರ ಇಂದ್ರನು ಭಂಡರಾಕ್ಷಸನು ದೇವಿಯ ಭಕ್ತರಲ್ಲಿ ಅತಿ ಶ್ರೇಷ್ಠನೆಂಬು ದನ್ನು ನಾರದನ ಮುಖದಿಂದ ಕೇಳಿ ಬಹಳ ಆಶ್ಚರ್ಯಪಟ್ಟನು. ॥೧೪॥

ಅನಂತರ ಲಲಿತಾದೇವೀ ಮತ್ತು ಭಂಡರಾಕ್ಷಸರಿಗೆ ಮಹಾಯುದ್ಧವು ಸಂಭವಿಸಿತು. ಇವರಿಬ್ಬರೂ ನಾನಾವಿಧವಾದ ಶಸ್ತ್ರಗಳು ಮತ್ತು ಅಸ್ತ್ರಗಳು ಇವುಗಳ ಸಮೂಹಗಳು ಆಕಾಶದ ಪ್ರದೇಶವೆಲ್ಲವನ್ನೂ ತುಂಬುವಂತೆ ಯುದ್ಧವನ್ನು ಮಾಡುತ್ತಿದ್ದರು. ॥೧೫॥

ಶ್ರೇಷ್ಠ ಅಸ್ತ್ರಪ್ರಯೋಗನಿಪುಣನಾದ ಭಂಡರಾಕ್ಷಸನೂ ಕೂಡ ತನ್ನ ಪರಾಕ್ರಮದಿಂದ ಪರಮೇಶ್ವರಿಯಾದ ಲಲಿತಾದೇವಿಯನ್ನು ಸಂತೋಷಪಡಿಸುತ್ತಾ ಯುದ್ಧವನ್ನು ಮಾಡಿದನು. ॥೧೬॥

ಪ್ರಣಮ್ಯ ಮನಸಾ ದೇವೀಂ ಸಂಮುಖಂ ಸಮುಪಾಗತಾಂ ।
ಗೂಢಾಪದಾನ ವಚನೈ ರಧಿಕ್ಷೇಪ್ತುಂ ಪ್ರಚಕ್ರಮೇ ॥೧೭॥

ಲಲಿತೇ ಶೃಣು ಮೇ ವಾಕ್ಯಂ ತ್ವಂ ನಟೀವ ವಿಭಾಸಿ ಮೇ ।
ಮೃಷಾಚಾರರತಾ ನಿತ್ಯಂ ಸ್ತ್ರೈಣಂ ಪುರುಷಮಾಶ್ರಿತಾ ॥೧೮॥

ಸ್ತ್ರೀರೂಪಧಾರಿಣೀವ ತ್ವಂ ಸ್ತ್ರೀಸ್ವಭಾವ ವಿವರ್ಜಿತಾ ।
ನ ಸ್ತ್ರಿಯಂ ತ್ವಾಮಹಂ ಮನ್ಯೇ ನ ಪುಮಾಂಸಮಪಿ ಕ್ವಚಿತ್ ॥೧೯॥

ಲೋಕವಿದ್ವಿಷ್ಟಚಾರಿತ್ರಾ ಲಜ್ಜಾಶಂಕಾದಿವರ್ಜಿತಾ ।
ನ ತ್ವಂ ಸತ್ಕುಲಸಂಭೂತಾ ಕುಲಹೀನೇವ ಭಾಸಿ ಮೇ ॥೨೦॥

ಭಂಡರಾಕ್ಷಸನು ಎದುರಿಗೆ ಬಂದಿರುವ ಲಲಿತಾದೇವಿಯನ್ನು ಮನಸ್ಸಿನಿಂದಲೇ ನಮಸ್ಕಾರವನ್ನು ಮಾಡಿ, ರಹಸ್ಯವಾಗಿ ಆಕೆಯ ಲೀಲೆಗಳನ್ನು ಸ್ತುತಿಸುತ್ತಾ ಇರುವ, ಆದರೆ ಹೊರಗಡೆಯಲ್ಲಿ ಆಕೆಯನ್ನು ನಿಂದಿಸುವಂತಿರುವ ಮಾತುಗಳಿಂದ ದೇವಿಯನ್ನು ಹೀಗೆ ಆಕ್ಷೇಪಿಸಿದನು. ॥೧೭॥

ಓ ಲಲಿತೆಯೇ, ನನ್ನ ಈ ಮಾತುಗಳನ್ನು ಕೇಳು. ನೀನು ನಟಿಯಂತೆ ನನಗೆ ತೋರುತ್ತೀಯೆ. ಏಕೆಂದರೆ ನೀನು ಯಾವಾಗಲೂ ಕಪಟವಾದ ನಡವಳಿಕೆಗಳನ್ನು ತೋರಿಸುತ್ತಾ ಸ್ತ್ರೀವೇಷಧಾರಿಯಾದ ಪುರುಷನೇ ಆಗಿದ್ದೀಯೆ. ॥೧೮॥

ಹೆಂಗಸಿನ ಯಾವ ಸ್ವಭಾವವೂ ಇಲ್ಲದ, ಸ್ತ್ರೀಯ ರೂಪವನ್ನು ಮಾತ್ರ ಧರಿಸಿರುವವಳಂತೆ ಕಾಣುತ್ತೀಯೆ. ನಾನು ನಿನ್ನನ್ನು ಸ್ತ್ರೀಯನ್ನಾಗಿಯಾಗಲೀ, ಅಥವಾ ಪುರುಷನನ್ನಾಗಿಯಾಗಲಿ ಭಾವಿಸಲಾರೆ. ॥೧೯॥

ನೀನು ಲೋಕವೆಲ್ಲವೂ ದ್ವೇಷಿಸುವಂಥಾ ನಡೆವಳಿಕೆಯುಳ್ಳವಳಾಗಿಯೂ, ನಾಚಿಕೆ ಭಯ ಮುಂತಾದ ಗುಣಗಳಿಲ್ಲದವಳಾಗಿಯೂ ಕಾಣಿಸುತ್ತೀಯೆ. ನೀನು ಸದ್ವಂಶದಲ್ಲಿ ಹುಟ್ಟಿದವಳಾಗಿಲ್ಲ. ನೀನು ಕುಲಹೀನಳಂತೆ ಕಾಣಿಸುತ್ತಿರುತ್ತೀಯೆ. ॥೨೦॥

ಲೋಕನಿಂದಿತಮಾರ್ಗಸ್ಥೈಃ ಪುರುಷೈರವಿವೇಕಿಭಿಃ ।
ಅಪಿ ತ್ವಮಭಿ ಮೃಷ್ಟಾಽಸಿ ಸರ್ವಥೇತಿ ವಿಭಾತಿ ಮೇ ॥೨೧॥

ಅಹೋ ಮೇ ಪ್ರಾಕ್ಕೃತಂ ಹ್ಯೇವಂ ಯತ್ತ್ವಾಮೇವಂ ವಿಧಾಮಪಿ ।
ಅನರ್ಹಾಂ ದರ್ಶನೇ ನೂನಂ ಪಶ್ಯಾಮಿ ಪುರತಃ ಸ್ಥಿತಾಂ ॥೨೨॥

ಶೃಣು ಸತ್ಯೇನ ವಕ್ಷ್ಯಾಮಿ ಯದ್ಯಥಾಽಸ್ತಿ ತಥಾಽಸ್ತು ತತ್ ।
ಮದ್ದೃಷ್ಟಿಗೋಚರೀಭೂತಾ ಸಂಪ್ರತಿ ತ್ವಂ ಕಥಂ ಚ ನ ॥೨೩॥

ಮೃಷಾಽಽಚಾರಂ ಚ ಮಾಯಾಂ ಚ ತ್ಯಕ್ತ್ವಾ ಮಯಿ ಸ್ಥಿರೀಭವ ।
ಆಸಾದಿತಾ ಮಯಾ ಸದ್ಯಃ ಪೃಷ್ಠಂ ಮೇ ನ ಪ್ರದರ್ಶಯ ॥೨೪॥

ನಾಽಪಿ ಮಾಂ ಹಿ ಸಮಕ್ಷಸ್ಥಂ ವಂಚಯಿತ್ವಾ ಕಥಂ ಚ ನ ।
ಶಕ್ಯಂ ಹ್ಯದೃಶ್ಯತಾಂ ಯಾತುಂ ತಸ್ಮಾತ್ತ್ವಂ ಸುಸ್ಥಿರೀಭವ ॥೨೫॥

ಲೋಕವೆಲ್ಲವೂ ನಿಂದಿಸಲು ಯೋಗ್ಯವಾದ ಮಾರ್ಗದಲ್ಲಿ ನಡೆಯುತ್ತಿರುವ ಅವಿವೇಕಿಗಳಾದ ಪುರುಷರೇ ಸರ್ವವಿಧದಲ್ಲೂ ನಿನ್ನನ್ನು ಮುಟ್ಟುತ್ತಾರೆಂದು ನನಗೆ ತೋರುವುದು. ॥೨೧॥

ಇಂತಹ ನಿಂದೆಗೆ ಯೋಗ್ಯವಾದ ಗುಣಗಳಿಂದ ಕೂಡಿರುವ, ನೋಡಲು ಸಹ ಅಯೋಗ್ಯಳಾದ ನಿನ್ನನ್ನು ಈ ರೀತಿಯಲ್ಲಿ ಮುಂದೆ ನಿಂತಿರುವುದರಿಂದ ನೋಡುತ್ತಿರುವುದು ನನ್ನ ಪೂರ್ವಾರ್ಜಿತ ಕರ್ಮದ ಫಲವೇ ಸರಿ.॥೨೨॥

ನನ್ನ ಈ ಮಾತನ್ನು ಕೇಳು. ಸತ್ಯವನ್ನೇ ನುಡಿಯುವೆನು. ಯಾವುದು ಬೇಕಾದರೂ ಹೇಗೆ ಬೇಕಾದರೂ ಇರಲಿ. ನೀನು ಹೇಗೋ ನನ್ನ ಕಣ್ಣುಗಳಿಗೆ ಗೋಚರಳಾಗಿರುತ್ತೀಯೆ. ॥೨೩॥

ಆದ್ದರಿಂದ ನೀನು ಸುಳ್ಳು ನಡೆವಳಿಕೆಯನ್ನೂ, ಮಾಯೆಯನ್ನೂ ಪ್ರಕಟಸದೇ ನನ್ನಲ್ಲಿಯೇ ಸ್ಥಿರವಾಗಿ ನಿಲ್ಲು. ನಾನು ನಿನ್ನ ಸಮೀಪದಲ್ಲಿರುವಾಗ ನಿನ್ನ ಹಿಂಭಾಗವನ್ನು ತೋರಿಸಿ ಓಡಬೇಡ. ॥೨೪॥

ನಿನ್ನ ಎದುರಿಗೆ ನಿಂತಿರುವ ನನ್ನನ್ನು ಹೇಗೋ ಮೋಸಮಾಡಿ, ನೀನು ಕಣ್ಣಿಗೆ ಕಾಣಿಸದೇ ಹೋಗಬಹುದು. ಆದ್ದರಿಂದ ಹಾಗೆಮಾಡದೇ ದೃಢವಾಗಿ ಇಲ್ಲಿಯೇ ನಿಲ್ಲು. ॥೨೫॥

ವಿದಿತ್ವಾ ಮದಭಿಪ್ರಾಯಮೇಕಾಂತಂ ಸುವ್ಯವಸ್ಥಿತಂ ।
ದೃಷ್ಟ್ವಾ ಮದೀಯ ವೀರ್ಯಂ ಚ ಸಂಸಾಧಯ ನಿಜಂ ವ್ರತಂ ॥೨೬॥

ಶ್ರುತ್ವಾ ನಿಗೂಢವಾಕ್ಯಂ ತತ್ ಪ್ರಸನ್ನಾ ಲಲಿತಾಂಬಿಕಾ ।
ಶೃಣು ದೈತ್ಯೇಶ್ವರ ವಚೋ ಯದುಕ್ತಂ ತೇ ತಥೈವ ತತ್ ॥೨೭॥

ಸಾಧಯಾಮಿ ತವಾಭೀಷ್ಟಂ ತ್ಯಾಜಯಾಮಿ ಮದಾದಿಕಂ ।
ನ ಹಿ ಮೇ ದೃಷ್ಟಿವಿಷಯೀಭೂಯ ಭೂಯೋ ಭವೇತ್ಕ್ವಚಿತ್ ॥೨೮॥

ಯುದ್ಧಶ್ರದ್ಧಾದಿ ಸಂಶೇಷಃ ತತ್ ಸ್ಥಿರೀಭವ ಸರ್ವಥಾ ।
ಇತ್ಯುಕ್ತ್ವಾ ಶರವರ್ಷೇಣ ವವರ್ಷ ದೈತ್ಯಭೂಪತಿಂ ॥೨೯॥

ಪ್ರತಿವರ್ಷಂ ವವರ್ಷಾಥ ಸೋಽಪಿ ದೈತ್ಯೋಽತಿವೇಗತಃ ।
ಶಸ್ತ್ರಪ್ರಯೋಗವಿಜ್ಞಾನ ಸಂಶ್ಲಾಘನಪುರಃಸರಂ ॥೩೦॥

ನನ್ನ ರಹಸ್ಯವಾದ ಮತ್ತು ನಿಶ್ಚಯವಾದ ಅಭಿಪ್ರಾಯವನ್ನು ತಿಳಿದು ನನ್ನ ಮುಂದೆಯೇ ನಿಂತು ನನ್ನ ಪರಾಕ್ರಮವನ್ನು ನೋಡಿ ನಿನ್ನ ಇಷ್ಟವಾದ ನಿಯಮವನ್ನು ನೆರವೇರಿಸು. ||೨೬||

ಹೀಗೆ ರಹಸ್ಯವಾಗಿ ಬೇರೊಂದು ವಿಧವಾದ ಅರ್ಥವನ್ನೂ ಸೂಚಿಸುತ್ತಿರುವ ಭಂಡರಾಕ್ಷಸನ ಮಾತನ್ನು ಕೇಳಿ ಲಲಿತಾಮಾತೆಯು ಪ್ರಸನ್ನಳಾಗಿ ಅವನನ್ನು ಕುರಿತು, ಎಲೈ ರಾಕ್ಷಸರಾಜನೇ, ಕೇಳು. ನೀನು ಹೇಗೆ ಹೇಳಿದೆಯೋ ಅದು ಹಾಗೆಯೇ ಸರಿ. ಎಂದಳು. ||೨೭||

ನಿನ್ನ ಇಷ್ಟಾರ್ಥವನ್ನೇ ನಾನು ನೆರವೇರಿಸುವೆನು. ನಿನ್ನ ಮದವೇ ಮುಂತಾದ್ದನ್ನು ಹೋಗಲಾಡಿಸುವೆನು. ನನ್ನ ಕಣ್ಣಿಗೆ ಗೋಚರನಾದವನಾವನೂ ಪುನಃ ಜನ್ಮವನ್ನು ಪಡೆಯುವುದೇ ಇಲ್ಲ. ||೨೮||

ಯುದ್ಧದಲ್ಲಿ ಆಸಕ್ತಿಯು ನಿನಗಿನ್ನೂ ಉಳಿದಿದ್ದರೆ ಸರ್ವವಿಧದಲ್ಲೂ ಅದಕ್ಕೆ ಸಿದ್ಧನಾಗು. ಎಂದುಹೇಳಿ ಲಲಿತಾದೇವಿಯು ರಾಕ್ಷಸರಾಜನಾದ ಭಂಡನಮೇಲೆ ಬಾಣಗಳ ಮಳೆಯನ್ನೇ ಸುರಿಸಿದಳು. ||೨೯||

ಆ ರಾಕ್ಷಸನೂ ಕೂಡ ಬಹಳವೇಗವಾಗಿ ಆ ಬಾಣಗಳಿಗೆ ಪ್ರತಿಯಾಗಿ ಬಾಣಗಳ ಸುರಿಮಳೆಗಳನ್ನು ಆಕೆಯಮೇಲೆ ಸುರಿಸಿದನು. ಆಗ ಅವರಿಬ್ಬರೂ ಶಸ್ತ್ರ

ಅಭೂತ್ತಯೋರ್ಮಹಾಯುದ್ಧಂ ತುಮುಲಂ ರೋಮಹರ್ಷಣಂ ।
ಏವಂ ನಿಯುದ್ಧ್ಯ ಸುಚಿರಂ ದೈತ್ಯೋಽಸ್ತ್ರಾಣಿ ಸಸರ್ಜ ಹ ॥೩೧॥

ಆಗ್ನೇಯಂ ವಾರುಣಂ ಸೌಮ್ಯಂ ಕೌಬೇರಂ ಪಾರ್ವತಂ ತಥಾ ।
ಪಾರ್ಜನ್ಯಮೈಂದ್ರಂ ವಾಯವ್ಯಂ ಬ್ರಾಹ್ಮಂ ಕೌಮಾರಮೇವಚ ॥೩೨॥

ಅಸ್ತ್ರಾಣ್ಯೇವಂ ವಿಧಾನ್ಯಾಶು ಲಲಿತಾಪರಮೇಶ್ವರೀ ।
ಪ್ರತ್ಯಸ್ತ್ರೈರ್ನಾಶಯಾಮಾಸ ತುಹಿನಂ ದಿನಕೃದ್ಯಥಾ ॥೩೩॥

ತಥಾ ನೂತನಸೃಷ್ಟಾನಿ ಪ್ರತ್ಯಸ್ತ್ರೈರ್ನಾಶಯತ್ಕಣಾತ್ ।
ಸಸರ್ಜಾಽಥ ಭಂಡದೈತ್ಯೋ ಮಧುಂ ಕೈಟಭಮೇವ ಚ ॥೩೪॥

ಪ್ರಯೋಗಗಳ ವಿಶೇಷವಾದ ಪರಸ್ಪರ ಸಾಮರ್ಥ್ಯವನ್ನು ಅವರಿಬ್ಬರೂ ಹೊಗಳುತ್ತಿದ್ದರು. ॥೩೦॥

ಅನಂತರ ರೋಮಾಂಚವನ್ನುಂಟುಮಾಡುವಂಥಾ ಬಹುದೊಡ್ಡದಾದ ತುಮುಲಯುದ್ಧವು ಅವರಿಬ್ಬರಿಗೂ ಜರುಗಿತು. ಈ ರೀತಿಯಾಗಿ ಭಂಡರಾಕ್ಷಸನು ಬಹಳ ಕಾಲ ಯುದ್ಧಮಾಡಿ ಕೊನೆಗೆ ಆಕೆಯಮೇಲೆ ಅಸ್ತ್ರಗಳನ್ನು ಪ್ರಯೋಗಿಸಲಾರಂಭಿಸಿದನು. ॥೩೧॥

ಭಂಡರಾಕ್ಷಸನು ಆಗ್ನೇಯ, ವಾರುಣ, ಸೌಮ್ಯ, ಕೌಬೇರ, ಪಾರ್ವತ, ಪಾರ್ಜನ್ಯ, ಐಂದ್ರ, ವಾಯವ್ಯ, ಬ್ರಾಹ್ಮ, ಕೌಮಾರ ಎಂಬ ಅಸ್ತ್ರಗಳನ್ನು ಕ್ರಮವಾಗಿ ಆಕೆಯ ಮೇಲೆ ಬಿಟ್ಟನು. ॥೩೨॥

ಇಂಥಾ ಅಸ್ತ್ರಗಳನ್ನೂ ಕೂಡ ಪರಮೇಶ್ವರಿಯಾದ ಲಲಿತಾದೇವಿಯು ಪ್ರತ್ಯಸ್ತ್ರದ ಪ್ರಯೋಗದ ಮೂಲಕ, ಸೂರ್ಯನು ಹಿಮವನ್ನು ಹೇಗೆ ನಾಶಮಾಡುವನೋ ಹಾಗೆ, ನಾಶಮಾಡುತ್ತಿದ್ದಳು. ॥೩೩॥

ಅದೇ ರೀತಿಯಲ್ಲಿಯೇ ಲಲಿತಾದೇವಿಯು ರಾಕ್ಷಸನು ಸೃಷ್ಟಿಸುತ್ತಿದ್ದ ಹೊಸ ಹೊಸ ಅಸ್ತ್ರಗಳನ್ನೂ ಕೂಡ ಪ್ರತಿಯಾಗಿ ಅಸ್ತ್ರಗಳನ್ನು ಪ್ರಯೋಗಿಸುವುದರ ಮೂಲಕ ಕ್ಷಣಮಾತ್ರದಲ್ಲಿಯೇ ನಾಶಮಾಡುತ್ತಿದ್ದಳು. ಅನಂತರ ಭಂಡಮಹಾರಾಜನು ಮಧು ಮತ್ತು ಕೈಟಭ ಎಂಬಿಬ್ಬ ರಾಕ್ಷಸರನ್ನು ಸೃಷ್ಟಿಸಿದನು. ॥೩೪॥

ಸೋಮುಕಂ ಚ ಹಿರಣ್ಯಾಕ್ಷಂ ಹಿರಣ್ಯಕಶಿಪುಂ ತಥಾ ।
ಬಲಮರ್ಜುನನಾಮಾನಂ ಹೈಹಯಂ ರಾವಣಂ ತಥಾ ॥೩೫॥

ಕುಂಭಕರ್ಣಂ ಮುರಂ ಗ್ರಾಹಂ ಕಂಸಂ ದ್ವಿವಿದಮೇವ ಚ ।
ಏವಮಾದೀನ್ ವಿಷ್ಣುಶತ್ರೂನ್ ಸರ್ವಾನ್ ಲೋಕಪ್ರಣಾಶನಾನ್॥೩೬॥

ತೇ ಸೃಷ್ಟಾ ಭಂಡದೈತ್ಯೇನ ತತ್ಸ್ವಭಾವಪರಾಕ್ರಮಾಃ ।
ಉದ್ಯುಕ್ತಾ ಲೋಕನಾಶಾರ್ಥಂ ತಮೋವೃತ್ತಿ ಪರಾಯಣಾಃ ॥೩೭॥

ಲಲಿತೇಶ್ಯಾಽ(ಶ)ಪಿ ನಾಶಾಯ ತೇಷಾಂ ಕರನಖಾತ್ ಪೃಥಕ್ ।
ನಾರಾಯಣಾವತಾರಾಣಾಂ ಸಸರ್ಜ ದಶಕಂ ತದಾ ॥೩೮॥

ನಾಶಿತಾಸ್ತೇ ಕ್ಷಣೇನೈವ ಸೃಷ್ಟೈಸ್ತೈರ್ವಿಷ್ಣುಮೂರ್ತಿಭಿಃ ।
ಅಥ ಭೂಯೋಽಂಧಕಂ ಮೃತ್ಯುಂ ಕಾಮಂ ತ್ರಿಪುರಮೇವ ಚ ॥೩೯॥

ಅಲ್ಲದೇ ಭಂಡರಾಕ್ಷಸನು ಸೋಮುಕ, ಹಿರಣ್ಯಾಕ್ಷ, ಹಿರಣ್ಯಕಶಿಪು, ಬಲಿ, ಅರ್ಜುನ, ಹೈಹಯ, ರಾವಣ ಎಂಬ ರಾಕ್ಷಸರನ್ನೂ ಸೃಷ್ಟಿಸಿದನು. ॥೩೫॥

ಅಷ್ಟೇ ಅಲ್ಲದೇ ಭಂಡರಾಕ್ಷಸನು ಕುಂಭಕರ್ಣ, ಮುರ, ಗ್ರಾಹ, ಕಂಸ, ದ್ವಿವಿದ, ಮುಂತಾದ ವಿಷ್ಣುವಿಗೆ ಶತ್ರುಗಳಾದ ಮತ್ತು ಲೋಕವನ್ನೇ ನಾಶಮಾಡು ವಂಥಾ ರಾಕ್ಷಸರನ್ನು ಸೃಷ್ಟಿಸಿದನು. ॥೩೬॥

ಭಂಡರಾಕ್ಷಸನು ತನಗೆ ಸಮಾನವಾದ ಸ್ವಭಾವ ಮತ್ತು ಪರಾಕ್ರಮುಗ ಳುಳ್ಳ ಮೇಲೆ ಹೇಳಿದ ರಾಕ್ಷಸರನ್ನು ಸೃಷ್ಟಿಮಾಡಿದನು. ಅವರು ತಮೋಗುಣದಿಂದ ಕೂಡಿದವರಾಗಿ ಲೋಕವನ್ನು ಹಾಳುಮಾಡುವ ಕಾರ್ಯದಲ್ಲಿಯೇ ನಿರತರಾದರು. ಲಲಿತಾದೇವಿಯೂ ಕೂಡ ಭಂಡರಾಕ್ಷಸನು ಹೀಗೆ ಸೃಷ್ಟಿಮಾಡಿದ ರಾಕ್ಷಸರನ್ನು ನಾಶಮಾಡಲು ತಾನೇ ತನ್ನ ಕೈಗಳ ಉಗುರುಗಳಿಂದ ಬೇರೆ ಬೇರೆಯಾಗಿ ನಾರಾ ಯಣನ ಪ್ರಸಿದ್ಧವಾದ ಅವತಾರಸ್ವರೂಪರೇ ಆದ ಹತ್ತು ಮಹಾಪುರುಷರನ್ನೂ ಯಥಾ ಕಾಲಗಳಲ್ಲಿ ಸೃಷ್ಟಿಮಾಡಿದಳು ! ॥೩೭-೩೮॥

ಹೀಗೆ ದೇವಿಯು ಸೃಷ್ಟಿಮಾಡಿದ ವಿಷ್ಣುವಿನ ಅವತಾರಸ್ವರೂಪರಾದ ದೇವ ತೆಗಳು ಅವರನ್ನೆಲ್ಲರನ್ನೂ ಕ್ಷಣಮಾತ್ರದಲ್ಲಿಯೇ ನಾಶಮಾಡಿದರು. ಅನಂತರ

ಮಹಾದೇವರಿಪೂನೇವಂ ನಿರ್ಮನೋಽಸುರಶೇಖರಃ ।
ತಾನ್ ದೃಷ್ಟ್ವಾ ಶ್ರೀಪರಾದೇವೀ ಫಾಲನೇತ್ರಾದ್ವಿಸರ್ಜಯತ್ ॥೪೦॥

ಮಹಾದೇವಂ ದೇವದೇವಂ ತೇನ ತೇ ನಾಶಮಾಯಯುಃ ।
ಅಥ ದೈತ್ಯಮಹಾಸೇನಾಮಸಂಖ್ಯಾತಾಂ ಭಯಾವಹಾಂ ॥೪೧॥

ಉದ್ಭಾವಯನ್ನಿಮೇಷೇಣ ಶಕ್ತಿಭಿರ್ಯಾ ಹತಾ ಪುರಾ ।
ವಿಷಂಗಶ್ಚ ವಿಶುಕ್ರಶ್ಚ ಚತುರ್ಬಾಹು ಮುಖಾಃ ಸುರಾಃ ॥೪೨॥

ಕರಂಕಕುಟಿಲಾಕ್ಷಾಽದ್ಯಾ ನಷ್ಟಾಂ ಸೃಷ್ಟಿಮಜೋ ಯಥಾ ।
ಅಥ ತೇ ಯುಯುಧುಃ ಶಕ್ತಿಸೇನಾಭಿರತಿಮೂರ್ಛಿತಾಃ ॥೪೩॥

ತದ್ದೃಷ್ಟ್ವಾ ವಿಸ್ಮಿತಾಃ ಸರ್ವೇ ಭಂಡಸಾಮರ್ಥ್ಯಮದ್ಭುತಂ ।
ಭೀತಾಶ್ಚಾಥ ಕಿಂ ಭವೇದ್ವೈ ಇತಿ ದೇವಾಶ್ಚ ಶಕ್ತಯಃ ॥೪೪॥

ಭಂಡರಾಕ್ಷಸನು ಪುನಃ ಅಂಧಕ, ಮೃತ್ಯು, ಕಾಮ, ತ್ರಿಪುರ ಎಂಬ ರಾಕ್ಷಸರನ್ನು ಸೃಷ್ಟಿಮಾಡಿದನು. ॥೩೯॥

ರಾಕ್ಷಸಶ್ರೇಷ್ಠನಾದ ಭಂಡನು ಈ ರೀತಿಯಲ್ಲಿ ಮಹಾದೇವನಿಗೆ ಶತ್ರುಗಳಾದ ಈ ರಾಕ್ಷಸರನ್ನು ಸೃಷ್ಟಿಮಾಡಿದನು. ಶ್ರೀ ಪರಾತ್ಪರತತ್ವಸ್ವರೂಪಳಾದ ದೇವಿಯು ಇವರನ್ನು ನೋಡಿ ತನ್ನ ಹಣೆಯ ಮೇಲಿನ ಕಣ್ಣಿನಿಂದ ಮಹಾದೇವನನ್ನೇ ಸೃಜಿಸಿದಳು. ॥೪೦॥

ದೇವದೇವನಾದ ಮಹಾದೇವನು ಅವರನ್ನೆಲ್ಲರನ್ನೂ ಕ್ಷಣಮಾತ್ರದಲ್ಲಿಯೇ ನಾಶಮಾಡಿದನು. ಅನಂತರ ಭಂಡರಾಕ್ಷಸನು ಲೆಕ್ಕವಿಲ್ಲದಷ್ಟು ಭಯಂಕರವಾದ ರಾಕ್ಷಸಮಹಾಸೈನ್ಯವನ್ನು ಸೃಷ್ಟಿಸಿದನು. ॥೪೧॥

ಹಿಂದೆ ಶಕ್ತಿಗಳೇ ನಾಶಮಾಡಿದ್ದ ಮಹಾಸೈನ್ಯವನ್ನೇ ಭಂಡರಾಕ್ಷಸನು ನಿಮಿಷಮಾತ್ರದಲ್ಲಿಯೇ ಸೃಷ್ಟಿಸಿದನು. ಆದ್ದರಿಂದ ವಿಶುಕ್ರ, ಮುಂತಾದ ತಮ್ಮಂದಿರೂ ಚತುರ್ಬಾಹು ಮುಂತಾದ ಅವರ ಮಕ್ಕಳುಗಳೂ ಈ ರೀತಿಯಲ್ಲಿಯೇ ಹುಟ್ಟಿದರು. ॥೪೨॥

ಪ್ರಳಯವಾದ ಪ್ರಪಂಚವನ್ನು ಬ್ರಹ್ಮನು ಮತ್ತೆ ಹೇಗೆ ಸೃಷ್ಟಿಸುವನೋ ಹಾಗೆ, ಭಂಡರಾಕ್ಷಸನು ಕರಂಕ, ಕುಟಿಲಾಕ್ಷ, ಮುಂತಾದ ರಾಕ್ಷಸಶ್ರೇಷ್ಠರನ್ನೂ,

ತದಾಽಭವನ್ಮಹಾಯುದ್ಧಂ ಭೂಯಶ್ಶೋಽಪಕ್ರಮಂ ಯಥಾ ।
ಹತಂ ಹತಂ ತತ್ರ ದೈತ್ಯೋ ಭೂಯೋಽಭೂಯಃ ಸಸರ್ಜ ಹ ॥೪೫॥

ತದ್ದೃಷ್ಟ್ವಾಽತ್ಯಂತ ವಿತ್ರಸ್ತಾಃ ಶಕ್ತಯೋ ದೇವತಾ ಅಪಿ ।
ತದಾ ಶ್ರೀಲಲಿತಾದೇವೀಂ ತುಷ್ಟುವುರ್ವಿಧಿಮುಖ್ಯಕಾಃ ॥೪೬॥

ಮಂತ್ರಿಣೀ ಚ ಮಹಾದೇವೀಮುಪವ್ರಜ್ಯ ಪ್ರಣಮ್ಯ ಚ ।
ಕೃತಾಂಜಲಿರ್ಮಧುರಯಾ ಪ್ರಾರ್ಥಯಾಮಾಸ ವೈ ಗಿರಾ ॥೪೭॥

ದೇವಿ ದೈತ್ಯಸ್ಯ ವಿಭವಂ ಮನ್ಯೇಽಹಂ ಸುಭಯಾವಹಂ ।
ಪಶ್ಯ ಶಕ್ತಿಗಣಂ ಸರ್ವಂ ಶುಷ್ಯದ್ವಕ್ತ್ರಂ ಸಮಾಕುಲಂ ॥೪೮॥

ಯುಧ್ಯಂತೀನಾಮವಿಶ್ರಾಂತ್ಯಾ ಚಾಽತ್ಯಗಾತ್ ಪ್ರಹರದ್ವಯಂ ।
ಹತಂ ಹತಂ ಶಕ್ತಿಗಣೈರ್ಭೂಯಃ ಸೃಜತಿ ವೈ ಕ್ಷಣಾತ್ ॥೪೯॥

ಪುನಃ ಸೃಷ್ಟಿಸಿದನು. ಅನಂತರ ಅವರೆಲ್ಲರೂ ಬಹಳ ಕೋಪದಿಂದ ಶಕ್ತಿಸೈನ್ಯಗಳೊಂದಿಗೆ ಕಾದಾಡಿದರು. ॥೪೩॥

ಭಂಡರಾಕ್ಷಸನ ಅತ್ಯಂತ ಆಶ್ಚರ್ಯಕರವಾದ ಸಾಮರ್ಥ್ಯವನ್ನು ಅವರೆಲ್ಲರೂ ನೋಡಿ ಆಶ್ಚರ್ಯಪಟ್ಟರು. ದೇವತೆಗಳೂ ಮತ್ತು ಶಕ್ತಿಗಳೂ ಕೂಡ ಈಗೇನು ಸಂಭವಿಸುವುದೋ ? ಎಂದು ಭಯಪಡುತ್ತಿದ್ದರು. ॥೪೪॥

ಆಗ ರಾಕ್ಷಸರಿಗೂ ಮತ್ತು ಶಕ್ತಿಗಳಿಗೂ ಪುನಃ ಯುದ್ಧವು ಪ್ರಾರಂಭಿಸದ ಹಾಗೆ ವಿಶೇಷವಾಗಿ ನಡೆಯಿತು. ಭಂಡರಾಕ್ಷಸನು ರಾಕ್ಷಸಸೈನ್ಯವು ನಾಶವಾದ ಹಾಗೆಲ್ಲಾ ಪುನಃ ಪುನಃ ಅದನ್ನು ಸೃಷ್ಟಿಸುತ್ತಿದ್ದನು. ॥೪೫॥

ಇದನ್ನು ನೋಡಿ ಶಕ್ತಿಗಳೂ ಮತ್ತು ದೇವತೆಗಳೂ ಬಹಳ ಭಯಗೊಂಡರು. ಬ್ರಹ್ಮನೇ ಮೊದಲಾದವರು ಶ್ರೀ ಲಲಿತಾದೇವಿಯನ್ನು ವಿಶೇಷವಾಗಿ ಸ್ತೋತ್ರ ಮಾಡಿದರು. ॥೪೬॥

ಮಂತ್ರಿಣೀದೇವಿಯು ಲಲಿತಾದೇವಿಯನ್ನು ಕುರಿತು, ರಾಕ್ಷಸನ ವೈಭವವು ನಮಗೆ ಬಹಳ ಭಯಂಕರವಾಗಿ ತೋರುವುದು. ಒಣಗಿದಂತೆ ನೀರಸವಾಗಿ, ಕಳೆಗುಂದಿದ ಮುಖವುಳ್ಳ, ಶಕ್ತಿಗಳ ಗುಂಪುಗಳನ್ನು ದಯವಿಟ್ಟು ನೋಡಿ! ॥೪೮॥

ಶಕ್ತಿಗಳು ಎರಡು ಯಾಮುಗಳಿಂದಲೂ ಎಡಬಿಡದೇ ಯುದ್ಧಮಾಡಿ ರಾಕ್ಷ

ಚತುರ್ಬಾಹುಮುಖಾಸ್ತಸ್ಯ ಸುತಾ ಯುಧಿ ನಿಪಾತಿತಾಃ ।
ಕುಮಾರ್ಯಾ ಸಪ್ತಕೃತ್ವಸ್ತೇ ಭೂಯೋ ಯುಧ್ಯಂತಿ ಸಂಪ್ರತಿ ॥೫೦॥

ವಿಷಂಗೋ ದಶಧಾ ತದ್ವದ್ವಿಶುಕ್ರೋ ನವಧಾಽಪಿ ಚ ।
ಹತಃ ಪುನಃ ಸೃಷ್ಟಏವ ಭಂಡದೈತ್ಯೇನ ಯುದ್ಧ್ಯತಿ ॥೫೧॥

ಕರಂಕ ಕುಟಿಲಾಽಕ್ಷಾಽಽದ್ಯಾ ಅಪ್ಯೇವಂ ಬಹುಧಾ ಹತಾಃ ।
ಯುಧ್ಯಂತ್ಯೇವಂ ಪುನಃ ಸೃಷ್ಟಾ ನೇತಃ ಸಾಧ್ಯಮಿದಂ ಹಿ ನಃ ॥೫೨॥

ಭೀತಾಃ ಶ್ರಾಂತಾಃ ಸರ್ವತಶ್ಚ ಪಶ್ಯ ಶಕ್ತೀರ್ಹತಪ್ರಭಾಃ ।
ರಕ್ಷ ಲೋಕಂ ಸರ್ವಮಿಮಂ ನೋಪೇಕ್ಷಾಂ ಕರ್ತುಮರ್ಹಸಿ ॥೫೩॥

ಸರ ಸಮೂಹಗಳನ್ನು ನಾಶಮಾಡಿದರೂ ಭಂಡನು ಅವರನ್ನೇ ಪುನಃ ಪುನಃ ಕ್ಷಣ ಮಾತ್ರದಲ್ಲಿಯೇ ಸೃಷ್ಟಿಮಾಡುತ್ತಿರುವನು ! ॥೪೯॥

ಹಿಂದೆ ಕುಮಾರಿಯು ಯುದ್ಧಮಾಡಿ ಏಳುಸಲ ಸೋಲಿಸಿ ನಾಶಮಾಡಿದ್ದ ಚತುರ್ಬಾಹು ಮುಂತಾದ ಅವನ ಮಕ್ಕಳು ಪುನಃ ಅವನಿಂದ ಜೀವಿತರಾಗಿ ಯುದ್ಧಮಾಡುತ್ತಿದ್ದಾರೆ. ॥೫೦॥

ದಂಡನಾಯಕಿ ಮುಂತಾದವರು ಹತ್ತು ಸಲ ಸೋತು ನಾಶವಾಗಿದ್ದ ವಿಷಂಗ ರಾಕ್ಷಸನೂ, ಒಂಬತ್ತುಸಲ ಸೋತು ಮೃತನಾಗಿದ್ದ ವಿಶುಕ್ರರಾಕ್ಷಸನೂ, ಪುನಃ ಭಂಡರಾಕ್ಷಸನಿಂದ ಬದುಕಿದವರಾಗಿ ಯುದ್ಧಮಾಡುತ್ತಿದ್ದಾರೆ. ॥೫೧॥

ಹಾಗೆಯೇ ನಮ್ಮ ಕಡೆಯವರು ಅನೇಕ ಸಲ ಸೋಲಿಸಿ ನಾಶಮಾಡಿದ್ದ ಕರಂಕ, ಕುಟಿಲಾಕ್ಷ ಮುಂತಾದ ರಾಕ್ಷಸರೂ ಪುನಃ ಭಂಡನಿಂದ ಜೀವಿತರಾಗಿ ಯುದ್ಧ ಮಾಡುತ್ತಿದ್ದಾರೆ. ಅದ್ದರಿಂದ ಅವರುಗಳನ್ನು ನಾವುಗಳು ಜಯಿಸಲು ಅಸಾಧ್ಯವಾಗಿರುತ್ತದೆ. ॥೫೨॥

ಶಕ್ತಿಗಳು ಎಲ್ಲಾ ಕಡೆಯಲ್ಲಿಯೂ ಭಯಗೊಂಡು ಬಳಲಿದವರಾಗಿ ಕಾಂತಿ ಹೀನರಾಗಿರುತ್ತಾರೆ. ಆದ್ದರಿಂದ ತಾವೇ ದಯವಿಟ್ಟು ಲೋಕವನ್ನು ಕಾಪಾಡಬೇಕು. ತಾವು ಉದಾಸೀನಮಾಡಬಾರದೆಂದೇ ನನ್ನ ಪ್ರಾರ್ಥನೆ. ಎಂದಳು. ॥೫೩॥

ಇತಿ ಸಂಪ್ರಾರ್ಥಿತಾ ದೇವೀ ಸ್ಮಯಿತ್ವೇಷದುವಾಚ ತಾಂ ।
ಮಾಭೀಃ ಪಶ್ಯ ಕ್ಷಣೇನೈವ ನಾಶಯಾಮ್ಯಸುರೇಶ್ವರಂ ॥೫೪॥

ಇತ್ಯುಕ್ತ್ವಾ ಕಾರ್ಮುಕೇ ಶೀಘ್ರಂ ಶರಮೇಕಂ ಸುಯೋಜಯತ್ ।
ತತ್ರಾಽಽವಾಹ್ಯ ಪಾಶುಪತಮಸ್ತ್ರಂ ಲೋಕಭಯಂಕರಂ ॥೫೫॥

ಮುಮೋಚಾಽಸುರಸೇನಾಯಾಮಸ್ತ್ರಂ ತನ್ನಿಮಿಷಾರ್ಧತಃ ।
ಭಸ್ಮೀಚಕಾರ ದೈತ್ಯಾನಾಂ ಸೇನಾಂ ಸಾಗರಸಂಮಿತಾಂ ॥೫೬॥

ಭೂಯಃ ಶರಂ ಕಾರ್ಮುಕೇ ಸ್ವೇ ನಿವೇಶಯದತಿ ಪ್ರಭಂ ।
ತದಾ ದಿಶೋಽಭಿತೋ ಜ್ವಾಲಾಮಾಲಾಽಲೀಢಾಽಭವನ್ ಕ್ಷಣಾತ್॥೫೭॥

ಚಕಂಪೇ ಭೂಃ ಪ್ರಕ್ಷುಭಿತಾಃ ಸಾಗರಾ ಭೀಃ ಸಮಾವಿಶತ್ ।
ಚರಾಚರಂ ಜಗಜ್ಜಾಲಂ ಪೇತುರುಲ್ಕಾಃ ಸಹಸ್ರಶಃ ॥೫೮॥

ಈ ರೀತಿಯಾಗಿ ಮಂತ್ರಿಣೀದೇವಿಯು ಲಲಿತಾದೇವಿಯನ್ನು ಪ್ರಾರ್ಥಿಸಲು ಆಕೆಯು ಸ್ವಲ್ಪ ಮುಗುಳುನಗೆಯನ್ನು ನಕ್ಕು ಮಂತ್ರಿಣಿಯನ್ನು ಕುರಿತು, ಎಲೌ ಮಂತ್ರಿಣಿಯೇ, ನೀನು ಹೆದರಬೇಡ. ರಾಕ್ಷಸಶ್ರೇಷ್ಠನಾದ ಭಂಡನನ್ನು ನಾನು ಕ್ಷಣಮಾತ್ರದಲ್ಲಿಯೇ ನಾಶಮಾಡುವುದನ್ನು ನೋಡು. ಎಂದಳು. ॥೫೪॥

ಈ ರೀತಿಯಾಗಿ ಹೇಳಿ ಲಲಿತಾದೇವಿಯು ತನ್ನ ಬಿಲ್ಲಿಗೆ ಬಂದು ಬಾಣವನ್ನು ಜೋಡಿಸಿದಳು. ಅದಕ್ಕೆ ಲೋಕಕ್ಕೆ ಭಯಂಕರವಾದ ಪಾಶುಪತಾಸ್ತ್ರವನ್ನು ಆಕೆಯು ಆವಾಹನೆಮಾಡಿದಳು. ॥೫೫॥

ಲಲಿತಾದೇವಿಯು ಒಂದರ್ಧನಿಮಿಷದೊಳಗಾಗಿಯೇ ರಾಕ್ಷಸ ಸೈನ್ಯದಮೇಲೆ ಆ ಅಸ್ತ್ರವನ್ನು ಪ್ರಯೋಗಿಸಿದಳು. ಈ ರೀತಿಯಲ್ಲಿ ಆಕೆಯು ಸಾಗರದಷ್ಟು ವಿಸ್ತಾರವಾದ ರಾಕ್ಷಸರ ಸೈನ್ಯವನ್ನು ಬೂದಿಮಾಡಿದಳು. ॥೫೬॥

ಲಲಿತಾದೇವಿಯು ಬಹಳ ಪ್ರಕಾಶಮಾನವಾಗಿರುವ ಬಾಣವನ್ನು ತನ್ನ ಬಿಲ್ಲಿಗೆ ಜೋಡಿಸಿದಳು. ಆಗ ಅದರಿಂದ ದಿಕ್ಕುಗಳೆಲ್ಲವೂ ಕ್ಷಣಕಾಲದಲ್ಲಿಯೇ ಜ್ವಾಲೆಗಳ ಸಾಲುಗಳಿಂದಲೇ ತುಂಬಿಹೋದವು. ॥೫೭॥

ಆದರಿಂದ ಭೂಮಿಯೂ ಅಲ್ಲಾಡಿತು! ಸಾಗರವೂ ಉಲ್ಲೋಲ ಕಲ್ಲೋಲವಾಯಿತು. ಚರಾಚರಸ್ವರೂಪವಾದ ಜಗತ್ತಿನಲ್ಲೆಲ್ಲಾ ಭಯವು ಪ್ರವೇಶಿಸಿತು. ಸಾವಿರಾರು ಬಾಲಚುಕ್ಕೆಗಳು ಬಿದ್ದವು. ॥೫೮॥

ಭಂಡಾಸುರಂ ಮೃಗಾದ್ಯಾಶ್ಚಾಪಸವ್ಯ ಮಭಿಸಂಯಯುಃ ।
ತಾವದ್ದೃಷ್ಟ್ವಾ ವಿನಿಷ್ಟಾಂ ಸ್ವಾಂ ಸೇನಾಂ ಸಾಗರಸನ್ನಿಭಾಂ ॥೫೯॥

ದಧ್ಯೌ ಶ್ರೀಲಲಿತಾಪಾದಪಂಕಜಂ ನಿಶ್ಚಲಾಂತರಃ ।
ಧ್ಯೇಯಮಾತ್ರಾತ್ಮತಾಂ ಯಾವತ್ ಪ್ರಾಪ್ತೋ ಭಂಡಮಹಾಸುರಃ ॥೬೦॥

ತಾವಚ್ಛ್ರೀ ಲಲಿತಾದೇವೀ ಕಾಮೇಶಾಸ್ತ್ರೇಣ ಯೋಜಿತಂ ।
ಶರಂ ಮುಮೋಚ ಭಂಡಾಯ ಸ ಶರೋತಿ ಭಯಂಕರಃ ॥೬೧॥

ಪ್ರಲಯಾನಲವತ್ ಜ್ವಾಲಾಂ ಮುಂಚನ್ ವಿಷ್ವಙ್ಮಹಾಪ್ರಭಃ ।
ಚರಾಚರಂ ಜಗಜ್ಜಾಲಂ ದಹನ್ನಿವ ನಿಮೇಷತಃ ॥೬೨॥

ಮುಷ್ಣಂಶ್ಚಕ್ಷೂಂಷಿ ಸರ್ವೇಷಾಂ ತೃಣಂ ದಾವಾನಲೋಯಥಾ ।
ಭಂಡಾಸುರಂ ಚ ಸರಥಂ ನಗರಂ ತಸ್ಯ ಶೂನ್ಯಕಂ ॥೬೩॥

ಮೃಗವೇ ಮೊದಲಾದುವುಗಳು ಭಂಡರಾಕ್ಷಸನ ಸುತ್ತಲೂ ಎಡದಿಂದ ಬಲಕ್ಕೆ ಸುತ್ತಲು ಪ್ರಾರಂಭಿಸಿದವು! ಅಷ್ಟರೊಳಗಾಗಿ ಭಂಡರಾಕ್ಷಸನು ಸಾಗರಕ್ಕೆ ಸಮಾನವಾದ ತನ್ನ ಸೈನ್ಯವು ನಾಶವಾದದ್ದನ್ನು ಕಂಡನು. ॥೫೯॥

ಆಗ ಭಂಡರಾಕ್ಷಸನು ನಿಶ್ಚಲವಾದ ಮನಸ್ಸಿನಿಂದ ಶ್ರೀ ಲಲಿತಾದೇವಿಯ ಪಾದಕಮಲವನ್ನೇ, ದೇವಿಯ ಸ್ವರೂಪದಲ್ಲೇ ಲೀನವಾದ ಮನಸ್ಸುಳ್ಳವನಾಗಿ, ಧ್ಯಾನಿಸಿದನು. ॥೬೦॥

ಅಷ್ಟರೊಳಗಾಗಿ ಶ್ರೀ ಲಲಿತಾದೇವಿಯು ಕಾಮೇಶ್ವರ ಅಸ್ತ್ರವನ್ನು ಜೋಡಿಸಿದ ಬಾಣವನ್ನು ಭಂಡನಿಗೆ ಬಿಟ್ಟಳು. ಆ ಬಾಣವು ಬಹಳ ಭಯಂಕರವಾಗಿತ್ತು. ॥೬೧॥

ಆ ಬಾಣವು ಪ್ರಳಯಕಾಲದ ಬೆಂಕಿಯಂತೆ ಜ್ವಾಲೆಗಳನ್ನು ಬಿಡುತ್ತಾ ಎಲ್ಲಾ ಕಡೆಯಲ್ಲಿಯೂ ವಿಶೇಷವಾಗಿ ಬೆಳಗಿತು. ಅದು ಚರಾಚರ ಪ್ರಪಂಚಸಮೂಹವೆಲ್ಲವನ್ನೂ ನಿಮಿಷಮಾತ್ರದಲ್ಲಿಯೇ ಸುಡುತ್ತದೆಯೋ ಎಂಬಂತೆ ಕಾಣುತ್ತಿತ್ತು! ॥೬೨॥

ಆ ಬಾಣವು ಎಲ್ಲರಕಣ್ಣುಗಳನ್ನೂ ಕೋರೈಸುತ್ತಾ, ಕಾಡುಗಿಚ್ಚು ಹೇಗೋ ಹಾಗೆ, ಭಂಡರಾಕ್ಷಸನನ್ನೂ ಅವನ ರಥವನ್ನೂ ಮತ್ತು ಶೂನ್ಯಕನಗರ ಮುಂತಾದುವನ್ನೂ ಕ್ಷಣಮಾತ್ರದಲ್ಲಿಯೇ ಬೂದಿಮಾಡಿಬಿಟ್ಟಿತು. ॥೬೩॥

ಸಸ್ತ್ರೀಸ್ಥವಿರಬಾಲಂ ಚ ಸಸ್ಥಾನಪ್ರಾಣಿಮಂಡಲಂ ।
ಭಸ್ಮಶೇಷೀಕರೋತ್ತತ್ರ ತದದ್ಭುತಮಿವಾಽಭವತ್ ॥೬೪॥

ಬ್ರಹ್ಮವಿಷ್ಣುಮುಖಾಸ್ತತ್ರ ಭಂಡಂ ವಾ ತಸ್ಯ ವಾಹಿನೀಂ ।
ನಗರಂ ವಾ ಪ್ರಹತಸ್ಯ ದೈತ್ಯಾಽರ್ಭಕಮಪಿ ಕ್ವಚಿತ್ ॥೬೫॥

ಅದೃಷ್ಟ್ವಾ ವಿಸ್ಮಯಂ ಪ್ರಾಪ್ತಾ ಜಯಶಬ್ದಮವಾಽಸೃಜುಃ ।
ಅಭಿಜಘ್ನುಃ ಶಕ್ತಿಗಣಾಃ ವಾದಿತ್ರಾಣಿ ಸಹಸ್ರಶಃ ॥೬೬॥

ವಿನೇದುರ್ದೇವವಾದ್ಯಾನಿ ಜಗುರ್ಗಂಧರ್ವನಾಯಕಾಃ ।
ಲಾಸ್ಯಂ ಚಕ್ರುರ್ದೇವವರಾ ಊರ್ವಶ್ಯಾಽದ್ಯಾಃ ಸುಹರ್ಷಿತಾಃ ॥೬೭॥

ಸ್ತೋತ್ರಾಣಿ ಪೇಠೂ ಋಷಯೋ ಸಿದ್ಧಾ ಜೇಪುಃ ಪರಾಂ ಶಿವಾಂ ।
ದಧ್ಯುರ್ಮುನಿಗಣಾ ರೂಪಂ ಪ್ರಣೇಮುರಿತರೇ ಜನಾಃ ॥೬೮॥

ಆ ಬಾಣವು ಸ್ತ್ರೀಯರು, ವೃದ್ಧರು, ಬಾಲಕರು, ಸೊಗಸಾದಸ್ಥಾನಗಳು, ಪ್ರಾಣಿಗಳಸಮೂಹ, ಇವನ್ನೆಲ್ಲವನ್ನೂ ಕ್ಷಣಮಾತ್ರದಲ್ಲಿಯೇ ಬೂದಿಯಾಗಿ ಮಾಡಿರುವುದನ್ನು ನೋಡಲು ಅತ್ಯಾಶ್ಚರ್ಯಕರವಾಗಿತ್ತು. ॥೬೪॥

ಬ್ರಹ್ಮ, ವಿಷ್ಣು ಮೊದಲಾದವರು ಅಲ್ಲಿ ಭಂಡರಾಕ್ಷಸ, ಅಥವಾ ಅವನ ಸೈನ್ಯ, ನಾಶಹೊಂದಿದ ಆತನ ಪಟ್ಟಣ ಅಥವಾ ರಾಕ್ಷಸಕುಮಾರರು ಇವು ಯಾವುದನ್ನೂ ಎಲ್ಲಿಯೂ ಕಾಣಲೇ ಇಲ್ಲ. ॥೬೫॥

ಅವರು ಇವುಗಳೊಂದನ್ನೂ ಕಾಣದೇ ಆಶ್ಚರ್ಯ ಭರಿತರಾಗಿ ಜಯಜಯಾಕಾರವನ್ನು ಮಾಡಿದರು. ॥೬೬॥

ದೇವವಾದ್ಯಗಳನ್ನೂ ದೇವತೆಗಳು ಬಾರಿಸಿದರು. ಗಂಧರ್ವಶ್ರೇಷ್ಠರು ಸೊಗಸಾಗಿ ಗಾನಮಾಡಿದರು. ದೇವತೆಗಳ ವೇಶ್ಯೆಯರಾದ ಊರ್ವಶಿಯೇ ಮೊದಲಾದವರು ಬಹಳ ಸಂತೋಷಗೊಂಡು ನಾಟ್ಯವಾಡಿದರು. ॥೬೭॥

ಋಷಿಗಳು ಸ್ತೋತ್ರಗಳನ್ನು ಪಠಿಸಿದರು. ಸಿದ್ಧರು ಮಹಾದೇವಿಯನ್ನುದ್ದೇಶಿಸಿ ಜಪಮಾಡಿದರು. ಋಷಿಗಳ ಗುಂಪಿನವರು ಆಕೆಯರೂಪವನ್ನು ನೋಡಲು ಧ್ಯಾನಮಾಡಿದರು. ಇತರ ಜನರು ಆಕೆಗೆ ನಮಸ್ಕಾರವನ್ನು ಮಾಡಿದರು. ॥೬೮॥

ವವೃಷುಃ ಪುಷ್ಪನಿಕರಾನ್ ಪ್ರಫುಲ್ಲಾನತಿಸೌರಭಾನ್ ।
ಬಲಾಹಕಾಃ ಸೌಮ್ಯರೂಪಾ ಗರ್ಜಂತೋಽತ್ಯಂತಮಂಥರಂ ॥೬೯॥

ಸುಗಂಧತೋಯ ಬಿಂದೂಂಶ್ಚ ಯಕ್ಷಕರ್ದಮಮಿಶ್ರಿತಾನ್ ।
ಮಾರುತಾಃ ಸೌಗಂಧ್ಯಯುತಾ ವಪುರಾನಂದನಸ್ಪೃಶಃ ॥೭೦॥

ದಿವಾನಾಥಃ ಸುಪ್ರಭೋಽಭೂನ್ನಿಯತಃ ಸಾಗರೋಽಪಿ ಚ ।
ಸನ್ಮಾನಾಂಸೀವ ತೋಯಾನಿ ಸಮಾಸನ್ ಸರಿದಾದಿಷು ॥೭೧॥

ಅಭೂಜ್ಜಗತ್ಪುನಃ ಸೃಷ್ಟಂ ಪ್ರಲಯಾಂತ ಇವೋಲ್ಲಸತ್ ।
ನಿರಾಕುಲಮಸಂಕೀರ್ಣಂ ತದಾ ಭಂಡಾಸುರೇ ಹತೇ ॥೭೨॥

ಏವಂ ದೈತ್ಯಂ ಹತಂ ದೃಷ್ಟ್ವಾ ಭಂಡಾಖ್ಯಂ ಲೋಕಕಂಟಕಂ ।
ದೇವಾ ಮಹರ್ಷಯಃ ಸಿದ್ಧಾಃ ಸರ್ವೇ ದೇವೀ ಮುಪಾಯಯುಃ ॥೭೩॥

ದೇವತೆಗಳು ಅರಳಿದ ಮತ್ತು ಬಹಳ ಸುವಾಸನೆಯಾದ ಹುವ್ವಿನ ಸಮೂಹಗಳಿಂದ ದೇವಿಯ ಮೇಲೆ ಹೂವಿನ ಮಳೆಯನ್ನು ಕರೆದರು. ಮೇಘಗಳು ಸೌಮ್ಯವಾಗಿ ಕಾಣುತ್ತಾ ಬಹಳ ಮೆಲ್ಲಗೆ ಗರ್ಜಿಸುತ್ತಿದ್ದವು. ॥೬೯॥

ಮೇಘಗಳು ಸುವಾಸನೆಯಾದ ನೀರಿನ ತೊಟ್ಟುಗಳನ್ನು ಕುಂಕುಮಕೇಸರಿಯೊಂದಿಗೆ ಸೇರಿಸಿ ಸುರಿಸುತ್ತಿದ್ದವು. ಮುಟ್ಟುವುದಕ್ಕೆ ಬಹಳ ಸುಖಕರವಾದ ಸುವಾಸನೆಯನ್ನು ಬೀರುತ್ತಿರುವ ಗಾಳಿಗಳು ವಿಶೇಷವಾಗಿ ಬೀಸಿದವು. ॥೭೦॥

ಸೂರ್ಯನು ಸ್ಥಿರನಾಗಿ ಪ್ರಕಾಶವನ್ನು ಬೀರಿದನು. ಸಾಗರವೂ ಕೂಡ ಶಾಂತವಾಯಿತು. ಸತ್ಪುರುಷರ ಮನಸ್ಸುಗಳಂತೆ, ನದಿಗಳೇ ಮೊದಲಾದುವುಗಳಲ್ಲಿ ನೀರು ಸ್ವಚ್ಛವಾಗಿ ಹರಿಯಿತು. ॥೭೧॥

ಪ್ರಲಯಕಾಲದ ಕೊನೆಯಲ್ಲಿ ಲೋಕದ ಪುನಃ ಸೃಷ್ಟಿಯಾದಂತೆ, ಭಂಡ ರಾಕ್ಷಸನು ನಾಶವಾಗಲು, ಲೋಕವು ಕಳವಳ ಘರ್ಷಣೆ ಮುಂತಾದುವಿಲ್ಲದೆ ಶುದ್ಧವಾಗಿ ಪ್ರಕಾಶಿಸಿತು. ॥೭೨॥

ಈರೀತಿಯಾಗಿ ಲೋಕಕ್ಕೆ ಕಂಟಕನಾಗಿದ್ದ ಭಂಡ ಎಂಬ ರಾಕ್ಷಸನು ನಾಶವಾಗಲಾಗಿ ದೇವತೆಗಳು, ಮಹರ್ಷಿಗಳು, ಸಿದ್ಧರು ಇವರೆಲ್ಲರೂ ಲಲಿತಾದೇವಿಯ ಸಮೀಪಕ್ಕೆ ಬಂದರು. ॥೭೩॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಸಪ್ತಸಪ್ತತಿತಮೋಽಧ್ಯಾಯಃ

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಭಂಡರಾಕ್ಷಸನ ನಾಶ ಎಂಬ ಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಅಷ್ಟಸಪ್ತತಿತಮೋಽಧ್ಯಾಯಃ ॥

ಎಪ್ಪತ್ತೆಂಟನೆಯ ಅಧ್ಯಾಯವು

ಉಪೇತ್ಯ ದೇವಪ್ರಮುಖಾಃ ಸರ್ವೇ ತಾಂ ಲಲಿತಾಂ ಪರಾಂ ।
ಹರ್ಷನಿರ್ಭರಿತಸ್ವಾಂತಾ ಸ್ತುಷ್ಟುವುರ್ವಿವಿಧೈಃ ಸ್ತವೈಃ ॥೧॥

ಜಯಜಯ ಲಲಿತಾಽಂಬ ತ್ವತ್ಪದಾಽಂಭೋಜಸೇವಾ
ಫಲಮಿಹ ಭಜತಾಂ ಕಿಂ ಕಿನ್ನದದ್ಯಾದಭೀಷ್ಟಂ ।
ವಿಬುಧವಿಟಪಿಮುಖ್ಯಾನ್ ಕಾಮದಾನ್ ಸ್ವಸ್ವಭಾವಾ
ನಪಿ ವಿತರತಿ ಭೂಯಃ ಸಂಶ್ರಿತೇಭ್ಯೋಽತಿ ಶೀಘ್ರಂ ॥೨॥

ವಯಮಿಹ ವಿಪದಾರ್ತಾ ಭಂಡದೈತ್ಯಪ್ರತಾಪಾ
ನಲಜಟಿಲ ಕರಾಲಜ್ವಾಲಯಾ ದಗ್ಧಪಕ್ಷಾಃ ।

ಅನಂತರ ದೇವತೆಗಳೇ ಮೊದಲಾದವರು ಶ್ರೇಷ್ಠಳಾದ ಲಲಿತಾದೇವಿಯನ್ನು ಸಮೀಪಿಸಿ ಸಂತೋಷದಿಂದ ತುಂಬಿದ ಮನಸ್ಸುಳ್ಳವರಾಗಿ ನಾನಾವಿಧವಾದ ಸ್ತೋತ್ರಗಳಿಂದ ಆಕೆಯನ್ನು ಸ್ತೋತ್ರಮಾಡಿದರು. ॥೧॥

ಓ ಲಲಿತಾಂಬಿಕೆಯೇ, ನಿನಗೆ ಜಯವಾಗಲಿ. ತಮ್ಮ ಪಾದಕಮಲಗಳ ಸೇವೆಯನ್ನು ಅನುಭವಿಸುವ ಭಕ್ತರ ಇಷ್ಟಾರ್ಥಗಳಲ್ಲಿ ಏನು ತಾನೇ ಸಿದ್ಧಿಸಲಾರದು ? ಸಕಲ ಇಷ್ಟಾರ್ಥಗಳನ್ನೂ ಕೊಡುವ, ನಿನ್ನಂತೆಯೇ ಉದಾರಸ್ವಭಾವವುಳ್ಳ, ಕಲ್ಪವೃಕ್ಷಗಳೇ ಮೊದಲಾದುವುಗಳಿಗಿಂತಲೂ ಅತ್ಯಂತ ಶೀಘ್ರವಾಗಿ ಫಲಗಳನ್ನು ನೀವು ದಯಪಾಲಿಸುತ್ತೀರಿ. ॥೨॥

ನಾವು ಇಲ್ಲಿಯವರೆಗೂ ಭಂಡರಾಕ್ಷಸನ ಪ್ರತಾಪವೆಂಬ ಬೆಂಕಿಯಿಂದ ತುಂಬಿರುವ, ಭಯಂಕರವಾದ ಜ್ವಾಲೆಗಳಿಂದ ಸುಟ್ಟುಹೋದ ರೆಕ್ಕೆಗಳುಳ್ಳ ಪಕ್ಷಿಗಳಂತಾಗಿ,

ಅಪರಿಮಿತ ಭವಾಽಬ್ಧೌ ಯನ್ನಿಮಗ್ನಾಃ ಸಮೇತಾ
ಝಟಿತಿ ನನು ತಯೈವ ಪ್ರೋದ್ಧೃತಾ ವ್ಯೋಮಮಾರ್ಗಾಃ ॥೩॥

ಪ್ರಣತ ಜನನಿತಾಂತಸ್ವಾಂತ ಸಂತಾಪ ಹಂತ್ರೀ
ಶ್ರಿತಜನದುರಿತಾಽಲಿ ಪ್ರೌಢಮಾಯಾನಿಯಂತ್ರೀ ।
ಸ್ಥಿರಚರ ನಿಖಿಲೋದ್ಯತ್ಪ್ರಾಣಿನಾಂ ಜೀವಯಂತ್ರೀ
ತವ ಪದ ನಲಿನೀಯಂ ಪ್ರೈಥತೇ ಲೋಕಯಂತ್ರೀ ॥೪॥

ತವ ಜನನಿ ವಿಲಾಸಃ ಸರ್ವಲೋಕಾಽವಭಾಸಃ
ಕುತ ಇಹ ತವ ಭೂಯಾ ದ್ದೈತ್ಯಯುದ್ಧೇ ಪ್ರಯಾಸಃ ।
ಭವತು ಸತತಮಸ್ಮನ್ಮಾನಸೇ ನೀರಜಸ್ಕೇ
ವಿಶದ ವಿಕಚವೃತ್ತ್ಯಾ ವಾಸಿತೇ ವಾಸನಾಭಿಃ ॥೫॥

ಅಪಾರವಾದ ಭಯವೆಂಬ ಸಮುದ್ರದಲ್ಲಿ ಒಟ್ಟಿಗೆ ಮುಳುಗಿ ಸಂಕಟಪಡುತ್ತಿದ್ದೆವು. ಇಂಥಾ ನಮ್ಮನ್ನು ನೀವು ದಯವಿಟ್ಟು ಹಿಡಿದೆತ್ತಿ ಆಕಾಶಮಾರ್ಗದಲ್ಲಿ ಸಂಚರಿಸುವ ಹಾಗೆ ಮಾಡಿದಿರಿ. ॥೩॥

ನಮಸ್ಕರಿಸುವ ಭಕ್ತರ ಸಮಸ್ತವಾದ ಮನಸ್ಸಿನ ಸಂತಾಪಗಳನ್ನೂ ಹಾಳು ಮಾಡುವ, ಆಶ್ರಯಸಿರುವ ಜನರ ಪಾಪಗಳ ಸಮೂಹಗಳೆಂಬ ಹೆಚ್ಚಾದ ಮಾಯೆಯನ್ನು ತಡೆಗಟ್ಟುವ, ಚರವಾದ ಮತ್ತು ಸ್ಥಿರವಾದ ಸಮಸ್ತಪ್ರಾಣಿಗಳ ಜೀವನಾಡಿಯಂತಿರುವ ನಿಮ್ಮ ಪಾದಕಮಲವೆಂಬ ಲೋಕಯಂತ್ರವು ವೃದ್ಧಿಯನ್ನು ಹೊಂದುತ್ತಲಿದೆ. ॥೪॥

ಓ ಲೋಕಮಾತೆಯೇ, ನಿನ್ನ ವಿಲಾಸವು ಎಲ್ಲಾ ಲೋಕವನ್ನೂ ಬೆಳಗುತ್ತದೆ. ಇಂತಹ ನಿಮ್ಮೊಂದಿಗೆ ರಾಕ್ಷಸರ ಯುದ್ಧವು ಅವರ ಶ್ರಮಕ್ಕೆ ಅಲ್ಲದೇ ಮತ್ತೇನು? ಶುದ್ಧವಾದ ಮತ್ತು ವಿಕಾಸವಾದ ಮನೋಧರ್ಮಗಳುಳ್ಳ, ಶುದ್ಧವಾದ ಸಂಸ್ಕಾರಗಳಿಂದ ತುಂಬಿದ, ಕಲ್ಮಷವಿಲ್ಲದ ನಮ್ಮ ಮನಸ್ಸಿನಲ್ಲಿ ನೀವು ಯಾವಾಗಲೂ ಪ್ರಕಾಶಿಸುತ್ತಿರುವಂತಾಗಲಿ. ॥೫॥

ಚಿರಜಡಮಿಲಿತಾನಾಂ ಯೋ ವಿವೇಕೈಕ ಹೇತುಃ ।
ಭವತಿ ಚರಣಹಂಸ ಸ್ತಾವಕೋ ಬ್ರಹ್ಮವಾಹಃ ॥೬॥

ಇತಿ ಸ್ತುತ್ವಾ ದಂಡವತ್ತೇ ಪ್ರಣತಾ ವಿಧಿಮುಖ್ಯಕಾಃ ।
ಭೂಯೋಭೂಯೋಽಪಿ ವಿವಿಧೈಃ ಸ್ತವೈಸ್ತುಷ್ಟುವುರಂಬಿಕಾಂ ॥೭॥

ತಾವದ್ಬ್ರಹ್ಮಾಂಡಕೋಟಿಭ್ಯೋ ಬ್ರಹ್ಮಾದ್ಯಾಃ ಕಾರಣೇಶ್ವರಾಃ ।
ಆಜಗ್ಮುರ್ಭಾರತೀಮುಖ್ಯಾಃ ಶಕ್ತಿಯುಕ್ತಾಃ ಘಟೋದ್ಭವ ॥೮॥

ತೇ ಪಾಣಿ ಸಂಪುಟೋತ್ತಂಸಾಃ ಪ್ರಣತಾ ಭಕ್ತಿನಿರ್ಭರಾಃ ।
ಸಮೀಡ್ಯ ಲಲಿತಾಮೀಡ್ಯಾಂ ಪ್ರಾಹುರ್ಬದ್ಧಕರಾಂಬುಜಾಃ ॥೯॥

ದೇವೇಶಿ ಭಂಡದೈತ್ಯಸ್ಯ ವಧಾದದ್ಯ ಸುರಕ್ಷಿತಂ ।
ಬ್ರಹ್ಮಾಂಡಾನಾಂ ಶತಂ ಪಂಚ ಏಷಾಂ ಸ ಹ್ಯಧಿಪೋಽಭವತ್ ॥೧೦॥

ಬಹಳ ಕಾಲದಿಂದಲೂ ಅಜ್ಞಾನದಿಂದ ತುಂಬಿರುವ ಜನರಿಗೆ ವಿವೇಕವನ್ನು ಉಂಟುಮಾಡಲು ಒಂದೇ ಕಾರಣವಾದ ನಿಮ್ಮ ಕಾಲುಕೆಳಗಡೆಯಲ್ಲಿ ಇರುವಹಂಸವು ಬ್ರಹ್ಮನಿಗೂ ವಾಹನವಾಗಿದೆ. ॥೬॥

ಈ ರೀತಿಯಾಗಿ ಬ್ರಹ್ಮನೇ ಮೊದಲಾದವರು ದೇವಿಗೆ ದಂಡಾಕಾರವಾಗಿ ನಮಸ್ಕಾರಮಾಡಿ ಪುನಃ ಪುನಃ ಲೋಕಮಾತೆಯಾದ ಆಕೆಯನ್ನು ಸ್ತೋತ್ರ ಮಾಡಿದರು. ॥೭॥

ಎಲೈ ಅಗಸ್ತ್ಯನೇ, ಅಷ್ಟರೊಳಗಾಗಿ ಲೋಕಕಾರಣೇಶ್ವರರಾದ ಬ್ರಹ್ಮ ಮೊದಲಾದವರು ಕೋಟ್ಯಂತರ ಬ್ರಹ್ಮಾಂಡಗಳಿಂದ ಹೊರಗೆ ಬಂದರು. ಅವರೆಲ್ಲರೂ ಭಾರತೀ ಮುಂತಾದ ಶಕ್ತಿಗಳೊಡಗೂಡಿ ಬಂದಿದ್ದರು. ॥೮॥

ಅವರೆಲ್ಲರೂ ತಮ್ಮ ಕೈಗಳನ್ನು ಜೋಡಿಸಿ ಬೊಗಸೆ ಮಾಡಿಕೊಂಡು ಭಕ್ತಿಯಿಂದ ಪೂರ್ಣರಾಗಿ ಪೂಜೆಗೆ ಅರ್ಹಳಾದ ಲಲಿತಾದೇವಿಯನ್ನು ನಮಸ್ಕರಿಸಿ ಕೈ ಜೋಡಿಸಿಕೊಂಡು ಈ ರೀತಿಯಲ್ಲಿ ಬಿನ್ನೈಸಿದರು. ॥೯॥

ಓ ದೇವೇಶ್ವರಿಯೇ, ತಾವು ಈಗ ನೂರೈದು ಬ್ರಹ್ಮಾಂಡಗಳನ್ನೂ ನಾಶ ಮಾಡಿ, ಅವುಗಳಿಗೆಲ್ಲಕ್ಕೂ ಒಡೆಯನಾಗಿದ್ದ ಭಂಡರಾಕ್ಷಸನನ್ನು ಕೊಂದು, ಆ ಎಲ್ಲಾ ಬ್ರಹ್ಮಾಂಡಗಳನ್ನೂ ರಕ್ಷಿಸಿದ್ದೀರಿ. ॥೧೦॥

ಪ್ರೋಕ್ತೇಷ್ವಂಡೇಷುಶಕ್ರಾದ್ಯಾ ಬದ್ಧಾಃ ಕೇಚಿತ್ಪಲಾಯಿತಾಃ ।
ಲೋಕಾಽಧಿಪತ್ಯಂ ಸರ್ವತ್ರ ದೈತ್ಯೈರೇವ ಚಕಾರ ಸಃ ॥೧೧॥

ಪ್ರವರ್ತಿತಾ ದೈತ್ಯವೇದಾ ದೈತ್ಯಯಜ್ಞಾಶ್ಚ ಸರ್ವತಃ ।
ನ ಕ್ವಚಿದ್ದೈವ ಯಜ್ಞೋಽಪಿ ಬ್ರಹ್ಮಯಜ್ಞೋಽಪಿ ಶಾಂಕರಿ ॥೧೨॥

ಪ್ರವೃತ್ತೋಽಭೂದ್ಬ್ರಾಹ್ಮಣಾದೌ ಭಂಡೇ ರಾಜ್ಯಂ ಪ್ರಶಾಸತಿ ।
ತದದ್ಯನಿಹತೇ ದೈತ್ಯೇ ತ್ವಯಾ ಯುಧಿ ಮಹೇಶ್ವರಿ ॥೧೩॥

ಪಲಾಯಿತಾ ದೈತ್ಯಗಣಾಃ ಲೋಕಪಾಲಾಶ್ಚ ಸಂಸ್ಥಿತಾಃ ।
ಸ್ವಸ್ವಾಽಧಿಕಾರ ಕೃತ್ಯೇಷು ಜಾತಂ ಸರ್ವಂ ನಿರಾಕುಲಂ ॥೧೪॥

ಭಂಡರಾಕ್ಷಸನು ಮೇಲೆ ಹೇಳಿದ ಬ್ರಹ್ಮಾಂಡಗಳಲ್ಲಿ ತಾನೇತಾನಾಗಿ ಮೆರೆಯುತ್ತಾ ಇಂದ್ರನೇ ಮೊದಲಾದ ಕೆಲವರನ್ನು ಕಟ್ಟಿಹಾಕಿದ್ದನು. ಕೆಲವರು ಅವನ ಹೆದರಿಕೆಯಿಂದ ಪಲಾಯನಮಾಡಿದ್ದರು. ಅಲ್ಲದೇ ಅವನು ಲೋಕಕ್ಕೆಲ್ಲಕ್ಕೂ ತಮ್ಮ ಕಡೆಯವರಾದ ರಾಕ್ಷಸರನ್ನೇ ಅಧಿಕಾರಿಗಳನ್ನಾಗಿ ಮಾಡಿದ್ದನು. ॥೧೧॥

ಭಂಡರಾಕ್ಷಸನು ರಾಕ್ಷಸರ ವೇದಗಳನ್ನೇ ನಿರ್ಮಿಸಿ ಪ್ರಚಾರಪಡಿಸಿದ್ದನು. ಅಲ್ಲದೇ ಅವನು ಎಲ್ಲಾ ಕಡೆಯಲ್ಲಿಯೂ ರಾಕ್ಷಸರನ್ನೇ ಉದ್ದೇಶಿಸಿ ಯಾಗಮಾಡಿಸುತ್ತಿದ್ದನು. ಓ ಶಂಕರಿಯೇ, ಎಲ್ಲಿಯೂ ದೈವಯಾಗವಾಗಲೀ ಅಥವಾ ಬ್ರಹ್ಮಯಾಗವಾಗಲೀ ನಡೆಯುತ್ತಲೇ ಇರಲಿಲ್ಲ. ॥೧೨॥

ಭಂಡರಾಕ್ಷಸನು ಆಳುತ್ತಿರಲು ಬ್ರಾಹ್ಮಣರೇ ಮೊದಲಾದವರೂ ರಾಕ್ಷಸರನ್ನುದ್ದೇಶಿಸಿಯೇ ಯಾಗಮಾಡಬೇಕಾಗಿತ್ತು. ಓ ಮಹೇಶ್ವರಿಯಾದ ದೇವಿಯೇ, ತಾವು ಅವನನ್ನು ಈಗ ಕೊಂದುದರಿಂದ ಲೋಕಕ್ಕೆ ಕ್ಷೇಮವಾಯಿತು. ॥೧೩॥

ರಾಕ್ಷಸರ ಗುಂಪುಗಳೆಲ್ಲವೂ ಓಡಿಹೋದವು. ಲೋಕಪಾಲಕರೆಲ್ಲರೂ ಸುಖವಾಗಿರುವರು. ಅವರೆಲ್ಲರೂ ನಿರಾತಂಕರಾಗಿ ತಮ್ಮ ತಮ್ಮ ಅಧಿಕಾರಗಳನ್ನು ನೋಡಿಕೊಂಡು ಹೋಗುತ್ತಿರುವರು. ಹೀಗೆ ಎಲ್ಲೆಲ್ಲಿಯೂ ನಿರ್ಭಯವುಂಟಾಗಿದೆ. ॥೧೪॥

ಏವಂ ವದತ್ಸು ದೇವೇಷು ತತ್ರಾಽಗತ್ಯ ಚ ವಿಶ್ವಕೃತ್ ।
ದೇವೀಂ ವಿಧಿಮುಖಾಂಶ್ಚಾಽಪಿ ಪ್ರಣಮ್ಯ ರಚಿತಾಂಜಲಿಃ ॥೧೫॥

ಪಿತಾಮಹಾಽಹಮಾಜ್ಞಪ್ತಸ್ತ್ವಯಾ ಯನ್ಮೇರುಮೂರ್ಧನಿ ।
ದೇವ್ಯಾಃ ಶ್ರೀಪುರನಿರ್ಮಾಣೇ ತತ್ತಥಾರಚಿತಂ ಮಯಾ ॥೧೬॥

ದ್ರಷ್ಟುಮರ್ಹಸಿ ತಚ್ಛೀಘ್ರಂ ದೇವ್ಯಾ ದೇವೈಶ್ಚ ಸಂಯುತಃ ।
ಏವಂ ತ್ವಷ್ಟ್ರಾ ಪ್ರಾರ್ಥಿತೋಽಜೋ ದೇವ್ಯೈ ವೃತ್ತಂ ವ್ಯಜಿಜ್ಞಪತ್॥೧೭॥

ಪ್ರಾರ್ಥಿತಾ ದೇವದೇವೇಶೈಃ ಲಲಿತಾಪರಮೇಶ್ವರೀ ।
ಶಕ್ತಿಸೇನಾ ದೇವಗಣೈರ್ಯುತಾ ತತ್ರ ಯಯೌ ದ್ರುತಂ ॥೧೮॥

ದದೃಶುಸ್ತತ್ಪುರಂ ಚಾರುತರಂ ತ್ವಷ್ಟ್ರಾ ವಿನಿರ್ಮಿತಂ ।
ಮಹಾಶ್ರೀಪುರರಾಜಸ್ಯ ಪ್ರತಿಬಿಂಬ ಮಿವಾಽರ್ಪಿತಂ ॥೧೯॥

ಈರೀತಿಯಾಗಿ ದೇವತೆಗಳು ಹೇಳುತ್ತಿರಲು ಅಲ್ಲಿಗೆ ವಿಶ್ವಕರ್ಮನು ಬಂದು ದೇವಿಯನ್ನೂ ಮತ್ತು ಬ್ರಹ್ಮನೇ ಮೊದಲಾದವರನ್ನೂ ನಮಸ್ಕರಿಸಿ ಕೈಜೋಡಿಸಿಕೊಂಡು ಈರೀತಿಯಾಗಿ ಬಿನ್ನೈಸಿದನು. ॥೧೫॥

ಓ ಲೋಕಕ್ಕೆ ಸೃಷ್ಟಿಕರ್ತರೇ, ಮೇರುಪರ್ವತದ ಮೇಲುಭಾಗದಲ್ಲಿ ದೇವಿಯ ಶ್ರೀಪುರವು ಮೊದಲು ಹೇಗೆ ನಿರ್ಮಾಣವಾಗಬೇಕೆಂದು ನಿಮ್ಮ ಅಪ್ಪಣೆಯಾಗಿದ್ದಿತೋ ಹಾಗೆಯೇ ರಚಿಸಿದ್ದೇನೆ. ॥೧೬॥

ಆದ್ದರಿಂದ ತಾವು ದೇವಿಯವರು ಮತ್ತು ದೇವತೆಗಳೊಂದಿಗೆ ಬಂದು ಅದನ್ನು ದಯವಿಟ್ಟು ಪರಿಶೀಲಿಸಬೇಕು. ಈರೀತಿಯಾಗಿ ಬ್ರಹ್ಮನನ್ನು ವಿಶ್ವಕರ್ಮನು ಪ್ರಾರ್ಥಿಸಲಾಗಿ ಅವನು ದೇವಿಗೆ ಈ ವಿಷಯವನ್ನು ಬಿನ್ನೈಸಿದನು. ॥೧೭॥

ದೇವಾಧಿದೇವತೆಗಳೆಲ್ಲರೂ ಒಟ್ಟಿಗೆ ದೇವಿಯನ್ನು ಈ ವಿಷಯವಾಗಿ ಪ್ರಾರ್ಥಿಸಲಾಗಿ ಲಲಿತಾಪರಮೇಶ್ವರಿಯು ಶಕ್ತಿಸೈನ್ಯ ಮತ್ತು ದೇವತೆಗಳೊಂದಿಗೆ ಶೀಘ್ರವಾಗಿ ಅಲ್ಲಿಗೆ ಹೋದಳು. ॥೧೮॥

ವಿಶ್ವಕರ್ಮನು ನಿರ್ಮಿಸಿದ್ದ ಮಹಾ ಶ್ರೀಪುರಶ್ರೇಷ್ಠನಗರಿಯ ಪ್ರತಿಬಿಂಬವೋ ಎಂಬಂತಿದ್ದ ಅತ್ಯಂತ ಮನೋಹರವಾದ ಆ ಪಟ್ಟಣವನ್ನು ನೋಡಿದರು. ॥೧೯॥

ವಿಸ್ಮಿತಾಃ ಸರ್ವ ಏವೈತೇ ದೇವಾಃ ಶಕ್ತಿಗಣಾಸ್ತಥಾ ।
ಅಥ ತತ್ರ ನಿವಸನೇ ದೇವಾಃ ಶ್ರೀಲಲಿತಾಽಂಬಿಕಾಂ ॥೨೦॥

ಪ್ರಾರ್ಥಯಾಮಾಸುರತ್ಯಂತಂ ಪ್ರಣತಾಃ ಸರ್ವಭಾವತಃ ।
ತತ್ಸಂಮತಿಂ ಸಮಾದಾಯ ಬುದ್ಧೀಶಪ್ರಮುಖಾಸ್ತದಾ ॥೨೧॥

ರಾಜ್ಯಾಽಭಿಷೇಕ ಸಾಮುಗ್ರೀಂ ಕಲ್ಪಯಾಮಾಸುರುತ್ತಮಾಂ ।
ಪ್ರಕಲ್ಪ್ಯ ಸರ್ವಸಂಭಾರಾನ್ ಶುಭಲಗ್ನಮುಹೂರ್ತಕೇ ॥೨೨॥

ಬ್ರಹ್ಮಾ ಮುನಿಗಣೋಪೇತ ಅಭಿಷೇಚನಿಕಂ ವಿಧಿಂ ।
ಚಕಾರಾಽಽಗಮ ದೃಷ್ಟೇನ ಮಾರ್ಗೇಣೋತ್ತಮ ಕಲ್ಪತಃ ॥೨೩॥

ಬೃಂದಾರಕಾ ದೇವಗಣಾಃ ಮರುತೋ ವಸವೋಽಗ್ನಯಃ ।
ಗಂಧರ್ವಾ ದೇವದೂತಾಶ್ಚ ದಿಕ್ಪಾಲಾಃ ಯಕ್ಷಗುಹ್ಯಕಾಃ ॥೨೪॥

ಆಗ ಎಲ್ಲಾ ದೇವತೆಗಳೂ ಶಕ್ತಿಗಳ ಗುಂಪಿನವರೂ ಕೂಡ ಅತ್ಯಂತ ಆಶ್ಚರ್ಯಪಟ್ಟರು. ಅನಂತರ ಆ ನಗರದಲ್ಲಿ ದೇವತೆಗಳೇ ಮೊದಲಾದವರು ದೇವಿಯನ್ನು ಈ ರೀತಿಯಲ್ಲಿ ಪ್ರಾರ್ಥಿಸಿದರು. ||೨೦||

ಬಹಳ ಭಕ್ತಿಭಾವದಿಂದ ಕೂಡಿದವರಾಗಿ ಬುದ್ಧೀಶನಾದ ಬೃಹಸ್ಪತಿಯೇ ಮೊದಲಾದ ದೇವತೆಗಳೆಲ್ಲರೂ ಲಲಿತಾದೇವಿಯನ್ನು ಪ್ರಾರ್ಥಿಸಿ ಪಟ್ಟಾಭಿಷೇಕಕ್ಕೆ ಆಕೆಯ ಸಮ್ಮತಿಯನ್ನು ಪಡೆದರು. ||೨೧||

ಅವರೆಲ್ಲರೂ ಶ್ರೇಷ್ಠವಾದ ದೇವಿಯ ಅಭಿಷೇಕಕ್ಕೆ ಬೇಕಾದ ಸಮಸ್ತ ಸಾಮುಗ್ರಿಗಳನ್ನೂ ಹೊಂದಿಸಿದರು. ಅನಂತರ ಅವರು ಶ್ರೇಷ್ಠ ಲಗ್ನವುಳ್ಳ ಮುಹೂರ್ತದಲ್ಲಿ ಎಲ್ಲಾ ಪಟ್ಟಾಭಿಷೇಕ ಸಾಮುಗ್ರಿಗಳನ್ನೂ ಶೇಖರಿಸಿ ಶೀಘ್ರದಲ್ಲಿಯೇ ಆಕೆಗೆ ಆ ಶ್ರೀಪಟ್ಟಣದಲ್ಲಿ ಪಟ್ಟಾಭಿಷೇಕಮಾಡಲು ಸಿದ್ಧರಾದರು. ||೨೨||

ಬ್ರಹ್ಮನು ಋಷಿಗಳ ಸಮೂಹದಿಂದ ಕೂಡಿದವನಾಗಿ ಶ್ರೇಷ್ಠಕಲ್ಪೋಕ್ತ ಮಾರ್ಗದಿಂದ ಶಾಸ್ತ್ರೋಕ್ತವಾದ ಕ್ರಮದಲ್ಲಿ ಲಲಿತಾದೇವಿಗೆ ಅಭಿಷೇಕರೂಪವಾದ ಕಾರ್ಯವನ್ನು ನೆರವೇರಿಸಿದನು. ||೨೩||

ಶ್ರೀಲಲಿತಾದೇವಿಯ ಅಭಿಷೇಕಕಾರ್ಯದ ಸಮಯದಲ್ಲಿ ದೇವತೆಗಳು, ವಸುಗಳು, ವಾಯುಗಳು, ಅಗ್ನಿಗಳು, ಗಂಧರ್ವರು, ದೇವದೂತರು, ದಿಕ್ಪಾಲಕರು, ಯಕ್ಷರು, ಗುಹ್ಯರು ಇವರೆಲ್ಲರೂ ಸೇರಿದ್ದರು. ||೨೪||

ಯಾತುಧಾನಾಃ ಕಿಂಪುರುಷಾಃ ಕಿನ್ನರಾಃ ಉರಗಾ ಅಪಿ ।
ವಿದ್ಯಾಧ್ರಾಃ ಸಿದ್ಧಮುನಯಃ ಋಷಯಃ ಪಿತರೋಽಸುರಾಃ ॥೨೫॥

ಬ್ರಹ್ಮರುದ್ರಹರೀಣಾಂ ಚ ಕೋಟಯೋಽಂಡಾಂತರಸ್ಥಿತಾಃ ।
ಸದಾಶಿವೇಶ್ವರೌ ಚಾಽಪಿ ಶ್ರೀಕಂಠೋಽನಂತ ಏವ ಚ ॥೨೬॥

ಸಂಗತಾಸ್ತತ್ರ ಲಲಿತಾ ಮಹಾರಾಜ್ಯಾಽಭಿಷೇಚನೇ ।
ಪರಿಚೇರುಸ್ತತ್ರ ದೇವೀಂ ಲಲಿತಾಂಬಾಂ ಸಮಂತತಃ ॥೨೭॥

ಬ್ರಹ್ಮಾಣೀ ಕಮಲಾ ಗೌರೀ ಕೋಟಯೋ ಭಕ್ತಿಭಾವನಾಃ ।
ಉಪಚಾರೈಃ ಪೃಥಗ್ಭೂತೈಃ ಪೂಜಯಾಮಾಸುರಾದರಾತ್ ॥೨೮॥

ಏವಂ ಕೃತಸ್ವಸ್ತ್ಯಯನಾಂ ಮಂಗಲಾಚಾರ ಸಂಶ್ರಯಾಂ ।
ನದತ್ಸು ಶುಭವಾದ್ಯೇಷು ಮೂರ್ಛಯತ್ಸುಸುಮೂರ್ಛನಾಂ ॥೨೯॥

ರಾಕ್ಷಸರು, ಕಿಂಪುರುಷರೆಂಬ ದೇವತೆಗಳು, ಕಿನ್ನರರೆಂಬ ದೇವತೆಗಳು, ಸರ್ಪಗಳು, ವಿದ್ಯಾಧರರೆಂಬ ದೇವತೆಗಳು, ಸಿದ್ಧರು ಮತ್ತು ಋಷಿಗಳು, ಪಿತೃದೇವತೆಗಳು ಇನ್ನೂ ಬೇರೆ ವಿಧರಾದ ರಾಕ್ಷಸರುಗಳು ಇವರೆಲ್ಲರೂ ಲಲಿತಾಪರಮೇಶ್ವರೀ ದೇವಿಯ ಅಭಿಷೇಕ ಸಮಯದಲ್ಲಿ ಸೇರಿದ್ದರು. ॥೨೫॥

ಬೇರೆ ಬ್ರಹ್ಮಾಂಡಗಳಲ್ಲಿರುವ ಬ್ರಹ್ಮ, ರುದ್ರ, ಹರ ಮುಂತಾದ ಕೋಟ್ಯಂತರ ದೇವತೆಗಳೂ, ಸದಾಶಿವ, ಈಶ್ವರ, ಶ್ರೀಕಂಠ, ಅನಂತ ಮುಂತಾದವರೂ ಆಕೆಯ ಅಭಿಷೇಕಕಾಲದಲ್ಲಿ ಸೇರಿದ್ದರು. ॥೨೬॥

ಇನ್ನೂ ಮಹಾಜನರು ಶ್ರೀ ಲಲಿತಾದೇವಿಯ ರಾಜ್ಯಾಭಿಷೇಕದಲ್ಲಿ ನೆರೆದು ಲಲಿತಾಮಾತೆಯನ್ನು ಎಲ್ಲಾ ಕಡೆಯಲ್ಲಿಯೂ ಸೇವಿಸಿದರು. ॥೨೭॥

ಬ್ರಹ್ಮಾಣೀ, ಕಮಲಾ ಗೌರೀ ಮುಂತಾದ ಕೋಟ್ಯಾಂತರ ದೇವಸ್ತ್ರೀಯರು ಭಕ್ತಿಭಾವದಿಂದ ನಾನಾ ವಿಧವಾದ ಉಪಚಾರಗಳನ್ನು ಆಕೆಗೆ ಮಾಡುತ್ತಾ ಗೌರವದಿಂದ ಲಲಿತಾದೇವಿಯನ್ನು ಪೂಜಿಸಿದರು. ॥೨೮॥

ಈ ರೀತಿಯಾಗಿ ಲಲಿತಾದೇವಿಗೆ ಸ್ವಸ್ತಿವಾಚನವನ್ನೂ ಮಂಗಳವಾಚನವನ್ನೂ ಮಂಗಳಕರವಾದ ಕಾರ್ಯಗಳೊಂದಿಗೆ ಅವರು ನಡೆಸಿದರು. ಆ ಕಾಲದಲ್ಲಿ ಮಂಗಳಕರವಾದ ವಾದ್ಯಗಳು ಘೋರ್ಗರೆಯುತ್ತಿದ್ದವು. ಕಿವಿಗೆ ಹಿತವಾಗಿರುವಂತೆ ಅವನ್ನು ದೇವತೆಗಳು ನುಡಿಸಿದರು. ॥೨೯॥

ಅವರೋಹಾಽಽರೋಹಗತಿ ಲಯಶ್ರುತಿಸಮಾರಣೈಃ ।
ಗಂಧರ್ವೇಷು ಪ್ರನೃತ್ಯತ್ಸು ದೇವವೇಶ್ಯಾಸು ಸರ್ವತಃ ॥೩೦॥

ಜಪತ್ಸು ಮುನಿವೃಂದೇಷು ಋಷಿಷು ಪ್ರಪಠತ್ಸು ಚ ।
ಸ್ತುವತ್ಸು ವಿವಿಧೇಷೂಚ್ಚೈಃ ಪ್ರೇಕ್ಷತ್ಸು ಪ್ರಾಣಿಷೂದ್ಯಮೈಃ ॥೩೧॥

ವಿಧಿರಾರೋಹಯದ್ದೇವೀಂ ಮಹಾಸಿಂಹಾಸನೇ ಶುಭೇ ।
ಅಥ ಮಂತ್ರ ಪ್ರಪೂತಾಽಭಿರ್ನವರತ್ನವಿಚಿತ್ರಿತೈಃ ॥೩೨॥

ಕಲಶೈಃ ಸಂಭೃತೈಶ್ಚಾಽಪಿ ನದೀಸಾಗರ ಸಂಭವೈಃ ।
ಅಭ್ಯಷಿಂಚಲ್ಲೋಕಧಾತಾ ವಸಿಷ್ಠಪ್ರಮುಖೈರ್ವೃತಃ ॥೩೩॥

ನಾನಾವಿಧವಾದ ಸಂಗೀತಗಾರರಿಂದ ಗಂಧರ್ವರು ಸಂಗೀತವನ್ನು ಶಾಸ್ತ್ರ ಕ್ರಮದಲ್ಲಿ ಆರೋಹಾವರೋಹಗಳಿಂದ ಸೊಗಸಾಗಿ ಮನಸ್ಸಿಗಿಂಪಾಗುವಂತೆ ಹಾಡುತ್ತಿದ್ದರು. ದೇವತೆಗಳ ವೇಶ್ಯೆಯರೆಲ್ಲರೂ ಎಲ್ಲಾ ಕಡೆಯಲ್ಲಿಯೂ ಮನಸ್ಸಿಗೆ ಇಂಪನ್ನುಂಟುಮಾಡುವ ರೀತಿಯಲ್ಲಿ ನರ್ತನವನ್ನು ಮಾಡುತ್ತಿದ್ದರು. ॥೩೦॥

ಋಷಿಗಳ ಗುಂಪಿನವರು ಮಂತ್ರಜಪವನ್ನು ಮಾಡುತ್ತಿದ್ದರು. ಇತರ ಬೇರೆ ಋಷಿಗಳು ಸ್ತೋತ್ರಪಾಠವನ್ನು ಮಾಡುತ್ತಿದ್ದರು. ಇನ್ನೂ ಅನೇಕ ಋಷಿಗಳು ದೇವಿಯ ಗುಣಗಾನವನ್ನು ಮಾಡುತ್ತಿದ್ದರು. ಮತ್ತು ಅನೇಕ ಮಹನೀಯರು ಪ್ರಯತ್ನಪೂರ್ವಕವಾಗಿ ಅವಕಾಶವನ್ನು ಕಲ್ಪಿಸಿಕೊಂಡು ದೇವಿಯ ಅಭಿಷೇಕವನ್ನು ನೋಡಲು ಬಂದಿದ್ದರು. ॥೩೧॥

ಇಂತಹ ಶುಭಸಮಯದಲ್ಲಿ ಬ್ರಹ್ಮನು ಮಂಗಳಕರವಾದ ಮಹಾ ಸಿಂಹಾಸನದಮೇಲೆ ದೇವಿಯನ್ನು ಕೈಹಿಡಿದುಕೊಂಡು ಹೋಗಿ ಕೂರಿಸಿದನು. ಅನಂತರ ಮಂತ್ರದಿಂದ ಪರಿಶುದ್ಧವಾದ ನೀರುಗಳುಳ್ಳ, ಒಂಬತ್ತುವಿಧವಾದ ರತ್ನಗಳಿಂದಲೂ ಚನ್ನಾಗಿ ಅಲಂಕೃತವಾಗಿರುವ ಕಲಶಗಳನ್ನು ಬ್ರಹ್ಮನು ತೆಗೆದುಕೊಂಡು ಬಂದನು. ॥೩೨॥

ಲೋಕಕ್ಕೇ ತಂದೆಯಾದ ಬ್ರಹ್ಮನು ವಸಿಷ್ಠರೇಮೊದಲಾದ ಶ್ರೇಷ್ಠ ಋಷಿಗಳಿಂದ ಕೂಡಿದವನಾಗಿ ನದಿಗಳೂ, ಸಾಗರಗಳೂ ಮುಂತಾದುವುಗಳಿಂದ ತಂದ ನೀರಿನಿಂದ ತುಂಬಿರುವ ಕಲಶಗಳಿಂದ ಲಲಿತಾದೇವಿಗೆ ಅಭಿಷೇಕವನ್ನು ಮಾಡಿದನು. ॥೩೩॥

ಅಭಿಷಿಚ್ಯ ಮಹಾದೇವೀ ಮನರ್ಘ್ಯಾಽಭರಣೋಜ್ಜ್ವಲಾಂ ।
ವಿಚಿತ್ರ ದಿವ್ಯವಸನಾಂ ಶ್ರೀಚಕ್ರಾಽಧಿವಿರಾಜಿತಾಂ ॥೩೪॥

ಪಂಚಬ್ರಹ್ಮ(ಹ್ಮಾಽ) ಕಾರಮಂಚಶೋಭಿನೀಂ ಲಲಿತಾಽಂಬಿಕಾಂ ।
ಪೂಜಯಾಮಾಸುರಮರಾ ವಿವಿಧೈಃ ಸುಸಮರ್ಹಣೈಃ ॥೩೫॥

ವಿಧಿವಿಷ್ಣು ಮಹೇಶಾಽಽದ್ಯಾಃ ಪೃಥಗ್ಭಕ್ತಿ ಸಮಾಹಿತಾಃ ।
ಸ್ತುತ್ವಾ ವಿಚಿತ್ರಸ್ತವನೈಃ ಪ್ರಣೇಮುರ್ಭುವಿ ದಂಡವತ್ ॥೩೬॥

ಏವಂ ಶ್ರೀಲಲಿತಾದೇವೀ ತತ್ರ ಶ್ರೀಪುರಶೇಖರೇ ।
ಸಿಂಹಾಸನೇಽಭಿಷಿಕ್ತಾ ಸಾ ಮಹಾಶ್ರೀಪುರವತ್ತದಾ ॥೩೭॥

ಮಂತ್ರಿಣೀ ಪ್ರಮುಖಾನಾಂ ಸ್ವಸ್ಥಾನಾನಿ ಪ್ರದಿಶತ್ ಪೃಥಕ್ ।
ಏವಂ ಘಟೋದ್ಭವಮುನೇ ಮೇರುಶೃಂಗೇ ಮಹೋನ್ನತೇ ॥೩೮॥

ಅಮೂಲ್ಯವಾದ ಆಭರಣಗಳಿಂದ ಪ್ರಕಾಶಿಸುತ್ತಿರುವ, ನಾನಾವಿಧವಾದ ಶ್ರೇಷ್ಠವಸ್ತ್ರಗಳನ್ನು ಧರಿಸಿರುವ, ಶ್ರೀ ಚಕ್ರದ ಮೇಲೆ ಪ್ರಕಾಶಿಸುತ್ತಿರುವ, ದೇವಿಗೆ ಬ್ರಹ್ಮನು ಅಭಿಷೇಕವನ್ನು ಮಾಡಿದನು. ॥೩೪॥

ಐದು ಬ್ರಹ್ಮರೂಪಗಳಿಂದ ಏರ್ಪಟ್ಟ ಆಕಾರವುಳ್ಳ ಮಂಚದಲ್ಲಿ ಪ್ರಕಾಶಿಸುತ್ತಿರುವ ಲಲಿತಾಮಾತೆಗೆ ದೇವತೆಗಳು ನಾನಾವಿಧವಾದ ಶ್ರೇಷ್ಠವಾದ ವಸ್ತುಗಳಿಂದ ಪೂಜೆಯನ್ನು ಸಲ್ಲಿಸಿದರು. ॥೩೫॥

ಬ್ರಹ್ಮಾ, ವಿಷ್ಣು, ಶಿವ ಮುಂತಾದವರು ಪ್ರತ್ಯೇಕವಾಗಿ ಭಕ್ತಿಭಾವದಿಂದ ಉಂಟಾದ ಶಾಂತಚಿತ್ತವುಳ್ಳವರಾಗಿ ಅನೇಕ ವಿಧವಾದ ಸ್ತೋತ್ರಗಳಿಂದ ಲಲಿತಾ ದೇವಿಗೆ ಸ್ತೋತ್ರಮಾಡಿ ಭೂಮಿಯಲ್ಲಿ ದಂಡಾಕಾರವಾಗಿ ನಮಸ್ಕರಿಸಿದರು. ॥೩೬॥

ಈ ರೀತಿಯಾಗಿ ಆ ಶ್ರೀಪುರವೆಂಬ ಶ್ರೇಷ್ಠಪಟ್ಟಣದಲ್ಲಿ ಶ್ರೀ ಲಲಿತಾ ದೇವಿಯು ಸಿಂಹಾಸನದಲ್ಲಿ ಕುಳಿತು ಅಭಿಷೇಕಮಾಡಿಸಿಕೊಂಡು ದಿವ್ಯವಾದ ಆ ಪಟ್ಟಣವನ್ನು ಬೆಳಗಿದಳು. ॥೩೭॥

ಎಲೈ ಅಗಸ್ತ್ಯಮುನಿಯೇ, ಈ ರೀತಿಯಾಗಿ ಬಹಳ ಎತ್ತರವಾದ ಮೇರು ಪರ್ವತದ ಶಿಖರದಲ್ಲಿ ಕಟ್ಟಿದ್ದ ಆ ಶ್ರೀ ಪುರದಲ್ಲಿ ಲಲಿತಾದೇವಿಯು ಪ್ರಕಾಶಿಸುತ್ತಾ ಮಂತ್ರಿಣಿಯೇ ಮೊದಲಾದ ಮುಖ್ಯರಾದ ಶಕ್ತಿದೇವಿಯರಿಗೆ ಬೇರೆ ಬೇರೆ ಶ್ರೇಷ್ಠ ಅಧಿಕಾರಸ್ಥಾನಗಳನ್ನು ಕೊಟ್ಟಳು. ॥೩೮॥

ಸಮಾಸ್ತೇ ಶ್ರೀಪುರೇ ಬ್ರಹ್ಮಮುಖಶಾಸನತತ್ಪರಾ ।
ದೇವಶಿಲ್ಪಿಸ್ವಚಾತುರ್ಯ ಸರ್ವಸಾರವಿನಿರ್ಮಿತಂ ॥೩೯॥

ನಗರಂ ಶ್ರೀಮಹಾದೇವ್ಯಾ ಭೂಷಣಂ ಛತ್ರಪಾದುಕೇ ।
ಪ್ರಾರ್ಥಿತಾ ವಿಧಿಮುಖ್ಯೈಃ ಸಾ ಸ್ವೀಕೃತ್ಯ ಕರುಣಾವಶಾತ್ ॥೪೦॥

ಚಿದಾನಂದ ಘನಾಪೀತ್ಥಮಾಸ್ತೇ ಲೀಲಾವಪುರ್ಧರಾ ।
ಇತಿಶ್ರುತ್ವಾ ಹಯಗ್ರೀವಾತ್ ಕಥಾಂ ಪರಮಪಾವನೀಂ ॥೪೧॥

ಅಗಸ್ತ್ಯಃ ಸಂತುಷ್ಟಮನಾಃ ಪಪ್ರಚ್ಛಾತಿವಿಶಂಕಿತಃ ।
ಹಯಗ್ರೀವ ದಯಾಸಿಂಧೋ ಮೇರಾವಸ್ಮಿ ತ್ವಯೋದಿತಂ ॥೪೨॥

ಶ್ರೀಪುರದಲ್ಲಿ ದೇವಿಯು ಬ್ರಹ್ಮನೇ ಮೊದಲಾದವರಿಗೂ ಕಾರ್ಯಗಳಲ್ಲಿ ನಿಯಮವನ್ನು ಮಾಡುತ್ತಾ ಆಳುತ್ತಿದಾಳೆ. ದೇವ ಶಿಲ್ಪಿಯಾದ ವಿಶ್ವಕರ್ಮನು ತನ್ನ ನಿಪುಣತೆಯೆಲ್ಲವನ್ನೂ ಮತ್ತು ಸರ್ವಸಾರಭೂತವಾದ ಪದಾರ್ಥಗಳನ್ನೂ ಉಪಯೋಗಿಸಿ ಕಟ್ಟಿದ್ದ ಶ್ರೀ ಪುರವು ವಿಶೇಷವಾಗಿ ಶೋಭಿಸುತ್ತಿರುತ್ತದೆ. ॥೩೯॥

ಶ್ರೀಲಲಿತಾದೇವಿಗೆ ಅಲಂಕಾರವಾದ ಛತ್ರಿ ಮತ್ತು ಪಾದರಕ್ಷೆ ಮುಂತಾದ ಉಪಚಾರವಸ್ತುಗಳನ್ನು ಆ ಪಟ್ಟಣದಲ್ಲಿಯೇ ಬ್ರಹ್ಮನೇ ಮೊದಲಾದವರು ಸಮರ್ಪಣೆಮಾಡಿ, ದೇವಿಯು ಅವನ್ನು ಸ್ವೀಕರಿಸಲು ಪ್ರಾರ್ಥಿಸಿದರು. ಆಕೆಯು ಅವರ ಪ್ರಾರ್ಥನೆಯನ್ನು ಮನ್ನಿಸಿ ಅವುಗಳನ್ನು ಕರುಣೆಯಿಂದ ಸ್ವೀಕರಿಸಿದಳು. ॥೪೦॥

ಶ್ರೀ ಲಲಿತಾದೇವಿಯು ವಾಸ್ತವವಾಗಿ ಜ್ಞಾನ ಮತ್ತು ಆನಂದ ಸ್ವರೂಪಳಾಗಿ ಆಕಾರವಿಲ್ಲದಿದ್ದರೂ ಬ್ರಹ್ಮನೇ ಮೊದಲಾದವರ ಪ್ರಾರ್ಥನೆಯಂತೆ ಅವರ ಉಪಾಸನೆಗೆ ಅನುಕೂಲಿಸುವಂತೆ ಲೀಲೆಯಿಂದಲೇ ಶರೀರವನ್ನು ಧರಿಸಿಕೊಂಡು ಶ್ರೀ ಪುರದಲ್ಲಿ ಪ್ರಕಾಶಿಸುತ್ತಿದ್ದಾಳೆ. ಎಂಬುದಾಗಿ ಹಯಗ್ರೀವನು ಹೇಳಿದ ಪರಮಪವಿತ್ರವಾದ ಈ ಕಥೆಯನ್ನು ಕೇಳಿ ಅಗಸ್ತ್ಯಮಹರ್ಷಿಯು ಬಹಳವಾಗಿ ಸಂತೋಷವನ್ನು ಹೊಂದಿದನು. ॥೪೧॥

ಅಗಸ್ತ್ಯನು ಈ ಕಥೆಯನ್ನು ಕೇಳಿ ಇನ್ನೂ ಬಹಳ ಸಂಶಯಗ್ರಸ್ತನಾಗಿ, ಓ ಕರುಣಾಸಾಗರನಾದ ಹಯಗ್ರೀವರೇ, ಮೇರುಪರ್ವತದ ಮೇಲೆ ತಾವು ಹೇಳಿದ ಶ್ರೀಪುರುವಿದೆ ಎಂಬುದು ನನಗೆ ಆಶ್ಚರ್ಯವನ್ನು ಉಂಟುಮಾಡುತ್ತಿದೆ. ಎಂದು ಈ ವಿಷಯವಾಗಿ ಪುನಃ ಪ್ರಶ್ನೆಮಾಡಿದನು. ॥೪೨॥

ನಗರಂ ಶ್ರೀಮಹಾದೇವ್ಯಾ ತನ್ಮೇ ಚಿತ್ರಂ ವಿಭಾತಿ ವೈ ।
ನ ಮೇ ಹ್ಯವಿದಿತಂ ಸ್ಥಾನಂ ಬ್ರಹ್ಮಾಂಡಾಂತರ್ಭವೇತ್ಕ್ವಚಿತ್ ॥೪೩॥

ತತ್ರಾಽಪಿ ಮೇರಾವಜ್ಞಾತಂ ಮಯಾ ನ ಸ್ಯಾತ್ಕ್ವಚಿತ್ಸ್ಥಳಂ ।
ಮೇರುರ್ಭುವನಚಿತ್ರಸ್ಯ ಭಿತ್ತಿವತ್ಪರಿಕಲ್ಪಿತಃ ॥೪೪॥

ಸಂತ್ಯೂರ್ಧ್ವಂ ಸಪ್ತಭುವನಾನ್ಯಧಃ ಸಪ್ತತಲಾನಿ ವೈ ।
ಮೇರುಮೂರ್ಧ್ನಿ ಬ್ರಹ್ಮವಿಷ್ಣು ಶಿವಧಾಮಾನಿ ಸಂತಿ ವೈ ॥೪೫॥

ತತ್ರ ಮೇ ನಾಽಸ್ತ್ಯವಿದಿತೋ ದೇಶೋಽಪಿ ದ್ವ್ಯಂಗುಲಾತ್ಮಕಃ ।
ತತ್ಕಥಂ ವರ್ಣಿತಂ ತತ್ರ ಶ್ರೀಪುರಂ ಮೇ ಸಮೀರಯ ॥೪೬॥

ಇತಿಪೃಷ್ಟಃ ಕುಂಭಜೇನ ಹಯಾಽಸ್ಯಃ ಪ್ರಾಹ ಹರ್ಷಿತಃ ।
ಶೃಣು ಕುಂಭಜ ವಕ್ಷ್ಯಾಮಿ ರಹಸ್ಯಂ ಹ್ಯೇತದುತ್ತಮಂ ॥೪೭॥

ಅಗಸ್ತ್ಯನು ಹಯಗ್ರೀವನನ್ನು ಕುರಿತು, ಓ ಗುರುಗಳೇ, ಶ್ರೀಮಹಾದೇವಿ ಇರುವ ಶ್ರೀಪಟ್ಟಣವು ಮೇರುಪರ್ವತದ ಮೇಲ್ಭಾಗದಲ್ಲಿದೆ ಎಂಬುದು ನನಗೆ ಆಶ್ಚರ್ಯ ಕರವಾಗಿ ಕಾಣುತ್ತಿದೆ. ಏಕೆಂದರೆ ಬ್ರಹ್ಮಾಂಡದ ಒಳಗಡೆ ಇರುವ ಯಾವ ಸ್ಥಳವೂ ನನಗೆ ಗೊತ್ತಿಲ್ಲದೇ ಇಲ್ಲ. ಎಂದನು. ಅಲ್ಲದೆ ॥೪೩॥

ಅದರಲ್ಲಿಯೂ ಮೇರುಪರ್ವತದಲ್ಲಿರುವ ಯಾವ ಪ್ರದೇಶವೂ ನನಗೆ ಗೊತ್ತಿಲ್ಲದೇ ಇಲ್ಲ. ಮೇರುಪರ್ವತವು ಪ್ರಪಂಚವೆಂಬ ಚಿತ್ರಕ್ಕೆ ಗೋಡೆಯಂತೆ ಆಧಾರವಾಗಿ ರಚಿತವಾಗಿದೆ. ॥೪೪॥

ಮೇಲ್ಭಾಗದಲ್ಲಿ ಏಳು ಲೋಕಗಳೂ, ಕೆಳಭಾಗದಲ್ಲಿ ಏಳು ಲೋಕಗಳೂ ಅದನ್ನು ಅವಲಂಬಿಸಿ ಇವೆ. ಮೇರುಪರ್ವತದ ಶಿಖರದಲ್ಲಿ ಬ್ರಹ್ಮ, ವಿಷ್ಣು, ಶಿವರುಗಳ ಸ್ಥಾನಗಳಿವೆ. ॥೪೫॥

ಇವುಗಳಪೈಕಿ ಎರಡು ಅಂಗುಲದಷ್ಟುಜಾಗವೂ ಕೂಡ ನನಗೆ ಗೊತ್ತಿಲ್ಲದೇ ಇಲ್ಲ. ಹೀಗಿರುವಾಗ ಶ್ರೀಪುರವು ಅಲ್ಲಿಯೇ ಇದೆಯೆಂದು ತಾವು ಹೇಗೆವರ್ಣಿಸಿದಿರಿ? ಎಂಬ ನನ್ನ ಪ್ರಶ್ನೆಕ್ಕೆ ದಯವಿಟ್ಟು ಸಮಾಧಾನವನ್ನು ಹೇಳಿ. ॥೪೬॥

ಈ ರೀತಿಯಾಗಿ ಅಗಸ್ತ್ಯಋಷಿಯು ಕೇಳಲಾಗಿ ಹಯಗ್ರೀವನು ಸಂತೋಷ ದಿಂದ ಅವನನ್ನು ಕುರಿತು, ಎಲೈ ಆಗಸ್ತ್ಯನೇ, ಶ್ರೇಷ್ಠವಾದ ರಹಸ್ಯದ ಈ ವಿಷಯ ವನ್ನು ಹೇಳುವೆನು ಕೇಳು ಎಂದನು. ॥೪೭॥

ನ ಹಿ ತದ್ಭವನಂ ಸರ್ವೈರ್ದ್ರಷ್ಟುಂ ಶಕ್ಯಂ ಕಥಂಚನ ।
ಯೇತು ಶ್ರೀತ್ರಿಪುರಾಂ ಶಕ್ತಿಂ ವಿಧಿನಾ ಸಮುಪಾಸತೇ ॥೪೮॥

ತೇಷಾಂ ಪ್ರಾಪ್ಯಂ ದೃಶ್ಯಮಪಿ ನಾಽನ್ಯೇಷಾಂ ತು ಕದಾಚನ ।
ತತ್ತೇ ಮಾಹಾತ್ಮ್ಯಸಂಶ್ರುತ್ಯಾ ಭಕ್ತಿರ್ಹೃದಿ ಸಮುದ್ಗತಾ ॥೪೯॥

ಪ್ರಾಪ್ತಾಯಾಂ ತು ಪರಾಭಕ್ತೌ ನಾಽಪ್ರಾಪ್ಯಂ ತಸ್ಯ ವಿದ್ಯತೇ ।
ಪ್ರಾಪ್ತೇ ರತ್ನಾಕರೇ ಯದ್ವದ್ಭವೇನ್ನೋ ರತ್ನವಾಂಛಿತಾ ॥೫೦॥

ತದಿಯಂ ತೇ ಸತೀ ಭಾರ್ಯಾ ಲೋಪಾಮುದ್ರಾ ಪರಾಪ್ರಿಯಾ ।
ತಯಾ ದೀಕ್ಷಾಂ ಸಮಾದಾಯ ಚೋಪಾಸ್ಯ ವಿಧಿವತ್ಪರಾಂ ॥೫೧॥

ಸಿದ್ಧಸ್ತದ್ದ್ರಕ್ಷ್ಯಸಿ ಪುರಂ ನಾಽನ್ಯಥಾ ತು ಕದಾಚನ ।
ಏತತ್ತೇ ಕುಂಭಜ ಪ್ರೋಕ್ತಂ ಲಲಿತಾಯಾ ಮಹಾಽದ್ಭುತಂ ॥೫೨॥

ಎಲ್ಲರೂ ಆಕೆಯದೇವಾಲಯವನ್ನು ನೋಡಲು ಯಾವವಿಧದಲ್ಲೂ ಸಮರ್ಥರಾಗಲಾರರು. ಆದರೆ ಇದನ್ನು ದರ್ಶನಮಾಡಲು ಶ್ರೀತ್ರಿಪುರಾಶಕ್ತಿಯನ್ನು ಶಾಸ್ತ್ರೋಕ್ತಕ್ರಮದಲ್ಲಿ ಪೂಜಿಸಿ ಉಪಾಸಿಸುವವರಿಗೆ ಮಾತ್ರ ಅದು ಸಾಧ್ಯವಾಗುತ್ತದೆ. ॥೪೮॥

ಅಂಥಾ ಶ್ರೀ ತ್ರಿಪುರಾಭಕ್ತರಿಗೆ ಮಾತ್ರ ಆಕೆಯ ಆಸ್ಥಾನವನ್ನು ಹೊಂದಲು ಮತ್ತು ನೋಡಲು ಸಾಧ್ಯ. ಇತರರಿಗೆ ಅದು ಹೇಗೂ ಸಾಧ್ಯವೇ ಅಲ್ಲ. ಆದರೆ ಆಕೆಯ ಮಹಿಮೆಯನ್ನು ಕೇಳಿದ ನಿನ್ನ ಹೃದಯದಲ್ಲಿ ಆಕೆಯ ವಿಷಯದಲ್ಲಿ ಅತ್ಯಂತವಾದ ಭಕ್ತಿಯುಂಟಾಗಿದೆ. ॥೪೯॥

ಆಕೆಯ ವಿಷಯದಲ್ಲಿ ಶ್ರೇಷ್ಠಭಕ್ತಿಯುಂಟಾದರೆ, ಹೊಂದಲು ಅಸಾಧ್ಯವಾದುದು ಏನೂ ಇಲ್ಲವೆಂದು ತಿಳಿ! ರತ್ನಗಳಗಣಿಯಾದ ಸಮುದ್ರವನ್ನೇ ಒಳಹೊಕ್ಕಿರುವಂತಹವರಿಗೆ ರತ್ನಗಳಲ್ಲಿ ಅಪೇಕ್ಷೆಯು ಹೇಗೆ ತಾನೇ ಉಂಟಾಗುವುದು? ॥೫೦॥

ನಿನ್ನ ಪ್ರಿಯಪತ್ನಿಯಾದ ಲೋಪಾಮುದ್ರಾದೇವಿಯು ತ್ರಿಪುರಾದೇವಿಯ ಪರಮ ಭಕ್ತಳು. ಆಕೆಯಿಂದ ದೀಕ್ಷೆಯನ್ನು ತೆಗೆದುಕೊಂಡು ಶ್ರೇಷ್ಠಳಾದ ದೇವಿಯನ್ನು ಶಾಸ್ತ್ರೋಕ್ತಕ್ರಮದಲ್ಲಿ ಉಪಾಸನೆಮಾಡು. ॥೫೧॥

ಆ ದೇವಿಯ ಉಪಾಸನೆಯಲ್ಲಿ ಸಿದ್ಧಿಯನ್ನು ಪಡೆದು ನೀನು ಆ ಪಟ್ಟಣವನ್ನು ನೋಡಲು ಸಮರ್ಥನಾಗುತ್ತೀಯೆ. ಅದಲ್ಲದೇ ಬೇರೇಮಾರ್ಗದಲ್ಲಿ ಸರ್ವಥಾ ನಿನಗೆ

ವಿಭವಂ ಶೃಣ್ವತಾಂ ಪುಂಸಾಂ ಸರ್ವಪಾಪಪ್ರಣಾಶನಂ ।
ಕಲೌ ಮಲೀಮಸಹೃದಾಂ ಜನಾನಾಂ ದುರ್ಧಿಯಾಮಿದಂ ॥೫೨॥

ಮಾಹಾತ್ಮ್ಯಂ ತ್ರಿಪುರೇಶಾನ್ಯಾಸ್ತ ಶ್ರುತ್ವಾಽನ್ಯತ್ಪರಾಯಣಂ ।
ವೈದಿಕೈಃ ಕರ್ಮಭಿರ್ಭೂಯೋ ನಿರಾಶೀರ್ಭಿಃ ಕೃತೈರ್ಭವೇತ್ ॥೫೪॥

ಉಪಾಸನೇಷು ಶ್ರದ್ಧಾಽನ್ಯ ದೇವತಾ ವಿಷಯಾ ತತಃ ।
ವಿಷ್ಣೌ ಶಿವೇ ಶಕ್ತಿಷು ಚ ಸರ್ವಾಽಂತೇ ಪರಿಪಾಕತಃ ॥೫೫॥

ತ್ರಿಪುರಾಮೂರ್ತಿಸೇವಾಯಾಂ ಶ್ರದ್ಧಾ ಭವತಿ ಶಾಶ್ವತೀ ।
ಏತದಾರಾಧನೇನೈವ ವಿದಿತ್ವಾ ಸ್ವಾಽತ್ಮರೂಪಿಣೀಂ ॥೫೬॥

ಆ ಪಟ್ಟಣದ ದರ್ಶನವು ಸಾಧ್ಯವಾಗಲಾರದು. ಎಲೈ ಅಗಸ್ತ್ಯಮಹರ್ಷಿಯೇ, ಲಲಿತಾದೇವಿಯ ಅತ್ಯಂತ ಆಶ್ಚರ್ಯಕರವಾದ ಈ ಮಹಿಮೆಯನ್ನು ಈ ರೀತಿಯಲ್ಲಿ ನಾನು ತಿಳಿದಿದ್ದೇನೆ. ॥೫೨॥

ಲಲಿತಾದೇವಿಯ ವೈಭವವನ್ನು ಕೇಳುವ, ಕಲಿಕಾಲದಲ್ಲಿ ಕಲ್ಮಷದಿಂದ ಕೂಡಿದ ಕೆಟ್ಟಮನಸ್ಸುಳ್ಳ, ಜನರ ಸಕಲ ಪಾಪಗಳೂ ನಾಶವಾಗುವುವು. ॥೫೩॥

ಪಾಪಿಗಳ ಪಾಪಗಳು ನಾಶವಾಗಬೇಕಾದರೆ ತ್ರಿಪುರಾದೇವಿಯ ಮಹಿಮೆಯನ್ನು ಕೇಳುವುದನ್ನು ಬಿಟ್ಟು ಬೇರೊಂದು ಸಾಧನವಿಲ್ಲ. ನಿರಾಶೆಯಾದ ಜನರೂ ಕೂಡ ವೇದೋಕ್ತ ಕ್ರಮದಿಂದ ಆಕೆಯನ್ನು ಆರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಪಡೆಯುವರು. ॥೫೪॥

ಬೇರೆದೇವತೆಗಳ ವಿಷಯದಲ್ಲಿ ಶ್ರದ್ಧೆಯಿಟ್ಟು ಉಪಾಸನೆಯನ್ನು ಮಾಡುವವರಿಗೆ ಕ್ರಮವಾಗಿ ವಿಷ್ಣು, ಶಿವ, ಶಕ್ತಿಗಳ ವಿಷಯದಲ್ಲಿ ಶ್ರದ್ಧೆಯು ಭಕ್ತನಿಗೆ ಉಪಾಸನೆಯ ಫಲವಾಗಿ ಉದಯಿಸಿ, ಕೊನೆಗೆ ಆತನ ಪುಣ್ಯಪರಿಪಾಕದಿಂದ ತ್ರಿಪುರಾದೇವಿಯಲ್ಲಿಯೇ ಭಕ್ತಿಯು ಸ್ಥಿರವಾಗಿ ಉಂಟಾಗುವುದು. ॥೫೫॥

ಕೊನೆಗೆ ಭಕ್ತರಿಗೆ ಶ್ರೀ ತ್ರಿಪುರಾಮೂರ್ತಿಯ ಸೇವೆಯಲ್ಲಿಯೇ ಶಾಶ್ವತವಾದ ಭಕ್ತಿಯುಂಟಾಗುವುದು. ಈಕೆಯನ್ನು ಆರಾಧಿಸಿದಮೇಲೆಯೇ ಭಕ್ತನು, ದೇವಿಯು ತನ್ನ ಆತ್ಮಸ್ವರೂಪಳೇ ಆಗಿದಾಳೆ. ಎಂಬುದನ್ನು ಮನಗಾಣುವನು. ॥೫೬॥

ಚಿದಾಽಽನಂದಾದ್ವಯಮಯೀಂ ಸರ್ವಲೋಕ ಮಹೇಶ್ವರೀಂ ।
ಅಭಿವ್ಯಕ್ತಪರೈಶ್ವರ್ಯೋ ನ ಪುನರ್ಭವಮೃಚ್ಛತಿ ॥೫೭॥

ಏವಂ ಸ್ವಾಽಽತ್ಮಪದಪ್ರಾಪ್ತೌ ಸೋಪಾನಂ ಪ್ರಥಮಂತ್ವಿದಂ ।
ಶ್ರವಣಂ ಶ್ರೀಪರಾಶಕ್ತಿ ಮಾಹಾತ್ಮ್ಯವಿಭವೋನ್ನತೇಃ ॥೫೮॥

ತಸ್ಮಾದಾದೌ ಸರ್ವಥೈವ ಶ್ರೋತವ್ಯಂ ಶ್ರೇಯ ಇಚ್ಛತಾ ।
ಏತತ್ಪಾಪಪ್ರಶಮನಂ ಸರ್ವಾಽಭೀಷ್ಟಫಲಾಽಽವಹಂ ॥೫೯॥

ಭಕ್ತಿಮುತ್ಪಾದ್ಯ ತರಸಾ ಮೋಚಯೇತ್ ಪರಮಾದ್ಭಯಾತ್ ।
ಇತ್ಯುಕ್ತ್ವಾ ಕುಂಭಜಮುನಿ ಪೂಜಿತೋಽಶ್ವಾನನೋ ಭೃಶಂ ॥೬೦॥

ಭಕ್ತನು ಜ್ಞಾನಾನಂದರೂಪಳೂ, ಎಲ್ಲಾ ಲೋಕಕ್ಕೂ ಮಹೇಶ್ವರಿಯೂ, ಸ್ವಪ್ರಕಾಶರೂಪಳೂ, ಆದ ದೇವಿಯು ತನ್ನ ಆತ್ಮಸ್ವರೂಪಳೆಂದೇ ಭಾವಿಸಿ ತನ್ನ ನಿಜವಾದ ಶ್ರೇಷ್ಠವಾದ ಈಶ್ವರಸ್ವರೂಪದ ಸಾಕ್ಷಾತ್ಕಾರವಾಗಲು ಭಕ್ತನು ಮೋಕ್ಷವನ್ನು ಪಡೆಯುವನು. ಅನಂತರ ಅವನು ಪುನಃ ಹುಟ್ಟುವುದೇ ಇಲ್ಲ. ॥೫೭॥

ಈ ರೀತಿಯಾಗಿ ಭಕ್ತನು ತನ್ನ ನಿಜಸ್ವರೂಪವನ್ನು ಅರಿಯಲು ತಕ್ಕ ಪ್ರಥಮ ಸೋಪಾನವು, ಶ್ರೀ ಪರಾಶಕ್ತಿ ಸ್ವರೂಪಳಾದ ತ್ರಿಪುರಾದೇವಿಯ ಮಹಿಮಾತಿಶಯವನ್ನು ಕೇಳುವುದೇ ಆಗಿದೆ. ಎಂದು ತಿಳಿಯಬೇಕು. ॥೫೮॥

ಆದ್ದರಿಂದ ಶ್ರೇಯಸ್ಸನ್ನು ಬಯಸುವವನು ಮೊತ್ತಮೊದಲು ಸರ್ವವಿಧದಲ್ಲೂ ದೇವಿಯ ಮಾಹಾತ್ಮ್ಯೆಯನ್ನು ಶ್ರವಣ ಮಾಡಬೇಕು. ಇದು ಎಲ್ಲಾ ಪಾಪಗಳನ್ನೂ ನಾಶಮಾಡುವುದೂ, ಎಲ್ಲಾ ವಿಧವಾದ ಇಷ್ಟಾರ್ಥಗಳನ್ನು ಕೊಡುವುದೂ ಕೂಡ ಆಗಿರುತ್ತದೆ. ॥೫೯॥

ಈ ವಿಧವಾದ ದೇವಿಯ ಮಾಹಾತ್ಮ್ಯಶ್ರವಣವು ಮಾನವನಿಗೆ ಆಕೆಯಲ್ಲಿ ಭಕ್ತಿಯನ್ನುಂಟುಮಾಡಿ, ಶೀಘ್ರವಾಗಿ ಸಕಲವಿಧವಾದ ಭಯಗಳಿಂದಲೂ ಅವನನ್ನು ಪಾರುಮಾಡುವುದು. ಎಂದು ಹೇಳಿದ ಹಯಗ್ರೀವನಿಗೆ ಅಗಸ್ತ್ಯನು ವಿಶೇಷವಾದ ಪೂಜೆಯನ್ನು ಮಾಡಿದನು. ॥೬೦॥

ಆಪೃಚ್ಛ್ಯ ನಿರಗಾತ್ ಸ್ವೀಯಾ ಮಭೀಷ್ಟಾಂ ದಿಶಮೀಶ್ವರಃ ।
ಇತಿ ತೇ ಕಥಿತಾ ರಾಮ ಲಲಿತಾಯಾಃ ಕಥಾ ಶುಭಾ ॥೬೧॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ದತ್ತಾತ್ರೇಯಪರಶುರಾಮ ಸಂವಾದೇ ಲಲಿತಾ ಮಾಹಾತ್ಮ್ಯೇ ಅಷ್ಟಸಪ್ತತಿತಮೋಽಧ್ಯಾಯಃ

ಅನಂತರ ಋಷಿಶ್ರೇಷ್ಠನಾದ ಅಗಸ್ತ್ಯನು ಹಯಗ್ರೀವಋಷಿಯ ಅಪ್ಪಣೆಯನ್ನು ಪಡೆದು ತನಗೆ ಇಷ್ಟವಾದ ದಿಕ್ಕಿಗೆ ಹೊರಟುಹೋದನು. ಎಲೈ ಪರಶುರಾಮನೇ, ಲಲಿತಾದೇವಿಯ ಮಂಗಳಕರವಾದ ಈ ಕಥೆಯನ್ನು ನಾನು ನಿನಗೆ ಈ ರೀತಿಯಲ್ಲಿ ಹೇಳಿದ್ದೇನೆ. ॥೬೧॥

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ದತ್ತಾತ್ರೇಯ ಪರಶುರಾಮ
ಸಂವಾದದಲ್ಲಿ ಲಲಿತಾಪರಮೇಶ್ವರಿಯ ಮಹಿಮೆಯ ವರ್ಣನೆ
ಎಂಬ ಎಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಏಕೋನಾಶೀತಿತಮೋಽಧ್ಯಾಯಃ ||

ಎಪ್ಪತ್ತೊಂಬತ್ತನೆಯ ಅಧ್ಯಾಯವು

ಏವಂ ಶ್ರೀಲಲಿತಾದೇವ್ಯಾ ಮಾಹಾತ್ಮ್ಯಂ ಸರ್ವತೋಽಧಿಕಂ ।
ಜಮದಗ್ನಿಸುತಃ ಶ್ರುತ್ವಾ ಹರ್ಷಾಽಮೃತನಿಷೇಚಿತಃ ॥೧॥

ಭಕ್ತಿವಾರಿಧಿ ನಿರ್ಮಗ್ನೋ ರೋಮಾಂಚೋದಯಪೀವರಃ ।
ನಿರಂತರ ಪ್ರವದ್ಧರ್ಷ ನೇತ್ರವಾರಿ ಪರಿಪ್ಲುತಃ ॥೨॥

ವಿಸಂಜ್ಞ ಇವ ಸಂಭೂತಃ ಕ್ಷಣಮಾಸವಮತ್ತವತ್ ।
ಬಭಾಷೇ ಗದ್ಗದಶ್ರುತ್ಯಾ ಭೂಯೋ ವಿರಚಿತಾಂಜಲಿಃ ॥೩॥

ಈ ರೀತಿಯಾಗಿ ಲಲಿತಾದೇವಿಯ ಸರ್ವಶ್ರೇಷ್ಠವಾದ ಮಹಿಮೆಯ ಕಥೆಯನ್ನು ಜಮದಗ್ನಿಯ ಮಗನಾದ ಪರಶುರಾಮನು ದತ್ತಾತ್ರೇಯನ ಮುಖದಿಂದ ಕೇಳಿ ಸಂತೋಷವೆಂಬ ಅಮೃತರಸದಿಂದ ಅಭಿಷಿಕ್ತನಾದವನಂತೆ ಆತ್ಯಾನಂದಪಟ್ಟನು. ||೧||

ಅವನು ಭಕ್ತಿಎಂಬ ಸಮುದ್ರದಲ್ಲಿ ಚೆನ್ನಾಗಿ ಮುಳುಗಿದವನಾಗಿ ರೋಮಾಂಚಗಳು ಎದ್ದುದರಿಂದ ಉಬ್ಬಿದವನಾಗಿ ಎಡೆಬಿಡದೇ ಸುರಿಯುತ್ತಿರುವ ಸಂತೋಷದ ಕಣ್ಣೀರಿನಿಂದ ತೋಯಿದ ಶರೀರವುಳ್ಳವನಾದನು. ||೨||

ಪರಶುರಾಮನು ಮದ್ಯಪಾನದಿಂದ ಮದಿಸಿದವನಂತೆ ಕ್ಷಣಕಾಲ ಸಮಾಧಿಯಲ್ಲಿ ಮೂರ್ಛೆಹೋದಂತೆ ಇದ್ದನು. ಅನಂತರ ಆವನು ಕೈಜೋಡಿಸಿಕೊಂಡು ಸಂತೋಷದಿಂದ ತೊದಲುತ್ತಿರುವ ಧ್ವನಿಯಿಂದ ದತ್ತಾತ್ರೇಯ ಮಹರ್ಷಿಯನ್ನು ಕುರಿತು ಪುನಃ ಈ ರೀತಿಯಲ್ಲಿ ಪ್ರಶ್ನೆಮಾಡಿದನು. ||೩||

ಭಗವನ್ನಹಮತ್ಯಂತಂ ಪಾವಿತೋ ಭವತಾಽಧುನಾ ।
ಪರಾ ಕಥಾ ತೀರ್ಥವಾರಿ ಧಾರಾನಿವಹಸೇಚನೈಃ ॥೪॥

ಉದ್ಧೃತೋ ದಯಯಾಽಪಾರ ಸಂಸಾರಜಲಧೇರ್ನನು ।
ನಮಸ್ತೇ ಶ್ರೀಗುರೋ ನಾಥ ದುಃಖಧ್ವಾಂತ ದಿನಾಽಧಿಪ ॥೫॥

ನಮಸ್ಯೇ ತ್ವಾಂ ಮುನಿಂ ಶಾಂತಂ ಸಂವರ್ತಮಕುತೋಭಯಂ ।
ಯೋ ಮೇ ಮಾರ್ಗಂ ನಿರದಿಶದಂಧಸ್ಯ ಭ್ರಮತೋ ಯಥಾ ॥೬॥

ಅದ್ಯ ಯಾವದಹಂ ಲೋಕೇ ವ್ಯರ್ಥಂ ಕಾಲಮಪಾವಹಂ ।
ಶೂನ್ಯಕೂಪೇ ಭೇಕ ಇವ ನ ಸ್ವಾರ್ಥಮವಿದಂ ಕ್ವಚಿತ್ ॥೭॥

ಧನ್ಯೋಽಹಂ ಕೃತಕೃತ್ಯೋಽಹಂ ಭವಚ್ಚರಣಸಂಶ್ರಯಾತ್ ।
ಮೋಕ್ಷ ಲಕ್ಷ್ಮೀಮಭಿಪ್ರೇಪ್ಸುರಭವಂ ಸರ್ವಥಾ ನನು ॥೮॥

ಓ ಪೂಜ್ಯರೇ, ಪರಾಶಕ್ತಿ ಸ್ವರೂಪಳಾದ ತ್ರಿಪುರಾದೇವಿಯ ಕಥೆಗಳೆಂಬ ತೀರ್ಥದ ನೀರಿನ ಪ್ರವಾಹವನ್ನು ನನ್ನ ಮೇಲೆ ಹರಿಯಿಸುವುದರ ಮೂಲಕ ಈಗ ತಾವು ನನ್ನನ್ನು ಅತ್ಯಂತ ಪವಿತ್ರನನ್ನಾಗಿ ಮಾಡಿದ್ದೀರಿ. ॥೪॥

ಓ ಗುರುಗಳೇ, ತಾವು ನನ್ನ ಮೇಲಿನ ದಯೆಯಿಂದ ಸಂಸಾರವೆಂಬ ಸಮುದ್ರದಿಂದ ನನ್ನನ್ನು ಉದ್ಧಾರಮಾಡಿದ್ದೀರಿ. ದುಃಖವೆಂಬ ಕತ್ತಲೆಗೆ ಸೂರ್ಯರಾದ ಶ್ರೀಗುರುಗಳೇ, ನನ್ನ ಸ್ವಾಮಿಯೇ, ತಮಗೆ ನಮಸ್ಕಾರಗಳು. ॥೫॥

ಯಾವುದರಿಂದಲೂ ಭಯವೇ ಇಲ್ಲದ ಶಾಂತರಾದ ನೀವು ಕುರುಡನಂತೆ ಅಜ್ಞಾನದಿಂದ ವ್ಯರ್ಥವಾಗಿ ತಪ್ಪುಮಾರ್ಗದಲ್ಲಿ ಅಲೆಯುತ್ತಿದ್ದ ನನಗೆ ಸನ್ಮಾರ್ಗವನ್ನು ತೋರಿಸಿದ ಗುರುಗಳಾದ ಸವರ್ತಮುನಿಯನ್ನು ನಮಸ್ಕರಿಸುವೆನು. ॥೬॥

ಇಲ್ಲಿಯ ವರೆಗೂ ನಾನು ಲೋಕದಲ್ಲಿ, ನೀರಿಲ್ಲದ ಬಾವಿಯಲ್ಲಿರುವ ಕಪ್ಪೆಯಂತೆ, ಪುರುಷಾರ್ಥವನ್ನೇ ತಿಳಿಯದೆ ವ್ಯರ್ಥವಾಗಿ ಕಾಲವನ್ನು ಕಳೆದೆನು. ॥೭॥

ತಮ್ಮ ಚರಣಗಳನ್ನು ಆಶ್ರಯಿಸಿದ್ದರಿಂದ ಈ ದಿನ ನಾನು ಧನ್ಯನೂ, ಸಾರ್ಥಕವಾದ ಜನ್ಮವುಳ್ಳವನೂ ಆದೆನು. ಈಗ ನಾನು ಸರ್ವವಿಧದಲ್ಲೂ ಮೋಕ್ಷವೆಂಬ ಸಂಪತ್ತನ್ನು ಬಯಸುವಂತಾದೆನು. ॥೮॥

ಭಗವನ್ ಮೇ ಸಂಶಯೋಽತ್ರ ಮಹಾನ್ ಹೃದಿ ಸಮಾಹಿತಃ ।
ತತ್ಪೃಚ್ಛಾಮಿ ಭವಂತಂ ಯದ್ವಕ್ತುಂ ತನ್ಮೇ ಸಮರ್ಹಸಿ ॥೯॥

ಜಾನಾಮ್ಯನುಗ್ರಹೋಽತ್ಯಂತಂ ಮಯಿ ತೇ ಕರುಣಾನಿಧೇಃ ।
ನಾಽವಕ್ತವ್ಯಂ ಮಯಿ ಭವೇಚ್ಛಿಷ್ಯೇ ಕಾರುಣಿಕಸ್ಯ ತೇ ॥೧೦॥

ಕಥಂ ಕುಂಭೋದ್ಭವಮುನಿಃ ಸರ್ವಶಾಸ್ತ್ರ ವಿಶಾರದಃ ।
ನೋಪಾಸೀತ್ತಾಂ ಪರಾಶಕ್ತಿಂ ಸರ್ವಲೋಕಮಹೇಶ್ವರೀಂ ॥೧೧॥

ಯೇನಾಽದೃಶ್ಯಮಭೂನ್ಮೇರೌ ಶ್ರೀದೇವ್ಯಾ ನಗರೋತ್ತಮಂ ।
ಕುತೋ ವಾ ವೇದನಿರತೇ ನ ಹಿ ಸ್ಯಾತ್ತಸ್ಯ ದರ್ಶನಂ ॥೧೨॥

ಭೂಯಃ ಕಥಂ ತೇನ ದೃಷ್ಟಂ ತತ್ಪರಂ ತದ್ಬ್ರವೀಹಿ ಮೇ ।
ಇತ್ಯಾಪೃಷ್ಟೋ ಜಾಮದಗ್ನ್ಯಂ ಪ್ರಾಹ ದತ್ತಗುರುರ್ಮುನಿಃ ॥೧೩॥

ಓ ಪೂಜ್ಯರೇ, ಆದರೆ ನನ್ನ ಮನಸ್ಸಿನಲ್ಲಿ ದೊಡ್ಡ ಸಂಶಯ ಒಂದು ಉಳಿದಿದೆ. ತಮಗೆ ಅದನ್ನು ಹೇಳಲು ಯುಕ್ತವೆಂದು ತೋರಿದರೆ ಹೇಳಬೇಕೆಂದು ನಮ್ಮನ್ನು ಬೇಡುತ್ತೇನೆ. ಅದನ್ನು ನನಗೆ ಹೇಳಲು ತಾವು ಶಕ್ತರಾಗಿರುತ್ತೀರಿ. ॥೯॥

ಕರುಣೆಗೆ ಗಣಿಗಳಾಗಿರುವ ತಮಗೆ ನನ್ನ ಮೇಲೆ ಅನುಗ್ರಹಮಾಡಬೇಕೆಂದು ಇಷ್ಟವಿದೆ ಎಂದು ನಾನು ನಂಬಿರುತ್ತೇನೆ ಕರುಣಾಶಾಲಿಗಳಾದ ತಾವು ಶಿಷ್ಯನಾದ ನನಗೆ ಹೇಳಲಾಗದ ವಿಷಯ ಯಾವುದೂ ಇರಲಾರದೆಂದು ತಿಳಿಯುತ್ತೇನೆ ॥೧೦॥

ಸಕಲಶಾಸ್ತ್ರಪಾರಂಗತನಾದ ಅಗಸ್ತ್ಯಋಷಿಯು ಸರ್ವಲೋಕಕ್ಕೂ ಮಹೇಶ್ವರಿಯಾದ ಪರಾಶಕ್ತಿಸ್ವರೂಪಳಾದ ದೇವಿಯನ್ನು ಉಪಾಸನೆಮಾಡದೇ ಇದ್ದದ್ದು ಹೇಗೆ? ॥೧೧॥

ಮೇರುಪರ್ವತದ ಮೇಲುಭಾಗದಲ್ಲಿರುವ ಶ್ರೇಷ್ಠಪಟ್ಟಣವಾದ ತ್ರಿಪುರಾದೇವಿಯ ಶ್ರೀಪುರರಾಜವೆಂಬ ಪಟ್ಟಣವನ್ನು ಅವನು ನೋಡಲಾಗದಿದ್ದದ್ದು ಹೇಗೆ? ವೇದಗಳಲ್ಲಿ ಅತ್ಯಂತ ಆಸಕ್ತಿಯುಳ್ಳ ಅಗಸ್ತ್ಯನಿಗೂ ಆ ಪಟ್ಟಣವು ಏಕೆ ಕಾಣಲಿಲ್ಲ ?॥೧೨॥

ಅನಂತರ ಅಗಸ್ತ್ಯಮಹರ್ಷಿಯು ಆ ಪಟ್ಟಣವನ್ನು ಪುನಃ ನೋಡಲು ಸಮರ್ಥನಾದುದು ಹೇಗೆ? ಎಂಬ ವಿಷಯವನ್ನು ದಯವಿಟ್ಟು ತಿಳಿಸಿ. ಎಂಬುದಾಗಿ ಕೇಳಿದ ಪರಶುರಾಮನ ಮಾತನ್ನು ಕೇಳಿ ಗುರುವಾದ ದತ್ತಾತ್ರೇಯ ಮುನಿಯು ಅವನನ್ನು ಕುರಿತು ಈ ರೀತಿಯಲ್ಲಿ ಹೇಳಿದನು. ॥೧೩॥

ಶೃಣು ರಾಮ ಪ್ರವಕ್ಷ್ಯಾಮಿ ರಹಸ್ಯಂ ಹ್ಯೇತದುತ್ತಮಂ ।
ನಹ್ಯತ್ರ ಕೇವಲಂ ಶಾಸ್ತ್ರಂ ಪ್ರಯೋಜಕಮುಪೇಯತೇ ॥೧೪॥

ಜನಾನಾಂ ಪ್ರಾಕ್ಸಮಭ್ಯಸ್ತ ವಾಸನಾವಾಸಿತಾತ್ಮನಾಂ ।
ವಾಸನಾನಾಂ ಶತಂ ಚಿತ್ತೇ ಸಂಚಿತಂ ಪ್ರಾಣಿನಾಂ ಪೃಥಕ್ ॥೧೫॥

ಪ್ರಾಪ್ನುಯಾದ್ಬೋಧಂ ಪ್ರಸರತಿ ಸತ್ಸಂಗಸ್ತಸ್ಯ ಬೋಧಕಃ ।
ಯಾವದ್ಯತ್ಸಂಗಮಾಪ್ನೋತಿ ತಾವತ್ತತ್ಸ್ಯಾನ್ನ ಚಾನ್ಯಥಾ ॥೧೬॥

ಹಯಗ್ರೀವಂ ಸಮಾಗಮ್ಯ ತ್ರಿಪುರಾ ವೈಭವಶ್ರುತೇಃ ।
ಸಂಜಾತ ತ್ರಿಪುರಾಭಕ್ತಿಃ ಪತ್ನ್ಯಾ ದೀಕ್ಷಾಂ ಸಮಾದದೇ ॥೧೭॥

ಯಾವದ್ದೀಕ್ಷಾಂ ನ ವಿಂದೇತ ತ್ರಿಪುರೋಪಾಸಕೋಽಪಿ ಸನ್ ।
ನ ತಾವನ್ಮೋಕ್ಷಸೌಧಸ್ಯ ಸೋಪಾನಾಽಽರೋಹಣಕ್ರಮಃ ॥೧೮॥

ಎಲೈ ಪರಶುರಾಮನೇ, ಶ್ರೀಷ್ಠರಹಸ್ಯದ ವಿಷಯವನ್ನು ಹೇಳುವೆನು ಕೇಳು. ಈ ವಿಚಾರದಲ್ಲಿ ಕೇವಲ ಶಾಸ್ತ್ರಜ್ಞಾನವೇ ಪ್ರಯೋಜನಕಾರಿಯಾಗುವುದಿಲ್ಲ. ॥೧೪॥

ಹಿಂದಿನ ಜನ್ಮದಲ್ಲಿ ಕಲಿತ ವಾಸನೆಗಳೆಂಬ ಶುಭಾಶುಭ ಸಂಸ್ಕಾರಗಳಿಂದ ಕೂಡಿರುವ ಮನಸ್ಸುಗಳುಳ್ಳ ಪ್ರಾಣಿಗಳು ನೂರಾರು ಬೇರೆ ಬೇರೆ ಜನ್ಮಗಳಲ್ಲಿ ಅವನ್ನು ಶೇಖರಿಸಿರುವುದರಿಂದ ಅವು ಮನಸ್ಸಿನಲ್ಲಿ ಅಡಗಿರುತ್ತವೆ. ॥೧೫॥

ಆ ಮನಸ್ಸಿನ ಸಂಸ್ಕಾರಗಳನ್ನು ಪ್ರೇರಿಸುವ ಉದ್ಬೋಧಕಗಳು ಸಿಕ್ಕಿದರೆ ಆಗ ಅವು ಹೊರಗೆ ಕಾಣಿಸಿಕೊಳ್ಳುವುವು. ಸತ್ಪುರುಷರೊಂದಿಗೆ ಸಂಬಂಧವು ಅವಕ್ಕೆ ಪ್ರೇರಕವೆಂದು ತಿಳಿ. ಎಲ್ಲಿಯ ವರೆಗೆ ಸತ್ಪುರುಷರ ಸಹವಾಸವು ಇರುವುದೋ ಅಲ್ಲಿಯ ವರೆಗೆ ಅವು ಕಾಣಿಸಿಕೊಳ್ಳುವುವು. ಬೇರೆ ವಿಧವಾಗಿ ತೋರಲಾರವು. ॥೧೬॥

ಅಗಸ್ತ್ಯಋಷಿಯು ಹಯಗ್ರೀವನ ಸಂಬಂಧವನ್ನು ಹೊಂದಿ ಅವನ ಮೂಲಕ ಅಗಸ್ತ್ಯನು ಶ್ರೀತ್ರಿಪುರಾದೇವಿಯ ಮಾಹಾತ್ಮ್ಯೆಯನ್ನು ಕೇಳಿದ ಮೇಲೆಯೇ ಅವನಿಗೆ ತ್ರಿಪುರಾದೇವಿಯಲ್ಲಿ ಭಕ್ತಿಯುಂಟಾಗಿ ತನ್ನ ಪತ್ನಿಯಾದ ಲೋಪಾಮುದ್ರೆಯ ಮೂಲಕ ದೀಕ್ಷೆಯನ್ನು ವಹಿಸಿದನು. ॥೧೭॥

ದೀಕ್ಷೆಯನ್ನು ವಹಿಸುವ ವರೆಗೂ ತ್ರಿಪುರಾದೇವಿಯ ಉಪಾಸಕನಾಗಿದ್ದಾಗ್ಯೂ ಆಕೆಯ ಭಕ್ತನು ಮೋಕ್ಷವೆಂಬ ಉಪ್ಪರಿಗೆಯ ಮೆಟ್ಟಿಲುಗಳನ್ನು ಏರಲು ಸಮರ್ಥನೆಂದೇ ತಿಳಿ. ॥೧೮॥

ವಿನೋಪನಯನಂ ಯದ್ವದ್ದ್ವಿಜಾನಾಂ ಸರ್ವಕರ್ಮಸು ।
ನ ಯೋಗ್ಯತಾ ತಥಾಽತ್ರಾಽಪಿ ವಿನಾ ದೀಕ್ಷಾಂ ಭೃಗೂದ್ವಹ ॥೧೯॥

ಅಪ್ರಾಪ್ಯ ಸದ್ಗುರೋರ್ದೀಕ್ಷಾ ಮುಜ್ಝಿತ್ವಾ ಗುರುಪದ್ಧತಿಂ ।
ಸ್ವಬುದ್ಧ್ಯಾ ತು ಕೃತಂ ಕರ್ಮ ವಿಧಿನಾ ಚ ಸಮನ್ವಿತಂ ॥೨೦॥

ತಥಾಽಪಿ ಸಾಧಕಂ ಶೀಘ್ರಂ ನಾಶಯತ್ಯೇವ ಸರ್ವಥಾ ।
ಸೇವಿತಾರಂ ಯಥಾ ಹಂತಿ ಚಾಽಪಕ್ವಂ ತು ರಸಾಯನಂ ॥೨೧॥

ಮಂತ್ರಂ ಮಂತ್ರವಿಧಾನಂ ಚ ಸ್ವಬುದ್ಧ್ಯೈವ ಗುರುಂ ವಿನಾ ।
ಯಃ ಸಮಾಸಾದಯೇತ್ಸ ಹಿ ದೇವತಾದ್ರೋಹಮಾಪ್ನುಯಾತ್ ॥೨೨॥

ದೇಹಲೋಕಃ ಪರೋವಾಽಪಿ ವಿದ್ಯತೇ ದೇವತಾದ್ರುಹಾಂ ।
ಅಜ್ಞೋ ದ್ರೋಹಕೃತಂ ದೋಷಂ ನಾಶಯೇನ್ಮಾನವಃ ಕಥಂ ॥೨೩॥

ಎಲೈ ಭೃಗುವಂಶಶ್ರೇಷ್ಠನಾದ ಪರಶುರಾಮನೇ, ಬ್ರಾಹ್ಮಣರಿಗೆ ಉಪನಯನವಾಗುವವರೆಗೆ ಹೇಗೆ ಯಾವ ಶ್ರೌತಸ್ಮಾರ್ತಕರ್ಮದಲ್ಲಿಯೂ ಯೋಗ್ಯತೆಯು ಬರಲಾರದೋ, ಹಾಗೆ ದೀಕ್ಷೆಯನ್ನು ವಹಿಸದೇ ಶ್ರೀ ತ್ರಿಪುರಾದೇವಿಯ ಸೇವಾಸಿದ್ಧಿಯು ಯಾರಿಗೂ ಉಂಟಾಗಲಾರದು. ॥೧೯॥

ಸದ್ಗುರುವಿನಿಂದ ದೀಕ್ಷೆಯನ್ನು ಪಡೆಯದೇ, ಭಕ್ತನು ಗುರುಸಂಪ್ರದಾಯಮಾರ್ಗವನ್ನು ಅನುಸರಿಸದೆ, ತನ್ನ ಬುದ್ಧಿಯಿಂದಲೇ ಶಾಸ್ತ್ರೋಕ್ತಕ್ರಮದಲ್ಲಿ ಉಪಾಸನೆಯನ್ನು ಮಾಡಿದಾಗ್ಯೂ ಅದು ಖಂಡಿತವಾಗಿಯೂ ಸಾರ್ಥಕವಾಗಲಾರದು. ॥೨೦॥

ಈ ರೀತಿಯಾಗಿ ತನ್ನ ಸ್ವಂತಬುದ್ಧಿಯಿಂದಲೇ ದೇವಿಯ ಸೇವೆಯನ್ನು ಸಾಧಿಸಲು ಇಷ್ಟಪಡುವವನ ಕರ್ಮವು, ಚೆನ್ನಾಗಿ ಪಕ್ವವಾಗದ ರಸಾಯನವು ಅದನ್ನು ಸೇವಿಸುವವನನ್ನು ಹೇಗೆ ನಾಶಮಾಡುವುದೋ ಹಾಗೆ, ಅವನನ್ನು ಹಾಳುಮಾಡುವುದು. ॥೨೧॥

ಮಂತ್ರ ಮತ್ತು ಮಂತ್ರವಿಧಾನ ಇವೆರಡೂ ಗುರುವನ್ನು ಆಶ್ರಯಿಸದೇ ತನ್ನ ಸ್ವಬುದ್ಧಿಯಿಂದಲೇ ಸಾಧಿಸಲಪೇಕ್ಷಿಸುವ ಮನುಷ್ಯನಿಗೆ ಆ ದೇವತೆಯ ದ್ರೋಹವೇ ಉಂಟಾಗುವುದು. ॥೨೨॥

ದೇವತೆಯನ್ನೇ ದ್ರೋಹಮಾಡುವ ಜನರಿಗೆ ಈ ಲೋಕದ ಸುಖವಾಗಲಿ ಅಥವಾ ಪರಲೋಕದ ಸುಖವಾಗಲಿ ಇಲ್ಲವೆಂದೇ ತಿಳಿ. ಮೂಢನಾದ ಮಾನವನು

ಲೋಕದೃಷ್ಟಸ್ಯಾಯ ಏಷ ಆಜ್ಞಾಭಂಗಕರಂ ನರಂ ।
ಯೋಜಯಂತ್ಯೇವ ಭೂಪಾಲಾಃ ಮಹಾದಂಡೈಃ ಪೃಥಗ್ವಿಧೈಃ ॥೨೪॥

ನೋಪೇಕ್ಷಂತೇ ಸರ್ವಥೈವ ನರಮಾಜ್ಞಾಽಪಕಾರಿಣಂ ।
ವೇದವಾದೈರೇವ ನ ಹಿ ಭವೇದತ್ರಾಽಧಿಕಾರಿತಾ ॥೨೫॥

ಉಪಾಸನಾಽಧಿಕಾರಾರ್ಥಂ ದ್ವಿಜಾನಾಂ ವೈದಿಕಕ್ರಮಃ ।
ಪುರುಷಾಽರ್ಥೋ ವೇದವಿಧೌ ಸರ್ವಥಾ ನ ಹಿ ವಿದ್ಯತೇ ॥೨೬॥

ಯದಿ ವೇದವಿದಾಂ ಪುಂಸಾಂ ವೃಥಾ ಫಲಾಽನುಸಂಧಿನಾಂ ।
ಅಣುಮಾತ್ರಾಽತ್ಮಭೂತಾನಾಂ ಪುರುಷಾಽರ್ಥಾಽಭಿಮಾನಿನಾಂ ॥೨೭॥

ದೇವತಾದ್ರೋಹದಿಂದುಂಟಾದ ಪಾಪವನ್ನು ನಾಶಮಾಡಿಕೊಳ್ಳುವ ಬಗೆಯೇ ಇಲ್ಲವು ॥೨೩॥

ತಮ್ಮ ಅಪ್ಪಣೆಗೆ ಮೀರಿ ನಡೆಯುವ ಮನುಷ್ಯನನ್ನು ದೊರೆಗಳು ನಾನಾ ವಿಧವಾದ ದೊಡ್ಡ ದಂಡಗಳಿಂದ ಶಿಕ್ಷಿಸುತ್ತಾರೆಂಬುದು ಲೋಕದಲ್ಲಿಯೂ ಕಾಣುವ ಉದಾಹರಣೆಯೇ ಆಗಿದೆ. ॥೨೪॥

ತಮ್ಮ ಆಜ್ಞೆಗೆ ವಿರುದ್ಧವಾಗಿ ನಡೆಯುವ ಮನುಷ್ಯನನ್ನು ಸರ್ವವಿಧದಲ್ಲೂ ದೊರೆಗಳು ಉದಾಸೀನಮಾಡದೇ ಶಿಕ್ಷೆಗೆ ಒಳಪಡಿಸುತ್ತಾರಷ್ಟೆ? ಹಾಗೆಯೇ ದೀಕ್ಷಾ ಬದ್ಧನಲ್ಲದ ದೇವಿಯ ಭಕ್ತನಿಗೂ ಆಕೆಯ ಉಪಾಸನೆಯ ವಿಷಯದಲ್ಲಿ ಅರ್ಹತೆ ಇಲ್ಲವೆಂದು ವೇದವಾಕ್ಯಗಳೂ ಹೇಳಿರುತ್ತವೆ. ॥೨೫॥

ಬ್ರಾಹ್ಮಣರಾದರೂ ದೇವಿಯ ಉಪಾಸನೆಯ ವಿಷಯದಲ್ಲಿ ವೇದೋಕ್ತಕ್ರಮ ದಲ್ಲಿಯೇ ಅರ್ಹತೆಯುಂಟಾಗುವುದೆಂದು ಹೇಳಿ, ವೇದೋಕ್ತಮಾರ್ಗವನ್ನು ಮಾತ್ರ ಅನುಸರಿಸಿ, ದೇವಿಯ ದೀಕ್ಷೆಯನ್ನು ವಹಿಸದಿರುವ ಮನುಷ್ಯನಿಗೆ ಮೋಕ್ಷವು ಸರ್ವವಿಧದಲ್ಲಿಯೂ ದೊರೆಯಲಾರದು. ॥೨೬॥

ಕೇವಲ ವೇದವನ್ನು ತಿಳಿದಿದ್ದ ಮಾತ್ರಕ್ಕೆ ಪುರುಷರು ಅಗತ್ಯವಾಗಿ ತಮಗೆ ಫಲವು ಸಿಕ್ಕುವುದೆಂದು ಭ್ರಾಂತಿಪಡುವುದೆಂದೇ ತಿಳಿ. ಅವರು ಅಣುವಿನಷ್ಟು ಆತ್ಮವನ್ನು ತಿಳಿದು ಮೋಕ್ಷವು ತಮಗೆ ಸಿಕ್ಕಿತೆಂದು ಅಭಿಮಾನಪಡುವವರಂತೆ ಇದಾ ರೆಂದು ತಿಳಿ. ॥೨೭॥

ಪುರುಷಾರ್ಥಃ ಪರಃ ಸ್ಯಾಚ್ಚೇತ್ ಸ್ಥಾಣೂನಾಂ ನ ಕುತೋ ಭವೇತ್ ।
ವೈದಿಕಾ ಹ್ಯಚಲಂಮನ್ಯಾಃ ಫಲಂ ಧೂಮಸಮುದ್ಭವಂ ॥೨೮॥

ಕ್ವದೃಷ್ಟಂ ಚಲಭೂತೇನ ಹ್ಯಚಲಂ ಫಲಸಮ್ಮತಂ ।
ಮಿತೇಷು ದುಃಖಭೂತೇಷು ಫಲೇಷು ಸುಖಬುದ್ಧಯಃ ॥೨೯॥

ಫಲಸ್ವರೂಪಾನಭಿಜ್ಞಾ ಹ್ಯಫಲೇ ಫಲಶಂಸಿನಃ ।
ಪ್ರವರ್ತಿತೋ ಗುಣಮಯೋ ವೇದೋ ಧಾತ್ರಾ ಜಗತ್ಕೃತಿಃ ॥೩೦॥

ಜಗದ್ಯಾತ್ರಾ ಪ್ರವೃದ್ಧ್ಯರ್ಥಂ ಸುರಾಣಾಮಭಿತೃಪ್ತಯೇ ।
ಮರ್ತುಕಾಮಸ್ಯ ವಿಷವತ್ ಕಾಮಿನಾಂ ಕಾಮನಾಮಯಃ ॥೩೧॥

ಪರಶ್ಚ ಭಾಗಃ ಸಂಗೂಢೋ ವೇದೇ ಯಸ್ತಂ ವಿದುರ್ನ ತೇ ।
ಧಾತ್ರೈವ ಗೋಪನಾತ್ತಸ್ಯ ಗುಪ್ತಭಾವೇಷು ಮೋಹಿತಾಃ ॥೩೨॥

ಪರಮಪುರುಷಾರ್ಥವಾದ ಮೋಕ್ಷವು ಭಿನ್ನವಾದ ರೀತಿಯಲ್ಲಿ ಮಾನವನಿಗೆ ಸಿಕ್ಕುವುದಾದರೆ ಕಂಬಗಳಿಗೂ ಅದು ಏಕೆ ಸಿಕ್ಕಬಾರದು? ಏಕೆಂದರೆ ವೈದಿಕರು ಕಾಮ್ಯ ಕರ್ಮಫಲವನ್ನು ನಿತ್ಯವೆಂದು ನಂಬಿ ಹೊಗೆಯಿಂದ ಉಂಟಾದಫಲಗಳನ್ನು ಮಾತ್ರ ಅನುಭವಿಸುತ್ತಿರುತ್ತಾರೆ! ||೨೮||

ಚಂಚಲವಾದ ಪುರುಷಾರ್ಥಸಾಧನದಿಂದ ಸ್ಥಿರವಾದ ಫಲವು ಲಭಿಸುವುದು ಹೇಗೆ, ಎಲ್ಲಿ ತಾನೇಕಂಡಿದೆ? ಅತ್ಯಲ್ಪವೂ ಮತ್ತು ದುಃಖಸ್ವರೂಪವೂ ಆದ ಫಲಗಳನ್ನೇ ಅವರು ಸುಖವೆಂದು ತಿಳಿಯುತ್ತಾರೆ! ||೨೯||

ನಿತ್ಯವಾದ ಫಲದ ಸ್ವರೂಪವನ್ನು ತಿಳಿಯದೆ ಅವರು ಕಾಮ್ಯಫಲವನ್ನೇ ಫಲವೆಂದು ತಿಳಿಯುತ್ತಾರೆ. ಆದ್ದರಿಂದಲೇ ಪ್ರಪಂಚದಂತೆಯೇ ಸತ್ವರಜಸ್ತಮೋ ಗುಣಗಳಿಂದ ಕೂಡಿರುವ ಕಾಮ್ಯಕರ್ಮಗಳನ್ನು ತಿಳಿಸುವ ವೇದವನ್ನು ಬ್ರಹ್ಮನು ನಿರ್ಮಾಣಮಾಡಿದನು. ||೩೦||

ಬ್ರಹ್ಮನು ಲೋಕವ್ಯವಹಾರವು ವೃದ್ಧಿಯಾಗುವುದಕ್ಕಾಗಿಯೂ, ದೇವತೆಗಳಿಗೆ ತೃಪ್ತಿಯುಂಟಾಗುವುದಕ್ಕಾಗಿಯೂ, ಸಾಯಲು ಬಯಸುವವನಿಗೆ ವಿಷದಂತೆಯೂ, ಕಾಮುಕನಿಗೆ ಕಾಮದೆಯಂತೆಯೂ, ಇರುವ ಕೆಲವು ಕರ್ಮಕಾಂಡದ ಭಾಗಗಳನ್ನು ವೇದಗಳಲ್ಲಿ ಸೇರಿಸಿದನು. ||೩೧||

ಅವುಗಳಿಗಿಂತಲೂ ಅತ್ಯಂತ ಉತ್ಕೃಷ್ಟವಾದ ವೇದ ಭಾಗವನ್ನು ಅವರು

ನಯಂತಿ ತಮನ್ಯಥೈವ ವ್ಯಾಸೋ ನಾರಾಯಣಃ ಸ್ವಯಂ ।
ಜೀವೇಷು ದಯಯಾ ಸಮ್ಯಕ್ ಚಿತ್ತಾಽಽರೋಹೋಪಯೋಗ್ಯಯಾ॥೩೩॥

ತಮುಪಬೃಹ್ಮಯದ್ಬ್ರಹ್ಮಯೋ ಪರಮಾರ್ಥೈಕಸಾಧನಂ ।
ಅತೋಽತ್ರ ತ್ಯಕ್ತಕಾಮಾನಾಂ ಅಧಿಕಾರೋ ವಿಧೀಯತೇ ॥೩೪॥

ಸಂನ್ಯಾಸಿನೋಽಪಿ ಚಿಚ್ಛಕ್ತೇರುಪಾಸನಮಭೀಪ್ಸಿತಂ ।
ಅಜ್ಞಾನಾನ್ಮೋಹತೋ ವಾಽಪಿ ವಿದ್ಯೋಪಾಸ್ತಿಂ ತ್ಯಜೇತ್ತು ಯಃ ॥೩೫॥

ಸ ವಿಶೇದಂಧತಾಮಿಸ್ರಂ ನ ತಸ್ಯಾಽಸ್ತಿ ಪುನರ್ಗತಿಃ ।
ಸಂನ್ಯಾಸಿನಾ ತು ತ್ಯಕ್ತವ್ಯಂ ಸರ್ವಂ ಬಂಧಾಽತ್ಮನಾ ಸ್ಥಿತಂ ॥೩೬॥

ತಿಳಿಯಲಾರರು. ಬ್ರಹ್ಮನೇ ಅವನ್ನು ರಹಸ್ಯವಾಗಿ ಇಟ್ಟಿರುವುದರಿಂದ ಅವರು ಅದನ್ನು ತಿಳಿಯಲಾರದೇ ಸಾಮಾನ್ಯ ಭಾಗಗಳಲ್ಲೇ ಮೋಹಗೊಂಡಿದ್ದಾರೆ. ||೩೨||

ಸಾಕ್ಷಾತ್ ನಾರಾಯಣಸ್ವರೂಪನಾದ ವ್ಯಾಸನು ಜೀವರ ಮೇಲೆ ಇರುವ ಕರುಣೆಯಿಂದ ಅವನ್ನು ಬೇರೆ ಬೇರೆ ರೀತಿಯಲ್ಲಿಯೇ ಅವರ ಮನಸ್ಸಿಗೆ ಹಿಡಿಯಲು, ಅನುಕೂಲಿಸುವಂತೆ ಅರ್ಥಮಾಡಿರುತ್ತಾನೆ. ||೩೩||

ಆದರೆ ಬ್ರಹ್ಮನು ಅಂತಹ ಸಾರವಾದ ಭಾಗವನ್ನು ಮಾತ್ರ ವೇದದಲ್ಲಿ ರಹಸ್ಯವಾಗಿಟ್ಟಿದ್ದಾನೆ. ಆ ಭಾಗವೇ ಪರಮಪುರುಷಾರ್ಥವಾದ ಮೋಕ್ಷಕ್ಕೆ ನೇರವಾದ ಸಾಧನವು. ಆದ್ದರಿಂದ ಈ ಭಾಗವನ್ನು ತಿಳಿಯುವ ಯೋಗ್ಯತೆಯನ್ನು ಪಡೆದವರು ಸಕಲ ಕರ್ಮಫಲದ ಮೋಹವನ್ನೂ ತೊರೆದವರೆಂದು ತಿಳಿ. ||೩೪||

ಸಂನ್ಯಾಸಿಯಾದವನು ಕೂಡ ಚಿಚ್ಛಕ್ತಿ ಸ್ವರೂಪಳಾದದೇವಿಯ ಉಪಾಸನೆಯನ್ನು ಮಾಡಲೇಬೇಕು. ಅವನಾದರೂ ಅಜ್ಞಾನದಿಂದಲೋ ಮೋಹದಿಂದಲೋ ವಿದ್ಯಾಸ್ವರೂಪಳಾದ ದೇವಿಯ ಉಪಾಸನೆಯನ್ನು ಬಿಟ್ಟರೆ ದುರ್ಗತಿಗೆ ಇಳಿಯುವುದರಲ್ಲಿ ಸಂದೇಹವೇ ಇಲ್ಲ. ||೩೫||

ಅಂಥಾ ವಿದ್ಯಾಸ್ವರೂಪವಾದ ಮಂತ್ರವನ್ನು ಉಪಾಸನೆಮಾಡದಿರುವ ಸನ್ಯಾಸಿಯೂ ಕಾರ್ಗತ್ತಲೆಯಿಂದ ಕವಿದಿರುವ ಕೆಳಗಿನ ಲೋಕಕ್ಕೆ ಹೋಗಬೇಕಾಗುವುದು. ಆದರೆ ಸನ್ಯಾಸಿಯಾದವನು ತನಗೆ ಬಂಧಕಗಳಾದ ಇತರ ಕಾಮ್ಯಫಲವ್ಯಾಮೋಹಗಳೆಲ್ಲವನ್ನೂ ಬಿಟ್ಟುಬಿಡಬೇಕು. ||೩೬||

ಇದಂ ಮೋಕ್ಷಾಽಽತ್ಮಕಂ ರಾಮ ಶ್ರೀ ವಿದ್ಯೋಽಪಾಸನಂ ತು ಯತ್ ।
ನ(ಹಿ) ತ್ಯಕ್ತುಂ ಸಮುಚಿತಂ ಬ್ರಾಹ್ಮಣ್ಯಮಿವ ವೈ ಯತೇಃ ॥೩೭॥

ಮಹಾಽಪರಾಧಸ್ತ್ಯಾಗೋ ವೈ ಸ್ಯಾದುಪಾಸ್ತೇರ್ಭಯಾವಹಃ ।
ತಾಮಿಸ್ರ ಮಂಧತಾಮಿಸ್ರಂ ಕುಂಭೀಪಾಕಮವೀಚಿಕಂ ॥೩೮॥

ಪ್ರಪದ್ಯಂತೇ ಹಿ ತೇ ಭೂಯೋ ಹ್ಯಪರಾಧಪರಾ ಜನಾಃ ।
ದಂಡರಾಜ್ಞ್ಯಾ ಸಮಾಜ್ಞಪ್ತಾಃ ಶಕ್ತಯೋಽತಿ ವಿಭೀಷಣಾಃ ॥೩೯॥

ಸಂಕರ್ಷಿಣೀ ಕರ್ಷಿಣೀ ಚ ಕಾಲಸಂಕರ್ಷಿಣೀ ತಥಾ ।
ಉಪಾಸ್ತಿ ಮಾರ್ಗಸರುಜಾನ್ ಅಪರಾಧಪರಾನ್ ಜನಾನ್ ॥೪೦॥

ಯೋಜಯಂತ್ಯುಕ್ತ ದುಃಖೇಷು ಸ್ಥಾನೇಷು ಪರಮಾತೃಕಾಃ ।
ಉಪಾಸನಪರೋ ಮರ್ತ್ಯಃ ಕೈವಲ್ಯಂ ಪರಮಶ್ನುತೇ ॥೪೧॥

ಎಲೈ ಪರಶುರಾಮನೇ, ಮೋಕ್ಷಸ್ವರೂಪವಾದ ಶ್ರೀತ್ರಿಪುರಾದೇವಿಯ ಈ ಶ್ರೀವಿದ್ಯೆಯನ್ನು ಉಪಾಸನೆಮಾಡುವುದನ್ನು ಬಿಡುವುದು ಸಂನ್ಯಾಸಿಯಾದವನು ಬ್ರಾಹ್ಮಣ್ಯವನ್ನು ಬಿಟ್ಟಂತೆ ಆಗುವುದು. ॥೩೭॥

ತ್ರಿಪುರಾದೇವಿಯ ಉಪಾಸನೆಯನ್ನು ಬಿಟ್ಟುಬಿಡುವುದು ಸನ್ಯಾಸಿಗೂ ಭಯವನ್ನೇ ಉಂಟುಮಾಡುವುದು. ಅವನೂ ಕೂಡ ತಾಮಿಸ್ರ, ಅಂಧತಾಮಿಸ್ರ, ಕುಂಭೀಪಾಕ, ಅವೀಚಿಕ ಮುಂತಾದ ಕತ್ತಲೆಯಿಂದಿಲೇ ತುಂಬಿರುವ ನರಕಗಳನ್ನು ತ್ರಿಪುರಾವಿದ್ಯೋಪಾಸನೆಯನ್ನು ಮಾಡದಿದ್ದರೆ ಹೊಂದಬೇಕಾಗುವುದು. ॥೩೮॥

ಈ ರೀತಿಯಾಗಿ ತ್ರಿಪುರಾವಿದ್ಯೆಯನ್ನು ಉಪಾಸನೆಮಾಡದ ಜನರು ತಪ್ಪು ಮಾಡುವವರಾಗಿ ಅಂಥಾ ಹೀನಲೋಕಗಳನ್ನು ಹೊಂದಬೇಕಾಗುವುದು. ಇಂಥ ವರನ್ನು ಶಿಕ್ಷಿಸಲು ಬಹಳ ಭಯಂಕರರಾದ ಶಕ್ತಿಗಳನ್ನೇ ದಂಡನಾಯಕಿಯು ನಿಯಮಿಸಿದ್ದಾಳೆ. ॥೩೯॥

ದಂಡನಾಯಕಿಯು ಸಂಕರ್ಷಿಣೀ, ಕರ್ಷಿಣೀ, ಕಾಲಸಂಕರ್ಷಿಣೀ ಎಂಬ ಶಕ್ತಿಗಳನ್ನು, ದೇವಿಯ ಉಪಾಸನೆಯ ಮಾರ್ಗಗಳಲ್ಲಿ ದ್ವೇಷಬುದ್ಧಿಯನ್ನು ತೋರಿಸಿ ತಪ್ಪುಮಾಡುವ ಜನರನ್ನು ಶಿಕ್ಷಿಸುವುದಕ್ಕಾಗಿ, ನಿಯಮಿಸಿದ್ದಾಳೆ. ॥೪೦॥

ಶ್ರೇಷ್ಠಮಾತೆಯರಾದ ಆ ಶಕ್ತಿಯರು ಹೀಗೆ ತಪ್ಪುಮಾಡುವ ಜನರನ್ನು ಹಿಂದೆ ಹೇಳಿದಂಥಾ ದುಃಖಕರವಾದ ಸ್ಥಾನಗಳಿಗೆ ಕಳುಹಿಸುತ್ತಾರೆ. ಆದರೆ ದೇವಿಯ

ಕರ್ಮಣಸ್ತಾಂತ್ರಿಕಸ್ಯಾಽಪಿ ಯಾ ಭವೇದ್ಗತಿರುತ್ತಮಾ ।
ವೈದಿಕೋಪಾಸಕಸ್ಯೈಷಾ ಸರ್ವಥಾ ನ ಹಿ ವಿದ್ಯತೇ ॥೪೨॥

ಯತೋ ಹಿ ವೈದಿಕಂ ಕರ್ಮ ಸರ್ವಥಾ ಹಿ ಬಹಿರ್ಮುಖಂ ।
ಅನೀಶ್ವರಂ ಪೌರುಷಂ ಸ್ಯಾದತಃ ಪಶುಫಲೋಚಿತಂ ॥೪೩॥

ತಾಂತ್ರಿಕಂ ತ್ವೈಶ್ವರಂ ಕರ್ಮ ಜ್ಞಾನೋಪಾಸನ ಮಿಶ್ರಿತಂ ।
ಮೋಚಯತ್ಯಾಶು ಸಂಸಿದ್ಧ್ಯೈ ಶ್ರದ್ಧಾಭಕ್ತಿ ಸುಬೃಂಹಿತಂ ॥೪೪॥

ಯಥೋಕ್ತ ಕರ್ಮಣಾ ಚಿತ್ತ ಶುದ್ಧಿಮಾಸಾದ್ಯ ವಿದ್ಯಯಾ ।
ಪ್ರಾಪ್ಯತೇಽತ್ರೈವ ಶಿವತಾ ಪ್ರಬುದ್ಧೈಃ ಪೌರುಷೇಣ ಹಿ ॥೪೫॥

ಈ ಶ್ರೀವಿದ್ಯೆಯನ್ನು ಉಪಾಸನೆಮಾಡುವ ಜನರು ಒಂದೇ ಶಾಶ್ವತಫಲವಾಗಿರುವ ಕೈವಲ್ಯರೂಪವಾದ ಮೋಕ್ಷಸುಖವನ್ನು ಅನುಭವಿಸುತ್ತಾರೆ. ॥೪೧॥

ದೇವಿಯ ಉಪಾಸನಾರೂಪವಾದ ಕರ್ಮಮಾರ್ಗದಲ್ಲಿ ನಿರತನಾದ ಅಥವಾ ತಂತ್ರಶಾಸ್ತ್ರ ಮಾರ್ಗದಲ್ಲಿ ದೇವೀಪೂಜೆಯನ್ನು ನಡೆಯಿಸುವ ಮಾನವನಿಗೆ ಯಾವ ಶ್ರೇಷ್ಠವಾದ ಸದ್ಗತಿಯುಂಟೋ ಅದು ಕೇವಲ ವೇದೋಕ್ತಮಾರ್ಗದಲ್ಲಿ ಪೂಜಿಸುವವನಿಗೆ ಸರ್ವಥಾ ಸಾಧ್ಯವಿಲ್ಲ. ॥೪೨॥

ಏಕೆಂದರೆ ವೇದೋಕ್ತಕರ್ಮಗಳು ಸರ್ವ ವಿಧದಲ್ಲೂ ಹೊರಗಡೆಯ ವಿಷಯಗಳನ್ನೇ ಅವಲಂಬಿಸಿದೆ. ವೇದೋಕ್ತ ಕರ್ಮಮಾರ್ಗದಲ್ಲಿ ಈಶ್ವರನನ್ನೇ ಬಿಟ್ಟು, ಕೇವಲ ಪೌರುಷವೇ ಪ್ರಧಾನವಾದ ಫಲವಾಗುವುದರಿಂದ ಅಂಥಾ ಕರ್ಮವನ್ನು ಆಚರಿಸುವ ಮನುಷ್ಯನು ಪಶುವಿಗೆ ಯೋಗ್ಯವಾದ ಫಲವನ್ನು ಅನುಭವಿಸುವನು. ॥೪೩॥

ತಂತ್ರಶಾಸ್ತ್ರೋಕ್ತಕ್ರಮದಿಂದ ಈಶ್ವರನನ್ನು ಉದ್ದೇಶಿಸಿ ನಡೆಸುವ ಕರ್ಮವು ಜ್ಞಾನಪೂರ್ವಕವಾದ ಉಪಾಸನೆಯೊಂದಿಗೆ ಮಿಶ್ರವಾಗಿದೆ. ಆದ್ದರಿಂದ ಈ ವಿಧದಲ್ಲಿ ಉಪಾಸನೆಮಾಡುವವನು ಶ್ರದ್ಧಾಭಕ್ತಿಗಳಿಂದ ಕೂಡಿದ ಉಪಾಸನೆಯ ಕ್ರಮವನ್ನು ಅನುಸರಿಸುವುದರಿಂದ ಮೋಕ್ಷವು ದೊರೆಯುವುದು. ॥೪೪॥

ಹಿಂದೆಹೇಳಿದ ರೀತಿಯಲ್ಲಿ ನಿಷ್ಕಾಮಕರ್ಮೋಪಾಸಕನು ತನ್ನ ಮನಸ್ಸಿನ ಶುದ್ಧಿಯನ್ನು ಹೊಂದಿ ಅನಂತರ ಜ್ಞಾನವನ್ನು ಹೊಂದಿ ವಿದ್ಯೋಪಾಸನೆಯ ಪ್ರಭಾ

ಅಬುಧಾ ಅಪಿ ಮುಚ್ಯಂತೇ ಕರ್ಮ ಕೃತ್ವಾ ಯಥಾಕ್ರಮಾತ್ ।
ನಾಧಿಕಾರೋ ವಿನಾ ದೀಕ್ಷಾಂ ಕರ್ಮಣಿ ಜ್ಞಾನಸಾಧನೇ ॥೪೬॥

ದೀಕ್ಷಾವಂತಸ್ತು ದೇಹಾಂತೇ ಪ್ರಾಪ್ಯ ಲೋಕಂ ಪರಾತ್ಪರಂ ।
ಸದಾಶಿವೇನ ತೇ ಸಮ್ಯಕ್ ಪ್ರಬುದ್ಧಾಃ ಶಿವರೂಪಿಣಃ ॥೪೭॥

ಕರ್ಮಿಣೋಽಪ್ಯ ಪ್ರಬುದ್ಧಾ ಯೇ ತೇ ಭವಂತಿ ಭೃಗೂದ್ವಹ ।
ತಸ್ಮಾನ್ನ ವೇದ ಶಾಸ್ತ್ರಾದ್ಯೈಃ ಶುಷ್ಕೈಃ ಸದ್ಗತಿರಾಪ್ಯತೇ ॥೪೮॥

ವಿನಾ ಶ್ರೀ ತ್ರಿಪುರಾಸೇವಾಂ ಪ್ರವೃತ್ತಿರ್ನಾ ಕಥಂ ಸತೀ ।
ನ ಸಾಧನಂ ಫಲಂ ವಾಽಪಿ ಪ್ರವೃತ್ತಿರ್ನಾಽಪಿ ಭಾರ್ಗವ ॥೪೯॥

ವದಿಂದ ಶಿವನೊಂದಿಗೆ ಐಕ್ಯವಾಗಿ ಮೋಕ್ಷವನ್ನು ಹೊಂದುವನು. ಆದ್ದರಿಂದ ಕೇವಲ ಪುರುಷಪ್ರಯತ್ನದಿಂದ ವೈದಿಕಕರ್ಮವನ್ನು ಮಾಡಿದರೆ ಅಂಥಾ ಸಿದ್ಧಿಯು ಬರಲಾರದು. ||೪೫||

ಅಜ್ಞಾನಿಗಳಾದ ಜನರೂಕೂಡ ಹಿಂದೆ ಹೇಳಿದ ಕ್ರಮದಲ್ಲಿ ಕರ್ಮಮಾಡಿದರೆ ಮೋಕ್ಷವನ್ನು ಹೊಂದುವರು. ಉತ್ತಮವಾದ ದೇವಿಯ ಸ್ವರೂಪಜ್ಞಾನದ ಸಾಧನೆಯಲ್ಲಿ ದೀಕ್ಷೆಯನ್ನು ಪಡೆಯದವನಿಗೆ ಅಧಿಕಾರ ಅಥವಾ ಅರ್ಹತೆಯೇ ಬರಲಾರದೆಂದು ತಿಳಿ. ||೪೬||

ಆಕೆಯ ದೀಕ್ಷೆಯನ್ನು ವಹಿಸಿರುವ ಮನುಜರು ಮೃತರಾದ ಮೇಲೆ ಆಕೆಯ ಅತ್ಯಂತ ಶ್ರೇಷ್ಠವಾದ ಲೋಕವನ್ನು ಹೊಂದಿ ಸದಾಶಿವನಿಂದ ವಿಶೇಷವಾದ ಜ್ಞಾನವನ್ನು ಪಡೆದು ಕೊನೆಗೆ ಶಿವಸ್ವರೂಪವನ್ನೇ ಹೊಂದುತ್ತಾರೆ. ||೪೭||

ಎಲೈ ಭೃಗುವಂಶಶ್ರೇಷ್ಠನಾದ ಪರಶುರಾಮನೇ, ವೇದೋಕ್ತ ಕರ್ಮಮಾರ್ಗದಲ್ಲಿ ನಡೆಯುವ ಜನರೂ ಕೂಡ ಜ್ಞಾನವಿಲ್ಲದವರೇ ಆಗಿರುತ್ತಾರೆ. ಆದ್ದರಿಂದ ಕೇವಲ ನೀರಸವಾದ ವೇದಶಾಸ್ತ್ರಗಳ ಪಠನದಿಂದ ಮೋಕ್ಷರೂಪವಾದ ಸದ್ಗತಿಯು ಬರಲಾರದು. ||೪೮||

ಶ್ರೀ ತ್ರಿಪುರಾದೇವಿಯ ಸೇವೆಯನ್ನು ಮಾಡದೇ ಮಾನವನಿಗೆ ಮೋಕ್ಷಮಾರ್ಗದಲ್ಲಿ ಪ್ರವೃತ್ತಿಯಾಗಲಿ ಅದಕ್ಕೆ ಬೇಕಾದ ಸಾಧನವಾಗಲೀ ಆದರ ಫಲವಾಗಲಿ ಖಂಡಿತವಾಗಿಯೂ ಲಭಿಸಲಾರವು. ||೪೯||

ವಿನಾ ಶ್ರೀತ್ರಿಪುರೇಶಾನ್ಯಾಃ ಕೃಪಯಾ ಸಂಭವಿಷ್ಯತಿ ।
ಆರಾಧ್ಯ ಶಿವವಿಷ್ಣ್ವಾದೀನಪಿ ಯತ್ಪ್ರಾಪ್ಯತೇ ಫಲಂ ॥೫೦॥

ತಚ್ಚಾಽಪಿ ತಸ್ಯಾಃ ಕೃಪಯಾ ಭವತೀತಿ ವಿನಿಶ್ಚಯಃ ।
ಪೂಜನಂ ಸರ್ವದೇವಾನಾಂ ಪರಾಶಕ್ತೇಃ ಪ್ರಪೂಜನಂ ॥೫೧॥

ಶಕ್ತಿಂ ವಿನಾ ನ ಪೂಜಾಯಾ ಗ್ರಹಣಂ ಸಂಭವೇತ್ಕ್ವಚಿತ್ ।
ತಸ್ಮಾತ್ಪೂಜಾ ತು ಶಕ್ತೇಃ ಸ್ಯಾತ್ ಸರ್ವತ್ರ ವಿಹಿತಾ ಜನೈಃ ॥೫೨॥

ಫಲಪ್ರದಾನ ಶಕ್ತಿಂ ತು ವಿಚಾರ್ಯಾಽದೌ ವಿಚಕ್ಷಣಾಃ ।
ಪೂಜಯಂತಿ ಪೃಥಕ್ ದೇವಂ ಫಲಂ ವಿಂದಂತಿ ತತ್ತಥಾ ॥೫೩॥

ಶ್ರೀ ತ್ರಿಪುರಾದೇವಿಯ ಕರುಣೆಯಿಲ್ಲದೇ ಮಾನವನಿಗೆ ಮೋಕ್ಷಸುಖವು ಲಭಿಸಲಾರದು. ಶಿವ, ವಿಷ್ಣು, ಮುಂತಾದವರನ್ನು ಪೂಜಿಸಿದರೆ ಯಾವ ಫಲವು ಬರುವುದೋ ಆ ಫಲವೂ ಕೂಡ ತ್ರಿಪುರಾದೇವಿಯನ್ನು ಉಪಾಸನೆಮಾಡಿದರೆ ಲಭಿಸುವುದು. ॥೫೦॥

ಇತರ ದೇವತೆಗಳ ಪೂಜೆಯಫಲವೂ ಕೂಡ ತ್ರಿಪುರಾದೇವಿಯನ್ನು ಉಪಾಸನೆಮಾಡುವುದರಿಂದಲೇ ಲಭಿಸುವುದೆಂದು ನಿಶ್ಚಯವಾಗಿ ತಿಳಿ. ಪರಾಶಕ್ತಿಸ್ವರೂಪಳಾದ ಆಕೆಯ ಪೂಜೆಯನ್ನು ಮಾಡಿದರೆ ಎಲ್ಲಾ ದೇವತೆಗಳ ಪೂಜೆಯನ್ನೂ ಮಾಡಿದ ಹಾಗೆಯೇ ಆಗುವುದು. ॥೫೧॥

ಶಕ್ತಿಯ ಉಪಾಸನೆಯು ಇಲ್ಲದೇ ಇತರ ಯಾವದೇವತೆಗಳ ಪೂಜೆಯೂ ಸಫಲವಾಗುವುದಿಲ್ಲ. ಆದ್ದರಿಂದ ಜನಗಳು ಯಾವ ಪೂಜೆಯಸಂದರ್ಭದಲ್ಲಿಯೂ ಶಕ್ತಿಯ ಪೂಜೆಯನ್ನು ಅವಶ್ಯಕವಾಗಿ ಮಾಡಲೇಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ॥೫೨॥

ಬುದ್ಧಿವಂತರಾದ ಉಪಾಸಕರು ಪರಾಶಕ್ತಿಯು ಕೊಡುವ ಅಮೂಲ್ಯವಾದ ಫಲಗಳನ್ನು ಮೊದಲು ಮನಗಂಡು ಆಕೆಯ ಪೂಜೆಯನ್ನು ಮಾಡಿಯೇ ಇತರ ದೇವತೆಗಳನ್ನು ಬೇಕಾದರೂ ಪೂಜೆಮಾಡಿ ಅವರವರಿಗೆ ಇಷ್ಟವಾದ ಫಲಗಳನ್ನು ಹೊಂದುವರು. ॥೫೩॥

ಲೋಕೇಽಪ್ಯಶಕ್ತಃ ಕುತ್ರಾಪಿ ನ ಪೂಜ್ಯಃ ಸ್ಯಾತ್ತು ಭಾರ್ಗವ ।
ಆಶ್ರಯತ್ವಾಚ್ಛಿವಮೃತೇ ಶಕ್ತಿರ್ನೈವ ತು ವಿದ್ಯತೇ ॥೫೪॥

ಇತಿ ಚೇನ್ನಿಜಸತ್ತಾತ್ಮ ಶಕ್ತಿಹೀನಃ ಶಿವಸ್ತಥಾ ।
ಪ್ರಕಾಶ ಶಕ್ತಿಹೀನೋ ವೈ ರವಿಃ ಕುತ್ರ ಕದಾ ಭವೇತ್ ॥೫೫॥

ಯಥಾ ತಥಾ ಚಿತಿಂ ಶಕ್ತಿಮೃತೇ ಸ್ಯಾದ್ವೈ ಶಿವಃ ಕಥಂ ।
ಚಿತಿಶಕ್ತ್ಯಾ ಪರಿತ್ಯಕ್ತಂ ತೃಣಂ ವಾಽಪಿ ಕಥಂ ಭವೇತ್ ॥೫೬॥

ಸತ್ಯಾಂ ಚಿತಿ ಹ್ಯಸ್ತಿ ಸರ್ವ ಮನ್ಯಥಾ ನ ಹಿ ಕಿಂಚನ ।
ಯದಸ್ತಿ ತಚ್ಚಿತಿರಿತಿ ಜಾನೀಹಿ ಭೃಗುನಂದನ ॥೫೭॥

ಏತಚ್ಛಾಕ್ತಂ ಹಿ ವಿಜ್ಞಾನಂ ಮತ್ತೋಽನ್ಯನ್ನ ಹಿ ವಿದ್ಯತೇ ।
ಏವಂ ಬುದ್ಧ್ವಾ ತು ಯತ್ಕಿಂಚಿತ್ತೃಣಂ ಚ ತ್ರಿಪುರಾಽತ್ಮಕಂ ॥೫೮॥

ಎಲೈ ಪರಶುರಾಮನೇ, ಲೋಕದಲ್ಲಿ ಇನ್ನಾವ ದೇವತೆಯೂ ಸಂಪೂರ್ಣವಾದ ಫಲವನ್ನು ಕೊಡಲಾರದೆಂದು ತಿಳಿ. ಎಲ್ಲಾ ಫಲಕ್ಕೂ ಆಶ್ರಯನಾದ ಶಿವನನ್ನು ಬಿಟ್ಟು ಶಕ್ತಿಯು ಕೂಡ ಇರುವುದಿಲ್ಲ. ॥೫೪॥

ಹಾಗಿದ್ದಪಕ್ಷದಲ್ಲಿ ಶಿವನು ತನ್ನ ಇರುವಿಕೆಯೂ ಮತ್ತು ಆತ್ಮಸ್ವರೂಪವೂ ಇಲ್ಲದವನಾಗುವನು. ಪ್ರಕಾಶಶಕ್ತಿಗಳಿಲ್ಲದೇ ಸೂರ್ಯನು ಎಲ್ಲಿರುವನು ? ॥೫೫॥

ಸೂರ್ಯನು ಹೇಗೆ ಶಕ್ತಿಪ್ರಕಾಶಗಳಿಲ್ಲದೇ ಇರಲಾರನೋ ಹಾಗೆ ಶಕ್ತಿಯನ್ನು ಬಿಟ್ಟು ಶಿವನೂ ಇರಲಾರನು. ಜ್ಞಾನಸ್ವರೂಪಳಾದ ಶಕ್ತಿಯನ್ನು ಬಿಟ್ಟು ಹುಲ್ಲು ಕಡ್ಡಿಯೂ ಇರಲಾರದೆಂದು ತಿಳಿ. ॥೫೬॥

ಜ್ಞಾನಸ್ವರೂಪಳಾದ ಆ ಶಕ್ತಿಯು ಇದ್ದರೆಮಾತ್ರ ಇತರ ಎಲ್ಲಾ ಪದಾರ್ಥಗಳೂ ಇರುತ್ತವೆ. ಹಾಗಿಲ್ಲದಿದ್ದರೆ ಬೇರೆಯಾವ ಪದಾರ್ಥವೂ ಇರಲಾರದೆಂದು ತಿಳಿ. ಇರುವ ವಸ್ತುಗಳೆಲ್ಲವೂ ಜ್ಞಾನಸ್ವರೂಪವಾದ ಶಕ್ತಿಯ ಸ್ವರೂಪವೇ ಎಂದು ತಿಳಿ. ॥೫೭॥

ಇದನ್ನೇ ಶಾಕ್ತತಂತ್ರಗಳಲ್ಲಿ ಸಿದ್ಧಾಂತದವಿಜ್ಞಾನವೆಂದು ಕರೆಯುವರು. ಹುಲ್ಲುಕಡ್ಡಿ ಮೊದಲುಮಾಡಿಕೊಂಡು ಸಕಲ ವಸ್ತುಗಳೂ, ನಾನೂ, ಜ್ಞಾನಸ್ವರೂಪರಾಗಿ ತ್ರಿಪುರಾದೇವಿಯ ಸ್ವರೂಪರೇ ಆಗಿ ಇದ್ದೇವೆಂದು ತಿಳಿಯಬೇಕು. ॥೫೮॥

ಸಂಜ್ಞಾಯಾಮೇವ ಲೋಕೇಽಸ್ಮಿನ್ ವಿವದಂತಿ ಮನೀಷಿಣಃ ।
ತಸ್ಮಾತ್ತ್ಯಜಾಽತ್ರ ಸಂದೇಹಮೇತತ್ಸರ್ವತ್ರ ವೈ ಸಮಂ ॥೫೯॥

ನಾಜ್ಞೈರುಕ್ತ್ಯೈ ಪ್ರವೃತ್ತಾ ವೈ ವಿಶೇಷಾಽಽಲಂಬನಂ ಗತಾ ।
ನಿರ್ವಿಶೇಷಂ ತು ತದ್ರೂಪ ಮಖಂಡೈಕ ಚಿದಾಽತ್ಮಕಂ ॥೬೦॥

ವಿಶೇಷಜ್ಞೋ ಭವೇದ್ಯಾವತ್ತಾವನ್ನ ಸ್ಯಾದ್ಧಿ ತತ್ಪರಃ ।
ವೇದಾ ವಿಶೇಷ ಬಹುಲಾ ಗೂಹಯಂತ್ಯ ವಿಶೇಷಕಂ ॥೬೧॥

ಅತೋಽಗಸ್ತ್ಯಸ್ತತ್ಪರಂ ತು ನಾಽಪಶ್ಯದ್ವೈದಿಕೋಽಪಿ ಸನ್ ।
ವೇದಾರ್ಥಃ ಪರಮೋ ಯಸ್ತು ತ್ರಿಪುರೈವ ಹಿ ಸಾ ಭವೇತ್ ।೬೨॥

ವಿದ್ವಾಂಸರಾದವರು ಇದಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುತ್ತಾರೆ. ಆದರೆ ತಿಳಿಯದವರು ಸುಮ್ಮನೆ ಹೆಸರಿನಲ್ಲಿಯೇ ವಿವಾದಮಾಡುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ಎಲ್ಲಾ ಸಂದೇಹವನ್ನೂ ಬಿಡು. ಶಕ್ತಿಯೇ ಸರ್ವಸ್ವರೂಪಳು ಎಂದು ತಿಳಿ. ॥೫೯॥

ಇಂಥಾ ಶಕ್ತಿಯ ಸ್ವರೂಪವನ್ನು ತಿಳಿಸುವುದಕ್ಕಾಗಿಯೇ ವಿಶೇಷವಾದ ಪದಗಳನ್ನು ಶಾಸ್ತ್ರಜ್ಞರು ಉಪಯೋಗಿಸುತ್ತಾರೆ. ಆದರೂ ಶಕ್ತಿಯ ಚೈತನ್ಯವು ಯಾವ ವಿಧವಾ ದಭೇದವೂ ಇಲ್ಲದೇ ಅಖಂಡವಾದ ಜ್ಞಾನಸ್ವರೂಪವಾದ ಚಿದ್ರೂಪಿಣಿಯೇ ಆಗಿದ್ದಾಳೆ. ॥೬೦॥

ಹೀಗೆ ಭೇದವನ್ನು ಎಣಿಸುತ್ತಿರುವವರೆಗೆ ಮಾನವನು ಆಕೆಯಲ್ಲಿ ಭಕ್ತನಾಗಲು ಸಾಧ್ಯವಿಲ್ಲ. ಅನೇಕ ವಿಶೇಷ ಸ್ವರೂಪಗಳನ್ನು ತಿಳಿಸುವ ವೇದಗಳೇ ಶಕ್ತಿಯು ಯಾವವಿಧವಾದ ಭೇದವೂ ಇಲ್ಲದ ಪರತತ್ವವೆಂಬ ರಹಸ್ಯವಾದ ಅರ್ಥವನ್ನು ಸಿದ್ಧಾಂತವಾಗಿ ಸೂಚಿಸುತ್ತಿವೆ. ॥೬೧॥

ಅದ್ದರಿಂದಲೇ ವೇದನಿಪುಣನಾಗಿದ್ದರೂ ಅಗಸ್ತ್ಯಮಹರ್ಷಿಯು ಕರ್ಮಫಲಗಳ ಭೇದದರ್ಶಿಯಾಗಿ, ತ್ರೈಗುಣ್ಯಪರನಾಗಿ, ತ್ರಿಪುರಾದೇವಿಯ ಪಟ್ಟಣವಾದ ಶ್ರೀ ಪುರವನ್ನು ನೋಡಲಾರದೇಹೋದನು. ಏಕೆಂದರೆ ತ್ರಿಪುರಾದೇವಿಯು ವೇದಗಳ ಸಾರಭೂತವಾದ ಮುಖ್ಯತಾತ್ಪರ್ಯರೂಪವಾದ ಅರ್ಥಸ್ವರೂಪಳಾಗಿರುತ್ತಾಳೆ. ॥೬೨॥

ಅತ ಸ್ತ್ರೈಪುರಸಂಸಿದ್ಧ್ಯಾ ಸಾಧನಂ ವೇದ ಉಚ್ಯತೇ ।
ವೇದಾರ್ಥಸ್ಯೈವ ವ್ಯಸನಂ ಪುರಾಣಂ ವ್ಯಾಸ ಊಚಿವಾನ್ ॥೬೩॥

ವೇದೋ ಹ್ಯಾಗಮಭಾಗಃ ಸ್ಯಾತ್ ಶಬ್ದರಾಶಿಸ್ತಥಾಽಽಗಮಃ ।
ತಸ್ಯಾ ಮೂರ್ತಿರತಃ ಸರ್ವಂ ಪ್ರವೃತ್ತಂ ತಸ್ಯ ಸಂಶ್ರಯಾತ್ ॥೬೪॥

ತ್ರೈವರ್ಣಿಕಾಽಧಿಕಾರೇಣ ವೇದರೂಪಃ ಪ್ರವರ್ತತೇ ।
ದಯಯಾ ಪರಮೇಶಾನಃ ಸರ್ವಾನುದ್ಧರ್ತುಮಿಚ್ಛಯಾ ॥೬೫॥

ವೇದ ಆಗಮಸಂಜ್ಞಾನಂ ವಿಭಾವಯದನುತ್ತಮಂ ।
ಆಗಮಃ ಪರಮೇಶಸ್ಯ ವಿಮರ್ಶ ಇತಿ ನಿಶ್ಚಯಃ ॥೬೬॥

ಕ್ರಮೇಣ ಬ್ರಹ್ಮಮುಖ್ಯಾನಾಂ ಮುಖಾದುದ್ಭಾವಯತ್ತು ತಂ ।
ಅಪಾರೋ ಹ್ಯಾಗಮಾಂಭೋಧಿಃ ಸರ್ವಲೋಕೇಷು ಸಂಗತಃ ॥೬೭॥

ಆದ್ದರಿಂದ ಶ್ರೀತ್ರಿಪುರಾದೇವಿಯ ಸ್ವರೂಪಸಾಕ್ಷಾತ್ಕಾರಕ್ಕೂ ವೇದವೇಸಾಧನವಾಗಿದೆ. ವೇದದ ಈ ಅರ್ಥವನ್ನೇ ಉದಾಹರಣೆಗಳಿಂದ ವಿಸ್ತಾರವಾಗಿ, ವಿಶದವಾಗಿ ವಿವರಿಸಲು ವ್ಯಾಸಮಹರ್ಷಿಯು ಪುರಾಣಗಳನ್ನು ಹೇಳಿದನು. ||೬೩||

ವೇದವು ಆಗಮಗಳೆಂಬ ಒಂದು ಭಾಗವುಳ್ಳದ್ದಾಗಿದೆ. ಆಗಮಗಳು ಶಬ್ದಗಳ ರಾಶಿಸ್ವರೂಪವಾಗಿವೆ. ಆ ಶಬ್ದತತ್ವವೆಲ್ಲವೂ ತ್ರಿಪುರಾದೇವಿಯ ಸ್ವರೂಪವೇ ಆಗಿವೆ. ಆದ್ದರಿಂದಲೇ ಶಬ್ದರೂಪವಾದವೇದವನ್ನು ಅವಲಂಬಿಸಿಯೇ ಎಲ್ಲ ತತ್ವದ ಸ್ವರೂಪವನ್ನೂ ಋಷಿಗಳು ಗೊತ್ತುಪಡಿಸಿ ಹೇಳಿ ಸಾಧಿಸಿದ್ದಾರೆ. ||೬೪||

ಮೂರುವರ್ಣದ ಜನರೂ ತಿಳಿಯಲು ಅರ್ಹರೆಂದು ಭಾವಿಸಿಯೇ ವೇದವು ಹೊರಟಿದೆ. ಆದರೂ ಎಲ್ಲರನ್ನೂ ತತ್ವೋಪದೇಶದಿಂದ ಉದ್ಧಾರಮಾಡಬೇಕೆಂಬ ಇಚ್ಛೆಯಿಂದ ಪರಮೇಶ್ವರನೇ ಕರುಣೆಯಿಂದ ವೇದಗಳಂತೆ ಆಗಮಗಳನ್ನೂ ಹೊರಗೆಡೆಹಿದ್ದಾನೆ. ||೬೫||

ಪರಮೇಶ್ವರನೇ ಅತ್ಯಂತ ಶ್ರೇಷ್ಠವಾದ ಆಗಮಗಳು ಎಂಬ ಹೆಸರುಳ್ಳ ವೇದಭಾಗವನ್ನು ಹೊರಗೆಡಹಿದ್ದಾನೆ. ಪರಮೇಶ್ವರನ ವಿಮರ್ಶಾತ್ಮಕವಾದ ಜ್ಞಾನವೇ ಆಗಮವೆಂದು ಋಷಿಗಳು ನಿಶ್ಚಯಿಸಿದ್ದಾರೆ. ||೬೬||

ಈ ವೇದಗಳು ಮತ್ತು ಆಗಮಗಳು ಕ್ರಮವಾಗಿ ಬ್ರಹ್ಮನೇ ಮುಂತಾದವರ ಮುಖಗಳಿಂದ ಹೊರಗೆ ಕಾಣಿಸಿಕೊಂಡವು. ಎಲ್ಲೆಯೇ ಇಲ್ಲದ ಆಗಮವೆಂಬ

ಕಾಲೇನ ಮಂದಧಿಷಣಾನ್ ಕೃಪಣಾನ್ ಅಭಿಲಕ್ಷ್ಯ ತು ।
ಋಷಿಭಿಸ್ತಮಾಗಮಾಬ್ಧಿಂ ಮಥಿತ್ವಾ ಪ್ರಾಜ್ಯಯಾ ಧಿಯಾ ॥೬೮॥

ಸಾರಸಂಗ್ರಹರೂಪಾಽತ್ಮತಂತ್ರಾಽಮೃತ ಮನುತ್ತಮಂ ।
ದೇಶಭೇದ ವಿಭೇದೇನ ಪೃಥಗೇವ ವಿಭಾವಿತಂ ॥೬೯॥

ತತ್ರ ದ್ವಿಜಾನಾಂ ವೇದೋಕ್ತ ಕರ್ಮಭಿಃ ಸಂಸ್ಕೃತಾಽತ್ಮನಾಂ ।
ಶ್ರೌತಕರ್ಮಮುಖೇನೈವ ತಾಂತ್ರಿಕೇ ಹ್ಯಧಿಕಾರಿತಾ ॥೭೦॥

ಶೂದ್ರಾಽದೀನಾಂ ತು ಕೈವಲ್ಯಾದ್ಭವೇತ್ತಂತ್ರಾಽಧಿಕಾರಿತಾ ।
ವೇದ ಏವ ಹಿ ತಂತ್ರಂ ಸ್ಯಾತ್ತಂತ್ರಂ ವೇದಃ ಪ್ರಕೀರ್ತಿತಂ ॥೭೧॥

ಸಮುದ್ರವು ಎಲ್ಲಾ ಲೋಕಗಳಲ್ಲಿಯೂ ಬೇರೆ ಬೇರೆ ರೂಪದಿಂದ ಪ್ರಚಾರವನ್ನು ಪಡೆದು ಸೇರಿದೆ. ॥೬೭॥

ಕಾಲಕ್ರಮದಲ್ಲಿ ಮೂಢರಾದ ಮತ್ತು ದೀನರಾದ ಜನರನ್ನು ನೋಡಿ ಋಷಿಗಳು ತಮ್ಮ ಅತ್ಯಂತ ವಿಸ್ತಾರವಾದ ಮನಸ್ಸಿನಿಂದ ಸೂಕ್ಷ್ಮವಾದ ಬುದ್ಧಿಯಿಂದ ಆಗಮವೆಂಬ ಸಮುದ್ರವನ್ನು ಕಡೆದು ಸಾರವನ್ನು ಹೊರಗೆಡಹಿ ಪ್ರಕಟಪಡಿಸಿದರು. ॥೬೮॥

ಆಗಮಗಳ ಸಾರಗಳ ಸಂಗ್ರಹರೂಪವಾದ ಆತ್ಮಸ್ವರೂಪಳಾದ ಶಕ್ತಿತತ್ವದ ವಿಷಯವನ್ನು ಪ್ರತಿಪಾದಿಸುವ ಶ್ರೇಷ್ಠವಾದ ಈ ತಂತ್ರಶಾಸ್ತ್ರವು ದೇಶಕಾಲಭೇದದಿಂದ ಅನೇಕ ವಿಧವಾಗಿ ಕಾಣಿಸುತ್ತದೆ. ॥೬೯॥

ಈ ಸಂದರ್ಭದಲ್ಲಿ ವೇದೋಕ್ತಕರ್ಮಗಳಿಂದ ಸಂಸ್ಕಾರವನ್ನು ಪಡೆದ ಬ್ರಾಹ್ಮಣರಿಗೆ ಶ್ರೌತಕರ್ಮಗಳನ್ನು ನೆರವೇರಿಸುವುದರ ಮೂಲಕವಾಗಿ ಈ ತಂತ್ರ ಶಾಸ್ತ್ರದಲ್ಲಿ ಹೇಳಿರುವ ಸಾಧನಾನುಷ್ಠಾನದಲ್ಲಿ ಅರ್ಹತೆಯು ಬರುವುದೆಂದು ತಿಳಿಯ ಬೇಕು. ॥೭೦॥

ಶೂದ್ರಾದಿವರ್ಣಗಳಿಗೆ ಶ್ರೌತಕರ್ಮವಿಲ್ಲದೇ ಸ್ವತಃ ಈ ತಂತ್ರಶಾಸ್ತ್ರದಲ್ಲಿ ಅರ್ಹತೆಯು ಪ್ರಾಪ್ತವಾಗುವುದು. ವೇದವೇ ತಂತ್ರವೆಂದೂ, ತಂತ್ರವೇ ವೇದ ವೆಂದೂ ಹೇಳಿದೆ. ಏಕೆಂದರೆ ಇವೆರಡೂ ಒಂದೇ ಸಿದ್ಧಾಂತವನ್ನು ತಿಳಿಸುತ್ತಿವೆ. ॥೭೧॥

ನಾಽನಯೋರ್ವಿದ್ಯತೇ ಭೇದೋ ಲೇಶಾಂಶೇನಾಽಪಿ ಕುತ್ರಚಿತ್ ।
ತಥಾ ಹಿ ವೇದಭಾಗೇಷು ತಂತ್ರಭಾಗಃ ಪ್ರದೃಶ್ಯತೇ ॥೨೨॥

ಯತ್ರ ಮಂತ್ರ ಯಂತ್ರಪೂಜಾವಿಧಾನಂ ಸುಸ್ಫುಟಂ ಸ್ಥಿತಂ ।
ಏವಂ ವಿಧೋ ವೇದಭಾಗೋ ಯತಸ್ತನ್ಮೂರ್ಧ್ನಿ ಸಂಸ್ಥಿತಃ ॥೨೩॥

ತಂತ್ರ ಸಂಕೇತ ಸಂಯುಕ್ತ ಸ್ತತಸ್ತಂತ್ರಂ ಸಮುತ್ತಮಂ ।
ತಂತ್ರೇಷ್ವಪಿ ವೇದ ಭಾಗಾ ಮಂತ್ರ ಬ್ರಾಹ್ಮಣಭೇದಿತಾಃ ॥೨೪॥

ತಥಾ ತಂತ್ರೇಷು ಸರ್ಗಾಽಽದಿ ಲಕ್ಷಣೋಽಂಶಃ ಪ್ರದೃಶ್ಯತೇ ।
ಸ ಪುರಾಣಪ್ರಭಾಗಃ ಸ್ಯಾ ದೇವಂ ಜಾನೀಹಿ ಭಾರ್ಗವ ॥೨೫॥

ತಸ್ಮಾಚ್ಛ್ರೀತ್ರಿಪುರಾಽಽಖ್ಯಾಯಾಃ ಸಹಜಾಽಽಮರ್ಶಸಂಭವಃ ।
ಆಗಮಾಽಽಬ್ಧಿಸ್ತತೋ ವೇದಾಂಸ್ತಂತ್ರಾಣಿ ಚ ವಿಭಾವಯ ॥೨೬॥

ಇವೆರಡಕ್ಕೂ ಅತ್ಯಲ್ಪವಾದ ಭೇದವೂ ಇಲ್ಲವೆಂದು ತಿಳಿಯಬೇಕು. ಆದ್ದರಿಂದಲೇ ವೇದಭಾಗಗಳಲ್ಲಿ ತಂತ್ರಭಾಗವೂ ಕಂಡುಬರುತ್ತದೆ. ॥೨೨॥

ಆ ವೇದಭಾಗಗಳಲ್ಲಿ ಮಂತ್ರ, ಯಂತ್ರ, ತಂತ್ರ ಪೂಜಾಕ್ರಮ ಮುಂತಾದವೂ ಇವನ್ನು ಸ್ಪಷ್ಟವಾಗಿ ಹೇಳಿದೆ. ಇಂತಹವೇದಭಾಗವು ಆಗಮಗಳ ಶಿರಸ್ಸಿನಲ್ಲಿದೆಯೆಂದು ತಿಳಿಯಬೇಕು. ॥೨೩॥

ಆದ್ದರಿಂದಲೇ ತಂತ್ರಶಾಸ್ತ್ರದ ಸಂಕೇತಾಕ್ಷರದಿಂದ ಕೂಡಿರುವ ಆಗಮದ ತಂತ್ರಭಾಗವು ಅತ್ಯಂತಶ್ರೇಷ್ಠವೆಂದು ಹೇಳಿದೆ. ಇದೇ ರೀತಿಯಲ್ಲಿ ಪುರಾಣವೇ ಮೊದಲಾದುದರಲ್ಲಿಯೂ, ತಂತ್ರಭಾಗವು ಹೆಚ್ಚಾಗಿ ಬೆಳೆದಿರುತ್ತದೆ. ॥೨೪॥

ಹಾಗೆಯೇ ತಂತ್ರಶಾಸ್ತ್ರಗಳಲ್ಲಿಯೂ ಸರ್ಗ, ಮುಂತಾದ ಪುರಾಣದ ಪಂಚಲಕ್ಷಣಗಳು ಚೆನ್ನಾಗಿ ಕಾಣುತ್ತಿವೆ. ಎಲೈ ಪರಶುರಾಮನೇ, ಇದು ಪುರಾಣಗಳ ಉತ್ಕೃಷ್ಟವಾದ ಭಾಗವೆಂದು ತಿಳಿ. ॥೨೫॥

ಆದ್ದರಿಂದ ಶ್ರೀ ತ್ರಿಪುರಾ ಎಂಬ ಶ್ರೇಷ್ಠದೇವಿಯ ಸ್ವರೂಪವಿಚಾರರೂಪವಾದ ಗ್ರಂಥಗಳು ಆಗಮವೆಂಬ ಹೆಸರಿನಿಂದ ಸಮುದ್ರದ ಹಾಗಿವೆ. ಎಂದು ತಿಳಿ. ಅದರಿಂದ ವೇದಗಳೂ ತಂತ್ರಶಾಸ್ತ್ರಗಳು ಇವುಗಳೆಲ್ಲವೂ ಉಂಟಾಗಿವೆಯೆಂದು ತಿಳಿ. ॥೨೬॥

ನಿಯತಿರ್ಯಾ ಹಿ ತಚ್ಛಕ್ತಿ ಸ್ತಯಾ ಸರ್ವಂ ವ್ಯವಸ್ಥಿತಂ ।
ಅತೋಽಗಸ್ತ್ಯಸ್ತಂತ್ರ ದೀಕ್ಷಾರಹಿತೋ ವೈದಿಕೋಽಪಿ ಸನ್ ॥೭೭॥

ನಾಽಪಶ್ಯ ತ್ತತ್ಪುರಂ ತತ್ರ ನೀರೌ ನಿಯತಿಯಂತ್ರಿತಃ ।
ಅಥ ಶ್ರುತ್ವಾ ಮಹಾದೇವ್ಯಾ ಮಾಹಾತ್ಮ್ಯಂ ಸರ್ವತೋಽಧಿಕಂ ॥೭೮॥

ಭಕ್ತಿಯುಕ್ತಃ ಪ್ರಾಪ್ಯ ದೀಕ್ಷಾಂ ತಾಂತ್ರಿಕೀಂ ಕ್ರಮಸಂಯುತಾಂ ।
ಪತ್ನ್ಯಾ ಉಪಾಸ್ಯ ತ್ರಿಪುರಾಂ ತತ್ರ ಶ್ರೀನಾಥಮಂಡಲೇ ॥೭೯॥

ಸ್ಥಾನಂ ಪ್ರಾಪ್ಯ ಪ್ರಿಯಾಯುಕ್ತಃ ಪರಮಾಽಽನಂದ ನಿರ್ಭರಃ ।
ಏವಂ ತೇನ ಸಮಾಕ್ರಾಂತಂ ದೃಷ್ಟಂ ಚ ಸ್ಥಾನಮುತ್ತಮಂ ॥೮೦॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಆಗಮಸ್ವರೂಪ
ನಿರ್ಣಯೋನಾಮ ಏಕೋನಾಶೀತಿತಮೋಽಧ್ಯಾಯಃ

ಇವೆಲ್ಲಕ್ಕೂ ನಿಯಾಮಕಳಾದ ಶಕ್ತಿಯೇ ಈಕೆಯೆಂದೂ, ಈಕೆಯಿಂದಲೇ ಎಲ್ಲಾ ವಿಧವಾದ ವ್ಯವಸ್ಥೆಯೂ ನಡೆಯುತ್ತಿದೆಯೆಂದೂ ತಿಳಿ. ಆದ್ದರಿಂದಲೇ ಅಗಸ್ತ್ಯನು ವೈದಿಕನಾಗಿದ್ದಾಗ್ಯೂ ಆಕೆಯ ಉಪಾಸನೆಯಲ್ಲಿ ದೀಕ್ಷೆಯನ್ನು ವಹಿಸದೇ ಇದ್ದುದರಿಂದ ಆಕೆಯಪಟ್ಟಣವನ್ನು ಗುರುತಿಸಲಾರದೇ ಹೋದನು. ॥೭೭॥

ಆದ್ದರಿಂದಲೇ ಆಕೆಯ ಉಪಾಸನೆಯ ನಿಯಮಗಳನ್ನು ಪಾಲಿಸದೇ ಇದ್ದ ಅಗಸ್ತ್ಯಮಹರ್ಷಿಯೂ ಕೂಡ ಆಕೆಯ ದೀಕ್ಷೆಯನ್ನು ವಹಿಸದೇ ಇದ್ದುದರಿಂದ ಶ್ರೀಪುರವನ್ನು ನೋಡಲಾರದೇ ಹೋದನು. ಅನಂತರದಲ್ಲಿ ಅವನು ಪುಣ್ಯವಿಶೇಷ ದಿಂದ ತ್ರಿಪುರಾದೇವಿಯ ಸರ್ವಶ್ರೇಷ್ಠವಾದ ಮಾಹಾತ್ಮ್ಯೆಯನ್ನು ಕೇಳಿದನು.॥೭೮॥

ಅದರಿಂದ ಅವನು ಭಕ್ತಿಯಿಂದ ಕೂಡಿದವನಾಗಿ ತಂತ್ರಶಾಸ್ತ್ರೋಕ್ತಕ್ರಮದಲ್ಲಿ ತನ್ನ ಪತ್ನಿಯಾದ ಲೋಪಾಮುದ್ರಾದೇವಿಯಿಂದಲೇ ತ್ರಿಪುರಾದೇವಿಯ ದೀಕ್ಷೆಯನ್ನು ವಹಿಸಿ, ಶ್ರೀನಾಥ ಎಂಬ ಮಂಡಲದಲ್ಲಿ ಆಕೆಯನ್ನು ಆರಾಧಿಸಿದನು. ॥೭೯॥

ಅಗಸ್ತ್ಯಮಹರ್ಷಿಯು ತನ್ನ ಪ್ರಿಯೆಯಾದ ಲೋಪಾಮುದ್ರೆಯಿಂದ ಕೂಡಿದವನಾಗಿ ತ್ರಿಪುರಾದೇವಿಯನ್ನು ಆರಾಧಿಸಿ, ಅತ್ಯಂತ ಆನಂದದಿಂದತುಂಬಿದ ಮನಸ್ಸುಳ್ಳವನಾಗಿ ಆಕೆಯ ಲೋಕವನ್ನೇ ಸೇರಿದನು. ಈ ರೀತಿಯಾಗಿ ಆತನು ತ್ರಿಪುರಾದೇವಿಯ ಪಟ್ಟಣವನ್ನು ನೋಡಿ ಬಹಳ ಸಂತೋಷದಿಂದಿದ್ದನು. ॥೮೦॥

ಮಂತ್ರಶಾಸ್ತ್ರ ತಂತ್ರಶಾಸ್ತ್ರ ಯಂತ್ರಶಾಸ್ತ್ರಗಳು

ತಂತ್ರಶಾಸ್ತ್ರದ ಪ್ರಭಾವವನ್ನು ವೇದಗಳಲ್ಲಿ ಅಲ್ಪವಾಗಿಯೂ ಅರ್ವಾಚೀನ ಪುರಾಣಗಳಲ್ಲಿ ಹೇರಳವಾಗಿಯೂ ಕಾಣಬಹುದು. ಪರಾಶಕ್ತಿ ಮತ್ತು ಇತರ ಸ್ತ್ರೀ ದೇವತೆಗಳ ವರ್ಣನೆಗಳು ಮಹಿಮೆಗಳು ಇವನ್ನು ತಿಳಿಸುವ ಭಾಗಗಳು ಇತಿಹಾಸ ಗಳಲ್ಲೂ ಅಲ್ಲಲ್ಲಿ ಬಂದಿವೆ. ಶಿವಪಾರ್ವತಿಯರ ಸಂವಾದರೂಪಗಳಲ್ಲಿ ಇದು ಹೆಚ್ಚಾಗಿ ಬೆಳೆದಿದೆ. ಮಂತ್ರ ತಂತ್ರ ಯಂತ್ರಗಳ ಉಲ್ಲೇಖಗಳೂ ವಿಶದವಾಗಿ ಹೆಚ್ಚಾಗಿಯೇ ಇವೆ. ಪುರಾಣಗಳಿಗೂ ಇತಿಹಾಸಗಳಿಗೂ ಸಾಹಿತ್ಯದಲ್ಲಿ ಹೆಚ್ಚು ಸಂಬಂಧವಿದೆ. ಆದರೆ ತಂತ್ರಶಾಸ್ತ್ರಗಳು ದೇವತಾರಾಧನೆ ಉಪಾಸನೆ ಮುಂತಾದ ವಿಶೇಷ ಪರಿಭಾಷೆ ಗಳನ್ನು ಹೆಚ್ಚಾಗಿ ತಿಳಿಸುತ್ತಾ, ರಹಸ್ಯತತ್ವಗಳನ್ನು ಸಂಕೇತ ಮುಂತಾದ ರೀತಿ ಯಿಂದ ವಿವರಿಸುತ್ತವೆ. ಒಟ್ಟನಲ್ಲಿ ಸಂಹಿತೆಗಳನ್ನು ವೈಷ್ಣವವೆಂದೂ ಆಗಮಗಳನ್ನು ಶೈವರ ಪವಿತ್ರ ಗ್ರಂಥಗಳೆಂದೂ, ತಂತ್ರಗಳನ್ನು ಶಾಕ್ತೇಯರ ಪೂಜ್ಯ ಗ್ರಂಥಗಳೆಂದೂ ಹೇಳಬಹುದು. ಆದರೂ ತಂತ್ರಶಬ್ದವನ್ನು ಇವೆಲ್ಲಕ್ಕೂ ಉಪಯೋಗಿಸುವ ರೂಢಿಯೂ ಇದೆ.

ವೈದಿಕಸಿದ್ಧಾಂತಗಳಿಗೂ ಇವರಲ್ಲಿರುವ ಮುಖ್ಯವಾದ ಉಪದೇಶಕ್ಕೂ ವಿರೋಧವಿಲ್ಲದಿದ್ದರೂ, ವೇದಗಳು ಕಲಿಯುಗದಲ್ಲಿ ಅಲ್ಪವಾದ ಆಯುಸ್ಸು ಮತ್ತು ಪ್ರಜ್ಞಾಶಕ್ತಿಯುಳ್ಳ ಜನರಿಗೆ ದುರವಗಾಹವಾದುದರಿಂದ, ತಂತ್ರಶಾಸ್ತ್ರಗಳು ಅವರಿ ಗಾಗಿ ಉಂಟಾಗಿವೆ. ಇವುಗಳಲ್ಲಿರುವ ಉಪದೇಶಗಳೂ ಆಚರಣೆಗಳೂ ಹೆಚ್ಚು ಸುಲಭ ವಾಗಿರುತ್ತವೆ. ಎನ್ನಬಹುದು. ಅಲ್ಲದೆ ಈ ಗ್ರಂಥಗಳು ಉತ್ತಮವರ್ಣದವರಿಗೆ ಮಾತ್ರವಲ್ಲವು. ಸ್ತ್ರೀಶೂದ್ರಾದಿಗಳೂ ಇವುಗಳ ವ್ಯಾಸಂಗ ಅನುಷ್ಠಾನಗಳಿಗೆ ಅಧಿಕಾರಿಗಳಾಗಬಹುದು. ಆದರೆ ಗುರೂಪದೇಶವೂ ದೀಕ್ಷಾಗ್ರಹಣವೂ, ವ್ರತನಿಯ ಮಗಳ ಪಾಲನೆಗಳೂ ಆವಶ್ಯಕವಾಗಿವೆ. ಒಂದು ತಂತ್ರದಲ್ಲಿ (೧) ಜ್ಞಾನಕಾಂಡದಲ್ಲಿ ತತ್ವೋಪದೇಶವೂ, ಏಕದೇವತಾರಾಧನೆ, ಏಕತತ್ವಸಿದ್ಧಾಂತ, ಮಂತ್ರಯಂತ್ರಗಳು ಇವುಗಳನ್ನೂ ಹೇಳಿರುತ್ತದೆ. (೨) ಯೋಗಖಂಡದಲ್ಲಿ ಧ್ಯಾನ, ಏಕಾಗ್ರತೆ, ನಿದಿಧ್ಯಾಸನ, ಧಾರಣಾ, ಯೋಗಸಿದ್ಧಿಗಳಿಗಾಗಿ ಮಾಯಾಯೋಗ ಮುಂತಾದು ವನ್ನು ವಿವರಿಸಿರುತ್ತದೆ. (೩) ಕ್ರಿಯಾಖಂಡದಲ್ಲಿ ವಿಗ್ರಹರಚನೆ, ದೇವಾಲಯ ನಿರ್ಮಾಣ, ಪ್ರತಿಷ್ಠಾಪನಗಳು ಇವನ್ನೂ ಹೇಳಿದೆ. (೪) ಚರ್ಯಾಖಂಡದಲ್ಲಿ ವ್ರತಗಳು, ಉತ್ಸವಗಳು, ಸಾಮಾಜಿಕ ಸತ್ಕಾರಕೂಟಗಳು ಮತ್ತು ಧರ್ಮಗಳು ಇವನ್ನು ತಿಳಿಯಹೇಳಿರುತ್ತದೆ. ಎಂದು ಸಾಮಾನ್ಯವಾಗಿ ಹೇಳಬಹುದು.

ಅನೇಕ ಶೈವಾಗಮುಗಳು ಇವೆ. ಉಪಾಸನೆಗಳೂ ಅನೇಕವಾಗಿವೆ. ಇದನ್ನು ಪ್ರಪಂಚ ಸೃಷ್ಟಿಯಾದ ಮೇಲೆ ಶಿವನು ಉಪದೇಶಿಸಿದಂತಿದೆ. ಇವುಗಳ ಕಾಲವು ಗೊತ್ತಾಗಿಲ್ಲ.

ಸಂಹಿತೆಗಳಲ್ಲಿ ಪಾಂಚರಾತ್ರ, ವೈಷ್ಣವ, ೧೨ ಮುದ್ರಿತವಾಗಿವೆ. ಇವುಗಳಲ್ಲಿ ಅಹಿರ್ಬುಧ್ನ್ಯ ಸಂಹಿತೆಯು ಪ್ರಾಚೀನತಮವೆನ್ನಬಹುದು. ಕಾಶ್ಮೀರದಲ್ಲಿ ಕ್ರಿ. ಶ. ೪ ನೆ ಶತಮಾನದಲ್ಲಿ ಇದರ ಪ್ರಾರಂಭವಾಗಿರಬಹುದು. ಇದು ಅಹಿರ್ಬುಧ್ನ್ಯ ಸಂವಾದ ಎಂದರೆ ಶಿವ, ನಾರದರ ಸಂವಾದದ ರೂಪದಲ್ಲಿದೆ. ಸೃಷ್ಟಿಯ ವಿಷಯದಲ್ಲಿ ಮಾನವರಿಗೆ ಭಿನ್ನಾಭಿಪ್ರಾಯವಿರುವುದೇಕೆಂದು ನಾರದನು ಕೇಳಲು (ಅಧ್ಯಾಯ ೮) ಶಿವನು ಪರತತ್ವದ ನಿಜಸ್ವರೂಪವನ್ನು ಮಾನವ ಭಾಷೆಯಲ್ಲಿ ತಿಳಿಸಲಾಗದೆ ಇರುವುದರಿಂದಲೂ, ಮಾನವರ ವ್ಯವಹಾರದಲ್ಲಿ ನಾಮರೂಪಗಳಲ್ಲಿ ಮಾತ್ರ ಭೇದವಿರುವುದರಿಂದಲೂ, ಮಾನವರು ಬುದ್ಧಿಶಕ್ತಿಯಲ್ಲಿ ಭಿನ್ನರಾಗಿರುವುದರಿಂದಲೂ, ದೇವತಾವತಾರಗಳೂ ರೂಪಗಳೂ ಅನೇಕವಾಗಿರುವುದರಿಂದಲೂ ಭಿನ್ನಾಭಿಪ್ರಾಯಗಳಿಗೆ ಕಾರಣವುಂಟಾಗಿದೆ ಎಂದು ಉತ್ತರವನ್ನು ಕೊಟ್ಟಿರುತ್ತಾನೆ. (ಅಧ್ಯಾಯ ೧೨-೧೩ರಲ್ಲಿ) ಸೃಷ್ಟಿಕ್ರಮಗಳೂ, ವರ್ಣಾಶ್ರಮಧರ್ಮಗಳೂ, (ಅಧ್ಯಾಯ ೧೬-೧೯) ವರ್ಣಶಬ್ದ ತತ್ವಗಳೂ, ದೀಕ್ಷಾವಿಧಿಯೂ, ವೈಷ್ಣವ ಧರ್ಮವೂ, ವೇದವೇದಾಂತಜ್ಞಾನ, ದೇವ, ಪಿತೃಗಳ ಆರಾಧನೆ, ವಾಕ್ಕಾಯಶುದ್ಧಿ, ಅಹಿಂಸಾ, ಸತ್ಯಪರತೆ, ಯೋಗಾಭ್ಯಾಸ, ಸನ್ಯಾಸಪರತೆ, ಪರಮಾತ್ಮಜ್ಞಾನ, ತಂತ್ರ, ಮಂತ್ರ, ಯಂತ್ರಗಳ ಸ್ವರೂಪ, ಇವನ್ನು ತಿಳಿಸಿದೆ. ಯುದ್ಧ ಮುಂತಾದ ವಿಪತ್ಕಾಲದಲ್ಲಿ ಕ್ಷತ್ರಿಯರ ಧರ್ಮದ ವಿವರಗಳೂ, ಸುದರ್ಶನ ಸಹಸ್ರನಾಮಗಳೂ ವರ್ಣಿತವಾಗಿವೆ. ಪಾಂಚರಾತ್ರ ಸಂಹಿತೆಯು ಔತ್ತರೇಯವಾದರೂ ಪ್ರಚಾರದಲ್ಲಿ ದಾಕ್ಷಿಣಾತ್ಯವಾಗಿದೆ. ಈಶ್ವರ ಸಂಹಿತೆಯನ್ನು ಯಾಮುನಾಚಾರ್ಯರೂ (ಕ್ರಿ. ಶ. ೧೦೪೦) ಪೌಷ್ಕರ, ಪರಮ, ಸಾತ್ವತಸಂಹಿತೆಗಳ ಉಲ್ಲೇಖವನ್ನು ರಾಮಾನುಜಾಚಾರ್ಯರೂ (ಕ್ರಿ. ಶ. ೧೧೦೦) ಉಲ್ಲೇಖಿಸಿದಾರೆ. ನಾರದ ಪಾಂಚರಾತ್ರದಲ್ಲಿ ರಾಮಾನುಜಾವತಾರದ ಭವಿಷ್ಯವನ್ನೂ ಸಂಪ್ರದಾಯವನ್ನೂ ತಿಳಿಸುತ್ತಿದೆ. (ಕ್ರಿ. ಶ. ೧೬೦೦)

ಆದರೂ ತಂತ್ರಶಾಸ್ತ್ರವೆಂದರೆ ಶಾಕ್ತೇಯತಂತ್ರದಲ್ಲಿ ಹೆಚ್ಚು ರೂಢಿಯಲ್ಲಿದೆ. ಪರಾಶಕ್ತಿ, ಜಗನ್ಮಾತಾ, ದೇವೀ, ದುರ್ಗಾ, ಕಾಳೀ, ಚಂಡಾ, ಪರಮೇಶ್ವರೀ, ಎಂದು ವರ್ಣನೆ ಇದೆ. ಶಾಕ್ತತಂತ್ರಗಳಲ್ಲಿ ದೇವತತ್ವದ ಉತ್ತಮ ಭಾವಗಳೂ, ತತ್ವದರ್ಶನದ ಪರಾಕಾಷ್ಠೆಯೂ, ಮೂಢಭಕ್ತಿಯ ಲೋಲುಪತೆಯ ಅನೀತಿಗಳೂ

ವರ್ಣಿತವಾಗಿವೆ. ಆದರೂ ಅದರ ನಿಜಸಿದ್ಧಾಂತಗಳನ್ನು ಸರಿಯಾಗಿ ವುಡ್ರಾಪ್ (ಆವೆಲಾನ್) ಎಂಬಾತನು ಉಲ್ಲೇಖಿಸಿದಾನೆ. ಇವುಗಳಲ್ಲಿ ಒಟ್ಟು ೬೪ ತಂತ್ರಗಳಿವೆ. ವಂಗದೇಶವು ಇದರ ಮೂಲಸ್ಥಾನವು. ಅಸ್ಸಾಂ, ನೇಪಾಲ, ಟಿಬೆಟ್, ಚೀನಾಗಳಿಗೂ ಇವು ಹಬ್ಬಿದೆ. ಕಾಶ್ಮೀರದಲ್ಲೂ ದಕ್ಷಿಣದಲ್ಲಿ ಕನ್ಯಾಕುಮಾರಿಯ ವರೆಗೂ ಇದು ಹರಡಿದೆ. ಶಿವಪಾರ್ವತೀಸಂವಾದರೂಪದಲ್ಲಿದೆ. ಪಾರ್ವತಿಯು ಶಿಷ್ಯಳಂತೆ ಕೇಳಿ ಶಿವನು ಗುರುವಿನಂತೆ ಉಪದೇಶಿಸಿರುವುದಕ್ಕೆ ಆಗಮವೆಂದೂ, ಪಾರ್ವತಿಯು ಶಿವನ ಪ್ರಶ್ನಗಳಿಗೆ ಉತ್ತರವಾಗಿ ಉಪದೇಶಿಸಿದ್ದರೆ ನಿಗಮವೆಂದೂ ಹೆಸರಿದೆ. ಎಂದು ಸಾಮಾನ್ಯವಾಗಿ ಹೇಳಬಹುದು.

ಇವುಗಳಲ್ಲಿ ಮಹಾನಿರ್ವಾಣತಂತ್ರವು ಉತ್ತಮವಾಗಿದೆ. ಇವೂ ಹಿಂದಿನ ಹಿಂದಿನ ತಂತ್ರಗಳನ್ನು ಅವಲಂಬಿಸಿಯೇ ಬೆಳೆದಿದೆ. ಇದರಲ್ಲಿ ಬ್ರಹ್ಮತತ್ವವೇ ಪರಮೋತ್ತಮವೆಂದೂ, ಅದು ಎಲ್ಲರ ಆತ್ಮಸ್ವರೂಪವೆಂದೂ, ಉಪನಿಷತ್ತುಗಳಲ್ಲಿ ಹೇಗೋ ಹಾಗೆ, ಹೇಳಿದೆ. ಬ್ರಹ್ಮವು ನಿತ್ಯವೂ ಮೂಲಭೂತವೂ ಆದ ಶಕ್ತಿಯಾಗಿದೆ. ಇದರಿಂದಲೇ ಪ್ರಪಂಚವೆಲ್ಲವೂ ಸೃಷ್ಟವಾಗಿದೆ. ವ್ಯಾಕರಣದೃಷ್ಟಿಯಿಂದ ಶಕ್ತಿಶಬ್ದವು ಸ್ತ್ರೀಲಿಂಗದಲ್ಲಿರುತ್ತಾದುದರಿಂದ ಸ್ತ್ರೀತತ್ವವನ್ನು ತಿಳಿಸುತ್ತದೆ. ಅನುಭವದಲ್ಲಿ ಪ್ರಾಣಿಸಮೂಹವು ಎಲ್ಲವೂ ತಾಯಿಯ ಗರ್ಭದಿಂದ ಉಂಟಾಗುತ್ತದೆ. ಆದುದರಿಂದ ಪರತತ್ವವನ್ನು ತಂದೆ ಎಂದು ಅಲ್ಲ, ತಾಯಿ ಎಂದು ಉಪದೇಶಿಸಿದೆ. ಸಂಕಟದಲ್ಲಿ ಎಲ್ಲರೂ ತಾಯಿಯಲ್ಲಿ ಸುಲಭವೂ ಸಹಜವೂ ಆದ ರೀತಿಯಲ್ಲಿ ರಕ್ಷಣೆಯನ್ನು ಕೇಳಿಪಡೆಯುವಂತೆ, ಶಕ್ತಿಮಾತೆಯು ಜಗತ್ತಿನ ದುಃಖಸಂಕಟಗಳನ್ನು ನಾಶಮಾಡಿ ಕಾಪಾಡುತ್ತಾಳೆ. ಇದರಂತೆ ಮೂಲಪ್ರಕೃತಿಯೂ ಸ್ತ್ರೀಲಿಂಗವಾಗಿದೆ. ಶಿವಪತ್ನಿಯಾದ ಪಾರ್ವತಿಯೂ, ಉಮಾ, ದುರ್ಗಾ, ಕಾಳೀ, ವಿಷ್ಣು ಸಹಧರ್ಮಿಣಿಯಾದ ಲಕ್ಷ್ಮಿಯೂ, ಕೃಷ್ಣನ ನಾಯಕಿಯಾದ ರಾಧೆಯೂ, ಇವರೆಲ್ಲರೂ ದಿವ್ಯಮಾತೆಯರೆಂದೂ, ಶಕ್ತಿರೂಪರೆಂದೂ ಹೇಳಿದೆ. ಅನಂತನಾಮರೂಪಗಳಲ್ಲಿ ಏಕತತ್ವವನ್ನು ಮನಗಾಣುವ, ಭಾರತಾರ್ಯರ ಮನೋಧರ್ಮವನ್ನೂ, ಪರಮತಸಹನೆಯ ಹೃದಯ ವೈಶಾಲ್ಯವನ್ನೂ, ಎಲ್ಲರ ಉದ್ಧಾರಕ್ಕೆ ಸರ್ವಸಾಧಾರಣವಾದ ಮಾರ್ಗದ ಉಪದೇಶವನ್ನೂ ಇಲ್ಲಿ ನಾವೂ ಗಮನಿಸಬಹುದು.

ಇದರಿಂದ ಪರಾಶಕ್ತಿಯನ್ನೂ ಜಗನ್ಮಾತೆ ಎಂದೂ, ಬ್ರಹ್ಮ, ವಿಷ್ಣು, ರುದ್ರರ ವಾಣೀ, ಲಕ್ಷ್ಮೀ, ಉಮಾದೇವಿಯರ ಸೃಷ್ಟಿ, ಸ್ಥಿತಿ, ಸಂಹಾರಗಳ ಮೂಲಕಾರಣರಾದ ತ್ರಿಮೂರ್ತಿ ದಂಪತಿಗಳಿಗೂ ಆಧಾರವೆಂದು ವರ್ಣಿಸಿದೆ. ಒಬ್ಬ

ಚಂದ್ರನೇ ಸಾಗರದ ತೆರೆಗಳಲ್ಲಿ ಸಾವಿರ ಚಂದ್ರರಾಗುವಂತೆ, ಶಕ್ತಿಮಾತಾದೇವಿಯು ಸರ್ವಸ್ವರೂಪಳು. ಆದ್ಯಕಾಳಿಕಾ, ಮಹಾಯೋಗಿನಿಯೂ ಆಕೆಯೇ ಆಗಿದ್ದಾಳೆ. ಅವಳ ಎದುರಿನಲ್ಲಿ ಮಹಾಕಾಲನು ಮಧುಮತ್ತನಾಗಿ ಆನಂದದಿಂದ ತಾಂಡವ ಮಾಡುತ್ತಾನೆ. ಅಷ್ಟೇ ಅಲ್ಲ ಪ್ರಪಂಚದಲ್ಲಿರುವ ಸ್ತ್ರೀವರ್ಗವೆಲ್ಲವೂ ಆದಿಶಕ್ತಿದೇವಿಯ ಅಂಶಭೂತರು. ಈ ಉದಾತ್ತಭಾವವು ಅಲ್ಲಲ್ಲಿ ತಲೆದೋರಿದ ಕೀಳಾದ ಭಾವಗಳನ್ನು ಮೆಟ್ಟಿ, ಮೇಲೇರಿ, ಮೆರೆಯುತ್ತಿರುವುದನ್ನು ಗಮನಿಸಬೇಕು.

ಶಕ್ತೇಯಮತದಲ್ಲಿ ದೇವಿಯು ಎಲ್ಲರ ತಾಯಿಯಾಗಿದಾಳೆ. ಈ ಮತದ ಉಪದೇಶಗಳಲ್ಲಿ ಐದು ಅಂಶಗಳಿವೆ. ಈ ಪಂಚತತ್ವಗಳು ಮಾನವನ ಸತಾನುಭವದ ರೀತಿಗಳಾಗಿವೆ. ಇದರಿಂದ ಮಾನವನು ತನ್ನ ಪ್ರಾಣವನ್ನು ಕಾಪಾಡುತ್ತಾ ಸಂತತಿಯನ್ನು ಮುಂದುವರಿಯಿಸುತ್ತಾ ಆನಂದಾನುಭವಮಾಡುತ್ತಾನೆ. ೧. ಮದ್ಯ, ಮಾನವನ ಐಹಿಕದುಃಖಗಳನ್ನು ಮರೆಯಿಸಿ ಸಂತೋಷವನ್ನು ಕೊಡುವ ಔಷಧವಾಗಿರುತ್ತದೆ. ೨. ಮಾಂಸ, ವಿಶಾಲವಾತಾವರಣದಲ್ಲಿ ಬೆಳೆದ ಮೃಗಗಳ ಮಾಂಸ, ಬುದ್ಧಿಶಕ್ತಿ, ಕ್ರಿಯಾಶಕ್ತಿಗಳನ್ನು ಬೆಳೆಯಿಸುತ್ತದೆ. ೩. ಮತ್ಸ್ಯ, ಹಿತವೂ, ರುಚಿಕರವೂ ಆದ ಆಹಾರ, ಸೃಷ್ಟಿಶಕ್ತಿಯನ್ನು ಹೆಚ್ಚಿಸುವ ವಸ್ತುವೆಂದು ಹೇಳಿದೆ. ೪. ಮುದ್ರಾ, ಸುಲಭವಾಗಿ ಭೂಮಿಯಿಂದಲೂ ದೊರೆಯುವ, ಮೂರು ಲೋಕಗಳ ಪ್ರಾಣಿಗಳಿಗೆ ಪ್ರಾಣಾಧಾರವಾದುದಾಗಿದೆ. ೫. ಮೈಥುನ, ಎಲ್ಲ ಪ್ರಾಣಿಗಳ ಐಹಲೌಕಿಕವಾದ ಸುಖಗಳಲ್ಲಿ ಪರಮೋತ್ತಮ ಸುಖದ ಕಾರಣವಾಗಿದೆ. ಅಲ್ಲದೆ ಇದು ಸೃಷ್ಟಿಕಾರಣವಾಗಿದೆ, ಅನಾದ್ಯಂತ ಪ್ರಪಂಚಕ್ಕೇ ಕಾರಣವಾಗಿದೆ. ಆದರೆ ಇವನ್ನು ಸ್ವೇಚ್ಛೆಯಾಗಿ ಉಪಯೋಗಿಸಕೂಡದು. ಸದ್ಗುರುವಿನಿಂದ ಉಪದೇಶವನ್ನು ಪಡೆದು ದೀಕ್ಷಾನಿಯಮಗಳನ್ನು ಪಾಲಿಸುವವರ ಸಮಾಜದಲ್ಲಿ ಮಾತ್ರ ಶಾಕ್ತೇಯಚಕ್ರದಲ್ಲಿ ಮಾತ್ರ, ಪವಿತ್ರ ಮಂತ್ರಯಂತ್ರವ್ರತಗಳಿಂದ ಶುದ್ಧಿಯನ್ನು ಪಡೆದಮೇಲೆ ಮಾತ್ರ ಹಿತಮಿತವಾಗಿ ಉಪಯೋಗಿಸಬೇಕು. ಸ್ತ್ರೀಪುಂತತ್ವಗಳು ಅವಿನಾಭಾವದಿಂದ ಕೂಡಿವೆ. ಪ್ರತಿಯೊಂದು ವ್ಯಕ್ತಿಯಲ್ಲೂ ಬಲಭಾಗವು ಪುರುಷನದಾಗಿಯೂ ಎಡಭಾಗವು ಶಕ್ತಿಯದಾಗಿಯೂ ಇರುತ್ತದೆ. ಅರ್ಧನಾರೀಶ್ವರಭಾವವೇ ಇದಾಗಿದೆ. ಇದರ ಉಪಯೋಗದಲ್ಲಿ ಮಿತಿಮೀರಿದವರು ದೇವೀಭಕ್ತರಲ್ಲವು. ಈ ಸಂಪ್ರದಾಯದಲ್ಲಿ ಜಾತಿನಿಯಮವಿಲ್ಲವಾದರೂ ಸದ್ಗುರುವಿನಿಂದ ಉಪದೇಶವನ್ನು ಪಡೆದು ಸಿದ್ಧಿಯನ್ನು ಪಡೆದಿರುವವರ ಸಮಾಜಚಕ್ರದಲ್ಲಿ ಮಾತ್ರ, ಇದರ ಉಪಯೋಗವಿರಬೇಕು. ಪ್ರತಿಯೊಬ್ಬ ಗೃಹಸ್ಥನೂ ತನ್ನ ಧರ್ಮಪತ್ನಿಯಲ್ಲಿಯೇ ಶಕ್ತಿಯ ಆರಾಧನೆ

ಯಿಂದ ಆನಂದವನ್ನು ಪಡಬಹುದು. ಅವನಿಗೆ ಇಂದ್ರಿಯನಿಗ್ರಹವು ಅಸಾಧ್ಯವಾಗುವುದಾದರೆ ಹಾಲು, ಸಕ್ಕರೆ, ಜೇನು ಇವನ್ನು ಮಾತ್ರ ಸೇವಿಸಬೇಕು. ಮದ್ಯಮಾಂಸಗಳನ್ನು ಸೇವಿಸಕೂಡದು. ವೀರಸಾಧಕರಿಗೆ ಮಾತ್ರ ದಿವ್ಯಭಾವವನ್ನು ಸಾಕ್ಷಾತ್ಕರಿಸಿಕೊಂಡಿರುವ ಮಹಾತ್ಮರಿಗೆ ಮಾತ್ರ, ನಿಸ್ತ್ರೈಗುಣ್ಯಮಾರ್ಗದಲ್ಲಿ ಸಂಚರಿಸಬಲ್ಲ ಜ್ಞಾನವೈರಾಗ್ಯಶಾಲಿಗಳಿಗೆ ಮಾತ್ರ, ಈ ಪಂಚತತ್ತ್ವೋಪಯೋಗದಲ್ಲಿ ಸ್ವಾತಂತ್ರ್ಯವೂ ಸ್ವಾಚ್ಛಂದ್ಯವೂ ಇದ್ದು, ಪಾಪಕರವಾಗದೆ, ಉತ್ತಮಫಲಪ್ರದವಾಗುತ್ತದೆ ಎಂಬುದನ್ನು ಮರೆಯಬಾರದು. ಈ ಸಂಪ್ರದಾಯದಲ್ಲಿ ಕೌಲಮಾರ್ಗವೆಂದೂ, ಸಮಯಮಾರ್ಗವೆಂದೂ ಎರಡು ದಾರಿಗಳಿವೆ. ನೀತಿಜೀವನದಲ್ಲಿ ಮುಂದುವರಿದವರಿಗೆ ಸಮಯಮಾರ್ಗವು ಹಿತಕರವಾಗಿರುತ್ತದೆ. ಈ ಅಂಶವನ್ನು ದೇವೀಮಾಹಾತ್ಮ್ಯದಲ್ಲಿ ಅಲ್ಲಲ್ಲಿ ವಿವರಿಸಿರುತ್ತೇನೆ.

ಅವ್ಯಕ್ತನಾಮ್ನೀ ಪರಮೇಶಶಕ್ತಿಃ ಅನಾದ್ಯವಿದ್ಯಾ ತ್ರಿಗುಣಾತ್ಮಿಕಾ ಪರಾ ।
ಕಾರ್ಯಾನುಮೇಯಾ ಸುಧಿಯೈವ ಮಾಯಯಾ ಯಯಾ ಜಗತ್ಸರ್ವಮಿದಂ ಪ್ರಸೂಯತೇ ॥
ಮನೋ ಹಿ ಗಗನಾಕಾರಂ ಮನೋ ವೈ ಸರ್ವತೋ ಮುಖಂ ।
ಮನಶ್ಚ ನ ಮನೋಽತೀತಂ ಮನೋ ನ ಪರಮಾರ್ಥತಃ ॥

ಇಲ್ಲಿಗೆ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಆಗಮಗಳ ಸ್ವರೂಪನಿರ್ಣಯ ಎಂಬ ಎಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಅಶೀತಿತಮೋಽಧ್ಯಾಯಃ ॥

ಎಂಬತ್ತನೆಯ ಅಧ್ಯಾಯವು

ಏವಂ ಶ್ರುತ್ವಾ ಕಥಾಂ ರಾಮೋ ದತ್ತಾತ್ರೇಯ ನಿರೂಪಿತಾಂ ।
ಭೂಯಃ ಪ್ರಾಹ ಪ್ರಸನ್ನಾಽಽತ್ಮಾ ಪ್ರಣಮ್ಯ ರಚಿತಾಂಜಲಿಃ ॥೧॥

ಭಗವನ್ನಾಥ ಯಚ್ಛ್ರೋಕ್ತಂ ಶ್ರುತಂ ತದಮೃತೋಽಪಮಂ ।
ಅಭವಂ ಮುಕ್ತ ಸಂದೇಹಃ ಕಿಂಚಿತ್ಪೃಚ್ಛಾಮಿ ವೈ ಪುನಃ ॥೨॥

ಏವಂ ದೀಕ್ಷಾಂ ಸಮಾಸಾದ್ಯ ತ್ರಿಪುರಾಽಽರಾಧನೋದ್ಯತಃ ।
ಕುರ್ವನ್ನಿತ್ಯ ಕ್ರಿಯಾಂ ಕೇನ ವಿಶೇಷೇಣ ಹಿ ಕರ್ಮಣಾ ॥೩॥

ಈ ರೀತಿಯಾಗಿ ದತ್ತಾತ್ರೇಯನು ಹೇಳಿದ ಕಥೆಯನ್ನು ಪರಶುರಾಮನು ಕೇಳಿ ನಿರ್ಮಲವಾದ ಮನಸ್ಸುಳ್ಳವನಾಗಿ ಗುರುವಿಗೆ ನಮಸ್ಕರಿಸಿ ಪುನಃ ಈ ರೀತಿಯಲ್ಲಿ ಅವನನ್ನು ಕುರಿತು ಪ್ರಶ್ನಿಸಿದನು. ॥೧॥

ಓ ಪೂಜ್ಯಗುರುಗಳೇ, ಈಗ ತಾವು ಹೇಳಿದ ಕಥೆಯು ಅಮೃತಕ್ಕೆ ಸಮಾನವಾಗಿತ್ತು. ನನ್ನ ಸಂದೇಹವೆಲ್ಲವೂ ಪರಿಹಾರವಾಯಿತು. ಈಗ ಮತ್ತೊಂದು ವಿಷಯವನ್ನು ಪುನಃ ಕೇಳಬಯಸುತ್ತೇನೆ. ॥೨॥

ಈ ರೀತಿಯಾಗಿ ದೀಕ್ಷೆಯನ್ನು ವಹಿಸಿ ತ್ರಿಪುರಾದೇವಿಯ ಪೂಜೆಯಲ್ಲಿ ತೊಡಗಿದವನು ಯಾವ ವಿಶೇಷವಾದ ಕರ್ಮವನ್ನು ಪ್ರತಿದಿನದಲ್ಲಿಯೂ ಮಾಡುತ್ತಾ ಶೀಘ್ರವಾಗಿ ಸಿದ್ಧಿಯನ್ನು ಪಡೆಯುವನು ? ॥೩॥

ಶೀಘ್ರಂ ಮಹಾಫಲಂ ಪ್ರೇಯಾದ್ರಾಜಾ ಚಾಽಕಿಂಚನೋಽಪಿ ಚ ।
ತನ್ಮೇ ಸಮಾಚಕ್ಷ್ವ ಗುರೋ ಕೃಪಯಾ ಮಯಿ ಸೇವಕೇ ॥೪॥

ಇತಿ ದತ್ತಗುರುಃ ಪೃಷ್ಟಃ ಪ್ರಾಹ ತದ್ಭಕ್ತಿಹರ್ಷಿತಃ ।
ಶೃಣು ರಾಮ ಮಹಾಗುಹ್ಯಂ ತ್ರಿಪುರಾ ಪ್ರೀತಿಕಾರಕಂ ॥೫॥

ಶಿವೋ ಯಥಾಽಭಿಷೇಕೇನ ಪ್ರಣಾಮೈರ್ದಿನಕೃದ್ಯಥಾ ।
ನೈವೇದ್ಯೈಸ್ತು ಗಣೇಶಾನೋಽಲಂಕಾರಾದ್ಧರಿರೇವ ಚ ॥೬॥

ಪೂಜನೇನ ವಿಶೇಷೈಸ್ತು ವಿಧಿನಾ ಪ್ರೀಯತೇ ತಥಾ ।
ಪರಾಶಕ್ತಿರ್ಮಹೇಶಾನೀ ತತ್ರ ಸರ್ವೋತ್ತಮಂ ಶೃಣು ॥೭॥

ಪ್ರಾಸಾದಮುನ್ನತಂ ಚಿತ್ರಂ ನಿರ್ಮಾಯ ನಿಜಶಕ್ತಿತಃ ।
ತತ್ರ ಶ್ರೀ ಚಕ್ರರಾಜಂ ವಾ ಮೂರ್ತಿಂ ವಾಽಪಿ ಸುಲಕ್ಷಣಾಂ ॥೮॥

ರಾಜನಾಗಲೀ ಅಥವಾ ಬಹಳ ದರಿದ್ರನಾದವನು ಆಗಲೀ ಯಾವ ವಿಶೇಷ ಕರ್ಮವನ್ನು ಮಾಡಿದರೆ ಶೀಘ್ರದಲ್ಲಿಯೇ ಮಹಾಫಲವನ್ನು ಹೊಂದುವನು? ಎಂಬ ಪ್ರಶ್ನೆಗೆ ಉತ್ತರವನ್ನು ದಯವಿಟ್ಟು ತಮ್ಮ ಸೇವಕನಾದ ನನಗೆ ತಿಳಿಸಬೇಕು. ॥೪॥

ಈ ರೀತಿಯಾಗಿ ಪರಶುರಾಮನು ದತ್ತಾತ್ರೇಯ ಗುರುವನ್ನು ಪ್ರಶ್ನೆ ಮಾಡಲಾಗಿ ಆತನು ಅವನ ಭಕ್ತಿವಿಶೇಷಗಳಿಗೆ ಮೆಚ್ಚಿ ವಿಶೇಷವಾಗಿ ಸಂತೋಷ ಪಟ್ಟು, ಎಲೈ ಪರಶುರಾಮನೇ, ತ್ರಿಪುರಾದೇವಿಯ ಪ್ರೀತಿಯನ್ನುಗಳಿಸುವ ಮಹಾ ರಹಸ್ಯವಾದ ಈ ವಿಷಯವನ್ನು ಹೇಳುವೆನು. ಕೇಳು. ಎಂದನು. ॥೫॥

ಅಭಿಷೇಕವನ್ನು ಮಾಡಿದರೆ ಶಿವನು ಹೇಗೆ ತೃಪ್ತನಾಗುತ್ತಾನೋ, ನಮಸ್ಕಾರ ಮಾಡಿದರೆ ಸೂರ್ಯನು ಹೇಗೆ ಸಂತೋಷಪಡುತ್ತಾನೋ, ನೈವೇದ್ಯದಿಂದ ಗಣೇಶ್ವರನು ಹೇಗೋ, ಅಲಂಕಾರಗಳಿಂದ ವಿಷ್ಣುವು ಹೇಗೋ, ಹಾಗೆಯೇ ಭಕ್ತರು ಮಾಡುವ ಪೂಜೆಯಿಂದ ತ್ರಿಪುರಾದೇವಿಯು ಬಹಳವಾಗಿ ಸಂತೋಷಪಡುವಳು. ॥೬॥

ಶಾಸ್ತ್ರೋಕ್ತವಾದ ವಿಶೇಷವಾದ ಪೂಜೆಗಳಿಂದ ಪರಾಶಕ್ತಿಸ್ವರೂಪಳಾದ ಮಹೇಶ್ವರಿಯು ಅತ್ಯಂತನಾಗಿ ಆನಂದಪಡುವಳು. ಈ ಸರ್ವಶ್ರೇಷ್ಠ ವಿಷಯವನ್ನೇ ಹೇಳುವೆನು ಕೇಳು. ॥೭॥

ಈಕೆಯ ಭಕ್ತನು ತನ್ನ ಶಕ್ತಿಗನುಸಾರವಾಗಿ ಎತ್ತರವಾದ ಮತ್ತು ಮನೋ

ಸಂಸ್ಥಾಪ್ಯ ವಿಧಿನಾ ತತ್ರ ಸ್ವಯಂ ವಾಽನ್ಯೇನ ವಾಽಸ್ವಹಂ ।
ಪೂಜಯೇತ್ಪಂಚಕಾಲಂ ವಾ ಚತುಸ್ತ್ರಿದ್ವ್ಯೇಕ ಕಾಲಕಂ ॥೯॥

ಉಷಃ ಪ್ರಾತರ್ಮಧ್ಯ ದಿನೇ ಪ್ರದೋಷೇ ಚಾರ್ಧಯಾಮಕೇ ।
ನಿತ್ಯಂ ವಾ ದ್ವಿತ್ರ್ಯೇಕಕಾಲಂ ಪಂಚಕಾಲಂ ಚ ಪರ್ವಸು ॥೧೦॥

ಉತ್ಸವೋಽಪಿ ಪ್ರಕರ್ತವ್ಯೋ ಮಹಾಪರ್ವಸು ಸರ್ವಥಾ ।
ರಥೇನ ವಾಹನೈರ್ಯಾನೈ ರುತ್ಸವ ಪ್ರತಿಮಾಂ ಬಹಿಃ ॥೧೧॥

ಪರಿಕ್ರಾಮ್ಯಾಽಽಗಮೋಕ್ತೇನ ನೃತ್ಯಮಂಗಲಗಾಯನೈಃ ।
ಏವಂ ಯಃ ಕುರುತೇ ಲೋಕೇ ಸ ವಸೇಚ್ಛ್ರೀಪುರಾಂತರೇ ॥೧೨॥

ಹರವಾದ ಉಪ್ಪರಿಗೆಯನ್ನು ಮಾಡಿಸಿ ಅಲ್ಲಿ ಶ್ರೀ ಚಕ್ರರಾಜವೆಂಬ ಶ್ರೀಚಕ್ರವನ್ನು ಸ್ಥಾಪಿಸಬೇಕು. ॥೮॥

ಅಲ್ಲಿ ಶಾಸ್ತ್ರೋಕ್ತಕ್ರಮದಲ್ಲಿ ಭಕ್ತನು ತಾನಾಗಲೀ ತನ್ನ ಪರವಾಗಿ ಮತ್ತೊಬ್ಬರಿಂದಲಾಗಲೀ ದೇವಿಯ ಮೂರ್ತಿಯನ್ನು ಸ್ಥಾಪಿಸಿ ಪ್ರತಿನಿತ್ಯದಲ್ಲಿಯೂ, ಐದುಸಲ ದೇವಿಯನ್ನು ಪೂಜಿಸಬೇಕು. ॥೯॥

ಭಕ್ತನು ಉಷಃಕಾಲದಲ್ಲಿ ಅಥವಾ ಪ್ರಾತಃಕಾಲದಲ್ಲಿ ಮಧ್ಯಾಹ್ನಕಾಲದಲ್ಲಿ ಅಥವಾ ಪ್ರದೋಷಕಾಲದಲ್ಲಿ ಅಥವಾ ಅರ್ಧರಾತ್ರಿಜಾವದಕಾಲದಲ್ಲಿ ದೇವಿಯ ಉತ್ಸವವನ್ನು ನಡೆಸಬೇಕು. ದೇವಿಯ ಭಕ್ತನು ಪ್ರತಿನಿತ್ಯದಲ್ಲಿಯೂ ಎರಡು ಮೂರು ಹೊತ್ತು, ಪರ್ವಕಾಲಗಳಲ್ಲಿ ಐದಾವೃತ್ತಿ, ದೇವಿಯ ಮೂರ್ತಿಯ ಉತ್ಸವವನ್ನು ನಡೆಸಬೇಕು. ॥೧೦॥

ಭಕ್ತನು ಮಹಾಪರ್ವಕಾಲಗಳಲ್ಲಿ ಸರ್ವವಿಧದಲ್ಲೂ ದೇವಿಯ ಉತ್ಸವವನ್ನು ನಡೆಸಬೇಕು. ಮಾನವನು ರಥದಲ್ಲಿ, ವಾಹನಗಳ ಮೂಲಕ ಅಥವಾ ಇನ್ನಾವ ವಿಧವಾದ ರಥಗಳ ಮೂಲಕ ಉತ್ಸವಕ್ಕೆ ಯೋಗ್ಯವಾದ ದೇವಿಯ ಮೂರ್ತಿಯನ್ನು ಇಡಿಸಿ ಹೊರಗಡೆಯಲ್ಲಿ ಉತ್ಸವವನ್ನು ನಡೆಸಬೇಕು. ॥೧೧॥

ಈರೀತಿಯಾಗಿ ಉತ್ಸವವನ್ನು ನಡೆಸಲು ಭಕ್ತನು ಹೊರಟು ಶಾಸ್ತ್ರೋಕ್ತ ಕ್ರಮದಲ್ಲಿ ನರ್ತನ ಮಂಗಳವಾದ್ಯಗಳು ಸಂಗೀತ ಇವುಗಳನ್ನು ನಡೆಸುತ್ತಾ ಉತ್ಸವವನ್ನು ನಡೆಸಬೇಕು. ಈರೀತಿಯಾಗಿ ಮಾಡುವ ಮನುಷ್ಯನು ಶ್ರೀಪುರವೆಂಬ ದೇವಿಯ ಪಟ್ಟಣವನ್ನೇ ಹೊಂದಿ ಅಲ್ಲಿ ಸುಖವಾಗಿ ವಾಸಿಸುವನು. ॥೧೨॥

ನೀಲವಪ್ರಾಂತರಾಲೇಷು ಸರ್ವಭೋಗೋಪಸಂಭೃತಃ ।
ಅಸಮರ್ಥೋಽನ್ಯ ವಿಹಿತೇ ಸ್ಥಾಪಯೇಚ್ಚಕ್ರನಾಯಕಂ ॥೧೩॥

ಚಕ್ರಸ್ಥಾಪನ ತುಲ್ಯಂ ನೋ ವಿದ್ಯತೇ ತ್ರಿಪುರಾಪ್ರಿಯಂ ।
ನ ತಸ್ಯ ಪುನರಾವೃತ್ತಿಃ ಸಾಯುಜ್ಯಂ ವಿಂದತೇ ಕ್ರಮಾತ್ ॥೧೪॥

ಶ್ರಿಚಕ್ರಸ್ಥಾಪನಾದೇವ ಫಲಾಽನಂತ್ಯಂ ಸಮೀರಿತಂ ।
ಯತ್ರ ಸ್ಯಾತ್ ಸ್ಥಾವರಂ ಯಂತ್ರಂ ನಿವಸಂಸ್ತತ್ಸಮೀಪತಃ ॥೧೫॥

ಉಪಾಸಕೋ ಹೇಮಮಯೇ ವಪ್ರೇ ನಿವಸತಿ ಧ್ರುವಂ ।
ಉಪಾಸಕಸ್ತು ಜಾನೀಯಾತ್ ತತ್ಕ್ಷೇತ್ರಂ ಸರ್ವತೋಽಧಿಕಂ॥೧೬॥

ಹೀಗೆ ಮಾಡಲು ಸಮರ್ಥನಲ್ಲದ ಮನುಷ್ಯನು ಕಪ್ಪಗಿರುವ ಕೋಟೆಯೊಳಗಡೇ ಆವರಣದಲ್ಲಿ ಎಲ್ಲಾ ಪೂಜಾಸಾಮಗ್ರಿಗಳನ್ನೂ ಪೂರ್ಣವಾಗಿ ತಂದು ಅಥವಾ ಇನ್ನೊಬ್ಬರು ದೇವಿಯ ಮೂರ್ತಿಯನ್ನು ಸ್ಥಾಪಿಸಿರುವ ಕಡೆಗೆ ಹೋಗಿ, ಇವನು ಶ್ರೇಷ್ಠವಾದ ಚಕ್ರವನ್ನು ಸ್ಥಾಪಿಸಬೇಕು. ||೧೩||

ದೇವಿಗೆ ಸಂಬಂಧಪಟ್ಟ ಚಕ್ರವನ್ನು ಸ್ಥಾಪಿಸುವುದಕ್ಕಿಂತ ತ್ರಿಪುರಾದೇವಿಗೆ ಪ್ರಿಯವಾದ ಧರ್ಮವು ಮತ್ತೊಂದಿಲ್ಲ. ಹೀಗೆ ಚಕ್ರವನ್ನು ಸ್ಥಾಪಿಸುವ ಮನುಷ್ಯನು ಪುನಃ ಜನ್ಮಕ್ಕೆ ಹಿಂತಿರುಗದ, ದೇವಿಯಲ್ಲಿ ಐಕ್ಯವೆಂಬ, ಮೋಕ್ಷವನ್ನೇ ಕ್ರಮವಾಗಿ ಪಡೆಯುವನು. ||೧೪||

ದೇವಿಯ ಶ್ರೀಚಕ್ರವನ್ನು ಸ್ಥಾಪಿಸಿದರೆ ಲೆಕ್ಕವಿಲ್ಲದಷ್ಟು ಫಲವು ಬರುವುದೆಂದು ಹೇಳಿದ್ದಾರೆ. ಚಲಿಸದೇಇರುವ ದೇವಿಯಚಕ್ರಯಂತ್ರದ ಸಮೀಪದಲ್ಲಿ ಭಕ್ತನು ವಾಸಮಾಡಬೇಕು. ಇದರಿಂದ ||೧೫||

ದೇವಿಯ ಉಪಾಸಕನಾದ ಮನುಷ್ಯನು ಚಿನ್ನದಿಂದ ಮಾಡಿದ ಕೋಟೆಯೊಳಗೆ ಯಾವಾಗಲೂ ಮೇರುಪರ್ವತದಲ್ಲಿ ಶ್ರೀತ್ರಿಪುರಾಸ್ಥಾನದಲ್ಲಿ ನೆಲೆಸುವನು. ಉಪಾಸಕನು ಆ ಕ್ಷೇತ್ರವು ಅತ್ಯಂತ ಶ್ರೇಷ್ಠವೆಂಬುದಾಗಿ ತಿಳಿಯಬೇಕು. ||೧೬||

ತತ್ರಾಪ್ಯಶಕ್ತೋ ವಿಭವಾನುರೋಧಾಚ್ಛುಭ ಪರ್ವಸು ।
ಪೂಜಯೇತ್ಸ್ಥಾವರಂ ಚಕ್ರಂ ಮೂರ್ತಿಂ ವಾ ಭಕ್ತಿಪೂರ್ವಕಂ॥೧೭॥

ಚರಯಂತ್ರಾದಿ ಪೂಜಾಯಾಃ ಸ್ಥಿರಯಂತ್ರಾದಿಪೂಜನಾ ।
ಫಲಂ ಸಮಾವಹೇತ್ ಲಕ್ಷಗುಣಂ ರಾಮ ನ ಸಂಶಯಃ ॥೧೮॥

ಯಂತ್ರೇ ಸಾವೃತಿಮಂಬಾಂ ತು ವಿಧಾನೇನ ಪ್ರಪೂಜಯೇತ್ ।
ತತ್ತತ್ಸ್ಥಾನೇ ಭಾವಯನ್ ವೈ ಮಹಾಫಲ ಸಮಾಪ್ತಯೇ ॥೧೯॥

ಯಥಾ ಸೂರ್ಯಸ್ಯ ಕಿರಣಾಃ ಸರ್ವತಃ ಸಮವಸ್ಥಿತಾಃ ।
ಸೂರ್ಯಾತ್ಮಭೂತಾ ಸ್ತಸ್ಯಾಂಶಾಃ ಸರ್ವಲೋಕಪ್ರಸಾದಕಾಃ ॥೨೦॥

ಶೀತಾಂಧಕಾರರೋಗಾದಿ ನಾಶಕಾಃ ಪ್ರಾಣಿನ ಸ್ತಥಾ ।
ತ್ರಿಪುರಾಯಾಃ ಪರಾಶಕ್ತೇಃ ಪರಿವಾರಾಖ್ಯದೇವತಾಃ ॥೨೧॥

ಹೀಗೆ ಮಾಡಲೂ ಸಮರ್ಥನಾಗದ ಮನುಷ್ಯನು ತನ್ನ ಶಕ್ತಿಗೆ ಅನುಸಾರವಾಗಿ ಮಂಗಳಕರವಾದ ಪರ್ವಕಾಲಗಳಲ್ಲಿ ಭಕ್ತಿಪೂರ್ವಕವಾಗಿ ದೇವಿಗೆ ಸಂಬಂಧಪಟ್ಟ ಸ್ಥಿರವಾದ ಚಕ್ರ ಅಥವಾ ಮೂರ್ತಿಯನ್ನು ಸ್ಥಾಪಿಸಿ ಪೂಜಿಸಬೇಕು. ॥೧೭॥

ದೇವಿಗೆ ಸಂಬಂಧಪಟ್ಟ ಚಲಿಸುವ ಯಂತ್ರವನ್ನು ಪೂಜಿಸುವುದಕ್ಕಿಂತ ಸ್ಥಿರವಾದ ಯಂತ್ರವನ್ನು ಪೂಜಿಸುವುದು ಅದಕ್ಕೆ ಲಕ್ಷದಷ್ಟು ಮೇಲಾಗಿ ಫಲವನ್ನು ಕೊಡುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ತಿಳಿ. ॥೧೮॥

ಭಕ್ತನು ಯಂತ್ರದೊಳಗೆ ಲೋಕಮಾತೆಯಾದ ದೇವಿಯ ಪ್ರತಿಮೆಯನ್ನು ಅವರಣದೊಳಗಿಟ್ಟು ಶಾಸ್ತ್ರೋಕ್ತಕ್ರಮದಲ್ಲಿ ಚೆನ್ನಾಗಿ ಪೂಜಿಸಬೇಕು. ಶಾಸ್ತ್ರೋಕ್ತವಾದ ಆಯಾಯಾ ಸ್ಥಾನಗಳಲ್ಲಿ ದೇವಿಯನ್ನು ಭಾವಿಸುತ್ತಾ ಭಕ್ತನು ಮಹಾಫಲವನ್ನು ಪಡೆಯುವುದಕ್ಕೋಸ್ಕರ ಆಕೆಯನ್ನು ಪೂಜಿಸಬೇಕು. ॥೧೯॥

ಸೂರ್ಯನ ಕಿರಣಗಳು ಎಲ್ಲಾ ಕಡೆಯಲ್ಲಿಯೂ ಬಿದ್ದು ಸೂರ್ಯನ ಸ್ವರೂಪದ ಅಂಶಗಳೇ ಆದ ಆ ಕಿರಣಗಳು ಹೇಗೆ ಎಲ್ಲಾ ಲೋಕಗಳನ್ನೂ ಬೆಳಗುತ್ತವೆಯೋ ಹಾಗೆ ದೇವಿಯ ಪರಿವಾರ ಶಕ್ತಿಗಳೂ ಎಲ್ಲಾ ಕಡೆಯಲ್ಲಿಯೂ ಇದ್ದು ಸಕಲ ಲೋಕಗಳಲ್ಲಿ ಭಕ್ತರ ಇಷ್ಟಗಳನ್ನೂ ನೆರವೇರಿಸುತ್ತಾರೆ. ॥೨೦॥

ಸೂರ್ಯಕಿರಣಗಳು ಲೋಕಗಳ ಶೀತ, ಕತ್ತಲು ರೋಗ ಮುಂತಾದುವನ್ನು

ಲೋಕವಾಂಛಾರ್ಥದಾನಾಯ ನಿಯುಕ್ತಾಸ್ತು ತಯೈವ ತಾಃ ।
ತಸ್ಯಾಂಶಭೂತಾಃ ಸರ್ವಾ ವೈ ತಸ್ಮಾತ್ ಪೂಜ್ಯಾ ಯಥಾವಿಧಿ ॥೨೨॥

ಕಿರಣಾನಾಂ ಪಿಂಡಮಯೋ ಯಥಾ ಸೂರ್ಯೋ ನಭಃಸ್ಥಿತಃ ।
ತಥೈವಾಽಽವೃತಿಶಕ್ತೀನಾ ಮೈಕ್ಯಾತ್ಮಾ ತ್ರಿಪುರಾ ಮತಾ ॥೨೩॥

ಬಿಂದುಚಕ್ರೇ ಸಮಾಸೀನಾ ದೇವದೇವ ಮಹೇಶ್ವರೀ ।
ಅಶಕ್ತಃ ಪೂಜಯೇದ್ಭಕ್ತ್ಯಾ ಯಥಾಮತಿ ಯಥಾಕ್ರಮಂ ॥೨೪॥

ಪರಿವಾರಪಿಂಡಮಯೀಂ ಸಾಮಾನ್ಯೈರ್ದ್ರವ್ಯವೈಭವೈಃ ।
ಯಥಾ ಕಥಂಚಿದ್ವಾ ಪೂಜ್ಯಾ ಸ್ಥಾವರೇ ಪರಮೇಶ್ವರೀ ॥೨೫॥

ಹೇಗೆ ನಾಶಮಾಡುತ್ತವೋ ಹಾಗೆ ತ್ರಿಪುರಾರೂಪಳಾದ ಪರಾಶಕ್ತಿಯ ಪರಿವಾರ ರೂಪರಾದ ಶಕ್ತಿಗಳು ಅಲ್ಲೆಲ್ಲಾ ಇದ್ದು ಪ್ರಾಣಿಗಳ ಕಷ್ಟಗಳನ್ನು ನೀಗುತ್ತಾರೆ. ||೨೧||

ತ್ರಿಪುರಾದೇವಿಯೇ ಲೋಕದಲ್ಲಿ ಇಷ್ಟಾರ್ಥಗಳನ್ನು ನೆರವೇರಿಸುವುದಕ್ಕಾಗಿ ಆ ಪರಿವಾರದ ಶಕ್ತಿಗಳನ್ನು ನಿಯಮಿಸಿದ್ದಾಳೆ. ಅವರೆಲ್ಲರೂ ಆಕೆಯ ಅಂಶ ಸ್ವರೂಪರೇ ಆಗಿದ್ದಾರೆ. ಆದ್ದರಿಂದ ಭಕ್ತನು ಅವರನ್ನೂ ಶಾಸ್ತ್ರೋಕ್ತ ಕ್ರಮದಲ್ಲಿ ಆರಾಧಿಸಬೇಕು. ||೨೨||

ಸೂರ್ಯನು ಕಿರಣಗಳ ಸ್ವರೂಪನಾಗಿ ಆಕಾಶದಲ್ಲಿ ಹೇಗಿದ್ದಾನೋ ಹಾಗೆ ಆವರಣ ಶಕ್ತಿಗಳ ಸಮೂಹಗಳ ಸ್ವರೂಪಳೂ ಆಗಿ ತ್ರಿಪುರಾದೇವಿಯೇ ಇದ್ದಾಳೆಂದು ತಿಳಿಯಬೇಕು. ||೨೩||

ದೇವಾಧಿದೇವತೆಗಳಿಗೂ ಮಹೇಶ್ವರಿಯಾದ ತ್ರಿಪುರಾದೇವಿಯು ಬಿಂದು ಚಕ್ರದಲ್ಲಿ ಮಂಡಿಸಿರುತ್ತಾಳೆ. ಆದ್ದರಿಂದ ವಿಶೇಷವಾದ ವೈಭವದಿಂದ ಆಕೆಯನ್ನು ಪೂಜಿಸಲು ಅಶಕ್ತನಾದ ಮನುಷ್ಯನು ತನ್ನ ಬುದ್ಧಿಗೆ ತೋಚಿದಂತೆ ಶಾಸ್ತ್ರೋಕ್ತ ಕ್ರಮದಲ್ಲಿ ಆಕೆಯನ್ನು ಭಕ್ತಿಯಿಂದ ಅಲ್ಲಿ ಪೂಜಿಸಬೇಕು. ||೨೪||

ಪರಿವಾರ ಶಕ್ತಿಗಳ ಸಮೂಹಸ್ವರೂಪಳಾದ, ಲೋಕಕ್ಕೆ ಪರಮೇಶ್ವರಿಯಾದ ದೇವಿಯನ್ನು ಭಕ್ತನು ಸಾಮಾನ್ಯವಾದ ಸಾಮಗ್ರಿಗಳನ್ನು ಪರಿಷ್ಕಾರಗೊಳಿಸಿ ಸ್ಥಿರವಾದ ಚಕ್ರದಲ್ಲಿ ಯಾವ ವಿಧದಲ್ಲಾದರೂ ಪೂಜಿಸಬಹುದು. ||೨೫||

ಯಸ್ತು ಪ್ರಾಪ್ಯ ಸ್ಥಾವರಂ ತು ಚಕ್ರಾಽಽದ್ಯಂ ನ ಪ್ರಪೂಜಯೇತ್ ।
ತಮಾತ್ಮಘ್ನಂ ವಿಜಾನೀಯಾತ್ ಸರ್ವಲೋಕ ವಿನಿಂದಿತಂ ॥೨೬॥

ಅಶಕ್ತೋ ಗಂಧಕುಸುಮ ಫಲಾಽಽಕ್ಷತ ಜಲೈಸ್ತಥಾ ।
ದಕ್ಷಿಣಾ ತಾಂಬೂಲದೀಪ ಪ್ರಮಾಣ ಪರಿವರ್ತನೈಃ ॥೨೭॥

ಸರ್ವೈರೇಕ ದ್ವ್ಯಾದಿಭಿರ್ವಾ ಶಕ್ತ್ಯಾ ತಾಂ ತತ್ರ ಪೂಜಯೇತ್ ।
ಸಹಸ್ರಾಽಽದ್ಯೈರ್ನಾಮಭಿಸ್ತು ಯಶ್ಚಕ್ರಾಽಽದೌ ಪ್ರಪೂಜಯೇತ್॥೨೮॥

ಸಕೃತ್ಸಂಪೂಜ್ಯ ಚ ನರೋ ನಾರೀ ವಾ ಸರ್ವಪಾತಕೈಃ ।
ಮುಚ್ಯತೇ ನಾಽಸ್ತಿ ಸಂದೇಹ ಇತ್ಯಾಹ ಭಗವಾನ್ ಶಿವಃ ॥೨೯॥

ಯಾವ ಭಕ್ತನು ಸ್ಥಿರವಾದ ಆಕೆಯ ಚಕ್ರವೇ ಮೊದಲಾದುವನ್ನು ಪೂಜಿಸದೇ ಇರುವನೋ ಅಂಥವನು ಎಲ್ಲಾ ಲೋಕಗಳನಿಂದೆಗೂ ಅರ್ಹನಾಗಿ, ಆತ್ಮನಾಶವನ್ನು ಮಾಡಿಕೊಂಡ ಮಾನವನೆಂದು ತಿಳಿಯಬೇಕು. ॥೨೬॥

ಗಂಧಹುವ್ವುಗಳು ಅಕ್ಷತೆ ಮತ್ತು ಶುದ್ಧವಾದ ನೀರು ದಕ್ಷಿಣೆ ತಾಂಬೂಲ, ದೀಪ ಪ್ರದಕ್ಷಿಣೆ ಇವುಗಳೆಲ್ಲದರಿಂದಲಾಗಲೀ ಒಂದೊಂದರಿಂದಲಾಗಲಿ ಭಕ್ತನು ದೇವಿಯನ್ನು ಆರಾಧಿಸಬೇಕು. ॥೨೭॥

ಮೇಲೆ ಹೇಳಿದ ಎಲ್ಲಾ ಸಾಮಗ್ರಿಗಳಿಂದಲಾಗಲೀ ಅಥವಾ ಒಂದು ಎರಡು ಸಾಮಗ್ರಿಗಳಿಂದಲಾಗಲೀ, ಭಕ್ತನು ತನ್ನ ಶಕ್ತಿಗೆ ಅನುಸಾರವಾಗಿ ಆಕೆಯನ್ನು ಪೂಜಿಸಬಹುದು. ಭಕ್ತನು ಆಕೆಯ ಸಹಸ್ರನಾಮಗಳಿಂದಲೂ ಆಕೆಯನ್ನು ಪೂಜಿಸಬಹುದು ॥೨೮॥

ಗಂಡಸಾಗಲಿ ಅಥವಾ ಹೆಂಗಸಾಗಲಿ ದೇವಿಯ ಸಹಸ್ರನಾಮಗಳಿಂದ ಆಕೆಯನ್ನು ಪೂಜಿಸಿದರೆ ಅವರು ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ. ಎಂದು ಪೂಜ್ಯನಾದ ಶಿವನೇ ಹೇಳಿದ್ದಾನೆ. ॥೨೯॥

ಅಥ ಲಕ್ಷಪ್ರಪೂಜಾಽಽದಿ ವಿಧಾನಂ ಶೃಣು ವಚ್ಮಿ ತೇ ।
ವಿಶೇಷಪರ್ವಸು ತಥಾ ಶುಕ್ರವಾರೇಽಪಿ ವಾಽಽರಭೇತ್ ॥೩೦॥

ಸಂಕಲ್ಪ್ಯ ಪೂಜ್ಯ ಗಣಪಂ ಸ್ವಸ್ತಿಂ ವಿಪ್ರೈರ್ಹಿ ವಾಚಯೇತ್ ।
ತತಃ ಸಂಪೂಜ್ಯ ವಿಧಿನಾ ಚಾಽಽವೃತ್ಯಂ ತಂ ಮಹೇಶ್ವರೀಂ ॥೩೧॥

ಪೂಜಯೇತ್ಸಾಽಽವೃತಿಂ ದೇವೀ ಮುಪಚಾರೈಸ್ತು ಪಂಚಭಿಃ ।
ತತ್ರ ಪುಷ್ಪೋಪಚಾರಸ್ಯ ಸ್ಥಾನೇ ಪೂಜಾಂ ಸಮಾಚರೇತ್ ॥೩೨॥

ಸಹಸ್ರಾಽಽದ್ಯೈರ್ನಾಮಭಿಸ್ತು ತತೋ ಧೂಪಾಽಽದಿಪೂಜನಂ ।
ಸಮಾಪಯೇದ್ಯಥಾವತ್ತು ಪ್ರತ್ಯಹಂ ಚೈವ ಮರ್ಚಯೇತ್ ॥೩೩॥

ಸಮಸಂಖ್ಯಾ ವಿಧಾನೇನ ಪ್ರತ್ಯಹಂ ಪೂಜಯೇತ್ಕ್ರಮಾತ್ ।
ಏಕಜಾತೀಯಕೈಃ ಪುಷ್ಪೈಃ ಯತ್ರೈವ ಪೂಜಯೇತ್ಪರಾಂ ॥೩೪॥

ಅನಂತರದಲ್ಲಿ ದೇವಿಯ ಲಕ್ಷನಾಮಗಳಿಂದ ಪೂಜೆ ಮುಂತಾದ ವಿಷಯಗಳನ್ನು ಹೇಳುವೆನು. ಕೇಳು. ಈ ವಿಧವಾದ ಪೂಜೆಯನ್ನು ಭಕ್ತನು ವಿಶೇಷವಾದ ಪರ್ವಕಾಲಗಳಲ್ಲಿ ಅಥವಾ ಶುಕ್ರವಾರಗಳಲ್ಲಿ ಪ್ರಾರಂಭಿಸಬೇಕು. ॥೩೦॥

ಭಕ್ತನು ಮೊದಲು ದೇವಿಯ ಪೂಜೆಗಾಗಿ ಸಂಕಲ್ಪವನ್ನು ಮಾಡಿ ಗಣಪತಿಯನ್ನು ಪೂಜಿಸಿ, ಬ್ರಾಹ್ಮಣರಿಂದ ಸ್ವಸ್ತಿವಾಚನವೆಂಬ ವೇದಘೋಷವನ್ನು ಮಾಡಿಸಬೇಕು. ಅನಂತರ ಭಕ್ತನು ಮಹೇಶ್ವರಿಯಾದ ದೇವಿಯನ್ನೂ ಆವರಣಶಕ್ತಿಗಳನ್ನೂ ಶಾಸ್ತ್ರೋಕ್ತ ಕ್ರಮದಲ್ಲಿ ಚೆನ್ನಾಗಿ ಪೂಜಿಸಬೇಕು. ॥೩೧॥

ಭಕ್ತನು ತ್ರಿಪುರಾದೇವಿಯನ್ನು ಆಕೆಯ ಆವರಣ ಶಕ್ತಿಗಳೊಂದಿಗೆ ಐದು ವಿಧವಾದ ಉಪಚಾರದ್ರವ್ಯಗಳಿಂದ ಪೂಜಿಸಬೇಕು. ಅಲ್ಲಿ ಪುಷ್ಪೋಪಚಾರಸ್ಥಾನದಲ್ಲಿ ಪೂಜೆಯನ್ನು ನಡೆಸಬೇಕು. ॥೩೨॥

ಅನಂತರ ಭಕ್ತನು ಸಹಸ್ರನಾಮವೇ ಮುಂತಾದುದರಿಂದ ದೇವಿಯನ್ನು ಪೂಜಿಸಿ ಧೂಪವೇ ಮುಂತಾದುದರಿಂದ ಆರಾಧಿಸಬೇಕು. ಪ್ರತಿದಿನವೂ ಈರೀತಿಯಲ್ಲಿಯೇ ದೇವಿಯನ್ನು ಪೂಜಿಸಬೇಕು. ॥೩೩॥

ಭಕ್ತನು ಕ್ರಮವಾದ ಸಮವಾದ ಲೆಕ್ಕದಲ್ಲಿಯೇ ಪ್ರತಿನಿತ್ಯವೂ ದೇವಿಯ ನಾಮಗಳನ್ನು ಪಠಿಸುತ್ತಾ ಆಕೆಯನ್ನು ಕ್ರಮವಾಗಿ ಆರಾಧಿಸಬೇಕು. ಶ್ರೇಷ್ಠ

ಸ್ವಯಂ ವಾ ಪುತ್ರಪೌತ್ರಾಽಽದ್ಯೈಃ ಬ್ರಾಹ್ಮಣದ್ವಾರತೋಽಪಿ ವಾ ।
ಅಂತೇ ತು ಸರ್ವತೋ ಭದ್ರೇ ನವಯೋನಿ ಸಮಾಯುತೇ ॥೩೫॥

ಕಲಶಂ ಸುಪ್ರತಿಷ್ಠಾಪ್ಯ ಸೌವರ್ಣಾಽಽದಿ ಸಮುದ್ಭವಂ ।
ಅಲಂಕೃತಂ ಸೂತ್ರವಸ್ತ್ರೈರ್ಮಧ್ಯೇ ತಂಡುಲಪುಂಜಕೇ ॥೩೬॥

ಅಲಂಕೃತಂ ಧೂಪಿತಂ ಚ ನಿಧಾಯ ಮನುಮುಚ್ಚರನ್ ।
ತಮಷ್ಟಗಂಧತೋಯೇನ ಪೂರಯೇತ್ಪಂಚರತ್ನಕಂ ॥೩೭॥

ನಿಕ್ಷಿಪ್ಯ ತಸ್ಮಿನ್ ತದ್ವತ್ ಕ್ರಮಾದಾಚ್ಛಾದ್ಯ ಪಂಚಪಲ್ಲವೈಃ ।
ಸತಂಡುಲಂ ಫಲಂಪೂರ್ಣಂ ಪಾತ್ರಂ ಚಾಽಪಿ ಮುಖೇ ನ್ಯಸೇತ್॥೩೮॥

ಮಾತೆಯಾದ ದೇವಿಯನ್ನು ಒಂದೇವಿಧವಾದ ಹುವ್ವುಗಳನ್ನು ಪ್ರತಿದಿನವೂ ಉಪಯೋಗಿಸುತ್ತಾ ಪೂಜಿಸಬೇಕು. ॥೩೪॥

ಭಕ್ತನು ತಾನೊಬ್ಬನೇ ಆಗಲಿ, ಮಕ್ಕಳು, ಪತ್ನೀ ಮುಂತಾದವರ ಜೊತೆಯುಲ್ಲಾಗಲಿ ಬ್ರಾಹ್ಮಣರ ಮೂಲಕವಾಗಿಯಾಗಲಿ, ದೇವಿಯನ್ನು ಪೂಜಿಸಬೇಕು. ಕೊನೆಯಲ್ಲಿ ಒಂಬತ್ತುವಿಧವಾದ ಕೋಣಗಳಿಂದ ಕೂಡಿರುವ ಎಲ್ಲಾ ಕಡೆಯಲ್ಲಿಯೂ ಮಂಗಳಮಯವಾದ ಪ್ರದೇಶದಲ್ಲಿ ಕಲಶವನ್ನು ಸ್ಥಾಪಿಸಬೇಕು. ॥೩೫॥

ಚಿನ್ನವೇ ಮುಂತಾದ ಶ್ರೇಷ್ಠವಾದ ಲೋಹಗಳಿಂದ ಮಾಡಿದ ಕಲಶವನ್ನು ಪ್ರತಿಷ್ಠೆಮಾಡಿ ಅದಕ್ಕೆ ದಾರ ಮತ್ತು ವಸ್ತ್ರಗಳನ್ನು ಕಟ್ಟಿ ಅಲಂಕಾರಮಾಡಿ, ಆದರ ಮಧ್ಯಕ್ಕೆ ಅಕ್ಕಿಯ ರಾಶಿಯನ್ನು ಹಾಕಬೇಕು. ॥೩೬॥

ಅದಕ್ಕೆ ಅಲಂಕಾರವನ್ನು ಮಾಡಿ ಧೂಪವನ್ನೂ ಹಾಕಿ ಅದನ್ನು ಈರೀತಿಯಲ್ಲಿ ಸ್ಥಾಪಿಸಿ ಮಂತ್ರೋಚ್ಚಾರಣೆಯನ್ನು ಮಾಡುತ್ತಾ ಅದನ್ನು ಎಂಟು ವಿಧವಾದ ಗಂಧದಿಂದ ಮಿಶ್ರವಾದ ನೀರಿನಿಂದ ತುಂಬಿ ಐದು ವಿಧವಾದ ರತ್ನಗಳನ್ನು ಅದರೊಳಕ್ಕೆ ಹಾಕಬೇಕು. ॥೩೭॥

ಆದರಲ್ಲಿ ಅಮೂಲ್ಯವಾದ ರತ್ನಗಳನ್ನು ಹಾಕಿ ಆದರಂತೆಯೇ ಕ್ರಮವಾಗಿ ಐದು ವಿಧವಾದ ಚಿಗುರುಗಳಿಂದಲೂ ಮುಚ್ಚಿ ಅಕ್ಕಿ ಫಲ, ಮತ್ತು ನೀರಿನಿಂದ ತುಂಬಿರುವ ಪಾತ್ರೆ ಇವುಗಳನ್ನೂ ಆದರ ಮುಂಭಾಗದಲ್ಲಿರಿಸಬೇಕು. ॥೩೮॥

ತತ್ರ ಪ್ರತಿಕೃತಿಂ ದೇವ್ಯಾಃ ಸರ್ವಾಽವಯವಶೋಭಿತಾಂ ।
ವಿನ್ಯಸ್ಯ ತಸ್ಯಾಮಾವಾಹ್ಯ ಪೂಜನಂ ತು ಸಮಾಚರೇತ್ ॥೩೯॥

ತತ್ರಾಽದೌ ಸರ್ವತೋಽಭದ್ರ ದೇವತಾಃ ಕ್ರಮತೋ ಯಜೇತ್ ।
ದಶದಿಕ್ಷು ಚ ದಿಕ್ಪಾಲಾನ್ ಶೃಂಖಲಾಸು ಚತುರ್ಷು ಚ ॥೪೦॥

ಧರ್ಮಾಽಽದೀನ್ ಮಧ್ಯಭವನೇ ಶ್ವೇತೇಽ ಧರ್ಮಾಽಽದಿಕಾನ್ ಯಜೇತ್ ।
ರಕ್ತಾಽರ್ಧಭವನೇ ಪೂರ್ವಾತ್ ಪ್ರಾದಕ್ಷಿಣ್ಯೇನ ಪೂಜಯೇತ್ ॥೪೧॥

ಅಸಿತಾಽಂಗಾಽಽದಿಮಿಥುನಂ ಮೇಽಖಲಾಸು ಗುಣತ್ರಯಂ ।
ಏವಂ ಸಂಪೂಜ್ಯಕಲಶೇ ಪೀಠಯಜನಪೂರ್ವಕಂ ॥೪೨॥

ಅದರಲ್ಲಿ ಎಲ್ಲಾ ಅವಯವಗಳಿಂದಲೂ ಪ್ರಕಾಶಿಸುತ್ತಿರುವ ದೇವಿಯ ಮೂರ್ತಿಯನ್ನು ಇಟ್ಟು ಅದರಲ್ಲಿ ಆಕೆಯನ್ನು ಆವಾಹನೆಮಾಡಿ, ದೇವಿಯ ಪೂಜೆಯನ್ನು ಶಾಸ್ತ್ರೋಕ್ತವಾಗಿ ನಡೆಸಬೇಕು. ||೩೯||

ಈ ರೀತಿಯಲ್ಲಿ ಮೊದಲು ಸರ್ವತೋಭದ್ರ ಎಂಬ ಮಂಡಲದಲ್ಲಿ ದೇವತೆಗಳನ್ನು ಕ್ರಮವಾಗಿ ಪೂಜಿಸಬೇಕು. ಅನಂತರ ಹತ್ತು ದಿಕ್ಕುಗಳಲ್ಲಿಯೂ ಇರುವ ದಿಕ್ಪಾಲಕರನ್ನೂ, ಬಂಧನದ ಸರಪಣಿಗಳಲ್ಲಿರುವಂತೆ, ಶಕ್ತಿಗಳನ್ನೂ ನಾಲ್ಕು ದಿಕ್ಕುಗಳಲ್ಲಿರುವ ದೇವತೆಗಳನ್ನೂ ಪೂಜಿಸಬೇಕು. ||೪೦||

ಮಧ್ಯಭಾಗದ ಸ್ಥಳದಲ್ಲಿ ಧರ್ಮವೇ ಮುಂತಾದ ದೇವತೆಗಳನ್ನು ಬೆಳ್ಳಗಿರುವ ಸ್ಥಳಗಳಲ್ಲಿಯೂ ಅಧರ್ಮ ಮುಂತಾದ ದೇವತೆಗಳನ್ನೂ, ಕೆಂಪಗಿರುವ ಅರ್ಧಸ್ಥಳಗಳಲ್ಲಿಯೂ, ಹೀಗೆ ದೇವತೆಗಳನ್ನೂ ಪೂರ್ವದಿಕ್ಕಿನಿಂದ ಪ್ರಾರಂಭಿಸಿ ಪೂಜಿಸಬೇಕು. ||೪೧||

ಅಸಿತಾಂಗ ಮುಂತಾದ ಯುಗ್ಮ, ಎರಡೆರಡು ಶಕ್ತಿಗಳನ್ನೂ, ಪಟ್ಟಿಯಂತಿರುವ ಮಧ್ಯಭಾಗದಲ್ಲಿ ಮೂರು ಗುಣಗಳ ಶಕ್ತಿಗಳನ್ನೂ ಆರಾಧಿಸಬೇಕು. ಈ ರೀತಿಯಾಗಿ ಕಲಶದಲ್ಲಿ ಪೂಜೆಯನ್ನು ನೆರವೇರಿಸಿ ಪೀಠಪೂಜೆಯನ್ನು ಮೊದಲು ಮಾಡಬೇಕು. ||೪೨||

ವಿಧಿನಾಽಽವಾಹ್ಯ ತ್ರಿಪುರಾಂ ಪೂಜಯೇದುಪಚಾರಕೈಃ ।
ತತ್ತತ್ಪುಷ್ಪಾಽಽದಿಕಂ ಸ್ವರ್ಣಭವಂ ವಾ ರಜತೋದ್ಭವಂ ॥೪೩॥

ನಾಷಾದ್ವಾಕರ್ಷತೋ ನಾಽಪಿ ಕುರ್ಯಾದನ್ಯೂನಮುತ್ತಮಂ ।
ತದರ್ಧಂ ಪಾದಮಪಿ ವಾ ಕೃತ್ವಾ ತನ್ನವಸಂಖ್ಯಕಂ ॥೪೪॥

ಪೂಜಯೇದುಪಚಾರೇಷು ನಾಮಭಿರ್ವಶಿನೀಮುಖೈಃ ।
ಮಧ್ಯೇ ಚ ತ್ರಿಪುರಾಂ ರಾತ್ರೌ ಪೂಜಯೇಚ್ಚಕ್ರನಾಯಕಂ ॥೪೫॥

ಕಲಶಸ್ಯ ಪಶ್ಚಿಮತಃ ಸರ್ವತೋ ಭದ್ರಮಂಡಲೇ ।
ಸ್ವಯಂ ವಾ ಪೂಜಯೇ ದಾಚಾರ್ಯೇಣ ವಾ ಕ್ರಮವೇದಿನಾ ॥೪೬॥

ಪೂಜಯಿತ್ವಾ ಯಥಾಶಾಸ್ತ್ರಂ ಕುಮಾರೀಂ ವಟುಕಂ ತಥಾ ।
ಗುರುಂ ಸುವಾಸಿನೀಂ ಚಾಽಪಿ ಬ್ರಾಹ್ಮಣಾ ದೀನಪಿ ಕ್ರಮಾತ್ ॥೪೭॥

ಅನಂತರ ಶಾಸ್ತ್ರೋಕ್ತಕ್ರಮದಲ್ಲಿ ತ್ರಿಪುರಾದೇವಿಯನ್ನು ಉಪಚಾರ ಸಾಮಗ್ರಿಗಳಿಂದ ಪೂಜಿಸಬೇಕು. ಉಪಚಾರಗಳಿಗಾಗಿ ಚಿನ್ನದಿಂದ ಅಥವಾ ಬೆಳ್ಳಿಯಿಂದ ಮಾಡಿದ ಹುವ್ವ ಮುಂತಾದವನ್ನು ಸಮನಾಗಿ ಉಪಯೋಗಿಸಬೇಕು. ||೪೩||

ಅದಕ್ಕೆ ಸಮನಾಗಿ ಸ್ವಲ್ಪವೂ ಕಡಮೆ ಇಲ್ಲದಂತೆ ಶ್ರೇಷ್ಠವಾದ ಉಪಚಾರ ಸಾಮಗ್ರಿಗಳನ್ನು ಉದ್ದಿನಿಂದಲಾಗಲೀ, ಅಥವಾ ಗುಲುಗಂಜಿಯಿಂದಲಾಗಲೀ ಮಾಡಿ ಕೊಡಬೇಕು. ಅದಕ್ಕೆ ಅರ್ಧಭಾಗಷ್ಟು ಅಥವಾ ಕಾಲುಭಾಗದಷ್ಟು ಒಂಬತ್ತು ಉಪಚಾರ ಸಾಮಗ್ರಿಗಳನ್ನೂ ಮಾಡಿಸಬೇಕು. ||೪೪||

ಉಪಚಾರ ಮಾಡುವಾಗ ವಶಿನೀ ಮುಂತಾದ ಶಕ್ತಿಗಳನ್ನು ಪೂಜಿಸಿಯೇ ದೇವಿಯನ್ನು ಪೂಜಿಸಬೇಕು. ಮಧ್ಯದಲ್ಲಿ ತ್ರಿಪುರಾದೇವಿಯನ್ನು ಪೂಜಿಸಬೇಕು. ರಾತ್ರಿಯಲ್ಲಿ ಆಕೆಯ ಶ್ರೇಷ್ಠವಾದ ಚಕ್ರಕ್ಕೆ ಪೂಜೆಯನ್ನು ಸಲ್ಲಿಸಬೇಕು. ||೪೫||

ಕಲಶಕ್ಕೆ ಪಶ್ಚಿಮಭಾಗದಲ್ಲಿ ಸರ್ವತೋಭದ್ರ ಎಂಬ ಮಂಡಲದಲ್ಲಿ ತಾನೇ ಆಗಲಿ ಅಥವಾ ಆಚಾರ್ಯರಮೂಲಕವಾಗಲಿ, ಶಾಸ್ತ್ರಕ್ರಮದಲ್ಲಿ ಪೂಜೆಯನ್ನು ಸಲ್ಲಿಸಬೇಕು. ||೪೬||

ಶಾಸ್ತ್ರೋಕ್ತಕ್ರಮದಲ್ಲಿ ದೇವಿಯನ್ನು ಈ ರೀತಿಯಾಗಿ ಪೂಜಿಸಿ, ಅನಂತರದಲ್ಲಿ ಕುಮಾರೀ, ವಟುಕ, ಗುರು, ಸುವಾಸಿನೀ, ಬ್ರಾಹ್ಮಣ ಮುಂತಾದವರನ್ನೂ ಕ್ರಮವಾಗಿ ಪೂಜಿಸಬೇಕು. ||೪೭||

ಉದ್ವಾಹ ರಹಿತಾಂ ಪೂಜಾಂ ಸಮಾಪ್ಯಾಽಖಿಲ ಸಂವೃತಃ ।
ಕಥಾಭಿರ್ಗಾಯನೈರ್ನೃತ್ಯೈಃ ಕುರ್ಯಾಜ್ಜಾಗರಣಂ ನಿಶಿ ॥೪೮॥

ಪರೇದ್ಯುಃ ಕೃತಕೃತ್ಯೋಽಥ ಪೂಜಯೇಚ್ಚಕ್ರನಾಯಕಂ ।
ಪೂಜಾಽಂಗಹೋಮತಃ ಪಶ್ಚಾದಗ್ನಿಂ ಸಂಸಾಧ್ಯ ಶಾಸ್ತ್ರತಃ ॥೪೯॥

ಯಥಾವತ್ತತ್ರ ಜುಹುಯಾತ್ತತ್ತತ್ಪುಷ್ಪೈಃ ಸಹಸ್ರಕಂ ।
ಪೂಜಾಂ ಸಮಾಪ್ಯಚೋದ್ವಾಸ್ಯ ಕಲಶಂ ವಸ್ತ್ರಸಂಯುತಂ ॥೫೦॥

ದಕ್ಷಿಣಾ ಪ್ರತಿಮಾಯುಕ್ತಂ ಸುವಾಸಿನ್ಯೈ ನಿವೇದಯೇತ್ ।
ಬ್ರಾಹ್ಮಣಾನಾಂ ಷೋಡಶಕಂ ಸುವಾಸಿನ್ಯಷ್ಟಕಂ ತಥಾ ॥೫೧॥

ವಟುಕಾಂಶ್ಚ ಕುಮಾರೀಂಶ್ಚ ವಿತ್ತಶಾಠ್ಯಾಽಽದಿವರ್ಜಿತಃ ।
ಭೋಜಯೇದ್ಭಕ್ಷ್ಯಭೋಜ್ಯಾಽಽದ್ಯೈರ್ದಕ್ಷಿಣಾಽಽದ್ಯೈಶ್ಚ ತೋಷಯೇತ್॥೫೨॥

ಪ್ರತಿಮೆಯನ್ನು ಇಳಿಕದೇ ಇರುವ ರೀತಿಯಲ್ಲಿ ಪೂಜೆಯನ್ನು ಮಾಡಿ ಕೊನೆಗೆ ವಿವಾಹೋಪಚಾರವಿಲ್ಲದೆ ಅದನ್ನು ಮುಗಿಸಿ ಭಕ್ತನು ಎಲ್ಲರಿಂದಲೂ ಕೂಡಿದವನಾಗಿ ಆಕೆಯ ಕಥೆಗಳು ಗಾನಗಳು ನೃತ್ಯಗಳು ಇವುಗಳನ್ನು ಮಾಡುತ್ತಾ ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ॥೪೮॥

ಮಾರನೆ ದಿವಸ ಭಕ್ತನು ಕೃತಕೃತ್ಯನಾಗಿ ಶ್ರೇಷ್ಠಚಕ್ರದ ಪೂಜೆಯನ್ನು ನೆರವೇರಿಸಬೇಕು. ಅನಂತರ ಅವನು ಪೂಜೆಗೆ ಅಂಗವಾದ ಹೋಮದಿಂದ ಶಾಸ್ತ್ರೋಕ್ತಕ್ರಮದಲ್ಲಿ ಅಗ್ನಿಯನ್ನು ಅನ್ವಾಧಾನಕ್ರಮದಿಂದ ಸಾಧಿಸಬೇಕು. ॥೪೯॥

ಅನಂತರ ಶಾಸ್ತ್ರೋಕ್ತಕ್ರಮದಲ್ಲಿ ನಾನಾ ವಿಧವಾದ ಪುಷ್ಪಗಳಿಂದ ಆಕೆಯ ಸಹಸ್ರನಾಮ ಪೂಜೆಯನ್ನು ನಡೆಸಿ ವಸ್ತ್ರದಿಂದ ಕೂಡಿದ ಆ ಕಲಶವನ್ನು ಅಲ್ಲಾಡಿಸಿ ಉದ್ವಾಸನೆಯನ್ನು ಮಾಡಿ ತೆಗೆಯಬೇಕು. ॥೫೦॥

ದಕ್ಷಿಣೆ ಮತ್ತು ದೇವಿಯ ಪ್ರತಿಮೆಯಿಂದ ಕೂಡಿದ ಉಪಾಯನ ದಾನ ವನ್ನು ಮುತ್ತೈದೆಗೆ ಕೊಡಬೇಕು. ಅಲ್ಲದೇ ಹದಿನಾರು ಜನ ಬ್ರಾಹ್ಮಣರು ಮತ್ತು ಎಂಟು ಜನ ಮುತ್ತೈದೆಯರು ಇವರಿಗೂ ಭೋಜನವನ್ನು ಮಾಡಿಸಬೇಕು. ॥೫೧॥

ಅಲ್ಲದೆ ಅನೇಕ ಬ್ರಹ್ಮಚಾರಿಗಳಿಗೂ ಮತ್ತು ಬಾಲಕಿಯರಿಗೂ ಭಕ್ತನಾದವನು ದುಡ್ಡಿನವಿಷಯದಲ್ಲಿ ಜಿಪುಣತನವನ್ನು ತೋರಿಸದೇ, ಭಕ್ಷ್ಯಗಳು ಮತ್ತು ನಾನಾ

ಏವಂ ಪೂಜನಮಾತ್ರೇಣ ಸರ್ವಪಾಪೈರ್ವಿಮುಚ್ಯತೇ ।
ಪ್ರಸನ್ನಾ ತ್ರಿಪುರೇಶಾನೀ ವಾಂಛಿತಾಽರ್ಥಪ್ರದಾ ಭವೇತ್ ॥೫೩॥

ಸರ್ವಸೌಭಾಗ್ಯಸಂಯುಕ್ತೋ ವಂಶಪುತ್ರೈರ್ಯುತಸ್ತಥಾ ।
ಪಿತೄನ್ ಪ್ರೋದ್ಧರತೇ ಸರ್ವಾನಂತೇ ಮೋಕ್ಷಂ ಸಮಶ್ನುತೇ ॥೫೪॥

ರಾಜ್ಯಪ್ರಾಪ್ತಿಸ್ತು ಕಮಲೈಃ ಕರವೀರೈಃ ಮಹಚ್ಛ್ರಿಯಂ ।
ಜಪಾಪುಷ್ಪೈಃ ಸಂತತಿಂ ವೈ ಜಾತೀಪುಷ್ಪೈರ್ಗೃಹಾಽಽದಿಕಂ ॥೫೫॥

ಯೋನಿಪುಷ್ಪೈಃ ವಂಶವೃದ್ಧಿಂ ವಕುಲೈಃ ಸೌಮನಸ್ಯತಾಂ ।
ಕಿಂಶುಕೈ ರೋಗನಿಹತಿಂ ಕಟುಜೈಃ ಶತ್ರುನಾಶನಂ ॥೫೬॥

ವಿಧವಾದ ಅನ್ನಗಳು ಮುಂತಾದವುಗಳಿಂದ ಕೂಡಿದ ದಕ್ಷಿಣೆ ಮುಂತಾದವುಗಳಿಂದ ಸಂತೋಷಪಡಿಸಬೇಕು. ||೫೨||

ಈ ರೀತಿಯಾಗಿ ಪೂಜೆಯನ್ನು ಮಾಡುವುದರಿಂದಲೇ ಭಕ್ತನು ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವನು. ಆಗ ತ್ರಿಪುರೇಶ್ವರಿಯು ಅವನಿಗೆ ಪ್ರಸನ್ನಳಾಗಿ ಸಕಲ ಇಷ್ಟಾರ್ಥಗಳನ್ನೂ ನೀಡುವಳು. ||೫೩||

ಹೀಗೆ ಪೂಜೆಮಾಡಿದ ಭಕ್ತನು ಎಲ್ಲಾ ವಿಧವಾದ ಐಶ್ವರ್ಯದಿಂದಲೂ ಕೂಡಿದವನಾಗಿ ವಂಶೋದ್ಧಾರಕರಾದ ಮಕ್ಕಳಿಂದಲೂ ಕೂಡಿದವನಾಗಿ ಪಿತೃಗಳನ್ನೂ ಉದ್ಧಾರಮಾಡುವನು. ಅಲ್ಲದೆ ಕೊನೆಯಲ್ಲಿ ಇವನು ಮೋಕ್ಷಸುಖವನ್ನೂ ಅನುಭವಿಸುವನು. ||೫೪||

ಭಕ್ತನು ಕಮಲಪುಷ್ಪಗಳಿಂದ ದೇವಿಯಮೂರ್ತಿಯನ್ನು ಪೂಜಿಸಿದರೆ ರಾಜ್ಯಪ್ರಾಪ್ತಿಯನ್ನೂ, ಕಣಿಗಲೇಹುವ್ವುಗಳಿಂದ ಪೂಜಿಸಿದರೆ ಹೆಚ್ಚಾಗಿ ಐಶ್ವರ್ಯವನ್ನೂ, ಜಪಾ(ದಾಶವಾಳ)ಎಂಬಹೂಗಳಿಂದ ಆರಾಧಿಸಿದರೆ ಮಕ್ಕಳನ್ನೂ, ಜಾಜೀಹೂಗಳಿಂದ ಆರಾಧಿಸಿದರೆ ಮನೆಯೇ ಮುಂತಾದುವನ್ನೂ ಪಡೆಯುವನು. ||೫೫||

ಭಕ್ತನು ಯೋನಿ, ಗಿರಿಕರ್ಣಿಕೆ ಎಂಬಹುವ್ವುಗಳಿಂದ ದೇವಿಯಮೂರ್ತಿಯನ್ನು ಪೂಜಿಸಿದರೆ ವಂಶಾಭಿವೃದ್ಧಿಯನ್ನೂ, ವಕುಲ, ಎಂಬಪುಷ್ಪಗಳಿಂದ ಪೂಜಿಸಿದರೆ ಶಾಂತಿಯುತವಾದ ಮನಸ್ಸನ್ನೂ, ಮಾವಿನ ಹುವ್ವುಗಳಿಂದ ಪೂಜಿಸಿದರೆ ರೋಗನಿವಾರಣೆಯನ್ನೂ, ಬೇವಿನ ಹೂಗಳಿಂದ ಪೊಜಿಸಿದರೆ ಶತ್ರುನಾಶವನ್ನೂ ಕ್ರಮವಾಗಿ ಫಲಗಳನ್ನಾಗಿ ಹೊಂದುವನು. ||೫೬||

ಏವಮನ್ಯೈಃ ಸುಗಂಧಾಢ್ಯೈಃ ಪುಷ್ಪೈಃ ಪತ್ರೈಶ್ಚ ಭಾರ್ಗವ।
ಪೂಜಯಿತ್ವಾ ವಿಧಾನೇನ ಮಹಾಫಲಮವಾಪ್ನುಯಾತ್ ॥೫೭॥

ಫಲೈರ್ಧಾನ್ಯೈರರ್ಚಯೇಚ್ಚ ಪ್ರೋಕ್ತಮಾರ್ಗಾನುಸಾರತಃ।
ಲಕ್ಷವರ್ತಿಪ್ರದೀಪೈರ್ವಾ ಪೂಜಯೇತ್ ತ್ರಿಪುರಾಂಬಿಕಾಂ ॥೫೮॥

ಸಮರ್ಥಸ್ತತ್ರ ವರ್ತಿಭ್ಯಾಂ ದೀಪಾನೇವ ಪ್ರಕಲ್ಪಯೇತ್।
ದಶಕೇನ ಶತೇನಾಪಿ ಸಹಸ್ರೇಣಾಪಿ ವಾ ತಥಾ ॥೫೯॥

ಪಂಚಾಶದ್ದಶಸಾಹಸ್ರೈಃ ಸಹಸ್ರಶತನೇವ ವಾ।
ಏಕೈಕಂ ಚ ಘೃತಾಪೂರ್ಣಮರ್ಪಯೇದೇಕನಾಮಭಿಃ ॥೬೦॥

ಸಹಸ್ರನಾಮಭಿರ್ದೇವ್ಯಾಃ ಶತನಾಮಭಿರೇವ ವಾ।
ದಶಾವರ್ತನಕೈರ್ವಾಪಿ ಚೈಕಾವರ್ತನಕೇನ ವಾ ॥೬೧॥

ಈ ರೀತಿಯಾಗಿ ಭಕ್ತನು ಸುವಾಸನೆಯಿಂದ ತುಂಬಿದ ಹುವ್ವುಗಳಿಂದ ಮತ್ತು ಎಲೆಗಳಿಂದ ದೇವಿಯ ಪೂಜೆಯನ್ನು ನೆರವೇರಿಸಿದರೆ ಮಹಾಫಲವನ್ನು ಹೊಂದುವನು. ||೫೭||

ಭಕ್ತನು ಫಲಗಳು ಮತ್ತು ಧಾನ್ಯಗಳಿಂದಲೂ, ಹಿಂದೆ ಹೇಳಿದ ಕ್ರಮದಲ್ಲಿ ದೇವಿಯನ್ನು ಪೂಜಿಸಬಹುದು ಅಥವಾ ಆವನು ಲಕ್ಷಬತ್ತಿಯ ದೀಪಗಳಿಂದಾಗಲೀ ತ್ರಿಪುರಾಮಾತೆಯನ್ನು ಪೂಜಿಸಬಹುದು. ||೫೮||

ಹೀಗೆ ಮಾಡಲು ಸಮರ್ಥನಾಗದವನು ಬತ್ತಿಗಳಿಂದ ದೀಪಗಳನ್ನಿಡಬಹುದು. ಆವನು ಈ ರೀತಿಯಲ್ಲಿ ಹತ್ತು ನೂರು ಸಾವಿರ ದೀಪಗಳನ್ನು ಬೇಕಾದರೂ ಇಡಬಹುದು. ||೫೯||

ಭಕ್ತನು ಐದುಲಕ್ಷ ಅಥವಾ ಒಂದುಲಕ್ಷ ದೀಪಗಳನ್ನಾದರೂ ದೇವಿಯ ಹೆಸರನ್ನು ಹೇಳುತ್ತಾ ತುಪ್ಪದಿಂದ ತುಂಬಿದ ಹಣತೆಗಳಲ್ಲಿ ಪ್ರತಿಯೊಂದರಲ್ಲಿಯೂ ಉರಿಸುತ್ತಾ ಪೂಜಿಸಬಹುದು. ||೬೦||

ದೇವಿಯ ಸಹಸ್ರನಾಮ ಅಥವಾ ನೂರು ನಾಮಗಳನ್ನು ಹತ್ತು ಆವೃತ್ತಿ ಅಥವಾ ಒಂದಾವೃತ್ತಿ ಹೇಳುತ್ತಾ ಆಕೆಯನ್ನು ಭಕ್ತಿಭಾವದಿಂದ ಪೂಜೆಮಾಡಲೂ ಬಹುದು. ||೬೧||

ತಥಾ ಪಂಚ ಶತಾಽಽವೃತ್ತ್ಯಾ ದೀಪಂ ದೇವ್ಯೈ ಸಮರ್ಪಯೇತ್ ।
ಅಂತೇ ಸ್ವರ್ಣೇನ ರೌಪ್ಯೇಣ ನವಕಂ ವರ್ತಿಯುಗ್ಮಕಂ ॥೬೨॥

ಕೃತ್ವಾ ತಾಮ್ರಮಯೇ ದೀಪೇ ಘೃತವರ್ತಿ ಸಮುಜ್ಜ್ವಲೇ ।
ನಿವೇದಯೇತ್ತು ಕಲಶೇ ಪಾಯಸೇನ ಹುನೇತ್ತಥಾ ॥೬೩॥

ಶ್ರೀಸೂಕ್ತೇನಾಽಭಿಷೇಕಂ ವೈ ಕುರ್ಯಾಚ್ಛ್ರೀಚಕ್ರನಾಯಕೇ ।
ಆವೃತ್ತೀನಾಂ ಲಕ್ಷಕೇನ(ಣ) ಸಹಸ್ರೇಣ ಶತೇನ ವಾ ॥೬೪॥

ಸ್ವಯಂ ವಾ ಬ್ರಾಹ್ಮಣೈರ್ವಾಽಪಿ ಕ್ಷೀರೈರಿಕ್ಷುರಸೈರ್ಘೃತೈಃ ।
ಮಧುಭಿರ್ವಾ ಫಲರಸೈಃ ದಧಿಭಿರ್ವಾ ಸುಗಂಧಿಭಿಃ ॥೬೫॥

ತೋಯೈಸ್ತೀರ್ಥೋದ್ಭವೈರ್ವಾಽಪಿ ರಾಮ ಪೂರ್ವೋಕ್ತವರ್ತ್ಮನಾ।
ಅಂತೇ ದಶಾಂಶತೋ ವಹ್ನೌ ಪಾಯಸೇನ ಹುನೇತ್ಕ್ರಮಾತ್॥೬೬॥

ಅದೇ ರೀತಿಯಲ್ಲಿ ಐನೂರಾವೃತ್ತಿ ಆಕೆಯ ನಾಮವನ್ನು ಉಚ್ಚರಿಸಿ ದೀಪವನ್ನು ದೇವಿಗೆ ಸಮರ್ಪಿಸಬೇಕು. ಕೊನೆಯಲ್ಲಿ ಚಿನ್ನದ ಅಥವಾ ಬೆಳ್ಳಿಯ ಹದಿನೆಂಟು ಬತ್ತಿಗಳನ್ನು ಮಾಡಿಸಿ ದಾನಕೊಡಬೇಕು. ||೬೨||

ಅನಂತರ ಭಕ್ತನು ತಾಮ್ರದಿಂದ ಮಾಡಿದ ಹಣತೆಯಲ್ಲಿ ತುಪ್ಪದ ಬತ್ತಿಯು ಉರಿಯುತ್ತಿರಲು ಅದನ್ನು ಕಲಶದಲ್ಲಿಟ್ಟು ಅದನ್ನು ಮುತ್ತೈದೆಯರಿಗೆ ದಾನ ಕೊಡಬೇಕು. ರಾಮನೇ, ಪಾಯಸದಿಂದ ದೇವಿಗೆ ಹೋಮಪೂರ್ವಕವಾಗಿ ನೈವೇದ್ಯ ವನ್ನು ಮಾಡಬೇಕು. ||೬೩||

ಆಮೇಲೆ ಭಕ್ತನು ಶ್ರೀಸೂಕ್ತವನ್ನು ಹೇಳುತ್ತಾ ಶ್ರೇಷ್ಠ ಶ್ರೀಚಕ್ರಕ್ಕೆ ದೇವಿಯ ನಾಮಗಳನ್ನು ಲಕ್ಷಸಲ ಅಥವಾ ಸಾವಿರಸಲ ಅಥವಾ ನೂರುಸಲ ಜಪಿಸಿ ಪೂಜೆಯನ್ನು ಮಾಡಬೇಕು. ||೬೪||

ಭಕ್ತನು ತಾನಾಗಿಯೇ ಅಥವಾ ಬ್ರಾಹ್ಮಣರ ಮೂಲಕ ಹಾಲು, ಕಬ್ಬಿನರಸ, ತುಪ್ಪ, ಜೇನುತುಪ್ಪ, ಹಣ್ಣಿನರಸ, ಸುವಾಸನೆಯಾದ ನೀರು ಮತ್ತು ಮೊಸರಿನಿಂದ ಹೋಮವನ್ನು ನಡೆಸಬೇಕು. ||೬೫||

ಎಲೈ ಪರಶುರಾಮನೇ, ತೀರ್ಥಗಳಿಂದ ತುಂಬಿರುವ ನೀರನ್ನು ಉಪಯೋಗಿಸಿ ಕೊಳ್ಳುತ್ತಾ ಹಿಂದೆ ಹೇಳಿದ ರೀತಿಯಲ್ಲಿ ಹೋಮಮಾಡಿ ಕೊನೆಯಲ್ಲಿ ಕ್ರಮವಾಗಿ ಪಾಯಸದಿಂದ ಹೋಮಮಾಡಬೇಕು. ||೬೬||

ಪ್ರತ್ಯೃಚಂ ಶ್ರೀಸೂಕ್ತಕಸ್ಯ ಪೂರ್ವವತ್ತು ಸಮಾಪಯೇತ್ ।
ರುದ್ರಾಽಭಿಷೇಕತೋ ವಾಽಪಿ ಮಹಾಫಲಮುದೀರಿತಂ ॥೬೭॥

ಏವಂ ಭಾರ್ಗವ ಸಂಪ್ರೋಕ್ತಂ ಧನಿನಾಂ ಶುಭಸಾಧನಂ ।
ಅಧನ್ಯೈಸ್ತು ಶರೀರೇಣ ಕರ್ತವ್ಯಂ ಶುಭಸಾಧನಂ ॥೬೮॥

ಸಮರ್ಥಸ್ತೀರ್ಥಯಾತ್ರಾಂ ತು ಕೃತ್ವಾ ಶ್ರೇಯಃ ಸಮಾವಹೇತ್ ।
ಅಥ ವಾ ದೇವತಾ ಸ್ಥಾನೇ ಪರಿಚರ್ಯಾಂ ಸಮಾಚರೇತ್ ॥೬೯॥

ಉಪಾಸ್ತಿ ತತ್ಪರಾನ್ ವಾಽಪಿ ಸೇವೇತ ವಿಗತಸ್ಪೃಹಃ ।
ಅತಿಮೂಢಸ್ಯ ಚೈತಾವ ದೇವ ಕೃತ್ಯಮುದೀರಿತಂ ॥೭೦॥

ಮೇಧಾವೀ ಪ್ರಜಪಾತ್ಪಾಠಾತ್ ಕಥಾಽಽದೀನಾಂ ಪ್ರವಾಚನಾತ್ ।
ದೇವತಾ ಶಾಸ್ತ್ರಪಠನಾತ್ ಪಾಠನಾಚ್ಛ್ರೇಯ ಆಪ್ನುಯಾತ್ ॥೭೧॥

ಶ್ರೀಸೂಕ್ತದ ಪ್ರತಿಯೊಂದು ಋಕ್ಕನ್ನೂ ಹಿಂದೆ ಹೇಳಿದ ರೀತಿಯಲ್ಲಿ ಹೋಮಮಾಡುತ್ತಾ ಮುಗಿಸಬೇಕು. ಅಥವಾ ರುದ್ರಾಭಿಷೇಕದಿಂದಲಾಗಲೀ ಹೋಮಮಾಡಬಹುದು. ಹಾಗಾದರೆ ಮಹಾಫಲವು ಬರುತ್ತದೆಯೆಂದು ಹೇಳಿದೆ. ॥೬೭॥

ಎಲೈ ಪರಶುರಾಮನೇ, ಧನಿಕರಿಗೆ ಮಂಗಳವುಂಟಾಗುವುದಕ್ಕೆ ಮೇಲೆ ಹೇಳಿದ ವಿಧಾನವನ್ನು ಹೇಳಿದೆ. ಧನಿಕರಲ್ಲದವರು ಶರೀರಶ್ರಮವನ್ನು ವಹಿಸಿ ಆಕೆಯನ್ನು ಪೂಜಿಸಿ ತಮ್ಮ ಮಂಗಳವನ್ನುಂಟುಮಾಡಿಕೊಳ್ಳಬಹುದು. ॥೬೮॥

ತೀರ್ಥಯಾತ್ರೆಯನ್ನು ಮಾಡಲು ಸಮರ್ಥನಾದ ಮನುಷ್ಯನು ಆ ರೀತಿಯಲ್ಲಿ ನಡೆಸಿ ತನ್ನ ಶ್ರೇಷ್ಠಯಶಸ್ಸನ್ನು ಸಂಪಾದಿಸಿಕೊಳ್ಳಬಹುದು. ಹಾಗಿಲ್ಲದಿದ್ದರೆ ದೇವ ಸ್ಥಾನಗಳಲ್ಲಿ ಸೇವೆಯನ್ನು ಮಾಡಬೇಕು. ॥೬೯॥

ದೇವಿಯ ಉಪಾಸನೆಮಾಡಲು ಆಸಕ್ತರಾದ ಭಕ್ತರನ್ನಾಗಲಿ ಅಂಥಾವನು ಎಲ್ಲಾ ಆಸೆಯನ್ನೂ ಬಿಟ್ಟು ಸೇವಿಸಬೇಕು. ಬಹಳ ಮೂಢನಾದ ಅಶಕ್ತನಾದ ಮನುಷ್ಯನಿಗೆ ಇಷ್ಟೇ ವಿಧಾನವನ್ನು ಹೇಳಿದ್ದಾರೆ. ॥೭೦॥

ಮೇಧಾವಿಯಾದ ಮನುಷ್ಯನು ದೇವಿಯ ನಾಮಗಳನ್ನು ಜಪಿಸುವುದ ರಿಂದಲೂ ಅವುಗಳನ್ನು ಪಠಿಸುವುದರಿಂದಲೂ ಆಕೆಗೆ ಸಂಬಂಧಪಟ್ಟ ಕಥೆ

ಯೋಗ್ಯೇಷು ದೇವತೋಪಾಸ್ತಿಶಾಸ್ತ್ರಂ ಯಃ ಸಮ್ಯಗೀರಯತ್ ।
ಸ ದೇಹಾಂತೇ ನೈದ್ರುಮೇ ತು ಪ್ರಾಕಾರೇ ನಿವಸೇಚ್ಚಿರಂ ॥೭೨॥

ಚಿತ್ರಾಣಿ ಯೋ ಲಿಖೇದ್ದೇವ್ಯಾಃ ಪ್ರಾಸಾದೇಷು ಸುಭಕ್ತಿತಃ ।
ನಿವಸೇದ್ವಾ ಸಂತವಪ್ರೇ ಚಿರಮಾನಂದಿತಾಂತರಃ ॥೭೩॥

ಸಂಪೂಜ್ಯ ಶೀತತೋಯೈಶ್ಚ ಸೇಚಯೇತ್ ಯಶ್ಚ ಮಂದಿರಂ ।
ಅಭಿಷಿಂಚೇತ್ತಥಾಶೀತತೋಯೈರಪಿ ಸುವಾಸಿತೈಃ ॥೭೪॥

ನಿವಸೇಚ್ಚಾಂದ್ರ ವಪ್ರಾಂತಃ ಸ ಸಂತಾಪವಿವರ್ಜಿತಃ ।
ಯಸ್ತು ರಾತ್ರೌ ದೀಪಿತಾಭಿಃ ಪ್ರಕಾಶಯತಿ ಮಂದಿರಂ ॥೭೫॥

ಮುಂತಾದುವುಗಳನ್ನು ಹೇಳುವುದರಿಂದಲೂ ದೇವೀಗೆ ಸಂಬಂಧಪಟ್ಟ ಶಾಸ್ತ್ರಪಠನ ಅಥವಾ ಪಠಿಸುವಂತೆ ಮಾಡುವುದು ಇವುಗಳಿಂದ ಶ್ರೇಯಸ್ಸನ್ನು ಹೊಂದುವನು. ॥೭೧॥

ಯೋಗ್ಯರಾದ ಜನರಿಗೆ ದೇವಿಯ ಉಪಾಸನೆಗೆ ಸಂಬಂಧಪಟ್ಟ ಶಾಸ್ತ್ರವನ್ನು ಯಾವನು ಪಾಠಹೇಳಿ ಕೊಡುವನೋ ಅವನು ಮೃತಿಯನ್ನೈದಿದಮೇಲೆ ದೇವಿಯ ಲೋಕವನ್ನು ಸೇರಿ ಹವಳದಿಂದ ಕಟ್ಟಿದ ಕೋಟೆಯೊಳಗೆ ಬಹಳಕಾಲ ಸುಖವಾಗಿ ವಾಸಿಸುವನು. ॥೭೨॥

ಉಪ್ಪರಿಗೆಗಳಲ್ಲಿಯೂ ಯಾವನು ಭಕ್ತಿಭಾವದಿಂದ ದೇವಿಗೆ ಸಂಬಂಧಪಟ್ಟ ಚಿತ್ರಗಳನ್ನು ಬರೆಯುವನೋ ಅಂಥವನು ಮೃತಿಯನ್ನೈದಿದಮೇಲೆ ಆಕೆಯ ಲೋಕವನ್ನು ಸೇರಿ ಸಂತೋಷವಾದ ಮನಸ್ಸಿನಿಂದ ವಸಂತಕುಸುಮಗಳಿಂದ ಮಾಡಿದ ಕೋಟೆಗಳಲ್ಲಿ ಬಹಳಕಾಲ ವಾಸಿಸುವನು. ॥೭೩॥

ದೇವಿಯ ಆಲಯವನ್ನು ಭಕ್ತನಾದವನು ಚೆನ್ನಾಗಿ ಗುಡಿಸಿ ತಣ್ಣಗಿರುವ ನೀರಿನಿಂದ ಶುದ್ಧಿಮಾಡಬೇಕು. ಅಲ್ಲದೇ ಅವನು ಸುವಾಸನೆಯಾದ ತಣ್ಣೀರಿನಿಂದ ಆಕೆಯ ಮೂರ್ತಿಗೆ ಅಭಿಷೇಕವನ್ನೂ ಮಾಡಬೇಕು. ॥೭೪॥

ಇಂಥಾವನು ಮೃತಿಯನ್ನೈದಿದಮೇಲೆ ದೇವಿಯ ಲೋಕವನ್ನು ಸೇರಿ ಚಂದ್ರನಿಗೆ ಸಂಬಂಧಪಟ್ಟ ಕೋಟೆಯೊಳಗೆ ತಾಪದಿಂದ ಬಿಡುಗಡೆಯನ್ನು ಹೊಂದಿ ಸುಖವಾಗಿರುವನು. ಅಲ್ಲದೇ ಭಕ್ತನಾದವನು ರಾತ್ರಿಯವೇಳೆಯಲ್ಲಿ ದೀಪಗಳಿಂದ ದೇವಿಯ ಆಲಯವನ್ನು ಬೆಳಗುವಂತೆ ಮಾಡಬೇಕು. ॥೭೫॥

ನಿವಸೇತ್ಸೂರ್ಯವಪ್ರಾಂತಃ ಪ್ರಾಪ್ಯ ಭೋಗಾನ್ ಯಥೇಪ್ಸಿತಾನ್ ।
ಏವಮತ್ರ ಯಥಾ ಯೋ ಯಃ ಸೇವಾಂಕುರ್ಯಾತ್ತುಮಂದಿರೇ ॥೭೬॥

ಸ ದೇಹಾಂತೇ ಶ್ರೀಪುರೇ ತು ಸ್ಥಾನಂ ಪ್ರಾಪ್ನೋತಿ ತಾದೃಶಂ ।
ಉಪಾಸಕೇಭ್ಯೋ ದಾನಾನಿ ಕೃತ್ವಾಽಪಿ ಸ್ಥಾನಮಾಪ್ನುಯಾತ್॥೭೭॥

ಯಃ ಪುಸ್ತಕಂ ದೇವತಾಯಾ ದದ್ಯಾದ್ಯೋಗ್ಯಾಯ ಭಕ್ತಿತಃ ।
ಸ ಸಿದ್ಧವಪ್ರವಸತಿಂ ಪ್ರಾಪ್ನುಯಾತ್ಸುಖಾಽವಹಾಂ ॥೭೮॥

ಯಸ್ತುಪೂಜೋಪಕರಣಂ ಪ್ರದದ್ಯಾತ್ ಸಾಧಕೋತ್ತಮೇ ।
ಸ ವಸೇದ್ದಿಕ್ಪತೀನಾಂ ಹಿ ವಪ್ರೇ ಸೌಖ್ಯಮವಾಪ್ನುಯಾತ್ ॥೭೯॥

ಅವನು ಮೃತಿಯನ್ನೈದಿದಮೇಲೆ ಆಕೆಯ ಲೋಕವನ್ನು ಸೇರಿ ಸೂರ್ಯನಿಗೆ ಸಂಬಂಧಪಟ್ಟ ಕೋಟೆಯೊಳಗೆ ತನಗೆ ಇಷ್ಟವಾದ ಭೋಗಗಳನ್ನು ಅನುಭವಿಸುತ್ತಾ ಸುಖವಾಗಿರುವನು. ಈ ರೀತಿಯಾಗಿ ದೇವಿಯ ಮಂದಿರದಲ್ಲಿ ಯಾರು ಯಾರು ಯಾವ ಯಾವ ವಿಧವಾದ ಸೇವೆಯನ್ನು ಮಾಡುವರೋ ಅವರವರು ಅದಕ್ಕೆ ಯೋಗ್ಯವಾದ ಫಲವನ್ನು ದೇವಿಯ ಲೋಕದಲ್ಲಿ ಪಡೆಯುವರು. ॥೭೬॥

ಹೀಗೆ ಭಕ್ತರು ಮೃತಿಯನ್ನೈದಿದಮೇಲೆ ದೇವಿಯ ಪಟ್ಟಣವಾದ ಶ್ರೀಪುರವನ್ನೇ ಹೊಂದಿ ಅವರು ಅವರವರ ಸೇವೆಗೆ ಸರಿಹೋಲುವ ಫಲಗಳನ್ನೇ ಅನುಭವಿಸುವರು. ಅಲ್ಲದೆ ಭಕ್ತನು ದೇವಿಯ ಉಪಾಸಕರಿಗೆ ಶ್ರೇಷ್ಠದಾನಗಳನ್ನು ಕೊಟ್ಟು ದೇವಿಯಲೋಕದಲ್ಲಿ ಉತ್ತಮಸ್ಥಾನವನ್ನು ಹೊಂದಬಹುದು. ॥೭೭॥

ಯಾವನು ಯೋಗ್ಯನಾದ ಬ್ರಾಹ್ಮಣನಿಗೆ ಭಕ್ತಿಭಾವದಿಂದ ದೇವೀಗೆ ಸಂಬಂಧಪಟ್ಟ ಪುಸ್ತಕವನ್ನು ದಾನಮಾಡುವನೋ ಅವನು ಮೃತಿಯನ್ನೈದಿದನಂತರ ಆಕೆಯ ಲೋಕದಲ್ಲಿ ಸಿದ್ಧರು ವಾಸಮಾಡುವ ಅತ್ಯಂತ ಸುಖಕರವಾದ ಸ್ಥಾನವನ್ನು ಸೇರುವನು. ॥೭೮॥

ಯಾವನು ದೇವೀಗೆ ಸಂಬಂಧಪಟ್ಟ ಪೂಜಾಸಾಮುಗ್ರಿಗಳನ್ನು ಶ್ರೇಷ್ಠನಾದ ಸಾಧಕನಿಗೆ ದಾನಮಾಡಿ ಕೊಡುವನೋ ಅಂಥವನು ಮೃತಿಯನ್ನೈದಿದಮೇಲೆ ಆಕೆಯ ಲೋಕವನ್ನು ಸೇರಿ ದಿಕ್ಪಾಲಕರ ಕೋಟೆಯನ್ನು ಹೊಂದುವನು. ॥೭೯॥

ಏವಂ ಯದ್ಯತ್ ಪ್ರದದ್ಯಾದ್ದೈ ಭಕ್ತ್ಯೋಽಪಾಸನ(ಕೆ) ಸತ್ತಮೇ ।
ತತ್ತತ್ತುಲ್ಯ ನಿವಸತಿಂ ಪ್ರಾಪ್ನುಯಾನ್ನಾಽತ್ರ ಸಂಶಯಃ ॥೮೦॥

ಅಥ ತೇ ಸಂಪ್ರವಕ್ಷ್ಯಾಮಿ ದಾನಾನಾಮುತ್ತಮಂ ಪರಂ ।
ಶ್ರೀಚಕ್ರರಾಜದಾನಂ ತು ಮಹಾಫಲವಿಧಾಯಕಂ ॥೮೧॥

ಸುಪರ್ವಣಿ ಸಮಭ್ಯರ್ಚ್ಯ ವಿಶೇಷ ದ್ರವ್ಯಸಾಧನೈಃ ।
ಪೂಜಾಂತೇ ತ್ರಿಪುರಾಪೂಜಾಪರಂ ವಿಪ್ರಂ ಸುಲಕ್ಷಣಂ ॥೮೨॥

ಸಪತ್ನೀಕಂ ಸಮಭ್ಯರ್ಚ್ಯ ವಿಶೇಷದ್ರವ್ಯಸಾಧನೈಃ ।
ವಸ್ತ್ರೈರಾಭರಣೈಃ ಶಕ್ತ್ಯಾ ಗಂಧಪುಷ್ಪಾಽಽದಿಭಿಃ ಕ್ರಮಾತ್ ॥೮೩॥

ಸ ಪೀಠಂ ಸೋಪಕರಣಂ ಸಾಧನದ್ರವ್ಯಸಂಯುತಂ ।
ಸಾಮಾನ್ಯಾಽರ್ಘೋದಕಂ ಹಸ್ತೇ ವಿಪ್ರಸ್ಯ ಸಮವಾ ಸೃಜೇತ್॥೮೪॥

ಈ ರೀತಿಯಾಗಿ ಯಾರು ಯಾರು ದೇವಿಯ ಭಕ್ತಶ್ರೇಷ್ಠರಿಗೆ ಯಾವ ಯಾವ ದಾನಗಳನ್ನು ಕೊಡುವರೋ ಅವರು ಆಕೆಯ ಲೋಕವನ್ನು ಮೃತಿಯನ್ನೈದಿದ ನಂತರ ಸೇರಿ ಆಯಾಯದಾನಕ್ಕೆ ಯೋಗ್ಯವಾದ ಫಲಗಳನ್ನು ಅನುಭವಿಸುವ ರೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ॥೮೦॥

ಇನ್ನು ಮುಂದೆ ಅತ್ಯಂತ ಉತ್ಕೃಷ್ಟವಾದ ದಾನ ವಿಷಯವನ್ನು ನಿನಗೆ ಹೇಳು ತ್ತೇನೆ. ನಿನಗೆ ಅತ್ಯಂತ ಶ್ರೇಷ್ಠವಾದ ಶ್ರೀ ಚಕ್ರದ ದಾನವು ಮಹಾ ಫಲವನ್ನುಂಟು ಮಾಡುವುದೆಂದು ತಿಳಿ. ॥೮೧॥

ಶ್ರೇಷ್ಠವಾದ ಪರ್ವಕಾಲದಲ್ಲಿ ಭಕ್ತನು ಶ್ರೇಷ್ಠ ಚಕ್ರವನ್ನು ಶಾಸ್ತ್ರೋಕ್ತಕ್ರಮ ದಲ್ಲಿ ಪೂಜಿಸಿ ಪೂಜೆಯು ಮುಗಿದಮೇಲೆ ತ್ರಿಪುರಾದೇವಿಯ ಪೂಜೆಯಲ್ಲಿ ಆಸಕ್ತ ನಾದ ಬಹಳ ಲಕ್ಷಣವಾಗಿರುವ ಬ್ರಾಹ್ಮಣನಿಗೆ ಪೂಜೆಯನ್ನು ಮಾಡಬೇಕು. ॥೮೨॥

ಭಕ್ತನು ಬ್ರಾಹ್ಮಣನನ್ನೂ ಅವನ ಪತ್ನಿಯನ್ನೂ ಒಟ್ಟಿಗೆ ಪೀಠದಲ್ಲಿ ಕೂರಿಸಿ ವಿಶೇಷವಾದ ಪೂಜಾಸಾಮಗ್ರಿಗಳಿಂದಲೂ ವಸ್ತ್ರಗಳಿಂದಲೂ ಆಭರಣಗಳಿಂದಲೂ ಯಥಾಶಕ್ತಿ ಗಂಧ ಪುಷ್ಪ ಮುಂತಾದ ಪರಿಮಳ ದ್ರವ್ಯಗಳಿಂದಲೂ ಕ್ರಮವಾಗಿ ಪೂಜಿಸಬೇಕು. ॥೮೩॥

ಭಕ್ತನು ಬ್ರಾಹ್ಮಣರ ದಂಪತಿಗಳನ್ನು ಪೀಠದಮೇಲೆ ಕುಳ್ಳಿರಿಸಿ ಸೊಗಸಾದ

ತತೋ ವಿಪ್ರಸ್ತು ತಾಂ ಪೂಜಾ ಮುದ್ವಾಸ ಪ್ರಮುಖಾಂ ಚರೇತ್ ।
ಭೋಜಯೇದಾವೃತಿಮಿತಾನ್ ಬ್ರಾಹ್ಮಣಾನ್ ಸುವಿಧಾನತಃ ॥೮೫॥

ಸುವಾಸಿನೀರ್ಭೋಜಯೇತ್ತು ನಿತ್ಯಾಷೋಡಶನಾಮಭಿಃ ।
ಯಥಾ ಶಕ್ತ್ಯಾ ವಾಽಪಿ ವಿಪ್ರಾನ್ ಭೋಜಯೇತ್ತು ಪ್ರಯತ್ನತಃ ॥೮೬॥

ಅಥವಾ ಭೋಜಯೇನ್ನಿತ್ಯಾ ನಾಮಭಿಸ್ತು ಸುವಾಸಿನೀಃ ।
ಷೋಡಶ ಬ್ರಾಹ್ಮಣಾಂಶ್ಚಾಽಪಿ ದ್ವಾದಶಾಽಽರಾಧ್ಯ ಭೋಜಯೇತ್ ॥೮೭॥

ಏವಂ ದದ್ಯಾದ್ಯಸ್ತು ದಾನಂ ಚಕ್ರರಾಜಸ್ಯ ಭಕ್ತಿತಃ ।
ತಸ್ಯ ಪ್ರೀತಾ ಮಹಾದೇವೀ ಸ್ವಸಾಯುಜ್ಯಂ ಪ್ರಯಚ್ಛತಿ ॥೮೮॥

ಪೂಜಾಸಾಮಾಗ್ರಿಗಳನ್ನು ತಂದು ಗೌರವಾರ್ಹವಾದ ರೀತಿಯಲ್ಲಿ ಆ ಬ್ರಾಹ್ಮಣನ ಕೈಗೆ ಅರ್ಘ್ಯದ ನೀರನ್ನು ಬಿಡಬೇಕು. ॥೮೪॥

ಅನಂತರ ಬ್ರಾಹ್ಮಣನು ಪೂಜೆಯ ಮೂರ್ತಿಯನ್ನು ಅಲ್ಲಾಡಿಸಿ ವಿಸರ್ಜನೆ ಮಾಡಬೇಕು. ಆಮೇಲೆ ಭಕ್ತನು ಆವರಣಶಕ್ತಿಗಳೆಷ್ಟಿವೆಯೋ ಅಷ್ಟುಮಂದಿ ಬ್ರಾಹ್ಮಣರಿಗೆ ಶಾಸ್ತ್ರೋಕ್ತಮಾರ್ಗದಲ್ಲಿ ಉತ್ಕೃಷ್ಟವಾದ ಭೋಜನವನ್ನು ಮಾಡಿಸ ಬೇಕು. ॥೮೫॥

ಆ ಸಮಯದಲ್ಲಿ ಭಕ್ತನು ನಿತ್ಯಾಷೋಡಶೀ ಮುಂತಾದ ಶಕ್ತಿಗಳ ಹೆಸರಿನಲ್ಲಿ ಮುತ್ತೈದೆಯರಿಗೂ ಭೋಜನ ಮಾಡಿಸಬೇಕು. ಅಲ್ಲದೆ ಅವನ ಶಕ್ತಿಗನುಗುಣವಾಗಿ ಪ್ರಯತ್ನಪೂರ್ವಕವಾಗಿ ಬ್ರಾಹ್ಮಣರಿಗೂ ಭೋಜನವನ್ನು ಮಾಡಿಸಬೇಕು. ॥೮೬॥

ಹಾಗಲ್ಲದಿದ್ದರೆ ನಿತ್ಯಾ ಎಂಬ ಶಕ್ತಿಯರ ಹೆಸರಿನಲ್ಲಿ ಮುತ್ತೈದೆಯರಿಗೆ ಭೋಜನಮಾಡಿಸಬೇಕು. ಅಲ್ಲದೆ ಭಕ್ತನು ಹದಿನಾರು ಅಥವಾ ಹನ್ನೆರಡು ಜನ ಬ್ರಾಹ್ಮಣರಿಗೆ ಪೂಜೆಯನ್ನು ಕ್ರಮವಾಗಿ ಮಾಡಿ ಅವರುಗಳಿಗೆ ಭೋಜನವನ್ನು ಮಾಡಿಸಬೇಕು. ॥೮೭॥

ಈ ರೀತಿಯಾಗಿ ಮಾಡಿ ಭಕ್ತನು ಭಕ್ತಿಪೂರ್ವಕವಾಗಿ ಯೋಗ್ಯನಾದ ಬ್ರಾಹ್ಮಣನಿಗೆ ಶ್ರೇಷ್ಠಶ್ರೀಚಕ್ರವನ್ನು ದಾನಮಾಡಬೇಕು. ಹೀಗೆ ಮಾಡುವವನಿಗೆ ಮಹಾದೇವಿಯಾದ ತ್ರಿಪುರಾದೇವಿಯು ಸಂತುಷ್ಟಳಾಗಿ ತನ್ನಲ್ಲಿ ಐಕ್ಯವೆಂಬ ಸಾಯುಜ್ಯ ಮೋಕ್ಷವನ್ನೇ ಅವರಿಗೆ ಕೊಡುವಳು. ॥೮೮॥

ಸರ್ವತೀರ್ಥೇಷು ಸ ಸ್ನಾತಃ ತೇನ ಸರ್ವಂ ವ್ರತಂ ಕೃತಂ ।
ಸರ್ವಂ ದಾನಂ ತೇನ ದತ್ತಂ ತೇನ ಯಜ್ಞಾಸ್ತಥಾ ಕೃತಾಃ ॥೮೯॥

ತಪಸ್ತೇನ ಸುತಪ್ತಂ ವೈ ಪಠಿತಾ ನಿಖಿಲಾಽಽಗಮಾಃ ।
ತ್ರಿಪುರಾಽಪಿ ಚ ತತ್ಕರ್ಮ ಸದೃಶಂ ನಾಽಸ್ತಿ ವೈ ಫಲಂ ॥೯೦॥

ಇತಿ ಮತ್ವಾ ಸ್ವಸಾಯುಜ್ಯಂ ತಸ್ಮೈ ಶೀಘ್ರಂ ಪ್ರಯಚ್ಛತಿ ।
ಯತಃ ಸರ್ವಜಗದ್ರೂಪ ಪ್ರತಿಮಂ ರಾಮ ಚಕ್ರಕಂ ॥೯೧॥

ಅತಸ್ತೇನ ಜಗದ್ದತ್ತಂ ನ ದತ್ತಂ ಕಿಂ ಕಥಂ ಭವೇತ್ ।
ಯದಿ ಕಾಮನಯಾ ಕುರ್ಯಾದ್ಯಂ ಯಂ ಕಾಮಮಭೀಪ್ಸತಿ ॥೯೨॥

ಹೀಗೆ ಶ್ರೀಷ್ಠಚಕ್ರವನ್ನು ದಾನಮಾಡುವ ಮನುಷ್ಯನು ಎಲ್ಲಾ ತೀರ್ಥಗಳಲ್ಲಿಯೂ ಸ್ನಾನಮಾಡಿದ ಫಲ, ಎಲ್ಲಾ ವ್ರತಗಳನ್ನೂ ನೆರವೇರಿಸಿದುದರ ಫಲ, ಎಲ್ಲಾ ದಾನಗಳನ್ನೂ ಕೊಟ್ಟ ಫಲ, ಎಲ್ಲಾ ಯಾಗಗಳನ್ನೂ ಮಾಡಿದ ಫಲ, ಇವೆಲ್ಲವನ್ನೂ ಏಕಕಾಲದಲ್ಲಿಯೇ ಸಂಪಾದಿಸುವನೆಂದು ತಿಳಿಯಬೇಕು. ॥೮೯॥

ಹೀಗೆ ಶ್ರೀಷ್ಠಚಕ್ರವನ್ನು ದಾನಮಾಡುವ ಮನುಷ್ಯನು ಎಲ್ಲಾ ತಪಸ್ಸನ್ನೂ ಮಾಡಿದ ಫಲವನ್ನೂ, ಎಲ್ಲಾ ಶಾಸ್ತ್ರಗಳನ್ನೂ ಓದಿದ ಪುಣ್ಯವನ್ನೂ, ಪಡೆಯುವನೆಂದು ತಿಳಿಯಬೇಕು. ತ್ರಿಪುರಾದೇವಿಯೂ ಕೂಡ ಇದರಿಂದ ಸಂತೋಷಪಡುವಳು. ಈ ದಾನರೂಪವಾದ ಕರ್ಮಫಲಕ್ಕೆ ಸಮಾನವಾದ ಫಲವು ಮತ್ತಾವುದರಿಂದಲೂ ಬರಲಾರದು. ॥೯೦॥

ಹೀಗೆಂದು ತಿಳಿದು ತ್ರಿಪುರಾದೇವಿಯು ತನ್ನೊಳಗೆ ಐಕ್ಯರೂಪವಾದ ಮೋಕ್ಷವನ್ನು ಅವನಿಗೆ ಶೀಘ್ರವಾಗಿ ಕೊಡುತ್ತಾಳೆ. ಎಲೈ ಪರಶುರಾಮನೇ, ಈ ದೇವಿಯ ಶ್ರೀಷ್ಠಚಕ್ರವು ಎಲ್ಲಾ ಲೋಕದ ಸ್ವರೂಪವನ್ನೂ ತೋರಿಸುವ ಪ್ರತಿಬಿಂಬವೇ ಆಗಿದೆ ಎಂದು ತಿಳಿ. ॥೯೧॥

ಆದ್ದರಿಂದ ಇಂಥಾ ಚಕ್ರದಾನವನ್ನು ಮಾಡುವವನು ಎಲ್ಲಾ ಪ್ರಪಂಚವನ್ನೂ ದಾನಕೊಟ್ಟಂತೆಯೇ ಸರಿ. ಆದ್ದರಿಂದ ಅವನು ಯಾವ ದಾನವನ್ನು ತಾನೇ ಕೊಟ್ಟಂತಾಗುವುದಿಲ್ಲ? ಯಾವುದಾದರೂ ಇಷ್ಟಾರ್ಥವನ್ನು ಬಯಸಿ, ಈ ಚಕ್ರದಾನವನ್ನು ಮಾಡಿದರೆ ಅವನಿಗೆ ಆಯಾಯಾ ಇಷ್ಟಾರ್ಥಗಳೂ ಲಭಿಸುತ್ತವೆ. ॥೯೨॥

ತಂ ತಂ ಪ್ರಾಪ್ನೋತಿ ಸಹಸಾ ಮೋಕ್ಷಂ ಚಾಂತೇ ಸಮಾಪ್ನುಯಾತ್ ।
ಏವಂ ತು ಸ್ಥಾವರಂ ಯಂತ್ರಮಗ್ರೇ ಹಾರ ಸಮನ್ವಿತಂ ॥೯೩॥

ಮಹಾದಾನಯುತಂ ಚಾಪಿ ದದ್ಯಾದ್ವಿಪ್ರಾಯ ಯಃ ಪುಮಾನ್ ।
ತಸ್ಯ ಪುಣ್ಯಮನಂತೋಽಪಿ ನ ಶಕ್ತಃ ಕಥನೇ ಕ್ವಚಿತ್ ॥೯೪॥

ಮೂರ್ತಿಂ ವಾಽಪಿ ನಾರ್ಮದಂ ವಾ ಶಿವನಾಮಮಥಾಽಪಿ ವಾ ।
ಶಾಲಿಗ್ರಾಮಂ ಕುಂಡಲಿನೀ ಮೇವ ದದ್ಯಾತ್ತು ಭಕ್ತಿತಃ ॥೯೫॥

ಶ್ರೀಪುರೇ ತು ಚಿರಂ ಸ್ಥಿತ್ವಾ ಮುಚ್ಯೇದ್ದೇಹಾವಸಾನಕೇ ।
ಮಂದಿರಂ ಚಕ್ರರಾಜಾದೇ ರ್ಜೀರ್ಣಂ ಕುರ್ಯಾನ್ನವಂ ತು ಯಃ ॥೯೬॥

ಆಯಾಯಾ ಇಷ್ಟಾರ್ಥಗಳನ್ನು ಭಕ್ತನು ಕೂಡಲೇ ಪಡೆಯುವನು. ಕೊನೆಗೆ ಅವನು ಮೋಕ್ಷವನ್ನೂ ಹೊಂದುವನು. ಇದೇ ರೀತಿಯಾಗಿ ಸ್ಥಿರವಾದ ಯಂತ್ರವನ್ನೂ ಹಾರಹಾಕಿ ಬ್ರಾಹ್ಮಣನಿಗೆ ದಾನಕೊಡಬೇಕು. ॥೯೩॥

ಈ ಯಂತ್ರವನ್ನು ಮಹಾದಾನದೊಂದಿಗೆ ಬ್ರಾಹ್ಮಣನಿಗೆ ದಾನಮಾಡುವ ಮನುಷ್ಯನಿಗೆ ಉಂಟಾಗುವ ಪುಣ್ಯವನ್ನು ಸಾಕ್ಷಾತ್ ಆದಿಶೇಷನೂ ಸಂಪೂರ್ಣವಾಗಿ ಹೇಳಲು ಸಮರ್ಥನಾಗಲಾರನು. ॥೯೪॥

ಭಕ್ತನು ದೇವಿಯ ಮೂರ್ತಿ ಅಥವಾ ನರ್ಮದಾನದಿಯ ಮರಳಿನ ಲಿಂಗ, ಅಥವಾ ಶಿವನ ಹೆಸರನ್ನು ಕೆತ್ತಿಸಿದ ಪದಾರ್ಥ, ಶಾಲಿಗ್ರಾಮ, ಕುಂಡಲಿನೀ ಎಂಬ ಹೆಸರನ್ನು ಕೆತ್ತಿಸಿರುವ ಪದಾರ್ಥ ಇವುಗಳಲ್ಲಿ ಯಾವುದನ್ನಾದರೂ ಭಕ್ತಿಪೂರ್ವಕವಾಗಿ ದಾನಮಾಡಬೇಕು. ॥೯೫॥

ಇಂತಹ ಭಕ್ತನು ಶ್ರೀಪುರದಲ್ಲಿ ಬಹಳಕಾಲ ವಾಸಮಾಡಿ ಕೊನೆಗೆ ಆಶರೀರವನ್ನು ಬಿಡುವ ಸಮಯದಲ್ಲಿ ಮೋಕ್ಷವನ್ನೇ ಪಡೆಯುವನು. ಭಕ್ತನು ಶ್ರೇಷ್ಠ ಚಕ್ರರಾಜವೇ ಮೊದಲಾಗಿರುವ ಮಂದಿರವನ್ನೇ ಜೀರ್ಣೋದ್ಧಾರಮಾಡಿ, ಹೊಸದಾಗಿ ಕಟ್ಟಿಸಬೇಕು. ॥೯೬॥

*

ತತ್ಪುಣ್ಯಂ ಸ್ಯಾಚ್ಛತಗುಣಂ ನವಮಂದಿರನಿರ್ಮಿತೇಃ ।
ಪೂಜಾಂ ವಾಽಪಿ ಚಿರೋಚ್ಛಿನ್ನಾಂ ಪ್ರವರ್ತಯತಿ ಯಃ ಪುನಃ ॥೯೭॥

ಧನಭೂಮಿ ಪ್ರದಾನೇನ ತಸ್ಯಾಽಪಿ ಶತಧಾ ಫಲಂ ।
ಸರ್ವಗುಹ್ಯತಮಂ ಭೂಯಃ ಶೃಣು ವಕ್ಷ್ಯಾಮಿ ಭಾರ್ಗವ ॥೯೮॥

ಯಸ್ತು ಭಕ್ತೇಷು ಯೋಗ್ಯೇಷು ಸಂಪ್ರದಾಯಂ ಸಮಾದಿಶೇತ್ ।
ಧನಮಾನಾಽದ್ಯಪೇಕ್ಷಃ ಸ ಕ್ರಮದೀಕ್ಷಾಽಽದಿರೀತಿತಃ ॥೯೯॥

ತಸ್ಯಾಽಽನಂತಫಲಂ ರಾಮ ಕಸ್ತದ್ವರ್ಣಯಿತುಂ ಕ್ಷಮಃ ।
ಯಥೇಚ್ಛಂ ನಿವಸೇನ್ನಾಥ ಮಂಡಲೇಽಂತೇ ವಿಮುಚ್ಯತೇ ॥೧೦೦॥

ಹೊಸದಾಗಿ ಮಂದಿರವನ್ನು ಕಟ್ಟಿಸಿದ್ದರಿಂದ ಅವನಿಗೆ ಬರುವ ಫಲಕ್ಕಿಂತ ನೂರ್ಮಡಿಯಾಗಿ ಹೆಚ್ಚಾದ ಪುಣ್ಯವು ಬರುವುದು. ಭಕ್ತನು ಬಹಳಕಾಲದಿಂದಲೂ ಶ್ರೀಚಕ್ರದಪೂಜೆಯು ನಿಂತುಹೋಗಿದ್ದರೆ ಅದನ್ನು ಪುನಃ ಪ್ರಾರಂಭವಾಗುವಂತೆ ಮಾಡಬೇಕು. ||೯೭||

ಹೀಗೆಮಾಡಿದ ಮನುಷ್ಯನಿಗೆ ಹಣ ಭೂಮಿ ಮುಂತಾದುವನ್ನು ಕೊಟ್ಟಿದ್ದ ಕ್ಕಿಂತ ನೂರ್ಮಡಿಯಾಗಿ ಹೆಚ್ಚಾದ ಫಲವು ದೊರಕುವುದು. ಎಲೈ ಪರಶು ರಾಮನೇ, ಬಹಳ ರಹಸ್ಯವಾದ ದೇವಿಗೆ ಸಂಬಂಧಪಟ್ಟ ಇನ್ನೂ ಹಲವು ವಿಷಯ ಗಳನ್ನು ಹೇಳುವೆನು. ಕೇಳು. ||೯೮||

ಯಾವನು ಯೋಗ್ಯರಾದ ದೇವಿಯ ಭಕ್ತರಲ್ಲಿ ಧನ, ಅಥವಾ ಮಾನ ಇವುಗಳನ್ನು ಅಪೇಕ್ಷಿಸಿ ದೇವಿಯ ಪೂಜಾಕ್ರಮ ದೀಕ್ಷಾ ಮುಂತಾದ ವಿಷಯಗಳನ್ನು ತಿಳಿಸುವುದರ ಮೂಲಕ ದೇವಿಯ ಸಾಂಪ್ರದಾಯಿಕವಾದ ಪೂಜಾ ರಹಸ್ಯವನ್ನೂ ತಿಳಿಸಿದರೆ ಅವನಿಗೆ ಲೆಕ್ಕವಿಲ್ಲದಷ್ಟು ಫಲಗಳು ಬರುವುವು. ||೯೯||

ಅಂತಹ ಮನುಷ್ಯನಿಗೆ ಅನಂತವಾದ ಫಲವು ಬರುವುದು. ಎಲೈ ಪರಶು ರಾಮನೇ, ಅವನಿಗೆ ಬರುವ ಫಲಗಳನ್ನು ವರ್ಣಿಸಲು ಯಾರುತಾನೇ ಸಮರ್ಥರು ? ಶ್ರೀಚಕ್ರರಾಜದಲ್ಲಿರುವ ಶಕ್ತಿಗಳ ಮಂಡಲಗಳಲ್ಲಿ ಅವನು ಕೆಲವುದಿನ ವಾಸಮಾಡಿ, ಕೊನೆಗೆ ಅವನು ಮುಕ್ತಿಯನ್ನೇ ಹೊಂದುವನು. ||೧೦೦||

ಯಸ್ತ್ವಯೋಗ್ಯಂ ಸಂಪ್ರದಾಯಂ ಪ್ರಾರ್ಥಯಂತ ಮುಪಾಸನೇ ।
ಕಾಮಾನ್ಮೋಹಾತ್ ಪ್ರಮಾದಾದ್ವಾ ವೈರಾಗ್ಯಾದ್ವಾ ನಿಷೇಧತಿ ॥೧೦೧॥

ಯಶ್ಚ ದ್ರವ್ಯಾಽದಿಲಾಭೇನಾಽನರ್ಹೇ ಶಾಸ್ತ್ರಂ ಪ್ರಯೋಜಯೇತ್ ।
ತಯೋರ್ನ ವಿದ್ಯತೇ ಲೋಕಃ ಪ್ರಾಪ್ಸ್ಯತೋ ಹ್ಯಧಮಾಂ ಗತಿಂ ॥೧೦೨॥

ತಸ್ಮಾದ್ಯಃ ಸಂಪ್ರದಾಯಂ ವೈ ಭಕ್ತಾನಾಂ ನ ನಿರೂಪಯೇತ್ ।
ವಿದ್ಯಾಲೋಭಯುತೋ ಮೌಖ್ಯಾರ್ತ್ ಸೋಽಪಿ ಯಾತ್ಯಧಮಾಂ ಗತಿಂ ॥೧೦೩॥

ತಸ್ಮಾತ್ಸ್ವ ಶಿಷ್ಯಮನ್ಯಂ ವಾ ಯುಕ್ತಂ ಭಕ್ತಿಸಮನ್ವಿತಂ ।
ಸಂಪ್ರದಾಯಂ ವಿಜಿಜ್ಞಾಸುಂ ನ ನಿಷಿಧ್ಯೇತ್ಕಥಂಚನ ॥೧೦೪॥

ಏತನ್ಮಹಾಫಲಂ ರಾಮ ನೈತತ್ತುಲ್ಯಂ ತು ಕಿಂಚನ ।
ಅನ್ಯದ್ದಾನಮನಾಽತ್ಮಾಽಕ್ಷ್ಯಮಪಿ ಬಂಧಕರಂ ಭವೇತ್ ॥೧೦೫॥

ಯಾವನಾದರೂ ಕಾಮ, ಮೋಹ, ಅಜಾಗರೂಕತೆ, ವಿರಕ್ತಿ ಮುಂತಾದ ಯಾವುದೇ ಒಂದುಕಾರಣದಿಂದ ಯೋಗ್ಯನಾಗಿ ತಿಳಿಯಲು ಇಚ್ಛಿಸುವ ಮನುಷ್ಯನಿಗೆ ದೇವಿಗೆ ಸಂಬಂಧಪಟ್ಟ ಸಂಪ್ರದಾಯವನ್ನು ತಿಳಿಸುವುದಿಲ್ಲವೋ ಅಂಥವನಿಗೆ ಮಹಾ ಪಾಪದ ಸಂಘಟನೆಯಾಗುವುದು. ॥೧೦೧॥

ಯಾವನಾದರೂ ದುಡ್ಡಿನ ಆಸೆಯಿಂದ ಅಯೋಗ್ಯನಾದ ಮನುಷ್ಯನಿಗೆ ಈ ಶಾಸ್ತ್ರವನ್ನು ಹೇಳಿದ್ದೇ ಆದರೆ ಅಂಥವನಿಗೂ ಉತ್ತಮ ಲೋಕವು ಬರದೇ ಅವರಿಬ್ಬರಿಗೂ ನೀಚಲೋಕಗಳ ಪ್ರಾಪ್ತಿಯಾಗುವುದು. ॥೧೦೨॥

ಯಾವನಾದರೂ ವಿದ್ಯೆಯನ್ನು ಬಚ್ಚಿಟ್ಟುಕೊಂಡಿರಬೇಕೆಂಬ ದುರಾಸೆಯಿಂದ ಅಥವಾ ಮೌಢ್ಯದಿಂದ ದೇವೀಗೆ ಸಂಬಂಧಪಟ್ಟ ಈ ವಿದ್ಯೆಯನ್ನು ಭಕ್ತರಾದ ಜನರಿಗೆ ತಿಳಿಸದೇ ಹೋದರೆ ಅವನಿಗೂ ತುಚ್ಛವಾದ ಲೋಕವೇ ಬರುವುದು. ॥೧೦೩॥

ಆದ್ದರಿಂದ ಯಾವನು ತನ್ನ ಶಿಷ್ಯ ಅಥವಾ ಬೇರೊಬ್ಬ ಯಾವನೇ ಆಗಲಿ ಭಕ್ತಿಯಿಂದಕೂಡಿ ದೇವಿಯ ಸಂಪ್ರದಾಯವನ್ನು ತಿಳಿಯಬೇಕೆಂದು ಅಪೇಕ್ಷಿಸಿದರೆ, ಯಾವ ವಿಧದಲ್ಲೂ ಅವನನ್ನು ನಿಷೇಧಿಸಕೂಡದು. ॥೧೦೪॥

ಎಲೈ ಪರಶುರಾಮನೇ, ಈ ವಿಧವಾದ ಶ್ರೇಷ್ಠಚಕ್ರದ ದಾನವು ಮಹಾಫಲವನ್ನು ಕೊಡುವಂಥಾದ್ದೆಂದು ತಿಳಿ. ಇದಕ್ಕೆ ಸರಿಸಮನಾದ ಮತ್ತಾವ ದಾನವೂ

ಏತದಾತ್ಮಪ್ರದಾನಂ ವೈ ಯದ್ವಿದ್ಯಾಯಾ ನಿರೂಪಣಂ ।
ಯತ್ಫಲಸ್ಯ ನ ಚಾಽಂತೋಽಸ್ತಿ ತತ್ಫಲಂ ಸ್ಯಾದನಂತಕಂ ॥೧೦೬॥

ಯಸ್ತ್ವಶಕ್ತೋ ಬುದ್ಧಿಮಾಂದ್ಯಾ ದ್ವಿದ್ಯಾದಾನೇ ವಿಶೇಷತಃ ।
ವಿದ್ಯಾ ಲಿಖಿತದಾನೇನ ಚಾಽಪಿ ತತ್ಫಲಮಾಪ್ನುಯಾತ್ ॥೧೦೭॥

ಇದಮತ್ಯಂತಸಂಗುಪ್ತಂ ಪ್ರೀತ್ಯಾ ತವ ನಿರೂಪಿತಂ ।
ಏವಂ ಮಹಾಫಲಪ್ರಾಪ್ತಿ ಸ್ತ್ರಿಪುರೋಪಾಸನಾ ವಿಧೌ ॥೧೦೮॥

ಏಷ ಭಾರ್ಗವ ತೇ ಪ್ರೋಕ್ತಃ ತ್ರಿಪುರಾಯಾ ರಹಸ್ಯಕೇ ।
ಮಾಹಾತ್ಮ್ಯ ವೈಭವೋ ಯಸ್ಯ ಶ್ರವಣಾದ್ಭಕ್ತಿಮಾನ್ಭವೇತ್ ॥೧೦೯॥

ಇಲ್ಲ. ಇತರ ವಿಧವಾದ ದಾನಗಳು ಅನಾತ್ಮ ಅಥವಾ ಅಜ್ಞಾನವೆಂಬ ಹೆಸರುಳ್ಳದ್ದಾಗಿ ಮನುಷ್ಯನಿಗೆ ಬಂಧಕವೇ ಆಗುತ್ತವೆ. ||೧೦೫||

ಶ್ರೀತ್ರಿಪುರಾದೇವಿಗೆ ಸಂಬಂಧಪಟ್ಟ ವಿದ್ಯೆಯನ್ನು ಹೇಳಿಕೊಡುವುದು ಆತ್ಮ ಜ್ಞಾನವನ್ನುಹೇಳಿಕೊಟ್ಟಂತೆಯೇ, ಆತ್ಮದಾನವನ್ನು ಮಾಡಿದಂತೆಯೇ, ಸರಿ. ಇಂಥಾ ವಿದ್ಯಾದಾನವನ್ನು ಮಾಡುವ ಮನುಷ್ಯನಿಗೆ ಲೆಕ್ಕವಿಲ್ಲದಷ್ಟು ಫಲಗಳು ಬರುವುವು. ಆದ್ದರಿಂದಲೇ ಇದು ಅನಂತ ಫಲಗಳನ್ನು ಕೊಡುವುದೆಂದು ಹೇಳಿದೆ. ||೧೦೬||

ಬುದ್ಧಿಯು ಕಮ್ಮಿಯಾಗಿರುವುದರಿಂದ ಯಾವನು ಇಂಥಾ ವಿದ್ಯಾದಾನವನ್ನು ಮಾಡಲು ಅಸಮರ್ಥನಾಗಿರುತ್ತಾನೆಯೋ ಅಂಥವನು ಈ ವಿದ್ಯೆಯನ್ನು ಬರೆದಿರುವ ಪುಸ್ತಕಗಳನ್ನು ದಾನಮಾಡಿದರೂ ಇದೇ ಫಲವನ್ನು ಹೊಂದುವನು. ||೧೦೭||

ಇದು ಅತ್ಯಂತ ರಹಸ್ಯವಾದ ವಿದ್ಯೆಯಾಗಿದೆ. ಆದರೆ ನಾನು ನಿನ್ನ ಮೇಲಿನ ಪ್ರೀತಿಯಿಂದ ಈ ವಿದ್ಯೆಯನ್ನು ನಿನಗೆ ತಿಳಿಸಿದೆನು. ಈರೀತಿಯಾಗಿ ತ್ರಿಪುರಾದೇವಿಯ ಉಪಾಸನೆಯಿಂದ ಮಹಾಫಲಗಳೇ ಪ್ರಾಪ್ತವಾಗುತ್ತವೆಯೆಂದು ತಿಳಿ. ||೧೦೮||

ಎಲೈ ಪರಶುರಾಮನೇ, ತ್ರಿಪುರಾದೇವಿಯ ರಹಸ್ಯವಿದ್ಯೆಯಾದ ಈ ಮಾಹಾತ್ಮ್ಯಖಂಡವನ್ನು ನಿನಗೆ ಈರೀತಿಯಲ್ಲಿ ಹೇಳಿದ್ದೇನೆ. ಈಕೆಯ ಮಾಹಾತ್ಮ್ಯೆಯನ್ನು ಕೇಳಿದವನಿಗೆ ಕೂಡಲೇ ಈತನ ವಿಷಯದಲ್ಲಿ ಭಕ್ತಿಯುಂಟಾಗುವುದು. ಅಲ್ಲದೆ ಕ್ರಮವಾಗಿ ಪರಮಪುರುಷಾರ್ಥದ ಲಾಭವೂ ಆಗುವುದು. ||೧೦೯||

ದೇವರ್ಷೇ ಸಂಶ್ರುತಂ ಕಚ್ಚಿತ್ ಸಾವಧಾನೇನ ಚೇತಸಾ ।
ಏಷ ಮಾಹಾತ್ಮ್ಯಖಂಡೋ ವೈ ತ್ರಿಪುರಾಯಾ ರಹಸ್ಯಕೇ ॥೧೧೦॥

ಯಃ ಶೃಣೋತಿ ಸ ಸರ್ವೇಭ್ಯಃ ಪಾಪೇಭ್ಯಃ ಪ್ರವಿಮುಚ್ಯತೇ ।
ಪರಮಂ ಸಾಧನಂ ಹ್ಯೇತದಾತ್ಮಬಂಧವಿಮುಕ್ತಯೇ ॥೧೧೧॥

ಯತೋ ಭಕ್ತಿರ್ಹಿ ಮೋಕ್ಷಸ್ಯ ಜನಯಿತ್ರೀ ನಿಗದ್ಯತೇ ।
ಸಾ ಮಾಹಾತ್ಮ್ಯ ಶ್ರುತಿಮೃತೇ ಯತೋ ನ ಭವತಿ ಕ್ವಚಿತ್ ॥೧೧೨॥

ತಸ್ಮಾತ್ಪರಾಖ್ಯ ಸೌಧಸ್ಯ ಸೋಪಾನಂ ಪ್ರಥಮಂ ನನು ।
ಮಾಹಾತ್ಮ್ಯ ಶ್ರವಣಂ ಲೋಕೇ ಮೋಕ್ಷದ್ವಾರಮಿದಂ ಸ್ಮೃತಂ ॥೧೧೩॥

ಮಹಿಮಾನಮಸಂಶ್ರುತ್ವಾ ಕಥಂ ಭಕ್ತಿರ್ಭವೇದಿಹ ।
ಭಕ್ತ್ಯಾ ವಿನಾ ಪರಂ ಶ್ರೇಯಃ ಕಥಂ ಸ್ಯಾದ್ದೇವತಾ ಪರಾ ॥೧೧೪॥

ಎಲೈ ದೇವರ್ಷಿಯಾದ ನಾರದನೇ, ಸಾವಧಾನವಾದ ಮನಸ್ಸಿನಿಂದ ತ್ರಿಪುರಾ ದೇವಿಯ ರಹಸ್ಯ ವಿದ್ಯೆಯಲ್ಲಿ ಮಾಹಾತ್ಮ್ಯಖಂಡವಾದ ಈ ಭಾಗವನ್ನು ಚೆನ್ನಾಗಿ ಕೇಳಿದೆಯಷ್ಟೆ? ॥೧೧೦॥

ಈ ಮಾಹಾತ್ಮ್ಯಖಂಡವನ್ನು ಕೇಳುವ ಮನುಷ್ಯನು ಎಲ್ಲಾ ವಿಧವಾದ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಜೀವಾತ್ಮನಿಗೆ ಉಂಟಾಗಿರುವ ಅಜ್ಞಾನವೆಂಬ ಬಂಧನದ ಬಿಡುಗಡೆಯಾಗಿ ಮೋಕ್ಷವು ಸಿಕ್ಕಲು ಈ ವಿದ್ಯೆಯು ಅತ್ಯಂತ ಶ್ರೇಷ್ಠಸಾಧನವಾಗಿದೆ. ॥೧೧೧॥

ಏಕೆಂದರೆ ತ್ರಿಪುರಾದೇವಿಯಲ್ಲಿ ಪರಮಭಕ್ತಿಯೇ ಮೋಕ್ಷಕ್ಕೆ ಕಾರಣವೆಂದು ಹೇಳಿದ್ದಾರೆ. ಅಂಥಾ ಭಕ್ತಿಯು ದೇವಿಯ ಮಾಹಾತ್ಮ್ಯೆಯನ್ನು ಕೇಳದೇ ಬೇರೊಂದು ಮಾರ್ಗದಿಂದ ಉಂಟಾಗಲಾರದು. ॥೧೧೨॥

ಆದ್ದರಿಂದ ಶ್ರೇಷ್ಠಶಕ್ತಿಯ ಸಾಕ್ಷಾತ್ಕಾರವೆಂಬ ಉಪ್ಪರಿಗೆಗೆ ಹತ್ತಲು ಆಕೆಯ ಮಾಹಾತ್ಮ್ಯ ಶ್ರವಣವೇ ಮೊದಲನೆಯ ಮೆಟ್ಟಲಾಗಿದೆ. ಆದ್ದರಿಂದ ಲೋಕದಲ್ಲಿ ತ್ರಿಪುರಾದೇವಿಯ ಮಾಹಾತ್ಮ್ಯಶ್ರವಣವು ಮೋಕ್ಷಕ್ಕೆ ಬಾಗಿಲು ಎಂಬುದಾಗಿ ಹೇಳಿದೆ. ॥೧೧೩॥

ಆಕೆಯ ಮಹಿಮೆಯನ್ನು ಕೇಳದೇ ಭಕ್ತಿಯುಂಟಾಗಲಾರದು. ಭಕ್ತಿ

ಮೋಕ್ಷಸ್ಯ ಸಾಧನಂ ಸರ್ವಂ ವಿನಾ ಭಕ್ತ್ಯಾ ನ ಕಿಂಚನ ।
ಯಥಾ ತರುಣ್ಯಾಃ ಸೌಂದರ್ಯಂ ವಿನಸಂ ಸರ್ವಥಾ ತಥಾ ॥೧೧೫॥

ಭುವಂ ವಿನಾ ಯಥಾ ಬೀಜಂ ನಾಽಂಕುರಂ ಪ್ರತಿರೋಹಯೇತ್ ।
ತಥಾ ಭಕ್ತಿಂ ವಿನಾ ಜ್ಞಾನಂ ಫಲಂ ನ ಜನಯೇತ್ಕ್ವಚಿತ್ ॥೧೧೬॥

ಅಭಕ್ತಸ್ಯ ನ ಕರ್ಮಾಽಸ್ತಿ ನೋಪಾಸ್ತಿರ್ನೋ ವಿವೇಕಿತಾ ।
ತಸ್ಮಾದ್ಭಕ್ತಿವಿಹೀನಸ್ಯ ನ ಕಾಚಿತ್ಸ್ಯಾದ್ಧೃತಿಃ ಕ್ವಚಿತ್ ॥೧೧೭॥

ಮಾಹಾತ್ಮ್ಯಸಂಶ್ರುತಿಸ್ತಸ್ಯಾ ಮೂಲಂ ಯಸ್ಮಾಚ್ಚ ನಾರದ ।
ತಸ್ಮಾದೇತಂ ಸಂಶೃಣುಯಾತ್ ಖಂಡಂ ಮಾಹಾತ್ಮ್ಯ ಸಂಜ್ಞಿತಂ ॥೧೧೮॥

ಯುಂಟಾಗದೆ ಮಾನವನಿಗೆ ಶ್ರೇಯಸ್ಸುಂಟಾಗಲಾರದು. ಮತ್ತು ಶ್ರೇಷ್ಠದೇವಿಯ ಸಾಕ್ಷಾತ್ಕಾರವೂ ಆಗಲಾರದು. ||೧೧೪||

ಮೋಕ್ಷಕ್ಕೆ ಸಾಧಕವಸ್ತುಗಳೆಲ್ಲವೂ ಆಕೆಯಲ್ಲಿ ಭಕ್ತಿಇಲ್ಲದೇ ಇದ್ದರೆ, ತರುಣಿಯ ಸೌಂದರ್ಯವು ಮೂಗಿಲ್ಲದಿದ್ದರೆ ಹೇಗೆ ಸರ್ವಥಾ ವಿಕಾರವಾಗಿ ಕಾಣುವುದೋ, ಹಾಗೆ ವ್ಯರ್ಥವೇ ಆಗುವುದು. ||೧೧೫||

ಭೂಮಿಯೇ ಇಲ್ಲದೆ ಬೀಜವು ಮೊಳಕೆಯನ್ನು ಹೇಗೆ ಹುಟ್ಟಿಸಲಾರದೋ ಹಾಗೆ ತ್ರಿಪುರಾದೇವಿಯಲ್ಲಿ ಭಕ್ತಿಇಲ್ಲದೆ ಜ್ಞಾನವೊಂದೇ ಶ್ರೇಯಃಫಲವನ್ನು ಎಂದಿಗೂ ಹುಟ್ಟಿಸಲಾರದು. ||೧೧೬||

ದೇವಿಯಲ್ಲಿ ಭಕ್ತನಲ್ಲದವನಿಗೆ ಕರ್ಮವಾಗಲಿ, ಆಕೆಯ ಉಪಾಸನೆಯಾಗಲಿ ವಿವೇಕವಾಗಲೀ ಸಫಲವಾಗಿ ಸಂಭವಿಸಲಾರವು. ಆದ್ದರಿಂದ ಭಕ್ತಿಇಲ್ಲದ ಮನುಷ್ಯನಿಗೆ ಯಾವುದರಲ್ಲಿಯೂ ಧೈರ್ಯವೂ ಸ್ಥೈರ್ಯವೂ ಸಂಭವಿಸುವುದಿಲ್ಲ. ||೧೧೭||

ಎಲೈ ನಾರದನೇ, ದೇವಿಯ ಮಾಹಾತ್ಮ್ಯೆಯನ್ನು ಕೇಳುವುದೇ ಆಕೆಯಲ್ಲಿ ಭಕ್ತಿಯುಂಟಾಗುವುದಕ್ಕೆ ಸಾಧನವಾಗಿದೆ. ಆದ್ದರಿಂದ ಮಾಹಾತ್ಮ್ಯಖಂಡ ಎಂಬ ಹೆಸರುಳ್ಳ ಈ ಭಾಗವನ್ನು ಮಾನವನು ಕೇಳಲೇಬೇಕು. ||೧೧೮||

ಶೃಣ್ವತಾಂ ಪಠತಾಂ ಚಾಽಪಿ ಮಹಾಪಾಪಪ್ರಣಾಶನಂ ।
ಪಠಿತವ್ಯಂ ನಿತ್ಯಮೇತದಧ್ಯಾಯಂ ಶ್ಲೋಕಮೇವ ವಾ ॥೧೧೯॥

ಪ್ರಸಾದಂ ತ್ರಿಪುರಾಶಕ್ತೇರ್ವಾಂಛತಾ ಸರ್ವಥಾ ಶುಭಂ ।
ಏತದಾಯುಷ್ಯಜನನಂ ಸೌಮಂಗಲ್ಯ ವಿವರ್ಧನಂ ॥೧೨೦॥

ಅಧನೋ ಧನವಾನ್ ಭೂಯಾದ ಪುತ್ರಾ ಪುತ್ರಿಣೀ ಭವೇತ್ ।
ಯದ್ಯತ್ಸಮೀಹಿತಂ ತತ್ತತ್ಪ್ರಾಪ್ಯತೇಽಸ್ಯಾ ಹಿ ಸಂಶ್ರುತೇಃ ॥೧೨೧॥

ವಿದ್ಯಾಪ್ರದಂ ವಿಲಿಖಿತಂ ಪೂಜಿತಂ ಪ್ರೇಪ್ಸಿತಪ್ರದಂ ।
ವಿಚಾರಿತಂ ಜ್ಞಾನಭಕ್ತಿ ವೈರಾಗ್ಯಾಽಽದಿಪ್ರದಂ ನೃಣಾಂ ॥೧೨೨॥

ಆದ್ದರಿಂದ ಈ ಲೋಕದಲ್ಲಿ ಈ ಮಾಹಾತ್ಮ್ಯಖಂಡವನ್ನು ಕೇಳುವ, ಓದುವ ಜನರ ಮಹಾಪಾಪಗಳೂ ನಾಶವಾಗುವುವು. ಪ್ರತಿದಿನದಲ್ಲಿಯೂ ಮಾನವನು ಈ ಮಾಹಾತ್ಮ್ಯಖಂಡದ ಒಂದು ಅಧ್ಯಾಯ ಅಥವಾ ಒಂದು ಶ್ಲೋಕವನ್ನಾಗಲೀ ಓದಲೇ ಬೇಕು. ॥೧೧೯॥

ಸರ್ವವಿಧದಲ್ಲೂ ಮಂಗಳಕರವಾದ ತ್ರಿಪುರಾಶಕ್ತಿಯ ಪ್ರಸಾದವನ್ನು ಅಪೇಕ್ಷಿಸುವ ಮನುಷ್ಯನು ಇದನ್ನು ಕೊನೆಯಪಕ್ಷದಲ್ಲಿ ಒಂದು ಶ್ಲೋಕದಷ್ಟನ್ನಾದರೂ ಪ್ರತಿದಿನದಲ್ಲಿಯೂ ಓದಲೇಬೇಕು. ಇದು ಆಯುಸ್ಸನ್ನು ವೃದ್ಧಿಮಾಡುವುದಾಗಿಯೂ ಸ್ತ್ರೀಯರಿಗೆ ಸೌಮಂಗಲ್ಯವನ್ನು ವೃದ್ಧಿಗೊಳಿಸುವುದಾಗಿಯೂ ಇದೆ. ॥೧೨೦॥

ಇದನ್ನು ಕೇಳುವುದರಿಂದ ಅಥವಾ ಪಠಿಸುವುದರಿಂದ ಬಡವನಾದ ಮನುಷ್ಯನು ಶ್ರೀಮಂತನಾಗುವನು. ಮಕ್ಕಳಿಲ್ಲದ ಹೆಂಗಸು ಮಕ್ಕಳನ್ನು ಪಡೆಯುವಳು. ಇದನ್ನು ಕೇಳುವುದರಿಂದ ಮನುಷ್ಯನ ಇಷ್ಟವೆಲ್ಲವೂ ಶೀಘ್ರದಲ್ಲಿಯೇ ನೆರವೇರುವುದ. ॥೧೨೧॥

ಶ್ರೀ ತ್ರಿಪುರಾದೇವಿಯ ಪೂಜೆಯು ವಿದ್ಯಾವೃದ್ಧಿಯನ್ನುಂಟುಮಾಡುವುದಾಗಿಯೂ, ಈ ವಿದ್ಯೆಯನ್ನು ಬರೆಯುವುದು ಸಕಲ ಇಷ್ಟಾರ್ಥಗಳನ್ನೂ ಕೊಡುವುದಾಗಿಯೂ, ಈಕೆಯವಿಚಾರವು ಜನರಿಗೆಜ್ಞಾನ ಭಕ್ತಿವೈರಾಗ್ಯ ಮುಂತಾದುವನ್ನು ಕೊಡುವುದಾಗಿಯೂ, ಇದೆಯೆಂದು ತಿಳಿಯಬೇಕು. ॥೧೨೨॥

ಸರ್ವಾಽಽಗಮಾಬ್ಧಿಮಥನಾತ್ ಯದ್ಭಕ್ತ್ಯ ಮೃತಮಾಪ್ಯ ತು ।
ಅಮೃತಾಃ ಶಿವಮುಖ್ಯಾಃ ಸ್ಯುಃ ಸಾ ಮಾತಾ ತ್ರಿಪುರೈವ ಹ್ರೀಂ ॥೧೨೩॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಉಪಾಸಕ ಮುಖ್ಯಧರ್ಮ ನಿರೂಪಣಂ ನಾಮ ಅಶೀತಿತಮೋಽಧ್ಯಾಯಃ

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡಃ ಸಮಾಪ್ತಃ

ಎಲ್ಲಾ ಆಗಮುಗಳೆಂಬ ಸಮುದ್ರವನ್ನು ಕಡೆಯೋಣದರಿಂದ ಹುಟ್ಟಿದ ಆಕೆಯಲ್ಲಿ ಭಕ್ತಿಯೆಂಬ ಅಮೃತವನ್ನು ಶಿವನೇ ಮೊದಲಾದವರೂ ಹೊಂದಿ ಅಮೃತ ಸ್ವರೂಪರಾದರು. ಅಂಥಾ ಲೋಕಮಾತೆಯೇ ತ್ರಿಪುರಾದೇವಿಯು. ಎಂದು ತಿಳಿಯಿರಿ. ಎಂದು ಮಂಗಳವನ್ನು ಕೋರುವೆವು. ॥೧೨೩॥

ಇಲ್ಲಿಗೆ ಇತಿಹಾಸಶ್ರೇಷ್ಠವಾದ ತ್ರಿಪುರಾರಹಸ್ಯದಲ್ಲಿ ಮಹಾತ್ಮ್ಯಖಂಡದಲ್ಲಿ ತ್ರಿಪುರಾದೇವಿಯ ಉಪಾಸಕನು ಅನುಸರಿಸಬೇಕಾದ ಧರ್ಮಗಳ ಪ್ರತಿಪಾದನೆ ಎಂಬ ಎಂಬತ್ತನೆಯ ಅಧ್ಯಾಯವು ಮುಗಿಯಿತು.

ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡವು ಮುಗಿದುದು.

ಇಂತು ದೇವಿಮಾಹಾತ್ಮ್ಯ, ಪಂಚೋಪನಿಷತ್ತು, ದೇವೀಭಾಗವತಮಹಾಪುರಾಣ, ಲಿಂಗಮಹಾಪುರಾಣ, ಆದಿಪುರಾಣ, ಕಲ್ಕಿಪುರಾಣ, ಆರ್ಯದಿನಚರ್ಯೆ, ಸಂಧ್ಯಾವಂದನ ದೇವತಾರ್ಚನೆ, ಅರ್ಕಪುಷ್ಕರಿಣೀಮಹಿಮೆ ಮುಂತಾದ ಗ್ರಂಥಗಳ ಅರ್ಥಾನುವಾದಗಳನ್ನು ರಚಿಸಿರುವ ಚಂದ್ರಶೇಖರಶಾಸ್ತ್ರಿಯ ಕೃತಿಗಳಲ್ಲಿ ಶ್ರೀ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕೊನೆಯ ಭಾಗವೂ ಮುಗಿದುದು.

ಶಿವೇ ತವ ಕೃಪಾ ದದೌ ಗೃಹಕಳತ್ರ ವಿತ್ತಾದಿಕಂ
ಸುತಾನ್ ದುಹಿತೃ ತತ್ಸುತಾನ್ ಸುಕೃತಯಶ್ಚಕಾಶ್ಚಿತ್ ಕೃತಾಃ ।
ಅಲಂಮತಿರಿಹಾಸ್ತು ಮೇ ಮಮ ಕದಾಽಂತಮಾಶಾ ವ್ರಜೇತ್
ಪ್ರಬೋಧ ಸುಖಮರ್ಥಯೇ ಪರವಿರಕ್ತಿ ಮುಕ್ತೀ ಮುದಾ ॥

ಮಂಗಳಕರಳಾದ ಓ ತಾಯಿಯೇ, ನಿನ್ನ ದಯೆಯು ನನಗೆ ಮನೆ, ಹೆಂಡಿತಿ, ಮಕ್ಕಳು, ಮೊಮ್ಮಕ್ಕಳು, ಐಶ್ವರ್ಯ, ಅಧಿಕಾರ ಮುಂತಾದ ಐಹ ಲೌಕಿಕವಾದ ಸುಖಸಾಧನಗಳನ್ನು ಎಲ್ಲವನ್ನೂ ನನ್ನ ಯೋಗ್ಯತೆಗೆ ತಕ್ಕಷ್ಟನ್ನು ಅನುಗ್ರಹಿಸಿರುತ್ತದೆ. ಯಶಸ್ಕರವೂ ಪುಣ್ಯದಾಯಕವೂ ಆಗಿರುವ ಗ್ರಂಥರಚನೆ ಗಳಿಂದ ಪ್ರಭುಸೇವೆ, ಜನಸೇವೆ, ಭಾಷಾಸೇವೆ, ಈಶ್ವರಸೇವೆಗಳನ್ನೂ ನನ್ನ ಬುದ್ಧಿ ಶಕ್ತಿ ಸನ್ನಿವೇಶಗಳಿಗೆ ತಕ್ಕಷ್ಟು ಮಟ್ಟಿಗೆ ನೆರವೇರಿಸಿ ನನ್ನ ಈ ಜನ್ಮವನ್ನು ಸ್ವಲ್ಪ ಮಟ್ಟಿಗಾದರೂ ಸಾರ್ಥಕವನ್ನಾಗಿ ಮಾಡಿಕೊಂಡಿರುವುದೂ ಆಗಿದೆ.

ಅಲ್ಲದೆ ಈ ಸುಖಸಾಧನಗಳು ಎಷ್ಟೇ ಹೆಚ್ಚಿನವುಗಳಾದರೂ, ಅಶುದ್ಧಿ, ಕ್ಷಯ, ತಾರತಮ್ಯಗಳೆಂಬ ಅನಿವಾರ್ಯವಾದ ದೋಷಗಳಿಂದ ಕೂಡಿಯೇ ಇರುತ್ತ ವೆಂಬುದನ್ನೂ ಮನಗಂಡುದೂ ಆಗಿದೆ. ಆದುದರಿಂದ ಇವುಗಳಲ್ಲಿ ಹೀಗೆಯೇ ಆಶೆಯು ಮುಂದುವರಿಯದೆ, ಅಲಂಬುದ್ಧಿಯು ಎಂದರೆ ಇಷ್ಟು ಸಾಕು, ಇನ್ನೂ ಹೆಚ್ಚಾಗಿ ಬೇಡ. ಎಂಬ ಮನೋವೃತ್ತಿಯು, ತೃಪ್ತಿಮನೋಭಾವವು, ನನ್ನ ಹೃದಯದಲ್ಲಿ ಬಲಗೊಳ್ಳುವಂತಾಗಲಿ. ಏಕೆಂದರೆ ಈ ಆಶೆಗೆ ಪರ್ಯವಸಾನವೇ ಆಗು ವುದಿಲ್ಲವು. ಅಲ್ಲದೆ ಈ ಕರ್ತೃತ್ವ, ಭೋಕ್ತೃತ್ವ, ಜನನ, ಮರಣಗಳ ಪ್ರವಾಹದಲ್ಲಿ ಸಿಕ್ಕಿಕೊಂಡಿರುವಿಕೆ ಎಂಬ ಸಂಸಾರವು ಚಿನ್ನದ ಸರಪಣಿಗಳಿಂದ ನನ್ನನ್ನು ಕಟ್ಟಿ ಹಾಕುತ್ತಾ ಶ್ರೇಯೋಲಾಭಕ್ಕೇ ಅಡ್ಡಿಯೇ ಉಂಟಾಗುತ್ತದೆ. ಆದುದರಿಂದ ಪರತತ್ವ ಜ್ಞಾನದ ಸುಖವನ್ನೂ, ಮೇಲಾದ ವೈರಾಗ್ಯವನ್ನೂ, ಮೋಕ್ಷದ ನಿತ್ಯಾನಂದದ ಅಪರೋಕ್ಷಾನುನುಭವವನ್ನೂ ಸಂತೋಷದಿಂದ ಪಡೆಯುಲು ಇಚ್ಛಿಸುತ್ತಿರುತ್ತೇನೆ. ಜಗನ್ಮಾತೆಯು ತನ್ನ ಸಹಜವಾದ ವಾತ್ಸಲ್ಯದಿಂದ ನನ್ನ ಈ ಏಕಮಾತ್ರಕೋರಿಕೆ ಯನ್ನು ಅನುಗ್ರಹಿಸಲಿ.

ಕರ್ಣಾಟಾಧಿಪತಿ ಶ್ರೀಮಜ್ಜಯಚಾಮೇಂದ್ರ ಶಾಸನಾತ್ ।
ತ್ರಿಪುರಾರಹಸ್ಯಾರ್ಥಾನುವಾದಂ ಕನ್ನಡಭಾಷಯಾ ॥
ಸುಬ್ಬಮ್ಮಾಂಬಾ ದೇವಯಜ್ವ ತನಯಃ ಚಂದ್ರಶೇಖರಃ ।
ಜನಾನಾಮುಪಕಾರಾಯ ರಚಯಾಮಾಸ ಸಾದರಂ ॥
ವಾಣೀಸೇವಾಂ ರಾಜಸೇವಾಂ ಜನಸೇವಾಂ ಮುದಾ ಕೃತಾಂ ।
ಸ್ವೀಕೃತ್ಯ ಪಾತು ತ್ರಿಪುರಾದೇವೀ ರಾಜಾ ಚ ಭಾರತೀ ॥

॥ ಓಂ ತತ್ಸತ್ ॥